ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಸರ್ವವೇದಾಂತಸಿದ್ಧಾಂತಸಾರಸಂಗ್ರಹ

## (ಪ್ರಕರಣಗಳು-ಸಂಪುಟ ೫)

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1969

# ಅಧ್ಯಾತ್ಮಪ್ರಕಾಶಕಾರ್ಯಾಲಯ,
## ಹೊಳೆನರಸೀಪುರ.

( ಸ್ಥಾಪಿತವಾದದ್ದು ೧೯೨೦ )

ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು
ತಮ್ಮ ಪೂರ್ವಾಶ್ರಮದಲ್ಲಿ ಸ್ಥಾಪಿಸಿದ ಈ ಸಂಸ್ಥೆಗೆ

**ಪರಿಪಾಲಕರು :**

ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್
**ಜಿ.ಸಿ.ಬಿ., ಜಿ.ಸಿ.ಎಸ್.ಐ. ಮಹಾಸ್ವಾಮಿಯವರು**

## ಸಂಸ್ಥೆಯು

೧. ಹನ್ನೆರಡು ಜನ ಸಭಿಕರಿಂದಾದ ಕಾರ್ಯಕಾರಿಸಮಿತಿಯ ವ್ಯವಸ್ಥೆಯಲ್ಲಿರುವದು. ಕಾರ್ಯಕಾರಿಸಮಿತಿಗೆ ಮೇಲ್ಪಟ್ಟು ಪ್ರೈವೇಟ್ ಟ್ರಸ್ಟ್ ಕಮಿಟಿಯೂ ಇರುವದು. ಟ್ರಸ್ಟಿಗಳೇ ಸಂಸ್ಥೆಯ ಒಡೆಯರಾಗಿರುವದು.

೨. ಗ್ರಂಥಕಾಲಕ್ಷೇಪ, ಉಪನ್ಯಾಸಗಳು, ಪುರಾಣಶ್ರವಣ, ಭಜನೆ, ಅನುಷ್ಠಾನ, ಉತ್ಸವಗಳು- ಮುಂತಾದವುಗಳ ಮೂಲಕ ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಆದರವನ್ನುಂಟುಮಾಡುತ್ತಿರುವದು.

೩. ಶ್ರೀಶಂಕರಾಚಾರ್ಯರ ಮತ್ತು ಶ್ರೀರಾಮಾನುಜಾಚಾರ್ಯರ ಗ್ರಂಥರತ್ನಗಳನ್ನು ಸಮೂಲವಾಗಿ ಕನ್ನಡಿಸಿ ಪ್ರಕಟಿಸುತ್ತಿರುವದು.

೪. ಕನ್ನಡ, ಸಂಸ್ಕೃತ, ಇಂಗ್ಲಿಷುಭಾಷೆಗಳಲ್ಲಿ ಒಂದುನೂರನಲವತ್ತಕ್ಕೂ ಮೇಲ್ಪಟ್ಟು ಅಧ್ಯಾತ್ಮಗ್ರಂಥಗಳನ್ನು ಹೊರಕ್ಕೆ ತಂದಿರುವದು.

೫. ಅಧ್ಯಾತ್ಮವಿದ್ಯಾಪ್ರಸಾರಕರನ್ನು ಸಜ್ಜುಗೊಳಿಸುವ ಅಧ್ಯಾತ್ಮವಿದ್ಯಾನಿಲಯವನ್ನು ಸ್ಥಾಪಿಸಿರುವದು.

೬. ಒಂದು ಅಧ್ಯಾತ್ಮಪುಸ್ತಕಭಂಡಾರವನ್ನೂ ವಾಚನಾಲಯವನ್ನೂ ಇಟ್ಟುಕೊಂಡಿರುವದು.

೭. "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯನ್ನು ಪ್ರಕಟಿಸುತ್ತಿರುವದು.

೮. "ಅಧ್ಯಾತ್ಮಪ್ರಕಾಶ ಮುದ್ರಣಾಲಯ"ವೊಂದನ್ನು ಇಟ್ಟುಕೊಂಡಿರುವದು.

೯. ಶ್ರೀದಿಗ್ವಿಜಯರಾಮ ದೇವಸ್ಥಾನವನ್ನು ನಿರ್ಮಾಣಮಾಡಿಸಿ ಪೂಜೆಗೆ ಏರ್ಪಾಡುಮಾಡಿರುವದು.

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯವಿರಚಿತ

# ಸರ್ವವೇದಾಂತಸಿದ್ಧಾಂತಸಾರಸಂಗ್ರಹ

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ– ಮುಂತಾದವುಗಳೊಡನೆ

ಬರೆದವರು :

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೧೪೫

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1969

ಒಂದನೆಯ ಸಂಸ್ಕರಣ : ೧೯೬೯
(೧೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

Registered under the Copy Right Act of 1957

ಮುದ್ರಣಕಾರರು :
ವೈ. ನರಸಪ್ಪ,
ಅಧ್ಯಾತ್ಮಪ್ರಕಾಶ ಮುದ್ರಣಾಲಯ,
ಹೊಳೆನರಸೀಪುರ.

# ಮುನ್ನುಡಿ

ಶ್ರೀಶಂಕರಾಚಾರ್ಯರವರ ಕೃತಿಯೆಂದು ಪ್ರಸಿದ್ಧವಾಗಿರುವ ಈ **"ಸರ್ವವೇದಾಂತಸಿದ್ಧಾಂತಸಾರಸಂಗ್ರಹ"**ವೆಂಬ ಗ್ರಂಥವನ್ನು ಪ್ರಕರಣಗ್ರಂಥಗಳ ಐದನೆಯ ಸಂಪುಟವಾಗಿ ಈಗ ಬೆಳಕಿಗೆ ಹಿಡಿದಿರುತ್ತೇವೆ. ಬಹಳಮಟ್ಟಿಗೆ ಆಚಾರ್ಯರ ಎಲ್ಲಾ ಪ್ರಕರಣಗಳನ್ನೂ ಈಗ ಪ್ರಕಟಿಸಿದಂತೆ ಆಗಿರುತ್ತದೆ. ಸ್ತೋತ್ರಗ್ರಂಥಗಳ ಪ್ರಕಟನೆಯು ಮಾತ್ರ ಇನ್ನೂ ಉಳಿದಿರುತ್ತದೆ. ಅವುಗಳನ್ನೂ ಒಂದೊಂದಾಗಿ ಹೊರತರಬೇಕೆಂದಿದ್ದೇವೆ.

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಈ ಗ್ರಂಥವನ್ನು ಎಂದಿನಂತೆ ಬರೆದುಕೊಟ್ಟಿದ್ದಾರೆ. ಕಾರ್ಯಾಲಯದ ಪಂಡಿತರು ಅಚ್ಚಿನ ತಪ್ಪುಗಳನ್ನು ತಿದ್ದುವದು– ಮುಂತಾದ ರೀತಿಯಿಂದ ಸಂಸ್ಕರಿಸಿದ್ದಾರೆ.

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಉಳಿದ ಗ್ರಂಥಗಳಂತೆಯೇ ಈ ಗ್ರಂಥದ ಮುದ್ರಣ, ಪ್ರಕಾಶನ– ಮುಂತಾದ ಎಲ್ಲಾ ರೀತಿಯ ಹಕ್ಕುಗಳನ್ನೂ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ವಹಿಸಿರುತ್ತಾರೆ.

ಕಾರಣಾಂತರಗಳಿಂದ ಬಹಳ ತಡವಾಗಿ ಪ್ರಕಟವಾದ ಈ ಗ್ರಂಥವನ್ನು ವಾಚಕರು ಆದರದಿಂದ ಸ್ವೀಕರಿಸಿ ಓದಿ ಕೃತಾರ್ಥರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಹೊಳೆನರಸೀಪುರ
ತಾ॥ 25–7–69

**ಪ್ರಕಾಶಕರು.**

# ಪೀಠಿಕೆ

ಶ್ರೀಶಂಕರಭಗವತ್ಪಾದಾಚಾರ್ಯರವರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ಪ್ರಕರಣಗಳಲ್ಲಿ ಇದೂ ಒಂದು. ಶ್ರೀರಂಗದಲ್ಲಿ ಪ್ರಕಟವಾಗಿರುವ ಶ್ರೀಶಂಕರ ಭಗವತ್ಪಾದರ ಕೃತಿಗಳ ಸಂಗ್ರಹದಲ್ಲಿ ಇದನ್ನು ಸೇರಿಸಿರುತ್ತದೆ. ಪೂನಾದಲ್ಲಿ ಆಪ್ಟೇಕರ್ ಕಂಪೆನಿಯವರು ಪ್ರಕಟಿಸಿರುವ ಪ್ರಕರಣಗಳ ಸಂಗ್ರಹದಲ್ಲಿಯೂ ಇದನ್ನು ಅಡಕವಮಾಡಿರುತ್ತದೆ. ಆ ಎರಡು ಪ್ರತಿಗಳ ಸಹಾಯದಿಂದ ಮೂಲವನ್ನು ತಿದ್ದಿ ಇಲ್ಲಿ ಬೆಳಕಿಗೆ ಹಿಡಿದಿದೆ.

## ಗ್ರಂಥಕರ್ತರು

ಗ್ರಂಥವು ಆಚಾರ್ಯಕೃತವೆಂದು ಬಹುಜನರು ಹೇಳಿಕೊಳ್ಳುತ್ತಿದ್ದರೂ ಮೂಲವನ್ನು ಒಳಹೊಕ್ಕು ಪರೀಕ್ಷಿಸಿದವರು, ಪ್ರಸ್ಥಾನತ್ರಯವನ್ನು ವಿರಚಿಸಿರುವ-ಮುಖ್ಯವಾಗಿ ಸೂತ್ರಭಾಷ್ಯವನ್ನು ಬರೆದಿರುವ-ಶ್ರೀಶಂಕರಭಗವತ್ಪಾದರವರು ಇದನ್ನು ಬರೆದಿಲ್ಲವೆಂದು ಧೈರ್ಯದಿಂದ ಹೇಳಬಹುದು. ಏಕೆಂದರೆ ಇತ್ತೀಚೆಗೆ ವೇದಾಂತವಾಙ್ಮಯಕ್ಕೆ ಬಂದಿರುವ ಸದಾನಂದವಿರಚಿತವಾದ **"ವೇದಾಂತ ಸಾರ"**[1] **ದ ವಿಚಾರಸರಣಿ**ಯನ್ನು ಹಿಡಿದೇ ಬಲುಮಟ್ಟಿಗೆ ಈ ಗ್ರಂಥವು ಸಾಗಿರುತ್ತದೆ. ವೇದಾಂತಸಾರದ ಮೊದಲನೆಯ ಮಂಗಲಶ್ಲೋಕವನ್ನು ಇಲ್ಲಿ ಗ್ರಂಥಕರ್ತರದೆಂಬಂತೆ ಅಕ್ಷರಶಃ ಸೇರಿಸಿಕೊಂಡಿರುತ್ತದೆ. ಇದರಂತೆ ವಿವೇಕಚೂಡಾಮಣಿ, ಅಪರೋಕ್ಷಾನುಭೂತಿ- ಇವುಗಳ ಶ್ಲೋಕಗಳೂ ಇದ್ದದ್ದು ಇದ್ದಂತೆ – ಅಥವಾ ಸ್ವಲ್ಪಸ್ವಲ್ಪ ಮಾರ್ಪಟ್ಟು – ಅಲ್ಲಲ್ಲಿ ಗ್ರಂಥಶರೀರದಲ್ಲಿ ಬೆರೆತುಕೊಂಡಿವೆ. ಇಂಥ ಸ್ಥಲಗಳನ್ನು ಅಡಿಟಿಪ್ಪಣಿಯಲ್ಲಿ ತೋರಿಸಲಾಗಿರುತ್ತದೆ. ಎಲ್ಲಕ್ಕೂ ಮೇಲಾಗಿ ಈಗಿನ ವ್ಯಾಖ್ಯಾನ ಪ್ರಸ್ಥಾನಕಾರರಿಗೆ ಮಿಾಸಲಾಗಿದ್ದು ಭಾಷ್ಯದಲ್ಲಿ ಎಲ್ಲಿಯೂ ಕಾಣದ, ಅಥವಾ ಭಾಷ್ಯಪ್ರಸ್ಥಾನಕ್ಕೆ ವಿರುದ್ಧವೇ ಆಗಿರುವ ಮೂಲಾವಿದ್ಯಾವಾದವೇ (೩೦೨, ೪೮೯, ೪೯೦, ೫೦೨)- ಮುಂತಾದವುಗಳು ಇದರಲ್ಲಿ ಧಾರಾಳವಾಗಿ ಸೇರಿಕೊಂಡಿವೆ. ವ್ಯಾಖ್ಯಾನಗ್ರಂಥಗಳಲ್ಲಿ ಪ್ರಚುರವಾಗಿದ್ದು ಭಾಷ್ಯಗಳಲ್ಲಿ ಕಣ್ಣಿಗೆ ಬೀಳದೆ ಇರುವ **ಪಾರಿಭಾಷಿಕಶಬ್ದ**ಗಳೂ ಇಲ್ಲಿ ತುಂಬಿತುಳುಕುತ್ತಿವೆ. ಇವುಗಳ ಅನುಕ್ರಮಣಿಕೆಯನ್ನು ನಾವು ಇಲ್ಲಿ ಸೇರಿಸಿಲ್ಲವಾದರೂ ಮುಖ್ಯವಾದವುಗಳನ್ನು ಎದ್ದು ಕಾಣುವ ದಪ್ಪಕ್ಷರಗಳಲ್ಲಿ ಅಲ್ಲಲ್ಲಿ ಅಚ್ಚುಮಾಡಿಸಿರುತ್ತೇವೆ.

---

1. ಈ ಗ್ರಂಥದಲ್ಲಿ ಪರಾಮರ್ಶಿಸಿರುವ ವೇದಾಂತಸಾರದ ಪುಟಗಳು, ಶ್ರೀರಂಗದಲ್ಲಿ ಪ್ರಕಟವಾಗಿರುವ (1911) ಪುಸ್ತಕದವು.

## ಗ್ರಂಥಪ್ರತಿಪಾದ್ಯವಿಷಯ

ಗ್ರಂಥದಲ್ಲಿರುವ ವಿಷಯಗಳ ವಿವರಣವು ವಿಸ್ತಾರವಾಗಿರುತ್ತದೆ. ಅನಿವಾರ್ಯವಾಗಿ ಗ್ರಂಥಸಾರವನ್ನು ಕೂಡ ಏಳು ಪುಟಗಳವರೆಗೆ ಬೆಳೆಯಿಸಿಕೊಡಬೇಕಾಯಿತು. ಅದನ್ನು ಒಮ್ಮೆ ಓದುವದರಿಂದ ಗ್ರಂಥದಲ್ಲಿರುವ ಪ್ರತಿಪಾದ್ಯವಿಷಯದ ಪರಿಚಯವು ತಕ್ಕಮಟ್ಟಿಗೆ ಆಗುವಂತೆ ಇದೆ.

**"ವೇದಾಂತಸಾರ"ದಲ್ಲಿ** ಪ್ರತಿಪಾದನೆಮಾಡಿದ ಅಧ್ಯಾರೋಪಾಪವಾದ, ಅವಸ್ಥಾತ್ರಯ(ಪಂಚಕೋಶ)ಪರಿಶೀಲನೆಯಿಂದ ವಿಶ್ವವೈಶ್ವಾನರ, ತೈಜಸಹಿರಣ್ಯಗರ್ಭ, ಪ್ರಾಜ್ಞಈಶ್ವರ– ಎಂಬ (ವ್ಯಷ್ಟಿಸಮಷ್ಟ್ಯುಪಾಧಿಗಳಿಂದಾದ) ಆತ್ಮವಿಭಾಗ ಮತ್ತು ಅವರ ಐಕ್ಯವನ್ನು ಪ್ರತಿಪಾದಿಸಿ ಶ್ರವಣಮನನನಿದಿಧ್ಯಾಸನಗಳನ್ನು ವಾಕ್ಯಾರ್ಥಜ್ಞಾನಕ್ಕೆ ಸಾಧನವಾಗಿ ಹೇಳುವ ಭಾಗವೊಂದು, ಬಳಿಕ **"ದೃಗ್ದೃಶ್ಯವಿವೇಕ"ಪ್ರಕರಣದಲ್ಲಿ** ಹೇಳಿರುವಂತೆ ಸಮಾಧಿಯ ವಿವರವನ್ನು ಹೇಳುವ ಭಾಗವಿನ್ನೊಂದು – ಹೀಗೆ ಅತಿವಿಸ್ತರದಿಂದ ವರ್ಣಿಸಿರುವ ಭಾಗಗಳೆರಡೂ ಗ್ರಂಥದ ಶರೀರಕ್ಕೆ ಸೇರಿವೆ ಎಂದು ದಪ್ಪವಾಗಿ ಹೇಳಬಹುದು. ಮುಂದೆ (೯೪೪ನೆಯ ಶ್ಲೋಕದಿಂದ) **"ಯೋಗವಾಸಿಷ್ಠ"ದಲ್ಲಿರುವ** ಜ್ಞಾನಭೂಮಿಕೆಗಳು (೯೪೬–೯೫೬), ಅವಸ್ಥಾತ್ರಯಗಳಲ್ಲಿ ಒಂದೊಂದರಲ್ಲಿಯೂ ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಾಂತರಭೇದಗಳಿಗೂ ಭೂಮಿಕೆಗಳಿಗೂ ಸಂಬಂಧ (೯೫೭,೯೭೪), ಜೀವನ್ಮುಕ್ತನ ವರ್ಣನೆ (೯೭೫–೯೮೬), ವಿದೇಹಮುಕ್ತನ ವರ್ಣನೆ (೯೯೨–೧೦೦೩)– ಇಷ್ಟಾದ ಬಳಿಕ ಗ್ರಂಥದ ಉಪಸಂಹಾರವಾಗಿದೆ.

## ಗ್ರಂಥವನ್ನು ಹೇಗೆ ಸಮಾಲೋಚನೆಮಾಡಬೇಕು ?

ಈ ಗ್ರಂಥದಲ್ಲಿ ಅನೇಕ ವಿಷಯಗಳ ಒಳಭೇದಗಳನ್ನು ವಿಸ್ತಾರವಾಗಿ ವರ್ಣಿಸಿದೆ. ವಿವೇಕಚೂಡಾಮಣಿಯಂತೆ ಕೆಲವು ವಿಷಯಗಳನ್ನು ಶ್ಲೋಕಾಂತ್ಯದಲ್ಲಿ ಧ್ರುವಪದವನ್ನಿಟ್ಟು ವಿವರಿಸಿದೆ. ಗ್ರಂಥದಲ್ಲಿ ಹೇಳಿದ ಕೆಲವು ವಿಚಾರಗಳು ಪೂರ್ವಾಪರವಿರುದ್ಧವಾಗಿವೆ. ಆಧಾರವಾಗಿಟ್ಟುಕೊಂಡಿರುವ ವೇದಾಂತಸಾರವೇ ಮುಂತಾದ ಗ್ರಂಥಗಳಿಗಿಂತ ಪ್ರತಿಪಾದನೆಯಲ್ಲಿ ಹೆಚ್ಚುಕಡಿಮೆಯಿದೆ ; ಭಾಷ್ಯಪ್ರಸ್ಥಾನಕ್ಕಿಂತ ಎಷ್ಟೋ ಕಡೆಗಳಲ್ಲಿ ಭಿನ್ನಪ್ರಸ್ಥಾನವಿದೆ. ಭಾಷ್ಯಗಳನ್ನು ಓದಿರುವವರಿಗೆ ಇವೆಲ್ಲ ಸ್ಫುಟವಾಗಿ ಗೊತ್ತಾಗಬಹುದಾದರೂ ಪ್ರಕರಣವನ್ನೇ ನೇರಾಗಿ ಓದುವವರಿಗೆ ಅನೇಕ ಪ್ರಕ್ರಿಯೆಗಳು ಇಲ್ಲಿ ಕಲೆಬೆರಕೆಯಾಗಿವೆಯೆಂಬುದು ಬೇಗನೆ ಹೊಳೆಯಲಾರದು. ಆದ್ದರಿಂದ ಅಂಥವರು ಕೆಳಗಿರುವ ಟಿಪ್ಪಣಿಗಳನ್ನು ಅವಶ್ಯವಾಗಿ ಓದಬೇಕು. ಅಲ್ಲಿ ಕಾಣಿಸಿರುವ **ವೇದಾಂತಸಾರ, ವಿವೇಕಚೂಡಾಮಣಿ,**

**ಅಪರೋಕ್ಷಾನುಭೂತಿ, ದೃಗ್ದೃಶ್ಯವಿವೇಕ**– ಈ ಗ್ರಂಥಗಳನ್ನು ಓದಬೇಕು. ಇವುಗಳೆಲ್ಲ ಕಾರ್ಯಾಲಯದಲ್ಲಿ ಪ್ರಕಟವಾಗಿರುತ್ತವೆ. **ಶಾಂಕರಭಾಷ್ಯ ಕನ್ನಡ ಅನುವಾದ**ಗಳೂ ದೊರೆಯುವವು. ಹೀಗೆ ಹೋಲಿಕೆಯ ದೃಷ್ಟಿಯಿಂದ ಓದಿದಾಗ ಭಾಷ್ಯದ ಪ್ರಸ್ಥಾನಕ್ಕೂ ಪ್ರಕರಣಗಳ ಪ್ರಸ್ಥಾನಗಳಿಗೂ ಇರುವ **ತಾರತಮ್ಯವು** ಸ್ಫುಟವಾಗುವದು. **ವೇದಾಂತಸಾರವು** ಸಣ್ಣಗ್ರಂಥ ; ಮೂಲವನ್ನು ಸ್ವಲ್ಪಮಟ್ಟಿಗೆ ಸಂಸ್ಕೃತವನ್ನು ಬಲ್ಲವರೂ ಬೇಗನೆ ಅರ್ಥಮಾಡಿಕೊಳ್ಳಬಹುದು. ಈಗ ಹೊರಕ್ಕೆ ಬಂದಿರುವ **ಸರ್ವವೇದಾಂತಸಿದ್ಧಾಂತಸಾರಸಂಗ್ರಹ**, ಮತ್ತು **ವೇದಾಂತಸಾರ**– ಇವುಗಳಲ್ಲಿರುವ ಅವಸ್ಥಾತ್ರಯಪ್ರಕ್ರಿಯೆಗೂ ಶುದ್ಧವೇದಾಂತದ ಅವಸ್ಥಾತ್ರಯದ ಪ್ರಕ್ರಿಯೆಗೂ ಇರುವ ವೈಲಕ್ಷಣ್ಯವನ್ನು ಅರಿಯಬೇಕೆನ್ನುವವರು ಕಾರ್ಯಾಲಯದಲ್ಲಿ ಪ್ರಕಟವಾಗಿರುವ **ಮಾಂಡೂಕ್ಯೋಪನಿಷತ್ತಿನ ಭಾಷ್ಯ**ವನ್ನಾಗಲಿ, **ಗೌಡಪಾದ ಹೃದಯ**ಗ್ರಂಥವನ್ನಾಗಲಿ ಓದಬೇಕು.

## ಸಮಾಧಿ, ಮುಕ್ತಿ

ಈ ಪ್ರಕರಣದಲ್ಲಿರುವ **ನಿದಿಧ್ಯಾಸನ** ಮತ್ತು **ಸಮಾಧಿಗಳ** ವಿಷಯವು ಶುದ್ಧಶಾಂಕರಪ್ರಕ್ರಿಯೆಗೆ ಸರಿಯಾಗಿಲ್ಲವೆಂಬುದನ್ನೂ '**ತುರೀಯ**ವೆಂಬುದು ಸಮಾಧಿಯಲ್ಲ ; ಅದು ಅವಸ್ಥಾತೀತನಾದ ಆತ್ಮನಿಗೆ ಉಪನಿಷತ್ತಿನಲ್ಲಿ ಕೊಟ್ಟ ಹೆಸರು' ಎಂಬುದನ್ನೂ ನೆನಪಿನಲ್ಲಿಟ್ಟಿರುವದು ಒಳ್ಳೆಯದು. ಜ್ಞಾನನಿಷ್ಠೆಯೆಂದರೆ ಸಮಾಧಿಯ ಅಭ್ಯಾಸವೆಂದು ಇಲ್ಲಿ ಬರೆದಿರುವದು ಗೀತಾಭಾಷ್ಯದಲ್ಲಿ (ಗೀ. ಭಾ. ೧೮–೫೦) ಇರುವದಕ್ಕಿಂತ ತೀರ ಭಿನ್ನವಾಗಿರುತ್ತದೆ. ಸಮಾಧಿಯಲ್ಲಿ ಅದ್ವಿತೀಯಾತ್ಮನಿರುತ್ತಾನೆಂಬುದನ್ನು ಅರಿಯುವದು ಅದ್ವಿತೀಯಾತ್ಮನೇ ಪರಮಾರ್ಥವೆಂಬುದಕ್ಕೆ ಪ್ರಮಾಣವಾದೀತೇ ಹೊರತು, ಅದೇ ಅದ್ವೈತಾತ್ಮಜ್ಞಾನವಲ್ಲವೆಂಬುದನ್ನು ಓದುಗರು ನೆನಪಿಡಬೇಕು. ಹೀಗೆಯೇ ಜೀವನ್ಮುಕ್ತಿವಿದೇಹಮುಕ್ತಿಗಳ ವರ್ಣನೆಯೂ ಭಾಷ್ಯಕಾರಸಮ್ಮತವಾದ ಮುಕ್ತಿಸ್ವರೂಪನಿರ್ಣಯಕ್ಕೆ ಹೊಂದುಗಡೆಯಾಗಿಲ್ಲವೆಂಬುದನ್ನು ತುಲನಾತ್ಮಕದೃಷ್ಟಿಯಿಂದ ನಿರ್ಣಯಿಸಬೇಕಾಗುವದು. ಅಂತೂ ಆಚಾರ್ಯರ ಸಿದ್ಧಾಂತವನ್ನು ಮನಗಾಣಬೇಕೆನ್ನುವವರು ಶಂಕರ ಕೃತಿಯೆಂದು ಜನರು ನಂಬುವ ಪ್ರಕರಣಗಳನ್ನು ಓದುವಾಗ ಎಚ್ಚರಿಕೆಯಿಂದಿರಬೇಕಾಗುವದೆಂದು ತಿಳಿಯಪಡಿಸುವ ಉದ್ದೇಶದಿಂದಲೇ ಈ ಪ್ರಕರಣವನ್ನು ಬೆಳಕಿಗೆ ಹಿಡಿಯಲಾಗಿದೆ ಎಂದು ಬಿನ್ನವಿಸಿ ಈ ಪೀಠಿಕೆಯನ್ನು ಇಲ್ಲಿಗೆ ಉಪಸಂಹಾರ ಮಾಡುತ್ತೇವೆ.

## ಈ ಸಂಸ್ಕರಣ

ಗ್ರಂಥವನ್ನು ಅಚ್ಚಿಗೆ ಕೊಟ್ಟು ಸುಮಾರು ನಾಲ್ಕು ವರ್ಷಗಳಾದವು. ನಾನು ಯಾತ್ರೆನಿಮಿತ್ತದಿಂದ ಉತ್ತರಕ್ಕೆ ಹೋದದ್ದು, ಬಳಿಕ ಶರೀರದಲ್ಲಿ ಅಸ್ವಾಸ್ಥ್ಯದಿಂದ

ಸ್ಥಲಾಂತರದಲ್ಲಿರಬೇಕಾಗಿಬಂದದ್ದು, ಈ ಗ್ರಂಥವು ಅಚ್ಚಿನಲ್ಲಿರುವಾಗಲೇ ಇನ್ನು ಎರಡುಮೂರು ಗ್ರಂಥಗಳು ಮುದ್ರಣಕ್ಕೆ ಸಜ್ಜಾಗಬೇಕಾಗಿಬಂದದ್ದು- ಈ ಎಲ್ಲಾ ಕಾರಣಗಳಿಂದ ಗ್ರಂಥವು ಪ್ರಕಟವಾಗುವದು ತಡವಾದದ್ದಲ್ಲದೆ, ಗ್ರಂಥದಲ್ಲಿ ಕೆಲಕೆಲವು ತಪ್ಪುಗಳೂ ಬೀಳುವದಕ್ಕೆ ಕಾರಣವಾಯಿತು. ಈ ಗ್ರಂಥದ ಅಚ್ಚಿನ ಕರಡನ್ನು ನೋಡುವದು, ನನ್ನ ಅನವಧಾನದಿಂದ ಗ್ರಂಥಸಂಖ್ಯೆ, ಪರಾಮರ್ಶಗಳು ಮುಂತಾದದ್ದರಲ್ಲಿ ಬೇಕಾದ ತಿದ್ದುಪಾಡನ್ನು ಮಾಡುವದು, ಶ್ಲೋಕಾನುಕ್ರಮಣಿಕೆಯನ್ನು ಸಜ್ಜುಗೊಳಿಸುವದು- ಮುಂತಾದ ರೀತಿಗಳಿಂದ ಸಹಾಯಮಾಡಿರುವ ಕಾರ್ಯಾಲಯದ ಪಂಡಿತರು **ಅಧ್ಯಾತ್ಮವಿದ್ಯಾಪ್ರವೀಣ ಶ್ರೀ|| ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳಿಗೆ** ನನ್ನ ಹಾರ್ದಿಕ ನಾರಾಯಣಸ್ಮರಣೆಗಳು. ಗ್ರಂಥದಲ್ಲಿ ಉಳಿದಿರಬಹುದಾದ ದೋಷಗಳನ್ನು ತಿಳಿಸುವ ವಿದ್ವಾಂಸರಿಗೆ ಕೃತಜ್ಞತೆಯನ್ನು ಪ್ರಕಟಿಸಿ ಮುಂದಿನ ಸಂಸ್ಕರಣದಲ್ಲಿ ಅವನ್ನು ಕಾರ್ಯಾಲಯದವರು ಸರಿಪಡಿಸುವರು ; ಏಕೆಂದರೆ ಇದರ ಸರ್ವಸ್ವಾಮ್ಯವೂ ಕಾರ್ಯಾಲಯಕ್ಕೇ ಸೇರಿದ್ದಾಗಿದೆ.

ಸೌಮ್ಯಸಂವತ್ಸರದ
ನಿಜ ಆಷಾಢ ಶು|| ೧೫

ಇಂತು ಶಂಕರಸ್ಮರಣಾವಲಂಬಿ,
**ಸಚ್ಚಿದಾನಂದೇಂದ್ರಸರಸ್ವತೀಭಿಕ್ಷು.**

# ವಿಷಯಾನುಕ್ರಮಣಿಕೆ

ಕಂಸಗಳಲ್ಲಿ ಕೊಟ್ಟಿರುವದು ಶ್ಲೋಕಸಂಖ್ಯೆ.


| | ಪುಟಗಳು |
|---|---|
| ಮಂಗಲ (೧–೩) | ೧ |
| ಗ್ರಂಥಾರಂಭಪ್ರತಿಜ್ಞೆ (೪) | ೧ |
| ಅನುಬಂಧಚತುಷ್ಟಯ (೫–೧೧) | ೨–೩ |
| ಸಾಧನಚತುಷ್ಟಯ (೧೨–೨೫೧) | |
| (೧) ನಿತ್ಯಾನಿತ್ಯವಸ್ತುವಿವೇಕ (೧೬–೨೧) (೨) ಇಹಾಮುತ್ರಾರ್ಥಫಲಭೋಗವಿರಾಗ (೨೨–೯೩) (೩) ಶಮಾದಿಷಟ್ಕ (೯೪–೧೨೬) (೪) ಮುಮುಕ್ಷುತ್ವ (೧೨೭) (೫) ಶಮದಮಾದಿಗಳು (೧೨೮–೨೨೬)–ಮುಮುಕ್ಷುತ್ವ (೨೨೭–೨೫೦). | ೩–೫೬ |
| ಗುರುವಿನ ಬಳಿಗೆ ಹೋಗಿ ಪ್ರಶ್ನೆಮಾಡಬೇಕು (೨೫೨–೨೬೫). | ೫೬–೫೯ |
| ಗುರುವಿನ ಅನುಗ್ರಹೋಕ್ತಿ (೨೬೬–೨೭೧). | ೫೯–೬೦ |
| ಶಿಷ್ಯನ ಪ್ರಶ್ನೆ : (೨೭೨–೨೭೮) | ೬೧–೬೨ |
| ಗುರುವಿನ ಉತ್ತರ (೨೭೯–೨೯೪) | ೬೨–೬೬ |
| ಅಧ್ಯಾರೋಪ (೨೯೫–೩೦೧) | ೬೬–೬೮ |
| ಭಾವರೂಪಾಜ್ಞಾನ (೩೦೨–೩೧೨) | ೬೮–೭೦ |
| ಅಜ್ಞಾನವೆಂಬ ಕಾರಣಶರೀರ, ಆನಂದಮಯಕೋಶ (೩೧೩–೩೩೫). | ೭೦–೭೫ |
| ಸೂಕ್ಷ್ಮಶರೀರ (೩೩೬–೩೯೭) | ೭೫–೮೯ |
| ಸ್ಥೂಲಶರೀರ (೩೯೮–೪೨೯) | ೮೯–೯೫ |
| ಜಗತ್ತು ಉತ್ಪತ್ತಿಯಾಗುವ ಬಗೆ (೪೩೦–೪೫೫) | ೯೫–೧೦೦ |
| ಆತ್ಮಾನಾತ್ಮಗಳ ಅಧ್ಯಾರೋಪ (೪೫೬–೪೬೫) | ೧೦೦–೧೦೩ |
| ಪ್ರಶ್ನೆ : ಅವಿಷಯನಾದ ಆತ್ಮನಲ್ಲಿ ಅಧ್ಯಾಸಮಾಡಬಹುದೆ ? (೪೬೬–೪೮೭). | ೧೦೩–೧೦೭ |
| ಅಧ್ಯಾಸಕ್ಕೆ ಕಾರಣ (೪೮೮–೫೦೨) | ೧೦೭–೧೧೦ |
| ಈಶ್ವರನಿಗೆ ಬಂಧವಿಲ್ಲ, ಜೀವನಿಗೆ ಉಂಟು (೫೦೩–೫೧೦) | ೧೧೦–೧೧೨ |
| ಅಜ್ಞಾನಕ್ಕೆ ಜ್ಞಾನದಿಂದಲೇ ನಿವೃತ್ತಿ (೫೧೧–೫೨೦) | ೧೧೨–೧೧೪ |
| ಆತ್ಮನ ವಿಷಯಕ್ಕೆ ವಿವಾದ (೫೨೧–೫೭೯) | ೧೧೪–೧೨೪ |
| ವಾದಿಗಳು ಒಪ್ಪಿರುವದೆಲ್ಲವೂ ಅನಾತ್ಮವೇ (೫೮೦–೫೮೩) | ೧೨೪ |
| ಶಿಷ್ಯನ ಪ್ರಶ್ನೆ (೫೮೪–೫೮೬) | ೧೨೫ |
| ಉತ್ತರ : ಸುಷುಪ್ತಿಯಲ್ಲಿ ಜಗತ್ತು ಅವ್ಯಾಕೃತವಾಗಿರುತ್ತದೆ (೫೮೭–೫೯೨) | ೧೨೬ |
| ಅಸತ್ಕಾರ್ಯವಾದಖಂಡನೆ (೫೯೩–೫೯೭) | ೧೨೭ |

| ವಿಷಯ | ಪುಟಗಳು |
|---|---|
| ಶೂನ್ಯವಾದದ ಖಂಡನೆ (ಶ್ಲೋಕ ೫೯೮–೬೦೧) | ೧೨೮ |
| ಆತ್ಮಸಿದ್ಧಿ (೬೦೨–೬೧೩) | ೧೨೯–೧೩೨ |
| ಆತ್ಮನ ಸಚ್ಚಿದಾನಂದರೂಪ (೬೧೪–೬೩೫) | ೧೩೨–೧೩೭ |
| ಶಿಷ್ಯನ ಪ್ರಶ್ನೆ : ಜನರು ಸುಖಕ್ಕಾಗಿ ಏಕೆ ಪ್ರಯತ್ನಿಸುತ್ತಾರೆ ? (೬೩೬–೬೩೮) | ೧೩೭ |
| ಉತ್ತರ: ಆತ್ಮಾನಂದವನ್ನು ಅರಿಯದ್ದೇ ಸುಖಾನ್ವೇಷಣೆಗೆ ಕಾರಣ (೬೩೮–೬೪೩) | ೧೩೮ |
| ಸುಖವು ಹೇಗೆ ಉಂಟಾಗುತ್ತದೆ ? (೬೪೪–೬೫೨) | ೧೩೯–೧೪೦ |
| ವಿಷಯಾನಂದವು ದುಃಖಮಿಶ್ರಿತ (೬೫೩–೬೫೮) | ೧೪೦–೧೪೧ |
| ಆತ್ಮಾನಂದದ ಅನುಭವವು ಸುಷುಪ್ತಿಯಲ್ಲಿದೆ (೬೫೯–೬೬೬) | ೧೪೧–೧೪೨ |
| ದುಃಖಾಭಾವವೇ ಸುಖವೆಂಬುದು ಸರಿಯಲ್ಲ (೬೬೭–೬೭೬) | ೧೪೩–೧೪೪ |
| ಸಚ್ಚಿದಾನಂದತ್ವವು ಪರಮಾತ್ಮನ ಗುಣವಲ್ಲ (೬೭೭–೬೮೧) | ೧೪೪–೧೪೫ |
| ಆತ್ಮನಿಗಿಂತ ಪ್ರಪಂಚವು ವಿಜಾತೀಯವಲ್ಲ (೬೮೨–೬೮೪½) | ೧೪೫–೧೪೬ |
| ಜಗತ್ತು ಸನ್ಮಾತ್ರವೆಂಬುದು ಹೇಗೆ ? (೬೮೫–೬೯೩) | ೧೪೬–೧೪೭ |
| ಸನ್ಮಾತ್ರಬ್ರಹ್ಮದಲ್ಲಿ ಸಜಾತೀಯವಿಜಾತೀಯಭೇದಗಳಿಲ್ಲ (೬೯೪–೬೯೭½) | ೧೪೮–೧೪೯ |
| ಬ್ರಹ್ಮವು ಅಪರಿಚ್ಛಿನ್ನವೇ (೬೯೮–೭೦೧) | ೧೪೯–೧೫೦ |
| ಬ್ರಹ್ಮಾತ್ಮೈಕತ್ವವನ್ನು ಶ್ರುತಿಯು ತಿಳಿಸಿಕೊಡುವ ಬಗೆ (೭೦೨–೭೧೭½) | ೧೫೦–೧೫೨ |
| ನೈದಿಲೆ ಕಪ್ಪು ಎಂಬಂತೆ ಇಲ್ಲಿ ವಾಕ್ಯಾರ್ಥವಾಗದು (೭೧೮–೭೨೫) | ೧೫೩–೧೫೪ |
| ತತ್ತ್ವಂಪದಾರ್ಥಗಳಿಗೆ ಪರಸ್ಪರವಿರೋಧ (೭೨೬–೭೨೯) | ೧೫೪–೧೫೫ |
| ಐಕ್ಯವನ್ನು ಕೈಬಿಟ್ಟರೆ ಶ್ರುತಿವಿರೋಧ (೭೩೦–೭೩೧) | ೧೫೫ |
| ಅಖಂಡಾರ್ಥವೇ ಶ್ರುತಿಸಮ್ಮತ (೭೩೨–೭೩೬) | ೧೫೫–೧೫೬ |
| ಇಲ್ಲಿ ಲಕ್ಷಣೆಯನ್ನು ಸ್ವೀಕರಿಸಿದರೆ ಯಾವ ವಿರೋಧವೂ ಇಲ್ಲ (೭೩೭–೭೩೮½) | ೧೫೬–೧೫೭ |
| ಇಲ್ಲಿ ಜಹಲ್ಲಕ್ಷಣೆಯು ಸಲ್ಲದು (೭೩೯–೭೪೭) | ೧೫೭–೧೫೮ |
| ಇಲ್ಲಿ ಅಜಹಲ್ಲಕ್ಷಣೆಯೂ ಹೊಂದುವದಿಲ್ಲ (೭೪೮–೭೫೧½) | ೧೫೯ |
| ಭಾಗಲಕ್ಷಣೆ ಏತಕ್ಕೆ ? (೭೫೨–೭೬೬) | ೧೬೦–೧೬೧ |
| ವಾಕ್ಯಾರ್ಥದಲ್ಲಿ ವಿರೋಧವಿರುವದಿಲ್ಲ (೭೬೭–೭೭೩) | ೧೬೨–೧೬೪ |
| ಅದ್ವಿತೀಯತತ್ತ್ವೋಪದೇಶ (೭೭೪–೭೯೭) | ೧೬೪–೧೭೦ |
| ಶಿಷ್ಯನ ಪ್ರಶ್ನೆ (೭೯೮–೭೯೯) | ೧೭೦ |
| ಗುರುವಿನ ಉತ್ತರ : | ೧೭೦–೧೮೩ |
| (1) ಮುಖ್ಯಾಧಿಕಾರಿಗೆ ಶ್ರವಣಮಾತ್ರದಿಂದ ವೃತ್ತಿಲಾಭ (೮೦೦–೮೦೨) | |
| (2) ಮುಖ್ಯಾಧಿಕಾರಿಗೆ ಉಂಟಾಗುವ ಅಖಂಡಾಕಾರವೃತ್ತಿ (೮೦೩–೮೧೨) | |
| (3) ಉತ್ತಮಾಧಿಕಾರಿಗಳಲ್ಲದವರಿಗೆ ಮನನವೂ ಬೇಕು (೮೧೩–೮೧೯½) | |
| (4) ಶ್ರವಣಾದಿಗಳ ಅವಧಿ (೮೨೦–೮೨೩) | |
| (5) ಸಮಾಧಿದ್ವೈವಿಧ್ಯ (೮೨೪–೮೩೪) | |
| (6) ದೃಶ್ಯಾನುವಿದ್ಧ, ಶಬ್ದಾನುವಿದ್ಧ, ಸವಿಕಲ್ಪ (೮೩೫–೮೩೯½)– | |

| ವಿಷಯ | ಪುಟಗಳು |
|---|---|
| (7) ತಾನು ಸಾಕ್ಷಿಯೆಂದು ಮಾಡಿಕೊಳ್ಳುವ ಅನುಸಂಧಾನ (೮೪೦_೮೪೭)_ | |
| (8) ವಿಪರೀತಭಾವನೆಯನ್ನು ಕಳೆದುಕೊಂಡ ಮುಕ್ತಿಯು ದೃಶ್ಯವಿಲಯರೂಪವಾದ ಸಮಾಧಿಯಿಂದಲೇ (ಶ್ಲೋಕ ೮೪೮_೮೫೬) | |
| ಜ್ಞಾನನಿಷ್ಠೆಗೆ ಕರ್ಮದಿಂದ ಆಗಬೇಕಾದದ್ದೇನೂ ಇಲ್ಲ (೮೫೭_೮೬೩) | ೧೮೩_೧೮೪ |
| ಜ್ಞಾನನಿಷ್ಠನಿಗೆ ಮತ್ತೆ ಯಾವ ಅನುಷ್ಠಾನವೂ ಬೇಕಿರುವದಿಲ್ಲ (೮೬೪_೮೬೮) | ೧೮೪_೧೮೫ |
| ಯೋಗಾರೂಢನಿಗೆ ಯಾವ ಕರ್ಮವೂ ಇಲ್ಲ (೮೬೯_೮೭೧) | ೧೮೫_೧೮೬ |
| ಶಬ್ದಾನುವಿದ್ಧಸಮಾಧಿ (೮೭೨_೮೭೮) | ೧೮೬ |
| ನಿರ್ವಿಕಲ್ಪಸಮಾಧಿ (೮೭೯_೮೮೩) | ೧೮೭_೧೮೯ |
| ಬಾಹ್ಯಸಮಾಧಿತ್ರಯ (೮೮೪_೮೯೨)_ | ೧೮೯_೧೯೦ |
| ದೃಶ್ಯಾನುವಿದ್ಧಸಮಾಧಿಯ ವಿವರ (೮೯೩_೮೯೮)_ | ೧೯೦_೧೯೨ |
| ಶಬ್ದಾನುವಿದ್ಧಬಾಹ್ಯಸಮಾಧಿ (೮೯೯_೯೦೫) | ೧೯೨_೧೯೩ |
| ಬಾಹ್ಯನಿರ್ವಿಕಲ್ಪಕಸಮಾಧಿ (೯೦೬) | ೧೯೩_೧೯೪ |
| ಸಮಾಧ್ಯಭ್ಯಾಸಕ್ಕೆ ಅವಧಿ (೯೦೭_೯೧೦) | ೧೯೪ |
| ಸಮಾಧಿಯ ಪ್ರಶಂಸೆ (೯೧೧_೯೧೫) | ೧೯೫ |
| ನಿರ್ವಿಕಲ್ಪಸಮಾಧಿಯ ಅಂಗಗಳು (೯೧೬_೯೨೮) | ೧೯೬_೧೯೭ |
| ಸಮಾಧಿಗೆ ವಿಘ್ನಗಳು (೯೨೯_೯೩೧) | ೧೯೮_೧೯೯ |
| ಶಿಷ್ಯನ ಕೃತಜ್ಞತಾಪೂರ್ವಕ ಗುರುಸ್ತೋತ್ರ (೯೩೨_೯೪೩) | ೧೯೯_೨೦೦ |
| ಜೀವನ್ಮುಕ್ತ್ಯಾದಿಗಳ ವಿಷಯಕ್ಕೆ ಪ್ರಶ್ನೆ (೯೪೪_೯೪೫) | ೨೦೧_೨೦೨ |
| ಗುರುವಿನ ಉತ್ತರ : ಜ್ಞಾನಭೂಮಿಕೆಗಳ ವಿವರ (೯೪೬_೯೫೬) | ೨೦೨_೨೦೪ |
| ಅವಸ್ಥೆಗಳ ವಿವರಣೆ (೯೫೭_೯೬೭) | ೨೦೪_೨೦೬ |
| ಅವಸ್ಥೆಗಳಿಗೂ ಭೂಮಿಕೆಗಳಿಗೂ ಸಂಬಂಧ (೯೬೮_೯೭೪) | ೨೦೬_೨೦೬ |
| ಜೀವನ್ಮುಕ್ತನ ವರ್ಣನೆ (೯೭೫_೯೮೬) | ೨೦೭_೨೧೦ |
| ವಿದೇಹಮುಕ್ತಿ (೯೮೭_೯೯೧) | ೨೧೦_೨೧೧ |
| ವಿದೇಹಮುಕ್ತನ ಸ್ಥಿತಿ (೯೯೨_೧೦೧೦) | ೨೧೧_೨೧೫ |
| ಉಪಸಂಹಾರ (೧೦೧೧_೧೦೧೫) | ೨೧೫_೨೧೬ |
| ಗ್ರಂಥದ ಸಾರ | ೨೧೭_೨೨೩ |
| ಶ್ಲೋಕಾನುಕ್ರಮಣಿಕೆ | ೨೨೪_೨೩೮ |

# ಸಂಕೇತಾಕ್ಷರಗಳ ವಿವರಣೆ

| ಸಂಕೇತ | ವಿವರಣೆ |
|---|---|
| ಕ ; ಕಾ. | ಕಾಠಕೋಪನಿಷತ್ತು |
| ಕೌ. | ಕೌಷೀತಕ್ಯುಪನಿಷತ್ತು |
| ಗೀ. | ಭಗವದ್ಗೀತೆ |
| ಗೀ. ಭಾ. | ಭಗವದ್ಗೀತಾಶಾಂಕರಭಾಷ್ಯ |
| ಛಾಂ. | ಛಾಂದೋಗ್ಯೋಪನಿಷತ್ತು |
| ಛಾಂ. ಭಾ. | ಛಾಂದೋಗ್ಯೋಪನಿಷತ್–ಶಾಂಕರಭಾಷ್ಯ |
| ಜಾ. | ಜಾಬಾಲೋಪನಿಷತ್ತು |
| ತೈ. | ತೈತ್ತಿರೀಯೋಪನಿಷತ್ತು |
| ತೈ. ಭಾ. | ತೈತ್ತಿರೀಯೋಪನಿಷತ್–ಶಾಂಕರಭಾಷ್ಯ |
| ತೈ. ನಾ. | ತೈತ್ತಿರೀಯನಾರಾಯಣಪನ್ನ |
| ಪಂ. ದ. | ಪಂಚದಶಿ |
| ಪು. | ಪುಟ |
| ಬೃ. | ಬೃಹದಾರಣ್ಯಕೋಪನಿಷತ್ತು |
| ಬೃ. ಭಾ. | ಬೃಹದಾರಣ್ಯಕೋಪನಿಷತ್–ಶಾಂಕರಭಾಷ್ಯ |
| ಮ. ವಾ. | ಮಹಾವಾಕ್ಯದರ್ಪಣ |
| ಮಾಂ. | ಮಾಂಡೂಕ್ಯೋಪನಿಷತ್ತು |
| ಮುಂ. ಭಾ. | ಮುಂಡಕೋಪನಿಷತ್–ಶಾಂಕರಭಾಷ್ಯ |
| ಮೋ. ಧ. | ಶ್ರೀಮನ್ಮಹಾಭಾರತ–ಮೋಕ್ಷಧರ್ಮಪರ್ವ |
| ಯೋ. ವಾ. | ಯೋಗವಾಸಿಷ್ಠ ಅಥವಾ ವಾಸಿಷ್ಠರಾಮಾಯಣ |
| ವಿ. ಚೂ. | ವಿವೇಕಚೂಡಾಮಣಿ |
| ವೇ. ಸಾ. | ವೇದಾಂತಸಾರ (ಸದಾನಂದವಿರಚಿತ) |
| ಶಂ. ಗೀ. | ಶಂಕರಾನಂದರ ಗೀತಾತಾತ್ಪರ್ಯಬೋಧಿನೀ |
| ಶ್ವೇ. | ಶ್ವೇತಾಶ್ವತರೋಪನಿಷತ್ತು |
| ಸೂ. ಭಾ. | ಬ್ರಹ್ಮಸೂತ್ರಶಾಂಕರಭಾಷ್ಯ |
| ಸೂ. ಸಂ. | ಸೂತಸಂಹಿತೆ |

# ಗ್ರಂಥಶೋಧನೆ

| ಪುಟ | ಸಾಲು | ಇರಬೇಕಾದದ್ದು |
|---|---|---|
| ೪೦ | ೭ | ....ರ್ಯುಜ್ಯತೇ |
| ೪೯ | ೧೩ | ೨೧೯ನೆಯ ಶ್ಲೋಕದಮೇಲೆ ತಲೆಬರಹ "ಸಮಾಧಾನ" ಎಂದಿರಬೇಕು. |
| ೭೦ | ೧೩ | ಕಾರಣಶಬ್ದ– ಎಂಬುದಕ್ಕೆ "ಕಾರಣಶರೀರ" ಎಂದಿರಲಿ. |
| ೮೦ | ಕೆ. ೧ | ವೇತ್ತಿ |
| ೮೨ | ೧೫ | ತ್ಯಕ್ತ್ವಾ |
| ೧೩೦ | ಟಿ. 3 | "ಅಲ್ಲಿ ವೃತ್ತಿಜ್ಞಾನವಾಗಲಿ ಅದರ ಅಭಾವವಾಗಲಿ ಇರುವದೇಇಲ್ಲ. ಆದರೂ ಅಲ್ಲಿ 'ಬುದ್ಧಿಯು ಬೀಜರೂಪದಿಂದ ಇರುತ್ತದೆ'– ಎಂದು ಭ್ರಾಂತಿಯಿಂದ ಅನುಮಾನ ಮಾಡುತ್ತಾರೆ" –ಎಂದು ಸೇರಿಸಿಕೊಳ್ಳಿರಿ. |
| ೧೫೫ | ೧೩ | 'ಸ್ಮೃತಿಗೆ ಸಮ್ಮತ' ಎಂಬುದಕ್ಕೆ 'ಶ್ರುತಿಗೆ ಸಮ್ಮತ' ಎಂದಿರಲಿ. |
| ೧೭೬ | ಕೆ. ೧೧ | ಸಮಾಧೇಃ |
| ೧೭೭ | ೯ | ಜ್ಞಾನಸ್ಯಾ.... |
| ೨೧೧ | ೧೦ | ....ವೃತ್ತ್ಯವಭಾಸಕಃ |

[ಸೂಚನೆ : ಇನ್ನೂ ಉಳಿದಿರಬಹುದಾದ ತಪ್ಪುಗಳನ್ನು ವಾಚಕರು ತಿಳಿಸಿಕೊಟ್ಟಲ್ಲಿ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ಮುಂದಿನ ಸಂಸ್ಕರಣದಲ್ಲಿ ಸರಿಪಡಿಸಲಾಗುವದು.]

|| ಓಂ ||

# ಸರ್ವವೇದಾಂತಸಿದ್ಧಾಂತಸಾರಸಂಗ್ರಹ

## ಮಂಗಲ

**ಅಖಣ್ಡಾನನ್ದಸಂಬೋಧೋ ವನ್ದನಾದ್ಯಸ್ಯ ಜಾಯತೇ ।**
**ಗೋವಿನ್ದಂ ತಮಹಂ ವನ್ದೇ ಚಿದಾನನ್ದತನುಂ ಗುರುಮ್ ॥ ೧ ॥**

೧. ಯಾರನ್ನು ನಮಸ್ಕರಿಸುವದರಿಂದ ಅಖಂಡಾನಂದದ[1] ಅನುಭವವು ಉಂಟಾಗುವದೋ ಅಂಥ ಚಿದಾನಂದವಿಗ್ರಹರಾದ **ಗೋವಿಂದಗುರುಗಳನ್ನು** ನಮಸ್ಕರಿಸುತ್ತೇನೆ.

**[2] ಅಖಣ್ಡಂ ಸಚ್ಚಿದಾನನ್ದಮವಾಙ್ಮನಸಗೋಚರಮ್ ।**
**ಆತ್ಮಾನಮಖಿಲಾಧಾರಮಾಶ್ರಯೇಽಭೀಷ್ಟಸಿದ್ಧಯೇ ॥ ೨ ॥**

೨. ಅಖಂಡನೂ ಸಚ್ಚಿದಾನಂದನೂ ವಾಙ್ಮನಸ್ಸುಗಳಿಗೆ ವಿಷಯನಲ್ಲದವನೂ ಆಗಿ ಎಲ್ಲಕ್ಕೂ ಆಧಾರವಾಗಿರುವ ಆತ್ಮನನ್ನು (ನನ್ನ) ಇಷ್ಟಾರ್ಥವು ಕೈಗೂಡುವದಕ್ಕಾಗಿ ಆಶ್ರಯಿಸುತ್ತೇನೆ.

**ಯದಾಲಮ್ಬೋ ದರಂ ಹನ್ತಿ ಸತಾಂ ಪ್ರತ್ಯೂಹಸಂಭವಮ್ ।**
**ತದಾಲಮ್ಬೇ ದಯಾಲಮ್ಬಂ ಲಮ್ಬೋದರಪದಾಮ್ಬುಜಮ್ ॥ ೩ ॥**

೩. ಸತ್ಪುರುಷರಿಗೆ ವಿಘ್ನಗಳಿಂದೊದಗುವ ಅಂಜಿಕೆಯನ್ನು ಯಾವದರ ಆಶ್ರಯವು ನಾಶಗೊಳಿಸುತ್ತದೆಯೋ, ಅಂಥ ದಯಾಶ್ರಯನಾದ ಲಂಬೋದರ (ಗಣಪತಿಯ) ಪಾದಕಮಲವನ್ನು ಆಶ್ರಯಿಸುತ್ತೇನೆ.

## ಗ್ರಂಥಾರಂಭಪ್ರತಿಜ್ಞೆ

**ವೇದಾನ್ತಶಾಸ್ತ್ರಸಿದ್ಧಾನ್ತಸಾರಸಂಗ್ರಹ ಉಚ್ಯತೇ ।**
**ಪ್ರೇಕ್ಷಾವತಾಂ ಮುಮುಕ್ಷೂಣಾಂ ಸುಖಬೋಧೋಪಪತ್ತಯೇ ॥ ೪ ॥**

1. 'ಅಖಂಡ'ಶಬ್ದವು ಗ್ರಂಥಕಾರರಿಗೆ ಮೆಚ್ಚು. ಮಂಗಲದ ಮೂರು ಶ್ಲೋಕಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಈ ಶ್ಲೋಕವು 'ವೇದಾಂತಸಾರ'ದ ಮೊದಲನೆಯ ಶ್ಲೋಕ.

೪. ವಿವೇಕಿಗಳಾದ ಮುಮುಕ್ಷುಗಳಿಗೆ ಸುಲಭವಾಗಿ[1] ಜ್ಞಾನವುಂಟಾಗುವದಕ್ಕಾಗಿ **ವೇದಾಂತಶಾಸ್ತ್ರಸಿದ್ಧಾಂತಸಾರದ ಸಂಗ್ರಹವನ್ನು** ಹೇಳಲಾಗುತ್ತದೆ.

## ಅನುಬಂಧಚತುಷ್ಟಯ

**ಅಸ್ಯ ಶಾಸ್ತ್ರಾನುಸಾರಿತ್ವಾದನುಬನ್ಧಚತುಷ್ಟಯಮ್ ।**
**ಯದೇವ ಮೂಲಂ ಶಾಸ್ತ್ರಸ್ಯ ನಿರ್ದಿಷ್ಟಮ್ ತದಿಹೋಚ್ಯತೇ ॥ ೫ ॥**

೫. ಈ (ಪ್ರಕರಣವು) ಶಾಸ್ತ್ರಾನುಸಾರವಾಗಿರುವದರಿಂದ ಶಾಸ್ತ್ರಕ್ಕೆ ಯಾವ **ಅನುಬಂಧಚತುಷ್ಟಯವು** ಮೂಲವೆಂದು ತೋರಿಸಲಾಗಿದೆಯೋ[2] ಅದನ್ನೇ ಇಲ್ಲಿ ಹೇಳಲಾಗಿರುತ್ತದೆ.

**ಅಧಿಕಾರೀ ಚ ವಿಷಯಃ ಸಂಬನ್ಧಶ್ಚ ಪ್ರಯೋಜನಮ್ ।**
**ಶಾಸ್ತ್ರಾರಮ್ಭಫಲಂ ಪ್ರಾಹುರನುಬನ್ಧಚತುಷ್ಟಯಮ್ ॥ ೬ ॥**

೬. ಅಧಿಕಾರಿ, ವಿಷಯ, ಸಂಬಂಧ, ಪ್ರಯೋಜನ – ಇವುಗಳೇ ಶಾಸ್ತ್ರವನ್ನು ಪ್ರಾರಂಭಿಸುವದಕ್ಕೆ ಕಾರಣವಾಗಿರುತ್ತವೆಯಾದ್ದರಿಂದ ಇವನ್ನು **ಅನುಬಂಧಚತುಷ್ಟಯ** ಎನ್ನುತ್ತಾರೆ.

**ಚತುರ್ಭಿಃ ಸಾಧನೈಃ ಸಮ್ಯಕ್ಸಂಪನ್ನೋ ಯುಕ್ತಿದಕ್ಷಿಣಃ ।**
**ಮೇಧಾವೀ ಪುರುಷೋ ವಿದ್ವಾನಧಿಕಾರ್ಯತ್ರ ಸಂಮತಃ ॥ ೭ ॥**

೭. ನಾಲ್ಕು ಸಾಧನಗಳಿಂದ ಪರಿಪೂರ್ಣವಾಗಿ ಕೂಡಿದವನೂ ಯುಕ್ತಿಯಲ್ಲಿ ಕುಶಲನೂ ಗ್ರಂಥಧಾರಣಸಮರ್ಥನೂ ವಿವೇಕಿಯೂ ಆಗಿರುವವನು ಇಲ್ಲಿ **ಅಧಿಕಾರಿಯೆನಿಸುವನು.**

**ವಿಷಯಃ ಶುದ್ಧಚೈತನ್ಯಂ ಜೀವಬ್ರಹ್ಮೈಕ್ಯಲಕ್ಷಣಮ್ ।**
**ಯತ್ರೈವ ದೃಶ್ಯತೇ ಸರ್ವವೇದಾನ್ತಾನಾಂ ಸಮನ್ವಯಃ ॥ ೮ ॥**

**ಏತದೈಕ್ಯಪ್ರಮೇಯಸ್ಯ ಪ್ರಮಾಣಸ್ಯಾಪಿ ಚ ಶ್ರುತೇಃ ।**
**ಸಂಬನ್ಧಃ ಕಥ್ಯತೇ ಸದ್ಭಿರ್ಬೋಧ್ಯಬೋಧಕಲಕ್ಷಣಃ ॥ ೯ ॥**

1. ದೊಡ್ಡದೊಡ್ಡ ಗ್ರಂಥಗಳನ್ನು ನೋಡುವ ಆಯಾಸವಿಲ್ಲದೆ.

2. ಬ್ರಹ್ಮಸೂತ್ರದ ಮೊದಲನೆಯ ಸೂತ್ರದ ಅಥಶಬ್ದದ ಭಾಷ್ಯದಲ್ಲಿ ಇದನ್ನು ತಿಳಿಸಲಾಗಿದೆ. 3. ವಿ ೧೬.

೮-೯. **ಜೀವಬ್ರಹ್ಮೈಕ್ಯವೆಂಬ ಶುದ್ಧಚೈತನ್ಯವೇ ವಿಷಯವು.** ಇದರಲ್ಲಿಯೇ ವೇದಾಂತಗಳಿಗೆಲ್ಲ[1] ಸಮನ್ವಯವು[2] ಕಾಣಬರುತ್ತದೆ. ಈ ಐಕ್ಯವೆಂಬ ಪ್ರಮೇಯಕ್ಕೂ ಶ್ರುತಿಯೆಂಬ ಪ್ರಮಾಣಕ್ಕೂ ಬೋಧ್ಯಬೋಧಕಭಾವವೇ **ಸಂಬಂಧವು**[3] ಎಂದು ಸತ್ಪುರುಷರು ಹೇಳುತ್ತಾರೆ.

**ಬ್ರಹ್ಮಾತ್ಮೈಕತ್ವವಿಜ್ಞಾನಂ ಸನ್ತಃ ಪ್ರಾಹುಃ ಪ್ರಯೋಜನಮ್ ।**
**ಯೇನ ನಿಃಶೇಷಸಂಸಾರಬನ್ಧಾತ್ ಸದ್ಯಃ ಪ್ರಮುಚ್ಯತೇ ॥ ೧೦ ॥**

**ಪ್ರಯೋಜನಂ ಸಂಪ್ರವೃತ್ತೇಃ ಕಾರಣಂ ಫಲಲಕ್ಷಣಮ್ ।**
**ಪ್ರಯೋಜನಮನುದ್ದಿಶ್ಯ ನ ಮನ್ದೋಽಪಿ ಪ್ರವರ್ತತೇ ॥ ೧೧ ॥**

೧೦-೧೧. ಬ್ರಹ್ಮಾತ್ಮೈಕತ್ವವಿಜ್ಞಾನವೇ **ಪ್ರಯೋಜನ**ವೆಂದು ಸತ್ಪುರುಷರು ಹೇಳುತ್ತಾರೆ; ಅದರಿಂದ ಸರ್ವಸಂಸಾರಬಂಧಗಳಿಂದಲೂ ಕೂಡಲೆ ಮುಕ್ತನಾಗುತ್ತಾನೆ. ಫಲರೂಪವಾದ ಪ್ರಯೋಜನವೇ ಪ್ರವೃತ್ತಿಗೆ (ಕಾರ್ಯದಲ್ಲಿ ತೊಡಗುವದಕ್ಕೆ) ಕಾರಣವು; (ಏಕೆಂದರೆ) ಪ್ರಯೋಜನವನ್ನು ಗುರಿಯಲ್ಲಿಡದೆ ಮೂಢನುಕೂಡ (ಏತರಲ್ಲಿಯೂ) ತೊಡಗುವದಿಲ್ಲ.

## ಸಾಧನಚತುಷ್ಟಯ

**ಸಾಧನಚತುಷ್ಟಯಸಂಪತ್ತಿರ್ಯಸ್ಯಾಸ್ತಿ ಧೀಮತಃ ಪುಂಸಃ ।**
**ತಸ್ಯೈವೈತತ್ಫಲಸಿದ್ಧಿರ್ನಾನ್ಯಸ್ಯ ಕಿಞ್ಚಿದೂನಸ್ಯ ॥ ೧೨ ॥**

೧೨. ಯಾವ ವಿವೇಕಿಯಾದ ಪುರುಷನಿಗೆ-**ಸಾಧನಚತುಷ್ಟಯವು** ಸರಿಯಾಗಿ ಕೂಡಿಕೊಂಡಿರುವದೋ ಅವನಿಗೇ ಈ ಫಲದ ಸಿದ್ಧಿಯಾಗುವದು. ಅದರಲ್ಲಿ ಒಂದಿಷ್ಟಾದರೂ ಕಡಿಮೆಯಾಗಿರುವ ಬೇರೊಬ್ಬನಿಗೆ ಅದು ಕೈಗೂಡಲಾರದು.

**ಚತ್ವಾರಿ ಸಾಧನಾನ್ಯತ್ರ ವದನ್ತಿ ಪರಮರ್ಷಯಃ ।**
**ಮುಕ್ತಿರ್ಯೇಷಾಂ ತು ಸದ್ಭಾವೇ ನಾಭಾವೇ ಸಿಧ್ಯತಿ ಧ್ರುವಮ್ ॥ ೧೩ ॥**

೧೩. ಇಲ್ಲಿ ನಾಲ್ಕು ಸಾಧನಗಳನ್ನು ಪರಮರ್ಷಿಗಳು ಹೇಳಿರುತ್ತಾರೆ. ಅವು ಇದ್ದರೇ ಮುಕ್ತಿ, ಇಲ್ಲದಿದ್ದರೆ ಅದು ನಿಶ್ಚಯವಾಗಿಯೂ ಲಭಿಸಲಾರದು.

**ಆದ್ಯಂ ನಿತ್ಯಾನಿತ್ಯವಸ್ತುವಿವೇಕಃ ಸಾಧನಂ ಮತಮ್ ।**
**ಇಹಾಮುತ್ರಾರ್ಥಫಲಭೋಗವಿರಾಗೋ ದ್ವಿತೀಯಕಮ್ ॥ ೧೪ ॥**

---

1. ಉಪನಿಷತ್ತುಗಳಿಗೆಲ್ಲ. 2. ತಾತ್ಪರ್ಯದಿಂದ ಹೇಳುವ ವಾಕ್ಯಾನ್ವಯ.
3. ಶ್ರುತಿಯು ಬೋಧಕ, ಜೀವಬ್ರಹ್ಮೈಕ್ಯವು ಬೋಧ್ಯ.

ಶಮಾದಿಷಟ್ಕಸಂಪತ್ತಿಸ್ತೃತೀಯಂ ಸಾಧನಂ ಮತಮ್ ।
ತುರೀಯಂ ತು ಮುಮುಕ್ಷುತ್ವಂ ಸಾಧನಂ ಶಾಸ್ತ್ರಸಂಮತಮ್ ॥ ೧೫ ॥

೧೪-೧೫. ಮೊದಲನೆಯದು ನಿತ್ಯಾನಿತ್ಯವಸ್ತುವಿವೇಕವೆಂಬ ಸಾಧನವೆಂದೂ, ಎರಡನೆಯದು ಇಹಾಮುತ್ರಾರ್ಥಫಲಭೋಗವಿರಾಗವೆಂದೂ, ಶಮಾದಿಷಟ್ಕಸಂಪತ್ತಿಯು ಮೂರನೆಯ ಸಾಧನವೆಂದೂ, ನಾಲ್ಕನೆಯದಾದರೋ ಮುಮುಕ್ಷುತ್ವವೆಂದೂ ಶಾಸ್ತ್ರಕ್ಕೆ ಒಪ್ಪಾಗಿದೆ.

## (೧) ನಿತ್ಯಾನಿತ್ಯವಸ್ತುವಿವೇಕ

ಬ್ರಹ್ಮೈವ ನಿತ್ಯಮನ್ಯತ್ತು ಹ್ಯನಿತ್ಯಮಿತಿ ವೇದನಮ್ ।
ಸೋಽಯಂ ನಿತ್ಯಾನಿತ್ಯವಸ್ತುವಿವೇಕ ಇತಿ ಕಥ್ಯತೇ ॥ ೧೬ ॥

ಮೃದಾದಿಕಾರಣಂ ನಿತ್ಯಂ ತ್ರಿಷು ಕಾಲೇಷು ದರ್ಶನಾತ್ ।
ಘಟಾದ್ಯನಿತ್ಯಂ ತತ್ಕಾರ್ಯಂ ಯತಸ್ತನ್ನಾಶ ಈಕ್ಷ್ಯತೇ ॥ ೧೭ ॥

ತಥೈವೈತಜ್ಜಗತ್ಸರ್ವಮನಿತ್ಯಂ ಬ್ರಹ್ಮಕಾರ್ಯತಃ ।
ತತ್ಕಾರಣಂ ಪರಂ ಬ್ರಹ್ಮ ಭವೇನ್ನಿತ್ಯಂ ಮೃದಾದಿವತ್ ॥ ೧೮ ॥

ಸರ್ಗಂ ವಕ್ತ್ಯಸ್ಯ ತಸ್ಮಾದ್ವಾ ಏತಸ್ಮಾದಿತ್ಯಪಿ ಶ್ರುತಿಃ ।
ಸಕಾಶಾದ್ ಬ್ರಹ್ಮಣಸ್ತಸ್ಮಾದನಿತ್ಯತ್ವೇ ನ ಸಂಶಯಃ ॥ ೧೯ ॥

ಸರ್ವಸ್ಯಾನಿತ್ಯತ್ವೇ ಸಾವಯವತ್ವೇನ ಸರ್ವತಃ ಸಿದ್ಧೇ ।
ವೈಕುಣ್ಠಾದಿಷು ನಿತ್ಯತ್ವಮತಿರ್ಭ್ರಮ ಏವ ಮೂಢಬುದ್ಧೀನಾಮ್ ॥

ಅನಿತ್ಯತ್ವಂ ಚ ನಿತ್ಯತ್ವಮೇವಂ ಯಚ್ಛ್ರುತಿಯುಕ್ತಿಭಿಃ ।
ವಿವೇಚನಂ ನಿತ್ಯಾನಿತ್ಯವಿವೇಕ ಇತಿ ಕಥ್ಯತೇ ॥ ೨೧ ॥

೧೬-೨೧. ಬ್ರಹ್ಮವೇ ನಿತ್ಯವು[1], ಅದಕ್ಕಿಂತ ಬೇರೆಯಾದದ್ದು ಅನಿತ್ಯವು-ಎಂಬ ತಿಳಿವಳಿಕೆಯಿದೆಯಲ್ಲ, ಆ ಇದನ್ನೇ ನಿತ್ಯಾನಿತ್ಯವಸ್ತುವಿವೇಕವೆನ್ನುತ್ತಾರೆ. ಮಣ್ಣೇ ಮುಂತಾದ ಕಾರಣವು ಮೂರುಕಾಲಗಳಲ್ಲಿಯೂ ಇರುವದು ಕಂಡುಬರುವದರಿಂದ ನಿತ್ಯವು. ಅದರ ಕಾರ್ಯವಾದ ಗಡಿಗೆಯೇ ಮುಂತಾದದ್ದು ಅನಿತ್ಯವು. ಏಕೆಂದರೆ ಅದು ನಾಶವಾಗುವದು ಕಂಡುಬರುತ್ತದೆ. ಹಾಗೆಯೇ ಈ ಜಗತ್ತೆಲ್ಲವೂ ಬ್ರಹ್ಮಕಾರ್ಯವಾಗಿರುವದರಿಂದ ಅನಿತ್ಯವು. ಇದಕ್ಕೆ ಕಾರಣವಾಗಿರುವ ಪರಬ್ರಹ್ಮವು ಮಣ್ಣು ಮುಂತಾದ (ಕಾರಣ)ದಂತೆಯೇ ನಿತ್ಯವಾಗಿರಬೇಕು. 'ಆ ಈ ಆತ್ಮನಿಂದ (ಆಕಾಶವುಂಟಾಯಿತು' ತೈ. ೨-೧) ಎಂಬ ಶ್ರುತಿಯೂ

1. ವಿ. ೨೧ರಲ್ಲಿ ನಿತ್ಯಾನಿತ್ಯವಸ್ತುವಿವೇಕಲಕ್ಷಣವನ್ನು ಹೀಗೆಯೇ ಬರೆದಿದೆ.

ಈ ಜಗತ್ತಿಗೆ ಬ್ರಹ್ಮದಿಂದ ಸೃಷ್ಟಿಯನ್ನು ಹೇಳುತ್ತಿದೆ. ಆದ್ದರಿಂದ (ಅದು) ಅನಿತ್ಯವೆಂಬುದರಲ್ಲಿ ಸಂಶಯವಿಲ್ಲ. ಪ್ರತಿಯೊಂದು ಪದಾರ್ಥವೂ ಸಾವಯವವಾಗಿರುವದರಿಂದ ಅನಿತ್ಯವು ಎಂಬುದು ಎಲ್ಲೆಲ್ಲಿಯೂ ಸಿದ್ಧವಾಗಿರುವಲ್ಲಿ, ವೈಕುಂಠವೇ ಮುಂತಾದವುಗಳು ನಿತ್ಯವೆಂಬ ಮೂಢಬುದ್ಧಿಗಳ ಅಭಿಪ್ರಾಯವು ಭ್ರಾಂತಿಯೇ. ಹೀಗೆ (ಜಗತ್ತಿಗೆ) ಅನಿತ್ಯತ್ವವನ್ನೂ (ಬ್ರಹ್ಮಕ್ಕೆ) ನಿತ್ಯತ್ವವನ್ನೂ ಶ್ರುತಿಯುಕ್ತಿಗಳಿಂದ ವಿವೇಚಿಸಿ ತಿಳಿಯುವದೇ ನಿತ್ಯಾನಿತ್ಯವಿವೇಕವೆನ್ನುತ್ತಾರೆ.

## (೨) ಇಹಾಮುತ್ರಾರ್ಥಫಲಭೋಗವಿರಾಗ

**ಐಹಿಕಾಮುಷ್ಮಿಕಾರ್ಥೇಷು ಹ್ಯನಿತ್ಯತ್ವೇನ ನಿಶ್ಚಯಾತ್ ।**
**ನೈಃಸ್ಪೃಹ್ಯಂ ತುಚ್ಛಬುದ್ಧ್ಯಾ ಯತ್ತದ್ವೈರಾಗ್ಯಮಿತೀರ್ಯತೇ ॥ ೨೨ ॥**

೨೨. ಈ ಲೋಕದ ಮತ್ತು ಪರಲೋಕದ ವಸ್ತುಗಳಲ್ಲಿ (ಅವು) ಅನಿತ್ಯವೆಂಬ ನಿಶ್ಚಯವುಂಟಾಗಿರುವದರಿಂದ ತುಚ್ಛಬುದ್ಧಿಯಾಗಲಾಗಿ ಬಯಕೆಯುಂಟಾಗದಿರುವದಲ್ಲ, ಅದನ್ನು ವೈರಾಗ್ಯವೆನ್ನುತ್ತಾರೆ.

**ನಿತ್ಯಾನಿತ್ಯಪದಾರ್ಥವಿವೇಕಾತ್ಪುರುಷಸ್ಯ ಜಾಯತೇ ಸದ್ಯಃ ।**
**ಸ್ರಕ್ಚಂದನವನಿತಾದೌ ಸರ್ವತ್ರಾನಿತ್ಯವಸ್ತುನಿ ವಿರಕ್ತಿಃ ॥ ೨೩ ॥**

೨೩. ನಿತ್ಯಾನಿತ್ಯವಸ್ತುವಿವೇಕದಿಂದ ಮನುಷ್ಯನಿಗೆ ಹೂ, ಗಂಧ, ಹೆಣ್ಣು-ಮುಂತಾದದ್ದರ ಎಲ್ಲಾ ಅನಿತ್ಯವಸ್ತುವಿನಲ್ಲಿಯೂ ಕೂಡಲೆ ವಿರಕ್ತಿಯುಂಟಾಗುತ್ತದೆ.

**ಕಾಕಸ್ಯ ವಿಷ್ಠಾವದಸಹ್ಯಬುದ್ಧಿ**
**ರ್ಭೋಗ್ಯೇಷು ಸಾ ತೀವ್ರವಿರಕ್ತಿರಿಷ್ಯತೇ ।**
**ವಿರಕ್ತಿತೀವ್ರತ್ವನಿದಾನಮಾಹು**
**ರ್ಭೋಗ್ಯೇಷು ದೋಷೇಕ್ಷಣಮೇವ ಸಂತಃ ॥ ೨೪ ॥**

೨೪. ಕಾಗೆಯ ಮಲದಲ್ಲಿ ಹೇಗೋ ಹಾಗೆ ಭೋಗ್ಯವಸ್ತುಗಳಲ್ಲಿ ಅಸಹ್ಯವೆಂಬ ಬುದ್ಧಿಯುಂಟಾಗುತ್ತದೆಯಲ್ಲ, ಅದು ತೀವ್ರವೈರಾಗ್ಯವೆನಿಸುವದು. ತೀವ್ರವಾದ ವೈರಾಗ್ಯವುಂಟಾಗುವದಕ್ಕೆ ಭೋಗ್ಯವಸ್ತುಗಳಲ್ಲಿ ದೋಷವನ್ನು ಕಾಣುವದೇ ಕಾರಣವಾಗಿರುತ್ತದೆ- ಎಂದು ಸತ್ಪುರುಷರು ಹೇಳುತ್ತಾರೆ.

**ಪ್ರದೃಶ್ಯತೇ ವಸ್ತುನಿ ಯತ್ರ ದೋಷೋ**
**ನ ತತ್ರ ಪುಂಸೋಽಸ್ತಿ ಪುನಃ ಪ್ರವೃತ್ತಿಃ ।[1]**
**ಅಂತರ್ಮಹಾರೋಗವತೀಂ ವಿಜಾನನ್**
**ಕೋ ನಾಮ ವೇಶ್ಯಾಮಪಿ ರೂಪಿಣೀಂ ವ್ರಜೇತ್ ॥ ೨೫ ॥**

1. ಇಲ್ಲಿ ನಾವು ಬರೆದಿರುವದು ವಾ॥ ಪಾಠ. ಅ॥ ಪಾಠದಲ್ಲಿ ಈ ಶ್ಲೋಕಾರ್ಧವು ೨೪ನೆಯ ಶ್ಲೋಕಕ್ಕೆ ಸೇರಿದ್ದು ಅದರ ಉತ್ತರಾರ್ಧವು ಈ ಶ್ಲೋಕದ ಪೂರ್ವಾರ್ಧವಾಗಿದೆ.

೨೫. ಯಾವ ವಸ್ತುವಿನಲ್ಲಿ ದೋಷವು ಕಾಣಿಸುವದೋ ಅದರಲ್ಲಿ ಮನುಷ್ಯನಿಗೆ ಮತ್ತೆ ಪ್ರವೃತ್ತಿಯುಂಟಾಗಲಾರದು. ಒಳಗೆ ಮಹಾರೋಗವುಳ್ಳವಳೆಂದು ತಿಳಿದಮೇಲೆ ಯಾವನುತಾನೆ ವೇಶ್ಯೆಯು ಸುಂದರಿಯಾಗಿದ್ದರೂ (ಆಕೆಯನ್ನು) ಗಮನಮಾಡಿಯಾನು ?

**ಅತ್ರಾಪಿ ಚಾನ್ಯತ್ರ ಚ ವಿದ್ಯಮಾನ**
**ಪದಾರ್ಥಸಂಮರ್ಶನಮೇವ ಕಾರ್ಯಮ್ ।**
**ಯಥಾಪ್ರಕಾರಾರ್ಥಗುಣಾಭಿಮರ್ಶನಂ**
**ಸಂದರ್ಶಯತ್ಯೇವ ತದೀಯದೋಷಮ್ ॥ ೨೬ ॥**

೨೬. ಈ (ಲೋಕ)ದಲ್ಲಿಯೂ ಪರಲೋಕದಲ್ಲಿಯೂ ಇರುವ ಪದಾರ್ಥಗಳ ವಿಮರ್ಶೆಯನ್ನೇ ಮಾಡಬೇಕು. ಇದ್ದದ್ದು ಇದ್ದಂತೆಯೇ ವಸ್ತುವಿನ ಗುಣವನ್ನು ವಿಮರ್ಶೆಮಾಡುವದೆಂಬುದು ಅದರ ದೋಷವನ್ನು ತೋರಿಸಿಯೇತೀರುತ್ತದೆ.

**[1] ಕುಕ್ಷೌ ಸ್ವಮಾತುರ್ಮಲಮೂತ್ರಮಧ್ಯೇ**
**ಸ್ಥಿತಿಂ ತದಾ ವಿಟ್ಕ್ರಿಮಿದಂಶನಂ ಚ ।**
**ತದೀಯಕೌಕ್ಷೇಯಕವಹ್ನಿದಾಹಂ**
**ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೨೭ ॥**

೨೭. ತನ್ನ ತಾಯಿಯ ಮಲಮೂತ್ರಗಳೊಳಗೆ ತಾನು ಇದ್ದದ್ದನ್ನೂ, ಆಗ ಮಲದ ಕ್ರಿಮಿಗಳು ತನ್ನನ್ನು ಕಚ್ಚುತ್ತಿದ್ದದ್ದನ್ನೂ ಮತ್ತು ಆ (ತಾಯಿಯ) ಜಾಠರಾಗ್ನಿಯ ಸೆಕೆಯನ್ನೂ ವಿಚಾರಮಾಡಿದರೆ ಯಾವನುತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

**ಸ್ವಕೀಯವಿಣ್ಮೂತ್ರವಿಸರ್ಜನಂ ತ-**
**ಚ್ಛ್ವೋತ್ತಾನಗತ್ಯಾ ಶಯನಂ ತದಾ ಯತ್ ।**
**ಬಾಲಗ್ರಹಾದ್ಯಾಹತಿಭಾಕ್ಚ ಶೈಶವಂ**
**ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೨೮ ॥**

೨೮. ತಾನು ಆಗ ಮಲಮೂತ್ರಗಳನ್ನು (ಅಲ್ಲಲ್ಲೆ ಬಿಡುತ್ತಿದ್ದದ್ದನ್ನೂ), ಮೇಲುಮುಖವಾಗಿ ಮಲಗಿಕೊಳ್ಳುತ್ತಿದ್ದದ್ದನ್ನೂ, ಬಾಲಗ್ರಹವೇ ಮುಂತಾದವುಗಳ ಹೊಡೆತಕ್ಕೆ ಸಿಕ್ಕಿದ್ದ (ಆ) ಬಾಲ್ಯವನ್ನೂ ವಿಚಾರಮಾಡಿನೋಡಿದರೆ ಯಾವನು ತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

---

1. ಈ ಶ್ಲೋಕದಿಂದ ೩೯ನೆಯ ಶ್ಲೋಕದವರೆಗೂ 'ಕೋ ವಾ ವಿರತಿಂ ನ ಯಾತಿ' ಎಂಬ ಪಲ್ಲವಿಯು ಕೊನೆಯಲ್ಲಿರುತ್ತದೆ.

ಸ್ತ್ರೀಯೈಃ ಪರೈಸ್ತಾಡನಮಜ್ಞಭಾವ-
ಮತ್ಯನ್ತಚಾಪಲ್ಯಮಸತ್ಕ್ರಿಯಾಂ ಚ ।
ಕುಮಾರಭಾವೇ ಪ್ರತಿಷಿದ್ಧವೃತ್ತಿಂ
ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೨೯ ॥

೨೯. ಕೌಮಾರದಲ್ಲಿ ತನ್ನವರೂ ಅನ್ಯರೂ (ತನ್ನನ್ನು) ಹೊಡೆಯುತ್ತಿದ್ದದ್ದನ್ನೂ (ಆಗ ತಾನು) ಏನೂ ಅರಿಯದೆ ಇದ್ದ ಸ್ಥಿತಿಯನ್ನೂ ಅತ್ಯಂತವಾಗಿ ಚಪಲನಾಗಿದ್ದದ್ದನ್ನೂ ಕೆಟ್ಟನಡತೆಯನ್ನೂ (ಶಾಸ್ತ್ರಗಳಲ್ಲಿ) ಮಾಡಬಾರದೆಂದಿರುವದನ್ನೇ ಮಾಡುತ್ತಿದ್ದದ್ದನ್ನೂ ಎಣಿಸಿಕೊಂಡರೆ ಯಾವನುತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

ಮದೋದ್ಧತಿಂ ಮಾನ್ಯತಿರಸ್ಕೃತಿಂ ಚ
ಕಾಮಾತುರತ್ವಂ ಸಮಯಾತಿಲಙ್ಘನಮ್ ।
ತಾಂ ತಾಂ ಯುವತ್ಯೋದಿತದುಷ್ಟಚೇಷ್ಟಾಂ
ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೩೦ ॥

೩೦. (ಯಾವದರಲ್ಲಿ) ಮೊದಲಿಂದ ತಾನು ತೋರಿಸುತ್ತಿದ್ದ ಉದ್ಧಟತನವನ್ನೂ, ಗೌರವಿಸಬೇಕಾದವರನ್ನು ಅಸಡ್ಡೆಮಾಡುತ್ತಿದ್ದದ್ದನ್ನೂ, ಕಾಮಾತುರನಾಗಿದ್ದದ್ದನ್ನೂ ಆಚಾರವನ್ನು ಮೀರುತ್ತಿದ್ದದ್ದನ್ನೂ, ತರುಣಿಯಾದ (ತನ್ನ) ಹೆಂಡತಿ ಹೇಳಿದಂತೆ ಮಾಡಿದ ಆಯಾ ಕೆಟ್ಟಕೆಲಸಗಳನ್ನೂ ಎಣಿಸಿಕೊಂಡರೆ ಯಾವನುತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

ವಿರೂಪತಾಂ ಸರ್ವಜನಾದವಜ್ಞಾಂ
ಸರ್ವತ್ರ ದೈನ್ಯಂ ನಿಜಬುದ್ಧಿಹೈನ್ಯಮ್ ।
ವೃದ್ಧತ್ವಸಂಭಾವಿತದುರ್ದಶಾಂ ತಾಂ
ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೩೧ ॥

೩೧. (ಮುಪ್ಪಿನಲ್ಲಿ ಆದ) ಕುರೂಪವನ್ನೂ ಎಲ್ಲಾ ಜನರಿಂದ ಆಗುವ ಅಪಮಾನವನ್ನೂ ಎಲ್ಲೆಲ್ಲಿಯೂ ತಾನು ತೋರಿಸುವ ದೈನ್ಯವನ್ನೂ ತನ್ನ ಬುದ್ಧಿಹೀನತೆಯನ್ನೂ ವಾರ್ಧಕದಲ್ಲಿ ಆಗಬಹುದೆಂದು ಊಹಿಸಬಹುದಾದ ಆ ದುಃಸ್ಥಿತಿಯನ್ನೂ ಎಣಿಸಿಕೊಂಡರೆ ಯಾವನುತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

ಪಿತ್ತಜ್ವರಾರ್ಶಃಕ್ಷಯಗುಲ್ಮಶೂಲ
ಶ್ಲೇಷ್ಮಾದಿರೋಗೋದಿತತೀವ್ರದುಃಖಮ್ ।
ದುರ್ಗನ್ಧಮಸ್ವಾಸ್ಥ್ಯಮನೂನಚಿನ್ತಾಂ
ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೩೨ ॥

೩೨. ಪಿತ್ತಜ್ವರ, ಮೂಲವ್ಯಾಧಿ, ಕ್ಷಯ, ಜ್ವರಗಡ್ಡೆ, ಶ್ಲೇಷ್ಮ – ಇವೇ ಮುಂತಾದ ರೋಗಗಳಿಂದುಂಟಾದ ಬಲವಾದ ದುಃಖವನ್ನೂ ಕೆಟ್ಟವಾಸನೆ, ಸ್ವಸ್ಥ ನಾಗಿಲ್ಲದಿರುವಿಕೆ, ನಿಲುವಿಲ್ಲದ ಚಿಂತೆ – ಇವುಗಳನ್ನೂ ಎಣಿಸಿಕೊಂಡರೆ ಯಾವನು ತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

ಯಮಾವಲೋಕೋದಿತಭೀತಿಕಮ್ಪ-
ಮರ್ಮವ್ಯಥೋಚ್ಛ್ವಾಸಗತೀಶ್ಚ ವೇದನಾಮ್ ।
ಪ್ರಾಣಪ್ರಯಾಣೇ ಪರಿದೃಶ್ಯಮಾನಾಂ
ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೩೩ ॥

೩೩. ಪ್ರಾಣವು ಹೋಗುವಾಗ ಕಾಣಬರುವ ಯಮದರ್ಶನದಿಂದಾಗುವ ಹೆದರಿಕೆ, ನಡುಕ, ಮರ್ಮಗಳಲ್ಲಿ ಆಗುವ ವ್ಯಥೆ, ನಿಟ್ಟುಸಿರಿನ ರೀತಿ, ಸಂಕಟ – ( ಇವುಗಳನ್ನು ) ಎಣಿಸಿಕೊಳ್ಳುವ ಯಾವನುತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

ಅಙ್ಗಾರನದ್ಯಾಂ ತಪನೇ ಚ ಕುಮ್ಭೀ-
ಪಾಕೇಽಪಿ ವೀಚ್ಯಾಮಸಿಪತ್ರಕಾನನೇ ।
ದೂತೈರ್ಯಮಸ್ಯ ಕ್ರಿಯಮಾಣಬಾಧಾಂ
ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೩೪ ॥

೩೪. ಅಂಗಾರನದಿ, ತಪನ, ಕುಂಭೀಪಾಕ, ವೀಚಿ, ಅಸಿಪತ್ರವನ – ಈ (ನರಕಗಳಲ್ಲಿ) ಯಮನ ದೂತರಿಂದ ಕೊಡಲ್ಪಡುವ ಬಾಧೆಯನ್ನು ಎಣಿಸಿಕೊಂಡ ಯಾವನುತಾನೆ ವಿರಕ್ತಿಯನ್ನು ಹೊಂದುವದಿಲ್ಲ ?

ಪುಣ್ಯಕ್ಷಯೇ ಪುಣ್ಯಕೃತೋ ನಭಃಸ್ಥೈ-
ರ್ನಿಪಾತ್ಯಮಾನಾನ್ ಶಿಥಿಲೀಕೃತಾಙ್ಗಾನ್ ।
ನಕ್ಷತ್ರರೂಪೇಣ ದಿವಶ್ಚ್ಯುತಾಂಸ್ತಾನ್
ವಿಚಾರ್ಯ ಕೋ ವಾ ವಿರತಿಂ ನ ಯಾತಿ ॥ ೩೫ ॥

೩೫. ಪುಣ್ಯವನ್ನು ಮಾಡಿದವರು ಪುಣ್ಯವು ಸವೆಯಲು ಮೇಲಿನ ಲೋಕದವರಿಂದ ಕೆಳಕ್ಕೆ ತಳ್ಳಿಸಿಕೊಂಡು ಅವಯವಗಳು ಜರ್ಝರಿತವಾಗಲು ನಕ್ಷತ್ರ ರೂಪದಿಂದ ಸ್ವರ್ಗದಿಂದ ಜಾರಿಬೀಳುವದನ್ನು ಎಣಿಸಿದ ಯಾವನುತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

ವಾಯ್ವರ್ಕವಹ್ನೀನ್ದ್ರಮುಖಾನ್ ಸುರೇನ್ದ್ರಾ-
ನೀಶೋಗ್ರಭೀತ್ಯಾ ಗ್ರಥಿತಾನ್ತರಙ್ಗಾನ್ ।

ವಿಪಕ್ಷಲೋಕೈಃ ಪರಿದೂಯಮಾನಾ-
ನ್ವಿಚಾರ್ಯ ಕೋ ವಾ ವಿರತಿಂ ನ ಯಾತಿ || ೩೬ ||

೩೬. ವಾಯು, ಸೂರ್ಯ, ಅಗ್ನಿ, ಇಂದ್ರ – ಇವರೇ ಮೊದಲಾದ ಶ್ರೇಷ್ಠದೇವತೆಗಳುಕೂಡ ಈಶ್ವರನ ಕಡೆಯ ಉಗ್ರಭೀತಿಯಿಂದ ಮನಸ್ಸಿನಲ್ಲಿ ವ್ಯಥೆಗೊಂಡು, (ಆಗಾಗ್ಗೆ) ಶತ್ರುಲೋಕದ ನಿವಾಸಿಗಳಿಂದ ಆಗುವ ಹಿಂಸೆಗೆ ಒಳಗಾಗುತ್ತಿರುವದನ್ನು ಎಣಿಸಿದ ಯಾವನು ತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

ಶ್ರುತ್ಯಾ ನಿರುಕ್ತಂ ಸುಖತಾರತಮ್ಯಂ
ಬ್ರಹ್ಮಾಣಮಾರಭ್ಯ ಮಹೀಮಹೇಶಮ್ ।
ಔಪಾಧಿಕಂ ತತ್ತು ನ ವಾಸ್ತವಂ ಚೇ-
ದಾಲೋಚ್ಯ ಕೋ ವಾ ವಿರತಿಂ ನ ಯಾತಿ || ೩೭ ||

೩೭. ಸಾರ್ವಭೌಮನನ್ನು ಮೊದಲುಮಾಡಿ ಬ್ರಹ್ಮನವರೆಗಿನವರಲ್ಲಿರುವ ಶ್ರುತ್ಯುಕ್ತಸುಖತಾರತಮ್ಯವು[1] ಉಪಾಧಿನಿಮಿತ್ತದಿಂದಾಗಿದೆ, ಅದು ವಾಸ್ತವವಲ್ಲ-ಎಂಬುದನ್ನು ಆಲೋಚಿಸಿದ ಯಾವನುತಾನೆ ವಿರಕ್ತಿಯನ್ನು ಹೊಂದುವದಿಲ್ಲ ?

ಸಾಲೋಕ್ಯಸಾಮೀಪ್ಯಸರೂಪತಾದಿ
ಭೇದಸ್ತು ಸತ್ಕರ್ಮವಿಶೇಷಸಿದ್ಧಃ ।
ನ ಕರ್ಮಸಿದ್ಧಸ್ಯ ತು ನಿತ್ಯತೇತಿ
ವಿಚಾರ್ಯ ಕೋ ವಾ ವಿರತಿಂ ನ ಯಾತಿ || ೩೮ ||

೩೮. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ[2]–ಮುಂತಾದ ಮುಕ್ತಿಭೇದವು ಆಯಾ ಸತ್ಕರ್ಮವಿಶೇಷದಿಂದ ಉಂಟಾಗತಕ್ಕದ್ದು; ಆದರೆ ಕರ್ಮದಿಂದ ಉಂಟಾಗುವದಕ್ಕೆ ನಿತ್ಯತ್ವವಿಲ್ಲ – ಎಂಬುದನ್ನು ಎಣಿಸಿಕೊಂಡ ಯಾವನಿಗೆತಾನೆ ವಿರಕ್ತಿಯುಂಟಾಗದೆ ಇದ್ದೀತು ?

ಯತ್ರಾಸ್ತಿ ಲೋಕೇ ಗತಿತಾರತಮ್ಯ
ಮುಚ್ಚಾವಚತ್ವಾನ್ವಿತಮತ್ರ ತತ್ಕೃತಮ್ ।
ಯಥೇಹ ತದ್ವತ್ಫಲು ದುಃಖಮಸ್ತೀ
ತ್ಯಾಲೋಚ್ಯ ಕೋ ವಾ ವಿರತಿಂ ನ ಯಾತಿ || ೩೯ ||

---

1. ತೈತ್ತಿರೀಯ ೨-೮ರಲ್ಲಿ ಹೇಳಿರುವ ಸುಖತಾರತಮ್ಯವು ಕರ್ಮೋಪಾಸನೆಗಳ ಫಲತಾರತಮ್ಯವಾಗಿರುತ್ತದೆ. ಆತ್ಮನ ಸ್ವರೂಪಕ್ಕೆ ಸೇರಿದ್ದಲ್ಲ; ಅದು ಅನಿತ್ಯವೂ ಆಗಿದೆ.

2. ಈ ಮುಕ್ತಿಭೇದಗಳನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಕಂಠೋಕ್ತವಾಗಿ ಹೇಳಿದಂತೆ ಕಾಣುವದಿಲ್ಲ. ಆದರೆ ಬೃ. ಭಾ. ೧-೩-೨೨ನ್ನು ನೋಡಿ.

೩೯. ಲೋಕದಲ್ಲಿ ಎಲ್ಲಿ ಗತಿತಾರತಮ್ಯವಿದೆಯೋ ಅಲ್ಲಿ ಅದರಿಂದ ಹೆಚ್ಚು ಕಡಿಮೆ (ಎಂಬ ಫಲವು) ಇರುತ್ತದೆ ಎಂಬುದು ಹೇಗೋ ಅದರಂತೆ ದುಃಖವೂ ಇದೆ ಎಂದು[1] ಆಲೋಚಿಸಿದ ಯಾವನುತಾನೆ ವಿರಕ್ತಿಯನ್ನು ಹೊಂದದೆ ಇದ್ದಾನು ?

**ಕೋ ನಾಮ ಲೋಕೇ ಪುರುಷೋ ವಿವೇಕೀ**
**ವಿನಶ್ವರೇ ತುಚ್ಛಸುಖೇ ಗೃಹಾದೌ ।**
**ಕುರ್ಯಾದ್ರತಿಂ ನಿತ್ಯಮವೇಕ್ಷಮಾಣೋ**
**ವೃಥೈವ ಮೋಹಾನ್ಮ್ರಿಯಮಾಣಜಂತೂನ್ ॥ ೪೦ ॥**

೪೦. ಲೋಕದಲ್ಲಿ ಮೋಹದಿಂದ ಸುಮ್ಮನೆ ಸಾಯುತ್ತಿರುವ ಪ್ರಾಣಿಗಳನ್ನು ನಿತ್ಯವೂ ಕಾಣುತ್ತಿರುವ ಯಾವ ವಿವೇಕಿಯಾದ ಪುರುಷನುತಾನೆ ವಿನಶ್ವರವಾದ ಮನೆಯೇ ಮುಂತಾದ ಅಲ್ಪಸುಖದಲ್ಲಿ ರತಿಯನ್ನು ಮಾಡಿಕೊಂಡಾನು ?

**ಸುಖಂ ಕಿಮಸ್ತ್ಯತ್ರ ವಿಚಾರ್ಯಮಾಣೇ**
**ಗೃಹೇಽಪಿ ವಾ ಯೋಷಿತಿ ವಾ ಪದಾರ್ಥೇ ।**
**ಮಾಯಾತಮೋಽನ್ಧೀಕೃತಚಕ್ಷುಷೋ ಯೇ**
**ತ ಏವ ಮುಹ್ಯನ್ತಿ ವಿವೇಕಶೂನ್ಯಾಃ ॥ ೪೧ ॥**

೪೧. ಸರಿಯಾಗಿ ವಿಚಾರಮಾಡಿದರೆ, ಮನೆ ಅಥವಾ ಹೆಂಡತಿ – ಎಂಬ ಯಾವ ಪದಾರ್ಥದಲ್ಲಿತಾನೆ ಯಾವ ಸುಖವಿದೆ ? ಮಾಯೆ ಎಂಬ ಕಗ್ಗತ್ತಲೆಯಿಂದ ಕುರುಡರಾದವರಿದಾರಲ್ಲ, ಅವರುಮಾತ್ರವೇ ವಿವೇಕವಿಲ್ಲದೆ (ಇವಕ್ಕೆ) ಮರುಳಾಗುತ್ತಾರೆ.

**ಅವಿಚಾರಿತರಮಣೀಯಂ**
**ಸರ್ವಮುದುಮ್ಬರಫಲೋಪಮಂ ಭೋಗ್ಯಮ್ ।**
**ಅಜ್ಞಾನಾಮುಪಭೋಗ್ಯಂ**
**ನ ತು ತಜ್ಜ್ಞಾನಾಂ ಯೋಷಿತಿ ವಾ ಪದಾರ್ಥೇ ॥ ೪೨ ॥**

೪೨. ಒಂದೊಂದು ಭೋಗ್ಯವಸ್ತುವೂ ಅತ್ತಿಯಹಣ್ಣಿನಂತೆ ವಿಚಾರ ಮಾಡದಿರುವಾಗ ಮಾತ್ರ ರಮಣೀಯವಾಗಿರುತ್ತದೆ. ಹೆಣ್ಣಿನಲ್ಲಾಗಲಿ ಮತ್ತೊಂದು ಪದಾರ್ಥದಲ್ಲಾಗಲಿ ಅದರ ನಿಜವನ್ನರಿಯದವರಿಗೆ ಭೋಗಿಸತಕ್ಕದ್ದಿರುವದೇ ಹೊರತು ಅದನ್ನರಿತವರಿಗೆ ಇರುವದಿಲ್ಲ.

---

1. ಸಾಧನತಾರತಮ್ಯದಿಂದ ಗತಿತಾರತಮ್ಯ, ಗತಿತಾರತಮ್ಯದಂತೆ ಸುಖದುಃಖತಾರತಮ್ಯಗಳಿವೆ ಎಂಬುದು ತಾತ್ಪರ್ಯ. ಸೂ. ಭಾ. ೧–೧–೪ರಲ್ಲಿ ಇದನ್ನು ಹೇಳಿದೆ. ಶ್ಲೋಕದಲ್ಲಿ 'ಸುಖತಾರತಮ್ಯ' ಎಂಬುದು ಸ್ಪಷ್ಟವಾಗಿ ಹೇಳಿರುವದು ಕಾಣುವದಿಲ್ಲ.

**ಗತೇಽಪಿ ತೋಯೇ ಸುಷಿರಂ ಕುಲೀರೋ**
**ಹಾತುಂ ಹ್ಯಶಕ್ತೋ ಮ್ರಿಯತೇ ವಿಮೋಹಾತ್ ।**
**ಯಥಾ ತಥಾ ಗೇಹಸುಖಾನುಷಕ್ತೋ**
**ವಿನಾಶಮಾಯಾತಿ ನರೋ ಭ್ರಮೇಣ** ॥ ೪೩ ॥

೪೩. ಹೇಗೆ ನೀರು ಹೋದಮೇಲೂ ಏಡಿಯು ( ತನ್ನ ) ಬಿಲವನ್ನು ಬಿಡಲಾರದೆ ಮೋಹದಿಂದ ಸತ್ತುಹೋಗುತ್ತದೆಯೋ, ಹಾಗೆ ಮನೆಯ ಸುಖದಲ್ಲಿಯೇ ಆಸಕ್ತನಾಗಿರುವ ಮನುಷ್ಯನು ಭ್ರಾಂತಿಯಿಂದ ನಾಶವನ್ನು ಹೊಂದುತ್ತಾನೆ.

**ಕೋಶಕ್ರಿಮಿಸ್ತನ್ತುಭಿರಾತ್ಮದೇಹ**
**ಮಾವೇಷ್ಟ್ಯ ಚಾವೇಷ್ಟ್ಯ ಚ ಗುಪ್ತಿಮಿಚ್ಛನ್ ।**
**ಸ್ವಯಂ ವಿನಿರ್ಗನ್ತುಮಶಕ್ತ ಏವ**
**ಸಂಸ್ತತಸ್ತದನ್ತೇ ಮ್ರಿಯತೇ ಚ ಲಗ್ನಃ** ॥ ೪೪ ॥

**ಯಥಾ ತಥಾ ಪುತ್ರಕಲತ್ರಮಿತ್ರ**
**ಸ್ನೇಹಾನುಬನ್ಧೈರ್ಗ್ರಥಿತೋ ಗೃಹಸ್ಥಃ ।**
**ಕದಾಪಿ ವಾ ತಾನ್ ಪರಿಮುಚ್ಯ ಗೇಹಾ**
**ದ್ಗನ್ತುಂ ನ ಶಕ್ತೋ ಮ್ರಿಯತೇ ಮುಧೈವ** ॥ ೪೫ ॥

೪೪-೪೫. ಹೇಗೆ ರೇಷ್ಮೆಯ ಹುಳು ತನ್ನ ದೇಹವನ್ನು ನೂಲುಗಳಿಂದ ಸುತ್ತಿಕೊಂಡು ಸುತ್ತಿಕೊಂಡು ತನ್ನನ್ನು ಕಾಪಾಡಿಕೊಳ್ಳಬೇಕೆಂದು ಬಯಸುತ್ತಾ ಕೊನೆಗೆ ಅದರೊಳಗಿಂದ ಹೊರಕ್ಕೆ ಬರಲಾರದೆ ಅದಕ್ಕೆ ಸಿಕ್ಕಿಕೊಂಡು ಸತ್ತುಹೋಗುವದೋ, ಹಾಗೆಯೇ ಮಕ್ಕಳು, ಹೆಂಡತಿ, ಗೆಳೆಯರು – ಇವರ ಮೇಲಿನ ಮಮತೆಯ ಕಟ್ಟುಗಳಿಂದ ಬಿಗಿವಡೆದ ಗೃಹಸ್ಥನು ಮನೆಯನ್ನು ಬಿಟ್ಟು ಎಂದೆಂದಿಗೂ ಹೊರಕ್ಕೆ ಹೋಗಲಾರದೆ ವ್ಯರ್ಥವಾಗಿಯೇ ಸಾಯುತ್ತಾನೆ.

**ಕಾರಾಗೃಹಸ್ಯಾಸ್ಯ ಚ ಕೋ ವಿಶೇಷಃ**
**ಪ್ರದೃಶ್ಯತೇ ಸಾಧು ವಿಚಾರ್ಯಮಾಣೇ ।**
**ಮುಕ್ತೇಃ ಪ್ರತೀಪತ್ವಮಿಹಾಪಿ ಪುಂಸಃ**
**ಕಾನ್ತಾಸುಖಾಭ್ಯುತ್ಥಿತಮೋಹಪಾಶೈಃ** ॥ ೪೬ ॥

೪೬. ಚೆನ್ನಾಗಿ ವಿಚಾರಮಾಡಿದರೆ ಇದಕ್ಕೂ ಸೆರೆಮನೆಗೂ ಯಾವ ಹೆಚ್ಚುಕಡಮೆಯು ಕಂಡುಬರುತ್ತದೆ ? ಮನುಷ್ಯನು ಹೆಂಡತಿಯಿಂದಾಗುವ ಸುಖದಿಂದುಂಟಾದ ಮೋಹಪಾಶಗಳಿಂದ ಬಿಡುಗಡೆಹೊಂದುವದಕ್ಕೆ ಅಡ್ಡಿಯು ಇಲ್ಲಿಯೂ ಇದೆಯಲ್ಲ !

ಗೃಹಸ್ಪೃಹಾ ಪಾದನಿಬದ್ಧಶೃಙ್ಖಲಾ
ಕಾನ್ತಾಸುತಾಶಾ ಪಟುಕಣ್ಠಪಾಶಃ ।
ಶೀರ್ಷೇ ಪತದ್ಭ್ವಯೋರ್ಶನಿರ್ಹಿ ಸಾಕ್ಷಾತ್
ಪ್ರಾಣಾನ್ತಹೇತುಃ ಪ್ರಬಲಾ ಧನಾಶಾ ॥ ೪೭ ॥

೪೭. ಮನೆಯಮೇಲಿನ ಆಶೆಯೆಂಬುದು ಕಾಲುಗಳಿಗೆ ಬಿಗಿದ ಜೇಡಿಯು. ಹೆಂಡತಿಮಕ್ಕಳ ಮೇಲಿನ ಆಶೆಯು ಕೊರಳಿಗೆ ಹಾಕಿದ ಬಲವಾದ ನೇಣು. ಹಣದ ಮೇಲಿನ ಪ್ರಬಲವಾದ ಆಶೆಯು ತಲೆಯಮೇಲೆ ಬಿದ್ದು ಪ್ರಾಣವನ್ನು ಕೊನೆಗಾಣಿಸುವದಕ್ಕೆ ಕಾರಣವಾದ ದೊಡ್ಡ ಸಿಡಿಲೇ.

ಆಶಾಪಾಶಶತೇನ ಪಾಶಿತಪದೋ ನೋತ್ಥಾತುಮೇವ ಕ್ಷಮಃ
ಕಾಮಕ್ರೋಧಮದಾದಿಭಿಃ ಪ್ರತಿಭಟೈಃ ಸಂರಕ್ಷ್ಯಮಾಣೋಽನಿಶಮ್
ಸಂಮೋಹಾವರಣೇನ ಗೋಪನವತಃ ಸಂಸಾರಕಾರಾಗೃಹಾ-
ನ್ನಿರ್ಗನ್ತುಂ ತ್ರಿವಿಧೈಷಣಾ[1] ಪರವಶಃ ಕಃ ಶಕ್ನುಯಾದ್ರಾಗಿಷು ॥

೪೮. ನೂರಾರು ಆಶಾಪಾಶಗಳಿಂದ ಬಿಗುವಡೆದಿರುವ ಕಾಲುಗಳವನಾಗಿ, ಏಳುವದಕ್ಕೇ ಶಕ್ತಿಯಿಲ್ಲದೆ, ಯಾವಾಗಲೂ ಕಾಮಕ್ರೋಧಮದಗಳೇ ಮುಂತಾದ ಶತ್ರುಸೈನಿಕರ ಕಾವಲಿನಲ್ಲಿರುವ, ಮೂರು ಬಗೆಯ ಬಯಕೆಗಳಿಗೆ ವಶನಾಗಿರುವ ಯಾವ ವಿಷಯಲಂಪಟನು ತಾನೆ ಭ್ರಾಂತಿಯೆಂಬ ಪೌಳಿಯಿಂದ ಸುತ್ತುವರಿಯಲ್ಪಟ್ಟಿರುವ ಸಂಸಾರದ ಸೆರೆಮನೆಯಿಂದ ತಪ್ಪಿಸಿಕೊಂಡು ಈಚೆಗೆ ಬರಲಾಪನು ?

ಕಾಮಾನ್ಧಕಾರೇಣ ನಿರುದ್ಧದೃಷ್ಟಿ
ರ್ಮುಹ್ಯತ್ಯಸತ್ಯಪ್ಯಬಲಾಸ್ವರೂಪೇ ।
ನ ಹ್ಯನ್ಧದೃಷ್ಟೇರಸತಃ ಸತೋ ವಾ
ಸುಖತ್ವದುಃಖತ್ವವಿಚಾರಣಾಸ್ತಿ ॥ ೪೯ ॥

೪೯. ಹೆಂಗಸಿನ ಸ್ವರೂಪವು ಇಲ್ಲದಿದ್ದರೂ ಕಾಮವೆಂಬ ಕಗ್ಗತ್ತಲೆಯಿಂದ ಕಣ್ಣುಕಾಣದೆ ಇರುವವನು ಮೋಹಗೊಳ್ಳುತ್ತಾನೆ. ಕುರುಡುಗಣ್ಣಿನವನಿಗೆ ಇಲ್ಲದ್ದರಿಂದಲಾಗಲಿ ಇರುವದರಿಂದಲಾಗಲಿ ಸುಖವು ಅಥವಾ ದುಃಖವಾಗುವದೆಂಬ ವಿಚಾರವಿರುವದಿಲ್ಲವಷ್ಟೆ ?

ಶ್ಲೇಷ್ಮೋದ್ಗಾರಿ ಮುಖಂ ಸ್ರವನ್ಮಲವತೀ ನಾಸಾಶ್ರುಮಲ್ಲೋಚನಂ
ಸ್ವೇದಸ್ರಾವಿ ಮಲಾಭಿಪೂರ್ಣಮಭಿತೋ ದುರ್ಗನ್ಧದುಷ್ಟಂ ವಪುಃ ।

---

1. ಅಚ್ಚಿನ ಪುಸ್ತಕದಲ್ಲಿರುವ ‘ ತ್ರಿವಿಧೇಷಣಾ ’ ಎಂಬ ಶಬ್ದವನ್ನು ಹೀಗೆ ತಿದ್ದಿಕೊಂಡಿದೆ.

**ಅನ್ಯದ್ವಕ್ತುಮಶಕ್ಯಮೇವ ಮನಸಾ ಮನ್ತುಂ ಕ್ವಚಿನ್ನಾರ್ಹತಿ ।**
**ಸ್ತ್ರೀರೂಪಂ ಕಥಮೀದೃಶಂ ಸುಮನಸಾಂ ಪಾತ್ರೀಭವೇನ್ನೇತ್ರಯೋಃ**

೫೦. ಶ್ಲೇಷ್ಮವನ್ನು ಕಾರುತ್ತಿರುವ ಬಾಯಿ, ಸಿಂಬಳಸುರಿಯುವ ಮೂಗು, ಕಣ್ಣೀರಿಡುತ್ತಿರುವ ಕಣ್ಣು, ಬೆವರನ್ನು ಸುರಿಸುತ್ತಾ ಎಲ್ಲೆಲ್ಲಿಯೂ ಕೊಳೆಯಿಂದ ತುಂಬಿದ ಕೆಟ್ಟನಾತದಿಂದ ತುಂಬಿರುವ ಮೈ ! ಉಳಿದದ್ದು (ಬಾಯಿಂದ) ಹೇಳುವದಕ್ಕಾಗಲಿ ಮನಸ್ಸಿನಿಂದ ಯೋಚಿಸುವದಕ್ಕಾಗಲಿ ತಕ್ಕದ್ದಲ್ಲ ! ಇಂಥ ಸ್ತ್ರೀರೂಪವು ವಿವೇಕಿಗಳ ಕಂಗಳಿಗೆ ಹೇಗೆತಾನೆ (ನೋಡುವದಕ್ಕೆ) ಯೋಗ್ಯವೆನಿಸೀತು ?

**ದೂರಾದವೇಕ್ಷ್ಯಾಗ್ನಿಶಿಖಾಂ ಪತಙ್ಗೋ**
**ರಮ್ಯತ್ವಬುದ್ಧ್ಯಾ ವಿನಿಪತ್ಯ ನಶ್ಯತಿ ।**
**(ಯಥಾ ತಥಾ ನಷ್ಟದೃಗೇಷ ಸೂಕ್ಷ್ಮಂ**
**ಕಥಂ ನಿರೀಕ್ಷೇತ ವಿಮುಕ್ತಿಮಾರ್ಗಮ್)[1] ॥ ೫೧ ॥**

**ಕಾಮೇನ ಕಾನ್ತಾಂ ಪರಿಗೃಹ್ಯ ತದ್ವ-**
**ಜ್ಜನೋಽಪ್ಯಯಂ ನಶ್ಯತಿ ನಷ್ಟದೃಷ್ಟಿಃ ।**
**ಮಾಂಸಾಸ್ಥಿಮಜ್ಜಾಮಲಮೂತ್ರಪಾತ್ರಂ**
**ಸ್ತ್ರಿಯಂ ಸ್ವಯಂ ರಮ್ಯತಯೈವ ಪಶ್ಯತಿ ॥ ೫೨ ॥**

೫೧-೫೨. ದೀಪದ ಹುಳು ದೂರದಿಂದಲೇ ದೀಪದ ಕುಡಿಯನ್ನು ಕಂಡು ಚೆನ್ನಾಗಿದೆ ಎಂಬ ಬುದ್ಧಿಯಿಂದ ಅದರಮೇಲೆ ಬಿದ್ದು ಸಾಯುವದು. (ಹಾಗೆ ಕಣ್ಣುಗುರುಡನಾದ ಇವನು ಸೂಕ್ಷ್ಮವಾದ ಮೋಕ್ಷಮಾರ್ಗವನ್ನು ಹೇಗೆ ಕಂಡುಕೊಂಡಾನು ?) ಅದರಂತೆ ಮನುಷ್ಯನೂ ಬಯಕೆಯಿಂದ ಹೆಂಗಸನ್ನು ಸ್ವೀಕರಿಸಿ ದೃಷ್ಟಿಹೀನನಾಗಿ ಕೆಡುತ್ತಾನೆ. ಮಾಂಸ, ಮೂಳೆ, ಮಜ್ಜೆ, ಮಲ, ಮೂತ್ರ - ಇವುಗಳ ಪಾತ್ರೆಯಾಗಿರುವ ಸ್ತ್ರೀಯನ್ನು ಸೊಗಸಾಗಿದಾಳೆಂದೇ ತಾನು ಭಾವಿಸುತ್ತಾನೆ.

**ಕಾಮ ಏವ ಯಮಃ ಸಾಕ್ಷಾತ್ಕಾನ್ತಾ ವೈತರಣೀ ನದೀ ।**
**ವಿವೇಕಿನಾಂ ಮುಮುಕ್ಷೂಣಾಂ ನಿಲಯಸ್ತು ಯಮಾಲಯಃ ॥ ೫೩ ॥**

೫೩. ವಿವೇಕಿಗಳಾದ ಮುಮುಕ್ಷುಗಳಿಗೆ ಕಾಮನೇ ಸಾಕ್ಷಾದ್ಯಮನು. ಹೆಂಡತಿಯೇ ವೈತರಣೀ ನದಿಯು ; ಮನೆ ಎಂಬುದಾದರೊ, ಯಮನ ಮನೆ.

---

1. ಕಂಸದಲ್ಲಿರುವ ಭಾಗವಿಲ್ಲದಿದ್ದರೆ ಮುಂದಿನ ಶ್ಲೋಕಕ್ಕೆ ಸರಿಯಾಗಿ ಅರ್ಥವು ಹೊಂದಿಕೊಳ್ಳುತ್ತದೆ. ಈ ಭಾಗವನ್ನು ಈಚೆಗೆ ಯಾರಾದರೂ ಸೇರಿಸಿರಬಹುದೆ ?-ಎಂಬುದು ವಿಚಾರಣೀಯವಾಗಿದೆ.

ಯಮಾಲಯೇ ವಾಪಿ ಗೃಹೇಽಪಿ ನೋ ನೃಣಾಂ
ತಾಪತ್ರಯಕ್ಲೇಶನಿವೃತ್ತಿರಸ್ತಿ ।
ಕಿಞ್ಚಿತ್ಸಮಾಲೋಕ್ಯ ತು ತನ್ನಿರಾಮಂ
ಸುಖಾತ್ಮನಾ ಪಶ್ಯತಿ ಮೂಢಲೋಕಃ ॥ ೩೪ ॥

೩೪. ಯಮಲೋಕದಲ್ಲಾಗಲಿ ಮನೆಯಲ್ಲಾಗಲಿ ಮನುಷ್ಯರಿಗೆ ತಾಪತ್ರಯದ ಕ್ಲೇಶವು ಹೋಯಿತೆಂಬುದೇ ಇಲ್ಲ. ಆದರೆ ಆ ಕ್ಲೇಶವು ಸ್ವಲ್ಪ ನಿಂತದ್ದನ್ನು ಕಂಡು ಮೂಢಜನವು ಅದೇ ಸುಖವೆಂದು ಭಾವಿಸುವರು.

ಯಮಸ್ಯ ಕಾಮಸ್ಯ ಚ ತಾರತಮ್ಯಂ
ವಿಚಾರ್ಯಮಾಣೇ ಮಹದಸ್ತಿ ಲೋಕೇ ।
ಹಿತಂ ಕರೋತ್ಯಸ್ಯ ಯಮೋಽಪ್ರಿಯಃ ಸನ್
ಕಾಮಸ್ತ್ವನರ್ಥಂ ಕುರುತೇ ಪ್ರಿಯಃ ಸನ್ ॥ ೩೫ ॥

ಯಮೋಽಸತಾಮೇವ ಕರೋತ್ಯನರ್ಥಂ
ಸತಾಂ ತು ಸೌಖ್ಯಂ ಕುರುತೇ ಹಿತಃ ಸನ್ ।
ಕಾಮಃ ಸತಾಮೇವ ಗತಿಂ ನಿರುನ್ಧನ್
ಕರೋತ್ಯನರ್ಥಂ ಹ್ಯಸತಾಂ ತು ಕಾ ಕಥಾ ॥ ೩೬ ॥

೩೫-೩೬. ವಿಚಾರಮಾಡಿ ನೋಡಿದರೆ ಲೋಕದಲ್ಲಿ ಯಮನಿಗೂ ಕಾಮನಿಗೂ ಹೆಚ್ಚಿನ ತಾರತಮ್ಯವಿದೆ. ಯಮನು ಅಪ್ರಿಯನಾಗಿದ್ದುಕೊಂಡು ಇವನಿಗೆ ಹಿತವನ್ನು ಮಾಡುತ್ತಾನೆ ; ಕಾಮನಾದರೋ ಪ್ರಿಯನಾಗಿದ್ದುಕೊಂಡು ಅನರ್ಥವನ್ನು ಮಾಡುತ್ತಾನೆ. ಯಮನು ಕೆಟ್ಟವರಿಗೆ ಮಾತ್ರ ಕೆಟ್ಟದ್ದನ್ನು ಮಾಡುತ್ತಾನೆ; ಸತ್ಪುರುಷರಿಗಾದರೋ ಹಿತನಾಗಿದ್ದುಕೊಂಡು ಸೌಖ್ಯವನ್ನೇ ಕೊಡುತ್ತಾನೆ. ಕಾಮನಾದರೋ ಸತ್ಪುರುಷರಿಗೇ ಸದ್ಗತಿಗೆ ಅಡ್ಡಲಾಗಿದ್ದು ಅನರ್ಥವನ್ನು ಮಾಡುತ್ತಾನೆ; ಇನ್ನು ಕೆಟ್ಟವರಿಗೆ (ಅನರ್ಥವನ್ನು ಮಾಡುವನೆಂದು) ಹೇಳಬೇಕಾದದ್ದೇನು?

ವಿಶ್ವಸ್ಯ ವೃದ್ಧಿಂ ಸ್ವಯಮೇವ ಕಾಙ್ಕ್ಷನ್
ಪ್ರವರ್ತಕಂ ಕಾಮಿಜನಂ ಸಸರ್ಜ ।
ತೇನೈವ ಲೋಕಃ ಪರಿಮುಹ್ಯಮಾನಃ
ಪ್ರವರ್ಧತೇ ಚನ್ದ್ರಮಸೇವ ಚಾಬ್ಧಿಃ ॥ ೩೭ ॥

೩೭. ಪ್ರಪಂಚವು ಬೆಳೆಯಬೇಕೆಂದು ತಾನೇ ಬಯಸಿ ( ಬ್ರಹ್ಮನು ? ) ಪ್ರವೃತ್ತರಾಗುವ ಕಾಮಿಜನರನ್ನು ಸೃಷ್ಟಿಸಿದನು. ಆದರಿಂದಲೇ ಜನರು ಭ್ರಾಂತರಾಗಿ ಚಂದ್ರನಿಂದ ಉಕ್ಕೇರುವ ಸಮುದ್ರದಂತೆ ಉಬ್ಬುತ್ತಿರುತ್ತಾರೆ.

**ಕಾಮೋ ನಾಮ ಮಹಾಞ್ಜಗನ್ಮೋಹಕಃ ಸ್ಥಿತ್ವಾಽನ್ತರಙ್ಗೇ ಸ್ವಯಂ**
**ಸ್ತ್ರೀಪುಂಸಾವಿತರೇತರಾಙ್ಗಕಗುಣೈರ್ಹಾಸೈಶ್ಚ ಭಾವೈಃ ಸ್ಫುಟಮ್ ।**
**ಅನ್ಯೋನ್ಯಂ ಪರಿಮೋಹ್ಯ ನೈಜತಮಸಾ ಪ್ರೇಮಾನುಬನ್ಧೇನ ತೌ**
**ಬದ್ಧ್ವಾ ಭ್ರಾಮಯತಿ ಪ್ರಪಞ್ಚರಚನಾಂ ಸಂವರ್ಧಯನ್ ಬ್ರಹ್ಮಹಾ॥**

೫೮. ಬ್ರಹ್ಮಘ್ನನಾದ ಕಾಮನೆಂಬ ದೊಡ್ಡ ಜಗನ್ಮೋಹಕನು ತಾನೇ ಮನಸ್ಸಿನೊಳಗೆ ಇದ್ದುಕೊಂಡು ಸ್ತ್ರೀಪುರುಷರನ್ನು ಒಬ್ಬರೊಬ್ಬರ ದೇಹದ ಗುಣಗಳಿಂದಲೂ ಹಾಸಗಳಿಂದಲೂ ಭಾವಗಳಿಂದಲೂ ಸ್ಫುಟವಾಗಿ ಒಬ್ಬರೊಬ್ಬರನ್ನು ಅವರ ಅಜ್ಞಾನದಿಂದ ಮೋಹಗೊಳಿಸಿ ಪ್ರೇಮದ ಪಾಶದಿಂದ ಅವರನ್ನು ಕಟ್ಟಿಹಾಕಿ, ಪ್ರಪಂಚದ ರಚನೆಯನ್ನು ಬೆಳೆಯಿಸುವದಕ್ಕಾಗಿ ತೊಳಲಿಸುತ್ತಿರುತ್ತಾನೆ.

**ಅತೋಽನ್ತರಙ್ಗಸ್ಥಿತಕಾಮವೇಗಾ-**
**ದ್ಭೋಗ್ಯೇ ಪ್ರವೃತ್ತಿಃ ಸ್ವತ ಏವ ಸಿದ್ಧಾ ।**
**ಸರ್ವಸ್ಯ ಜನ್ತೋರ್ಧ್ರುವಮನ್ಯಥಾ ಚೇ-**
**ದಬೋಧಿತಾರ್ಥೇಷು ಕಥಂ ಪ್ರವೃತ್ತಿಃ ॥ ೫೯ ॥**

೫೯. ಆದ್ದರಿಂದಲೇ ಮನಸ್ಸಿನೊಳಗಿರುವ ಕಾಮದ ವೇಗದಿಂದ ಪ್ರತಿಯೊಂದು ಪ್ರಾಣಿಗೂ ಭೋಗ್ಯವಸ್ತುವಿನಲ್ಲಿ ಪ್ರವೃತ್ತಿಯು ತಾನೇ ಉಂಟಾಗುತ್ತಿದೆ ಎಂಬುದು ನಿಶ್ಚಯ. ಹಾಗಲ್ಲದಿದ್ದರೆ ಯಾರೂ ಹೇಳಿಕೊಡದಿರುವ ವಸ್ತುಗಳಲ್ಲಿ ಹೇಗೆತಾನೆ ಪ್ರವೃತ್ತಿಯುಂಟಾದೀತು ?

**ತೇನೈವ ಸರ್ವಜನ್ತೂನಾಂ ಕಾಮನಾ ಬಲವತ್ತರಾ ।**
**ಜೀರ್ಯತ್ಯಪಿ ಚ ದೇಹೇಽಸ್ಮಿನ್ ಕಾಮನಾ ನೈವ ಜೀರ್ಯತೇ ॥ ೬೦ ॥**

೬೦. ಆದ್ದರಿಂದಲೇ ಎಲ್ಲಾ ಪ್ರಾಣಿಗಳಿಗೂ ಕಾಮವು ಅಷ್ಟು ಪ್ರಬಲವಾಗಿರುತ್ತದೆ. ಈ ದೇಹವು ಜೀರ್ಣವಾಗುತ್ತಿದ್ದರೂ ಕಾಮವು ಜೀರ್ಣವಾಗುವದೇ ಇಲ್ಲ.

**ಅವೇಕ್ಷ್ಯ ವಿಷಯೇ ದೋಷಂ ಬುದ್ಧಿಯುಕ್ತೋ ವಿಚಕ್ಷಣಃ ।**
**ಕಾಮಪಾಶೇನ ಯೋ ಮುಕ್ತಃ ಸ ಮುಕ್ತೇಃ ಪಥಿಗೋಚರಃ ॥ ೬೧ ॥**

೬೧. ಬುದ್ಧಿಯುಕ್ತನಾದ ಯಾವ ಜಾಣನು ವಿಷಯದಲ್ಲಿ ದೋಷವನ್ನು ಪರಿಶೀಲಿಸಿ ಕಾಮಪಾಶದಿಂದ ಮುಕ್ತನಾಗಿರುವನೋ ಅವನೇ ಮುಕ್ತಿಯ ಹಾದಿಯಲ್ಲಿ ಕಾಣಬರುತ್ತಾನೆ.

**ಕಾಮಸ್ಯ ವಿಜಯೋಪಾಯಂ ಸೂಕ್ಷ್ಮಂ ವಕ್ಷ್ಯಾಮ್ಯಹಂ ಸತಾಮ್ ।**
**ಸಂಕಲ್ಪಸ್ಯ ಪರಿತ್ಯಾಗ ಉಪಾಯಃ ಸುಲಭೋ ಮತಃ ॥ ೬೨ ॥**

೬೨. ಕಾಮವನ್ನು ಗೆಲ್ಲುವ ಸೂಕ್ಷ್ಮವಾದ ಉಪಾಯವನ್ನು ಸತ್ಪುರುಷರಿಗಾಗಿ ಹೇಳುತ್ತೇನೆ. ಸಂಕಲ್ಪವನ್ನು ಬಿಟ್ಟುಬಿಡುವದೇ (ಇದಕ್ಕೆ) ಸುಲಭವಾದ ಉಪಾಯವೆಂದು ಬಲ್ಲವರ ಮತವು.

**ಶ್ರುತೇ ದೃಷ್ಟೇಽಪಿ ವಾ ಭೋಗ್ಯೇ ಯಸ್ಮಿನ್ಕಸ್ಮಿಂಶ್ಚ ವಸ್ತುನಿ ।**
**ಸಮೀಚೀನತ್ವಧೀತ್ಯಾಗಾತ್ ಕಾಮೋ ನೋದೇತಿ ಕರ್ಹಿಚಿತ್ ॥ ೬೩ ॥**

೬೩. ಕೇಳಿದ ಅಥವಾ ಕಂಡ ಯಾವದಾದರೂ ಭೋಗ್ಯವಸ್ತುವಿನಲ್ಲಿ 'ಇದು ಚೆನ್ನಾಗಿದೆ' ಎಂಬ ಬುದ್ಧಿಯನ್ನು ಮಾಡಿಕೊಳ್ಳದೆ ಇರುವದರಿಂದ ಕಾಮವು ಎಂದಿಗೂ ಹುಟ್ಟದೆ ಇರುತ್ತದೆ.

**ಕಾಮಸ್ಯ ಬೀಜಂ ಸಙ್ಕಲ್ಪಃ ಸಂಕಲ್ಪಾದೇವ ಜಾಯತೇ ।**
**ಬೀಜೇ ನಷ್ಟೇಽಙ್ಕುರ ಇವ ತಸ್ಮಿನ್ನಷ್ಟೇ ವಿನಶ್ಯತಿ ॥ ೬೪ ॥**

೬೪. ಕಾಮಕ್ಕೆ ಸಂಕಲ್ಪವೇ ಬೀಜವು. (ಅದು) ಸಂಕಲ್ಪದಿಂದಲೇ ಹುಟ್ಟುತ್ತದೆ. ಬೀಜವು ಹೋದರೆ ಮೊಳಕೆಯೂ (ಇಲ್ಲವಾಗು)ವಂತೆ, ಆ (ಸಂಕಲ್ಪವು) ನಾಶವಾದರೆ, (ತಾನೂ) ನಾಶವಾಗುವದು.

**ನ ಕೋಽಪಿ ಸಮ್ಯಕ್ತ್ವಧಿಯಾ ವಿನೈವ**
**ಭೋಗ್ಯಂ ನರಃ ಕಾಮಯಿತುಂ ಸಮರ್ಥಃ ।**
**ಯತಸ್ತತಃ ಕಾಮಜಯೇಚ್ಛುರೇತಾಂ**
**ಸಮ್ಯಕ್ತ್ವಬುದ್ಧಿಂ ವಿಷಯೇ ನಿಹನ್ಯಾತ್ ॥ ೬೫ ॥**

೬೫. 'ಚೆನ್ನಾಗಿದೆ' ಎಂಬ ಬುದ್ಧಿಯಿಲ್ಲದೆಯೇ ಯಾವ ಮನುಷ್ಯನೂ ಭೋಗ್ಯವನ್ನು ಬಯಸಲಾರನು. ಹೀಗಿರುವದರಿಂದ ಕಾಮವನ್ನು ಗೆದ್ದುಕೊಳ್ಳಬೇಕೆನ್ನುವಾತನು ವಿಷಯದಲ್ಲಿ ಈ 'ಚೆನ್ನಾಗಿದೆ'ಯೆಂಬ ಭಾವನೆಯನ್ನು ಬಿಟ್ಟುಬಿಡಬೇಕು.

**ಭೋಗ್ಯೇ ನರಃ ಕಾಮಜಯೇಚ್ಛುರೇತಾಂ**
**ಸುಖತ್ವಬುದ್ಧಿಂ ವಿಷಯೇ ನಿಹನ್ಯಾತ್ ।**
**ಯಾವತ್ಸುಖತ್ವಭ್ರಮಧೀಃ ಪದಾರ್ಥೇ**
**ತಾವನ್ನ ಜೇತುಂ ಪ್ರಭವೇದ್ಧಿ ಕಾಮಮ್ ॥ ೬೬ ॥**

೬೬. ಕಾಮವನ್ನು ಗೆಲ್ಲಬೇಕೆಂಬ ಮನುಷ್ಯನು ಭೋಗ್ಯವಸ್ತುವಿನಲ್ಲಿ '(ಇದು) ಸುಖಕರವಾಗಿದೆ' ಎಂಬ ಬುದ್ಧಿಯನ್ನು ಇಲ್ಲವಾಗಿಸಿಕೊಳ್ಳಬೇಕು. ಏಕೆಂದರೆ ಎಲ್ಲಿಯವರೆಗೆ ಪದಾರ್ಥದಲ್ಲಿ ಸುಖಕರವೆಂಬ ತಪ್ಪುಭಾವನೆಯು ಇದ್ದುಕೊಂಡಿರುವದೋ ಅಲ್ಲಿಯವರೆಗೆ ಕಾಮವನ್ನು ಗೆಲ್ಲಲಾರನಷ್ಟೆ !

**ಸಂಕಲ್ಪಾನುದಯೇ ಹೇತುರ್ಯಥಾಭೂತಾರ್ಥದರ್ಶನಮ್ ।**
**ಅನರ್ಥಚಿನ್ತನಂ ಚಾಭ್ಯಾಂ ನಾವಕಾಶೋಽಸ್ಯ ವಿದ್ಯತೇ ॥ ೬೭ ॥**

೬೭. ಸಂಕಲ್ಪವು ಹುಟ್ಟದೆ ಇರುವದಕ್ಕೆ ಪದಾರ್ಥವನ್ನು ಇದ್ದದ್ದು ಇದ್ದಂತೆ ತಿಳಿದುಕೊಳ್ಳುವದು, (ಇದು) ಅನರ್ಥಕರವೆಂಬುದನ್ನು ಮನಸ್ಸಿನಲ್ಲಿ ಆಲೋಚಿಸುತ್ತಿರುವದು- (ಇವೇ) ಕಾರಣ. ಈ ಎರಡರಿಂದ ಈ (ಸಂಕಲ್ಪಕ್ಕೆ) ಅವಕಾಶವೇ ಇರುವದಿಲ್ಲ.

**ರತ್ನೇ ಯದಿ ಶಿಲಾಬುದ್ಧಿರ್ಜಾಯತೇ ವಾ ಭಯಂ ತತಃ ।**
**ಸಮೀಚೀನತ್ವಧೀರ್ನೈತಿ ನೋಪಾದೇಯತ್ವಧೀರಪಿ ॥ ೬೮ ॥**

೬೮. ರತ್ನದಲ್ಲಿ ಕಲ್ಲೆಂಬ ಬುದ್ಧಿಯಾಗಲಿ, ಅದರಿಂದ ಅಂಜಿಕೆಯುಂಟಾದರಾಗಲಿ, (ಅದು) ಚೆನ್ನಾಗಿರುವದೆಂಬ ಬುದ್ಧಿಯು ಬರುವದಿಲ್ಲ, ತೆಗೆದುಕೊಳ್ಳತಕ್ಕದ್ದೆಂಬ ಬುದ್ಧಿಯೂ ಬರುವದಿಲ್ಲ.

**ಯಥಾರ್ಥದರ್ಶನಂ ವಸ್ತುನ್ಯನರ್ಥಸ್ಯಾಪಿ ಚಿನ್ತನಮ್ ।**
**ಸಂಕಲ್ಪಸ್ಯಾಪಿ ಕಾಮಸ್ಯ ತದ್ವಧೋಪಾಯ ಇಷ್ಯತೇ ॥ ೬೯ ॥**

೬೯. ವಸ್ತುವನ್ನು ಇದ್ದದ್ದು ಇದ್ದಂತೆ ತಿಳಿದುಕೊಳ್ಳುವದು, ಮತ್ತು (ಅದು) ಅನರ್ಥಕರವೆಂದು ಆಲೋಚಿಸಿಕೊಳ್ಳುತ್ತಿರುವದು- (ಇವೆರಡೂ) ಸಂಕಲ್ಪ ಮತ್ತು ಕಾಮ- ಇವುಗಳ ವಧೋಪಾಯವೆನ್ನುವರು.

**ಧನಂ ಭಯನಿಬನ್ಧನಂ ಸತತದುಃಖಸಂವರ್ಧನಂ**
**ಪ್ರಚಣ್ಡತರಕರ್ದನಂ (ತರ್ಜನಮ್) ಸ್ಫುಟಿತಬನ್ಧುಸಂವರ್ಧನಮ್ ।**
**ವಿಶಿಷ್ಟಗುಣಬಾಧನಂ ಕೃಪಣಧೀಸಮಾರಾಧನಂ**
**ನ ಮುಕ್ತಿಗತಿಸಾಧನಂ ಭವತಿ ನಾಪಿ ಹೃಚ್ಛೋಧನಮ್ ॥ ೭೦ ॥**

೭೦. ಧನವು ಭಯಕ್ಕೆ ಕಾರಣವಾದದ್ದು, ಯಾವಾಗಲೂ ದುಃಖವನ್ನು ಬೆಳೆಯಿಸತಕ್ಕದ್ದು. ಬಹಳ ಜೋರಾದ ಗದರಿಸುವಿಕೆ[1] (?), ಬಂಧುಗಳ ಒಡಕನ್ನು ಹೆಚ್ಚಿಸತಕ್ಕದ್ದು, ಒಳ್ಳೆಯ ಗುಣಗಳನ್ನು ಕೆಡಿಸತಕ್ಕದ್ದು, ಜಿಪುಣತನದ ಬುದ್ಧಿಯವರಿಗೆ ಸಂತೋಷವನ್ನುಂಟುಮಾಡತಕ್ಕದ್ದು, ಅದು ಮೋಕ್ಷಗತಿಗೆ ಸಾಧನವಲ್ಲ; ಹೃದಯಶುದ್ಧಿಗೆ ಕಾರಣವೂ ಅಲ್ಲ.

---

1. ಇಲ್ಲಿ ಯಾವದೋ ಪಾಠವು ತಪ್ಪಾಗಿಬಿಟ್ಟಿದೆ; 'ಪ್ರಚಣ್ಡತರತರ್ಜನಮ್-' ಎಂದು ತಿದ್ದಿಕೊಂಡಿದೆ.

3

**ರಾಜ್ಞೋ ಭಯಂ ಚೋರಭಯಂ ಪ್ರಮಾದಾ-**
**ದ್ಭಯಂ ತಥಾ ಜ್ಞಾತಿಭಯಂ ಚ ವಸ್ತುತಃ ।**
**ಧನಂ ಭಯಗ್ರಸ್ತಮನರ್ಥಮೂಲಂ**
**ಯತಃ ಸತಾಂ ನೈವ ಸುಖಾಯ ಕಲ್ಪತೇ ॥ ೭೧ ॥**

೭೧. ಅರಸನಿಂದ ಹೆದರಿಕೆ, ಕಳ್ಳರಿಂದ ಹೆದರಿಕೆ, ಎಚ್ಚರತಪ್ಪಿ ನಡೆಯುವ ಹೆದರಿಕೆ, ಮತ್ತು ಜ್ಞಾತಿಗಳಿಂದ ಹೆದರಿಕೆ– (ಹೀಗೆ) ನಿಜವಾಗಿಯೂ ಧನ ವೆಂಬುದು ಭಯಗ್ರಸ್ತವಾಗಿರುತ್ತದೆ, ಅನರ್ಥಕ್ಕೆ ಮೂಲವಾಗಿರುತ್ತದೆ. ಆದ್ದರಿಂದ ಸತ್ಪುರುಷರಿಗೆ ಅದು ಸುಖಕ್ಕೆ ಕಾರಣವಾಗಲಾರದು.

**ಅರ್ಜನೇ ರಕ್ಷಣೇ ದಾನೇ ವ್ಯಯೇ ವಾಪಿ ಚ ವಸ್ತುತಃ ।**
**ದುಃಖಮೇವ ಸದಾ ನೃಣಾಂ ನ ಧನಂ ಸುಖಸಾಧನಮ್ ॥ ೭೨ ॥**

೭೨. ಸಂಪಾದಿಸುವಾಗ, ಕಾಪಾಡಿಕೊಳ್ಳುವಾಗ, ದಾನಮಾಡುವಾಗ, ವೆಚ್ಚಮಾಡುವಾಗ, ಧನವು ನಿಜವಾಗಿ ಜನರಿಗೆ ಯಾವಾಗಲೂ ದುಃಖವೇ; ಸುಖಕ್ಕೆ ಸಾಧನವಲ್ಲ.

**ಸತಾಮಪಿ ಪದಾರ್ಥಸ್ಯ ಲಾಭಾಲ್ಲೋಭಃ ಪ್ರವರ್ಧತೇ ।**
**ವಿವೇಕೋ ಲುಪ್ಯತೇ ಲೋಭಾತ್ತಸ್ಮಿಲ್ಲುಪ್ತೇ ವಿನಶ್ಯತಿ ॥ ೭೩ ॥**

೭೩. ಸಜ್ಜನರಿಗೂ ಪದಾರ್ಥವು ಸಿಕ್ಕಿದರೆ ಲೋಭವು ಬೆಳೆದುಕೊಳ್ಳುತ್ತದೆ, ಲೋಭದಿಂದ ವಿವೇಕವು ನಾಶವಾಗುತ್ತದೆ; ಅದು ನಾಶವಾಗಲು ತಾನೂ ನಾಶ ವಾಗುತ್ತಾನೆ.

**ದಹತ್ಯಲಾಭೇ ನಿಃಸ್ವತ್ವಂ ಲಾಭೇ ಲೋಭೋ ದಹತ್ಯಮುಮ್ ।**
**ತಸ್ಮಾತ್ಸಂತಾಪಕಂ ವಿತ್ತಂ ಕಸ್ಯ ಸೌಖ್ಯಂ ಪ್ರಯಚ್ಛತಿ ॥ ೭೪ ॥**

೭೪. ದೊರೆಯದಾಗ ತನಗೆ ಏನೂ ಇಲ್ಲವೆಂಬ ಭಾವನೆಯು ಸುಡುತ್ತದೆ; ದೊರೆತರೆ ಲೋಭವು ಇವನನ್ನು ಸುಡುತ್ತದೆ. ಆದ್ದರಿಂದ ಸಂತಾಪವನ್ನೇ ಮಾಡು ತ್ತಿರುವ ಧನವು ಯಾರಿಗೆತಾನೆ ಸೌಖ್ಯವನ್ನು ಕೊಟ್ಟೀತು ?

**ಭೋಗೇನ ಮತ್ತತಾ ಜಂತೋರ್ದಾನೇನ ಪುನರುದ್ಭವಃ ।**
**ವೃಥೈವೋಭಯಥಾ ವಿತ್ತಂ ನಾಸ್ತ್ಯೇವ ಗತಿರನ್ಯಥಾ ॥ ೭೫ ॥**

೭೫. ಜೀವನಿಗೆ ಭೋಗದಿಂದ ಮತ್ತತೆ, ದಾನದಿಂದ ಪುನರ್ಜನ್ಮ– ಹೀಗೆ ಧನವು ಎರಡು ಬಗೆಯಿಂದಲೂ ವ್ಯರ್ಥವೇ. (ಅದಕ್ಕೆ) ಬೇರೊಂದು ಗತಿ ಇಲ್ಲವೇ ಇಲ್ಲ.

**ಧನೇನ ಮದವೃದ್ಧಿಃ ಸ್ಯಾನ್ಮದೇನ ಸ್ಮೃತಿನಾಶನಮ್ ।**
**ಸ್ಮೃತಿನಾಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥ ೭೬ ॥**

೨೬. ಧನದಿಂದ ಮದವು ಹೆಚ್ಚುತ್ತದೆ, ಮದದಿಂದ (ಸತ್ಸಂಸ್ಕಾರದ) ನೆನಪು ಹಾರಿಹೋಗುತ್ತದೆ. ನೆನಪಿನ ನಾಶದಿಂದ (ಕಾರ್ಯಾಕಾರ್ಯ)ಬುದ್ಧಿಯು ನಾಶವಾಗುತ್ತದೆ ಬುದ್ಧಿನಾಶದಿಂದ (ಮನುಷ್ಯನು) ಹಾಳಾಗುತ್ತಾನೆ.

**ಸುಖಯತಿ ಧನಮೇವೇತ್ಯನ್ತರಾಶಾಪಿಶಾಚ್ಯಾ**
**ದೃಢತರಮುಪಗೂಢೋ ಮೂಢಲೋಕೋ ಜಡಾತ್ಮಾ ।**
**ನಿವಸತಿ ತದುಪಾನ್ತೇ ಸಂತತಂ ಪ್ರೇಕ್ಷಮಾಣೋ**
**ವ್ರಜತಿ ತದಪಿ ಪಶ್ಚಾತ್ಪ್ರಾಣಮೇತಸ್ಯ ಹೃತ್ವಾ ॥ ೨೭ ॥**

೨೭. ಧನವೇ ಸುಖವನ್ನುಂಟುಮಾಡುತ್ತದೆ ಎಂಬ ಒಳಗಿನ ಆಶೆ ಎಂಬ ಪಿಶಾಚಿಯಿಂದ ಬಲವಾಗಿ ಆಲಿಂಗಿತನಾಗಿ ತಿಳಿವಳಿಕೆಯಿಲ್ಲದ ಮೂಢಜನವು ಯಾವಾಗಲೂ (ಅದನ್ನೇ) ನೋಡುತ್ತಾ ಅದರ ಹತ್ತಿರವೇ ಇದ್ದುಕೊಂಡಿರುತ್ತಾನೆ. ಕೊನೆಗೆ ಅದೂ ಇವನ ಪ್ರಾಣವನ್ನು ಅಪಹರಿಸಿಕೊಂಡು ಹೋಗಿಬಿಡುತ್ತದೆ.

**ಸಂಪನ್ನೋಽನ್ಧವದೇವ ಕಿಞ್ಚಿದಪರಂ ನೋ ವೀಕ್ಷತೇ ಚಕ್ಷುಷಾ**
**ಸದ್ಭಿರ್ವರ್ಜಿತಮಾರ್ಗ ಏವ ಚರತಿ ಪ್ರೋತ್ಸಾಹಿತೋ[1] ಬಾಲಿಶೈಃ ।**
**ತಸ್ಮಿನ್ನೇವ ಮುಹುಃ ಸ್ಖಲನ್ ಪ್ರತಿಪದಂ ಗತ್ವಾನ್ಧಕೂಪೇ ಪತ-**
**ತ್ಯಸ್ಯಾನ್ಧತ್ವನಿವರ್ತಕೌಷಧಮಿದಂ ದಾರಿದ್ರ್ಯಮೇವಾಞ್ಜನಮ್ ॥೨೮॥**

೨೮. ಧನಸಂಪತ್ತಿನಿಂದ ಕೂಡಿದವನು ಕುರುಡನಂತೆಯೇ ಮತ್ತೇನನ್ನೂ ಕಣ್ಣೆತ್ತಿ ನೋಡದೆ ಇರುವನು. ಅವಿವೇಕಿಗಳಿಂದ ಪ್ರೋತ್ಸಾಹಿತನಾಗಿ ಸತ್ಪುರುಷರು ಬಿಟ್ಟಿರುವ ಮಾರ್ಗದಲ್ಲಿಯೇ ಸಂಚರಿಸುತ್ತಿರುವನು. ಆ ಮಾರ್ಗದಲ್ಲಿಯೇ ಹೆಜ್ಜೆಹೆಜ್ಜೆಗೂ ಎಡವುತ್ತಾ ಹೋಗಿ ಹಾಳುಭಾವಿಯಲ್ಲಿ ಬೀಳುತ್ತಾನೆ. ಅವನ ಕುರುಡುತನವನ್ನು ಕಳೆಯುವದಕ್ಕೆ ಬಡತನವೆಂಬಿದೇ ಅಂಜನವೇ ಔಷಧವು.

**ಲೋಭಃ ಕ್ರೋಧಶ್ಚ ದಮ್ಭಶ್ಚ ಮದೋ ಮತ್ಸರ ಏವ ಚ ।**
**ವರ್ಧತೇ ವಿತ್ತಸಂಪ್ರಾಪ್ತ್ಯಾ ಕಥಂ ತಚ್ಚಿತ್ತಶೋಧನಮ್ ॥ ೨೯ ॥**

೨೯. ಧನಪ್ರಾಪ್ತಿಯಿಂದ ಜಿಪುಣತನ, ಸಿಟ್ಟು, ದಂಭ, ಮದ, ಮಾತ್ಸರ್ಯ –ಇವು ಹೆಚ್ಚುತ್ತವೆ. ಚಿತ್ತಶುದ್ಧಿಗೆ ಹೇಗೆ ಅದು (ಕಾರಣ)ವಾದೀತು ?

**ಅಲಾಭಾದ್ದ್ವಿಗುಣಂ ದುಃಖಂ ವಿತ್ತಸ್ಯ ವ್ಯಯಸಂಭವೇ ।**
**ತತೋಽಪಿ ತ್ರಿಗುಣಂ ದುಃಖಂ ದುರ್ವ್ಯಯೇ ವಿದುಷಾಮಪಿ ॥ ೩೦ ॥**

೩೦. ವಿವೇಕಿಗಳಿಗೆಕೂಡ ಧನವು ಸಿಕ್ಕದೆಇದ್ದದ್ದರಿಂದಾಗುವ ದುಃಖಕ್ಕೆ ಎರಡರಷ್ಟು ದುಃಖವು ಅದನ್ನು ವೆಚ್ಚಮಾಡುವದರಿಂದಾಗುವದು;ಕೆಟ್ಟಮಾರ್ಗದಲ್ಲಿ ಅದನ್ನು ವೆಚ್ಚಮಾಡುವಾಗಲಂತೂ ದುಃಖವು ಆದಕ್ಕಿಂತ ಮೂರರಷ್ಟಾಗಿರುವದು.

1. 'ಪ್ರೋತ್ಸಾರಿತೋ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

**ನಿತ್ಯಾಹಿತೇನ ವಿತ್ತೇನ ಭಯಚಿನ್ತಾನಪಾಯಿನಾ ।**
**ಚಿತ್ತಸ್ವಾಸ್ಥ್ಯಂ ಕುತೋ ಜನ್ತೋರ್ಗೃಹಸ್ಥೇನಾಹಿನಾ ಯಥಾ ॥೮೧॥**

೮೧. ಮನೆಯಲ್ಲಿರುವ ಹಾವಿನಿಂದ ಹೇಗೆ ಚಿತ್ತವು ನೆಮ್ಮದಿಯಾಗಿದ್ದೀತು? ಅದರಂತೆ ಎಂದೆಂದಿಗೂ ಅಹಿತವಾಗಿರುವದಾಗಿಯೂ, ಅಂಜಿಕೆ, ಯೋಚನೆ-ಇವುಗಳನ್ನು ಬಿಟ್ಟಗಲದೆ ಇರುವದಾಗಿಯೂ ಇರುವ ಧನದಿಂದ ಜೀವನಿಗೆ ಹೇಗೆತಾನೆ ಚಿತ್ತಕ್ಕೆ ನೆಮ್ಮದಿಯಾದೀತು ?

**ಕಾನ್ತಾರೇ ವಿಜನೇ ವನೇ ಜನಪದೇ ಸೇತೌ ನಿರೀತೌ ಚ ವಾ**
**ಚೋರೈರ್ವಾಽಪಿ ತಥೇತರೈರ್ನರವರೈರ್ಯುಕ್ತೋ ವಿಯುಕ್ತೋಽಪಿ ವಾ।**
**ನಿಃಸ್ವಃ ಸ್ವಸ್ಥತಯಾ ಸುಖೇನ ವಸತಿ ಹ್ಯಾದ್ರಿಯಮಾಣೋ ಜನೈಃ**
**ಕ್ಲಿಶ್ನಾತ್ಯೇವ ಧನೀ ಸದಾಕುಲಮತಿರ್ಭೀತಶ್ಚ ಪುತ್ರಾದಪಿ ॥ ೮೨ ॥**

೮೨. ಜನರಿಲ್ಲದ ಕಗ್ಗಾಡಿನಲ್ಲಾಗಲಿ, ದೇಶದಲ್ಲಿಯೇ ಆಗಲಿ, ಈತಿ ಬಾಧೆಗಳಿಲ್ಲದ ಸೇತುವೆಯಲ್ಲಾಗಲಿ[1], ಕಳ್ಳರು ಅಥವಾ ಬೇರೆಯ ಯೋಗ್ಯ ಜನರು- ಇವರೊಡನೆ ಇರಲಿ, ಇವರಿಲ್ಲದೆ ತಾನೊಬ್ಬನೇ ಇರಲಿ, ಕೈಯಲ್ಲಿ ಹಣವಿಲ್ಲದವನು ಜನರ ಆದರಕ್ಕೆ ಪಾತ್ರನಾಗಿ ಸ್ವಸ್ಥನಾಗಿ ಸುಖದಿಂದ ಇದ್ದು ಕೊಂಡಿರುತ್ತಾನೆ. ಧನವಂತನು ಮಗನಿಂದಕೂಡ ಹೆದರುತ್ತಾ ಯಾವಾಗಲೂ ಕದಡಿದ ಮನಸ್ಸಿನಿಂದ ಕ್ಲೇಶಪಡುತ್ತಿರುತ್ತಾನೆ.

**ತಸ್ಮಾದನರ್ಥಸ್ಯ ನಿದಾನಮರ್ಥಃ**
**ಪುಮರ್ಥಸಿದ್ಧಿರ್ನ ಭವತ್ಯನೇನ ।**
**ತತೋ ವನಾನ್ತೇ ನಿವಸನ್ತಿ ಸನ್ತಃ**
**ಸಂನ್ಯಸ್ಯ ಸರ್ವಂ ಪ್ರತಿಕೂಲಮರ್ಥಮ್ ॥ ೮೩ ॥**

೮೩. ಆದ್ದರಿಂದ ಧನವು ಅನರ್ಥಕ್ಕೆ ಕಾರಣವು. ಇದರಿಂದ ಪುರುಷಾರ್ಥ ಸಿದ್ಧಿಯಿಲ್ಲ. ಆದ್ದರಿಂದ ಸತ್ಪುರುಷರು ಪ್ರತಿಕೂಲವಾಗಿರುವ ಈ ಧನವನ್ನೆಲ್ಲ ಬಿಟ್ಟು ಕಾಡಿನಲ್ಲಿ ವಾಸಿಸುತ್ತಿರುವರು.[2]

**ಶ್ರದ್ಧಾಭಕ್ತಿಮತೀಂ ಸತೀಂ ಗುಣವತೀಂ ಪುತ್ರಾನ್ಶ್ರುತಾನ್ ಸಂಮತಾ**
**ನಕ್ಷಯ್ಯಂ ವಸುಧಾನುಭೋಗವಿಭವೈಃ ಶ್ರೀಸುನ್ದರಂ ಮನ್ದಿರಮ್ ।**
**ಸರ್ವಂ ನಶ್ವರಮಿತ್ಯವೇತ್ಯ ಕವಯಃ ಶ್ರುತ್ಯುಕ್ತಿಭಿರ್ಯುಕ್ತಿಭಿಃ**
**ಸಂನ್ಯಸ್ಯನ್ತ್ಯಪರೇ ತು ತತ್ಸುಖಮಿತಿ ಭ್ರಾಮ್ಯನ್ತಿ ದುಃಖಾರ್ಣವೇ ॥**

1. ಇದು ಮೊದಲನೆಯ ಪಾದದ ಅರ್ಥ ಅಷ್ಟು ಸರಳವಾಗಿಲ್ಲ.
2. ಅಥವಾ 'ಪ್ರತಿಕೂಲವಾಗಿರುವ ಪದಾರ್ಥವೆಲ್ಲವನ್ನೂ'.

೮೪. ಶ್ರದ್ಧಾಭಕ್ತಿಗಳಿಂದ ಕೂಡಿದ ಗುಣವತಿಯಾದ ಹೆಂಡತಿ, ಶಾಸ್ತ್ರಜ್ಞಾನವುಳ್ಳವರೂ ತನಗೆ ಬೇಕಾದವರೂ ಆಗಿರುವ ಮಕ್ಕಳು, ಐಹಿಕೋಪಭೋಗಕ್ಕೆ ಸಾಧನವಾದ ಬಹುಕಾಲಬಾಳುವ ಸಂಪತ್ತಿನಿಂದ ಸುಂದರವಾಗಿರುವ ಮನೆ– ಇದೆಲ್ಲವೂ ನಶ್ವರವೆಂದು ಶ್ರುತಿವಚನಗಳಿಂದಲೂ ಯುಕ್ತಿಗಳಿಂದಲೂ ಕಂಡುಕೊಂಡು ವಿವೇಕಿಗಳಾದವರು ಬಿಟ್ಟುಬಿಡುತ್ತಾರೆ ವಿಃಕ್ಕವರಾದರೋ ಅದೇ ಸುಖವೆಂದು ನಂಬಿ ದುಃಖದ ಸಮುದ್ರದಲ್ಲಿ ತೊಳಲುತ್ತಿರುತ್ತಾರೆ.

**ಸುಖಮಿತಿ ಮಲರಾಶೌ ಯೇ ರಮನ್ತೇಽತ್ರ ಗೇಹೇ**
**ಕ್ರಿಮಯ ಇವ ಕಲತ್ರಕ್ಷೇತ್ರಪುತ್ರಾನುಷಕ್ತ್ಯಾ ।**
**ಸುರಪದ ಇವ ತೇಷಾಂ ನೈವ ಮೋಕ್ಷಪ್ರಸಙ್ಗ-**
**ಸ್ತ್ವಪಿ ತು ನಿರಯಗರ್ಭಾವಾಸದುಃಖಪ್ರವಾಹಃ ॥ ೮೫ ॥**

೮೫. ಹೆಂಡತಿ, ಹೊಲಮನೆ, ಮಕ್ಕಳು– ಇವರಲ್ಲಿ ಆಸಕ್ತಿಯಿಂದ ಕ್ರಿಮಿಗಳಂತೆ ಹೊಲಸಿನ ರಾಶಿಯಾಗಿರುವ ಈ ಮನೆಯಲ್ಲಿ ಯಾರು ಸ್ವರ್ಗದಲ್ಲಿರುವರೋ ಎಂಬಂತೆ ಇದೇ ಸುಖವೆಂದು ಇದ್ದುಕೊಂಡಿರುವರೋ ಅವರಿಗೆ ಮೋಕ್ಷದ ಪ್ರಸಕ್ತಿಯೇ ಇರುವದಿಲ್ಲ. ಆದರೆ ನರಕ ಮತ್ತು ಗರ್ಭವಾಸ– ಇವುಗಳಲ್ಲಿ ಆಗಿರುವ ದುಃಖದ ಪ್ರವಾಹವೇ (ಅವರಿಗಿರುವದು).

**ಯೇಷಾಮಾಶಾ ನಿರಾಶಾ ಸ್ಯಾದ್ದಾರಾಪತ್ಯಧನಾದಿಷು ।**
**ತೇಷಾಂ ಸಿಧ್ಯತಿ ನಾನ್ಯೇಷಾಂ ಮೋಕ್ಷಾಶಾಭಿಮುಖೀ ಗತಿಃ ॥ ೮೬ ॥**

೮೬. ಯಾರ ಆಶೆಯು ಹೆಂಡತಿ, ಮಕ್ಕಳು, ಧನ– ಮುಂತಾದವುಗಳಲ್ಲಿ ನಿರಾಶೆ (ದಿಕ್ಕುಗಾಣದ್ದು) ಆಗುವದೋ, ಅವರಿಗೇ ಮೋಕ್ಷದ ಆಶೆಯ (ದಿಕ್ಕಿನ) ಕಡೆಗೆ ತಿರುಗುವ ಗತಿಯು (ಆಗುವದು), ಉಳಿದವರಿಗಿಲ್ಲ.

**ಸತ್ಕರ್ಮಕ್ಷಯಪಾಪ್ಮನಾಂ ಶ್ರುತಿಮತಾಂ ಸಿದ್ಧಾತ್ಮನಾಂ ಧೀಮತಾಂ**
**ನಿತ್ಯಾನಿತ್ಯಪದಾರ್ಥಶೋಧನಮಿದಂ ಯುಕ್ತ್ಯಾ ಮುಹುಃ**
**ಕುರ್ವತಾಮ್ ।**
**ತಸ್ಮಾದುತ್ಥಮಹಾವಿರಕ್ತ್ಯಸಿಮತಾಂ ಮೋಕ್ಷೈಕಕಾಙ್ಕ್ಷಾವತಾಂ**
**ಧನ್ಯಾನಾಂ ಸುಲಭಂ ಪ್ರಿಯಾದಿವಿಷಯೇಷ್ವಾಶಾಲತಾಚ್ಛೇದನಮ್ ॥**

೮೭. ಸತ್ಕರ್ಮದಿಂದ ಪಾಪಗಳ ಕ್ಷಯವಾಗಿರುವ, ಶಾಸ್ತ್ರಶ್ರವಣವನ್ನು ಮಾಡಿರುವ, ಚಿತ್ತಸಂಸ್ಕಾರವನ್ನು ಪಡೆದುಕೊಂಡಿರುವ ವಿವೇಕಿಗಳಾದ, ಈ ನಿತ್ಯಾನಿತ್ಯಪದಾರ್ಥಗಳನ್ನು ಶೋಧಿಸುವದನ್ನು ಮತ್ತೆಮತ್ತೆ ಯುಕ್ತಿಯಿಂದ ಮಾಡಿಕೊಳ್ಳುತ್ತಿರುವ, ಆ (ವಿವೇಕ)ದಿಂದುಂಟಾದ ಮಹಾವಿರಕ್ತಿ ಎಂಬ ಖಡ್ಗವುಳ್ಳ,

ಮೋಕ್ಷವೊಂದನ್ನೇ ಬಯಸುತ್ತಿರುವ ಧನ್ಯರಿಗೆ ಸ್ತ್ರೀಯರೇ ಮುಂತಾದ ವಿಷಯಗಳಲ್ಲಿ ಆಶೆ ಎಂಬ ಬಳ್ಳಿಯನ್ನು ಕತ್ತರಿಸಿಹಾಕುವದು ಸುಲಭವು.

**ಸಂಸಾರಮೃತ್ಯೋರ್ಬಲಿನಃ ಪ್ರವೇಷ್ಟುಂ**
**ದ್ವಾರಾಣಿ ತು ತ್ರೀಣಿ ಮಹಾನ್ತಿ ಲೋಕೇ ।**
**ಕಾನ್ತಾ ಚ ಜಿಹ್ವಾ ಕನಕಂ ಚ ತಾನಿ**
**ರುಣದ್ಧಿ ಯಸ್ತಸ್ಯ ಭಯಂ ನ ಮೃತ್ಯೋಃ ॥ ೮೮ ॥**

೮೮. ಬಲಶಾಲಿಯಾದ ಸಂಸಾರವೆಂಬ ಮೃತ್ಯುವು ಒಳಹೊಗುವದಕ್ಕೆ ಲೋಕದಲ್ಲಿ ಮೂರು ಹೆಬ್ಬಾಗಿಲುಗಳಿವೆ. ಸ್ತ್ರೀ, ನಾಲಗೆ, ಚಿನ್ನ- (ಇವೇ ಆ ಹೆಬ್ಬಾಗಿಲುಗಳು); ಅವುಗಳನ್ನು ಯಾವನು ಮುಚ್ಚಿಹಾಕುತ್ತಾನೋ ಅವನಿಗೆ ಮೃತ್ಯುವಿನ ಅಂಜಿಕೆಯಿರುವದಿಲ್ಲ.

**ಮುಕ್ತಿಶ್ರೀನಗರಸ್ಯ ದುರ್ಜಯತರಂ ದ್ವಾರಂ ಯದಸ್ತ್ಯಾದಿಮಂ**
**ತಸ್ಯ ದ್ವೇ ಅರರೇ ಧನಂ ಚ ಯುವತೀ ತಾಭ್ಯಾಂ ಪಿನದ್ಧಂ ದೃಢಮ್ ।**
**ಕಾಮಾಖ್ಯಾರ್ಗಲದಾರುಣಾ ಬಲವತಾ ದ್ವಾರಂ ತದೇತತ್ತ್ರಯಂ**
**ಧೀರೋ ಯಸ್ತು ಭಿನತ್ತಿ ಸೋಽರ್ಹತಿ ಸುಖಂ ಭೋಕ್ತುಂ**
**ವಿಮುಕ್ತಿಶ್ರಿಯಃ ॥ ೮೯ ॥**

೮೯. ಮೋಕ್ಷಲಕ್ಷ್ಮಿಯ ನಗರಕ್ಕೆ ಗೆಲ್ಲುವದಕ್ಕೆ ಬಲುಕಷ್ಟವಾದ ಮೊದಲನೆಯ ಹೆಬ್ಬಾಗಿಲಿದೆಯಲ್ಲ, ಅದಕ್ಕೆ ಧನ, ತರುಣಿ- ಎಂಬ ಎರಡು ಕದಗಳಿರುತ್ತವೆ. ಈ ಎರಡರಿಂದ (ಆ ಬಾಗಿಲು) ಕಾಮ ಎಂಬ ಬಲವಾದ ಮರದ ಅಗಣಿಯ ಗೂಟವನ್ನು ಹಾಕಿರುವದರಿಂದ ಗಟ್ಟಿಯಾಗಿ ಮುಚ್ಚಿಕೊಂಡಿರುತ್ತದೆ. ಆ ಈ ಮೂರನ್ನೂ ಯಾವ ಧೀರನು ಭೇದಿಸುತ್ತಾನೋ ಅವನೇ ವಿಮುಕ್ತಿಲಕ್ಷ್ಮಿಯ ಸುಖವನ್ನು ಭೋಗಿಸುವದಕ್ಕೆ ತಕ್ಕವನಾಗಿರುತ್ತಾನೆ.

**ಆರೂಢಸ್ಯ ವಿವೇಕಾಶ್ವಂ ತೀವ್ರವೈರಾಗ್ಯಖಡ್ಗಿನಃ ।**
**ತಿತಿಕ್ಷಾವರ್ಮಯುಕ್ತಸ್ಯ ಪ್ರತಿಯೋಗೀ ನ ದೃಶ್ಯತೇ ॥ ೯೦ ॥**

೯೦. ವಿವೇಕವೆಂಬ ಕುದುರೆಯನ್ನೇರಿ ತೀವ್ರವೈರಾಗ್ಯವೆಂಬ ಖಡ್ಗವನ್ನು ಹಿಡಿದಿರುವ, ತಿತಿಕ್ಷೆ (ತಾಳ್ಮೆ) ಎಂಬ ಕವಚದಿಂದ ಕೂಡಿರುವವನಿಗೆ ಎದುರಾಳಿಯು ಕಾಣಿಸುವದಿಲ್ಲ.[1]

**ವಿವೇಕಜಾಂ ತೀವ್ರವಿರಕ್ತಿಮೇವ**
**ಮುಕ್ತೇರ್ನಿದಾನಂ ನಿಗದನ್ತಿ ಸನ್ತಃ ।**

---

1. ಧೈರ್ಯಶಾಲಿಯಾದ ಅವನು ಎಲ್ಲಾ ಅಡ್ಡಿಗಳನ್ನೂ ಗೆಲ್ಲುವನು ಎಂದರ್ಥ.

**ತಸ್ಮಾದ್ವಿವೇಕೀ ವಿರತಿಂ ಮುಮುಕ್ಷುಃ**
**ಸಂಪಾದಯೇತ್ತಾಂ ಪ್ರಥಮಂ ಪ್ರಯತ್ನಾತ್ ॥ ೯೧ ॥**

೯೧. ವಿವೇಕದಿಂದುಂಟಾಗಿರುವ ತೀವ್ರವೈರಾಗ್ಯವೇ[1] ಮೋಕ್ಷಕ್ಕೆ ಕಾರಣವೆಂದು ಸತ್ಪುರುಷರು ಹೇಳುತ್ತಾರೆ. ಆದ್ದರಿಂದ ವಿವೇಕಿಯಾದ ಮುಮುಕ್ಷುವು ಆ ವೈರಾಗ್ಯವನ್ನೇ ಮೊದಲು ಪ್ರಯತ್ನದಿಂದ ಸಂಪಾದಿಸಿಕೊಳ್ಳಬೇಕು.

**ಪುಮಾನಜಾತನಿರ್ವೇದೋ ದೇಹಬನ್ಧಂ ಜಿಹಾಸಿತುಮ್ ।**
**ನ ಹಿ ಶಕ್ನೋತಿ ನಿರ್ವೇದೋ ಬನ್ಧಭೇದೋ ಮಹಾನಸೌ ॥ ೯೨ ॥**

೯೨. ಯಾವ ಮನುಷ್ಯನಿಗೆ ವೈರಾಗ್ಯವು ಹುಟ್ಟಿರುವದಿಲ್ಲವೋ, ಅವನು ದೇಹಬಂಧವನ್ನು ಬಿಡಿಸಿಕೊಳ್ಳುವದಕ್ಕೆ ಇಚ್ಛಿಸಲಾರನು. ಈ ವೈರಾಗ್ಯವೆಂಬುದು ಬಂಧವನ್ನು ನಾಶಪಡಿಸಿಕೊಳ್ಳುವದಕ್ಕೆ ದೊಡ್ಡ ಉಪಾಯವು.

**ವೈರಾಗ್ಯರಹಿತಾ ಏವ ಯಮಾಲಯ ಇವಾಲಯೇ ।**
**ಕ್ಲಿಶ್ಯನ್ತಿ ತ್ರಿವಿಧೈಸ್ತಾಪೈರ್ಮೋಹಿತಾ ಅಪಿ ಪಣ್ಡಿತಾಃ ॥ ೯೩ ॥**

೯೩. ಪಂಡಿತರೇ ಆಗಲಿ, ವೈರಾಗ್ಯವಿಲ್ಲದವರೇ ಮೋಹಿತರಾಗಿ ಯಮನ ಸ್ಥಾನದಲ್ಲಿ ಹೇಗೋ ಹಾಗೆ, ಮನೆಯಲ್ಲಿ ಮೂರು ವಿಧವಾದ ತಾಪಗಳಿಂದ ಕ್ಲೇಶಪಡುತ್ತಿರುವರು.

## (೩) ಶಮಾದಿಷಟ್ಕ

**ಶಮೋ ದಮಸ್ತಿತಿಕ್ಷೋಪರತಿಃ ಶ್ರದ್ಧಾ ತತಃ ಪರಮ್ ।**
**ಸಮಾಧಾನಮಿತಿ ಪ್ರೋಕ್ತಂ ಷಡೇವೈತೇ ಶಮಾದಯಃ ॥ ೯೪ ॥**

೯೪. ಶಮ, ದಮ, ತಿತಿಕ್ಷೆ, ಉಪರತಿ, ಶ್ರದ್ಧೆ, ಆಮೇಲೆ ಸಮಾಧಾನವೆನ್ನುವದು– ಈ ಆರೇ ಶಮಾದಿಗಳು.

**ಏಕವೃತ್ತ್ಯೈವ ಮನಸಃ ಸ್ವಲಕ್ಷ್ಯೇ ನಿಯತಸ್ಥಿತಿಃ ।**
**ಶಮ ಇತ್ಯುಚ್ಯತೇ ಸದ್ಭಿಃ ಶಮಲಕ್ಷಣವೇದಿಭಿಃ ॥ ೯೫ ॥**

೯೫. ಅದೇ ವೃತ್ತಿಯಿಂದ ಮನಸ್ಸನ್ನು ತನ್ನ ಗುರಿಯಲ್ಲಿ ಗೊತ್ತಾಗಿಡುವದೇ[2] ಶಮವೆಂದು ಶಮಲಕ್ಷಣವನ್ನು ಸಜ್ಜನರು ಹೇಳುತ್ತಾರೆ.

**ಉತ್ತಮೋ ಮಧ್ಯಮಶ್ಚೈವ ಜಘನ್ಯ ಇತಿ ಚ ತ್ರಿಧಾ ।**
**ನಿರೂಪಿತೋ ವಿಪಶ್ಚಿದ್ಭಿಸ್ತತ್ತಲ್ಲಕ್ಷಣವೇದಿಭಿಃ ॥ ೯೬ ॥**

---

1. ವಿ. ೨೯. 2. ವಿ. ೨೨

೯೬. ಉತ್ತಮ, ಮಧ್ಯಮ, ಅಧಮ– ಎಂದು (ಶಮವು) ಮೂರು ವಿಧ ವೆಂದು[1] ಆಯಾ ಲಕ್ಷಣವನ್ನು ಬಲ್ಲ ಸಂತರಿಂದ ನಿರೂಪಿತವಾಗಿರುತ್ತದೆ.

**ಸ್ವವಿಕಾರಂ ಪರಿತ್ಯಜ್ಯ ವಸ್ತುಮಾತ್ರತಯಾ ಸ್ಥಿತಿಃ ।**
**ಮನಸಃ ಸೋತ್ತಮಾ ಶಾನ್ತಿರ್ಬ್ರಹ್ಮನಿರ್ವಾಣಲಕ್ಷಣಾ ॥ ೯೭ ॥**

೯೭. ಮನಸ್ಸು ತನ್ನತನ್ನ ಮಾರ್ಪಾಡನ್ನು ಬಿಟ್ಟು ಬರಿಯ (ಆತ್ಮ) ವಸ್ತುವಿನ ರೂಪದಿಂದ ನೆಲೆನಿಲ್ಲುವದೆಂಬುದೇ **ಬ್ರಹ್ಮನಿರ್ವಾಣರೂಪವಾದ ಉತ್ತಮಶಮವು.**

**ಪ್ರತ್ಯಕ್ಪ್ರತ್ಯಯಸಂತಾನಪ್ರವಾಹಕರಣಂ ಧಿಯಃ ।**
**ಯದೇಷಾ ಮಧ್ಯಮಾ ಶಾನ್ತಿಃ ಶುದ್ಧಸತ್ತ್ವೈಕಲಕ್ಷಣಾ ॥ ೯೮ ॥**

೯೮. ಅಂತಃಕರಣವನ್ನು ಪ್ರತ್ಯಕ್ಪ್ರತ್ಯಯಸಂತತಿಯ ಪ್ರವಾಹವಾಗಿ[2] ಮಾಡಿಕೊಳ್ಳುವದಿದೆಯಲ್ಲ, ಇದು **ಶುದ್ಧಸತ್ತ್ವವೇ** ಸ್ವರೂಪವಾಗಿರುವ **ಮಧ್ಯಮಶಮವು.**

**ವಿಷಯವ್ಯಾಪೃತಿಂ ತ್ಯಕ್ತ್ವಾ ಶ್ರವಣೈಕಮನಃಸ್ಥಿತಿಃ ।**
**ಮನಸಶ್ಚೇತರಾ ಶಾನ್ತಿರ್ಮಿಶ್ರಸತ್ತ್ವೈಕಲಕ್ಷಣಾ ॥ ೯೯ ॥**

೯೯. ವಿಷಯಗಳಲ್ಲಿ ತೊಳಲುವದನ್ನು ಬಿಟ್ಟು (ಆತ್ಮ)ಶ್ರವಣವನ್ನೇ ಮಾಡಬೇಕೆಂಬ ಮನಸ್ಸಿನ ಸ್ಥಿತಿಯು **ಮಿಶ್ರಸತ್ತ್ವವೇ**[3] ಸ್ವರೂಪವಾಗಿರುವ ಕೊನೆಯ **ಅಧಮಶಮವು.**

**ಪ್ರಾಚ್ಯೋದೀಚ್ಯಾಙ್ಗಸದ್ಭಾವೇ ಶಮಃ ಸಿಧ್ಯತಿ ನಾನ್ಯಥಾ ।**
**ತೀವ್ರಾ ವಿರಕ್ತಿಃ ಪ್ರಾಚ್ಯಾಙ್ಗಮುದೀಚ್ಯಙ್ಗಂ ದಮಾದಯಃ ॥ ೧೦೦ ॥**

೧೦೦. ಪೂರ್ವೋತ್ತರಾಂಗಗಳಿದ್ದರೇ ಶಮವು ಸಿದ್ಧಿಸುವದು, (ಅವು) ಇಲ್ಲದಿದ್ದರೆ (ಸಿದ್ಧಿಸು)ವದಿಲ್ಲ. ತೀವ್ರವಿರಕ್ತಿಯೇ **ಪೂರ್ವಾಂಗವು,** ದಮಾದಿಗಳು **ಉತ್ತರಾಂಗಗಳು.**[4]

---

1. ಶಮವನ್ನು ಮೂರು ಬಗೆಯಾಗಿ ವಿಂಗಡಿಸಿರುವದು ಈ ಗ್ರಂಥಕ್ಕೆ ಅಸಾಧಾರಣ ಧರ್ಮವು.

2. ಒಳಗಿನ ಆತ್ಮನಕಡೆಗೇ ಎಡೆಬಿಡದೆ ಹರಿಯುವಂತೆ.

3. ರಜಸ್ತಮೋಗುಣಗಳಿಂದ ಮಿಶ್ರವಾಗಿರುವ ಸತ್ತ್ವವೇ. ಹಿಂದಿನ ಶ್ಲೋಕಗಳಲ್ಲಿ ಹೇಳಿರುವದು ಇವೆರಡರ ಸೋಂಕಿಲ್ಲದ ಬರಿಯ ಸತ್ತ್ವ.

4. ಶಮಕ್ಕೆ ಹೀಗೆ ಪೂರ್ವೋತ್ತರಾಂಗಗಳನ್ನು ಹೇಳಿರುವದು ಬೇರೆಯ ಗ್ರಂಥಗಳಲ್ಲಿ ಕಾಣಿಸಲಿಲ್ಲ. ವಿ. ೨೯ನ್ನು ನೋಡಿ.

**ಕಾಮಃ ಕ್ರೋಧಶ್ಚ ಲೋಭಶ್ಚ ಮದೋ ಮೋಹಶ್ಚ ಮತ್ಸರಃ ।**
**ನ ಜಿತಾಃ ಷಡಿಮೇ ಯೇನ ತಸ್ಯ ಶಾನ್ತಿರ್ನ ಸಿಧ್ಯತಿ ॥ ೧೦೧ ॥**

೧೦೧. ಕಾಮ, ಕ್ರೋಧ, ಲೋಭ, ಮದ, ಮೋಹ, ಮಾತ್ಸರ್ಯ– ಈ ಆರನ್ನೂ ಯಾವನು ಗೆದ್ದಿರುವದಿಲ್ಲವೋ ಅವನಿಗೆ ಶಾಂತಿಯು ಸಿದ್ಧಿಸುವದಿಲ್ಲ.

**ಶಬ್ದಾದಿವಿಷಯೇಭ್ಯೋ ಯೋ ವಿಷವನ್ನ ನಿವರ್ತತೇ ।**
**ತೀವ್ರಮೋಕ್ಷೇಚ್ಛಯಾ ಭಿಕ್ಷೋಸ್ತಸ್ಯ ಶಾನ್ತಿರ್ನ ಸಿಧ್ಯತಿ ॥ ೧೦೨ ॥**

೧೦೨. ಯಾವ ಸಂನ್ಯಾಸಿಯು ಶಬ್ದಾದಿವಿಷಯಗಳಿಂದ, ವಿಷದಿಂದ ಹಿಮ್ಮೆಟ್ಟುವಂತೆ– ಹಿಮ್ಮೆಟ್ಟುವದಿಲ್ಲವೋ ಅವನಿಗೆ ಶಾಂತಿಯು ಸಿದ್ಧಿಸುವದಿಲ್ಲ.

**ಯೇನ ನಾರಾಧಿತೋ ದೇವೋ ಯಸ್ಯ ನೋ ಗುರ್ವನುಗ್ರಹಃ ।**
**ನ ವಶ್ಯಂ ಹೃದಯಂ ಯಸ್ಯ ತಸ್ಯ ಶಾನ್ತಿರ್ನ ಸಿಧ್ಯತಿ ॥ ೧೦೩ ॥**

೧೦೩. ಯಾವನು ಪರಮೇಶ್ವರನನ್ನು ಆರಾಧಿಸಿಲ್ಲವೋ, ಯಾವಾತನಿಗೆ ಗುರುವಿನ ಅನುಗ್ರಹವಾಗಿಲ್ಲವೋ, ಯಾವನಿಗೆ ಹೃದಯವು ಅಳವಟ್ಟಿಲ್ಲವೋ ಅವನಿಗೆ ಶಾಂತಿಯು ಸಿದ್ಧಿಸುವದಿಲ್ಲ.

**ಮನಃಪ್ರಸಾದಸಿದ್ಧ್ಯರ್ಥಂ ಸಾಧನಂ ಶ್ರೂಯತಾಂ ಬುಧೈಃ ।**
**ಮನಃಪ್ರಸಾದೋ ಯತ್ಸತ್ತ್ವೇ ಯದಭಾವೇ ನ ಸಿಧ್ಯತಿ ॥ ೧೦೪ ॥**

೧೦೪. ಮನಸ್ಸಿನ ಪ್ರಸಾದವು[1] ಸಿದ್ಧಿಯಾಗುವದಕ್ಕೆ ಸಾಧನವನ್ನು (ಹೇಳುತ್ತೇನೆ) ವಿವೇಕಿಗಳು ಕೇಳಬೇಕು. ಆ (ಸಾಧನ)ವಿದ್ದರೆ ಮನಸ್ಸು ತಿಳಿಯಾಗಿರುವದು, ಅದಿಲ್ಲದಿದ್ದರೆ ಮನಃಪ್ರಸನ್ನತೆಯು ಸಿದ್ಧಿಸಲಾರದು.

**ಬ್ರಹ್ಮಚರ್ಯಮಹಿಂಸಾ ಚ ದಯಾ ಭೂತೇಷ್ವವಕ್ರತಾ ।**
**ವಿಷಯೇಷ್ವತಿವೈತೃಷ್ಣ್ಯಂ ಶೌಚಂ ದಮ್ಭವಿವರ್ಜನಮ್ ॥ ೧೦೫ ॥**
**ಸತ್ಯಂ ನಿರ್ಮಮತಾ ಸ್ಥೈರ್ಯಮಭಿಮಾನವಿಸರ್ಜನಮ್ ।**
**ಈಶ್ವರಧ್ಯಾನಪರತಾ ಬ್ರಹ್ಮವಿದ್ಭಿಃ ಸಹಸ್ಥಿತಿಃ ॥ ೧೦೬ ॥**
**ಜ್ಞಾನಶಾಸ್ತ್ರೈಕಪರತಾ ಸಮತಾ ಸುಖದುಃಖಯೋಃ ।**
**ಮಾನಾನಾಸಕ್ತಿರೇಕಾನ್ತಶೀಲತಾ ಚ ಮುಮುಕ್ಷುತಾ ॥ ೧೦೭ ॥**
**ಯಸ್ಯೈತದ್ವಿದ್ಯತೇ ಸರ್ವಂ ತಸ್ಯ ಚಿತ್ತಂ ಪ್ರಸೀದತಿ ।**
**ನ ತ್ವೇತದ್ಧರ್ಮಶೂನ್ಯಸ್ಯ ಪ್ರಕಾರಾನ್ತರಕೋಟಿಭಿಃ ॥ ೧೦೮ ॥**

---

1. ಶಮವೆಂದರೆ ಮನಃಪ್ರಸಾದವೇ ಎಂಬುದು ಗ್ರಂಥಕರ್ತರ ಅಭಿಪ್ರಾಯವೆಂಬುದು ಮುಂದೆ ೧೨೮ರಲ್ಲಿ ದಮದ ವಿವರಣೆಯನ್ನಾರಂಭಿಸಿರುವದರಿಂದ ಗೊತ್ತಾಗುತ್ತದೆ.

೧೦೫-೧೦೮. ಬ್ರಹ್ಮಚರ್ಯ, ಅಹಿಂಸೆ, ಪ್ರಾಣಿಗಳಲ್ಲಿ ದಯೆ, ವಕ್ರವಾದ ನಡೆಯಿಲ್ಲದಿರುವದು, ವಿಷಯಗಳಲ್ಲಿ ಹೆಚ್ಚಿನ ವೈರಾಗ್ಯ, ಶುಚಿಯಾಗಿರುವದು, ದಂಭವಿಲ್ಲದಿರುವದು, ಸತ್ಯ, ಮಮತ್ವವಿಲ್ಲದಿರುವದು, ಸ್ಥೈರ್ಯ, ಅಭಿಮಾನ ವಿಲ್ಲದಿರುವದು, ಈಶ್ವರಧ್ಯಾನದಲ್ಲಿ ತತ್ಪರನಾಗಿರುವದು, ಬ್ರಹ್ಮಜ್ಞಾನಿಗಳ ಸಹವಾಸ, ಜ್ಞಾನಶಾಸ್ತ್ರವೊಂದರಲ್ಲಿಯೇ ತಾತ್ಪರ್ಯವುಳ್ಳವನಾಗಿರುವದು, ಸುಖ ದುಃಖಗಳಲ್ಲಿ ಸಮವಾಗಿರುವದು, ಅಭಿಮಾನದಲ್ಲಿ ಆಸಕ್ತಿಯಿಲ್ಲದಿರುವದು, ಏಕಾಂತದಲ್ಲಿಯೇ ಸ್ವಭಾವದಿಂದ ಇದ್ದುಕೊಂಡಿರುವದು, ಮುಮುಕ್ಷುತ್ವ- ಇದೆಲ್ಲವೂ ಯಾವಾತನಿಗೆ ಇರುವದೋ ಅವನ ಮನಸ್ಸು ಪ್ರಸನ್ನವಾಗಿರುತ್ತದೆ ; ಈ ಗುಣಗಳಿಲ್ಲದವನಿಗೆ ಬೇರೆಯ ಕೋಟಿ ಗುಣಗಳಿದ್ದರೂ ಪ್ರಸನ್ನವಾಗಲಾರದು.

**ಸ್ಮರಣಂ ದರ್ಶನಂ ಸ್ತ್ರೀಣಾಂ ಗುಣಕರ್ಮಾನುಕೀರ್ತನಮ್ ।**
**ಸಮೀಚೀನತ್ವಧೀಸ್ತಾಸು ಪ್ರೀತಿಃ ಸಂಭಾಷಣಂ ಮಿಥಃ ॥ ೧೦೯ ॥**
**ಸಹವಾಸಶ್ಚ ಸಂಸರ್ಗೋಽಷ್ಟಧಾ ಮೈಥುನಂ ವಿದುಃ ।**
**ಏತದ್ವಿಲಕ್ಷಣಂ ಬ್ರಹ್ಮಚರ್ಯಂ ಚಿತ್ತಪ್ರಸಾದಕಮ್ ॥ ೧೧೦ ॥**

೧೦೯-೧೧೦. ಸ್ತ್ರೀಯರನ್ನು ಸ್ಮರಿಸಿಕೊಳ್ಳುತ್ತಿರುವದು, ನೋಡುವದು, (ಅವರ) ಗುಣಗಳನ್ನೂ ಕರ್ಮಗಳನ್ನೂ ಹೊಗಳುತ್ತಿರುವದು, ಅವರು ಉತ್ತಮ ರೆಂದು ತಿಳಿದಿರುವದು, ಅವರಲ್ಲಿ ಪ್ರೇಮ, ಗುಟ್ಟಿನಲ್ಲಿ ಮಾತನಾಡುವದು, ಅವ ರೊಡನೆ ವಾಸಮಾಡುವದು, ಅವರೊಡನೆ ಬೆರೆಯುವದು- ಹೀಗೆ ಮೈಥುನವು ಎಂಟು ಬಗೆ ಎಂದು ಬಲ್ಲವರ ಮತ. ಈ ಮೈಥುನಕ್ಕೆ ವಿಲಕ್ಷಣವಾದ ನಡತೆಯೇ ಮನಸ್ಸಿನ ಪ್ರಸನ್ನತೆಗೆ ಕಾರಣವಾಗಿರುವ **ಬ್ರಹ್ಮಚರ್ಯವು.**

**ಅಹಿಂಸಾ ವಾಙ್ಮನಃಕಾಯೈಃ ಪ್ರಾಣಿಮಾತ್ರಾಪ್ರಪೀಡನಮ್ ।**
**ಸ್ವಾತ್ಮವತ್ಸರ್ವಭೂತೇಷು ಕಾಯೇನ ಮನಸಾ ಗಿರಾ ॥ ೧೧೧ ॥**

೧೧೧. ಎಲ್ಲಾ ಪ್ರಾಣಿಗಳನ್ನೂ ತನ್ನಂತೆ ಎಂದು ತಿಳಿದು ವಾಕ್ಕು, ಮನಸ್ಸು, ಶರೀರ- ಇವುಗಳಿಂದ ಯಾವ ಪ್ರಾಣಿಯನ್ನೂ ಹಿಂಸಿಸದೆ ಇರುವದು **ಅಹಿಂಸೆ.**

**ಅನುಕಮ್ಪಾ ದಯಾ ಸೈವ ಪ್ರೋಕ್ತಾ ವೇದಾನ್ತವೇದಿಭಿಃ ।**
**ಕರಣತ್ರಿತಯೇಷ್ವೇ[1] ಕರೂಪತಾವಕ್ರತಾ ಮತಾ ॥ ೧೧೨ ॥**

೧೧೨. ಮರುಕವಿದೆಯಲ್ಲ, ಅದೇ **ದಯೆ** ಎಂದು ವೇದಾಂತವನ್ನು ಬಲ್ಲವರು ಹೇಳುತ್ತಾರೆ. (ವಾಙ್ಮನಃಕಾಯಗಳೆಂಬ) ಕರಣತ್ರಯದಲ್ಲಿ ಒಂದೇ ಸಮನಾಗಿರುವದು **ಅವಕ್ರತೆ**ಯೆನಿಸುವದು.

**ಬ್ರಹ್ಮಾದಿಸ್ಥಾವರಾನ್ತೇಷು ವೈರಾಗ್ಯಂ ವಿಷಯೇಷ್ವನು ।**
**ಯಥೈವ ಕಾಕವಿಷ್ಠಾಯಾಂ ವೈರಾಗ್ಯಂ ತದ್ಧಿ ನಿರ್ಮಲಮ್ ॥ ೧೧೩ ॥**

---

1. ಇಲ್ಲಿ ಬಹುವಚನವು ಅವಶ್ಯವಿಲ್ಲ.

೧೧೩. ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಯವರೆಗಿನ ವಿಷಯಗಳಲ್ಲಿ-ಕಾಗೆಯ ಹೇಸಿಕೆಯಲ್ಲಿ ಹೇಗೋ ಹಾಗೆ ಬೇಸರವಿರುವದೇ ನಿರ್ಮಲವಾದ **ವೈರಾಗ್ಯವು.**[1]

**ಬಾಹ್ಯಮಾಭ್ಯನ್ತರಂ ಚೇತಿ ದ್ವಿವಿಧಂ ಶೌಚಮುಚ್ಯತೇ ।**
**ಮೃಜ್ಜಲಾಭ್ಯಾಂ ಕೃತಂ ಶೌಚಂ ಬಾಹ್ಯಂ ಶಾರೀರಕಂ ಸ್ಮೃತಮ್॥೧೧೪**
**ಅಜ್ಞಾನದೂರೀಕರಣಂ ಮಾನಸಂ ಶೌಚಮಾನ್ತರಮ್ ।**
**ಅನ್ತಃಶೌಚೇ ಸ್ಥಿತೇ ಸಮ್ಯಗ್ಬಾಹ್ಯಂ ನಾವಶ್ಯಕಂ ನೃಣಾಮ್ ॥ ೧೧೫ ॥**

೧೧೪-೧೧೫. ಶುಚಿತ್ವವು ಹೊರಗಿನದು, ಒಳಗಿನದು –ಎಂದು ಎರಡು ಬಗೆ. ಮಣ್ಣುನೀರುಗಳಿಂದ ಮಾಡಲಾಗುವ ಶರೀರದ ಶುಚಿತ್ವವೇ **ಬಾಹ್ಯ ಶೌಚವು.** ಅಜ್ಞಾನವನ್ನು ದೂರಕ್ಕೆ ಕಳುಹಿಸುವ[2] ಮನಸ್ಸಿನ ಶುಚಿತ್ವವೇ **ಆನ್ತರಶೌಚವು.** ಸರಿಯಾದ ಒಳಗಿನ ಶುಚಿತ್ವವಿರುವಲ್ಲಿ ಜನರಿಗೆ ಹೊರಗಿನ ಶುಚಿತ್ವವು ಆವಶ್ಯವಲ್ಲ.

**ಧ್ಯಾನಪೂಜಾದಿಕಂ ಲೋಕೇ ದ್ರಷ್ಟ್ವರ್ಯೇವ ಕರೋತಿ ಯಃ ।**
**ಪಾರಮಾರ್ಥಿಕಧೀಹೀನಃ ಸ ದಮ್ಭಾಚಾರ ಉಚ್ಯತೇ ॥ ೧೧೬ ॥**
**ಪುಂಸಸ್ತಥಾನಾಚರಣಮದಮ್ಭಿತ್ವಂ ವಿದುರ್ಬುಧಾಃ ॥೧೧೬-೧/೨ ॥**

೧೧೬-೧೧೬-೧/೨. ಧ್ಯಾನ, ಪೂಜೆ-ಮುಂತಾದವನ್ನು ಜನವು ನೋಡುತ್ತಿದ್ದರೆ ಯಾವನು ಮಾಡುವನೋ, ಪಾರಮಾರ್ಥಿಕಬುದ್ಧಿಯಿಲ್ಲದ ಅಂಥವನು ದಂಭಾಚಾರ ದವನೆನಿಸುತ್ತಾನೆ. ಮನುಷ್ಯನು ಹಾಗೆ ಆಚರಿಸದಿರುವದೇ **ಅದಂಭಿತ್ವವೆಂದು** ಬಲ್ಲವರು ತಿಳಿಯುವರು.

**ಯತ್ಸ್ವೇನ ದೃಷ್ಟಂ ಸಮ್ಯಕ್ಚ ಶ್ರುತಂ ತಸ್ಯೈವ ಭಾಷಣಮ್ ।**
**ಸತ್ಯಮಿತ್ಯುಚ್ಯತೇ ಬ್ರಹ್ಮ ಸತ್ಯಮಿತ್ಯಭಿಭಾಷಣಮ್ ॥ ೧೧೭ ॥**

೧೧೭. ತಾನು ನೋಡಿದ್ದು, ಮತ್ತು ಚೆನ್ನಾಗಿ ಕೇಳಿದ್ದು- ಇದನ್ನೇ ಹೇಳುವದು, ಬ್ರಹ್ಮವೇ ಸತ್ಯವು ಎನ್ನುವದು- ಇದನ್ನು ಸತ್ಯವೆನ್ನುವರು.

**ದೇಹಾದಿಷು ಸ್ವಕೀಯತ್ವದೃಢಬುದ್ಧಿವಿಸರ್ಜನಮ್ ।**
**ನಿರ್ಮಮತ್ವಂ ಸ್ಮೃತಂ ಯೇನ ಕೈವಲ್ಯಂ ಲಭತೇ ಬುಧಃ ॥ ೧೧೮ ॥**

---

1. ಅಪರೋಕ್ಷಾನುಭೂತಿಯಲ್ಲಿ ೪ನೆಯ ಶ್ಲೋಕವಿದು. 'ಅತಿವೈತೃಷ್ಣ್ಯಮ್' ಎಂದು ೧೦೫ರಲ್ಲಿ ಹೇಳಿದ್ದರ ವಿವರವಿದೆಂಬುದು ಕಾಣುತ್ತದೆ.

2. ರಾಗದ್ವೇಷಾದಿಗಳಿಲ್ಲದಿರುವದೇ ಅಂತಃಶೌಚವೆಂದು ಗೀ.ಭಾ. ೧೩-೭.

೧೧೮. ದೇಹಾದಿಗಳಲ್ಲಿ ನನ್ನವು ಎಂಬ ಗಟ್ಟಿಬುದ್ಧಿಯನ್ನು ಬಿಡುವದೇ **ನಿರ್ಮಮತ್ವ**ವೆನಿಸುವದು. ವಿವೇಕಿಯಾದವನಿಗೆ ಅದರಿಂದ **ಮೋಕ್ಷವು** ದೊರಕುತ್ತದೆ.

**ಗುರುವೇದಾನ್ತವಚನೈರ್ನಿಶ್ಚಿತಾರ್ಥೇ ದೃಢಸ್ಥಿತಿಃ ।**
**ತದೇಕವೃತ್ತ್ಯಾ ತತ್ಸ್ಥೈರ್ಯಂ ನೈಶ್ಚಲ್ಯಂ ನ ತು ವರ್ಷ್ಮಣಃ ॥ ೧೧೯ ॥**

೧೧೯. ಗುರು, ವೇದಾಂತಗಳು- ಇವುಗಳ ವಚನಗಳಿಂದ ನಿಶ್ಚಯಿಸಿಕೊಂಡ ವಿಷಯದಲ್ಲಿ ಭದ್ರವಾಗಿ ಅದೇ ಮನಸ್ಸಿನಿಂದ ನಿಂತಿರುವದೇ **ಸ್ಥೈರ್ಯವು,** ಶರೀರವನ್ನು ಅಲುಗಾಡಿಸದೆ ಇದ್ದುಕೊಂಡಿರುವದಲ್ಲ.

**ವಿದ್ಯೈಶ್ವರ್ಯತಪೋರೂಪಕುಲವರ್ಣಾಶ್ರಮಾದಿಭಿಃ ।**
**ಸಂಜಾತಾಹಂಕೃತಿತ್ಯಾಗಸ್ತ್ವಭಿಮಾನವಿಸರ್ಜನಮ್ ॥ ೧೨೦ ॥**

೧೨೦. ವಿದ್ಯೆ, ಐಶ್ವರ್ಯ, ತಪಸ್ಸು, ರೂಪ, ಕುಲ, ವರ್ಣ, ಆಶ್ರಮ- ಇವೇ ಮುಂತಾದವುಗಳಿಂದ ಹುಟ್ಟುವ ಹೆಮ್ಮೆಯ ತ್ಯಾಗವೇ **ಅಭಿಮಾನತ್ಯಾಗವು.**

**ತ್ರಿಭಿಶ್ಚ ಕರಣೈಃ ಸಮ್ಯಗ್ಘಿತ್ವಾ ವೈಷಯಿಕೀಂ ಕ್ರಿಯಾಮ್ ।**
**ಸ್ವಾತ್ಮೈಕಚಿನ್ತನಂ ಯತ್ತದೀಶ್ವರಧ್ಯಾನಮೀರಿತಮ್ ॥ ೧೨೧ ॥**

೧೨೧. ತ್ರಿಕರಣಗಳಿಂದ ವಿಷಯಗಳಲ್ಲಿ ತೊಳಲುವದನ್ನು ಸಂಪೂರ್ಣವಾಗಿ ಬಿಟ್ಟು ತನ್ನ ಆತ್ಮನೊಬ್ಬನನ್ನೇ ಚಿಂತಿಸುತ್ತಿರುವದು ಯಾವದಿದೆಯೋ ಅದು **ಈಶ್ವರಧ್ಯಾನವು.**

**ಛಾಯೇವ ಸರ್ವದಾ ವಾಸೋ ಬ್ರಹ್ಮವಿದ್ಭಿಃ ಸಹ ಸ್ಥಿತಿಃ ।**
**ಯದ್ಯದುಕ್ತಂ ಜ್ಞಾನಶಾಸ್ತ್ರೇ ಶ್ರವಣಾದಿಕಮೇಷು ಯಃ ॥**
**ನಿರತಃ ಕರ್ಮಧೀಹೀನಃ ಜ್ಞಾನನಿಷ್ಠಃ ಸ ಏವ ಹಿ ॥ ೧೨೩ ॥**[1]

೧೨೩. ನೆರಳಿನಂತೆ ಯಾವಾಗಲೂ (ಜೊತೆಯಲ್ಲಿರುವದೇ) **ಬ್ರಹ್ಮಜ್ಞಾನಿಗಳ ಸಹವಾಸವು.** ಯಾವನು (ವೇದಾಂತ)ಜ್ಞಾನಶಾಸ್ತ್ರದಲ್ಲಿ ಶ್ರವಣವೇ ಮುಂತಾದ ಯಾವಯಾವ (ಸಾಧನ)ಗಳನ್ನು ಹೇಳಿದೆಯೋ ಅವುಗಳಲ್ಲಿಯೇ ನಿರತನಾಗಿ ಕರ್ಮಬುದ್ಧಿಯನ್ನು ಬಿಟ್ಟಿರುವನೋ ಆತನೇ ಜ್ಞಾನನಿಷ್ಠನು.[2]

---

1. ಹಿಂದೆ ೧೧೬ ೧/೨ ನೆಯ ಅರ್ಧಶ್ಲೋಕಕ್ಕೆ ಈ ಸಾಲು ಸೇರಿದರೆ ಒಂದು ಪೂರ್ಣಶ್ಲೋಕ.

2. 'ಜ್ಞಾನಶಾಸ್ತ್ರೈಕಪರತೆ' ಎಂದು ೧೦೭ರಲ್ಲಿ ಹೇಳಿದ್ದನ್ನೇ ಇಲ್ಲಿ ಜ್ಞಾನನಿಷ್ಠೆ ಎಂದು ಕರೆದಿವೆ ಎಂಬುದು ಸ್ಪಷ್ಟ.

**ಧನಕಾನ್ತಾಜ್ವರಾದೀನಾಂ ಪ್ರಾಪ್ತಕಾಲೇ ಸುಖಾದಿಭಿಃ ।**
**ವಿಕಾರಹೀನತ್ವೈವ ಸ್ಯಾತ್ ಸುಖದುಃಖಸಮಾನತಾ ॥ ೧೨೪ ॥**

೧೨೪. ಆಯಾ ಕಾಲದಲ್ಲಿ ಬಂದೊದಗಿದ ಹೊನ್ನು, ಹೆಣ್ಣು, ಜ್ವರ-ಮುಂತಾದವುಗಳಿಂದುಂಟಾಗುವ ಸುಖಾದಿಗಳಿಂದ ವಿಕಾರವನ್ನು ಹೊಂದದೆ ಇರುವದೇ **ಸುಖದುಃಖಸಮತೆ.**

**ಶ್ರೇಷ್ಠಂ ಪೂಜ್ಯಂ ವಿದಿತ್ವಾ ಮಾಂ ಮಾನಯನ್ತು ಜನಾ ಭುವಿ ।**
**ಇತ್ಯಾಸಕ್ತ್ಯಾ ವಿಹೀನತ್ವಂ ಮಾನಾನಾಸಕ್ತಿರುಚ್ಯತೇ ॥ ೧೨೫ ॥**

೧೨೫. ಭೂಮಿಯಮೇಲಿನ ಜನರು ಶ್ರೇಷ್ಠನೆಂದೂ ಪೂಜ್ಯನೆಂದೂ ಭಾವಿಸಿ ನನ್ನನ್ನು ಗೌರವಿಸಲಿ ಎಂಬ ಆಸಕ್ತಿಯಿಲ್ಲದಿರುವದೇ **ಮಾನಾನಾಸಕ್ತಿ** ಎನಿಸುತ್ತದೆ.

**ಸಚ್ಚಿನ್ತನಸ್ಯ ಸಂಬಾಧೋ ವಿಘ್ನೋಽಯಂ ನಿರ್ಜನೇ ತತಃ ।**
**ಸ್ಥೇಯಮಿತ್ಯೇಕ ಏವಾಸ್ತಿ ಚೇತ್ ಸೈವೈಕಾನ್ತಶೀಲತಾ ॥ ೧೨೬ ॥**

೧೨೬. (ಈ ಜನಸಂದಣಿಯು) ಬ್ರಹ್ಮಚಿಂತನೆಗೆ ವಿಘ್ನವು ; ಆದ್ದರಿಂದ ನಿರ್ಜನಪ್ರದೇಶದಲ್ಲಿ ಇರಬೇಕು- **ಎಂದು ಒಬ್ಬನೇ** ಇರುವನಾದರೆ, ಅದೇ **ಏಕಾಂತಶೀಲತೆ.**[1]

## (೪) ಮುಮುಕ್ಷುತ್ವ

**ಸಂಸಾರಬನ್ಧನಿರ್ಮುಕ್ತಿಃ ಕದಾ ಝಟಿತಿ ಮೇ ಭವೇತ್ ।**[2]
**ಇತಿ ಯಾ ಸುದೃಢಾ ಬುದ್ಧಿರೀರಿತಾ ಸಾ ಮುಮುಕ್ಷುತಾ ॥ ೧೨೭ ॥**

೧೨೭. ಸಂಸಾರಬಂಧದಿಂದ ನನಗೆ ಯಾವಾಗ ಬೇಗನೆ ಬಿಡುಗಡೆಯಾದೀತೊ ! -ಎಂಬ ಬಲವಾದ ಬುದ್ಧಿಯೇ **ಮುಮುಕ್ಷುತ್ವ**ವೆನಿಸುತ್ತದೆ.

## ಶಮದಮಾದಿಗಳು

**ಬ್ರಹ್ಮಚರ್ಯಾದಿಭಿರ್ಧರ್ಮೈರ್ಬುದ್ಧೇರ್ದೋಷನಿವೃತ್ತಯೇ ।**
**ದಣ್ಡನಂ ದಮ ಇತ್ಯಾಹುರ್ದಮಶಬ್ದಾರ್ಥಕೋವಿದಾಃ ॥ ೧೨೮ ॥**

೧೨೮. ಅಂತಃಕರಣದ **ದೋಷ**ಗಳನ್ನು ಹೋಗಲಾಡಿಸಿಕೊಳ್ಳುವದಕ್ಕಾಗಿ ಬ್ರಹ್ಮಚರ್ಯವೇ ಮುಂತಾದ ಸಾಧನಗಳಿಂದ (ಅದನ್ನು) ದಂಡಿಸುವದೇ **ದಮ**ವೆಂದು **ದಮ**ಶಬ್ದದ ಅರ್ಥವನ್ನು ಬಲ್ಲವರು ಹೇಳುವರು.

---

1. ಇಲ್ಲಿಗೆ ಶಮ(ಮನಃಪ್ರಸಾದ)ದ ಸಾಧನಗಳು ಅಥವಾ ಗುರುತುಗಳು ಮುಗಿದಂತೆ ಆಯಿತು.
2. ಅಪರೋಕ್ಷಾನುಭೂತಿ ೯ನೆಯ ಶ್ಲೋಕವನ್ನು ನೋಡಿ.

ತತ್ತದ್ವೃತ್ತಿನಿರೋಧೇನ ಬಾಹ್ಯೇನ್ದ್ರಿಯವಿನಿಗ್ರಹಃ ।
ಯೋಗಿನೋ ದಮ ಇತ್ಯಾಹುರ್ಮನಸಃ ಶಾನ್ತಿಸಾಧನಮ್ ॥ ೧೨೯ ॥

೧೨೯. ಆಯಾ ವೃತ್ತಿಯನ್ನು ತಡೆಗಟ್ಟುವದರಿಂದ ಹೊರಗಿನ ಇಂದ್ರಿಯುಗಳನ್ನು ಹಿಡಿತದಲ್ಲಿಡುವದೇ ಮನಸ್ಸಿನ ಶಾಂತಿಗೆ ಕಾರಣವಾದ ದಮವೆಂದು ಯೋಗಿಗಳು ಹೇಳುತ್ತಾರೆ.

ಇನ್ದ್ರಿಯೇಷ್ವಿನ್ದ್ರಿಯಾರ್ಥೇಷು ಪ್ರವೃತ್ತೇಷು ಯದೃಚ್ಛಯಾ ।
ಅನುಧಾವತಿ ತಾನ್ಯೇವ ಮನೋ ವಾಯುಮಿವಾನಲಃ ॥ ೧೩೦ ॥
ಇನ್ದ್ರಿಯೇಷು ನಿರುದ್ಧೇಷು ತ್ಯಕ್ತ್ವಾ ವೇಗಂ ಮನಃ ಸ್ವಯಮ್ ।
ಸತ್ತ್ವಭಾವಮುಪಾದತ್ತೇ ಪ್ರಸಾದಸ್ತೇನ ಜಾಯತೇ ॥ ೧೩೧ ॥
ಪ್ರಸನ್ನೇ ಸತಿ ಚಿತ್ತೇಽಸ್ಯ ಮುಕ್ತಿಃ ಸಿಧ್ಯತಿ ನಾನ್ಯಥಾ ॥ ೧೩೧½ ॥

೧೩೧½ ಇಂದ್ರಿಯಗಳು ಆಕಸ್ಮಿಕವಾಗಿ ಆಯಾ ವಿಷಯಗಳಲ್ಲಿ ತೊಡಗಿರುವಲ್ಲಿ ಬೆಂಕಿಯು ಗಾಳಿಯನ್ನು ಹಿಂಬಾಲಿಸುವಂತೆ ಅವುಗಳನ್ನೇ ಮನಸ್ಸು ಹಿಂಬಾಲಿಸುತ್ತದೆ. ಇಂದ್ರಿಯಗಳನ್ನು ಬಿಗಿಹಿಡಿದರೆ ಮನಸ್ಸು ತಾನೂ ವೇಗವನ್ನು ಬಿಟ್ಟು ಸತ್ತ್ವ(ಗುಣದ ಸ್ವ)ಭಾವವನ್ನು ಹೊಂದುತ್ತದೆ; ಅದರಿಂದ ಮನಸ್ಸು ತಿಳಿಯಾಗುತ್ತದೆ. ಈ (ಸಾಧಕನ) ಮನಸ್ಸು ತಿಳಿಯಾದರೇ ಮುಕ್ತಿಯು ವಶವಾಗುವದೇ ಹೊರತು ಬೇರೆ ಯಾವದರಿಂದಲೂ (ವಶವಾಗ)ಲಾರದು.

ಮನಃಪ್ರಸಾದಸ್ಯ ನಿದಾನಮೇವ
ನಿರೋಧನಂ ಯತ್ಸಕಲೇನ್ದ್ರಿಯಾಣಾಮ್ ।
ಬಾಹ್ಯೇನ್ದ್ರಿಯೇ ಸಾಧು ನಿರುಧ್ಯಮಾನೇ
ಬಾಹ್ಯಾರ್ಥಭೋಗೋ ಮನಸೋ ವಿಯುಜ್ಯತೇ ॥ ೧೩೨ ॥

೧೩೨. ಮನಸ್ಸು ಪ್ರಸನ್ನವಾಗುವದಕ್ಕೆ ಸರ್ವೇಂದ್ರಿಯಗಳನ್ನೂ ತಡೆಗಟ್ಟುವದೆಂಬುದೇ ಸಾಧನ, ಹೊರಗಿನ ಇಂದ್ರಿಯವನ್ನು ಚೆನ್ನಾಗಿ ತಡೆಗಟ್ಟಿದರೆ ಹೊರಗಿನ ವಿಷಯದ ಭೋಗವು ಮನಸ್ಸಿಗೆ ತಪ್ಪಿಹೋಗುತ್ತದೆ.

ತೇನ ಸ್ವದೌಷ್ಟ್ಯಂ ಪರಿಮುಚ್ಯ ಚಿತ್ತಂ
ಶನೈಃ ಶನೈಃ ಶಾನ್ತಿಮುಪಾದದಾತಿ ।
ಚಿತ್ತಸ್ಯ ಬಾಹ್ಯಾರ್ಥವಿಮೋಕ್ಷಮೇವ
ಮೋಕ್ಷಂ ವಿದುರ್ಮೋಕ್ಷಣಲಕ್ಷಣಜ್ಞಾಃ ॥ ೧೩೩ ॥

೧೩೩. ಅದರಿಂದ ಮನಸ್ಸು ತನ್ನ ದುಷ್ಟಸ್ವಭಾವವನ್ನು ಬಿಟ್ಟು ಮೆಲ್ಲಮೆಲ್ಲಗೆ ಶಾಂತಿಯನ್ನು ಹೊಂದುತ್ತದೆ. ಮನಸ್ಸು ಹೊರಗಿನ ವಿಷಯಗಳನ್ನು ಬಿಟ್ಟುಬಿಡುವದೇ 'ಮೋಕ್ಷವು' ಎಂದು ಮೋಕ್ಷಲಕ್ಷಣವನ್ನು ಬಲ್ಲವರು ಹೇಳುತ್ತಾರೆ.

ದಮಂ ವಿನಾ ಸಾಧು ಮನಃಪ್ರಸಾದ-
ಹೇತುಂ ನ ವಿದ್ಮಃ ಸುಕರಂ ಮುಮುಕ್ಷೋಃ ।
ದಮೇನ ಚಿತ್ತಂ ನಿಜದೋಷಜಾತಂ
ವಿಸೃಜ್ಯ ಶಾನ್ತಿಂ ಸಮುಪೈತಿ ಶೀಘ್ರಮ್ ॥ ೧೩೪ ॥

೧೩೪. ಮುಮುಕ್ಷುವಿಗೆ ಮನಸ್ಸು ಪ್ರಸನ್ನವಾಗುವದಕ್ಕೆ ದಮವನ್ನು ಬಿಟ್ಟರೆ ಮತ್ತೊಂದು ಸುಲಭವಾದ ಉತ್ತಮಸಾಧನವನ್ನು ನಾವರಿಯೆವು. ದಮದಿಂದ ಮನಸ್ಸು ತನ್ನ ದೋಷಸಮೂಹವನ್ನು ಬಿಟ್ಟು ಬೇಗನೆ ಶಾಂತಿಯನ್ನು ಹೊಂದುವದು.

ಪ್ರಾಣಾಯಾಮಾದ್ ಭವತಿ ಮನಸೋ ನಿಶ್ಚಲತ್ವಂ ಪ್ರಸಾದೋ
ಯಸ್ಯಾಪ್ಯಸ್ಯ ಪ್ರತಿನಿಯತದಿಗ್ದೇಶಕಾಲಾದ್ಯವೇಕ್ಷ್ಯ ।
ಸಮ್ಯಗ್ದೃಷ್ಟ್ಯಾ ಕ್ವಚಿದಪಿ ತಯಾ ನೋ ದಮೋ ಹನ್ಯತೇ ತ-
ತ್ಕಾರ್ಯಾದ್ಧೀಮಾನ್ ದಮಮನಲಸಶ್ಚಿತ್ತಶಾನ್ತ್ಯೈ ಪ್ರಯತ್ನಾತ್ ॥

೧೩೫. ಯಾವನಿಗೆ ಪ್ರಾಣಾಯಾಮದಿಂದ ಮನಸ್ಸಿಗೆ ನಿಶ್ಚಲತೆಯೂ ಪ್ರಸನ್ನತೆಯೂ ಉಂಟಾಗುತ್ತದೆಯೋ, ಯಾವನಿಗೆ ಕೆಲವು ಸಂದರ್ಭಗಳಲ್ಲಿ ಗೊತ್ತಾದ ದಿಕ್ಕು, ದೇಶ, ಕಾಲ- ಮುಂತಾದವುಗಳ ಅಪೇಕ್ಷೆಯಿಂದಾದ ಸಮ್ಯಗ್ದೃಷ್ಟಿಯಿಂದ (ಉಪಾಸನೆಯಿಂದ ಆಗುವದೋ), ಅದರಿಂದ ದಮವೇನೂ ನಾಶವಾಗುವದಿಲ್ಲ. ಆದ್ದರಿಂದ ವಿವೇಕಿಯಾದವನು ಆಲಸ್ಯವನ್ನು ಬಿಟ್ಟು ಮನಃಶಾಂತಿಗಾಗಿ ಪ್ರಯತ್ನದಿಂದ ದಮವನ್ನು ಮಾಡಿಕೊಳ್ಳಬೇಕು[1] (?).

ಸರ್ವೇನ್ದ್ರಿಯಾಣಾಂ ಗತಿನಿಗ್ರಹೇಣ
ಭೋಗ್ಯೇಷು ದೋಷಾದ್ಯವಮರ್ಶನೇನ ।
ಈಶಪ್ರಸಾದಾಚ್ಚ ಗುರೋಃ ಪ್ರಸಾದಾ-
ಚ್ಛಾನ್ತಿಂ ಸಮಾಯಾತ್ಯಚಿರೇಣ ಚಿತ್ತಮ್ ॥ ೧೩೬ ॥

೧೩೬. ಎಲ್ಲಾ ಇಂದ್ರಿಯಗಳ ವ್ಯಾಪಾರವನ್ನು ಬಿಗಿಹಿಡಿಯುವದರಿಂದಲೂ ಭೋಗ್ಯ(ವಸ್ತು)ಗಳಲ್ಲಿ(ರುವ) ದೋಷವೇ ಮುಂತಾದವುಗಳನ್ನು ಮನಸ್ಸಿನಲ್ಲಿ ಹೊರಳಾಡಿಸುವದರಿಂದಲೂ ಈಶ್ವರನ ಪ್ರಸಾದದಿಂದಲೂ ಗುರುವಿನ ಪ್ರಸಾದದಿಂದಲೂ ಮನಸ್ಸು ಬೇಗನೆ ಶಾಂತಿಯನ್ನು ಪಡೆಯುತ್ತದೆ.

ಆಧ್ಯಾತ್ಮಿಕಾದಿ ಯದ್ದುಃಖಂ ಪ್ರಾಪ್ತಂ ಪ್ರಾರಬ್ಧವೇಗತಃ ।
ಅಚಿನ್ತಯಾ ತತ್ಸಹನಂ ತಿತಿಕ್ಷೇತಿ ನಿಗದ್ಯತೇ ॥ ೧೩೭ ॥

1. ಶ್ಲೋಕದ ಅರ್ಥವನ್ನು ಇದ್ದಂತೆ ಹೇಗೋ ಹೊಂದಿಸಿ ಕನ್ನಡದಲ್ಲಿಟ್ಟಿರುತ್ತೇವೆ. ಶ್ಲೋಕದ ಅಕ್ಷರನ್ಯಾಸವು ಏನೋ ತಪ್ಪಿಹೋಗಿದೆ ಎಂದು ಕಾಣುತ್ತದೆ.

೧೩೭. ಪ್ರಾರಬ್ಧದ ವೇಗದಿಂದ ಆಧ್ಯಾತ್ಮಿಕವೇ ಮುಂತಾದ ಯಾವ ಯಾವ ದುಃಖವು ಪ್ರಾಪ್ತವಾಗುವದೋ ಅದನ್ನು ಚಿಂತಿಸದೆ ಸಹಿಸಿಕೊಳ್ಳುವದು ತಿತಿಕ್ಷೆ ಎನಿಸುವದು.

**ರಕ್ಷಾ ತಿತಿಕ್ಷಾಸದೃಶೀ ಮುಮುಕ್ಷೋ-**
**ರ್ನ ವಿದ್ಯತೇಽಸೌ ಪವಿನಾ ನ ಭಿದ್ಯತೇ ।**
**ಯಾಮೇವ ಧೀರಾಃ ಕವಚೀವ ವಿಘ್ನಾನ್**
**ಸರ್ವಾಂಸ್ತೃಣೀಕೃತ್ಯ ಜಯನ್ತಿ ಮಾಯಾಮ್ ॥೧೩೮॥**

೧೩೮. ಮುಮುಕ್ಷುವಿಗೆ ತಿತಿಕ್ಷೆಗೆ ಸಮನಾದ ರಕ್ಷಾಸಾಧನವು ಮತ್ತೊಂದಿಲ್ಲ. ಅದನ್ನು ವಜ್ರಾಯುಧವು ಕೂಡ ಭೇದಿಸಲಾರದು. (ರಕ್ಷಾ)ಕವಚವನ್ನು ಧರಿಸಿರುವವನಂತೆ, ಆ (ತಿತಿಕ್ಷೆಯನ್ನು ಧರಿಸಿದ)[1] ಧೀರರು ವಿಘ್ನಗಳನ್ನೆಲ್ಲ ಹುಲ್ಲಿಗಿಂತ ಕಡೆಯಾಗಿ ಕಂಡು ಮಾಯೆಯನ್ನು ಗೆದ್ದುಕೊಳ್ಳುವರು.

**ಕ್ಷಮಾವತಾಮೇವ ಹಿ ಯೋಗಸಿದ್ಧಿ**
**ಸ್ವಾರಾಜ್ಯಲಕ್ಷ್ಮೀಸುಖಭೋಗಸಿದ್ಧಿಃ ।**
**ಕ್ಷಮಾವಿಹೀನಾ ನಿಪತನ್ತಿ ವಿಘ್ನೈ-**
**ರ್ವಾತೈರ್ಹತಾಃ ಪರ್ಣಚಯಾ ಇವ ದ್ರುಮಾತ್ ॥ ೧೩೯ ॥**

೧೩೯. ಸಹನಶೀಲರಿಗೇ ಯೋಗವು ಸಿದ್ಧಿಸುತ್ತದೆ, ಸ್ವಾರಾಜ್ಯ(ಮೋಕ್ಷ) ಲಕ್ಷ್ಮಿಯ ಸುಖದ ಭೋಗವು ಸಿದ್ಧಿಸುತ್ತದೆ. ಸಹನೆಯಿಲ್ಲದವರು- ಗಾಳಿಗಳ ಹೊಡೆತಕ್ಕೆ ಎಲೆಗಳ ರಾಶಿಗಳು ಮರದಿಂದ ಉದುರಿಬೀಳುವಂತೆ- ವಿಘ್ನಗಳಿಂದ ಉದುರಿಬೀಳುತ್ತಾರೆ.

**ತಿತಿಕ್ಷಯಾ ತಪೋ ದಾನಂ ಯಜ್ಞಸ್ತೀರ್ಥಂ ವ್ರತಂ ಶ್ರುತಮ್ ।**
**ಭೂತಿಃ ಸ್ವರ್ಗೋಽಪವರ್ಗಶ್ಚ ಪ್ರಾಪ್ಯತೇ ತತ್ತದರ್ಥಿಭಿಃ ॥ ೧೪೦ ॥**

೧೪೦. ತಪಸ್ಸು, ದಾನ, ಯಜ್ಞ, ತೀರ್ಥ, ವ್ರತ, ವಿದ್ಯೆ, ಐಶ್ವರ್ಯ, ಸ್ವರ್ಗ, ಮೋಕ್ಷ- ಇವುಗಳು ಯಾವದನ್ನಾದರೂ ಬಯಸುವವರು ತಿತಿಕ್ಷೆಯಿಂದಲೇ ಅದದನ್ನು ಪಡೆದುಕೊಳ್ಳುತ್ತಾರೆ.

**ಬ್ರಹ್ಮಚರ್ಯಮಹಿಂಸಾ ಚ ಸಾಧೂನಾಮಪ್ಯಗರ್ಹಣಮ್ ।**
**ಪರಾಕ್ಷೇಪಾದಿಸಹನಂ ತಿತಿಕ್ಷೋರೇವ ಸಿಧ್ಯತಿ ॥ ೧೪೧ ॥**

೧೪೧. ಬ್ರಹ್ಮಚರ್ಯ, ಅಹಿಂಸೆ, ಸಾಧುಜನರನ್ನು ನಿಂದಿಸದಿರುವದು, ಮತ್ತೊಬ್ಬರ ಆಕ್ಷೇಪಗಳೇ ಮುಂತಾದವನ್ನು ಸಹಿಸುವದು-ಇವೆಲ್ಲ ತಿತಿಕ್ಷೆಯುಳ್ಳವನಿಗೇ ಸಿದ್ಧಿಸುತ್ತವೆ.

1. ಈ ಅರ್ಥವನ್ನು ಕೊಡುವ ಒಂದು ಮಾತು ಇಲ್ಲಿಗೆ ಬೇಕಾಗಿರುತ್ತದೆ.

**ಸಾಧನೇಷ್ವಪಿ ಸರ್ವೇಷು ತಿತಿಕ್ಷೋತ್ತಮಸಾಧನಮ್ ।**
**ಯತ್ರ ವಿಘ್ನಾಃ ಪಲಾಯನ್ತೇ ದೈವಿಕಾ ಅಪಿ ಭೌತಿಕಾಃ ॥ ೧೪೨ ॥**

೧೪೨. ಸಾಧನಗಳೊಳಗೆಲ್ಲ ತಿತಿಕ್ಷೆಯು ಉತ್ತಮಸಾಧನವು. ಇದಿರುವಲ್ಲಿ ಆಧಿದೈವಿಕ, ಆಧಿಭೌತಿಕವಿಘ್ನಗಳು ಓಡಿಹೋಗುವವು.

**ತಿತಿಕ್ಷೋರೇವ ವಿಘ್ನೇಭ್ಯಸ್ತ್ವನಿವರ್ತಿತಚೇತಸಃ ।**
**ಸಿಧ್ಯನ್ತಿ ಸಿದ್ಧಯಃ ಸರ್ವಾ ಅಣಿಮಾದ್ಯಾಃ ಸಮೃದ್ಧಯಃ ॥ ೧೪೩ ॥**

೧೪೩. ವಿಘ್ನಗಳಿಂದ ಹಿಮ್ಮೆಟ್ಟದಿರುವ ಚಿತ್ತವುಳ್ಳ ತಿತಿಕ್ಷುವಿಗೇ ಎಲ್ಲಾ **ಅಣಿಮಾದಿ**[1] ಸಿದ್ಧಿಗಳೂ ಸಮೃದ್ಧಿಗಳೂ ಸಿದ್ಧಿಸುವವು.[2]

**ತಸ್ಮಾನ್ಮುಮುಕ್ಷೋರಧಿಕಾ ತಿತಿಕ್ಷಾ**
**ಸಂಪಾದನೀಯೇಪ್ಸಿತಕಾರ್ಯಸಿದ್ಧ್ಯೈ ।**
**ತೀವ್ರಾ ಮುಮುಕ್ಷಾ ಚ ಮಹತ್ಯುಪೇಕ್ಷಾ**
**ಚೋಭೇ ತಿತಿಕ್ಷಾಸಹಕಾರಿಕಾರಣಮ್ ॥ ೧೪೪ ॥**

೧೪೪. ಆದ್ದರಿಂದ ಮುಮುಕ್ಷುವಾದವನು (ತನ್ನ) ಇಷ್ಟವಾದ ಕಾರ್ಯವು ಸಿದ್ಧಿಸುವದಕ್ಕಾಗಿ ಹೆಚ್ಚಿನ ತಿತಿಕ್ಷೆಯನ್ನು ಸಂಪಾದಿಸಿಕೊಳ್ಳಬೇಕು. ತೀವ್ರವಾದ ಮುಮುಕ್ಷುತ್ವ, (ಪ್ರಪಂಚದ ವಿಷಯಕ್ಕೆ) ಹೆಚ್ಚಿನ ಉಪೇಕ್ಷೆ-(ಈ) ಎರಡೂ ತಿತಿಕ್ಷೆಗೆ ಸಹಕಾರಿಸಾಧನಗಳು.

**ತತ್ತತ್ಕಾಲಸಮಾಗತಾಮಯತತೇಃ ಶಾನ್ತ್ಯೈ ಪ್ರವೃತ್ತೋ ಯದಿ**
**ಸ್ಯಾತ್ತತ್ತತ್ಪರಿಹಾರಕೌಷಧರತಸ್ತಚ್ಚಿನ್ತನೇ ತತ್ಪರಃ ।**
**ತದ್ಭಿಕ್ಷುಃ ಶ್ರವಣಾದಿಧರ್ಮರಹಿತೋ ಭೂತ್ವಾ ಮೃತಶ್ಚೇತ್ತತಃ**
**ಕಿಂ ಸಿದ್ಧಂ ಫಲಮಾಪ್ನುಯಾದುಭಯಥಾ ಭ್ರಷ್ಟೋ ಭವೇತ್ಸ್ವಾರ್ಥತಃ॥**

೧೪೫. ಆಯಾ ಕಾಲದಲ್ಲಿ ಬಂದೊದಗಿದ ವ್ಯಾಧಿಗಳ ಸಾಲನ್ನು ಹೋಗಲಾಡಿಸಿಕೊಳ್ಳುವದರಲ್ಲಿಯೇ ತೊಡಗಿ ಆಯಾ (ರೋಗ)ವನ್ನು ಪರಿಹರಿಸಿಕೊಳ್ಳುವ ಔಷಧದಲ್ಲಿ ಆಸಕ್ತನಾಗಿ ಅದರ ಯೋಚನೆಯಲ್ಲಿಯೇ ತತ್ಪರನಾಗಿದ್ದರೆ ಆ ಭಿಕ್ಷುವು ಶ್ರವಣಾದಿಧರ್ಮಗಳಿಲ್ಲದವನಾಗಿ ಹಾಗೆಯೇ ಸತ್ತರೆ, ಯಾವ ಫಲವನ್ನು ಸಂಪಾದಿಸಿಕೊಂಡಾನು? ಎರಡು ರೀತಿಯಿಂದಲೂ ಸ್ವಾರ್ಥದಿಂದ ಭ್ರಷ್ಟನೇ ಆಗುವನು.

---

1. ಅಣಿಮಾ (ತೀರ ಸಣ್ಣವನಾಗುವದು), ಮಹಿಮಾ (ಎಲ್ಲಕ್ಕೂ ವ್ಯಾಪಕನಾಗುವದು), ಗರಿಮಾ (ತೀರ ತೂಕವಾಗುವದು), ಲಘಿಮಾ (ತೀರ ಹಗುರವಾಗುವದು) ಪ್ರಾಪ್ತಿ (ಬಹಳ ದೂರದಲ್ಲಿರುವದನ್ನು ಮುಟ್ಟುವ ಅಥವಾ ಅರಿಯುವ ಶಕ್ತಿ), ಪ್ರಾಕಾಮ್ಯ (ತನ್ನ ಇಚ್ಛೆಯನ್ನೆಲ್ಲ ಪೂರ್ತಿಗೊಳಿಸುವ ಶಕ್ತಿ), ಈಶಿತ್ವ (ಎಲ್ಲವನ್ನೂ ಆಳುವದು,) ವಶಿತ್ವ-(ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವದು-) ಇವು ಎಂಟು ಸಿದ್ಧಿಗಳು.

2. ತಿತಿಕ್ಷುವಿಗೆ ಎಲ್ಲಾ ಸಿದ್ಧಿಗಳೂ ವಶವಾಗುವವೆಂಬುದು ಆಚಾರ್ಯರ ಬೇರೆಯ ಗ್ರಂಥವಲ್ಲಾಗಲಿ, ಯೋಗಶಾಸ್ತ್ರದಲ್ಲಾಗಲಿ ಕಾಣಬರುವದಿಲ್ಲ.

**ಯೋಗಮಭ್ಯಸ್ಯತೋ ಭಿಕ್ಷೋರ್ಯೋಗಾಚ್ಚಲಿತಚೇತಸಃ ।**
**ಪ್ರಾಪ್ಯ ಪುಣ್ಯಕೃತಾಲ್ಲೋಕಾನಿತ್ಯಾದಿ ಪ್ರಾಹ ಕೇಶವಃ ॥ ೧೪೬ ॥**
**ನ ತು ಕೃತ್ವೈವ ಸಂನ್ಯಾಸಂ ತೂಷ್ಣೀಮೇವ ಮೃತಸ್ಯ ಹಿ ।**
**ಪುಣ್ಯಲೋಕಗತಿಂ ಬ್ರೂತೇ ಭಗವಾನ್ನ್ಯಾಸಮಾತ್ರತಃ ॥ ೧೪೭ ॥**

೧೪೬–೧೪೭. ಯೋಗವನ್ನು ಅಭ್ಯಾಸಮಾಡುತ್ತಿರುವ ಸಂನ್ಯಾಸಿಯು ಯೋಗದಿಂದ ಮನಸ್ಸು ಜಾರಿದರೆ, 'ಪುಣ್ಯವನ್ನು ಮಾಡಿದವರ ಲೋಕಗಳನ್ನು ಪಡೆದು' (ಗೀ. ೬–೪೧) ಎಂದುಮುಂತಾದ ವಾಕ್ಯದಿಂದ ಸದ್ಗತಿಯನ್ನು ಶ್ರೀಕೃಷ್ಣನು ಹೇಳಿರುತ್ತಾನೆ. ಇಷ್ಟೇ ಹೊರತು ಭಗವಂತನು ಆ ಸಂನ್ಯಾಸಮಾತ್ರದಿಂದ ಪುಣ್ಯ ಲೋಕವನ್ನು ಪಡೆಯುತ್ತಾನೆಂದೇನೂ ಹೇಳಿಲ್ಲವಷ್ಟೆ ?

**ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ।**
**ಇತ್ಯನುಷ್ಠೇಯಸಂತ್ಯಾಗಾತ್ಸಿಧ್ಯಭಾವಮುವಾಚ ಚ ॥ ೧೪೮ ॥**

೧೪೮. 'ಬರಿಯ ಸಂನ್ಯಾಸದಿಂದಲೇ (ಜ್ಞಾನನಿಷ್ಠಾರೂಪವಾದ) ಸಿದ್ಧಿಯನ್ನು ಪಡೆಯುವದೂ ಇಲ್ಲ' (ಗೀ. ೩–೪) ಎಂದು ಮಾಡಬೇಕಾಗಿರುವ (ಕರ್ಮದ) ತ್ಯಾಗದಿಂದ ಸಿದ್ಧಿಯಾಗುವದಿಲ್ಲವೆಂದು ಹೇಳಿಯೂ ಇರುತ್ತಾನೆ.

**ತಸ್ಮಾತ್ತಿತಿಕ್ಷಯಾ ಸೋಢ್ವಾ ತತ್ತದ್ದುಃಖಮುಪಾಗತಮ್ ।**
**ಕುರ್ಯಾಚ್ಛಕ್ತ್ಯನುರೂಪೇಣ ಶ್ರವಣಾದಿ ಶನೈಃ ಶನೈಃ ॥ ೧೪೯ ॥**

೧೪೯. ಆದ್ದರಿಂದ ಆಗಾಗ್ಗೆ ಬಂದೊದಗುವ ಆಯಾ ದುಃಖವನ್ನು ತಿತಿಕ್ಷೆಯಿಂದ ಸಹಿಸಿಕೊಂಡು (ತನ್ನ) ಶಕ್ತಿಗೆ ಅನುರೂಪವಾಗಿ ಮೆಲ್ಲಮೆಲ್ಲಗೆ ಶ್ರವಣಾದಿಗಳನ್ನು ಮಾಡಬೇಕು.

**ಪ್ರಯೋಜನಂ ತಿತಿಕ್ಷಾಯಾಃ ಸಾಧಿತಾಯಾಃ ಪ್ರಯತ್ನತಃ ।**
**ಪ್ರಾಪ್ತದುಃಖಾಸಹಿಷ್ಣುತ್ವೇ ನ ಕಿಞ್ಚಿದಪಿ ದೃಶ್ಯತೇ ॥ ೧೫೦ ॥**

೧೫೦. ಆಗಾಗ್ಗೆ ಬಂದೊದಗುವ ದುಃಖವನ್ನು ಸಹಿಸಿಕೊಳ್ಳುವದಾಗದಿದ್ದರೆ ಪ್ರಯತ್ನದಿಂದ ಸಾಧಿಸಿಕೊಂಡ ತಿತಿಕ್ಷೆಗೆ ಬೇರೆ ಯಾವ (ಫಲವೂ) ಕಾಣಿಸುವದಿಲ್ಲ.

**ಸಾಧನತ್ವೇನ ದೃಷ್ಟಾನಾಂ ಸರ್ವೇಷಾಮಪಿ ಕರ್ಮಣಾಮ್ ।**
**ವಿಧಿನಾ ಯಃ ಪರಿತ್ಯಾಗಃ ಸ ಸಂನ್ಯಾಸಃ ಸತಾಂ ಮತಃ ॥ ೧೫೧ ॥**

೧೫೧. ಸಾಧನವೆಂದು (ಶಾಸ್ತ್ರದಲ್ಲಿ) ಕಂಡುಬರುವ ಸರ್ವಕರ್ಮಗಳನ್ನೂ ವಿಧಿವತ್ತಾಗಿಬಿಡುವದೇ **'ಸಂನ್ಯಾಸ'**ವೆಂದು ಬಲ್ಲವರ ಮತವು.

**ಉಪರಮಯತಿ ಕರ್ಮಾಣೀತ್ಯುಪರತಿಶಬ್ದೇನ ಕಥ್ಯತೇ ನ್ಯಾಸಃ ।**
**ನ್ಯಾಸೇನ ಹಿ ಸರ್ವೇಷಾಂ ಶ್ರುತ್ಯಾ ಪ್ರೋಕ್ತೋ ವಿಕರ್ಮಣಾಂ ತ್ಯಾಗಃ ॥**

೧೫೨. ಕರ್ಮಗಳೆಲ್ಲವನ್ನೂ ಬಿಡಿಸುತ್ತದೆ (ಉಪರಮಯತಿ) ಎಂಬುದರಿಂದ ಸಂನ್ಯಾಸವನ್ನೇ 'ಉಪರತಿ' ಎಂಬ ಶಬ್ದದಿಂದ ಹೇಳಲಾಗಿರುತ್ತದೆ. ಏಕೆಂದರೆ ಎಲ್ಲಾ ವಿಕರ್ಮಗಳ[1] ತ್ಯಾಗವನ್ನೇ ಶ್ರುತಿಯು[2] ನ್ಯಾಸಶಬ್ದದಿಂದ ಹೇಳುತ್ತದೆಯಷ್ಟೆ ?

**ಕರ್ಮಣಾ ಸಾಧ್ಯಮಾನಸ್ಯಾನಿತ್ಯತ್ವಂ ಶ್ರೂಯತೇ ಯತಃ ।**
**ಕರ್ಮಣಾನೇನ ಕಿಂ ನಿತ್ಯಫಲೇಪ್ಸೋಃ ಪರಮಾರ್ಥಿನಃ ॥ ೧೫೩ ॥**

೧೫೩. ಕರ್ಮದಿಂದ ಸಾಧಿಸಿದ (ಫಲವು) ಅನಿತ್ಯವೆಂದು ಶ್ರುತಿಯಲ್ಲಿರುವದರಿಂದ[3] ನಿತ್ಯಫಲವನ್ನೇ ಪಡೆಯಬೇಕೆನ್ನುವ ಪರಮಪುರುಷಾರ್ಥದ ಇಚ್ಛೆಯುಳ್ಳಾತನಿಗೆ ಈ ಕರ್ಮದಿಂದ ಆಗಬೇಕಾದದ್ದೇನಿದೆ ?

**ಉತ್ಪಾದ್ಯಮಾಪ್ಯಂ ಸಂಸ್ಕಾರ್ಯಂ ವಿಕಾರ್ಯಂ ಪರಿಗಣ್ಯತೇ ।**
**ಚತುರ್ವಿಧಂ ಕರ್ಮಸಾಧ್ಯಂ ಫಲಂ ನಾನ್ಯದಿತಃ ಪರಮ್ ॥ ೧೫೪ ॥**

೧೫೪. (ಉತ್ಪಾದ್ಯ) ಹುಟ್ಟಿಸಿಕೊಳ್ಳಬೇಕಾದದ್ದು, (ಆಪ್ಯ) ಪಡೆದುಕೊಳ್ಳಬೇಕಾದದ್ದು, (ಸಂಸ್ಕಾರ್ಯ) ಶುದ್ಧಿಗೊಳಿಸತಕ್ಕದ್ದು, (ವಿಕಾರ್ಯ) ಮಾರ್ಪಡಿಸಿಕೊಳ್ಳುವದಕ್ಕೆ ತಕ್ಕದ್ದು- ಎಂದು ಕರ್ಮದಿಂದುಂಟಾಗುವ ಫಲವು ನಾಲ್ಕು ಬಗೆಯೆಂದು ಲೆಕ್ಕಹಾಕಲಾಗಿದೆ[4], ಇದಕ್ಕಿಂತ ಬೇರೆ ಯಾವದೂ (ಕರ್ಮದ ಫಲ)ವಿರುವದಿಲ್ಲ.

**ನೈತದನ್ಯತರಂ[5] ಬ್ರಹ್ಮ ಕದಾ ಭವಿತುಮರ್ಹತಿ ।**
**ಸ್ವತಃಸಿದ್ಧಂ ಸರ್ವದಾಪ್ತಂ ಶುದ್ಧಂ ನಿರ್ಮಲಮಕ್ರಿಯಮ್ ॥ ೧೫೫ ॥**

೧೫೫. ಬ್ರಹ್ಮವು ಇವುಗಳೊಳಗೆ ಯಾವದೊಂದೂ ಎಂದಿಗೂ ಆಗಲಾರದು. (ಏಕೆಂದರೆ ಅದು) ಸ್ವತಃಸಿದ್ಧವು, ನಿತ್ಯಪ್ರಾಪ್ತವು, ಶುದ್ಧವೂ ನಿರ್ಮಲವೂ ಆಗಿದ್ದು, ಕ್ರಿಯಾರಹಿತವಾದದ್ದು.[6]

---

1. ಇಲ್ಲಿ ವಿಕರ್ಮ(ನಿಷಿದ್ಧಕರ್ಮ)ವೆಂಬ ಮಾತು ಹೇಗೆ ಬಂದಿತೋ ತಿಳಿಯದು. ಕರ್ಮಮಾತ್ರದ ತ್ಯಾಗವಲ್ಲವೆ, ಸಂನ್ಯಾಸವೆಂಬುದು ?

2. 'ನ್ಯಾಸ ಏವಾತ್ಯರೇಚಯತ್' (ತೈ. ನಾ. ೭೮) ಎಂಬ ಶ್ರುತಿಯಿರಬಹುದೆ ?

3. ಏವಮೇವಾಮುತ್ರ ಪುಣ್ಯಜಿತೋ ಲೋಕಃ ಕ್ಷೀಯತೇ' (ಛಾಂ. ೮-೧೬).

4. ಸೂ. ಭಾ. ೧-೧-೪, ಈ. ಅವ., ಬೃ. ೩-೩, ಅವ.

5. 'ತಮಮ್' ಎಂದಿದ್ದರೆ ಚೆನ್ನಾಗಿತ್ತು.

6. ಸ್ವತಃಸಿದ್ಧವಾದ್ದರಿಂದ ಉತ್ಪಾದ್ಯವಲ್ಲ, ನಿತ್ಯಪ್ರಾಪ್ತವಾದ್ದರಿಂದ ಪ್ರಾಪ್ಯವಲ್ಲ. ಶುದ್ಧವಾಗಿರುವದರಿಂದ ಸಂಸ್ಕಾರ್ಯವಲ್ಲ, ಕ್ರಿಯಾರಹಿತವಾದ್ದರಿಂದ ವಿಕಾರ್ಯವಲ್ಲ. ಇದನ್ನು ಮುಂದಿನ ಶ್ಲೋಕಗಳಲ್ಲಿ ವಿವರಿಸಲಾಗಿದೆ.

**ನ ಚಾಸ್ಯ ಕಶ್ಚಿಜ್ಜನಿತೇತ್ಯಾಗಮೇನ ನಿಷಿಧ್ಯತೇ ।**
**ಕಾರಣಂ ಬ್ರಹ್ಮ ತತ್ತಸ್ಮಾದ್ಬ್ರಹ್ಮ ನೋತ್ಪಾದ್ಯಮಿಷ್ಯತೇ ॥ ೧೫೬ ॥**

೧೫೬. 'ಇದನ್ನು ಹುಟ್ಟಿಸುವದು ಯಾವದೂ ಇಲ್ಲ' (ಶ್ವೇ. ೬-೯) ಎಂಬ ಶ್ರುತಿಯಿಂದ (ಅದಕ್ಕೆ) ಕಾರಣವಿಲ್ಲವೆಂದು ಹೇಳಲಾಗಿದೆ. ಆದ್ದರಿಂದ ಆ ಬ್ರಹ್ಮವು **ಉತ್ಪಾದ್ಯವಲ್ಲ.**

**ಆಪ್ತಾಪ್ಯಯೋಸ್ತು ಭೇದಶ್ಚೇದಾಪ್ತಾ ಚಾಪ್ಯಮವಾಪ್ಯತೇ ।**
**ಆಪ್ತುಃ ಸ್ವರೂಪಮೇವೈತದ್ಬ್ರಹ್ಮ ನಾಪ್ಯಂ ಕದಾಚನ ॥ ೧೫೭ ॥**

೧೫೭. ಪಡೆಯುವವನು, ಪಡೆಯಲ್ಪಡತಕ್ಕದ್ದು- ಇವೆರಡಕ್ಕೂ ಭೇದ ವಿದ್ದರೆ ಪಡೆಯುವಾತನು ಪಡೆಯತಕ್ಕದ್ದನ್ನು ಪಡೆದುಕೊಂಡಾನು. (ಆದರೆ) ಈ ಬ್ರಹ್ಮವು ಪಡೆಯಬೇಕೆನ್ನುವವನ ಸ್ವರೂಪವೇ ; (ಆದ್ದರಿಂದ) ಎಂದಿಗೂ **ಆಪ್ಯವಲ್ಲ.**

**ಮಲಿನಸ್ಯೈವ ಸಂಸ್ಕಾರೋ ದರ್ಪಣಾದೇರಿಹೇಷ್ಯತೇ ।**
**ವ್ಯೋಮವನ್ನಿತ್ಯಶುದ್ಧಸ್ಯ ಬ್ರಹ್ಮಣೋ ನೈವ ಸಂಸ್ಕ್ರಿಯಾ ॥ ೧೫೮ ॥**

೧೫೮. ಯಾವದು ಕೊಳಕಾಗಿರುತ್ತದೆಯೋ ಅಂಥ ಕನ್ನಡಿ ಮುಂತಾದ ದ್ದಕ್ಕೆ[1] ಸಂಸ್ಕಾರವು ಅವಶ್ಯವಾಗಿರುತ್ತದೆ. ಆಕಾಶದಂತೆ ನಿತ್ಯಶುದ್ಧವಾಗಿರುವ ಬ್ರಹ್ಮಕ್ಕೆ ಯಾವ **ಸಂಸ್ಕಾರವೂ ಬೇಕಿಲ್ಲ.**

**ಕೇನ ದುಷ್ಟೇನ ಯುಜ್ಯೇತ ವಸ್ತು ನಿರ್ಮಲಮಕ್ರಿಯಮ್ ।**
**ಯದ್ಯೋಗಾದಾಗತಂ ದೋಷಂ ಸಂಸ್ಕಾರೋ ವಿನಿವರ್ತಯೇತ್ ॥೧೫೯**
**ನಿರ್ಗುಣಸ್ಯ ಗುಣಾಧಾನಮಪಿ ನೈವೋಪಪದ್ಯತೇ ।**
**ಕೇವಲೋ ನಿರ್ಗುಣಶ್ಚೇತಿ ನೈರ್ಗುಣ್ಯಂ ಶ್ರೂಯತೇ ಯತಃ ॥ ೧೬೦ ॥**

೧೫೯-೧೬೦. ಕೊಳೆಯಿಲ್ಲದ್ದೂ ನಿಷ್ಕ್ರಿಯವೂ ಆದ ವಸ್ತು ಯಾವ ದೋಷಯುಕ್ತ(ವಸ್ತು)ವಿನೊಡನೆ ಸೇರಿಕೊಂಡೀತು ? ಅಂಥ ಒಂದು ವಸ್ತುವಿನ ಸಂಬಂಧದಿಂದ ಬಂದಿದ್ದ ದೋಷವನ್ನಲ್ಲವೆ, ಸಂಸ್ಕಾರವು ನೀಗಬೇಕಾದೀತು? ಗುಣಗಳಿಲ್ಲದ[2] ಬ್ರಹ್ಮಕ್ಕೆ ಗುಣವನ್ನುಂಟುಮಾಡುವದೆಂಬುದೂ ಹೊಂದುವದಿಲ್ಲ. (ಬ್ರಹ್ಮವು ನಿರ್ಗುಣವೆಂಬುದು) ಹೇಗೆಂದರೆ '**ಕೇವಲೋ ನಿರ್ಗುಣಶ್ಚ**' (ಶ್ವೇ. ೬-೧೧) (ಪರಮಾತ್ಮನು) ಅದ್ವಿತೀಯನೂ ನಿರ್ಗುಣನೂ ಆಗಿರುತ್ತಾನೆ-ಎಂದು ಶ್ರುತಿಯಲ್ಲಿದೆ.

**ಸಾವಯವಸ್ಯ ಕ್ಷೀ[3]ರಾದೇರ್ವಸ್ತುನಃ ಪರಿಣಾಮಿನಃ ।**
**ಯೇನ ಕೇನ ವಿಕಾರಿತ್ವಂ ಸ್ಯಾನ್ನೋ ನಿಷ್ಕರ್ಮವಸ್ತುನಃ ॥ ೧೬೧ ॥**

---

1. ಪೂರ್ವದಲ್ಲಿ ಕಂಚು ಮುಂತಾದ ಲೋಹಗಳಿಂದ ಕನ್ನಡಿಯನ್ನು ಮಾಡುತ್ತಿದ್ದರು; ಕಿಲುಬು ಹತ್ತಿ ಅವು ಮಸಕಾಗುತ್ತಿದ್ದವು. 2. ಗುಣಗಳಿರುವ ಸಂಭವವೇ ಇಲ್ಲದ.
3. ಇಲ್ಲಿ ಲಘುವಿರಬೇಕಾಗಿತ್ತು ; ಛಂದಸ್ಸು ಕೆಟ್ಟಿದೆ.

**ನಿಷ್ಕಲಂ ನಿಷ್ಕ್ರಿಯಂ ಶಾನ್ತಂ ನಿರವದ್ಯಂ ನಿರಞ್ಜನಮ್ ।**
**ಇತ್ಯೇವ ವಸ್ತುನಸ್ತತ್ತ್ವಂ ಶ್ರುತಿಯುಕ್ತಿವ್ಯವಸ್ಥಿತಮ್ ॥ ೧೬೨ ॥**

೧೬೧–೧೬೨. ಅವಯವಗಳುಳ್ಳದ್ದೂ ಪರಿಣಾಮವನ್ನು ಹೊಂದುವ ಸ್ವಭಾವವುಳ್ಳದ್ದೂ ಆದ ಹಾಲೇ ಮುಂತಾದ ವಸ್ತುವಿಗೆ ಯಾವದಾದರೊಂದರಿಂದ **ವಿಕಾರ**ವಾಗಬಹುದು. ಕರ್ಮವಿಲ್ಲದ[1] ವಸ್ತುವಿಗೆ ವಿಕಾರವಾಗಲಾರದು. 'ನಿಷ್ಕಲವು, ನಿಷ್ಕ್ರಿಯವು, ಶಾನ್ತವು, ನಿರ್ದುಷ್ಟವು, ನಿರಂಜನವು[2] (ಶ್ವೇ. ೬–೧೯) ಎಂದೇ (ಬ್ರಹ್ಮ)ವಸ್ತುವಿನ ತತ್ತ್ವವು ಶ್ರುತಿಯುಕ್ತಿ[3]ಗಳಿಂದ ನಿಶ್ಚಿತವಾಗಿರುತ್ತದೆ.

**ತಸ್ಮಾನ್ನ ಕರ್ಮಸಾಧ್ಯತ್ವಂ ಬ್ರಹ್ಮಣೋಽಸ್ತಿ ಕುತಶ್ಚನ ।**
**ಕರ್ಮಸಾಧ್ಯಂ ತ್ವನಿತ್ಯಂ ಹಿ ಬ್ರಹ್ಮ ನಿತ್ಯಂ ಸನಾತನಮ್ ॥ ೧೬೩ ॥**

೧೬೩. ಆದ್ದರಿಂದ[4] ಕರ್ಮದಿಂದ ಉಂಟಾಗತಕ್ಕದ್ದೆಂಬುದು ಬ್ರಹ್ಮಕ್ಕೆ ಹೇಗೂ ಇಲ್ಲ, ಏಕೆಂದರೆ ಕರ್ಮದಿಂದ ಉಂಟಾಗತಕ್ಕದ್ದು ಅನಿತ್ಯವು, ಬ್ರಹ್ಮವೋ, ನಿತ್ಯವೂ ಸನಾತನವೂ[5] ಆಗಿದೆ.

**ದೇಹಾದಿಃ ಕ್ಷೀಯತೇ ಲೋಕೋ ಯಥೈವಂ ಕರ್ಮಣಾ ಚಿತಃ ।**
**ತಥೈವಾಮುಷ್ಮಿಕೋ ಲೋಕೋ ಸಂಚಿತಃ ಪುಣ್ಯಕರ್ಮಣಾ ॥ ೧೬೪ ॥**
**ಕೃತಕತ್ವಮನಿತ್ಯತ್ವೇ ಹೇತುರ್ಜಾಗರ್ತಿ ಸರ್ವದಾ ।**
**ತಸ್ಮಾದನಿತ್ಯೇ ಸ್ವರ್ಗಾದೌ ಪಣ್ಡಿತಃ ಕೋ ನು ಮುಹ್ಯತಿ ॥ ೧೬೫ ॥**

೧೬೪–೧೬೫. ಕರ್ಮದಿಂದ ಕೂಡಿಹಾಕಿಕೊಂಡ ದೇಹವೇ ಮುಂತಾದ ಲೋಕವು[6] ಹೇಗೆ ನಾಶವಾಗುತ್ತದೆಯೋ, ಹಾಗೆಯೇ ಪುಣ್ಯಕರ್ಮದಿಂದ ಸಂಪಾ

---

1. ವಿಕಾರವಿಲ್ಲದ, ಕೂಟಸ್ಥಸ್ವಭಾವವುಳ್ಳ– ಎಂಬರ್ಥದಲ್ಲಿ 'ನಿಷ್ಕರ್ಮ' ಎಂಬ ಮಾತನ್ನು ಉಪಯೋಗಿಸಿರುತ್ತದೆ.

2. ನಿಷ್ಕಲ–ನಿರವಯವ, ನಿಷ್ಕ್ರಿಯ– ಮಾರ್ಪಡುಗಳಿಲ್ಲದ, ಶಾಂತ–ದ್ವೈತ ವಿಭಾಗವಿಲ್ಲದ, ನಿರಂಜನ– ಪುಣ್ಯಪಾಪಗಳ ಅಂಟಿಲ್ಲದ.

3. ಇಲ್ಲಿ ಶ್ರುತಿಯಲ್ಲಿ ಹೇಳಿರುವ ಬ್ರಹ್ಮವಿಶೇಷಣಗಳಲ್ಲಿಯೇ ಯುಕ್ತಿಯೂ ಅಡಗಿದೆ ಎಂದು ಅಭಿಪ್ರಾಯವಿರಬೇಕು ; ಏಕೆಂದರೆ ಹೊಸದಾಗಿ ಯುಕ್ತಿಯನ್ನೇನೂ ಹೇಳಿಲ್ಲ.

4. ಉತ್ಪಾದ್ಯತ್ವ, ಆಪ್ಯತ್ವ, ಸಂಸ್ಕಾರ್ಯತ್ವ, ವಿಕಾರ್ಯತ್ವ ಇವು ಇಲ್ಲದ್ದರಿಂದ.

5. ನಿತ್ಯ, ಸನಾತನ– ಇವೆರಡಕ್ಕೂ ಒಂದೇ ಅರ್ಥ ; ಆದ್ದರಿಂದ ನಾಶವಾಗುವದು, ಮಾರ್ಪಡುವದು– ಎಂಬ ದೋಷಗಳಿಲ್ಲದ್ದು –ಎಂದು ಅರ್ಥಮಾಡಬೇಕು.

6. 'ತದ್ಯಥೇಹ ಕರ್ಮಜಿತೋ ಲೋಕಃ ಕ್ಷೀಯತ ಏವಮೇವಾಮುತ್ರ ಪುಣ್ಯಜಿತೋ ಲೋಕಃ ಕ್ಷೀಯತೇ' ಎಂದು (ಛಾಂ. ೮–೧–೬) ಶ್ರುತಿಯ ಅಭಿಪ್ರಾಯವಿದು. ಶ್ರುತಿಯಲ್ಲಿ 'ಜಿತ' (ಗೆಲ್ಲಲ್ಪಟ್ಟ) ಎಂದಿದೆ ; ಚಿತ ಎಂದಿಲ್ಲ ; ಭಾಷ್ಯದಲ್ಲಿ ಅದಕ್ಕೇ ಅರ್ಥವನ್ನು ಮಾಡಿದೆ. ಇಲ್ಲಿ 'ಚಿತ' (ಕೂಡಿಹಾಕಿದ) ಎಂಬ ಪಾಠವನ್ನು ಒಪ್ಪಿದೆ.

ದಿಸಿಕೊಂಡ ಆ (ಪರ)ಲೋಕವೂ (ನಾಶವಾಗುವದು). ಅದು ಅನಿತ್ಯವೆಂಬುದಕ್ಕೆ ಕೃತಕತ್ವ (ಹೊಸದಾಗಿ ಮಾಡಿಕೊಂಡದ್ದು) ಎಂಬ ಹೇತುವು ಯಾವಾಗಲೂ ಸಿದ್ಧವಾಗಿಯೇ ಇರುತ್ತದೆ;[1] ಆದ್ದರಿಂದ ಅನಿತ್ಯವಾದ ಸ್ವರ್ಗಾದಿ(ಫಲ)ದಲ್ಲಿ ಯಾವ ವಿವೇಕಿಯು ತಾನೆ ಮೋಹಗೊಂಡಾನು?

**ಜಗದ್ಧೇತೋಽಸ್ತು ನಿತ್ಯತ್ವಂ ಸರ್ವೇಷಾಮಪಿ ಸಂಮತಮ್ ।**
**ಜಗದ್ಧೇತುತ್ವಮಸ್ಯೈವ ವಾವದೀತಿ ಶ್ರುತಿರ್ಮುಹುಃ ॥ ೧೬೬ ॥**
**ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಮಿತಿ ಚ ಶ್ರುತಿಃ ।**
**ಅಸ್ಯೈವಂ ನಿತ್ಯತಾಂ ಬ್ರೂತೇ ಜಗದ್ಧೇತೋಃ ಸತಃ ಸ್ಫುಟಮ್ ॥೧೬೭॥**

೧೬೬–೧೬೭. ಜಗತ್ತಿಗೆ ಕಾರಣವಾದದ್ದು ನಿತ್ಯವೆಂಬುದು ಎಲ್ಲರಿಗೂ ಸಂಮತವಾಗಿರುತ್ತದೆ.[2] ಜಗತ್ತಿಗೆ ಕಾರಣವಾಗಿರುವದು ಬ್ರಹ್ಮವೇ ಎಂದು ಶ್ರುತಿಯು ಮತ್ತೆಮತ್ತೆ ಹೇಳಿರುತ್ತದೆ.[3] "ಇವೆಲ್ಲಕ್ಕೂ ಇದೇ ಆತ್ಮನು, ಅದು ಸತ್ಯವು" (ಛಾ. ೬–೮–೭) –ಎಂದು ಜಗತ್ಕಾರಣವಾದ ಈ ಸದ್ರೂಪವಾದ (ಬ್ರಹ್ಮವೇ) ನಿತ್ಯವೆಂದು[4] ಶ್ರುತಿಯು ಸ್ಫುಟವಾಗಿ ಹೇಳಿರುತ್ತದೆ.

**ನ ಕರ್ಮಣಾ ನ ಪ್ರಜಯಾ ಧನೇನೇತಿ ಸ್ವಯಂಶ್ರುತಿಃ ।**
**ಕರ್ಮಣೋ ಮೋಕ್ಷಹೇತುತ್ವಂ ಸಾಕ್ಷಾದೇವ ನಿಷೇಧತಿ ॥ ೧೬೮ ॥**

೧೬೮. "ಕರ್ಮದಿಂದಲ್ಲ, ಪ್ರಜಾ(ಸಂತತಿಯಿಂ)ದಲ್ಲ, ಧನದಿಂದಲೂ ಅಲ್ಲ" (ತೈ. ನಾ. ೧೨–೩) ಎಂದು ಶ್ರುತಿಯು ಕರ್ಮವು ಮೋಕ್ಷಕ್ಕೆ ಕಾರಣವಲ್ಲವೆಂಬುದನ್ನು[5] ತಾನೇ ನೇರಾಗಿ ಹೇಳುತ್ತದೆ.

**ಪ್ರತ್ಯಗ್ಬ್ರಹ್ಮವಿಚಾರಪೂರ್ವಮುಭಯೋರೇಕತ್ವಬೋಧಾದ್ವಿನಾ**
**ಕೈವಲ್ಯಂ ಪುರುಷಸ್ಯ ಸಿಧ್ಯತಿ ಪರಬ್ರಹ್ಮಾತ್ಮತಾಲಕ್ಷಣಮ್ ।**
**ನ ಸ್ನಾನೈರಪಿ ಕೀರ್ತನೈರಪಿ ಜಪೈರ್ನೋ ಕೃಚ್ಛ್ರಚಾನ್ದ್ರಾಯಣೈ-**
**ರ್ನೋ ವಾಪ್ಯಧ್ವರಯಜ್ಞದಾನನಿಗಮೈರ್ನೋ ಮನ್ತ್ರತನ್ತ್ರೈರಪಿ ॥೧೬೯॥**

---

1. ಕರ್ಮದಿಂದ ಬಂದದ್ದು ಅನಿತ್ಯ– ಎಂಬುದನ್ನು ಸಾಧಿಸುವದಕ್ಕೆ 'ಕೃತಕತ್ವ' ಎಂಬುದೇ ಹೇತು.

2. 'ಎಲ್ಲರಿಗೂ' ಎಂದರೆ ಸಾಂಖ್ಯರಿಗೂ ವೈಶೇಷಿಕರಿಗೂ. ಪ್ರಧಾನವೂ ಪರಮಾಣುಗಳೂ ನಿತ್ಯವೆಂದು ಅವರು ಒಪ್ಪುತ್ತಾರೆ. ಕಾರಣವು ನಿತ್ಯವೆಂದು ಒಪ್ಪದಿದ್ದರೆ ಅದಕ್ಕೂ ಕಾರಣವಿರಬೇಕೆಂದಾಗಿ ಅನವಸ್ಥಾದೋಷವು ಬರುತ್ತದೆ; ಕಾರಣಪರಂಪರೆಗೆ ನಿಲುಗಡೆಇಲ್ಲದೆ ಹೋಗುವದು.

3. ಜಗತ್ಕಾರಣವು ಬ್ರಹ್ಮವೇ ಎಂಬುದು ಉಪನಿಷತ್ತುಗಳಲ್ಲೆಲ್ಲ ಇದೆ.

4. ಸತ್ಯಶಬ್ದಕ್ಕೆ ಇಲ್ಲಿ ನಿತ್ಯವೆಂಬ ಅರ್ಥವನ್ನು ಮಾಡಿದೆ.

5. ಕರ್ಮವಾಗಲಿ ಕರ್ಮಕ್ಕೆ ಸಾಧನವಾದ ಪುತ್ರಾದಿಗಳಾಗಲಿ ಕೈವಲ್ಯಸಾಧನವಲ್ಲ, ಇವುಗಳನ್ನು ಸಂನ್ಯಾಸಮಾಡುವದೇ ಮೋಕ್ಷಕ್ಕೆ ಸಾಧನ ಎಂಬುದು ಶ್ರುತಿಯ ಅರ್ಥ.

೧೧೯. ಪ್ರತ್ಯಗಾತ್ಮನಾಗಿರುವ ಬ್ರಹ್ಮವನ್ನು ವಿಚಾರಮಾಡುವವರ ಮೂಲಕವಾಗಿ ಆ ಇಬ್ಬರೂ ಒಂದೇ ಎಂದು ಅರಿತುಕೊಂಡಹೊರತು ಮನುಷ್ಯನಿಗೆ ಪರಬ್ರಹ್ಮಸ್ವರೂಪನಾಗಿರುವದೆಂಬ ಕೈವಲ್ಯವು ಸ್ನಾನಗಳಿಂದಲೂ ಆಗಲಾರದು, ಕೀರ್ತನಗಳಿಂದಲೂ ಆಗಲಾರದು, ಜಪಗಳಿಂದಲೂ ಆಗಲಾರದು, ಕೃಚ್ಛ್ರಚಾಂದ್ರಾಯಣಗಳಿಂದಲೂ ಆಗಲಾರದು, ಅಧ್ವರಯಜ್ಞ, ದಾನಾಧ್ಯಯನಗಳಿಂದಲೂ ಆಗಲಾರದು, ಮಂತ್ರತಂತ್ರಗಳಿಂದಲೂ ಆಗಲಾರದು.[1]

**ಜ್ಞಾನಾದೇವ ತು ಕೈವಲ್ಯಮಿತಿ ಶ್ರುತ್ಯಾ ನಿಗದ್ಯತೇ ।**
**ಜ್ಞಾನಸ್ಯ ಮುಕ್ತಿಹೇತುತ್ವಮನ್ಯವ್ಯಾವೃತ್ತಿಪೂರ್ವಕಮ್ ॥ ೧೨೦ ॥**

೧೨೦. 'ಜ್ಞಾನದಿಂದಲೇ ಕೈವಲ್ಯವು' ( ? )[2] ಎಂದು (ಮೋಕ್ಷಕ್ಕೆ) ಮತ್ತೊಂದು (ಸಾಧನ)ವಾಗಲಾರದೆಂದು ಮೊದಲು ತಿಳಿಸಿಯೇ ಜ್ಞಾನವು ಮುಕ್ತಿಗೆ ಕಾರಣವೆಂದು ಶ್ರುತಿಯಿಂದ ಉಕ್ತವಾಗಿರುತ್ತದೆ.

**ವಿವೇಕಿನೋ ವಿರಕ್ತಸ್ಯ ಬ್ರಹ್ಮನಿತ್ಯತ್ವವೇದಿನಃ ।**
**ತದ್ಭಾವೇಚ್ಛೋರನಿತ್ಯಾರ್ಥೇ ತತ್ಸಾಮಗ್ರ್ಯೇ ಕುತೋ ರತಿಃ[3] ॥ ೧೨೧ ॥**

೧೨೧. ವಿವೇಕಿಯೂ ವಿರಕ್ತನೂ[4] ಬ್ರಹ್ಮ(ವೊಂದೇ) ನಿತ್ಯವೆಂದು ಅರಿತುಕೊಂಡವನೂ ಆಗಿ ಆ (ಬ್ರಹ್ಮದ) ಸ್ವರೂಪವನ್ನೇ (ಪಡೆಯಕೊಳ್ಳ)ಲಿಚ್ಛೆಯುಳ್ಳಾತನಿಗೆ ಅನಿತ್ಯವಸ್ತುವಿನಲ್ಲಾಗಲಿ, ಅದನ್ನು ಪಡೆಯುವ (ಸಾಧನ)ಸಾಮಗ್ರಿಯಲ್ಲಾಗಲಿ ಹೇಗೆ ಪ್ರೀತಿಯುಂಟಾದೀತು ?

**ತಸ್ಮಾದನಿತ್ಯೇ ಸ್ವರ್ಗಾದೌ ಸಾಧನತ್ವೇನ ಚೋದಿತಮ್ ।**
**ನಿತ್ಯಂ ನೈಮಿತ್ತಿಕಂ ಚಾಪಿ ಸರ್ವಂ ಕರ್ಮ ಸಸಾಧನಮ್ ॥ ೧೨೨ ॥**
**ಮುಮುಕ್ಷುಣಾ ಪರಿತ್ಯಾಜ್ಯಂ ಬ್ರಹ್ಮಭಾವಮಭೀಪ್ಸುನಾ ॥ ೧೨೨½ ॥**

೧೨೨–೨೨½. ಆದ್ದರಿಂದ[5] ಬ್ರಹ್ಮಭಾವವನ್ನು ಪಡೆಯಬೇಕೆಂದು ಬಯಸುವ ಮುಮುಕ್ಷುವು ಅನಿತ್ಯವಾದ ಸ್ವರ್ಗಾದಿ(ಗಳನ್ನು ಪಡೆಯುವದಕ್ಕೆ) ಸಾಧನವಾಗಿ ವೇದದಲ್ಲಿ ವಿಧಿಸಿರುವ ನಿತ್ಯನೈಮಿತ್ತಿಕ– (ಈ) ಎಲ್ಲಾ ಕರ್ಮವನ್ನೂ ಸಾಧನಸಹಿತವಾಗಿ[6] ಬಿಟ್ಟುಬಿಡಬೇಕು.

---

1. ವಿ. ೧೧, ೧೩, ೫೬ ; ಮ. ವಾ. ೨೫, ೨೨೫ ; ಶಂ. ಗೀ. ೪–೨೧.
2. ಈ ಶ್ರುತಿಯನ್ನು ಶಂ. ಗೀ.ಯಲ್ಲಿ ಮತ್ತೆಮತ್ತೆ ಉದಾಹರಿಸಿದೆ.
3. 'ಅರತಿ' ಎಂಬುದು ಅಚ್ಚಿನ ತಪ್ಪು. 4. ವಿ. ೧೭.
5. ಮುಮುಕ್ಷುವಿಗೆ ಅನಿತ್ಯವಸ್ತುವಿನಲ್ಲಾಗಲಿ ಅದನ್ನು ಪಡೆಯಕೊಳ್ಳುವದಕ್ಕೆ ಸಾಧನವಾಗಿರುವದರಲ್ಲಾಗಲಿ ಇಚ್ಛೆಯಿರುವದು ಸಲ್ಲದಾದ್ದರಿಂದ.
6. ಯಜ್ಞೋಪವೀತಾದಿಗಳೊಡನೆ.

**ಮುಮುಕ್ಷೋರಪಿ ಕರ್ಮಾಸ್ತು ಶ್ರವಣಂ ಚಾಪಿ ಸಾಧನಮ್ ।**
**ಹಸ್ತವದ್ದ್ವಯಮೇತಸ್ಯ ಸ್ವಕಾರ್ಯಂ ಸಾಧಯಿಷ್ಯತಿ ॥ ೧೭೩[1] ॥**
**ಯಥಾ ವಿಜೃಮ್ಭತೇ ದೀಪೋ ಋಜೂಕರಣಕರ್ಮಣಾ ।**
**ತಥಾ ಶ್ರವಣಜೋ ಬೋಧಃ ಪುಂಸೋ ವಿಹಿತಕರ್ಮಣಾ ॥ ೧೭೪ ॥**
**ಅತಃ ಸಾಪೇಕ್ಷಕಂ ಜ್ಞಾನಮಥವಾಪಿ ಸಮುಚ್ಚಯಃ ।**
**ಮೋಕ್ಷಸ್ಯ ಸಾಧನಮಿತಿ ವದನ್ತಿ ಬ್ರಹ್ಮವಾದಿನಃ ॥ ೧೭೫ ॥**
**ಮುಮುಕ್ಷೋರ್ಯುಜ್ಯತೇ ತ್ಯಾಗಃ ಕಥಂ ವಿಹಿತಕರ್ಮಣಃ ॥ ೧೭೬ ॥**

೧೭೩–೧೭೬. (ಶಂಕೆ) : ಮೋಕ್ಷವನ್ನು ಬಯಸುವಾತನಿಗೂ[2] ಕರ್ಮವೂ (ಆತ್ಮವಿಷಯಕ)ಶ್ರವಣವೂ ಸಾಧನವಾಗಿರಲಿ. (ಈ) ಎರಡೂ (ಎರಡು) ಕೈಗಳಂತೆ ತಮ್ಮತಮ್ಮ[3] ಕಾರ್ಯವನ್ನು ಸಾಧಿಸಿಕೊಡಬಹುದು. ಮಿಾಟುವದೆಂಬ ಕರ್ಮ ದಿಂದ ದೀಪವು ಹೇಗೆ ದೊಡ್ಡದಾಗುವದೋ ಹಾಗೆಯೇ ಮನುಷ್ಯನಿಗೆ ಶ್ರವಣ ದಿಂದುಂಟಾದ ಜ್ಞಾನವು ಶಾಸ್ತ್ರವಿಹಿತಕರ್ಮದಿಂದ (ಬಲವಾಗುತ್ತದೆ). ಆದ್ದರಿಂದ (ಕರ್ಮವನ್ನು) ಅಪೇಕ್ಷಿಸುವ ಜ್ಞಾನವಾಗಲಿ (ಕರ್ಮಜ್ಞಾನಗಳ) ಸಮುಚ್ಚಯ ವಾಗಲಿ[4] ಮೋಕ್ಷಕ್ಕೆ ಸಾಧನವು ಎಂದು ಬ್ರಹ್ಮವಾದಿಗಳು ಹೇಳುತ್ತಾರೆ. ಮುಮುಕ್ಷು ವಾದವನು ಶಾಸ್ತ್ರವಿಹಿತವಾದ ಕರ್ಮವನ್ನು ಬಿಡುವದು ಹೇಗೆತಾನೆ ಯುಕ್ತ ವಾದೀತು[5] ?

**ಇತಿ ಶಙ್ಕಾ ನ ಕರ್ತವ್ಯಾ ಮೂಢವತ್ ಪಣ್ಡಿತೋತ್ತಮೈಃ ।**
**ಕರ್ಮಣಃ ಫಲಮನ್ಯತ್ತು ಶ್ರವಣಸ್ಯ ಫಲಂ ಪೃಥಕ್ ॥ ೧೭೭ ॥**

೧೭೭. ಹೀಗೆಂದು ಉತ್ತಮವಾದ ವಿವೇಕಿಗಳು ಮೂಢರಂತೆ ಶಂಕೆಯನ್ನು ಮಾಡಬಾರದು. (ಏಕೆಂದರೆ), ಕರ್ಮದ ಫಲವೇ ಬೇರೆ, ಶ್ರವಣದ ಫಲವೇ ಬೇರೆ.[6]

---

1. ಇಲ್ಲಿಂದ ಶ್ಲೋಕಸಂಖ್ಯೆಗಳನ್ನು ಅರ್ಥಕ್ಕೆ ಸರಿಯಾಗಿ ಹೊಂದಿಸಿಕೊಂಡಿದೆ.

2. ವರ್ಣಾಶ್ರಮಗಳಿಗೆ ವಿಧಿಸಿದ ಕರ್ಮಗಳನ್ನು ಮುಮುಕ್ಷುವಾದವನು ಸಂನ್ಯಾಸಮಾಡು ವದು ಸರಿಯಲ್ಲ ; ಅವನೂ ಶ್ರವಣದ ಜೊತೆಗೆ ಕರ್ಮಗಳನ್ನೂ ಮಾಡಬೇಕು– ಎಂದರ್ಥ.

3. ತಮ್ಮ ಎಂದರೆ ಶ್ರವಣದ ಮತ್ತು ಕರ್ಮದ; ಶ್ರವಣವು ತನ್ನ ಭಾಗದ ಕೆಲಸ ವನ್ನು ಮಾಡುತ್ತದೆ ; ಕರ್ಮವು ತನ್ನ ಭಾಗದ ಕೆಲಸವನ್ನು ಮಾಡುತ್ತದೆ ; ಎರಡೂ ಸೇರಿ ಮುಕ್ತಿ ಎಂಬ ಕಾರ್ಯವಾಗಬಹುದಾಗಿದೆ.

4. ಜ್ಞಾನವು ಪ್ರಧಾನ, ಕರ್ಮವು ಅದಕ್ಕೆ ಸಹಾಯಕ ಎಂದು ಹಿಂದೆ ಹೇಳಿತ್ತು ; ಈಗ ಎರಡೂ ಸಮಬಲವುಳ್ಳವೆಂದಿದೆ.

5. ಶಾಸ್ತ್ರವಿಹಿತವಾದದ್ದನ್ನು ಮಾಡದೆಬಿಟ್ಟ ದೋಷದಿಂದ ಮುಕ್ತಿಗೆ ಅಡ್ಡಿಯಾದೀ ತೆಂದು ಭಾವ.

6. ಕರ್ಮವು ಉತ್ಪಾದ್ಯಾದಿಚತುರ್ವಿಧಫಲವನ್ನು ಕೊಡತಕ್ಕದ್ದು ; ಜ್ಞಾನವು ಅವಿದ್ಯೆ ಯನ್ನು ಕಳೆಯತಕ್ಕದ್ದು, ಕಾರಕವಲ್ಲ. ಹೀಗಿರುವಲ್ಲಿ ಮುಕ್ತಿ ಎಂಬ ಒಂದೇ ಕಾರ್ಯವು ಹೇಗೆ ಅವುಗಳಿಂದಾದೀತು ?

**ವೈಲಕ್ಷಣ್ಯಂ ಚ ಸಾಮಗ್ರ್ಯೋಶ್ಚೋಭಯತ್ರಾಧಿಕಾರಿಣೋಃ ।**
**ಕಾಮೀ ಕರ್ಮಣ್ಯಧಿಕೃತೋ ನಿಷ್ಕಾಮೀ ಶ್ರವಣೇ ಮತಃ ॥ ೧೭೮ ॥**

೧೭೮. ಈ ಎರಡಕ್ಕೂ ಸಾಮಗ್ರಿಗಳು ಬೇರೆ[1], ಅಧಿಕಾರಿಗಳೂ ಬೇರೆಬೇರೆ; ಕಾಮಿಯು ಕರ್ಮಕ್ಕೆ ತಕ್ಕವನು, ಕಾಮವಿಲ್ಲದವನು ಶ್ರವಣಕ್ಕೆ (ತಕ್ಕವನು)-ಎನ್ನುವರು.

**ಅರ್ಥೀ ಸಮರ್ಥ ಇತ್ಯಾದಿಲಕ್ಷಣಂ ಕರ್ಮಿಣೋ ಮತಮ್ ।**
**ಪರೀಕ್ಷ್ಯ ಲೋಕಾನಿತ್ಯಾದಿಲಕ್ಷಣಂ ಮೋಕ್ಷಕಾಙ್ಕ್ಷಿಣಃ ॥ ೧೭೯ ॥**
**ಮೋಕ್ಷಾಧಿಕಾರೀ ಸಂನ್ಯಾಸೀ ಗೃಹಸ್ಥಃ ಕಿಲ ಕರ್ಮಣಿ ॥ ೧೮೦[2] ॥**
**ಕರ್ಮಣಃ ಸಾಧನಂ ಭಾರ್ಯಾ ಸ್ರುಕ್ಸ್ರುವಾದಿಪರಿಗ್ರಹಃ ।**
**ನೈವಾನ್ಯಸಾಧನಾಪೇಕ್ಷಾ ಶುಶ್ರೂಷೋಸ್ತು ಗುರುಂ ವಿನಾ ॥ ೧೮೧ ॥**

೧೭೯-೧೮೧. ಅರ್ಥಿಯಾದವನೂ ಸಮರ್ಥನೂ ಎಂದು ಮುಂತಾದದ್ದು[3] ಕರ್ಮಿಯ ಲಕ್ಷಣವೆಂಬುದು (ಮೀಮಾಂಸಕರ) ಮತ. 'ಲೋಕಗಳು (ಕರ್ಮಕೃತವೆಂಬುದನ್ನು ಪರೀಕ್ಷೆಮಾಡಿ ವೈರಾಗ್ಯವನ್ನು ಹೊಂದಬೇಕು)' (ಮುಂ. ೧-೨-೧೨) ಎಂಬುದು ಮೋಕ್ಷವನ್ನು ಬಯಸುವಾತನ ಲಕ್ಷಣ. ಮೋಕ್ಷಕ್ಕೆ ಸಂನ್ಯಾಸಿಯು ಅಧಿಕಾರಿ; ಗೃಹಸ್ಥನು ಕರ್ಮಕ್ಕೆ. ಕರ್ಮಕ್ಕೆ ಸಾಧನವು ಪತ್ನಿ, ಸ್ರುಕ್ಕು, ಸ್ರುವ-ಮುಂತಾದವುಗಳನ್ನಿಟ್ಟುಕೊಂಡಿರುವದು; ಶ್ರವಣಮಾಡುವವನಿಗೆ ಗುರುವೊಬ್ಬನನ್ನು ಬಿಟ್ಟು ಮತ್ತೊಂದು ಸಾಧನವು ಬೇಕೇಇಲ್ಲ.

**ಉಪರ್ಯುಪರ್ಯಹಙ್ಕಾರೋ ವರ್ಧತೇ ಕರ್ಮಣಾ ಭೃಶಮ್ ।**
**ಅಹಙ್ಕಾರಸ್ಯ ವಿಚ್ಛಿತ್ತಿಃ ಶ್ರವಣೇನ ಪ್ರತಿಕ್ಷಣಮ್ ॥ ೧೮೨ ॥**
**ಪ್ರವರ್ತಕಂ ಕರ್ಮಶಾಸ್ತ್ರಂ ಜ್ಞಾನಶಾಸ್ತ್ರಂ ನಿವರ್ತಕಮ್ ।**
**ಇತ್ಯಾದಿವೈಪರೀತ್ಯಂ ತತ್ಸಾಧನೇ ಚಾಧಿಕಾರಿಣೋಃ ॥ ೧೮೩ ॥**

೧೮೨-೧೮೩. ಕರ್ಮದಿಂದ ಮೇಲಿಂದಮೇಲೆ ಅಹಂಕಾರವು ಹೆಚ್ಚುತ್ತದೆ; ಶ್ರವಣದಿಂದ ಕ್ಷಣಕ್ಷಣಕ್ಕೂ ಅಹಂಕಾರವು ನಾಶವಾಗುತ್ತದೆ. ಕರ್ಮಶಾಸ್ತ್ರವು (ಕರ್ಮದಲ್ಲಿ) ತೊಡಗಿಸತಕ್ಕದ್ದು, ಜ್ಞಾನಶಾಸ್ತ್ರವು (ಕರ್ಮದಿಂದ) ಹಿಮ್ಮೆಟ್ಟಿಸ

---

1. ಸಾಮಗ್ರೀಭೇದವನ್ನು ೧೮೧ರಲ್ಲಿ ವರ್ಣಿಸಲಾಗಿದೆ.

2. ೧೭೨ಗ್ತ ಶ್ಲೋಕಾರ್ಧಕ್ಕೆ ಇದನ್ನು ಸೇರಿಸಿದರೆ ಒಂದು ಪೂರ್ಣಶ್ಲೋಕವಾಗುವದು.

3. ಅರ್ಥೀ(ಫಲವನ್ನು ಬಯಸುವವನು), ಸಮರ್ಥ(ಕರ್ಮವನ್ನು) ಮಾಡುವ ಶಕ್ತಿಯಿರುವವ), ವಿದ್ವಾನ್ (ಕರ್ಮದ ಸ್ವರೂಪವನ್ನು ಬಲ್ಲವನು), ಅಪರ್ಯುದಸ್ತ (ಅವನು ಮಾಡಬಾರದೆಂಬ ನಿಷೇಧವಿಲ್ಲದವನು).

ತಕ್ಕದ್ದು– ಅವೆರಡರ ಸಾಧನಗಳಿಗೂ ಅಧಿಕಾರಿಗಳಿಗೂ ಇದೇ ಮುಂತಾದ ವಿರೋಧ ವಿರುತ್ತದೆ.

**ದ್ವಯೋಃ ಪರಸ್ಪರಾಪೇಕ್ಷಾ ವಿದ್ಯತೇ ನ ಕದಾಚನ ।**
**ಸಾಮಗ್ರ್ಯೋಃಶ್ಚೋಭಯೋಸ್ತದ್ವದುಭಯತ್ರಾಧಿಕಾರಿಣೋಃ ॥ ೧೮೪ ॥**
**ಊರ್ಧ್ವಂ ನಯತಿ ವಿಜ್ಞಾನಮಧಃ ಪ್ರಾಪಯತಿ ಕ್ರಿಯಾ ।**
**ಕಥಮನ್ಯೋನ್ಯಸಾಪೇಕ್ಷಾ ಕಥಂ ವಾಪಿ ಸಮುಚ್ಚಯಃ ॥ ೧೮೫ ॥**

೧೮೪–೧೮೫. ಈ ಎರಡಕ್ಕೂ, ಈ ಎರಡರ ಸಾಮಗ್ರಿಗಳಿಗೂ ಎರಡರ ಅಧಿಕಾರಿಗಳಿಗೂ ಒಂದಕ್ಕೊಂದರ ಅಪೇಕ್ಷೆಯಿರುವದಿಲ್ಲ. ಜ್ಞಾನವು ಮೇಲಕ್ಕೆ ಒಯ್ಯುವದು, ಕರ್ಮವು ಕೆಳಕ್ಕೆ ಇಳಿಸುತ್ತದೆ. ಇವೆರಡಕ್ಕೂ ಒಂದಕ್ಕೊಂದರ ಅಪೇಕ್ಷೆ ಹೇಗಾದೀತು? ಇವೆರಡರ ಸಮುಚ್ಚಯವಾದರೂ ಹೇಗಾದೀತು?

**ಯಥಾಗ್ನೇಸ್ತೃಣಕೂಟಸ್ಯ ತೇಜಸಸ್ತಿಮಿರಸ್ಯ ಚ ।**
**ಸಹಯೋಗೋ ನ ಘಟತೇ ತಥೈವ ಜ್ಞಾನಕರ್ಮಣೋಃ ॥ ೧೮೬ ॥**

೧೮೬. ಬೆಂಕಿ, ಹುಲ್ಲುಬಣವೆ–ಇವೆರಡಕ್ಕೂ ಬೆಳಕು, ಕತ್ತಲೆ– ಇವೆರಡಕ್ಕೂ ಒಂದೆಡೆ ಇರುವದು ಹೇಗೆ ಹೊಂದದೋ ಹಾಗೆಯೇ ಜ್ಞಾನಕರ್ಮಗಳಿಗೂ (ಹೊಂದದು).

**ಕಿಮುಪಕುರ್ಯಾಜ್ಜ್ಞಾನಸ್ಯ ಕರ್ಮ ಸ್ವಪ್ರತಿಯೋಗಿನಃ ।**
**ಯಸ್ಯ ಸಂನಿಧಿಮಾತ್ರೇಣ ಸ್ವಯಂ ನ ಸ್ಫೂರ್ತಿಮೃಚ್ಛತಿ ॥ ೧೮೭ ॥**

**ಕೋಟೇನ್ಧನಾದ್ರಿಜ್ವಲಿತೋಽಪಿ ವಹ್ನಿ**
**ರರ್ಕಸ್ಯ ನಾರ್ಹತ್ಯುಪಕರ್ತುಮೀಷತ್ ।**
**ಯಥಾ ತಥಾ ಕರ್ಮಸಹಸ್ರಕೋಟಿ**
**ರ್ಜ್ಞಾನಸ್ಯ ಕಿಂ ತು[1] ಸ್ವಯಮೇವ ಲೀಯತೇ ॥ ೧೮೮ ॥**

೧೮೭–೧೮೮. ಯಾವ (ಜ್ಞಾನವು) ಬಳಿಯಲ್ಲಿದ್ದಮಾತ್ರದಿಂದ ತಾನೇ ತೋರಿಕೊಳ್ಳಲಾರದೆ ಹೋಗುವದೋ ಅಂಥ ತನ್ನ ಪ್ರತಿದ್ವಂದ್ವಿಯಾದ ಜ್ಞಾನಕ್ಕೆ ಕರ್ಮವು ಯಾವ ಉಪಕಾರವನ್ನುತಾನೆ ಮಾಡೀತು? ಹೇಗೆ ಕೋಟಿಗಟ್ಟಲೆಯ ಕಟ್ಟಿಗೆಗಳ ಪರ್ವತವನ್ನೇ ಹೊತ್ತಿಸಿ ಮಾಡಿದ ಬೆಂಕಿಯು ಸೂರ್ಯನಿಗೆ ಒಂದಿಷ್ಟೂ ಉಪಕಾರವನ್ನು ಮಾಡಲಾರದೋ ಹಾಗೆಯೇ ಸಾವಿರಾರು ಕೋಟಿ ಕರ್ಮವೂ ಜ್ಞಾನಕ್ಕೆ (ಒಂದಿಷ್ಟೂ ಉಪಕಾರವನ್ನು ಮಾಡಲಾರದು); ಇಷ್ಟೇ ಅಲ್ಲ, (ಅದರ ಸಂನಿಧಿಯಲ್ಲಿ) ತಾನೇ ಅಡಗಿಹೋಗುತ್ತದೆ.

---

1. 'ನು' ಎಂಬ ಅಚ್ಚಿನ ಪಾಠವನ್ನು 'ತು' ಎಂದು ತಿದ್ದಿಕೊಂಡಿದೆ.

**ಏಕಕರ್ತ್ರಾಶ್ರಯೌ ಹಸ್ತೌ ಕರ್ಮಣ್ಯಧಿಕೃತಾವುಭೌ ।**
**ಸಹಯೋಗಸ್ತಯೋರ್ಯುಕ್ತೋ ನ ತಥಾ ಜ್ಞಾನಕರ್ಮಣೋಃ॥೧೮೯॥**
**ಕರ್ತ್ರಾ ಕರ್ತುಮಕರ್ತುಂ ವಾಪ್ಯನ್ಯಥಾ ಕರ್ಮ ಶಕ್ಯತೇ ।**
**ನ ತಥಾ ವಸ್ತುನೋ ಜ್ಞಾನಂ ಕರ್ತೃತನ್ತ್ರಂ ಕದಾಚನ ॥ ೧೯೦ ॥**

೧೮೯–೧೯೦. ಎರಡು ಕೈಗಳೂ ಒಬ್ಬನೇ ಕರ್ತೃವನ್ನು ಆಶ್ರಯಿಸಿಕೊಂಡಿರುತ್ತವೆ; ಎರಡೂ ಒಂದೇ ಕರ್ಮದಲ್ಲಿ ತೊಡಗುವವಾಗಿರುತ್ತವೆ. (ಆದ್ದರಿಂದ ನೀವು ಹೇಳಿದ ದೃಷ್ಟಾಂತದಲ್ಲಿ) ಆ (ಎರಡು ಕೈಗಳಿಗೆ) ಜೊತೆಯಲ್ಲಿ ಸಂಧಿಸಿಕೊಂಡಿದ್ದು (ಕಾರ್ಯವನ್ನುಂಟುಮಾಡುವದು) ಯುಕ್ತವಾಗಿರುತ್ತದೆ. ಆದರೆ ಜ್ಞಾನಕರ್ಮಗಳ ವಿಷಯದಲ್ಲಿ ಹಾಗಿಲ್ಲ. (ಏಕೆಂದರೆ) ಕರ್ಮವೆಂಬುದು ಕರ್ತೃವಾದವನು ಮಾಡುವದಕ್ಕಾಗಲಿ ಮಾಡದೆ ಇರುವದಕ್ಕಾಗಲಿ ಬೇರೆಯ ರೀತಿಯಲ್ಲಿಯೇ ಮಾಡುವದಕ್ಕಾಗಲಿ ಬರುತ್ತದೆ; ಆದರೆ ವಸ್ತುವಿನ ಜ್ಞಾನವು ಎಂದಿಗೂ ಹಾಗೆ ಕರ್ತೃವಿಗಧೀನವಾಗಿರುವದಿಲ್ಲ.

**ಯಥಾವಸ್ತು ತಥಾ ಜ್ಞಾನಂ ಪ್ರಮಾಣೇನ ವಿಜಾಯತೇ ।**
**ನಾಪೇಕ್ಷತೇ ಚ ಯತ್ಕಿಞ್ಚಿತ್ಕರ್ಮ ವಾ ಯುಕ್ತಿಕೌಶಲಮ್ ॥ ೧೯೧ ॥**

೧೯೧. ವಸ್ತು ಹೇಗಿರುತ್ತದೆಯೋ ಹಾಗೆಯೇ ಜ್ಞಾನವು ಪ್ರಮಾಣದಿಂದ ಆಗಿಬಿಡುತ್ತದೆ; ಕರ್ಮವನ್ನಾಗಲಿ, ಯುಕ್ತಿಯ ಕೌಶಲವನ್ನಾಗಲಿ ಯಾವದನ್ನೂ (ಅದು) ಅಪೇಕ್ಷಿಸುವದಿಲ್ಲ.

**ಜ್ಞಾನಸ್ಯ ವಸ್ತುತನ್ತ್ರತ್ವೇ ಸಂಶಯಾದ್ಯುದಯಃ ಕಥಮ್ ।**
**ಅತೋ ನ ವಾಸ್ತವಂ ಜ್ಞಾನಮಿತಿ ನೋ ಶಙ್ಕ್ಯತಾಂ ಬುಧೈಃ ॥ ೧೯೨ ॥**
**ಪ್ರಮಾಣಾಸೌಷ್ಠವಕೃತಂ ಸಂಶಯಾದಿ ನ ವಾಸ್ತವಮ್ ।**
**ಶ್ರುತಿಪ್ರಮಾಣಸುಷ್ಠುತ್ವೇ ಜ್ಞಾನಂ ಭವತಿ ವಾಸ್ತವಮ್ ॥ ೧೯೩ ॥**

೧೯೨–೧೯೩. ಜ್ಞಾನವು ವಸ್ತುವಿಗಧೀನ(ವಾಗಿ ಉಂಟಾಗುವ)ದಾದರೆ, ಸಂಶಯಾದಿಗಳು ಉಂಟಾಗುವದು ಹೇಗೆ[1]? ಆದ್ದರಿಂದ ಜ್ಞಾನವು ವಸ್ತುತನ್ತ್ರವಲ್ಲ–ಎಂದು ವಿವೇಕಿಗಳು ಶಂಕಿಸಬಾರದು. ಸಂಶಯಾದಿಗಳು ಪ್ರಮಾಣದ ದೋಷದಿಂದ ಆಗಿರುವದರಿಂದ ವಸ್ತುತಂತ್ರವಲ್ಲ; ಶ್ರುತಿಪ್ರಮಾಣವು ನಿರ್ದುಷ್ಟವಾಗಿರುವದರಿಂದ (ಆತ್ಮ)ಜ್ಞಾನವು ವಸ್ತುತಂತ್ರವಾಗಿರುತ್ತದೆ.

**ವಸ್ತು ತಾವತ್ಪರಂ ಬ್ರಹ್ಮ ನಿತ್ಯಂ ಸತ್ಯಂ ಧ್ರುವಂ ವಿಭು ।**
**ಶ್ರುತಿಪ್ರಮಾಣೇ ತಜ್ಜ್ಞಾನಂ ಸ್ಯಾದೇವ ನಿರಪೇಕ್ಷಕಮ್ ॥ ೧೯೪ ॥**

1. ಜ್ಞಾನವೆಲ್ಲ ವಸ್ತುತಂತ್ರವೆಂದು ಸಿದ್ಧಾಂತಿ ಹೇಳುತ್ತಾನೆಂದು ಶಂಕೆಮಾಡಿದವನು ಇಟ್ಟುಕೊಂಡಿದಾನೆ.

**ರೂಪಜ್ಞಾನಂ ಯಥಾ ಸಮ್ಯಗ್ದೃಷ್ಟ್ಯಾ ಸತ್ಯಾಂ ಭವೇತ್ತಥಾ ।**
**ಶ್ರುತಿಪ್ರಮಾಣೇ ಸತ್ಯೇವ ಜ್ಞಾನಂ ಭವತಿ ವಾಸ್ತವಮ್ ॥ ೧೯೫ ॥**

೧೯೪––೧೯೫. ಪರಬ್ರಹ್ಮವೆಂಬ ವಸ್ತುವಂತೂ ನಿತ್ಯವು, ಸತ್ಯವು, ಕೂಟಸ್ಥವು, ವ್ಯಾಪಕವು. ಶ್ರುತಿಯೆಂಬ ಪ್ರಮಾಣವಿದ್ದರೆ ಅದರ ಜ್ಞಾನವು ಮತ್ತೊಂದನ್ನಪೇಕ್ಷಿಸದೆ ಆಗಿಬಿಡುತ್ತದೆ. ಹೇಗೆ ಸರಿಯಾದ ಕಣ್ಣಿದ್ದರೇ ರೂಪಜ್ಞಾನವಾಗುವದೋ ಹಾಗೆ ಶ್ರುತಿಪ್ರಮಾಣವು ಇದ್ದರೇ ವಸ್ತುತಂತ್ರವಾದ (ಬ್ರಹ್ಮ)ಜ್ಞಾನವಾಗುವದು.

**ನ ಕರ್ಮ ಯತ್ಕಿಞ್ಚಿದಪೇಕ್ಷತೇ ಹಿ**
**ರೂಪೋಪಲಬ್ಧೌ ಪುರುಷಸ್ಯ ಚಕ್ಷುಃ ।**
**ಜ್ಞಾನಂ ತಥೈವ ಶ್ರವಣಾದಿಜನ್ಯಂ**
**ವಸ್ತುಪ್ರಕಾಶೇ ನಿರಪೇಕ್ಷಮೇವ ॥ ೧೯೬ ॥**

೧೯೬. ಮನುಷ್ಯನ ಕಣ್ಣು ರೂಪವನ್ನು ಅರಿತುಕೊಳ್ಳುವದಕ್ಕೆ ಮತ್ತೆ ಯಾವ ಕರ್ಮವನ್ನೂ (ತನ್ನ ಸಹಾಯಕ್ಕೆ) ಬಯಸುವದಿಲ್ಲವಷ್ಟೆ? ಹಾಗೆಯೇ ಶ್ರವಣಾದಿಗಳಿಂದಾಗುವ ಜ್ಞಾನವು (ಬ್ರಹ್ಮ)ವಸ್ತುವನ್ನು ಬೆಳಗುವದಕ್ಕೆ (ಮತ್ತೇನನ್ನೂ) ಬಯಸದೆಯೇ ಸಮರ್ಥವಾಗುತ್ತದೆ.

**ಕರ್ತೃತನ್ತ್ರಂ ಭವೇತ್ಕರ್ಮ ಕರ್ಮತನ್ತ್ರಂ ಶುಭಾಶುಭಮ್ ।**
**ಪ್ರಮಾಣತನ್ತ್ರಂ ವಿಜ್ಞಾನಂ ಮಾಯಾತನ್ತ್ರಮಿದಂ ಜಗತ್ ॥ ೧೯೭ ॥**

೧೯೭. ಕರ್ಮವು ಕರ್ತೃವಿಗಧೀನವಾಗಿರುವದು; ಶುಭಾಶುಭ(ಫಲ)ಗಳು ಕರ್ಮಕ್ಕೆ ಅಧೀನವಾಗಿರುವವು; ಜ್ಞಾನವು ಪ್ರಮಾಣಕ್ಕಧೀನವಾಗಿರುವದು; ಈ ಜಗತ್ತು ಮಾಯೆಗೆ ಅಧೀನವಾದದ್ದು.

**ವಿದ್ಯಾಂ ಚಾವಿದ್ಯಾಂ ಚೇತಿ ಸಹೋಕ್ತಿರಿಯಮುದಾಹೃತಾ[1] ಸದ್ಭಿಃ ।**
**ಸತ್ಕರ್ಮೋಪಾಸನಯೋರ್ನ ತ್ವಾತ್ಮಜ್ಞಾನಕರ್ಮಣೋಃ ಕ್ವಾಪಿ ॥೧೯೮॥**

೧೯೮. ವಿದ್ಯೆಯನ್ನೂ ಅವಿದ್ಯೆಯನ್ನೂ (ಎರಡನ್ನೂ ಜೊತೆಯಲ್ಲಿ ಯಾವನು ತಿಳಿಯುವನೋ) (ಈ. ೧೧) ಎಂಬೀ ಸಹೋಕ್ತಿ (ಸಮುಚ್ಚಯೋಕ್ತಿ)ಯನ್ನು ಬಲ್ಲವರು ತಿಳಿಸಿರುವದು ಸತ್ಕರ್ಮ ಮತ್ತು ಉಪಾಸನೆ –ಇವುಗಳ ವಿಷಯವೇ ಹೊರತು ಎಂದಿಗೂ ಆತ್ಮಜ್ಞಾನಕರ್ಮಗಳ ವಿಷಯವಲ್ಲ.

**ನಿತ್ಯಾನಿತ್ಯಪದಾರ್ಥಬೋಧರಹಿತೋ ಯಶ್ಚೋಭಯತ್ರ ಸ್ರಗಾ-**
**ದ್ಯರ್ಥಾನಾಮನುಭೂತಿಲಗ್ನಹೃದಯೋಽನಿರ್ವಿಣ್ಣಬುದ್ಧಿರ್ಜನಃ ।**
**ತಸ್ಯೈವಾಸ್ಯ ಜಡಸ್ಯ ಕರ್ಮ ವಿಹಿತಂ ಶ್ರುತ್ಯಾ ವಿರಜ್ಯಾಭಿತೋ**
**ಮೋಕ್ಷೇಚ್ಛೋರ್ನ ವಿಧೀಯತೇ ತು ಪರಮಾನನ್ದಾರ್ಥಿನೋ**
**ಧೀಮತಃ ॥ ೧೯೯ ॥**

---
1. 'ಮುಪಕೃತಾ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

೧೯೯. ಯಾವನು ನಿತ್ಯಾನಿತ್ಯವಸ್ತುಗಳನ್ನು (ವಿಂಗಡಿಸುವ) ತಿಳಿವಳಿಕೆಯಿಲ್ಲದವನೋ (ಇಹಪರ)ಗಳೆರಡರಲ್ಲಿಯೂ ಹೂ(ಗಂಧವೇ) ಮುಂತಾದ ವಿಷಯಗಳನ್ನು ಅನುಭವಿಸುವದರಲ್ಲಿ ನೆಟ್ಟಮನಸ್ಸುಳ್ಳವನೋ, ವೈರಾಗ್ಯವಿಲ್ಲದವನೋ, ಅಂಥ ಮೂಢನಿಗೇ ಕರ್ಮವು ಶ್ರುತಿಯಿಂದ ವಿಹಿತವಾಗಿರುತ್ತದೆಯೇ ಹೊರತು (ಇಹಪರಭೋಗ)ಗಳೆರಡರಲ್ಲಿಯೂ ವಿರಕ್ತನಾಗಿ ಪರಮಾನಂದವನ್ನು ಬಯಸುತ್ತಿರುವ ವಿವೇಕಿಯಾದ ಮುಮುಕ್ಷುವಿಗೆ ವಿಹಿತವಾಗಿರುವದಿಲ್ಲ.

**ಮೋಕ್ಷೇಚ್ಛಯಾ ಯದಹರೇವ ವಿರಜ್ಯತೇಽಸೌ**
**ನ್ಯಾಸಸ್ತದೈವ ವಿಹಿತೋ ವಿದುಷೋ ಮುಮುಕ್ಷೋಃ ।**
**ಶ್ರುತ್ಯಾ ತಯೈವ ಪರಯಾ ಚ ತತಃ ಸುಧೀಭಿಃ**
**ಪ್ರಾಮಾಣಿಕೋಽಯಮಿತಿ ಚೇತಸಿ ನಿಶ್ಚಿತವ್ಯಃ[1] ॥ ೨೦೦ ॥**

೨೦೦. ಮೋಕ್ಷವಲ್ಲಿರುವ ಇಚ್ಛೆಯಿಂದ 'ಯಾವ ದಿನವೇ[2] ಇವನು ವಿರಕ್ತನಾಗುತ್ತಾನೆಯೋ' ಆಗಲೇ ವಿವೇಕಿಯಾದ ಈ ಮುಮುಕ್ಷುವಿಗೆ ಸಂನ್ಯಾಸವನ್ನು ಮಾಡಬೇಕೆಂದು ಅದೇ ಹೆಚ್ಚಿನ[3] (ಪ್ರಮಾಣವಾದ) ಶ್ರುತಿಯಿಂದ ವಿಹಿತವಾಗಿರುತ್ತದೆ. ಆದ್ದರಿಂದ ವಿವೇಕಿಗಳು ಈ (ಸಂನ್ಯಾಸವು) ಪ್ರಮಾಣಸಿದ್ಧವೆಂದು ಚಿತ್ತದಲ್ಲಿ ನಿಶ್ಚಯಿಸಿಕೊಳ್ಳಬೇಕು.[4]

**ಸ್ವಾಪರೋಕ್ಷ್ಯಸ್ಯ[5] ವೇದಾದೇ ಸಾಧನತ್ವಂ ನಿಷೇಧತಿ ।**
**ನಾಹಂ ವೇದೈರ್ನ ತಪಸೇತ್ಯಾದಿನಾ ಭಗವಾನಪಿ ॥ ೨೦೧ ॥**

೨೦೧. ತನ್ನ ಅಪರೋಕ್ಷ(ಜ್ಞಾನಕ್ಕೆ) ವೇದವೇ ಮುಂತಾದದ್ದು ಸಾಧನತ್ವವಲ್ಲವೆಂದು 'ನಾನು ವೇದಗಳಿಂದಲಾಗಲಿ, ತಪಸ್ಸಿನಿಂದಲಾಗಲಿ (ದಾನದಿಂದಲಾಗಲಿ, ಯಜ್ಞದಿಂದಲಾಗಲಿ ಹೀಗೆ ನೋಡುವದಕ್ಕೆ ಶಕ್ಯ)ನಲ್ಲ' (ಗೀ. ೧೧-೫೩) ಎಂದು ಭಗವಂತನೂ ಹೇಳಿರುತ್ತಾನೆ.[6]

**ಪ್ರವೃತ್ತಿಶ್ಚ ನಿವೃತ್ತಿಶ್ಚ ದ್ವೇ ಏತೇ ಶ್ರುತಿಗೋಚರೇ ।**
**ಪ್ರವೃತ್ತ್ಯಾ ಬಧ್ಯತೇ ಜನ್ತುರ್ನಿವೃತ್ತ್ಯಾ ತು ವಿಮುಚ್ಯತೇ ॥ ೨೦೨ ॥**

1. 'ನಿಶ್ಚೇತವ್ಯಃ' ಎಂದಿರಬೇಕು; ಆದರೆ ಹಾಗಿದ್ದರೆ ಛಂದಸ್ಸು ಕೆಡುತ್ತದೆ.
2. 'ಯದಹರೇವ ವಿರಜೇತ್ತದಹರೇವ ಪ್ರವ್ರಜೇತ್' (ಜಾ. ೪).
3. 'ಪರಾ ಶ್ರುತಿಃ' ಎಂದರೆ ಅತೀಂದ್ರಿಯವಿಷಯದಲ್ಲಿ ಪ್ರಬಲಪ್ರಮಾಣವಾದ ಶ್ರುತಿ.
4. ಯಾವಜ್ಜೀವವೂ ಮಾಡಬೇಕೆಂದು ವಿಧಿಸಿರುವ ಕರ್ಮವನ್ನು ಮುಮುಕ್ಷುವು ಬಿಡಬಹುದೆ? ಎಂಬ (ಶ್ಲೋ. ೧೭೬) ಶಂಕೆಗೆ ಸಮಾಧಾನವಿದು.
5. 'ಸ್ವಾಪರೋಕ್ಷಸ್ಯ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
6. ಈ ವಾಕ್ಯದಲ್ಲಿ ವಿಶ್ವರೂಪದರ್ಶನಕ್ಕೆ ಇವು ಸಾಧನವಲ್ಲವೆಂದು ಹೇಳಿದೆ. ಅದೇ ನ್ಯಾಯವು ನಿರ್ಗುಣಬ್ರಹ್ಮದರ್ಶನಕ್ಕೂ ಹೊಂದುತ್ತದೆ ಎಂದು ಗ್ರಂಥಕರ್ತರ ಅಭಿಪ್ರಾಯವಿರಬಹುದು.

**ಯೇನ ಸ್ವಬನ್ಧೋಽಭಿಮತೋ ಮೂಢಸ್ಯಾಪಿ ಕ್ವಚಿತ್ತತಃ ।**
**ನಿವೃತ್ತಿಃ ಕರ್ಮಸಂನ್ಯಾಸಃ ಕರ್ತವ್ಯೋ ಮೋಕ್ಷಕಾಙ್ಕ್ಷಿಭಿಃ ॥ ೨೦೩ ॥**

೨೦೨–೨೦೩. ಪ್ರವೃತ್ತಿಯೂ ನಿವೃತ್ತಿಯೂ ಎಂಬೀ ಎರಡೂ ಶ್ರುತಿಯಲ್ಲಿ ಕಂಡುಬಂದಿರುವ (ಮಾರ್ಗಗಳು).[1] ಜೀವನು ಪ್ರವೃತ್ತಿಯಿಂದ ಬದ್ಧನಾಗುತ್ತಾನೆ; ನಿವೃತ್ತಿಯಿಂದ ಮುಕ್ತನಾಗುತ್ತಾನೆ; ಮೂಢನಿಗೂ (ತಾನು) ಬದ್ಧನಾಗಿರಬೇಕೆಂಬುದು ಎಂದಿಗೂ ಒಪ್ಪಾಗಿರುವದಿಲ್ಲ; ಆದ್ದರಿಂದ ಮೋಕ್ಷವನ್ನು ಬಯಸುವವರು ನಿವೃತ್ತಿ(ಧರ್ಮವಾದ) ಕರ್ಮಸಂನ್ಯಾಸವನ್ನು ಮಾಡಬೇಕು.[2]

**ನ ಜ್ಞಾನಕರ್ಮಣೋರ್ಯಸ್ಮಾತ್ಸಹ ಯೋಗಸ್ತು ಯುಜ್ಯತೇ ।**
**ತಸ್ಮಾತ್ತ್ಯಾಜ್ಯಂ ಪ್ರಯತ್ನೇನ ಕರ್ಮ ಜ್ಞಾನೇಚ್ಛುನಾ ಧ್ರುವಮ್ ॥**
**ಇಷ್ಟಸಾಧನತಾಬುದ್ಧ್ಯಾ ಗೃಹೀತಸ್ಯಾಪಿ ವಸ್ತುನಃ ।**
**ವಿಜ್ಞಾಯ ಫಲ್ಗುತಾಂ ಪಶ್ಚಾತ್ಕಃ ಪುನಸ್ತತ್ಪ್ರತೀಕ್ಷತೇ ॥ ೨೦೫ ॥**

೨೦೪–೨೦೫. (ಹೀಗೆ) ಜ್ಞಾನಕರ್ಮಗಳಿಗೆ ಜೊತೆಯಲ್ಲಿರುವದೆಂಬುದು ಹೊಂದುವದಿಲ್ಲವೆಂದಾಯಿತಷ್ಟೆ? ಆದ್ದರಿಂದ ಜ್ಞಾನವನ್ನು ಬಯಸುವಾತನು ಖಂಡಿತವಾಗಿಯೂ ಪ್ರಯತ್ನಪೂರ್ವಕವಾಗಿ ಕರ್ಮವನ್ನು ಬಿಟ್ಟುಬಿಡತಕ್ಕದ್ದು. (ಇದು) ಇಷ್ಟಾರ್ಥಕ್ಕೆ ಸಾಧನವು ಎಂಬ ಭಾವನೆಯಿಂದ ಮೊದಲು ಸ್ವೀಕರಿಸಿದ್ದ ವಸ್ತುವನ್ನು ಇದು ಕ್ಷುಲ್ಲಕವಾದದ್ದು ಎಂದು ತಿಳಿದುಕೊಂಡಮೇಲೂ ಅದನ್ನು ಯಾವನು ಕಾದುಕೊಂಡು ಕುಳಿತಾನು ?

**ಉಪರತಿಶಬ್ದಾರ್ಥೋ ಹ್ಯುಪರಮಣಂ ಪೂರ್ವದೃಷ್ಟವೃತ್ತಿಭ್ಯಃ ।**
**ಸೋಽಯಂ ಮುಖ್ಯೋ ಗೌಣಶ್ಚೇತಿ ಚ ವೃತ್ತ್ಯಾ ದ್ವಿರೂಪತಾಂ ಧತ್ತೇ ॥**
**ವೃತ್ತೇರ್ದೃಶ್ಯಪರಿತ್ಯಾಗೋ ಮುಖ್ಯಾರ್ಥ ಇತಿ ಕಥ್ಯತೇ ।**
**ಗೌಣಾರ್ಥಃ ಕರ್ಮಸಂನ್ಯಾಸಃ ಶ್ರುತೇರಙ್ಗತಯಾ ಮತಃ ॥ ೨೦೭ ॥**

೨೦೬–೨೦೭. ಹಿಂದೆ ಅನುಭವಿಸಿದ ವೃತ್ತಿಗಳನ್ನು (ಎಬ್ಬಿಸದೆ) ಬಿಡುವದೆಂಬುದೇ 'ಉಪರತಿ'ಶಬ್ದಕ್ಕೆ ಅರ್ಥವಷ್ಟೆ? ಈ (ಉಪರತಿಯು) ಮುಖ್ಯವೆಂದೂ ಗೌಣವೆಂದೂ (ಶಬ್ದ)ವೃತ್ತಿಯ (ದೃಷ್ಟಿ)ಯಿಂದ ಎರಡು ರೂಪಗಳನ್ನು ತಳೆದಿದೆ. ದೃಶ್ಯ(ವಸ್ತುವನ್ನು) ಬಿಡುವದೇ ವೃತ್ತಿಗೆ ಮುಖ್ಯಾರ್ಥವೆನ್ನುವರು. ಶ್ರವಣಕ್ಕೆ ಅಂಗವಾಗಿ ಕರ್ಮಗಳನ್ನು ಬಿಟ್ಟುಬಿಡುವದೆಂಬುದು ಗೌಣಾರ್ಥವೆಂದು (ಶಾಸ್ತ್ರದ) ಮತವು.[3]

---

1. 'ದ್ವಾವಿಮಾವಥ ಪನ್ಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ ।
ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತಿಶ್ಚ ವಿಭಾವಿತಃ ॥ ಮೋ. ಧ. ೨೪೦–೬
2. ಕರ್ಮಣಾ ಬಧ್ಯತೇ ಜನ್ತುರ್ವಿದ್ಯಯಾ ಚ ವಿಮುಚ್ಯತೇ ।
ತಸ್ಮಾತ್ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ ॥ ಮೋ. ಧ. ೨೪೧–೭
3. ಈ ವಿಭಾಗವನ್ನು ಭಾಷ್ಯದಲ್ಲಿ ಎಲ್ಲಿಯೂ ಹೇಳಿದಂತೆ ಕಾಣುವದಿಲ್ಲ.

**ಪುಂಸಃ ಪ್ರಧಾನಸಿದ್ಧ್ಯರ್ಥಮಙ್ಗಸ್ಯಾಶ್ರಯಣಂ ಧ್ರುವಮ್ ।**
**ಕರ್ತವ್ಯಮಙ್ಗಹೀನಂ ಚೇತ್ ಪ್ರಧಾನಂ ನೈವ ಸಿಧ್ಯತಿ ॥ ೨೦೮ ॥**

೨೦೮. ಪ್ರಧಾನವು ಸಿದ್ಧಿಸಬೇಕಾದರೆ ಮನುಷ್ಯನು ಅವಶ್ಯವಾಗಿ ಅಂಗವನ್ನು ಆಶ್ರಯಿಸಬೇಕು. ಕರ್ತವ್ಯವು ಅಂಗಹೀನವಾದರೆ ಪ್ರಧಾನವಾದದ್ದು ಸಿದ್ಧಿಸುವದೇಇಲ್ಲ.[1]

**ಸಂನ್ಯಸೇತ್ಸುವಿರಕ್ತಃ ಸನ್ನಿಹಾಮುತ್ರಾರ್ಥತಃ ಸುಖಾತ್ ।**
**ಅವಿರಕ್ತಸ್ಯ ಸಂನ್ಯಾಸೋ ನಿಷ್ಫಲೋಽಯಾಜ್ಯಯಾಗವತ್ ॥ ೨೦೯ ॥**

೨೦೯. ಈ ಲೋಕದ ಮತ್ತು ಪರಲೋಕದ ಭೋಗ್ಯವಿಷಯಗಳ ಸುಖದಲ್ಲಿ ವಿರಕ್ತಿಯುಳ್ಳಾತನೇ (ಸಂನ್ಯಾಸಮಾಡಬೇಕು). ವಿರಕ್ತನಲ್ಲದವನು (ಮಾಡುವ) ಸಂನ್ಯಾಸವು ಯಾಗಮಾಡುವದಕ್ಕೆ ಅರ್ಹನಲ್ಲದವನು ಮಾಡುವ ಯಾಗದಂತೆ ನಿಷ್ಫಲವಾಗಿರುತ್ತದೆ.

**ಸಂನ್ಯಸ್ಯ ತು ಯತಿಃ ಕುರ್ಯಾನ್ನ ಪೂರ್ವವಿಷಯಸ್ಮೃತಿಮ್ ।**
**ತಾಂ ತಾಂ ತತ್ಸ್ಮರಣೇ ತಸ್ಯ ಜುಗುಪ್ಸಾ ಜಾಯತೇ ಯತೇಃ ॥ ೨೧೦ ॥**

೨೧೦. ಯತಿಯಾದವನು (ಕರ್ಮ)ಸಂನ್ಯಾಸಮಾಡಿದಮೇಲೆ ಹಿಂದಿನ ಆಯಾ ವಿಷಯವ ಸ್ಮರಣೆಯನ್ನು ಮಾಡಿಕೊಳ್ಳಬಾರದು. ಏಕೆಂದರೆ ಅದನ್ನು ಸ್ಮರಿಸಿಕೊಂಡರೆ ಅವನಿಗೆ ಜುಗುಪ್ಸೆಯುಂಟಾಗುತ್ತದೆ.

## ಶ್ರದ್ಧೆ

**ಗುರುವೇದಾನ್ತವಾಕ್ಯೇಷು ಬುದ್ಧಿರ್ಯಾ ನಿಶ್ಚಯಾತ್ಮಿಕಾ ।**
**ನಿತ್ಯಮಿತ್ಯೇವ ಸಾ ಶ್ರದ್ಧಾ ನಿದಾನಂ ಮುಕ್ತಿಸಿದ್ಧಯೇ ॥ ೨೧೧ ॥**

೨೧೧. ಗುರುವಾಕ್ಯದಲ್ಲಿಯೂ ವೇದಾಂತವಾಕ್ಯಗಳಲ್ಲಿಯೂ (ಇದು) ಸತ್ಯವು ಎಂಬ ನಿಶ್ಚಯರೂಪವಾದ ಬುದ್ಧಿಯಿರುವದಲ್ಲ, ಅದೇ ಮೋಕ್ಷಸಿದ್ಧಿಗೆ ಕಾರಣವಾಗಿರುವ ಶ್ರದ್ಧೆ.

**ಶ್ರದ್ಧಾವತಾಮೇವ ಸತಾಂ ಪುಮರ್ಥಃ**
**ಸಮೀರಿತಃ ಸಿಧ್ಯತಿ ನೇತರೇಷಾಮ್ ।**
**ಉಕ್ತಂ ಸುಸೂಕ್ಷ್ಮಂ ಪರಮಾರ್ಥತತ್ತ್ವಂ**
**ಶ್ರದ್ಧತ್ಸ್ವ ಸೌಮ್ಯೇತಿ ಚ ವಕ್ತಿ ವೇದಃ ॥ ೨೧೨ ॥**

---

1. ಇಲ್ಲಿ ಕರ್ಮಸಂನ್ಯಾಸವೇ ಅಂಗ; ಪ್ರಧಾನವಾದದ್ದು ಶ್ರವಣವು. ಆದ್ದರಿಂದ ಸಂನ್ಯಾಸವಿಲ್ಲದೆ ಶ್ರವಣವಿಲ್ಲ.

೨೧೨. ಶ್ರದ್ಧೆಯುಳ್ಳವರಾಗಿರುವ ಸಜ್ಜನರಿಗೇ ಶಾಸ್ತ್ರದಲ್ಲಿ ಹೇಳಿದ ಪುರುಷಾರ್ಥವು ಸಿದ್ಧಿಸುವದೇ ಹೊರತು ಮಿಕ್ಕವರಿಗೆ (ದಕ್ಕದು). ಹೇಳಿರುವ (ಈ) ಬಹುಸೂಕ್ಷ್ಮವಾದ ಪರಮಾರ್ಥತತ್ತ್ವವನ್ನು 'ನಂಬಯ್ಯ' (ಛಾಂ. ೬-೧೨-೨) ಎಂದು ವೇದವೂ ಹೇಳುತ್ತಿದೆ.

**ಶ್ರದ್ಧಾವಿಹೀನಸ್ಯ ತು ನ ಪ್ರವೃತ್ತಿಃ**
**ಪ್ರವೃತ್ತಿಶೂನ್ಯಸ್ಯ ನ ಸಾಧ್ಯಸಿದ್ಧಿಃ ।**
**ಅಶ್ರದ್ಧಯೈವಾಭಿಹತಾಶ್ಚ ಸರ್ವೇ**
**ಮಜ್ಜನ್ತಿ ಸಂಸಾರಮಹಾಸಮುದ್ರೇ ॥ ೨೧೩ ॥**

೨೧೩. ಶ್ರದ್ಧೆಯಿಲ್ಲದಾತನಿಗೆ ಪ್ರವೃತ್ತಿಯುಂಟಾಗುವದಿಲ್ಲ. ಪ್ರವೃತ್ತಿಯಿಲ್ಲದವನಿಗೆ ಇಷ್ಟಾರ್ಥವು ಕೈಗೂಡುವದಿಲ್ಲ. ಅಶ್ರದ್ಧೆಯಿಂದಲೇ ಪೆಟ್ಟುತಿಂದವರಾಗಿ ಎಲ್ಲರೂ ಸಂಸಾರವೆಂಬ ಮಹಾಸಮುದ್ರದಲ್ಲಿ ಮುಳುಗುತ್ತಿರುವರು.

**ದೈವೇ ಚ ವೇದೇ ಚ ಗುರೌ ಚ ಮನ್ತ್ರೇ**
**ತೀರ್ಥೇ ಮಹಾತ್ಮನ್ಯಪಿ ಭೇಷಜೇ ಚ ।**
**ಶ್ರದ್ಧಾ ಭವತ್ಯಸ್ಯ ಯಥಾ ಯಥಾನ್ತ-**
**ಸ್ತಥಾ ತಥಾ ಸಿದ್ಧಿರುದೇತಿ ಪುಂಸಃ[1] ॥ ೨೧೪ ॥**

೨೧೪. ದೇವರಲ್ಲಿ, ವೇದದಲ್ಲಿ, ಗುರುವಿನಲ್ಲಿ, ಮಂತ್ರದಲ್ಲಿ, ತೀರ್ಥದಲ್ಲಿ, ಮಹಾತ್ಮನಲ್ಲಿ, ಮತ್ತು ಔಷಧದಲ್ಲಿ – ಒಳಗೆ ಹೇಗೆಹೇಗೆ ಶ್ರದ್ಧೆಯಿರುತ್ತದೆಯೋ ಹಾಗೆಹಾಗೆ ಈ ಮನುಷ್ಯನಿಗೆ ಸಿದ್ಧಿಯಾಗುವದು.

**ಅಸ್ತೀತ್ಯೇವೋಪಲಬ್ಧವ್ಯಂ ವಸ್ತು ಸದ್ಭಾವನಿಶ್ಚಯಾತ್ ।**
**ಸದ್ಭಾವನಿಶ್ಚಯಸ್ತತ್ರ ಶ್ರದ್ಧಯಾ ಶಾಸ್ತ್ರಸಿದ್ಧಯಾ ॥ ೨೧೫ ॥**
**ತಸ್ಮಾಚ್ಛ್ರದ್ಧಾ ಸುಸಂಪಾದ್ಯಾ ಗುರುವೇದಾನ್ತವಾಕ್ಯಯೋಃ ।**
**ಮುಮುಕ್ಷೋಃ ಶ್ರದ್ದಧಾನಸ್ಯ ಫಲಂ ಸಿಧ್ಯತಿ ನಾನ್ಯಥಾ ॥ ೨೧೬ ॥**

೨೧೫-೨೧೬. '(ಬ್ರಹ್ಮವಸ್ತು) ಇದೆ' ಎಂದು ವಸ್ತುವಿದೆಯೆಂದು ನಿಶ್ಚಯುವಾಗಿರುವದರಿಂದ ತಿಳಿಯಬೇಕು. ಈ ಸದ್ಭಾವನಿಶ್ಚಯವು ಶಾಸ್ತ್ರದಿಂದ ತಿಳಿದುಬರುವ ಶ್ರದ್ಧೆಯಿಂದ[2] ಉಂಟಾಗುತ್ತದೆ. ಆದ್ದರಿಂದ ಗುರುವಿನ ಮತ್ತು ವೇದಾಂತ

1. 'ಪುಂಸಾಮ್' ಎಂಬ ಅಚ್ಚಿನ ಪಾಠವನ್ನು 'ಅಸ್ಯ' ಎಂಬುವಕ್ಕೆ ಹೊಂದುವಂತೆ 'ಪುಂಸಃ' ಎಂದು ತಿದ್ದಿಕೊಂಡಿದೆ.

2. 'ಅಸ್ತೀತ್ಯೇವೋಪಲಬ್ಧವ್ಯಃ' ಎಂಬುದು ಕಠ ೨-೧-೧೩. ಸದನ್ವಿತವಾಗಿಯೇ ಜಗತ್ತು ಕಾಣುತ್ತಿರುವದರಿಂದ ಇದೆಯೆಂದೇ ತಿಳಿಯಬೇಕು (ಕ. ಭಾ. ೨-೩-೧೨) ಎಂದು ಭಾಷ್ಯದಲ್ಲಿದೆ.

ಗಳ ವಾಕ್ಯಗಳಲ್ಲಿ ಶ್ರದ್ಧೆಯನ್ನು ಚೆನ್ನಾಗಿ ಸಂಪಾದಿಸಿಕೊಳ್ಳಬೇಕು. ಶ್ರದ್ಧೆಯಿರುವ ಮುಮುಕ್ಷುವಿಗೇ ಫಲವು ಕೈವಶವಾಗುತ್ತದೆಯೇ ಹೊರತು ಬೇರೆಪ್ರಕಾರದಿಂದ ಆಗದು.

**ಯಥಾರ್ಥವಾದಿತಾ ಪುಂಸಾಂ ಶ್ರದ್ಧಾಜನನಕಾರಣಮ್ ।**
**ವೇದಸ್ಯೇಶ್ವರವಾಕ್ಯತ್ವಾದ್ಯಥಾರ್ಥತ್ವೇ ನ ಸಂಶಯಃ ॥ ೨೧೭ ॥**
**ಮುಕ್ತಸ್ಯೇಶ್ವರರೂಪತ್ವಾದ್ಗುರೋರ್ವಾಗಪಿ ತಾದೃಶೀ ।**
**ತಸ್ಮಾತ್ತದ್ವಾಕ್ಯಯೋಃ ಶ್ರದ್ಧಾ ಸತಾಂ ಸಿಧ್ಯತಿ ಧೀಮತಾಮ್ ॥೨೧೮॥**

೨೧೭–೨೧೮. ಯಥಾರ್ಥವಾಗಿ[1] ಹೇಳುವದೆಂಬುದೇ ಜನರಿಗೆ[2] ಶ್ರದ್ಧೆಯನ್ನುಂಟುಮಾಡುವದಕ್ಕೆ ಕಾರಣ. ವೇದವು ಈಶ್ವರವಾಕ್ಯವಾಗಿರುವದರಿಂದ[3] (ಅದು) ಯಥಾರ್ಥವಾಗಿರುವದೆಂಬುದರಲ್ಲಿ ಸಂಶಯವಿರುವದಿಲ್ಲ. ಮುಕ್ತನು ಈಶ್ವರ ಸ್ವರೂಪನೇ ಆಗಿರುವದರಿಂದ ಗುರುವಿನ ವಾಕ್ಯವೂ ಅಂಥದ್ದೇ[4] (ಆಗಿರುತ್ತದೆ). ಆದ್ದರಿಂದ ವಿವೇಕಿಗಳಾದ ಸತ್ಪುರುಷರಿಗೆ ಆ ವಾಕ್ಯಗಳಲ್ಲಿ[5] ಶ್ರದ್ಧೆಯುಂಟಾಗುತ್ತದೆ.

**ಶ್ರುತ್ಯುಕ್ತಾರ್ಥಾವಗಾಹಾಯ ವಿದುಷಾ ಜ್ಞೇಯವಸ್ತುನಿ ।**
**ಚಿತ್ತಸ್ಯ ಸಮ್ಯಗಾಧಾನಂ ಸಮಾಧಾನಮಿತೀರ್ಯತೇ ॥ ೨೧೯ ॥**

೨೧೯. ಶ್ರುತಿಯು ಹೇಳಿದ ಅರ್ಥವನ್ನು ಒಳಹೊಕ್ಕು ತಿಳಿದುಕೊಳ್ಳುವದಕ್ಕೆ ತಿಳಿಯಬೇಕಾಗಿರುವ ವಸ್ತುವಿನಲ್ಲಿ ವಿವೇಕಿಯಾದವನು ಚಿತ್ತವನ್ನು ಚೆನ್ನಾಗಿ ನಿಲ್ಲಿಸಿಕೊಳ್ಳುವದು **ಸಮಾಧಾನ**ವೆನಿಸುವದು.

**ಚಿತ್ತಸ್ಯ ಸಾಧ್ಯೈಕಪರತ್ವಮೇವ**
**ಪುಮರ್ಥಸಿದ್ಧೇರ್ನಿಯಮೇನ ಕಾರಣಮ್ ।**
**ನೈವಾನ್ಯಥಾ ಸಿಧ್ಯತಿ ಸಾಧ್ಯಮೀಷ-**
**ನ್ಮನಃಪ್ರಮಾದೇ ವಿಫಲಃ ಪ್ರಯತ್ನಃ ॥ ೨೨೦ ॥**

೨೨೦. ಚಿತ್ತವು ತಾನು ಸಾಧಿಸಿಕೊಳ್ಳಬೇಕಾಗಿರುವದೊಂದರಲ್ಲಿಯೇ ನಿಂತುಕೊಳ್ಳುವದೇ ಪುರುಷಾರ್ಥಸಿದ್ಧಿಗೆ ಗೊತ್ತಾದಕಾರಣವು. ಹಾಗಿಲ್ಲದಿದ್ದರೆ ಸಾಧ್ಯ

---

1. ವಸ್ತುವಿದ್ದಂತೆಯೇ, ನಿಜವನ್ನೇ.

2. ಮನುಷ್ಯನು ನಿಜವನ್ನೇ ಹೇಳುವದು ಶ್ರದ್ಧೆಯುಂಟಾಗುವದಕ್ಕೆ ಕಾರಣವು- ಎಂದೂ ಕನ್ನಡಿಸಬಹುದು.

3. ವೇದವು ಅಪೌರುಷೇಯವಾದ್ದರಿಂದ ಪ್ರಮಾಣವು ಎಂದೇ ಭಾಷ್ಯದಲ್ಲಿ ಅಲ್ಲಲ್ಲಿ ಹೇಳಿದೆ ; ಈಶ್ವರವಾಕ್ಯವಾದ್ದರಿಂದ ಪ್ರಮಾಣವು ಎಂಬುದು ನೈಯಾಯಿಕರ ಮತ.

4. ಯಥಾರ್ಥವೇ.

5. ಶಾಸ್ತ್ರವಾಕ್ಯಗುರುವಾಕ್ಯಗಳಲ್ಲಿ.

ವಾದದ್ದು ಒಂದಿಷ್ಟೂ ಸಿದ್ಧಿಸುವದೇ ಇಲ್ಲ. ಮನಸ್ಸಿಗೆ ಪ್ರಮಾದವುಂಟಾದರೆ (ಅವಧಾನವಿಲ್ಲದೆ ಇದ್ದರೆ) ಪ್ರಯತ್ನವು ನಿಷ್ಫಲವು.[1]

**ಚಿತ್ತಂ ಚ ದೃಷ್ಟಿಂ ಕರಣಂ ತಥಾನ್ಯ-**
**ದೇಕತ್ರ ಬಧ್ನಾತಿ ಹಿ ಲಕ್ಷ್ಯಭೇತ್ತಾ ।**
**ಕಿಞ್ಚಿತ್ಪ್ರಮಾದೇ ಸತಿ ಲಕ್ಷ್ಯಭೇತ್ತು-**
**ರ್ಬಾಣಪ್ರಯೋಗೇ ವಿಫಲೋ ಯಥಾ ತಥಾ ॥ ೨೨೦ ॥**

೨೨೦. ಗುರಿಯನ್ನು ಹೊಡೆಯುವವನು ಚಿತ್ತವನ್ನೂ ದೃಷ್ಟಿಯನ್ನೂ ಮತ್ತು ಬೇರೆಯ ಕರಣವನ್ನೂ ಒಂದೇಕಡೆ ನೆಟ್ಟಿಸಿರುತ್ತಾನೆ. ಸ್ವಲ್ಪ ಎಚ್ಚರಿಕೆ ತಪ್ಪಿದರೂ ಗುರಿಹೊಡೆಯುವವನ ಬಾಣಪ್ರಯೋಗವು ಹೇಗೆ ನಿಷ್ಫಲವಾಗುವದೋ ಹಾಗೆಯೇ (ಇಲ್ಲಿಯೂ ತಿಳಿಯಬೇಕು).

**ಸಿದ್ಧೇಶ್ಚಿತ್ತಸಮಾಧಾನಮಸಾಧಾರಣಕಾರಣಮ್ ।**
**ಯತಸ್ತತೋ ಮುಮುಕ್ಷೂಣಾಂ ಭವಿತವ್ಯಂ ಸದಾಽಮುನಾ ॥ ೨೨೧ ॥**

೨೨೧. ಸಿದ್ಧಿಗೆ ಚಿತ್ತವನ್ನು ಸರಿಯಾಗಿ ನಿಲ್ಲಿಸಿಕೊಳ್ಳುವದು ವಿಶೇಷಕಾರಣವು. ಹೀಗಿರುವದರಿಂದ ಮುಮುಕ್ಷುಗಳಿಗೆ ಇದು ಯಾವಾಗಲೂ ಇರಬೇಕು.

**ಅತ್ಯನ್ತತೀವ್ರವೈರಾಗ್ಯಂ ಫಲಲಿಪ್ಸಾ ಮಹತ್ತರಾ ।**
**ತದೇತದುಭಯಂ ವಿದ್ಯಾತ್ಸಮಾಧಾನಸ್ಯ ಕಾರಣಮ್ ॥ ೨೨೨ ॥**

೨೨೨. ಅತ್ಯಂತತೀವ್ರವಾದ ವೈರಾಗ್ಯ, ಫಲವನ್ನು ಪಡೆದುಕೊಳ್ಳಬೇಕೆಂಬ ಹಿರಿಯಾಸೆ– ಆ ಈ ಎರಡೂ **ಸಮಾಧಾನಕ್ಕೆ ಕಾರಣ**ವೆಂದು ತಿಳಿಯಬೇಕು.

## ಶಮಾದಿಷಟ್ಕದ ಆವಶ್ಯಕತೆ

**ಬಹಿರಙ್ಗಂ ಶ್ರುತಿಃ ಪ್ರಾಹ ಬ್ರಹ್ಮಚರ್ಯಾದಿ ಮುಕ್ತಯೇ ।**
**ಶಮಾದಿಷಟ್ಕಮೇವೈತದನ್ತರಙ್ಗಂ ವಿದುರ್ಬುಧಾಃ ॥ ೨೨೩ ॥**

೨೨೩. ಮುಕ್ತಿಗೆ ಬ್ರಹ್ಮಚರ್ಯವೇ ಮುಂತಾದದ್ದನ್ನು ಹೊರಗಿನ ಸಾಧನವೆಂದು ಶ್ರುತಿಯು ಹೇಳುತ್ತದೆ. ಈ ಶಮಾದಿಷಟ್ಕವೇ (ಅದಕ್ಕೆ) ಅಂತರಂಗ (ಸಾಧನವೆಂದು) ಬಲ್ಲವರು ತಿಳಿಯುತ್ತಾರೆ.

**ಅನ್ತರಙ್ಗಂ ಹಿ ಬಲವದ್ಬಹಿರಙ್ಗಾದ್ಯತಸ್ತತಃ ।**
**ಶಮಾದಿಷಟ್ಕಂ[2] ಜಿಜ್ಞಾಸೋರವಶ್ಯಂ ಭಾವ್ಯಮಾನ್ತರಮ್ ॥ ೨೨೪ ॥**

---

1. ಮಾಡಿದ ಸಾಧನಕ್ಕೆ ಶ್ರಮವೊಂದೇ ಫಲವಾಗುವದು.
2. ಇಲ್ಲಿ ವ್ಯಾಕರಣದಂತೆ ತೃತೀಯಾವಿಭಕ್ತಿ ಬೇಕಾಗಿತ್ತು.

೨೨೫. ಬಹಿರಂಗ(ಸಾಧನ)ಕ್ಕಿಂತ ಅಂತರಂಗಸಾಧನವು ಪ್ರಬಲವಲ್ಲವೆ ? (ಆದ್ದರಿಂದ) ಒಳಗಿನ ಸಾಧನವಾದ ಶಮಾದಿಷಟ್ಕವು ಜಿಜ್ಞಾಸುವಿಗೆ ಅವಶ್ಯವಾಗಿರಬೇಕು.

**ಅನ್ತರಙ್ಗವಿಹೀನಸ್ಯ ಕೃತಶ್ರವಣಕೋಟಯಃ ।**
**ನ ಫಲನ್ತಿ ಯಥಾ ಯೋದ್ಧುರಧೀರಸ್ಯಾಸ್ತ್ರಸಂಪದಃ ॥ ೨೨೬ ॥**

೨೨೬. ಹೇಗೆ ಧೀರನಲ್ಲದ ಭಟನಿಗೆ ಅಸ್ತ್ರಸಂಪತ್ತುಗಳು ಎಷ್ಟಿದ್ದರೂ (ಫಲಿಸದೆ ಇರುನವೋ), ಹಾಗೆ ಅಂತರಂಗ(ಸಾಧನ)ವಿಲ್ಲವನನಿಗೆ ಕೋಟಿಗಟ್ಟಲೆಯಾಗಿ ಶ್ರವಣಮಾಡಿದರೂ ಫಲಿಸದೆ ಇರುವವು.

## ಮುಮುಕ್ಷುತ್ವ

**ಬ್ರಹ್ಮಾತ್ಮೈಕತ್ವವಿಜ್ಞಾನಾದ್ಯದ್ವಿದ್ವಾನ್ಮೋಕ್ತುಮಿಚ್ಛತಿ ।**
**ಸಂಸಾರಪಾಶಬನ್ಧಂ ತನ್ಮುಮುಕ್ಷುತ್ವಂ ನಿಗದ್ಯತೇ ॥ ೨೨೭ ॥**

೨೨೭. ವಿವೇಕಿಯು ಬ್ರಹ್ಮವೂ ಆತ್ಮನೂ ಒಂದೇ- ಎಂಬ ಅರಿವಿನಿಂದ ಸಂಸಾರಪಾಶದ ಬಿಗಿತವನ್ನು ಬಿಡಿಸಿಕೊಳ್ಳುವದಕ್ಕೆ ಬಯಸುತ್ತಾನಲ್ಲ, ಅದೇ **ಮುಮುಕ್ಷುತ್ವ**ವೆನಿಸುವದು.

**ಸಾಧನಾನಾಂ ತು ಸರ್ವೇಷಾಂ ಮುಮುಕ್ಷಾ ಮೂಲಕಾರಣಮ್ ।**
**ಅನಿಚ್ಛೋರಪ್ರವೃತ್ತಸ್ಯ ಕ್ವ ಶ್ರುತಿಃ ಕ್ವ ನು ತತ್ಫಲಮ್ ॥ ೨೨೮ ॥**

೨೨೮. ಸಾಧನಗಳಿಗೆಲ್ಲ ಮುಮುಕ್ಷುತ್ವವು ಮೂಲಕಾರಣ. (ಏಕೆಂದರೆ), ಯಾವನಿಗೆ ಇಚ್ಛೆಯಿಲ್ಲವೋ, ಯಾವನು (ಸಾಧನದಲ್ಲಿ) ತೊಡಗುವದಿಲ್ಲವೋ: (ಅವನಿಗೆ) ಎಲ್ಲಿಯ ಶ್ರವಣ, ಫಲವಾದರೂ ಎಲ್ಲಿಯದು ?

**ತೀವ್ರಮಧ್ಯಮಮನ್ದಾತಿಮನ್ದಭೇದಾಚ್ಚತುರ್ವಿಧಾಃ ।**[1]
**ಮುಮುಕ್ಷಾ ತತ್ಪ್ರಕಾರೋಽಪಿ ಕೀರ್ತ್ಯತೇ ಶ್ರೂಯತಾಂ ಬುಧೈಃ ॥**

೨೨೯. ತೀವ್ರ, ಮಧ್ಯಮ, ಮನ್ದ, ಅತಿಮಂದ- ಎಂದು **ಮುಮುಕ್ಷುತ್ವವು ನಾಲ್ಕುವಿಧ**ವಾಗಿರುತ್ತದೆ.[2] ಅದರ ಪ್ರಕಾರವನ್ನು (ಈಗ) ತಿಳಿಸಲಾಗುವದು ; (ಅದನ್ನು) ವಿವೇಕಿಗಳು ಕೇಳಬೇಕು.

1. ಭೇದಾಶ್ಚತುರ್ವಿಧಾಃ- ಎಂದು ಪಾ॥

2. ಹೀಗೆ ನಾಲ್ಕು ವಿಧವಾಗಿ ಮುಮುಕ್ಷುತ್ವವನ್ನು ವಿಂಗಡಿಸಿರುವದು ಭಾಷ್ಯವಲ್ಲಾಗಲಿ ಬೇರೆಯ ಕಡೆಯಲ್ಲಾಗಲಿ ಕಾಣಿಸುವದಿಲ್ಲ ; ವಿ. ೨೮-೨೯ರಲ್ಲಿ ಮೂರು ವಿಧವೆಂದು ಹೇಳಿದೆ.

**ತಾಪೈಸ್ತ್ರಿಭಿರ್ನಿತ್ಯಮನೇಕರೂಪೈಃ**
**ಸಂತಪ್ಯಮಾನೋ ಕ್ಷುಭಿತಾನ್ತರಾತ್ಮಾ ।**
**ಪರಿಗ್ರಹಂ ಸರ್ವಮನರ್ಥಬುದ್ಧ್ಯಾ**
**ಜಹಾತಿ ಸಾ[1] ತೀವ್ರತರಾ ಮುಮುಕ್ಷಾ ॥ ೨೩೦ ॥**

೨೩೦. ಅನೇಕರೂಪಗಳುಳ್ಳ ಮೂರು ಬಗೆಯ ತಾಪಗಳಿಂದ ಯಾವಾಗಲೂ ಬೇಯುತ್ತಾ ತಳಮಳಗೊಂಡ ಮನಸ್ಸುಳ್ಳವನಾಗಿ ಸ್ವತ್ತನ್ನೆಲ್ಲ ಅನರ್ಥವೆಂದು ತಿಳಿದುಬಿಡುತ್ತಾನಲ್ಲ, ಅದೇ **ತೀವ್ರತರವಾದ ಮುಮುಕ್ಷುತ್ವವು.**

**ತಾಪತ್ರಯಂ ತೀವ್ರಮವೇಕ್ಷ್ಯ ವಸ್ತು**
**ದೃಷ್ಟ್ವಾ ಕಲತ್ರಂ ತನಯಾನ್ ವಿಹಾತುಮ್ ।**
**ಮಧ್ಯೇ ದ್ವಯೋರ್ಲೋಡನಮಾತ್ಮನೋ ಯ-**
**ತ್ಸೈಷಾ ಮತಾ ಮಾಧ್ಯಮಿಕೀ ಮುಮುಕ್ಷಾ ॥ ೨೩೧ ॥**

೨೩೧. ವಸ್ತುವು(?)[2] ತಾಪತ್ರಯದಿಂದಕೂಡಿ ತೀವ್ರವಾಗಿರುವದೆಂಬುದನ್ನು ವಿಚಾರಮಾಡಿ ಕಂಡುಕೊಂಡು, ಹೆಂಡತಿ, ಮಕ್ಕಳುಗಳನ್ನು ಬಿಡುವದಕ್ಕೆ ಎರಡರ ನಡುವೆ ಮನಸ್ಸು ಕಡೆಯುತ್ತಿರುವದಲ್ಲ, ಅದೇ **ಮಧ್ಯಮಮುಮುಕ್ಷುತ್ವವು.**

**ಮೋಕ್ಷಸ್ಯ ಕಾಲೋಽಸ್ತಿ ಕಿಮದ್ಯ ಮೇ ತ್ವರಾ**
**ಭುಕ್ತ್ವೈವ ಭೋಗಾನ್ ಕೃತಸರ್ವಕಾರ್ಯಃ ।**
**ಮುಕ್ತ್ಯೈ ಯತಿಷ್ಯೇಽಹಮಥೇತಿ ಬುದ್ಧಿ**
**ರೇಷೈವ ಮನ್ದಾ ಕಥಿತಾ ಮುಮುಕ್ಷಾ ॥ ೨೩೨ ॥**

೨೩೨. ಮೋಕ್ಷಕ್ಕೆ (ಇನ್ನೂ) ಕಾಲವಿದೆ, ಇಂದೇಕೆ ನನಗೆ ಅವಸರ? ಭೋಗಗಳನ್ನು ಅನುಭವಿಸಿಯೇ, ಮಾಡತಕ್ಕ ಕೆಲಸಗಳನ್ನೆಲ್ಲ ಮಾಡಿಯೇ ಆಮೇಲೆ ನಾನು ಮುಕ್ತಿಗೆ ಪ್ರಯತ್ನಿಸುವೆನು– ಎಂಬೀ ಬುದ್ಧಿಯೇ **ಮಂದಮುಮುಕ್ಷುತೆ** ಯೆನಿಸುವದು.

**ಮಾರ್ಗೇ ಪ್ರಯಾತುರ್ಮಣಿಲಾಭವನ್ಮೇ**
**ಲಭೇತ ಮೋಕ್ಷೋ ಯದಿ ತರ್ಹಿ ಧನ್ಯಃ ।**
**ಇತ್ಯಾಶಯಾ ಮೂಢಧಿಯಾಂ ಮತಿರ್ಯಾ-**
**ಸ್ಯೈಷಾತಿಮನ್ದಾಭಿಮತಾ ಮುಮುಕ್ಷಾ ॥ ೨೩೩ ॥**

---

1. ಇಲ್ಲಿ ಅನ್ವಯವು ಸರಿಯಾಗುವದಿಲ್ಲ.

2. ಈ ಶಬ್ದವು ಬೇರೆಯಾಗಿದ್ದು ಬರೆದವರ ಕೈತಪ್ಪಿನಿಂದ ಹೀಗಾಗಿರಬಹುದೆ? ಎಂಬ ಸಂಶಯವು ಬರುತ್ತದೆ.

೨೩೩. ದಾರಿಯಲ್ಲಿ ನಡೆಯುತ್ತಿರುವವನಿಗೆ ರತ್ನವು ಸಿಕ್ಕುವಂತೆ, ಮೋಕ್ಷವು ನನಗೆ ಸಿಕ್ಕಿದರೆ (ನಾನು) ಧನ್ಯನು— ಎಂಬ ಅಭಿಪ್ರಾಯವುಳ್ಳ ಮೂಢಬುದ್ಧಿಯವರ ತಿಳಿವಳಿಕೆಯಿದೆಯಲ್ಲ, ಆ ಇದೇ **ಅತಿಮಂದಮುಮುಕ್ಷುತ್ವ**ವೆನಿಸುತ್ತದೆ.

**ಜನ್ಮಾನೇಕಸಹಸ್ರೇಷು ತಪಸಾರಾಧಿತೇಶ್ವರಃ ।**
**ತೇನ ನಿಃಶೇಷನಿರ್ಧೂತಹೃದಯಸ್ಥಿತಕಲ್ಮಷಃ ॥ ೨೩೪ ॥**
**ಶಾಸ್ತ್ರವಿದ್ಗುಣದೋಷಜ್ಞೋ ಭೋಗ್ಯಮಾತ್ರೇ ವಿನಿಃಸ್ಪೃಹಃ ।**
**ನಿತ್ಯಾನಿತ್ಯಪದಾರ್ಥಜ್ಞೋ ಮುಕ್ತಿಕಾಮೋ ದೃಢವ್ರತಃ ॥ ೨೩೫ ॥**
**ನಿಷ್ಪಪ್ತಮಗ್ನಿನಾ ಪಾತ್ರಮುದ್ವಾಸ್ಯ ತ್ವರಯಾ ಯಥಾ ।**
**ಜಹಾತಿ ಗೇಹಂ ತದ್ವಚ್ಚ ತೀವ್ರಮೋಕ್ಷೇಚ್ಛಯಾ ದ್ವಿಜಃ ॥ ೨೩೬ ॥**
**ಸ ಏವ ಸದ್ಯಸ್ತರತಿ ಸಂಸೃತಿಂ ಗುರ್ವನುಗ್ರಹಾತ್ ॥ ೨೩೬ಗ್ತ ॥**

೨೩೪–೨೩೬ಗ್ತ. ಅನೇಕಸಹಸ್ರಜನ್ಮಗಳಲ್ಲಿ ತಪಸ್ಸಿನಿಂದ ಈಶ್ವರನನ್ನು ಆರಾಧಿಸಿ ಅದರಿಂದ ಅಂತಃಕರಣದಲ್ಲಿದ್ದ ದೋಷವನ್ನು ಸ್ವಲ್ಪವೂ ಉಳಿಯದಂತೆ ತೊಳೆದುಹಾಕಿ ಶಾಸ್ತ್ರವನ್ನು ಬಲ್ಲವನೂ ಗುಣದೋಷಗಳನ್ನು ವಿವೇಚನೆಮಾಡಿ, ಭೋಗ್ಯವಸ್ತುಮಾತ್ರದಲ್ಲಿ ಹಂಬಲಿಕೆಯಿಲ್ಲದೆ, ನಿತ್ಯಾನಿತ್ಯಪದಾರ್ಥಗಳನ್ನು ವಿಂಗಡಿಸಿ ತಿಳಿದುಕೊಂಡವನಾಗಿ, ಮುಮುಕ್ಷುವಾಗಿ, ಸಾಧನದಲ್ಲಿ ಸ್ಥಿರವಾಗಿದ್ದುಕೊಂಡು ಬೆಂಕಿಯಿಂದ ಚೆನ್ನಾಗಿ ಕಾದ ಪಾತ್ರೆಯನ್ನು ಬೇಗನೆ ಹೇಗೆ ತೆಗೆಯುತ್ತಾರೋ[1] ಹಾಗೆ ತೀವ್ರವಾದ ಮೋಕ್ಷೇಚ್ಛೆಯಿಂದ ದ್ವಿಜನಾದವನು ಮನೆಯನ್ನು ಬಿಟ್ಟು ಹೊರಡುತ್ತಾನೆ. ಅವನೇ ಗುರುವಿನ ಅನುಗ್ರಹದಿಂದ ಸಂಸಾರವನ್ನು ಕೂಡಲೆ ದಾಟುತ್ತಾನೆ.

**ಯಸ್ತು ತೀವ್ರಮುಮುಕ್ಷುಃ ಸ್ಯಾತ್ ಸ ಜೀವನ್ನೇವ ಮುಚ್ಯತೇ ॥೨೩೭[2]**
**ಜನ್ಮಾನ್ತರೇ ಮಧ್ಯಮಸ್ತು ತದನ್ಯಸ್ತು ಯುಗಾನ್ತರೇ**
**ಚತುರ್ಥಃ ಕಲ್ಪಕೋಟ್ಯಾಂ ವಾ ನೈವ ಬನ್ಧಾದ್ವಿಮುಚ್ಯತೇ ॥ ೨೩೮ ॥**

೨೩೭–೨೩೮. ಯಾವನು ತೀವ್ರ ಮುಮುಕ್ಷುವಾಗಿರುವನೋ ಅವನು ಬದುಕಿರುವಾಗಲೇ ಮುಕ್ತನಾಗುತ್ತಾನೆ. ಮಧ್ಯಮ (ಮುಮುಕ್ಷು)ವಾದರೆ ಜನ್ಮಾಂತರದಲ್ಲಿ (ಮುಕ್ತನಾಗುತ್ತಾನೆ) ; ಅವನಿಗಿಂತ ಬೇರೆಯಾದ (ಮಂದಮುಮುಕ್ಷುವು) ಬೇರೊಂದು ಯುಗದಲ್ಲಿ (ಮುಕ್ತನಾಗುವನು). ನಾಲ್ಕನೆಯವನಾದ (ಅತಿಮಂದ ಮುಮುಕ್ಷುವಾದರೋ) ಕೋಟಿಕಲ್ಪಗಳಾದರೂ ಬಂಧದಿಂದ ಮುಕ್ತನಾಗಲಾರನು.

---

1. ಕುಂಬಾರನು ಆವಿಗೆಯಿಂದ ಪಕ್ವವಾದ ಗಡಿಗೆಯನ್ನು ಕೂಡಲೆ ತೆಗೆಯುವಂತೆ ಎಂಬ ಅಭಿಪ್ರಾಯವಿರಬಹುದು.

2. ೨೩೬ಗ್ತನ್ನೂ ಇದನ್ನೂ ಸೇರಿಸಿ ಒಂದು ಶ್ಲೋಕವೆಂತ ಲೆಕ್ಕ ಹಿಡಿದಿದೆ.

**ನೃಜನ್ಮ ಜನ್ತೋರತಿದುರ್ಲಭಂ ವಿದು-**
**ಸ್ತತೋಽಪಿ ಪುಂಸ್ತ್ವಂ ಚ ತತೋ ವಿವೇಕಃ ।**
**ಲಬ್ಧ್ವಾ ತದೇತತ್ತ್ರಿತಯಂ ಮಹಾತ್ಮಾ**
**ಯತೇತ ಮುಕ್ತ್ಯೈ ಸಹಸಾ ವಿರಕ್ತಃ ॥ ೨೩೯ ॥**

೨೩೯. ಜೀವನಿಗೆ ಮನುಷ್ಯಜನ್ಮವು ಬಹಳ ದುರ್ಲಭವೆಂದು (ದೊಡ್ಡವರು) ತಿಳಿಯುತ್ತಾರೆ. ಗಂಡಸಾಗಿ (ಹುಟ್ಟುವದು) ಅದಕ್ಕಿಂತಲೂ (ದುರ್ಲಭವು); ಅದಕ್ಕಿಂತಲೂ ವಿವೇಕವು (ದುರ್ಲಭ). ಆ ಈ ಮೂರನ್ನೂ ಪಡೆದ ಮಹಾತ್ಮನು ವಿರಕ್ತನಾಗಿ ಕೂಡಲೆ ಮುಕ್ತಿಗಾಗಿ ಪ್ರಯತ್ನಮಾಡಬೇಕು.[1]

**ಪುತ್ರಮಿತ್ರಕಲತ್ರಾದಿಸುಖಂ ಜನ್ಮನಿ ಜನ್ಮನಿ ।**
**ಮರ್ತ್ಯತ್ವಂ ಪುರುಷತ್ವಂ ಚ ವಿವೇಕಶ್ಚ ನ ಲಭ್ಯತೇ ॥ ೨೪೦ ॥**

೨೪೦. ಮಕ್ಕಳು, ಮಿತ್ರರು, ಹೆಂಡತಿ– ಮುಂತಾದ ಸುಖವು ಜನ್ಮಜನ್ಮದಲ್ಲಿಯೂ (ಇದ್ದೇಇರುತ್ತದೆ. ಆದರೆ) ಮನುಷ್ಯನಾಗಿ (ಹುಟ್ಟುವದು), ಗಂಡುಸಾಗಿ (ಹುಟ್ಟುವದು), ಮತ್ತು ವಿವೇಕ (ಇವು) ದೊರಕುವದಿಲ್ಲ.

**ಲಬ್ಧ್ವಾ ಸುದುರ್ಲಭತರಂ ನರಜನ್ಮ ಜನ್ತು-**
**ಸ್ತತ್ರಾಪಿ ಪೌರುಷಮತಃ ಸದಸದ್ವಿವೇಕಮ್ ।**
**ಸಂಪ್ರಾಪ್ಯ ಚೈಹಿಕಸುಖಾಭಿರತೋ ಯದಿ ಸ್ಯಾತ್**
**ಧಿಕ್ತಸ್ಯ ಜನ್ಮ ಕುಮತೇಃ ಪುರುಷಾಧಮಸ್ಯ ॥ ೨೪೧ ॥**

೨೪೧. ಬಹು ದುರ್ಲಭವಾದ ಮನುಷ್ಯಜನ್ಮವನ್ನು ಪಡೆದು, ಅದರಲ್ಲಿಯೂ ಪುರುಷತ್ವವನ್ನು (ಹೊಂದಿ) ಅದಕ್ಕೂ (ಹೆಚ್ಚು ದುರ್ಲಭವಾದ) ಸದಸದ್ವಿವೇಕವನ್ನು ಪಡೆದು ಐಹಿಕಸುಖಗಳಲ್ಲಿಯೇ ರತನಾಗಿದ್ದರೆ, ಅಂಥ ಕುತ್ಸಿತಬುದ್ಧಿಯ ಪುರುಷಾಧಮನ ಜನ್ಮಕ್ಕೆ ಧಿಕ್ಕಾರವಿರಲಿ ![2]

**ಖಾದತೇ ಮೋದತೇ ನಿತ್ಯಂ ಶುನಕಃ ಸೂಕರಃ ಖರಃ ।**
**ತೇಷಾಮೇಷಾಂ ವಿಶೇಷಃ ಕೋ ವೃತ್ತಿರ್ಯೇಷಾಂ ತು ತೈಃ ಸಮಾ ॥**

೨೪೨. ನಾಯಿಯೂ ಹಂದಿಯೂ ಕತ್ತೆಯೂ ಯಾವಾಗಲೂ ತಿನ್ನುತ್ತದೆ; ಸಂತೋಷದಿಂದಿರುತ್ತದೆ. ಅವಕ್ಕೂ ಯಾರ ನಡತೆಯು ಅವಕ್ಕೆ ಸಮಾನವಾಗಿರುತ್ತದೆಯೋ ಅವರಿಗೂ ಏನು ವಿಶೇಷ ?

**ಯಾವನ್ನಾಶ್ರಯತೇ ರೋಗೋ ಯಾವನ್ನಾಕ್ರಮತೇ ಜರಾ ।**
**ಯಾವನ್ನ ಧೀರ್ವಿಪರ್ಯೇತಿ ಯಾವನ್ಮೃತ್ಯುಂ ನ ಪಶ್ಯತಿ ॥ ೨೪೩ ॥**

---

1. ವಿ. ೩ಕ್ಕೆ ಈ ಶ್ಲೋಕವನ್ನು ಹೋಲಿಸಿರಿ.
2. ವಿ. ೪ಕ್ಕೆ ಈ ಶ್ಲೋಕವನ್ನು ಹೋಲಿಸಿ.

**ತಾವದೇವ ನರಃ ಸ್ವಸ್ಥಃ ಸಾರಗ್ರಹಣತತ್ಪರಃ ।**
**ವಿವೇಕೀ ಪ್ರಯತೇತಾಶು ಭವಬನ್ಧವಿಮುಕ್ತಯೇ ॥ ೨೪೪ ॥**

೨೪೩-೨೪೪. ರೋಗವು (ತನ್ನನ್ನು) ಆಶ್ರಯಿಸುವದರೊಳಗೇ, ಮುಪ್ಪು ತನ್ನಮೇಲೆ ಬೀಳುವದರೊಳಗೇ, ಬುದ್ಧಿಯು ಮರುಳಾಗುವದರೊಳಗೇ, ಸಾವನ್ನು ಕಾಣುವದರೊಳಗೇ ಸ್ವಸ್ಥನಾಗಿರುವಾಗ ವಿವೇಕಿಯಾದ ಮನುಷ್ಯನು ಸಾರವನ್ನು ಗ್ರಹಿಸುವದರಲ್ಲಿ ತತ್ಪರನಾಗಿ ಬೇಗನೆ ಸಂಸಾರಬಂಧದ ಬಿಡುಗಡೆಗಾಗಿ ಪ್ರಯತ್ನಿಸಬೇಕು.

**ದೇವರ್ಷಿಪಿತೃಮರ್ತ್ಯರ್ಣಬನ್ಧಮುಕ್ತಾಸ್ತು ಕೋಟಿಶಃ ।**
**ಭವಬನ್ಧವಿಮುಕ್ತಸ್ತು ಯಃ ಕಶ್ಚಿದ್ಬ್ರಹ್ಮವಿತ್ತಮಃ ॥ ೨೪೫ ॥**
**ಅನ್ತರ್ಬನ್ಧೇನ ಬದ್ಧಸ್ಯ ಕಿಂ ಬಹಿರ್ಬನ್ಧಮೋಚನೈಃ ।**
**ತದನ್ತರ್ಬನ್ಧಮುಕ್ತ್ಯರ್ಥಂ ಕ್ರಿಯತಾಂ ಕೃತಿಭಿಃ ಕೃತಿಃ ॥ ೨೪೬ ॥**

೨೪೫-೨೪೬. ದೇವಋಣ, ಋಷಿಋಣ, ಪಿತೃಋಣ, ಮನುಷ್ಯಋಣ- ಇವುಗಳಿಂದ ಮುಕ್ತರಾದವರು ಕೋಟಿಗಟ್ಟಲೆ ; ಸಂಸಾರಬಂಧಮುಕ್ತನಾದವನು ಯಾವನೋ ಒಬ್ಬ ಬ್ರಹ್ಮಜ್ಞಾನಿಸಿಷ್ಠನು. ಒಳಗಿನ ಬಂಧದಿಂದ ಕಡುವಡೆದಿರುವವನಿಗೆ ಹೊರಗಿನ ಬಂಧಮೋಚನೆಗಳಿಂದ ಆಗಬೇಕಾದದ್ದೇನು ? ಆದ್ದರಿಂದ ಒಳಗಿನ ಬಂಧದಿಂದ ಬಿಡುಗಡೆಯಾಗುವದಕ್ಕಾಗಿ ಜಾಣರಾದವರು ಪ್ರಯತ್ನ ಮಾಡಬೇಕು.

**ಕೃತಿಪರ್ಯವಸಾನೈವ ಮತಾ ತೀವ್ರಮುಮುಕ್ಷುತಾ ।**
**ಅನ್ಯಾ ತು ರಞ್ಜನಾ ಮಾತ್ರಾ ಯತ್ರ ನೋ ದೃಶ್ಯತೇ ಕೃತಿಃ ॥ ೨೪೭ ॥**

೨೪೭. ಪ್ರಯತ್ನದಲ್ಲಿ ಕೊನೆಗಾಣತಕ್ಕದ್ದೇ ತೀವ್ರ ಮುಮುಕ್ಷುತ್ವವೆನಿಸುವದು. ಯಾವದರಲ್ಲಿ ಪ್ರಯತ್ನವು ಕಾಣಿಸುವದಿಲ್ಲವೋ, (ಆ) ಬೇರೊಂದು (ಮುಮುಕ್ಷುತ್ವವು) (ಜನಮನೋ)ರಂಜನೆಗೆ ಮಾತ್ರ.

**ಗೇಹಾದಿಸರ್ವಮುಪಹಾಯ ಲಘುತ್ವಬುದ್ಧ್ಯಾ**
**ಸೌಖ್ಯೇಚ್ಛಯಾ ಸ್ವಪತಿನಾನಲಮಾವಿವಿಕ್ಷೋಃ ।**
**ಕಾನ್ತಾಜನಸ್ಯ ನಿಯತಾ ಸುದೃಢಾ ತ್ವರಾ ಯಾ**
**ಸೈಷಾ ಫಲಾನ್ತಗಮನೇ ಕರಣಂ ಮುಮುಕ್ಷೋಃ ॥ ೨೪೮ ॥**

೨೪೮. ಮನೆಮಾರು ಮುಂತಾಗಿ ಎಲ್ಲವನ್ನೂ ಕ್ಷುಲ್ಲಕವೆಂದು ಭಾವಿಸಿ ಸೌಖ್ಯದ ಬಯಕೆಯಿಂದ ತನ್ನ ಗಂಡನೊಡನೆ ಬೆಂಕಿಯನ್ನು ಹೊಗಲೆಳಸುವ ಹೆಂಡತಿಗೆ ಯಾವ ಬಹುಬಲವಾದ ತವಕವಿರುವದೋ ಆ ಇಂಥ (ತವಕವೇ) ಮುಮುಕ್ಷುವನ್ನು ಫಲದವರೆಗೆ ಮುಟ್ಟಿಸುವದಕ್ಕೆ ಸಾಧನ.

**ನಿತ್ಯಾನಿತ್ಯವಿವೇಕಶ್ಚ ದೇಹಕ್ಷಣಿಕತಾಮತಿಃ ।**
**ಮೃತ್ಯೋರ್ಭೀತಿಶ್ಚ ತಾಪಶ್ಚ ಮುಮುಕ್ಷಾವೃದ್ಧಿಕಾರಣಮ್ ॥ ೨೪೯ ॥**

೨೪೯. ನಿತ್ಯಾನಿತ್ಯಗಳನ್ನು ವಿಂಗಡಿಸಿ ಅರಿತುಕೊಳ್ಳುವದು, ದೇಹವು ಕ್ಷಣಿಕವೆಂಬ ಬುದ್ಧಿ, ಮೃತ್ಯುವಿನ ಅಂಜಿಕೆ, ಮತ್ತು (ಮನಸ್ಸಿನ) ಸಂತಾಪ-ಇವೇ ಮುಮುಕ್ಷುತ್ವವು ಬೆಳೆಯುವದಕ್ಕೆ ಕಾರಣವು.

**ಶಿರೋ ವಿವೇಕಸ್ತ್ವತ್ಯಂತಂ ವೈರಾಗ್ಯಂ ವಪುರುಚ್ಯತೇ ।**
**ಶಮಾದಯಃ ಷಡಙ್ಗಾನಿ ಮೋಕ್ಷೇಚ್ಛಾ ಪ್ರಾಣ ಉಚ್ಯತೇ ॥ ೨೫೦ ॥**
**ಈದೃಶಾಙ್ಗಸಮಾಯುಕ್ತೋ ಜಿಜ್ಞಾಸುರ್ಯುಕ್ತಿಕೋವಿದಃ ।**
**ಶೂರೋ ಮೃತ್ಯುಂ ನಿಹನ್ತ್ಯೇವ ಸಮ್ಯಗ್ಜ್ಞಾನಾಸಿನಾ ಧ್ರುವಮ್ ॥**

೨೫೦-೨೫೧. ವಿವೇಕವೇ ತಲೆ, ಅತ್ಯಂತವಾದ ವೈರಾಗ್ಯವೇ ಶರೀರ, ಶಮಾದಿಗಳೆಂಬ ಆರೇ (ಕೈಕಾಲು ಮುಂತಾದ) ಅಂಗಗಳು, ಮುಮುಕ್ಷುತ್ವವೇ ಪ್ರಾಣವು. ಈ ಬಗೆಯ ಅಂಗಗಳಿಂದ ಕೂಡಿದವನಾಗಿರುವ ಯುಕ್ತಿಯಲ್ಲಿ ಕುಶಲನೂ ತತ್ತ್ವವನ್ನು ಅರಿಯಬೇಕೆಂಬ ಇಚ್ಛೆಯುಳ್ಳವನೂ ಆದ ಶೂರನು ಸಮ್ಯಗ್ಜ್ಞಾನವೆಂಬ ಕತ್ತಿಯಿಂದ ಮೃತ್ಯುವನ್ನು ಖಂಡಿತವಾಗಿ ಕೊಲ್ಲುವನು.

## ಗುರುವಿನಬಳಿಗೆ ಹೋಗಿ ಪ್ರಶ್ನೆಮಾಡಬೇಕು

**ಉಕ್ತಸಾಧನಸಂಪನ್ನೋ ಜಿಜ್ಞಾಸುರ್ಯತಿರಾತ್ಮನಃ ।**
**ಜಿಜ್ಞಾಸಾಯೈ ಗುರುಂ ಗಚ್ಛೇತ್ ಸಮಿತ್ಪಾಣಿರ್ನಯೋಜ್ಜ್ವಲಃ ॥**

೨೫೨. (ಈವರೆಗೆ) ಹೇಳಿದ ಸಾಧನಗಳಿಂದೊಡಗೂಡಿ ಜಿಜ್ಞಾಸುವಾದ ಯತಿಯು ಆತ್ಮವಿಚಾರಕ್ಕಾಗಿ ಗುರುವಿನಬಳಿಗೆ ಸಮಿತ್ಪಾಣಿಯಾಗಿ ಹೆಚ್ಚಿನ ವಿನಯದಿಂದ ಹೋಗತಕ್ಕದ್ದು.[1]

**ಶ್ರೋತ್ರಿಯೋ ಬ್ರಹ್ಮನಿಷ್ಠೋ ಯಃ ಪ್ರಶಾನ್ತಃ ಸಮದರ್ಶನಃ ।**
**ನಿರ್ಮಮೋ ನಿರಹಙ್ಕಾರೋ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ॥ ೨೫೩ ॥**
**ಅನಪೇಕ್ಷಃ ಶುಚಿರ್ದಕ್ಷಃ ಕರುಣಾಮೃತಸಾಗರಃ ।**
**ಏವಂಲಕ್ಷಣಸಂಪನ್ನಃ ಸ ಗುರುರ್ಬ್ರಹ್ಮವಿತ್ತಮಃ ।**
**ಉಪಾಸಾದ್ಯಃ ಪ್ರಯತ್ನೇನ ಜಿಜ್ಞಾಸೋಃ ಸ್ವಾರ್ಥಸಿದ್ಧಯೇ ॥೨೫೪॥**

೨೫೩-೨೫೪. ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಅತ್ಯಂತಶಾಂತನೂ ಎಲ್ಲೆಲ್ಲಿಯೂ ಸಮವಾದ (ಬ್ರಹ್ಮವನ್ನೇ) ಕಾಣುತ್ತಿರುವವನೂ ತನ್ನದೆಂಬುದಿಲ್ಲದವನೂ

1. ವಿ. ೨೩, ಮುಂ. ೧-೨-೧೨, ಗೀ. ೧೨-೧೬ ಮುಂತಾದವುಗಳಲ್ಲಿ ಹೇಳಿರುವ ಬ್ರಹ್ಮನಿಷ್ಠನ ಲಕ್ಷಣಗಳನ್ನು ಇಲ್ಲಿ ಪರಾಮರ್ಶಿಸಿದೆ.

ನಿರಹಂಕಾರಿಯೂ ದ್ವಂದ್ವಾತೀತನೂ ತನ್ನದೆಂದು ಯಾವದನ್ನೂ ಇಟ್ಟುಕೊಳ್ಳದವನೂ ಏತರ ಅಪೇಕ್ಷೆಯೂ ಇಲ್ಲದವನೂ ಶುಚಿಯಾಗಿರುವವನೂ (ಕಾರ್ಯ) ದಕ್ಷನೂ ಕರುಣಾಮೃತದ ಸಾಗರದಂತಿರುವವನೂ- ಇಂಥ ಲಕ್ಷಣದಿಂದೊಡಗೂಡಿದವನಿರುವನಲ್ಲ, ಅಂಥ - ಬ್ರಹ್ಮವಿತ್ತಮನಾದ ಗುರುವನ್ನೇ ಜಿಜ್ಞಾಸುವಾದವನು ತನ್ನ ಪ್ರಯೋಜನದ ಸಿದ್ಧಿಗಾಗಿ ಆಶ್ರಯಿಸಬೇಕು.

**ಜನ್ಮಾನೇಕಶತೈಃ ಸದಾದರಯುಜಾ ಭಕ್ತ್ಯಾ ಸಮಾರಾಧಿತೋ**
**ಭಕ್ತೈರ್ವೈದಿಕಲಕ್ಷಣೇನ ವಿಧಿನಾ ಸಂತುಷ್ಟ ಈಶಃ ಸ್ವಯಮ್ ।**
**ಸಾಕ್ಷಾಚ್ಛ್ರೀಗುರುರೂಪಮೇತ್ಯ ಕೃಪಯಾ ದೃಗ್ಗೋಚರಃ ಸನ್ ಪ್ರಭು-**
**ಸ್ತತ್ತ್ವಂ ಸಾಧು ವಿಬೋಧ್ಯ ತಾರಯತಿ ತಾನ್**
**ಸಂಸಾರದುಃಖಾರ್ಣವಾತ್ ॥ ೨೫೫ ॥**

೨೫೫. ಎಷ್ಟೋ ನೂರು ಜನ್ಮಗಳಿಂದ ಆದರದಿಂದ ಕೂಡಿದ ಭಕ್ತಿಯಿಂದ, ವೇದೋಕ್ತವಾದ ವಿಧಿಯಿಂದ ಆರಾಧನೆಮಾಡಿಸಿಕೊಂಡು ಸಂತುಷ್ಟನಾದ ಈಶ್ವರನು ಕೃಪೆಯಿಂದ ತಾನೇ ಶ್ರೀಗುರುರೂಪವನ್ನು ತಳೆದು ಕಣ್ಣಿಗೆ ಕಾಣಿಸಿಕೊಂಡು, ಆ ಪ್ರಭುವು ತತ್ತ್ವವನ್ನು ಚೆನ್ನಾಗಿ ಕಲಿಸಿಕೊಟ್ಟು ಅವರನ್ನು ಸಂಸಾರದುಃಖವೆಂಬ ಸಮುದ್ರದಿಂದ ದಾಟಿಸುತ್ತಾನೆ.

**ಅವಿದ್ಯಾಹೃದಯಗ್ರನ್ಥಿವಿಮೋಕ್ಷೋಽಪಿ ಭವೇದ್ಯತಃ ।**
**ತಮೇವ ಗುರುರಿತ್ಯಾಹುರ್ಗುರುಶಬ್ದಾರ್ಥವೇದಿನಃ ॥ ೨೫೬ ॥**

೨೫೬. ಅವಿದ್ಯೆ ಎಂಬ **ಹೃದಯಗ್ರಂಥಿಯು**[1] ಬಿಚ್ಚಿಕೊಳ್ಳುವದೂ ಯಾವನಿಂದ ಆಗುವದೋ ಅವನನ್ನೇ 'ಗುರು' ಎಂದು ಗುರುಶಬ್ದದ ಅರ್ಥವನ್ನು ಬಲ್ಲವರು ಹೇಳುತ್ತಾರೆ.

**ಬನ್ಧಮುಕ್ತಂ ಬ್ರಹ್ಮನಿಷ್ಠಂ ಕೃತಕೃತ್ಯಂ ಭಜೇದ್ಗುರುಮ್ ।**
**ಯಸ್ಯ ಪ್ರಸಾದಾತ್ ಸಂಸಾರಸಾಗರೋ ಗೋಷ್ಪದಾಯತೇ ॥ ೨೫೭ ॥**

೨೫೭. ಬಂಧದಿಂದ ಬಿಡುಗಡೆ ಹೊಂದಿರುವ ಬ್ರಹ್ಮನಿಷ್ಠನಾಗಿ ಕೃತಕೃತ್ಯನಾಗಿರುವ ಗುರುವನ್ನು ಸೇವಿಸಬೇಕು. ಆತನ ಪ್ರಸಾದದಿಂದ ಸಂಸಾರದ ಸಾಗರವು ಗೋವಿನ ಹೆಜ್ಜೆಯಷ್ಟೇ ಅಗಲವಾಗುವದು.

**ಶಿವ ಏವ ಗುರುಃ ಸಾಕ್ಷಾದ್ಗುರುರೇವ ಶಿವಃ ಸ್ವಯಮ್ ।**
**ಉಭಯೋರನ್ತರಂ ಕಿಞ್ಚಿನ್ನ ದ್ರಷ್ಟವ್ಯಂ ಮುಮುಕ್ಷುಭಿಃ ॥ ೨೫೮ ॥**

೨೫೮. ಶಿವನೇ ಗುರುವಿನ ರೂಪದಿಂದ ಸಾಕ್ಷಾತ್ತಾಗಿರುತ್ತಾನೆ ; ಗುರುವು ಶಿವನೇ. ಮುಮುಕ್ಷುಗಳು ಇವರಿಬ್ಬರಿಗೂ ಯಾವದೊಂದು ಭೇದವನ್ನೂ ಎಣಿಸಬಾರದು.[2]

---

1. 'ಅವಿದ್ಯೆ, ಮತ್ತು ಹೃದಯದಲ್ಲಿ ಗಂಟುಬಿದ್ದಿರುವ ಕಾಮ' -ಎಂದೂ ಅರ್ಥವನ್ನು ಮಾಡಬಹುದು. 2. ಹೀಗೆಂದು ಸೂತಸಂಹಿತಾದಿಶಿವಪುರಾಣಗಳಲ್ಲಿ ಹೇಳಿದೆ.

**ಶುಶ್ರೂಷಯಾ ಸದಾ ಭಕ್ತ್ಯಾ ಪ್ರಣಾಮೈರ್ವಿನಯೋಕ್ತಿಭಿಃ ।**
**ಪ್ರಸನ್ನಂ ಗುರುಮಾಸಾದ್ಯ ಪ್ರಷ್ಟವ್ಯಂ ಜ್ಞೇಯಮಾತ್ಮನಃ ॥ ೨೫೯ ॥**

೨೫೯. ಯಾವಾಗಲೂ ಶುಶ್ರೂಷೆಮಾಡುವದರಿಂದಲೂ ಭಕ್ತಿಯಿಂದಲೂ ನಮಸ್ಕಾರಗಳಿಂದಲೂ ವಿನಯದಿಂದ ಮಾತಾಡುವದರಿಂದಲೂ ಪ್ರಸನ್ನನಾದ ಗುರುವಿನ ಬಳಿಗೆ ಬಂದು ಆತ್ಮವಿಷಯದಲ್ಲಿ ತಿಳಿಯಕೊಳ್ಳಬೇಕಾದದ್ದನ್ನು ಕೇಳಬೇಕು.[1]

**ಭಗವನ್ ಕರುಣಾಸಿನ್ಧೋ ಭವಸಿನ್ಧೋರ್ಭವಾಂಸ್ತರಿಃ ।**
**ಯಮಾಶ್ರಿತ್ಯಾಶ್ರಮೇಣೈವ ಪರಂ ಪಾರಂ ಗತಾ ಬುಧಾಃ ॥ ೨೬೦ ॥**

೨೬೦. "ಭಗವಂತನೆ, ದಯಾಸಮುದ್ರನೆ, ಸಂಸಾರಸಾಗರಕ್ಕೆ ನೀನು ಹಡಗಾಗಿರುವೆ. ಈ ನಿನ್ನನ್ನು ಆಶ್ರಯಿಸಿ ವಿವೇಕಿಗಳಾದವರು ಆಯಾಸವಿಲ್ಲದೆಯೇ ಆಚೆಯ ದಡವನ್ನು ಸೇರಿದ್ದಾರೆ.

**ಜನ್ಮಾನ್ತರಕೃತಾನನ್ತಪುಣ್ಯಕರ್ಮಫಲೋದಯಃ ।**
**ಅದ್ಯ ಸಂನಿಹಿತೋ ಯಸ್ಮಾತ್ತ್ವತ್ಕೃಪಾಪಾತ್ರಮಸ್ಮ್ಯಹಮ್ ॥ ೨೬೧ ॥**

೨೬೧. ಹಿಂದಿನ ಜನ್ಮಗಳಲ್ಲಿ ಮಾಡಿದ್ದ ಅನಂತಪುಣ್ಯಕರ್ಮದ ಫಲವು ಈಗ ನೈದೋರಿ ಸಮೀಪಿಸಿದೆ ; ಏಕೆಂದರೆ ನಾನು ತಮ್ಮ ಕೃಪೆಗೆ ಪಾತ್ರನಾಗಿರುತ್ತೇನೆ.

**ಸಂಪ್ರೀತಿಮಕ್ಷ್ಣೋರ್ವದನಪ್ರಸಾದ-**
**ಮಾನನ್ದಮನ್ತಃಕರಣಸ್ಯ ಸದ್ಯಃ ।**
**ವಿಲೋಕನಂ ಬ್ರಹ್ಮವಿದಸ್ತನೋತಿ**
**ಭಿನತ್ತಿ ಮೋಹಂ ಸುಗತಿಂ ವ್ಯನಕ್ತಿ ॥ ೨೬೨ ॥**

೨೬೨. ಬ್ರಹ್ಮಜ್ಞಾನಿಯ ದರ್ಶನವು ಕಂಗಳಿಗೆ ಇಂಪನ್ನೂ ಮುಖದಲ್ಲಿ ಪ್ರಸನ್ನತೆಯನ್ನೂ ಅಂತಃಕರಣಕ್ಕೆ ಆನಂದವನ್ನೂ ಕೂಡಲೆ ಉಂಟುಮಾಡುತ್ತದೆ, ಅಜ್ಞಾನವನ್ನು ಕತ್ತರಿಸಿಹಾಕುತ್ತದೆ, ಸನ್ಮಾರ್ಗವನ್ನು ತೋರಿಸಿಕೊಡುತ್ತದೆ.

**ಹುತಾಶನಾನಾಂ ಶಶಿನಾಮಿನಾನಾ-**
**ಮಪ್ಯರ್ಬುದಂ ವಾಪಿ ನ ಯನ್ನಿಹನ್ತುಮ್ ।**
**ಶಕ್ನೋತಿ ತದ್ಧ್ವಾನ್ತಮನನ್ತಮಾನ್ತರಂ**
**ಹನ್ತ್ಯಾತ್ಮವೇತ್ತಾ ಸಕೃದೀಕ್ಷಣೇನ ॥ ೨೬೩ ॥**

೨೬೩. ಅರ್ಬುದಗಟ್ಟಲೆಯ ಬೆಂಕಿಗಳಾಗಲಿ, ಚಂದ್ರರುಗಳಾಗಲಿ, ಸೂರ್ಯರುಗಳಾಗಲಿ ನಮ್ಮೊಳಗಿನ ಕೊನೆಗಾಣದ ಯಾವ ಕತ್ತಲೆಯನ್ನು ಕಳೆಯಲಾರರೋ ಅದನ್ನು ಆತ್ಮಜ್ಞಾನಿಯು ಒಮ್ಮೆ ನೋಡಿದ(ಮಾತ್ರ)ದಿಂದ ಕಳೆಯುತ್ತಾನೆ.

1. ಗೀ. ೪-೩೪.

**ದುಷ್ಪಾರೇ ಭವಸಾಗರೇ ಜನಿಮೃತಿವ್ಯಾಧ್ಯಾದಿದುಃಖೋತ್ಕಟೇ**
**ಘೋರೇ ಪುತ್ರಕಲತ್ರಮಿತ್ರಬಹುಲಗ್ರಾಹಾಕರೇ ಭೀಕರೇ ।**
**ಕರ್ಮೋತ್ತುಙ್ಗತರಙ್ಗಭಙ್ಗನಿಕರೈರಾಕೃಷ್ಯಮಾಣೋ ಮುಹು-**
**ರ್ಯಾತಾಯಾತಗತಿಭ್ರಮೇಣ ಶರಣಂ ಕಿಞ್ಚಿನ್ನ ಪಶ್ಯಾಮ್ಯಹಮ್ ॥**

೩೬೪. ಹುಟ್ಟು, ಸಾವು, ರೋಗ– ಮುಂತಾದ ದುಃಖಗಳಿಂದ ತುಂಬಿರುವ ಘೋರವಾಗಿರುವ ಮಕ್ಕಳು, ಹೆಂಡತಿ, ಸ್ನೇಹಿತರು– ಎಂಬ ಅನೇಕ ಮೊಸಳೆಗಳಿಗೆ ಆಶ್ರಯವಾಗಿ ಭಯಂಕರವಾಗಿರುವ, ಕರ್ಮಗಳೆಂಬ ಎತ್ತರನಾದ, ಒಂದೊಂದಾಗಿ ಬರುವ ಅಲೆಗಳ ಸಮೂಹದಿಂದ ಮತ್ತೆಮತ್ತೆ ಅತ್ತಿತ್ತ ಸೆಳೆಯಲ್ಪಡುತ್ತಾ ಪಾರು ಗಾಣದ ಸಂಸಾರಸಾಗರವಲ್ಲಿ ಅತ್ತ ಹೋಗುವದು ಇತ್ತ ಬರುವದು– ಹೀಗೆ ತೊಳಲುತ್ತಿರುವ ನನಗೆ ಯಾವದೊಂದು ಶರಣೂ ಕಾಣಿಸುತ್ತಿಲ್ಲ.

**ಕೇನ ವಾ ಪುಣ್ಯಶೇಷೇಣ ತವ ಪಾದಾಮ್ಬುಜದ್ವಯಮ್ ।**
**ದೃಷ್ಟವಾನಸ್ಮಿ ಮಾಮಾರ್ತಂ ಮೃತ್ಯೋಸ್ತ್ರಾಹಿ ದಯಾದೃಶಾ ॥೩೬೫॥**

೩೬೫. ಯಾವದೋ ಪುಣ್ಯಶೇಷದಿಂದ ತಮ್ಮ ಎರಡು ಪಾದಕಮಲಗಳನ್ನು ಕಂಡೆನೊ ! ಆರ್ತನಾದ ನನ್ನನ್ನು ದಯಾದೃಷ್ಟಿಯಿಂದ ಮೃತ್ಯುವಿನ ದೆಸೆಯಿಂದ ಕಾಪಾಡಿರಿ.

## ಗುರುವಿನ ಅನುಗ್ರಹ

**ವದನ್ತಮೇವ ತಂ ಶಿಷ್ಯಂ ದೃಷ್ಟ್ವೈವ[1] ದಯಯಾ ಗುರುಃ ।**
**ದದ್ಯಾದಭಯಮೇತಸ್ಮೈ ಮಾ ಭೈಷ್ಟೇತಿ ಮುಹುರ್ಮುಹುಃ ॥೩೬೬॥**

೩೬೬. ಹೀಗೆಂದು ಹೇಳುತ್ತಿರುವ ಆ ಶಿಷ್ಯನನ್ನು ಕಾಣುತ್ತಲೇ ಗುರುವು ದಯೆಯಿಂದ 'ಹೆದರಬೇಡ' ಎಂದು ಮತ್ತೆಮತ್ತೆ ಇವನಿಗೆ ಅಭಯವನ್ನು ಕೊಡಬೇಕು.

**ವಿದ್ವನ್ ಮೃತ್ಯುಭಯಂ ಜಹಾಹಿ ಭವತೋ ನಾಸ್ತ್ಯೇವ ಮೃತ್ಯುಃ ಕ್ವಚಿ-**
**ನ್ನಿತ್ಯಸ್ಯ ದ್ವಯವರ್ಜಿತಸ್ಯ ಪರಮಾನನ್ದಾತ್ಮನೋ ಬ್ರಹ್ಮಣಃ ।**
**ಭ್ರಾನ್ತ್ಯಾ ಕಿಞ್ಚಿದವೇಕ್ಷ್ಯ ಭೀತಮನಸಾ ಮಿಥ್ಯಾ ತ್ವಯಾ ಕಥ್ಯತೇ**
**ಮಾಂ ತ್ರಾಹೀತಿ ಹಿ ಸುಪ್ತವತ್ ಪ್ರಲಪನಂ ಶೂನ್ಯಾತ್ಮಕಂ ತೇ ಮೃಷಾ**

೩೬೭. ವಿವೇಕಿಯೆ, ಮೃತ್ಯುವಿನ ಅಂಜಿಕೆಯನ್ನು ಬಿಡು ; ನಿತ್ಯನೂ, ಅದ್ವಯಪರಮಾನಂದಸ್ವರೂಪನಾದ ಬ್ರಹ್ಮವೇ ಆಗಿರುವ ನಿನಗೆ ಎಂದಿಗೂ ಸಾವಿಲ್ಲ.

---

1. 'ದೃಷ್ಟ್ವೈವ' ಎಂಬ ಅಚ್ಚಿನ ಮೂಲವನ್ನು ಹೀಗೆ ತಿದ್ದಿಕೊಂಡಿದೆ ; 'ದೃಷ್ಟ್ವೇವ' ಎಂಬುದನ್ನು ಹೇಗೋ ಹೊಂದಿಸಬಹುದು. ಈ ಶ್ಲೋಕವನ್ನು ವಿ. ೪೧, ೪೩ಕ್ಕೆ ಹೋಲಿಸಿ.

ಭ್ರಾಂತಿಯಿಂದ ಏನನ್ನೋ ಕಂಡು ಹೆದರಿದ ಮನಸ್ಸಿನಿಂದ 'ನನ್ನನ್ನು ಕಾಪಾಡಿರಿ' ಎಂದು ಕನಸು ಕಂಡವನಂತೆ ಸುಳ್ಳನ್ನೇ ಆಡುತ್ತಿರುವೆ. ನಿನ್ನ ಈ ಮಾತು ಯಾವ ಅರ್ಥವೂ ಇಲ್ಲದ್ದು, ಸುಳ್ಳು.

**ನಿದ್ರಾಗಾಢತಮೋವೃತಃ ಕಿಲ ಜನಃ ಸ್ವಪ್ನೇ ಭುಜಙ್ಗಾದಿನಾ**
**ಗ್ರಸ್ತಂ ಸ್ವಂ ಸಮವೇಕ್ಷ್ಯ ಯತ್ಪ್ರಲಪತಿ ತ್ರಾಸಾದ್ಧತೋಽಸ್ಮೀತ್ಯಲಮ್ ।**
**ಆಪ್ತೇನ ಪ್ರತಿಬೋಧಿತಃ ಕರತಲೇನಾತಾಡ್ಯ ಪೃಷ್ಟಃ ಸ್ವಯಂ**
**ಕಿಞ್ಚಿನ್ನೇತಿ ವದತ್ಯಮುಷ್ಯ ವಚನಂ ಸ್ಯಾತ್ ತತ್ಕಿಮರ್ಥಂ ವದ ॥**

೨೭೮. ನಿದ್ರೆಯಿಂದ ಹೆಚ್ಚಿನ ಅಜ್ಞಾನವು ಕವಿದುಕೊಂಡ ಮನುಷ್ಯನು ಕನಸಿನಲ್ಲಿ ಹಾವು ಮುಂತಾದವುಗಳು ತನ್ನನ್ನು ಹಿಡಿದುಕೊಂಡಿರುವದನ್ನು ಕಂಡು ಭಯದಿಂದ 'ಕೆಟ್ಟೆನು!' ಎಂದು ಬಲವಾಗಿ ಕೂಗಿಕೊಳ್ಳುತ್ತಾನೆ ; ಆಪ್ತನಾದವನು ಕೈಯಿಂದ ತಟ್ಟಿ (ಎಬ್ಬಿಸಿ) ಕೇಳಲಾಗಿ 'ಏನೂ ಇಲ್ಲ!' ಎನ್ನುತ್ತಾನೆ. ಅವನ ಆ ಮಾತಿಗೆ ಏನು ಅರ್ಥ ? ಹೇಳು :

**ರಜ್ಜ್ವೋಽಸ್ತು ತತ್ತ್ವಮನವೇಕ್ಷ್ಯ ಗೃಹೀತಸರ್ಪ-**
**ಭಾವಃ ಪುಮಾನಯಮಹಿರ್ವಸತೀತಿ ಮೋಹಾತ್ ।**
**ಆಕ್ರೋಶತಿ ಪ್ರತಿಬಿಭೇತಿ ಚ ಕಮ್ಪತೇ ತ-**
**ನ್ಮಿಥ್ಯೈವ ನಾತ್ರ ಭುಜಗೋಽಸ್ತಿ ವಿಚಾರ್ಯಮಾಣೇ ॥೨೭೯॥**

೨೭೯. ಹಗ್ಗದ ನಿಜವನ್ನು ಕಾಣದೆ ಹಾವೆಂದು ತಿಳಿದುಕೊಂಡ ಮನುಷ್ಯನು 'ಇಲ್ಲಿರುವದು ಹಾವು' ಎಂದು ಭ್ರಾಂತಿಯಿಂದ ಕೂಗಿಕೊಳ್ಳುತ್ತಾನೆ, ಅದಕ್ಕೆ ಹೆದರಿಕೊಳ್ಳುತ್ತಾನೆ, ನಡುಗುತ್ತಾನೆ. ಅದು ಸುಳ್ಳು. ವಿಚಾರಮಾಡಿದರೆ ಇಲ್ಲಿ ಹಾವು ಇರುವದೇಇಲ್ಲ.

**ತದ್ವತ್ತ್ವಯಾಽಪ್ಯಾತ್ಮನ ಉಕ್ತಮೇತ-**
**ಜ್ಜನ್ಮಾಪ್ಯಯವ್ಯಾಧಿಜರಾದಿದುಃಖಮ್ ।**
**ಮೃಷೈವ ಸರ್ವಂ ಭ್ರಮಕಲ್ಪಿತಂ ತೇ**
**ಸಮ್ಯಗ್ವಿಚಾರ್ಯಾತ್ಮನಿ ಮುಞ್ಚ ಭೀತಿಮ್ ॥ ೨೭೦ ॥**

೨೭೦. ನೀನು ಹೇಳಿದ ಈ ಮಾತೂ ಅದರಂತೆಯೇ. ಹುಟ್ಟು, ಸಾವು, ರೋಗ, ಮುಪ್ಪು– ಮುಂತಾದ ದುಃಖವೂ ಸುಳ್ಳಾಗಿಯೇ ನಿನ್ನ ಭ್ರಮೆಯಿಂದ ಕಲ್ಪಿತವಾದದ್ದು. ನಿನ್ನಲ್ಲಿಯೇ ಚೆನ್ನಾಗಿ ವಿಚಾರಮಾಡಿಕೊಂಡು ಅಂಜಿಕೆಯನ್ನು ಬಿಡು.

**ಭವಾನನಾತ್ಮನೋ ಧರ್ಮಾನಾತ್ಮನ್ಯಾರೋಪ್ಯ ಶೋಚತಿ ।**
**ತದಜ್ಞಾನಕೃತಂ ಸರ್ವಂ ಭಯಂ ತ್ಯಕ್ತ್ವಾ ಸುಖೀ ಭವ ॥ ೨೭೧ ॥**

೨೭೧. ನೀನು ಅನಾತ್ಮದ ಧರ್ಮಗಳನ್ನು ಆತ್ಮನಮೇಲೆ ಹಾಕಿಕೊಂಡು ಶೋಕಿಸುತ್ತಿರುವೆ. ಆದ್ದರಿಂದ ಅಜ್ಞಾನದಿಂದುಂಟಾದ ಎಲ್ಲಾ ಹೆದರಿಕೆಯನ್ನೂ ಬಿಟ್ಟು ಸುಖಿಯಾಗು.

## ಶಿಷ್ಯನ ಪ್ರಶ್ನೆ

**ಶಿಷ್ಯಃ—**

**ಶ್ರೀಮದ್ಭಿರುಕ್ತಂ ಸಕಲಂ ಮೃಷೇತಿ**
**ದೃಷ್ಟಾನ್ತ ಏವ ಹ್ಯುಪಪದ್ಯತೇ ತತ್ ।**
**ದಾರ್ಷ್ಟಾನ್ತಿಕೇ ನೈವ ಭವಾದಿದುಃಖಂ**
**ಪ್ರತ್ಯಕ್ಷತಃ ಸರ್ವಜನಪ್ರಸಿದ್ಧಮ್** ॥ ೨೭೨ ॥

೨೭೨. ಶಿಷ್ಯನು (ಹೇಳುತ್ತಾನೆ) : ತಾವು ಸಕಲವೂ ಮಿಥ್ಯೆಯೇ ಎಂದು ಹೇಳಿದ್ದು ದೃಷ್ಟಾಂತದಲ್ಲಿ ಮಾತ್ರವೇ ಹೊಂದುತ್ತದೆ. ದಾರ್ಷ್ಟಾಂತಿಕದಲ್ಲಿ (ಹೊಂದುವದೇ) ಇಲ್ಲ; ಜನ್ಮವೇ ಮುಂತಾದ ದುಃಖವು ಪ್ರತ್ಯಕ್ಷವಾಗಿ ಎಲ್ಲಜನರ ಅನುಭವದಲ್ಲಿಯೂ ಇದೆ.

**ಪ್ರತ್ಯಕ್ಷೇಣಾನುಭೂತಾರ್ಥಃ ಕಥಂ ಮಿಥ್ಯಾತ್ವಮರ್ಹತಿ ।**
**ಚಕ್ಷುಷೋ ವಿಷಯಂ ಕುಮ್ಭಂ ಕಥಂ ಮಿಥ್ಯಾಕರೋಮ್ಯಹಮ್ ॥**

೨೭೩. ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವ ವಿಷಯವು ಹೇಗೆ ಮಿಥ್ಯೆಯೆನ್ನಲಾದೀತು ? ಕಣ್ಣಿಗೆ ಕಾಣುವ ಗಡಿಗೆಯನ್ನು ನಾನು ಹೇಗೆ ಸುಳ್ಳುಮಾಡಲಿ?

**ವಿದ್ಯಮಾನಸ್ಯ ಮಿಥ್ಯಾತ್ವಂ ಕಥಂ ನು ಘಟತೇ ಪ್ರಭೋ ।**
**ಪ್ರತ್ಯಕ್ಷಂ ಖಲು ಸರ್ವೇಷಾಂ ಪ್ರಮಾಣಾನಾಂ[1] ಪ್ರಸ್ಫುಟಾರ್ಥಕಮ್॥**

೨೭೪. ಇರುವ (ವಸ್ತು) ಸುಳ್ಳು –ಎಂಬುದು ಹೇಗೆತಾನೆ ಹೊಂದೀತು, ಸ್ವಾಮಿ ? ಪ್ರತ್ಯಕ್ಷವೇ ಅಲ್ಲವೆ, ಪ್ರಮಾಣಗಳೆಲ್ಲಕ್ಕಿಂತಲೂ ಸ್ಫುಟವಾಗಿ ವಿಷಯವನ್ನು (ತಿಳಿಸಿ)ಕೊಡುವದು ?

**ಮರ್ತ್ಯಸ್ಯ ಮಮ ಜನ್ಮಾದಿದುಃಖಭಾಜೋಽಲ್ಪಜೀವಿನಃ ।**
**ಬ್ರಹ್ಮತ್ವಮಪಿ ನಿತ್ಯತ್ವಂ ಪರಮಾನನ್ದತಾ ಕಥಮ್** ॥ ೨೭೫ ॥

೨೭೫. ಮರ್ತ್ಯನಾಗಿರುವ, ಹುಟ್ಟುವದೇ ಮುಂತಾದ ದುಃಖಗಳನ್ನು ಅನುಭವಿಸುತ್ತಿರುವ, ಅಲ್ಪಾಯುಸ್ಸಿನವನಾದ ನಾನು ಬ್ರಹ್ಮನೆಂಬುದೂ ನಿತ್ಯನೆಂಬುದೂ ಪರಮಾನಂದರೂಪನೆಂಬುದೂ ಹೇಗೆ ಹೊಂದುತ್ತದೆ ?

---

1. 'ಪ್ರಮಾಣಮ್' ಎಂಬ ಪಾಠವನ್ನಿಟ್ಟುಕೊಂಡರೆ 'ಎಲ್ಲರಿಗೂ ಸ್ಫುಟವಾಗಿ ವಿಷಯವನ್ನು ತಿಳಿಸಿಕೊಡುವ ಪ್ರಮಾಣವು' ಎಂದು ಕನ್ನಡಿಸಿಕೊಳ್ಳಬೇಕು.

**ಕ ಆತ್ಮಾ ಕಸ್ತ್ವನಾತ್ಮಾ ಚ ಕಿಮು ಲಕ್ಷಣಮೇತಯೋಃ[1] ।**
**ಆತ್ಮನ್ಯನಾತ್ಮಧರ್ಮಾಣಾಮಾರೋಪಃ ಕ್ರಿಯತೇ ಕಥಮ್ ॥ ೨೭೬ ॥**

೨೭೬. ಆತ್ಮನೆಂದರೆ ಯಾರು ? ಅನಾತ್ಮವು ಯಾವದು ? ಇವೆರಡಕ್ಕೂ ಲಕ್ಷಣವೇನು ? ಆತ್ಮನಲ್ಲಿ ಅನಾತ್ಮದ ಧರ್ಮಗಳ ಆರೋಪವನ್ನು ಮಾಡುತ್ತಾರೆಂಬುದು ಹೇಗೆ ?

**ಕಿಮಜ್ಞಾನಂ ತದುತ್ಪನ್ನಭಯತ್ಯಾಗೋಽಪಿ ವಾ ಕಥಮ್ ।**
**ಕಿಮು ಜ್ಞಾನಂ ತದುತ್ಪನ್ನಸುಖಪ್ರಾಪ್ತಿಶ್ಚ ವಾ ಕಥಮ್ ॥ ೨೭೭ ॥**

೨೭೭. ಅಜ್ಞಾನವೆಂದರೆ ಯಾವದು ? ಅದರಿಂದುಂಟಾದ ಅಂಜಿಕೆಯನ್ನು ತೊಲಗಿಸಿಕೊಳ್ಳುವದಾದರೂ ಹೇಗೆ? ಜ್ಞಾನವೆಂದರೆ ಯಾವದು ? ಅದರಿಂದುಂಟಾದ ಸುಖವು ದೊರಕುವದೆಂದರೆ ಹೇಗೆ ?

**ಸರ್ವಮೇತದ್ ಯಥಾಪೂರ್ವಂ ಕರಾಮಲಕವತ್ ಸ್ಫುಟಮ್ ।**
**ಪ್ರತಿಪಾದಯ ಮೇ ಸ್ವಾಮಿನ್ ಶ್ರೀಗುರೋ ಕರುಣಾನಿಧೇ ॥ ೨೭೮ ॥**

೨೭೮. ಸ್ವಾಮಿ, ಶ್ರೀಗುರುವೆ, ದಯಾನಿಧಿಯೆ, ಇವೆಲ್ಲವನ್ನೂ ಒಂದೊಂದಾಗಿ ಅಂಗೈನೆಲ್ಲಿಯಂತೆ ಸ್ಫುಟವಾಗಿ ನನಗೆ ತಿಳಿಸಿಕೊಡಿರಿ.

## ಗುರುವಿನ ಉತ್ತರ

**ಶ್ರೀಗುರುಃ—**

**ಧನ್ಯಃ[2] ಕೃತಾರ್ಥಸ್ತ್ವಮಹೋ ವಿವೇಕಃ**
**ಶಿವಪ್ರಸಾದಸ್ತವ ವಿದ್ಯತೇ ಮಹಾನ್ ।**
**ವಿಸೃಜ್ಯ ತು ಪ್ರಾಕೃತಲೌಕಮಾರ್ಗಂ**
**ಬ್ರಹ್ಮಾವಗನ್ತುಂ ಯತಸೇ ಯತಸ್ತ್ವಮ್ ॥ ೨೭೯ ॥**

೨೭೯. ಗುರುವಿನ(ಮಾತು) : ಧನ್ಯ ! ಕೃತಾರ್ಥನು ನೀನು ! ಆಹಾ ! ಎಂಥ ವಿವೇಕವಿದು ? ಹೆಚ್ಚಿನ ಶಿವಪ್ರಸಾದವು ನಿನಗೆ ಇರುತ್ತದೆ. ಏಕೆಂದರೆ ಸಾಮಾನ್ಯಜನರ ಮಾರ್ಗವನ್ನು ಬಿಟ್ಟು ಬ್ರಹ್ಮವನ್ನು ಅರಿತುಕೊಳ್ಳುವವಕ್ಕೆ ಯತ್ನಿಸುತ್ತಿರುವೆ.

**ಶಿವಪ್ರಸಾದೇನ ವಿನಾ ನ ಸಿದ್ಧಿಃ ಶಿವಪ್ರಸಾದೇನ ವಿನಾ ನ ಬುದ್ಧಿಃ ।**
**ಶಿವಪ್ರಸಾದೇನ ವಿನಾ ನ ಯುಕ್ತಿಃ ಶಿವಪ್ರಸಾದೇನ ವಿನಾ ನ ಮುಕ್ತಿಃ[3]**

೨೮೦. ಶಿವಪ್ರಸಾದವಿದ್ದಹೊರತು ಸಿದ್ಧಿಯಾಗಲಾರದು, ಶಿವಪ್ರಸಾದವಿದ್ದಹೊರತು ಬುದ್ಧಿಯುಂಟಾಗದು, ಶಿವಪ್ರಸಾದವಿದ್ದಹೊರತು ಯುಕ್ತಿಯು ಹೊಳೆಯದು, ಶಿವಪ್ರಸಾದವಿದ್ದಹೊರತು ಮುಕ್ತಿಯು ದೊರಕಲಾರದು.

---

1. ವಿ. ೪೦ಕ್ಕೆ ಹೋಲಿಸಿರಿ. 2. ವಿ. ೫೦ಕ್ಕೆ ಹೋಲಿಸಿರಿ.
3. ಸೂ. ಸಂ. ಯಜ್ಞ. ೨೩–೪೭.

**ಯಸ್ಯ ಪ್ರಸಾದೇನ ವಿಮುಕ್ತಸಙ್ಗಾಃ**
**ಶುಕಾದಯಃ ಸಂಸೃತಿಬನ್ಧಮುಕ್ತಾಃ ।**
**ತಸ್ಯ ಪ್ರಸಾದೋ ಬಹುಜನ್ಮಲಭ್ಯೋ**
**ಭಕ್ತ್ಯೈಕಗಮ್ಯೋ ಭವಮುಕ್ತಿಹೇತುಃ** ॥ ೨೮೧ ॥

೨೮೧. ಯಾವನ ಪ್ರಸಾದದಿಂದ ವಿಷಯಸಂಗದಿಂದ ಬಿಡುಗಡೆ ಹೊಂದಿದ **ಶುಕನೇ** ಮೊದಲಾದವರು ಸಂಸಾರಬಂಧದಿಂದ ಮುಕ್ತರಾದರೋ ಆತನ ಪ್ರಸಾದವೆಂಬುದು ಅನೇಕ ಜನ್ಮಗಳ ತರುವಾಯ ದೊರಕತಕ್ಕದ್ದು, ಭಕ್ತಿಯೊಂದರಿಂದಲೇ ಸಿಕ್ಕತಕ್ಕದ್ದು, ಸಂಸಾರದಿಂದ ಬಿಡುಗಡೆಯನ್ನು ಹೊಂದುವದಕ್ಕೆ ಕಾರಣವಾದದ್ದು.

**ವಿವೇಕೋ ಜನ್ತೂನಾಂ ಪ್ರಭವತಿ ಜನಿಷ್ವೇವ ಬಹುಷು**
**ಪ್ರಸಾದಾದೇವೈಶಾದ್ ಬಹುಸುಕೃತಪಾಕೋದಯವಶಾತ್ ।**
**ಯತಸ್ತಸ್ಮಾದೇವ ತ್ವಮಪಿ ಪರಮಾರ್ಥಾವಗಮನೇ**
**ಕೃತಾರಮ್ಭಃ ಪುಂಸಾಮಿದಮಿಹ ವಿವೇಕಸ್ಯ ತು ಫಲಮ್** ॥೨೮೨॥

೨೮೨. ಜೀವರಿಗೆ ವಿವೇಕವು ಬಹುಜನ್ಮಗಳ ತರುವಾಯವೇ ಈಶ್ವರನ ಅನುಗ್ರಹದಿಂದಲೇ, ಬಹಳ ಪುಣ್ಯವು ಪಾಕವಾದದ್ದರ ಫಲವಾಗಿ ಉಂಟಾಗುತ್ತದೆ. ಹೀಗಿರುವದರಿಂದಲೇ ನೀನೂ ಪರಮಾರ್ಥವನ್ನು ಅರಿತುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವೆ. ಇದು ಮನುಷ್ಯರಿಗೆ ಈ ಲೋಕದಲ್ಲಿ ವಿವೇಕದ ಫಲವೇ.

**ಮರ್ತ್ಯತ್ವಸಿದ್ಧೇರಪಿ ಪುಂಸ್ತ್ವಸಿದ್ಧೇ**
**ರ್ವಿಪ್ರತ್ವಸಿದ್ಧೇಶ್ಚ ವಿವೇಕಸಿದ್ಧೇಃ ।**
**ವದನ್ತಿ ಮುಖ್ಯಂ ಫಲಮೇವ ಮೋಕ್ಷಂ**
**ವ್ಯರ್ಥಂ ಸಮಸ್ತಂ ಯದಿ ಚೇನ್ನ ಮೋಕ್ಷಃ** ॥ ೨೮೩ ॥

೨೮೩. ಮನುಷ್ಯತ್ವವು ದೊರೆತದ್ದಕ್ಕೂ, ಗಂಡಸಿನ ಜನ್ಮವು ದೊರೆತದ್ದಕ್ಕೂ, ವಿಪ್ರತ್ವವು ದೊರೆತದ್ದಕ್ಕೂ, (ಅದರಲ್ಲಿಯೂ) ವಿವೇಕವು ದೊರೆತದ್ದಕ್ಕೂ ಮೋಕ್ಷವೇ ಮುಖ್ಯಫಲವೆನ್ನುವರು. ಮೋಕ್ಷವೊಂದು ದೊರೆಯದಿದ್ದರೆ ಇವೆಲ್ಲವೂ ವ್ಯರ್ಥವೇ.

**ಪ್ರಶ್ನಃ ಸಮೀಚೀನತರಸ್ತವಾಯಂ**
**ಯದಾತ್ಮತತ್ತ್ವಾವಗಮೇ ಪ್ರವೃತ್ತಿಃ ।**
**ತತಸ್ತವೈತತ್ ಸಕಲಂ ಸಮೂಲಂ**
**ನಿವೇದಯಿಷ್ಯಾಮಿ ಮುದಾ ಶೃಣುಷ್ವ** ॥ ೨೮೪ ॥

೨೮೪. ಈ ನಿನ್ನ ಪ್ರಶ್ನೆ ಬಹಳ ಚೆನ್ನಾಗಿದೆ. ಏಕೆಂದರೆ ಆತ್ಮತತ್ತ್ವವನ್ನು ಅರಿತುಕೊಳ್ಳುವದಕ್ಕಾಗಿ (ಇದು) ಹೊರಟಿರುತ್ತದೆ. ಆದ್ದರಿಂದ ನಿನಗೆ ಇದೆಲ್ಲವನ್ನೂ ಸಕಾರಣವಾಗಿ ತಿಳಿಸಿಕೊಡುವೆನು, ಸಂತಸದಿಂದ ಕೇಳು.

## ಪ್ರಪಂಚಮಿಥ್ಯಾತ್ವ

**ಮರ್ತ್ಯತ್ವಂ ತ್ವಯಿ ಕಲ್ಪಿತಂ ಭ್ರಮವಶಾತ್ತೇನೈವ ಜನ್ಮಾದಯ-**
**ಸ್ತತ್ಸಂಭಾವಿತಮೇವ ದುಃಖಮಪಿ ತೇ ನೋ ವಸ್ತುತಸ್ತನ್ಮೃಷಾ ।**
**ನಿದ್ರಾಮೋಹವಶಾದುಪಾಗತಸುಖಂ ದುಃಖಂ ಚ ಕಿಂ ನು ತ್ವಯಾ**
**ಸತ್ಯತ್ವೇನ ವಿಲೋಕಿತಂ ಕ್ವಚಿದಪಿ ಬ್ರೂಹಿ ಪ್ರಬೋಧಾಗಮೇ ॥ ೨೮೫ ॥**

೨೮೫. ನಿನ್ನಲ್ಲಿ ಮನುಷ್ಯತ್ವವು ಭ್ರಾಂತಿಯ ವಶದಿಂದ ಕಲ್ಪಿತವಾಗಿರುತ್ತದೆ. ಅದರಿಂದಲೇ ಜನ್ಮಾದಿಗಳೂ ( ಕಲ್ಪಿತವಾಗಿರುತ್ತವೆ ). ಅದರಿಂದಲೇ ದುಃಖವೂ ನಿನಗೆ ಇರಬಹುದಾದ್ದೆಂದಾಗಿರುತ್ತದೆ; ನಿಜವಾಗಿಲ್ಲ, ಅದು ಸುಳ್ಳೇ. ನಿದ್ರೆಯ ಅವಿವೇಕದಿಂದುಂಟಾದ ಸುಖವೂ ದುಃಖವೂ ಎಂದಾದರೂ ಎಚ್ಚರವುಂಟಾದಾಗ ನಿನಗೆ ನಿಜವೆಂದು ಕಂಡುಬಂದಿದೆಯೆ ? ಹೇಳು.

**ನಾಶೇಷಲೋಕೈರನುಭೂಯಮಾನಃ**
**ಪ್ರತ್ಯಕ್ಷತೋಽಯಂ ಸಕಲಪ್ರಪಞ್ಚಃ ।**
**ಕಥಂ ಮೃಷಾ ಸ್ಯಾದಿತಿ ಶಙ್ಕನೀಯಂ**
**ವಿಚಾರಶೂನ್ಯೇನ ವಿಮುಹ್ಯತಾ ತ್ವಯಾ ॥ ೨೮೬ ॥**

೨೮೬. ಎಲ್ಲಾ ಜನರ ಅನುಭವದಲ್ಲಿಯೂ ಪ್ರತ್ಯಕ್ಷವಾಗಿ ಇರುವ ಈ ಪ್ರಪಂಚವೆಲ್ಲ ಹೇಗೆ ಸುಳ್ಳಾದೀತು ?– ಎಂದು ವಿಚಾರವನ್ನು ಮಾಡದೆ ಭ್ರಾಂತನಾಗಿ ನೀನು ಶಂಕಿಸದಿರು.

**ದಿವಾನ್ಧದೃಷ್ಟೇಸ್ತು ದಿವಾನ್ಧಕಾರಃ**
**ಪ್ರತ್ಯಕ್ಷಸಿದ್ಧೋಽಪಿ ಸ ಕಿಂ ಯಥಾರ್ಥಃ ।**
**ತದ್ವದ್ ಭ್ರಮೇಣಾವಗತಃ ಪದಾರ್ಥೋ**
**ಭ್ರಾನ್ತಸ್ಯ ಸತ್ಯಃ ಸುಮತೇರ್ಮೃಷೈವ ॥ ೨೮೭ ॥**

೨೮೭. ಹಗಲು ಕಣ್ಣುಕಾಣದ ಗೂಗೆಗೆ ಹಗಲಿನಲ್ಲಿರುವ ಕತ್ತಲೆಯು ಪ್ರತ್ಯಕ್ಷಸಿದ್ಧವಾಗಿದ್ದರೂ ಅದೇನು ನಿಜವೆ ? ಅದರಂತೆ ಭ್ರಾಂತಿಯಿಂದ ನಿಶ್ಚಯಿಸಿದ ಪದಾರ್ಥವು ಭ್ರಾಂತನಿಗೆ ನಿಜವು, ವಿವೇಕಿಗೆ ಸುಳ್ಳೇ.

**ಘಟೋಽಯಮಿತ್ಯತ್ರ ಘಟಾಭಿಧಾನಃ**
**ಪ್ರತ್ಯಕ್ಷತಃ ಕಶ್ಚಿದುದೇತಿ ದೃಷ್ಟೇಃ ।**
**ವಿಚಾರ್ಯಮಾಣೇ ಸ ತು ನಾಸ್ತಿ ತತ್ರ**
**ಮೃದಸ್ತಿ ತದ್ಭಾವವಿಲಕ್ಷಣಾ ಸಾ ॥ ೨೮೮ ॥**

೨೮೮. 'ಇದು ಗಡಿಗೆ' ಎನ್ನುವಾಗ ಗಡಿಗೆ ಎಂಬ ಯಾವದೋ ಒಂದು (ವಸ್ತು) ಕಣ್ಣಿಗೆ ತೋರಿಕೊಳ್ಳುತ್ತದೆ. ಆದರೆ ವಿಚಾರಮಾಡಿ(ನೋಡಿ)ದರೆ ಅದು ಅಲ್ಲಿರುವದಿಲ್ಲ; ಮಣ್ಣಿರುತ್ತದೆ. ಅದು ಆ (ಗಡಿಗೆಯ ಸ್ವರೂಪ)ಕ್ಕಿಂತ ವಿಲಕ್ಷಣವಾದದ್ದು.

**ಪ್ರಾದೇಶಮಾತ್ರಃ ಪರಿದೃಶ್ಯತೇಽರ್ಕಃ**
**ಶಾಸ್ತ್ರೇಣ ಸಂದರ್ಶಿತಲಕ್ಷಯೋಜನಃ ।**
**ಮಾನಾನ್ತರೇಣ ಕ್ವಚಿದೇತಿ ಬಾಧಂ**
**ಪ್ರತ್ಯಕ್ಷಮಪ್ಯತ್ರ ಹಿ ನ ವ್ಯವಸ್ಥಾ ॥ ೨೮೯ ॥**

೨೮೯. ಸೂರ್ಯನು ಚೋಟಗಲವಿರುವಂತೆ ಕಾಣಿಸುತ್ತಾನೆ, ಶಾಸ್ತ್ರದಲ್ಲಿ (ಅವನು) ಲಕ್ಷಯೋಜನದಗಲವೆಂದು ತೋರಿಸಿಕೊಟ್ಟಿರುತ್ತದೆ. ಪ್ರತ್ಯಕ್ಷವೂ ಕೆಲವುಕಡೆಗಳಲ್ಲಿ ಮತ್ತೊಂದು ಪ್ರಮಾಣದಿಂದ ಬಾಧಿತವಾಗಬಹುದು ; ಇಲ್ಲಿ (ಪ್ರತ್ಯಕ್ಷವೇ ಎಲ್ಲಕ್ಕೂ ಹೆಚ್ಚಿನದೆಂಬ) ವ್ಯವಸ್ಥೆಯೇನೂ ಇರುವದಿಲ್ಲ.

**ತಸ್ಮಾತ್ತ್ವಯೀದಂ ಭ್ರಮತಃ ಪ್ರತೀತಂ**
**ಮೃಷೈವ ನೋ ಸತ್ಯಮವೇಹಿ ಸಾಕ್ಷಾತ್ ।**
**ಬ್ರಹ್ಮ ತ್ವಮೇವಾಸಿ ಸುಖಸ್ವರೂಪಂ**
**ತ್ವತ್ತೋ ನ ಭಿನ್ನಂ ವಿಚಿನುಷ್ವ ಬುದ್ಧ್ಯಾ ॥ ೨೯೦ ॥**

೨೯೦. ಆದ್ದರಿಂದ ತಪ್ಪುತಿಳಿವಳಿಕೆಯಿಂದ ನಿನ್ನಲ್ಲಿ ತೋರುತ್ತಿರುವ ಇದು ಹುಸಿಯೇ, ಸತ್ಯವಲ್ಲ. ಸುಖಸ್ವರೂಪವಾದ ಸಾಕ್ಷಾದ್ಬ್ರಹ್ಮವು ನೀನೇ ಆಗಿರುವೆ-ಎಂದು ತಿಳಿದುಕೊ. ನಿನಗಿಂತ ಬೇರೆಯಲ್ಲ, ಬುದ್ಧಿಯಲ್ಲಿ ಹೊರಳಿಸಿನೋಡು.

**ಲೋಕಾನ್ತರೇ ವಾತ್ರ ಗುಹಾನ್ತರೇ ವಾ**
**ತೀರ್ಥಾನ್ತರೇ ಕರ್ಮಪರಮ್ಪರಾನ್ತರೇ ।**
**ಶಾಸ್ತ್ರಾನ್ತರೇ ನಾಸ್ತ್ಯನುಪಶ್ಯತಾಮಿಹ**
**ಸ್ವಯಂ ಪರಂ ಬ್ರಹ್ಮ ವಿಚಾರ್ಯಮಾಣೇ ॥ ೨೯೧ ॥**

೨೯೧. (ಬ್ರಹ್ಮವು) ಲೋಕಾಂತರದಲ್ಲಿಯಾಗಲಿ, ಯಾವದೋ ಒಂದು ಗವಿಯಲ್ಲಾಗಲಿ, ಮತ್ತೊಂದು ತೀರ್ಥದಲ್ಲಾಗಲಿ, ಕರ್ಮಪರಂಪರೆಯಲ್ಲಿ (ಯಾವದೋ ಒಂದು ಕರ್ಮ)ದಲ್ಲಿಯಾಗಲಿ, ಬೇರೊಂದು ಶಾಸ್ತ್ರದಲ್ಲಿಯಾಗಲಿ ಇರುವದಿಲ್ಲ. ಚೆನ್ನಾಗಿ ನೋಡುವವರಿಗೆ, ವಿಚಾರಿಸಿಕೊಂಡರೆ ತಾನೇ ಪರಬ್ರಹ್ಮ.

**ತತ್ತ್ವಮಾತ್ಮಸ್ಥಮಜ್ಞಾತ್ವಾ ಮೂಢಃ ಶಾಸ್ತ್ರೇಷು ಪಶ್ಯತಿ ।**
**ಗೋಪಃ ಕಕ್ಷಗತಂ ಛಾಗಂ ಯಥಾ ಕೂಪೇಷು ದುರ್ಮತಿಃ ॥ ೨೯೨ ॥**

೨೯೨. ಪಶುಪಾಲಕನಾದ (ಕುರುಬನು) ಕಂಕುಳಲ್ಲಿರುವ ಟಗರನ್ನು ಭಾವಿಗಳಲ್ಲಿ (ಹುಡುಕಿ) ನೋಡುವಂತೆ, ತನ್ನಲ್ಲಿಯೇ ಇರುವ ತತ್ತ್ವವನ್ನು ಮೂಢನು ಶಾಸ್ತ್ರಗಳಲ್ಲಿ (ಹುಡುಕಿ)ನೋಡುತ್ತಿರುವನು.

**ಸ್ವಮಾತ್ಮಾನಂ ಪರಂ ಮತ್ವಾ ಪರಮಾತ್ಮಾನಮನ್ಯಥಾ ।**
**ವಿಮೃಶ್ಯತೇ ಪುನಃ ಸ್ವಾತ್ಮಾ ಬಹಿಃ ಕೋಶೇಷು ಪಣ್ಡಿತೈಃ ॥ ೨೯೩ ॥**

೨೯೩. ಪಂಡಿತರೆನಿಸಿಕೊಳ್ಳುವರೂ ತಮ್ಮ ಆತ್ಮನು ಬೇರೆ, ಪರಮಾತ್ಮನೇ ಬೇರೆಯ ಪ್ರಕಾರದವನು –ಎಂದು ತಿಳಿದು ತಮ್ಮ ಆತ್ಮನನ್ನು (ಅನ್ನಮಯ ದೇಹವೇ) ಮುಂತಾದ ಹೊರಗಿನ ಕೋಶಗಳಲ್ಲಿ ಹುಡುಕುತ್ತಿರುವರು.[1]

**ವಿಸ್ಮೃತ್ಯ ವಸ್ತುನಸ್ತತ್ತ್ವಮಧ್ಯಾರೋಪ್ಯ ಚ ವಸ್ತುನಿ ।**
**ಅವಸ್ತುತಾಂ ಚ ತದ್ಧರ್ಮಾನ್ ಮುಧಾ ಶೋಚತಿ ನಾನ್ಯಥಾ ॥ ೨೯೪ ॥**

೨೯೪. (ಆತ್ಮ)ವಸ್ತುವಿನ ತತ್ತ್ವವನ್ನು ಮರೆತು, ವಸ್ತುವಿನಲ್ಲಿ ಅವಸ್ತು (ಅನೃತವಾದ ಅನಾತ್ಮ)ತ್ವವನ್ನೂ ಅದರ ಧರ್ಮಗಳನ್ನೂ ಹುಟ್ಟಿಹಾಕಿಕೊಂಡು ಸುಮ್ಮಸುಮ್ಮನೆ ಶೋಕಿಸುತ್ತಿರುತ್ತಾನೆಯೇ ಹೊರತು ಬೇರೆಯಲ್ಲ.

## ಅಧ್ಯಾರೋಪ

**ಆತ್ಮಾನಾತ್ಮವಿವೇಕಂ ತೇ ವಕ್ಷ್ಯಾಮಿ ಶೃಣು ಸಾದರಮ್ ।**
**ಯಸ್ಯ ಶ್ರವಣಮಾತ್ರೇಣ ಮುಚ್ಯತೇಽನಾತ್ಮಬನ್ಧನಾತ್ ॥ ೨೯೫ ॥**

೨೯೫. ಆತ್ಮ, ಅನಾತ್ಮ– ಇವುಗಳನ್ನು ವಿಂಗಡಿಸುವ ಬಗೆಯನ್ನು ತಿಳಿಸುತ್ತೇನೆ, ಆದರದಿಂದ ಕೇಳು. ಅದನ್ನು ಕೇಳಿದಮಾತ್ರದಿಂದ ಅನಾತ್ಮದ ಬಂಧದಿಂದ ಮುಕ್ತನಾಗುತ್ತಾನೆ.

**ಇತ್ಯುಕ್ತ್ವಾಽಭಿಮುಖೀಕೃತ್ಯ ಶಿಷ್ಯಂ ಕರುಣಯಾ ಗುರುಃ ।**
**ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚಯನ್ ॥ ೨೯೬ ॥**
**ಸಮ್ಯಕ್ಪ್ರಬೋಧಯೇತ್[2] ತತ್ತ್ವಂ ಶಾಸ್ತ್ರದೃಷ್ಟೇನ ವರ್ತ್ಮನಾ ।**
**ಸರ್ವೇಷಾಮುಪಕಾರಾಯ ತತ್ಪ್ರಕಾರೋಽತ್ರ ದರ್ಶ್ಯತೇ ॥ ೨೯೭ ॥**

---

1. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ– ಈ ಐದೂ ಬರಿಯ ಕೋಶಗಳು, ಕತ್ತಿಗೆ ಒರೆಯಂತಿರುವ ಬರಿಯ ಮುಸುಕುಗಳು; ಅವು ನಿಜವಾದ ಆತ್ಮನಲ್ಲ. ಆದರೂ ಅವನ್ನೇ ಅಜ್ಞರು ಆತ್ಮನೆಂದುಕೊಳ್ಳುತ್ತಿದ್ದಾರೆ –ಎಂದು ಅಭಿಪ್ರಾಯ.

2. 'ಪ್ರಬೋಧಯೇತ್' ತಿಳಿಸಬೇಕು ಎಂದರ್ಥವನ್ನು ಹೇಳಿದರೇ ೨೫೧ ಮತ್ತು ೨೬೫ನೆಯ ಶ್ಲೋಕಗಳ ಅರ್ಥಕ್ಕೆ ಹೊಂದಿಕೊಳ್ಳುತ್ತದೆ. ಗುರುಶಿಷ್ಯಸಂವಾದರೂಪದಿಂದ ಈ ಗ್ರಂಥವನ್ನು ಬರೆದಿದೆ.

೨೯೬–೨೯೭. ಗುರುವು ಹೀಗೆಂದು ಶಿಷ್ಯನನ್ನು ತನ್ನಕಡೆಗೆ ತಿರುಗಿಸಿಕೊಂಡು ಕರುಣೆಯಿಂದ **'ಅಧ್ಯಾರೋಪ ಮತ್ತು ಅಪವಾದ'**[1] ಇವುಗಳಿಂದ ನಿಷ್ಪ್ರಪಂಚವಾದ (ಬ್ರಹ್ಮವನ್ನು) ವಿವರಿಸುವವನಾಗಿ. ಶಾಸ್ತ್ರೋಕ್ತವಾದ ಮಾರ್ಗದಿಂದ ಎಲ್ಲರಿಗೂ ಉಪಕಾರವಾಗಲೆಂದು ತತ್ತ್ವವನ್ನು ಚೆನ್ನಾಗಿ ತಿಳಿಸಿಕೊಟ್ಟನು. ಅದರ ಪ್ರಕಾರವನ್ನು ಇಲ್ಲಿ ವಿವರಿಸುವೆವು.

**ವಸ್ತುನ್ಯವಸ್ತ್ವಾರೋಪೋ ಯಃ ಸೋಽಧ್ಯಾರೋಪ ಇತೀರ್ಯತೇ ।**
**ಅಸರ್ಪಭೂತೇ ರಜ್ಜ್ವಾದೌ ಸರ್ಪಸ್ಯಾರೋಪಣಂ ಯಥಾ ॥ ೨೯೮ ॥**

೨೯೮. ವಸ್ತುವಿನಲ್ಲಿ (ಅನೃತವಾದ) ಅವಸ್ತುವನ್ನು ಹುಟ್ಟುಗಟ್ಟುವದೇ **ಅಧ್ಯಾರೋಪ**ವೆನಿಸುತ್ತದೆ. ಹಾವಲ್ಲದ ಹಗ್ಗವೇ ಮುಂತಾದವುಗಳಲ್ಲಿ ಹಾವೆಂದು ಕಲ್ಪಿಸುವದು ಹೇಗೋ ಹಾಗೆ(ಯೇ ಇದು).[2]

**ವಸ್ತು ತಾವತ್ ಪರಂ ಬ್ರಹ್ಮ ಸತ್ಯಜ್ಞಾನಾದಿಲಕ್ಷಣಮ್ ।**
**ಇದಮಾರೋಪಿತಂ ಯತ್ರ ಭಾತಿ ಖೇ ನೀಲತಾದಿವತ್ ॥ ೨೯೯ ॥**

೨೯೯. ಮೊದಲನೆಯದಾಗಿ **ವಸ್ತು**ವೆಂದರೆ ಸತ್ಯಜ್ಞಾನಾದಿಸ್ವರೂಪವಾದ ಪರಬ್ರಹ್ಮವು. ಅದರಲ್ಲಿ ಹುಟ್ಟುಗಟ್ಟಲಾಗಿರುವ ಈ (ಪ್ರಪಂಚವು) ಆಕಾಶದಲ್ಲಿ ನೀಲಿಬಣ್ಣ ಮುಂತಾದವುಗಳಂತೆ ಕಾಣುತ್ತಿರುವದು.

**ತತ್ಕಾರಣಂ ಯದಜ್ಞಾನಂ ಸಕಾರ್ಯಂ ಸದ್ವಿಲಕ್ಷಣಮ್ ।**
**ಅವಸ್ತ್ವಿತ್ಯುಚ್ಯತೇ ಸದ್ಭಿರ್ಯಸ್ಯ ಬಾಧಾ ಪ್ರದೃಶ್ಯತೇ ॥ ೩೦೦ ॥**

೩೦೦. ಅದರ ಕಾರಣವಾದ **ಅಜ್ಞಾನ**ವೆಂಬುದು (ತನ್ನ) ಕಾರ್ಯದೊಡಗೂಡಿ ಸತ್ತಿಗಿಂತ ವಿಲಕ್ಷಣ(ಸ್ವಭಾವ)ದ್ದಾಗಿರುವದಲ್ಲ (ಅದನ್ನು) ಬಲ್ಲವರು **ಅವಸ್ತು** ಎನ್ನುತ್ತಾರೆ. (ಏಕೆಂದರೆ) ಅದು ಬಾಧಿತವಾದದ್ದು ಕಂಡುಬರುತ್ತದೆ.

**ಅವಸ್ತು ತತ್ಪ್ರಮಾಣೈರ್ಯದ್ಬಾಧ್ಯತೇ ಶುಕ್ತಿರೌಪ್ಯವತ್ ।**
**ನ ಬಾಧ್ಯತೇ ಯತ್ತದ್ವಸ್ತು ತ್ರಿಷು ಕಾಲೇಷು ಶುಕ್ತಿವತ್ ॥ ೩೦೧ ॥**
**ಶುಕ್ತೇರ್ಬಾಧಾ ನ ಖಲ್ವಸ್ತಿ ರಜತಸ್ಯ ಯಥಾ ತಥಾ ।**

೩೦೦–೩೦೧ತ್ತಿ. ಯಾವದು ಶುಕ್ತಿರಜತ (ಕಪ್ಪೆಯಚಿಪ್ಪಿನಬೆಳ್ಳಿ)ಯಂತೆ ಪ್ರಮಾಣಗಳಿಂದ ಬಾಧಿತವಾಗುತ್ತದೆಯೋ ಅದು ಅವಸ್ತು ; ಯಾವದು ಮೂರು

---

1. ಅಧ್ಯಾರೋಪಾಪವಾದವೆಂಬ ಪ್ರಕ್ರಿಯೆಯ ಸ್ವರೂಪವನ್ನು ಇಲ್ಲಿ ಸ್ಪಷ್ಟಪಡಿಸಿಲ್ಲ. ಗೀ. ಭಾ. ೧೩–೧೩ರಲ್ಲಿ ಆಚಾರ್ಯರು ಇದನ್ನು ವಿವರಿಸಿರುವದನ್ನು ನೋಡಿ.

2. ವೇದಾಂತಸಾರ (ಪು. ೩೭)ವನ್ನು ನೋಡಿ. ಮುಂದಿನ ಭಾಗದಲ್ಲಿರುವ ಪ್ರತಿಪಾದನೆ ಆ ಗ್ರಂಥದ ಶೈಲಿಯಲ್ಲಿಯೇ ಇದೆ.

ಕಾಲಗಳಲ್ಲಿಯೂ ಕಪ್ಪೆಯಚಿಪ್ಪಿನಂತೆ[1] ಬಾಧಿತವಾಗುವದಿಲ್ಲವೋ ಅದು ವಸ್ತು. ಕಪ್ಪೆಯಚಿಪ್ಪಿಗೆ–ಬೆಳ್ಳಿಗೆ ಬಾಧೆಯಿರುವಂತೆ– ಬಾಧೆಯಿರುವದಿಲ್ಲವಷ್ಟೆ ?

## ಭಾವರೂಪಾಜ್ಞಾನ

**ಅವಸ್ತುಸಂಜ್ಞಿತಂ ಯತ್ತಜ್ಜಗದಧ್ಯಾಸಕಾರಣಮ್ ॥ ೩೦೨ ॥**
**ಸದಸದ್ಭ್ಯಾಮನಿರ್ವಾಚ್ಯಮಜ್ಞಾನಂ ತ್ರಿಗುಣಾತ್ಮಕಮ್ ।**
**ವಸ್ತುತತ್ತ್ವಾವಬೋಧೈಕಬಾಧ್ಯಂ ತದ್ಭಾವಲಕ್ಷಣಮ್ ॥ ೩೦೩ ॥**
**ಮಿಥ್ಯಾಸಂಬನ್ಧತಸ್ತತ್ರ ಬ್ರಹ್ಮಣ್ಯಾಶ್ರಿತ್ಯ ತಿಷ್ಠತಿ ।**
**ಮಣೌ ಶಕ್ತಿರ್ಯಥಾ ತದ್ವನ್ನೈತದಾಶ್ರಯದೂಷಕಮ್ ॥ ೩೦೪ ॥**

೩೦೨–೩೦೪. ಜಗತ್ತಿನ ಅಧ್ಯಾಸಕ್ಕೆ ಕಾರಣವಾಗಿ, ಸತ್ತೆಂದಾಗಲಿ, ಅಸತ್ತೆಂದಾಗಲಿ ಗೊತ್ತುಮಾಡಿ ಹೇಳುವದಕ್ಕಾಗದಂತಿರುವ, ತ್ರಿಗುಣಾತ್ಮಕವಾದ, ತತ್ತ್ವಜ್ಞಾನವೊಂದರಿಂದಲೇ ಬಾಧಿತವಾಗುವ ಭಾವರೂಪವಾದ, ಅವಸ್ತುಶಬ್ದ ವಾಚ್ಯವಾದ ಅಜ್ಞಾನವಿದೆಯಲ್ಲ, ಅದು ದಾಹಸ್ತಂಭನಶಕ್ತಿಯು ಮಣಿಯನ್ನು ಆಶ್ರಯಿಸಿರುವಂತೆ – ಹುಸಿಯಾದ ಸಂಬಂಧದಿಂದಲೇ ಬ್ರಹ್ಮವನ್ನಾಶ್ರಯಿಸಿಕೊಂಡು ಅದರಲ್ಲಿರುತ್ತಿರುವದು. ಇದು (ತನಗೆ) ಆಶ್ರಯ(ವಾದ ಬ್ರಹ್ಮಕ್ಕೆ) ದೋಷವನ್ನುಂಟುಮಾಡತಕ್ಕದ್ದಲ್ಲ.[2]

**ಸದ್ಭಾವೇ ಲಿಙ್ಗಮೇತಸ್ಯ ಕಾರ್ಯಮೇತಚ್ಚರಾಚರಮ್ ।**
**ಮಾನಂ ಶ್ರುತಿಃ ಸ್ಮೃತಿಶ್ಚಾಜ್ಞೋಽಹಮಿತ್ಯನುಭವೋಽಪಿ ಚ ॥ ೩೦೫ ॥**

೩೦೫. ಇದು ಇದೆಯೆನ್ನುವದೆಂಬುದಕ್ಕೆ ಈ ಚರಾಚರ(ಪ್ರಪಂಚ)ವೇ ಲಿಂಗವು.[3] ಶ್ರುತಿಯೂ ಸ್ಮೃತಿಯೂ 'ನಾನು ಅಜ್ಞನು' ಎಂಬ ಅನುಭವವೂ **ಪ್ರಮಾಣವು.**[4]

---

1. ವ್ಯವಹಾರದೃಷ್ಟಿಯಿಂದ ಶುಕ್ತಿ ಯಾವಾಗಲೂ ಇದೆ; ರಜತವು ತೋರಿ ಬಾಧಿತವಾಗುತ್ತದೆ ಎಂದರ್ಥ.

2. ಇಲ್ಲಿ ವರ್ಣಿಸಿರುವ ಅಜ್ಞಾನವು ಭಾಷ್ಯದಲ್ಲಿಲ್ಲ. ವೇದಾಂತಸಾರದಲ್ಲಿದೆ.

3. ಈ ಜಗತ್ತನ್ನು ನೋಡಿದರೆ ಇದಕ್ಕೆ ಉಪಾದಾನವಾದ ಅಜ್ಞಾನವಿರಬೇಕು ಎಂದು ಅನುಮಾನದಿಂದ ಗೊತ್ತುಮಾಡಬಹುದು ಎಂದಭಿಪ್ರಾಯ.

4. ಪ್ರಮಾಣದಿಂದ ಅಜ್ಞಾನವನ್ನು ಗೊತ್ತುಮಾಡಬಹುದೆಂಬ ಹೇಳಿಕೆಯು ಭಾಷ್ಯದಲ್ಲಿಲ್ಲ; ವಿವರಣಾದಿಗ್ರಂಥಗಳಲ್ಲಿರುತ್ತದೆ. 'ನೀಹಾರೇಣ ಪ್ರಾವೃತಾಃ', 'ಅನೃತೇನ ಹಿ ಪ್ರತ್ಯೂಢಾಃ' ಎಂಬ ಶ್ರುತಿಗಳನ್ನು ಮೂಲಾವಿದ್ಯಾವಾದಿಗಳು ಇಲ್ಲಿ ಉದಾಹರಿಸಿರುತ್ತಾರೆ. 'ಅಜ್ಞಾನೇನಾವೃತಂ ಜ್ಞಾನಮ್' ಮುಂತಾದ ಸ್ಮೃತಿಗಳನ್ನೂ ಉದಾಹರಿಸಿರುತ್ತಾರೆ. ಇವು ಪ್ರಕೃತಿಯನ್ನು ಹೇಳುತ್ತವೆ ಎಂಬುದಕ್ಕೆ ಆಧಾರವೇನೂ ಭಾಷ್ಯದಲ್ಲಿ ಕಾಣುವದಿಲ್ಲ.

**ಅಜ್ಞಾನಂ ಪ್ರಕೃತಿಃ ಶಕ್ತಿರವಿದ್ಯೇತಿ ನಿಗದ್ಯತೇ ।**
**ತದೇತತ್ ಸನ್ನ ಭವತಿ ನಾಸದ್ವಾ ಶುಕ್ತಿರೌಪ್ಯವತ್ ॥ ೨೦೬ ॥**
**ಸತೋ ಭಿನ್ನಮಭಿನ್ನಂ ವಾ ನ ದೀಪಸ್ಯ ಪ್ರಭಾ ಯಥಾ ।**
**ನ ಸಾವಯವಮನ್ಯದ್ವಾ ಬೀಜಸ್ಯಾಙ್ಕುರವತ್ ಕ್ವಚಿತ್ ॥ ೨೦೭ ॥**
**ಅತ ಏತದನಿರ್ವಾಚ್ಯಮಿತ್ಯೇವ ಕವಯೋ ವಿದುಃ ॥**

೨೦೬–೨೦೭. ಅಜ್ಞಾನವನ್ನು ಪ್ರಕೃತಿ, ಶಕ್ತಿ, ಅವಿದ್ಯೆ[1] ಎಂದೂ ಕರೆಯುತ್ತಾರೆ. ಆ ಇದು ಸತ್ತಲ್ಲ, ಅಸತ್ತಲ್ಲ, ಶುಕ್ತಿರಜತದಂತೆ (ಇರತಕ್ಕದ್ದು), ಸತ್ತಾಗಿರುವ (ಬ್ರಹ್ಮಕ್ಕಿಂತ) ಬೇರೆಯಲ್ಲ, ಬೇರೆಯಲ್ಲವೆಂದೂ ಅಲ್ಲ ; ದೀಪಕ್ಕಿಂತ ಬೆಳಕು ಹೇಗೆ (ಅದಕ್ಕಿಂತ ಭಿನ್ನವೂ ಅಲ್ಲ, ಅಭಿನ್ನವೂ ಅಲ್ಲವೋ ಹಾಗೆ) ಅದು ಬೀಜದ ಮೊಳಕೆಯಂತೆ ಸಾವಯವವೂ ಅಲ್ಲ, ಮತ್ತೊಂದೂ ಅಲ್ಲ.[2] ಆದ್ದರಿಂದ ಇದನ್ನು **ಅನಿರ್ವಾಚ್ಯ**ವೆಂದೇ ವಿದ್ವಾಂಸರು ತಿಳಿಯುತ್ತಾರೆ.

**ಸಮಷ್ಟಿವ್ಯಷ್ಟಿರೂಪೇಣ ದ್ವಿಧಾಜ್ಞಾನಂ ನಿಗದ್ಯತೇ ॥ ೨೦೮ ॥**
**ನಾನಾತ್ವೇನ ಪ್ರತೀತಾನಾಮಜ್ಞಾನಾನಾಮಭೇದತಃ ।**
**ಏಕತ್ವೇನ ಸಮಷ್ಟಿಃ ಸ್ಯಾದ್ಭೂರುಹಾಣಾಂ ವನಂ ಯಥಾ ॥ ೨೦೯ ॥**

೨೦೮–೨೦೯. ಅಜ್ಞಾನವು ಸಮಷ್ಟಿ, ವ್ಯಷ್ಟಿ– ಎಂಬ ರೂಪದಿಂದ ಎರಡು ಬಗೆ ಎನ್ನುತ್ತಾರೆ. ಬೇರೆಬೇರೆಯಾಗಿ ತೋರುತ್ತಿರುವ ಅಜ್ಞಾನಗಳು ಅಭಿನ್ನವಾಗಿ ಒಂದಾದರೆ **ಸಮಷ್ಟಿ**ಯಾಗುವದು. ಮರಗಳಿಗೆ ವನವು ಹೇಗೆ (ಸಮಷ್ಟಿಯೋ ಹಾಗೆಯೇ ಇದು.)[3]

**ಇಯಂ ಸಮಷ್ಟಿರುತ್ಕೃಷ್ಟಾ ಸತ್ತ್ವಾಂಶೋತ್ಕರ್ಷತಃ ಪುರಾ ।**
**ಮಾಯೇತಿ ಕಥ್ಯತೇ ತಜ್ಜ್ಞೈಃ ಶುದ್ಧಸತ್ತ್ವೈಕಲಕ್ಷಣಾ ॥ ೨೧೦ ॥**

೨೧೦. ಈ ಸಮಷ್ಟಿಯು ಮೊದಲು ಸತ್ತ್ವಾಂಶವು ಹೆಚ್ಚಾಗಿರುವದರಿಂದ ಶುದ್ಧಸತ್ತ್ವವೇ ಸ್ವರೂಪವಾಗಿರುವದರಿಂದ **ಮಾಯೆ** ಎಂದು ಅದನ್ನು ಬಲ್ಲವರು ಹೇಳುತ್ತಾರೆ.

---

1. ಪ್ರಕೃತಿ, ಶಕ್ತಿ–ಮುಂತಾದವು ಅವಿದ್ಯಾಕಲ್ಪಿತನಾಮರೂಪಬೀಜವಾದ ಮಾಯೆಯ ಹೆಸರೆಂದು ಭಾಷ್ಯದಲ್ಲಿದೆ. ಇಲ್ಲಿರುವಂತೆ ಅಜ್ಞಾನವೇ ಪ್ರಕೃತಿ– ಎಂಬ ವಾದವು ಪಂಚಪಾದಿಕೆಯೇ ಮುಂತಾದ ಗ್ರಂಥಗಳಲ್ಲಿದೆ.

2. ಅನಿರ್ವಚನೀಯಾವಿದ್ಯೆಯ ವರ್ಣನೆಯು ಇಷ್ಟಸಿದ್ಧಿಯೇ ಮುಂತಾದ ಗ್ರಂಥಗಳಲ್ಲಿದೆ. ವಿ. ನೋಡಿ.

3. ಅಜ್ಞಾನದ ಸಮಷ್ಟಿವ್ಯಷ್ಟಿಭೇದವೂ ಇದರಿಂದ ಚೈತನ್ಯದಲ್ಲಿ ಆಗುವ ಭೇದಗಳೂ ಭಾಷ್ಯಗ್ರಂಥಗಳಲ್ಲಿಲ್ಲ ; ವೇದಾಂತಸಾರದಲ್ಲಿದೆ. ಪೀಠಿಕೆಯನ್ನು ನೋಡಿ.

**ಮಾಯೋಪಹಿತಚೈತನ್ಯಂ ಸಾಭಾಸಂ ಸತ್ತ್ವಬೃಂಹಿತಮ್ ।**
**ಸರ್ವಜ್ಞತ್ವಾದಿಗುಣಕಂ ಸೃಷ್ಟಿಸ್ಥಿತ್ಯನ್ತಕಾರಣಮ್ ॥ ೩೧೧ ॥**
**ಅವ್ಯಾಕೃತಂ ತದವ್ಯಕ್ತಮೀಶ ಇತ್ಯಪಿ ಗೀಯತೇ ॥ ೩೧೧½ ॥**

೩೧೧–೩೧೧½. ಸತ್ತ್ವವು ಹೆಚ್ಚಾಗಿ ಸರ್ವಜ್ಞತ್ವವೇ ಮುಂತಾದ ಗುಣಗಳಿಂದೊಡಗೂಡಿ, (ಜಗತ್ತಿನ) ಸೃಷ್ಟಿಸ್ಥಿತಿಪ್ರಲಯಗಳಿಗೆ ಕಾರಣವಾಗಿರುವ, ಮಾಯೋಪಹಿತವಾದ ಆಭಾಸಸಹಿತಚೈತನ್ಯವು[1] **ಅವ್ಯಾಕೃತ, ಅವ್ಯಕ್ತ, ಈಶ್ವರ**– ಎಂದು ಎನಿಸಿಕೊಳ್ಳುತ್ತದೆ.

**ಸರ್ವಶಕ್ತಿಗುಣೋಪೇತಃ ಸರ್ವಾಜ್ಞಾನಾವಭಾಸಕಃ ।**
**ಸ್ವತನ್ತ್ರಃ ಸತ್ಯಸಂಕಲ್ಪಃ ಸತ್ಯಕಾಮಃ ಸ ಈಶ್ವರಃ ॥ ೩೧೨ ॥**

೩೧೨. ಆ ಈಶ್ವರನು ಸರ್ವಶಕ್ತಿಗಳಿಂದಲೂ ಸರ್ವಗುಣಗಳಿಂದಲೂ ಕೂಡಿದವನಾಗಿ ಸರ್ವಾಜ್ಞಾನಗಳನ್ನೂ[2] ಬೆಳಗುವವನು, ಸ್ವತಂತ್ರನು, ಸತ್ಯಸಂಕಲ್ಪನು, ಸತ್ಯಕಾಮನು.

## ಅಜ್ಞಾನವೆಂಬ ಕಾರಣಶಬ್ದ, ಆನನ್ದಮಯಕೋಶ

**ತಸ್ಯೈತಸ್ಯ ಮಹಾವಿಷ್ಣೋರ್ಮಹಾಶಕ್ತೇರ್ಮಹೀಯಸಃ ॥ ೩೧೩[3] ॥**
**ಸರ್ವಜ್ಞತ್ವೇಶ್ವರತ್ವಾದಿಕಾರಣತ್ವಾನ್ಮನೀಷಿಣಃ ।**
**ಕಾರಣಂ ವಪುರಿತ್ಯಾಹುಃ ಸಮಷ್ಟಿಂ ಸತ್ತ್ವಬೃಂಹಿತಮ್ ॥ ೩೧೪ ॥**
**ಆನನ್ದಪ್ರಚುರತ್ವೇನ ಸಾಧಕತ್ವೇನ ಕೋಶವತ್ ।**
**ಸೈಷಾನನ್ದಮಯಃ ಕೋಶಃ ಇತಿ ಶಸ್ಯ ನಿಗದ್ಯತೇ ॥ ೩೧೫ ॥**
**ಸರ್ವೋಪರಮಹೇತುತ್ವಾತ್ ಸುಷುಪ್ತಿಸ್ಥಾನಮಿಷ್ಯತೇ ।**
**ಪ್ರಾಕೃತಃ ಪ್ರಲಯೋ ಯತ್ರ ಶ್ರಾವ್ಯತೇ ಶ್ರುತಿಭಿರ್ಮುಹುಃ ॥ ೩೧೬ ॥**

೩೧೪–೩೧೬. ಮಹಾಶಕ್ತಿಗಳುಳ್ಳ, ಮಹಾಮಹಿಮನಾದ ಅಂಥ ಈ **ಮಹಾವಿಷ್ಣುವಿಗೆ** ಸರ್ವಜ್ಞತ್ವ, ಈಶ್ವರತ್ವ –ಮುಂತಾದವುಗಳಿರುವದಕ್ಕೆ ಕಾರಣ

---

1. 'ಆಭಾಸಸಹಿತ' ಎಂಬುದು ವೇದಾಂತಸಾರದಲ್ಲಿಲ್ಲ, ಮತ್ತೆ ಯಾವದೋ ಗ್ರಂಥದಲ್ಲಿರಬೇಕು. ಪಂಚೀಕರಣವಾರ್ತಿಕವನ್ನು ನೋಡಿ. ಭಾಷ್ಯದಲ್ಲಂತೂ ಇಲ್ಲವೇ ಇಲ್ಲ. ಈಶ್ವರನನ್ನು ಅವ್ಯಾಕೃತ, ಅವ್ಯಕ್ತ– ಎಂಬ ಹೆಸರಿನಿಂದ ಕರೆದಿರುವದೂ ಭಾಷ್ಯದಲ್ಲಿ ಕಂಡುಬರುವದಿಲ್ಲ.

2. ವೇದಾಂತಸಾರದಲ್ಲಿ 'ಸಕಲಾಜ್ಞಾನಾವಭಾಸಕತ್ವಾತ್' ಎಂದಿದೆ. ಗ್ರಂಥಕರ್ತರು ಅದನ್ನೇ ಅನುಸರಿಸಿರುವದರಿಂದ ಇಲ್ಲಿಯೂ ಹಾಗೆಯೇ ಬರೆದಿದಾರೆಂದು ತಿದ್ದಿಕೊಂಡಿದೆ. ೩೦೯ನೆಯ ಶ್ಲೋಕವನ್ನು ನೋಡಿ.

3. ೩೧೧½ ಶ್ಲೋಕಾರ್ಧವನ್ನೂ ಇದನ್ನೂ ಸೇರಿಸಿ ಒಂದು ಶ್ಲೋಕವೆಂದು ಹಿಡಿದಿದೆ.

ವಾಗಿರುವದರಿಂದ[1] ವಿದ್ವಾಂಸರು ಸತ್ತ್ವಪ್ರಧಾನವಾದ ಸಮಷ್ಟಿ (ಅಜ್ಞಾನ)ವನ್ನು **ಕಾರಣಶರೀರ**ವೆನ್ನುವರು.[2] ಆನಂದಪ್ರಚುರವಾಗಿರುವದರಿಂದಲೂ (ಶಕ್ತಿಗೆ) ಒರೆಯಂತೆ ಸಾಧಕವಾಗಿರುವದರಿಂದಲೂ[3] (?) ಆ ಈ (ಮಾಯೆಯು) ಈಶ್ವರನಿಗೆ **ಆನಂದಮಯಕೋಶ**ವೆನಿಸುವದು. ಎಲ್ಲವೂ ಲಯವಾಗುವದಕ್ಕೆ ಹೇತು(?) ವಾಗಿರುವದರಿಂದ **ಸುಷುಪ್ತಿಸ್ಥಾನ**ವೆನಿಸುವದು.[4] ಇದರಲ್ಲಿ ಪ್ರಾಕೃತಪ್ರಲಯ ವಾಗುವದೆಂದು ಶ್ರುತಿಗಳು ಮತ್ತೆಮತ್ತೆ ಹೇಳುತ್ತಿರುವವು.[5]

**ಅಜ್ಞಾನಂ ವ್ಯಷ್ಟ್ಯಭಿಪ್ರಾಯಾದನೇಕತ್ವೇನ ಭಿದ್ಯತೇ ।**
**ಅಜ್ಞಾನವೃತ್ತಯೋ ನಾನಾ ತತ್ತದ್ಗುಣವಿಲಕ್ಷಣಾಃ ॥ ೩೧೭ ॥**

೩೧೭. ವ್ಯಷ್ಟಿಯ[6] ದೃಷ್ಟಿಯಿಂದ ಅಜ್ಞಾನವು ಅನೇಕವಾಗಿ ಬೇರೆಬೇರೆ ಯಾಗಿರುತ್ತದೆ. ಆಯಾ ಗುಣಗಳಿಂದ (?) ಬಗೆಬಗೆಯಾಗಿರುವ **ಅಜ್ಞಾನ ವೃತ್ತಿ**ಗಳೂ[7] ಬಗೆಬಗೆಯಾಗಿರುತ್ತವೆ.

**ವನಸ್ಯ ವ್ಯಷ್ಟ್ಯಭಿಪ್ರಾಯಾದ್ಭೂರುಹಾ ಇತ್ಯನೇಕತಾ ।**
**ಯಥಾ ತಥೈವಾಜ್ಞಾನಸ್ಯ ವ್ಯಷ್ಟಿತಃ ಸ್ಯಾದನೇಕತಾ ॥ ೩೧೮ ॥**

೩೧೮. ಕಾಡು ವ್ಯಷ್ಟಿಯ ದೃಷ್ಟಿಯಿಂದ 'ಮರಗಳು' ಎಂದು ಅನೇಕ ವಾಗಿರುವದು ಹೇಗೋ ಹಾಗೆಯೇ, ಅಜ್ಞಾನವೂ ವ್ಯಷ್ಟಿಯಾಗಿ ಅನೇಕ(ವಾಗಿರು ವದು).

---

1. ಈ ಉಪಪತ್ತಿಯನ್ನು ಮತ್ತೆಯಾವ ಗ್ರಂಥದಲ್ಲಿ ಕೊಟ್ಟಿದೆಯೋ ತಿಳಿಯದು.

2. 'ಅಖಿಲಕಾರಣತ್ವಾತ್' ಎಂದು **ವೇದಾಂತಸಾರ**; ಎಲ್ಲಕ್ಕೂ ಕಾರಣವಾಗಿರು ವದರಿಂದ ಎಂದು ಅದಕ್ಕೆ ಅರ್ಥ.

3. 'ಕೋಶವದಾಚ್ಛಾದಕತ್ವಾಚ್ಚ' (ಒರೆಯಂತೆ ಮುಚ್ಚಿಕೊಂಡಿರುವದರಿಂದ) ಎಂದು **ವೇದಾಂತಸಾರ**; ಇಲ್ಲಿ 'ಸಾಧಕವಾಗಿರುವದರಿಂದ' ಎಂದು ವಿತಕ್ಕೆ ಬರೆದಿದೆಯೋ ತಿಳಿಯದು. 'ಛಾದಕತ್ವೇನ' ಎಂದಿದ್ದು ಬರೆದಿರುವವರ ಕೈತಪ್ಪಿನಿಂದ ಹೀಗೆ ಆಗಿರಬಹುದು. ೩೩೩ನೆಯ ಶ್ಲೋಕವನ್ನು ನೋಡಿ.

4. 'ಸರ್ವೋಪರಮತ್ವಾತ್' (ಎಲ್ಲವೂ ಲಯವಾಗುವದರಿಂದ) ಎಂದು ವೇ. ಸಾ.; ಎಲ್ಲವೂ ಲಯವಾಗುವದಕ್ಕೆ ಹೇತುವಾಗಿರುವದರಿಂದ –ಎಂದು ಇಲ್ಲಿ ಬರೆದಿರುವದು ಅಷ್ಟು ಸಮಂಜಸವಲ್ಲ.

5. ದೈನಂದಿನ, ದಿನದಿನವೂ ನಿದ್ರೆಯಲ್ಲಾಗುವದು, ನೈಮಿತ್ತಿಕ (ಆಯಾ ನಿಮಿತ್ತ ಗಳಿಂದಾಗುವ ಅವಾಂತರಪ್ರಲಯ) ಪ್ರಾಕೃತ (ಪ್ರಕೃತಿಯಲ್ಲಿ ಎಲ್ಲವೂ ಲಯವಾಗುವದು), ಆತ್ಯಂತಿಕ (ವಿದ್ಯೆಯಿಂದ ಎಲ್ಲವೂ ಬಾಧಿತವಾಗುವದು) ಎಂದು ಪ್ರಲಯವು ನಾಲ್ಕುವಿಧ.

6. ಬೇರೆಬೇರೆ ಎಂಬ ದೃಷ್ಟಿಯಿಂದ.

7. ಅಜ್ಞಾನಕ್ಕೆ ವೃತ್ತಿಗಳುಂಟೆಂಬುದು ಭಾಷ್ಯದಲ್ಲಿಲ್ಲವೇ ಇಲ್ಲ; ವೇದಾಂತಸಾರ, ಪಂಚಪಾದಿಕಾವಿವರಣವೇ– ಮುಂತಾದ ಗ್ರಂಥಗಳಲ್ಲಿದೆ.

**ವ್ಯಷ್ಟಿರ್ಮಲಿನಸತ್ತ್ವೈಷಾ ರಜಸಾ ತಮಸಾ ಯುತಾ ।**
**ತತೋ ನಿಕೃಷ್ಟಾ ಭವತಿ ಯೋಽಪಾಧಿಃ ಪ್ರತ್ಯಗಾತ್ಮನಃ ॥ ೧೧೯ ॥**

೧೧೯. ಈ ವ್ಯಷ್ಟಿಯು ರಜಸ್ಸಿನಿಂದಲೂ ತಮಸ್ಸಿನಿಂದಲೂ ಕೂಡಿ ಮಲಿನಸತ್ತ್ವಪ್ರಧಾನವಾಗಿರುತ್ತದೆ. ಆದ್ದರಿಂದ ಇದು ನಿಕೃಷ್ಟವಾದ (ಉಪಾಧಿ)ಯಾಗಿ ಪ್ರತ್ಯಗಾತ್ಮನಿಗೆ ಉಪಾಧಿಯಾಗಿರುತ್ತದೆ.

**ಚೈತನ್ಯಂ ವ್ಯಷ್ಟ್ಯವಚ್ಛಿನ್ನಂ ಪ್ರತ್ಯಗಾತ್ಮೇತಿ ಗೀಯತೇ ।**
**ಸಾಭಾಸಂ ವ್ಯಷ್ಟ್ಯುಪಹಿತಂ ಸತ್ತಾದಾತ್ಮ್ಯೇನ ತದ್ಗುಣೈಃ ॥ ೧೨೦ ॥**
**ಅಭಿಭೂತಃ ಸ ಏವಾತ್ಮಾ ಜೀವ ಇತ್ಯಭಿಧೀಯತೇ ।**
**ಕಿಞ್ಚಿಜ್ಜ್ಞತ್ವಾದೀಶ್ವರತ್ವಸಂಸಾರಿತ್ವಾದಿಧರ್ಮವಾನ್ ॥ ೧೨೧ ॥**

೧೨೦–೧೨೧. ವ್ಯಷ್ಟ್ಯಜ್ಞಾನದಿಂದ ಅವಚ್ಛಿನ್ನವಾಗಿರುವ ಚೈತನ್ಯವು **ಪ್ರತ್ಯಗಾತ್ಮ**ನೆನಿಸುತ್ತದೆ. ಆಭಾಸದೊಡಗೂಡಿ ವ್ಯಷ್ಟಿಯಿಂದ ಉಪಹಿತವಾಗಿದ್ದುಕೊಂಡು ಅವರ ತಾದಾತ್ಮ್ಯದಿಂದ ಅವರ ಗುಣಗಳಿಂದ ಮರೆಯಾಗಿರುವ ಅದೇ ಆತ್ಮನೇ **ಜೀವನು** ಎನಿಸುತ್ತಾನೆ.[1] (ಅವನು) ಸ್ವಲ್ಪಜ್ಞತ್ವ, ಅನೀಶ್ವರತ್ವ, ಸಂಸಾರಿತ್ವ— ಮುಂತಾದ ಧರ್ಮಗಳುಳ್ಳವನು.

**ಅಸ್ಯ ವ್ಯಷ್ಟಿರಹಙ್ಕಾರಕಾರಣತ್ವೇನ ಕಾರಣಮ್ ।**
**ವಪುಸ್ತತ್ರಾಭಿಮಾನ್ಯಾತ್ಮಾ ಪ್ರಾಜ್ಞ ಇತ್ಯುಚ್ಯತೇ ಬುಧೈಃ ॥ ೧೨೨ ॥**

೧೨೨. ಇವನ ವ್ಯಷ್ಟ್ಯಜ್ಞಾನವು ಅಹಂಕಾರಕ್ಕೆ ಕಾರಣವಾಗಿರುವದರಿಂದ **ಕಾರಣಶರೀರವು**; ಅದರಲ್ಲಿ ಅಭಿಮಾನಿಯಾಗಿರುವ ಆತ್ಮನನ್ನು **ಪ್ರಾಜ್ಞನು**[2] ಎಂದು ಬಲ್ಲವರು ಕರೆಯುತ್ತಾರೆ.

**ಪ್ರಾಜ್ಞತ್ವಮಸ್ಯೈಕಾಜ್ಞಾನಭಾಸಕತ್ವೇನ ಸಂಮತಮ್ ।**
**ವ್ಯಷ್ಟೇರ್ನಿಕೃಷ್ಟತ್ವೇನಾಸ್ಯ ನಾನೇಕಾಜ್ಞಾನಭಾಸಕಮ್ ॥ ೧೨೩ ॥**

---

1. ವ್ಯಷ್ಟಿಯಾದ ಅಜ್ಞಾನಕ್ಕೆ ಸಾಕ್ಷಿಯಾಗಿರುವ ಚೈತನ್ಯವು 'ಪ್ರತ್ಯಗಾತ್ಮನು ; ವ್ಯಷ್ಟ್ಯಜ್ಞಾನದಲ್ಲಿರುವ ಪ್ರತಿಬಿಂಬಕ್ಕೂ ಈ ಸಾಕ್ಷಿಗೂ ತಾದಾತ್ಮ್ಯವನ್ನು ಕಲ್ಪಿಸಿದಾಗ ಕಾಣುವ ಇದೇ ಆತ್ಮನು ಜೀವನು –ಎಂದು ಅಭಿಪ್ರಾಯವಿರಬಹುದು. ಈ ವಿವೇಚನೆಯು ವೇದಾಂತಸಾರದಲ್ಲಿಲ್ಲ. ಇಲ್ಲಿರುವ ಅವಚ್ಛಿನ್ನ, ಉಪಹಿತ– ಎಂಬ ವಿಶೇಷಣಗಳನ್ನು ಸರಿಯಾಗಿ ಉಪಯೋಗಿಸಿಲ್ಲ. ಸಾಕ್ಷಿಗೆ ಉಪಾಧಿಯನ್ನೂ ಜೀವನಿಗೆ ಅವಚ್ಛಿನ್ನತ್ವ(ವಿಶಿಷ್ಟತ್ವ) ವನ್ನೂ ಹೇಳಬೇಕಾಗಿತ್ತು.

2. ವ್ಯಷ್ಟಿಯಿಂದ ಅಜ್ಞಾನವನ್ನು ಕಾರಣಶರೀರವೆಂದಿರುವದೂ ಅದರ ಅಭಿಮಾನಿಯಾದ ಜೀವನನ್ನು ಪ್ರಾಜ್ಞನೆಂದಿರುವದೂ ವೇದಾಂತಸಾರದಲ್ಲಿದೆ ; ಮಾಣ್ಡೂಕ್ಯಾದಿ ಭಾಷ್ಯಕ್ಕೆ ಇದು ವಿರುದ್ಧವಾಗಿರುತ್ತದೆ.

೩೨೩. ಇವನು **ಪ್ರಾಜ್ಞ**ನೆನಿಸಿಕೊಂಡಿರುವುದು ಒಂದೇ ಅಜ್ಞಾನವನ್ನು ಬೆಳಗುವದರಿಂದ. ವ್ಯಷ್ಟ್ಯಜ್ಞಾನವು ಕೀಳ್ತರದ (ಉಪಾಧಿಯಾಗಿರುವ)ದರಿಂದ ಇದು ಅನೇಕಾಜ್ಞಾನಗಳನ್ನು ಬೆಳಗಿತೋರಿಸುವದಿಲ್ಲ.[1]

**ಸ್ವರೂಪಾಚ್ಛಾದಕತ್ವೇನಾಪ್ಯಾನನ್ದಪ್ರಚುರತ್ವತಃ ।**
**ಕಾರಣಂ ವಪುರಾನನ್ದಮಯಃ ಕೋಶ ಇತೀರ್ಯತೇ ॥ ೩೨೪ ॥**

೩೨೪. (ಚೈತನ್ಯ)ಸ್ವರೂಪವನ್ನು ಮುಸುಕಿಕೊಂಡಿರುವದರಿಂದಲೂ (ಇದರಲ್ಲಿ) ಆನಂದವು ಪ್ರಚುರವಾಗಿರುವದರಿಂದಲೂ (ಈ) ಕಾರಣಶರೀರವು ಆನಂದಮಯ ಕೋಶವೆನಿಸುತ್ತದೆ.[2]

**ಅಸ್ಯಾವಸ್ಥಾ ಸುಷುಪ್ತಿಃ ಸ್ಯಾದ್ಯತ್ರಾನನ್ದಃ ಪ್ರಕೃಷ್ಯತೇ ।**
**ಏಷೋಽಹಂ ಸುಖಮಸ್ವಾಪ್ಸಂ ನ ತು ಕಿಞ್ಚಿದವೇದಿಷಮ್ ॥ ೩೨೫ ॥**
**ಇತ್ಯಾನನ್ದಸಮುತ್ಕರ್ಷಃ ಪ್ರಬುದ್ಧೇಷು ಪ್ರದೃಶ್ಯತೇ ॥೩೨೫½॥**

೩೨೫–೩೨೫½. ಇವಕ್ಕೆ ತನಿನಿದ್ರೆಯೇ[3] ಅವಸ್ಥೆ; ಏಕೆಂದರೆ ಅಲ್ಲಿ ಆನಂದವು (ಮಿಕ್ಕ ಕಡೆಗಿಂತ) ಹೆಚ್ಚಾಗಿರುತ್ತದೆ.[4] 'ಈ ನಾನು ಸುಖವಾಗಿ ನಿದ್ರೆ ಹೋಗಿದ್ದೆನು, ಏನನ್ನೂ ಅರಿಯಲಿಲ್ಲ' ಎಂದು ಆನಂದದ ಹೆಚ್ಚಿಗೆಯು ಎಚ್ಚತ್ತವರಲ್ಲಿ ಕಾಣಬರುತ್ತದೆ.[5]

**ಸಮಷ್ಟೇರಪಿ ಚ ವ್ಯಷ್ಟೇರುಭಯೋರ್ವನವೃಕ್ಷವತ್ ॥೩೨೬[6]॥**
**ಅಭೇದ ಏವ ನೋ ಭೇದೋ ಜಾತ್ಯೇಕತ್ವೇನ ವಸ್ತುತಃ ।**
**ಅಭೇದ ಏವ ಜ್ಞಾತವ್ಯಸ್ತಥೇಶಪ್ರಾಜ್ಞಯೋರಪಿ ॥ ೩೨೭ ॥**
**ಸತ್ಯುಪಾಧ್ಯೋರಭಿನ್ನತ್ವೇ ಕ್ವ ಭೇದಸ್ತದ್ವಿಶಿಷ್ಟಯೋಃ ।**
**ಏಕೀಭಾವೇ ತರಙ್ಗಾಬ್ಧ್ಯೋಃ ಕೋ ಭೇದಃ ಪ್ರತಿಬಿಮ್ಬಯೋಃ ॥**

---

1. ಈ ಬಗೆಯ ವಿವೇಚನೆಯು ವೇದಾಂತಸಾರದಲ್ಲಿದೆ.

2. ಆನಂದಮಯಕೋಶವು ಭೋಕ್ತೃತ್ವಕ್ಕೆ ಉಪಾಧಿಯೆಂದು ತೈತ್ತಿರೀಯ ಭಾಷ್ಯದಲ್ಲಿದೆ. ಅಜ್ಞಾನವನ್ನೇ ಆನಂದಮಯಕೋಶವೆಂದು ಕರೆದಿರುವದು ವೇದಾಂತಸಾರ ದಲ್ಲಿದೆ; ವಿವೇಕಚೂಡಾಮಣಿಯಲ್ಲಿಯೂ ಇದೆ. ಭಾಷ್ಯದಲ್ಲಿಲ್ಲ.

3. ಸುಷುಪ್ತಿಯೇ ಆನಂದಮಯಕೋಶಕ್ಕೆ ಮುಖ್ಯವಾಗಿರುವ ಅವಸ್ಥೆ ಎಂದು ಗ್ರಂಥಕರ್ತರ ಮತ.

4. ಬೃ. ೪–೩–೩೨.

5. ಗಾಢನಿದ್ರೆಯಿಂದ ಎಚ್ಚತ್ತವರು ಆ ಅವಸ್ಥೆಯನ್ನು ಹೀಗೆಂದು ಸ್ಮರಿಸಿಕೊಳ್ಳುತ್ತಾರೆ; ಇದೂ ಆ ಅವಸ್ಥೆಯಲ್ಲಿ ಆನಂದವು ಹೆಚ್ಚಾಗಿದೆ ಎಂಬುದಕ್ಕೆ ಪ್ರಮಾಣ ಎಂದರ್ಥ.

6. ೩೨೫½ ಮತ್ತು ಇದೂ ಸೇರಿ ಒಂದು ಶ್ಲೋಕವೆಂದು ಲೆಕ್ಕಮಾಡಿಕೊಂಡಿದೆ.

೩೨೭-೩೨೮. ಸಮಷ್ಟಿ ವ್ಯಷ್ಟಿ- ಈ ಎರಡಕ್ಕೂ ಕಾಡು, ಮರಗಳು ಇವುಗಳಿಗಿರುವಂತೆ[1] ಅಭೇದವೇ, ಏಕೆಂದರೆ ಅವು ನಿಜವಾಗಿ ಒಂದೇ ಜಾತಿಯವುಗಳು. ಹಾಗೆಯೇ ಈಶ್ವರ, ಪ್ರಾಜ್ಞ-[2] ಇಬ್ಬರಿಗೂ ಅಭೇದವನ್ನೇ ಅರಿಯಬೇಕು. ಉಪಾಧಿಗಳೆರಡೂ ಅಭಿನ್ನವಾಗಿರುವಾಗ ಅವುಗಳಿಂದೊಡಗೂಡಿದವುಗಳಿಗೆ ಭೇದವೆಲ್ಲಿಯದು ? ಅಲೆ, ಸಮುದ್ರ- ಎರಡೂ ಒಂದೇ ಆಗಿರುವಲ್ಲಿ (ಅವುಗಳಲ್ಲಿ ತೋರುವ) ಪ್ರತಿಬಿಂಬಗಳಿಗೆ ಭೇದವೇನು ?

**ಅಜ್ಞಾನತದವಚ್ಛಿನ್ನಾಭಾಸಯೋರುಭಯೋರಪಿ ।**
**ಆಧಾರಂ ಶುದ್ಧಚೈತನ್ಯಂ ಯತ್ತತ್ತುರ್ಯಮಿತೀರ್ಯತೇ ॥ ೩೨೯ ॥**

೩೨೯. ಅಜ್ಞಾನ ಮತ್ತು ಅಜ್ಞಾನದಿಂದ ಅವಚ್ಛಿನ್ನವಾಗಿರುವ[3] ಆಭಾಸ -ಈ ಎರಡಕ್ಕೂ ಆಧಾರವಾಗಿರುವ ಶುದ್ಧಚೈತನ್ಯವು ತುರ್ಯನೆನಿಸುವದು.[4]

**ಏತದೇವಾವಿವಿಕ್ತಂ ಸದುಪಾಧಿಭ್ಯಾಂ ಚ ತದ್ಗುಣೈಃ ।**
**ಮಹಾವಾಕ್ಯಸ್ಯ ವಾಚ್ಯಾರ್ಥೋऽವಿವಿಕ್ತಂ ಲಕ್ಷ್ಯ ಇಷ್ಯತೇ ॥ ೩೩೦ ॥**

೩೩೦. ಇದೇ (ತುರೀಯವು) ಎರಡು ಉಪಾಧಿಗಳಿಂದಲೂ ಅವುಗಳ ಗುಣಗಳಿಂದಲೂ ವಿಂಗಡಿಸದೆ ಇರುವಾಗ **ಮಹಾವಾಕ್ಯಕ್ಕೆ ವಾಚ್ಯಾರ್ಥವು,** ವಿಂಗಡಿಸಿ (ಅರಿತಾಗ) **ಲಕ್ಷ್ಯಾರ್ಥ**ವಾಗುವದು.[5]

**ಅನನ್ತಶಕ್ತಿಸಂಪನ್ನೋ ಮಾಯೋಪಾಧಿಕ ಈಶ್ವರಃ ।**
**ಈಕ್ಷಾಮಾತ್ರೇಣ ಸೃಜತಿ ವಿಶ್ವಮೇತಚ್ಚರಾಚರಮ್ ॥ ೩೩೧ ॥**

೩೩೧. ಅನಂತಶಕ್ತಿಗಳಿಂದೊಡಗೂಡಿದ ಮಾಯೋಪಾಧಿಕನಾದ ಈಶ್ವರನು ಈಕ್ಷಾಮಾತ್ರದಿಂದ[6] ಈ ಚರಾಚರವಿಶ್ವವನ್ನು ಸೃಷ್ಟಿಸುತ್ತಾನೆ.

---

1. ಏಕೆಂದರೆ ಮರಗಳ ಒಟ್ಟೇ ಕಾಡು ; ಅದಕ್ಕಿಂತ ಬೇರೆಯಾಗಿ ಕಾಡೆಂಬುದಿಲ್ಲ.

2. ಸುಷುಪ್ತಿಯಲ್ಲಿರುವ ಜೀವನನ್ನು ಮಾತ್ರ ಪ್ರಾಜ್ಞನೆಂದು ಕರೆಯುವದು ಭಾಷ್ಯದಲ್ಲಿಲ್ಲ. ಪ್ರಾಜ್ಞನೆಂದರೇ ಈಶ್ವರನು ಎಂದೇ ಶ್ರುತಿಭಾಷ್ಯಗಳಲ್ಲಿದೆ.

3. 'ಅವಚ್ಛಿನ್ನಾಭಾಸ' ಎಂದರೇನೆಂಬುದು ತಿಳಿಯಲಿಲ್ಲ. ಇದು ವೇ.ಸಾ.ದಲ್ಲಿಲ್ಲ.

4. ಎಚ್ಚರ, ಕನಸು, ನಿದ್ರೆ- ಈ ಅವಸ್ಥೆಗಳೆಂಬ ಉಪಾಧಿಯುಳ್ಳ ಆತ್ಮನಿಗಿಂತ ವಿಲಕ್ಷಣವಾಗಿರುವದರಿಂದ ಶುದ್ಧಚೈತನ್ಯಕ್ಕೆ **'ತುರ್ಯ'** ನಾಲ್ಕನೆಯದು ಎಂದು ಹೆಸರು. ಇದುವರೆಗೆ ವರ್ಣಿಸಿರುವ ವ್ಯಷ್ಟಿಸಮಷ್ಟ್ಯಜ್ಞಾನಗಳ ಮತ್ತು ಪ್ರಾಜ್ಞೇಶ್ವರರ ಐಕ್ಯವು **ವೇದಾಂತಸಾರ**ದಲ್ಲಿರುವಂತೆಯೇ ಇದೆ.

5. ವಾಕ್ಯಕ್ಕೆ ವಾಚ್ಯಾರ್ಥವು ಉಪಾಧಿಸಹಿತಚೈತನ್ಯ, ಲಕ್ಷ್ಯಾರ್ಥವು ಉಪಾಧಿರಹಿತಚೈತನ್ಯ -ಎಂದರ್ಥ.

6. ಆಲೋಚನಮಾತ್ರದಿಂದ.

**ಅದ್ವಿತೀಯಸ್ಸ್ವಮಾತ್ರೋ[1]ಽಸೌ ನಿರುಪಾದಾನ ಈಶ್ವರಃ |**
**ಸ್ವಯಮೇವ ಕಥಂ ಸರ್ವಂ ಸೃಜತೀತಿ ನ ಶಙ್ಕ್ಯತಾಮ್ || ೩೩೨ ||**
**ನಿಮಿತ್ತಮುಪ್ಯುಪಾದಾನಂ ಸ್ವಯಮೇವ ಭವನ್ ಪ್ರಭುಃ |**
**ಚರಾಚರಾತ್ಮಕಂ ವಿಶ್ವಂ ಸೃಜತ್ಯವತಿ ಲುಮ್ಪತಿ || ೩೩೩ ||**

೩೩೨–೩೩೩. ಅದ್ವಿತೀಯಸ್ವರೂಪಮಾತ್ರದವನಾದ ಈಶ್ವರನು ಯಾವ **ಉಪಾದಾನ**ಕಾರಣವೂ ಇಲ್ಲದೆ ಹೇಗೆ ತಾನೇ ಎಲ್ಲವನ್ನೂ ಸೃಷ್ಟಿಸುತ್ತಾನೆ?– ಎಂದು ಶಂಕಿಸಬಾರದು. (ಈ) ಪ್ರಭುವು ನಿಮಿತ್ತವೂ ಉಪಾದಾನವೂ ತಾನೇ ಆಗಿ ಚರಾಚರಾತ್ಮಕವಾದ ವಿಶ್ವವನ್ನು ಸೃಷ್ಟಿಸುತ್ತಾನೆ, ಕಾಪಾಡುತ್ತಾನೆ, ನಾಶಗೊಳಿಸುತ್ತಾನೆ.

**ಸ್ವಪ್ರಾಧಾನ್ಯೇನ ಜಗತೋ ನಿಮಿತ್ತಮಪಿ ಕಾರಣಮ್ |**
**ಉಪಾದಾನಂ ತಥೋಪಾಧಿಪ್ರಾಧಾನ್ಯೇನ ಭವತ್ಯಯಮ್ || ೩೩೪ ||**
**ಯಥಾ ಲೂತಾ ನಿಮಿತ್ತಂ ಚ ಸ್ವಪ್ರಧಾನತಯಾ ಭವೇತ್ |**
**ಸ್ವಶರೀರಪ್ರಧಾನತ್ವೇನೋಪಾದಾನಂ ತಥೇಶ್ವರಃ || ೩೩೫ ||**

೩೩೪–೩೩೫. ಈ (ಈಶ್ವರನು) ತನ್ನ ಪ್ರಾಧಾನ್ಯದಿಂದ ಜಗತ್ತಿಗೆ ನಿಮಿತ್ತಕಾರಣನೂ ಉಪಾಧಿಯ ಪ್ರಾಧಾನ್ಯದಿಂದ ಉಪಾದಾನಕಾರಣನೂ ಆಗಿರುತ್ತಾನೆ.[2] ಹೇಗೆ ಜೇಡರಹುಳು (ದಾರಕ್ಕೆ) ಸ್ವಪ್ರಾಧಾನ್ಯದಿಂದ ನಿಮಿತ್ತವೂ ತನ್ನ ಶರೀರದ ಪ್ರಾಧಾನ್ಯದಿಂದ ಉಪಾದಾನವೂ ಆಗಿರುವದೋ[3] ಹಾಗೆಯೇ ಈಶ್ವರನು (ನಿಮಿತ್ತವೂ ಉಪಾದಾನವೂ ಆಗಿರುತ್ತಾನೆ).

## ಸೂಕ್ಷ್ಮಶರೀರ

**ತಮಃಪ್ರಧಾನಪ್ರಕೃತಿವಿಶಿಷ್ಟಾತ್ ಪರಮಾತ್ಮನಃ |**
**ಅಭೂತ್ಸಕಾಶಾದಾಕಾಶಮಾಕಾಶಾದ್ವಾಯುರುಚ್ಯತೇ || ೩೩೬ ||**
**ವಾಯೋರಗ್ನಿಸ್ತಥೈವಾಗ್ನೇರಾಪೋಽದ್ಭ್ಯಃ ಪೃಥಿವೀ ಕ್ರಮಾತ್ |**
**ಶಕ್ತೇಸ್ತಮಃಪ್ರಧಾನತ್ವಂ ತತ್ಕಾರ್ಯೇ ಜಾಡ್ಯದರ್ಶನಾತ್ || ೩೩೭ ||**

೩೩೬–೩೩೭. ತಮಃಪ್ರಧಾನವಾದ ಪ್ರಕೃತಿಯಿಂದೊಡಗೂಡಿದ ಪರಮಾತ್ಮನಿಂದ ಆಕಾಶವುಂಟಾಯಿತು, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ,

---

1. 'ಸ್ವರೂಪೋಽಸೌ' ಎಂದಿದ್ದರೆ ಚೆನ್ನಾಗಿತ್ತು.

2. ನಿಮಿತ್ತಕಾರಣನು ಎಂದರೆ ಕರ್ತೃ; ಉಪಾದಾನಕಾರಣನು ಎಂದರೆ ಮಡಕೆಗೆ ಮಣ್ಣಿನಂತೆ ಕಾರ್ಯಕ್ಕೆ ಬೇಕಾಗಿರುವ ವಸ್ತು.

3. ಈ ದೃಷ್ಟಾಂತವೂ ವೇ. ಸಾ. ದಲ್ಲಿದೆ.

ಅಗ್ನಿಯಿಂದ ಅಪ್ಪು, ಅಪ್ಪಿನಿಂದ ಪೃಥಿವಿ- ಹೀಗೆ ಕ್ರಮದಿಂದ (ಉಂಟಾಗುತ್ತವೆ).[1] ಶಕ್ತಿಯು[2] ತಮಃಪ್ರಧಾನವಾಗಿದೆ ಎಂಬುದು ಅದರ ಕಾರ್ಯವಾದ (ಆಕಾಶಾದಿಗಳಲ್ಲಿ) ಜಡವಾಗಿರುವದು ಕಾಣಬರುವದರಿಂದ.

**ಆರಭನ್ತೇ ಕಾರ್ಯಗುಣಾನ್ ಯೇ ಕಾರಣಗುಣಾ ಹಿ ತೇ ॥೩೩೭॥**

೩೩೭. ಕಾರಣದಲ್ಲಿರುವ ಗುಣಗಳನ್ನೇ ಅವು ಕಾರ್ಯದಲ್ಲಿಯೂ ಉಂಟುಮಾಡುತ್ತವೆ.[3]

**ಏತಾನಿ ಸೂಕ್ಷ್ಮಭೂತಾನಿ ಭೂತಮಾತ್ರಾ ಅಪಿ ಕ್ರಮಾತ್ ॥ ೩೩೮ ॥**
**ಏತೇಭ್ಯಃ ಸೂಕ್ಷ್ಮಭೂತೇಭ್ಯಃ ಸೂಕ್ಷ್ಮದೇಹಾ ಭವನ್ತ್ಯಪಿ ।**
**ಸ್ಥೂಲಾನ್ಯಪಿ ಚ ಭೂತಾನಿ ಚಾನ್ಯೋನ್ಯಾಂಶಮಿಮೇಲನಾತ್ ॥ ೩೩೯ ॥**

೩೩೭-೩೩೯. ಇವು **ಸೂಕ್ಷ್ಮಭೂತಗಳು,** ಮತ್ತು **ಭೂತಮಾತ್ರೆಗಳು.** ಕ್ರಮವಾಗಿ ಈ ಸೂಕ್ಷ್ಮಭೂತಗಳಿಂದ **ಸೂಕ್ಷ್ಮದೇಹಗಳೂ**[4] ಒಂದೊಂದರ ಅಂಶಗಳು ಸೇರಿಕೊಳ್ಳುವದರಿಂದ[5] **ಸ್ಥೂಲಭೂತಗಳೂ** ಉಂಟಾಗುನವು.

**ಅಪಞ್ಚೀಕೃತಭೂತೇಭ್ಯೋ ಜಾತಂ ಸಪ್ತದಶಾಙ್ಗಕಮ್ ।**
**ಸಂಸಾರಕಾರಣಂ ಲಿಙ್ಗಮಾತ್ಮನೋ ಭೋಗಸಾಧನಮ್ ॥ ೩೪೦ ॥**

೩೪೦. **ಅಪಂಚೀಕೃತ**ಭೂತಗಳಿಂದ ಹದಿನೇಳು ಅವಯವಗಳುಳ್ಳ ಸಂಸಾರಕಾರಣವಾದ ಆತ್ಮನಿಗೆ ಭೋಗಸಾಧನವಾದ **ಲಿಂಗ**(ಶರೀರವು) ಉಂಟಾಗಿರುತ್ತದೆ.

**ಶ್ರೋತ್ರಾದಿಪಞ್ಚಕಂ ಚೈವ ವಾಗಾದೀನಾಂ ಚ ಪಞ್ಚಕಮ್ ।**
**ಪ್ರಾಣಾದಿಪಞ್ಚಕಂ ಬುದ್ಧಿಮನಸೀ ಲಿಙ್ಗಮುಚ್ಯತೇ ॥ ೩೪೧ ॥**

೩೪೧. ಶ್ರೋತ್ರವೇ ಮುಂತಾದ (ಜ್ಞಾನೇಂದ್ರಿಯಗಳ) ಪಂಚಕ, ವಾಕ್ಕೇ ಮುಂತಾದ (ಕರ್ಮೇಂದ್ರಿಯಗಳ) ಪಂಚಕ, ಪ್ರಾಣವೇ ಮುಂತಾದ (ವಾಯು) ಪಂಚಕ, ಬುದ್ಧಿ ಮತ್ತು ಮನಸ್ಸು- (ಈ ಹದಿನೇಳು ಸೇರಿದರೆ) **ಲಿಂಗ**[6](ಶರೀರ)ವೆನಿಸುತ್ತದೆ.

---

1. ಇಲ್ಲಿ ಸೃಷ್ಟಿಯನ್ನು ಹೇಳಿರುವದು ಲಿಂಗಶರೀರದ ಉತ್ಪತ್ತಿಯನ್ನು ಹೇಳುವದಕ್ಕೆ.
2. ಪ್ರಕೃತಿಯು.
3. ಕಾರಣದಲ್ಲಿರುವ ಸತ್ತ್ವರಜಸ್ತಮಸ್ಸುಗಳೇ ಆಕಾಶದಲ್ಲಿ ಉಂಟಾಗುತ್ತವೆ.
4. ಇದಕ್ಕೆ ಲಿಂಗಶರೀರಗಳೆಂದೂ ಹೆಸರು. ಇದರ ವಿವರವು ಮುಂದೆ ಬರುತ್ತದೆ.
5. ಪಂಚಭೂತಗಳು ಒಂದಕ್ಕೊಂದು ಸೇರಿ ಆಗುವ ಮಹಾಭೂತಗಳು ಪಂಚೀಕೃತ ಭೂತಗಳು ; ಒಂದೊಂದೇ ಭೂತವಿದ್ದರೆ ಅಪಂಚೀಕೃತಭೂತಗಳು. ಇದೆಲ್ಲ ವೇ.ಸಾ. ದಲ್ಲಿದೆ.
6. ಲಿಂಗಶರೀರದ ವಿವರಣೆಯು ವೇದಾಂತಸಾರಕ್ಕನುಗುಣವಾಗಿ ಅದೇ ಕ್ರಮದಲ್ಲಿದೆ.

**ಶ್ರೋತ್ರತ್ವಕ್ಚಕ್ಷುರ್ಜಿಹ್ವಾಘ್ರಾಣಾನಿ ಪಞ್ಚ ಜಾತಾನಿ ।**
**ಆಕಾಶಾದೀನಾಂ ಸತ್ವಾಂಶೇಭ್ಯೋ ಧೀನ್ದ್ರಿಯಾಣ್ಯನುಕ್ರಮತಃ ॥**

೩೪೨. ಶ್ರೋತ್ರ, ತ್ವಕ್ಕು, ಚಕ್ಷುಸ್ಸು, ಜಿಹ್ವೆ, ಘ್ರಾಣ– ಎಂಬ ಐದು **ಜ್ಞಾನೇಂದ್ರಿಯಗಳು** ಯಥಾಕ್ರಮವಾಗಿ[1] ಆಕಾಶಾದಿಗಳ ಸಾತ್ತ್ವಿಕಾಂಶದಿಂದ ಹುಟ್ಟಿರುತ್ತವೆ.

**ಆಕಾಶಾದಿಗತಾಃ ಪಞ್ಚ ಸಾತ್ತ್ವಿಕಾಂಶಾಃ ಪರಸ್ಪರಮ್ ।**
**ಮಿಲಿತ್ವೈವಾನ್ತಃಕರಣಮಭವತ್ ಸರ್ವಕಾರಣಮ್ ॥ ೩೪೩ ॥**

೩೪೩. ಆಕಾಶವೇ ಮುಂತಾದ (ಭೂತ)ಗಳಲ್ಲಿರುವ ಸಾತ್ತ್ವಿಕಾಂಶಗಳು ಒಂದರೊಡನೊಂದು ಸೇರಿಕೊಂಡೇ ಸರ್ವಕಾರಣವಾದ **ಅಂತಃಕರಣ**ವಾಯಿತು.

**ಪ್ರಕಾಶಕತ್ವಾದೇತೇಷಾಂ ಸಾತ್ತ್ವಿಕಾಂಶತ್ವಮಿಷ್ಯತೇ ।**
**ಪ್ರಕಾಶಕತ್ವಂ ಸತ್ತ್ವಸ್ಯ ಸ್ವಚ್ಛತ್ವೇನ ಯತಸ್ತತಃ ॥ ೩೪೪ ॥**

೩೪೪. ಈ (ಅಂಶ)ಗಳು ಪ್ರಕಾಶಕವಾಗಿರುವದರಿಂದ ಸಾತ್ತ್ವಿಕಾಂಶವೆಂದಿದೆ. ಸತ್ತ್ವವು ಸ್ವಚ್ಛವಾಗಿರುವದರಿಂದ ಪ್ರಕಾಶಕವಾಗಿರುವದಲ್ಲವೆ? ಅದರಿಂದ.[2]

**ತದನ್ತಃಕರಣಂ ವೃತ್ತಿಭೇದೇನ ಸ್ಯಾಚ್ಚತುರ್ವಿಧಮ್ ।**
**ಮನೋಬುದ್ಧಿರಹಙ್ಕಾರಶ್ಚಿತ್ತಂ ಚೇತಿ ತದುಚ್ಯತೇ ॥ ೩೪೫ ॥**
**ಸಂಕಲ್ಪಾನ್ಮನ ಇತ್ಯಾಹುರ್ಬುದ್ಧಿರರ್ಥಸ್ಯ ನಿಶ್ಚಯಾತ್ ।**
**ಅಭಿಮಾನಾದಹಙ್ಕಾರಶ್ಚಿತ್ತಮರ್ಥಸ್ಯ ಚಿನ್ತನಾತ್ ॥ ೩೪೬ ॥**

೩೪೫–೩೪೬. ಆ ಅಂತಃಕರಣವು ಬೇರೆಬೇರೆ ವೃತ್ತಿಗಳಿಂದ ನಾಲ್ಕು ಬಗೆಯಾಗಿರುವದು. ಅದನ್ನು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ– ಎಂದು ಕರೆಯುವರು. ಸಂಕಲ್ಪಮಾಡುವದರಿಂದ (ಇದನ್ನು) **ಮನಸ್ಸು**– ಎನ್ನುತ್ತಾರೆ. ವಿಷಯವನ್ನು ನಿಶ್ಚಯಿಸುವದರಿಂದ **ಬುದ್ಧಿ,** ಅಭಿಮಾನಮಾಡುವದರಿಂದ **ಅಹಂಕಾರ,** ವಿಷಯವನ್ನು ಚಿಂತಿಸುವದರಿಂದ **ಚಿತ್ತ**(ವೆನ್ನುತ್ತಾರೆ).

**ಮನಸ್ಯಪಿ ಚ ಬುದ್ಧೌ ಚ ಚಿತ್ತಾಹಙ್ಕಾರಯೋಃ ಕ್ರಮಾತ್ ।**
**ಅನ್ತರ್ಭಾವೋಽತ್ರ ಬೋದ್ಧವ್ಯೋ ಲಿಙ್ಗಲಕ್ಷಣಸಿದ್ಧಯೇ ॥ ೩೪೭ ॥**
**ಚಿನ್ತನಂ ಚ ಮನೋಧರ್ಮಃ ಸಂಕಲ್ಪಾದಿರ್ಯಥಾ ತಥಾ ।**
**ಅನ್ತರ್ಭಾವೋ ಮನಸ್ಯೇವ ಸಮ್ಯಕ್ಚಿತ್ತಸ್ಯ ಸಿಧ್ಯತಿ ॥ ೩೪೮ ॥**

---

1. ಆಕಾಶದಿಂದ ಶ್ರೋತ್ರ, ವಾಯುವಿನಿಂದ ತ್ವಕ್ಕು, ತೇಜಸ್ಸಿನಿಂದ ಚಕ್ಷುಸ್ಸು, ಅಪ್ಪಿನಿಂದ ಜಿಹ್ವೆ, ಪೃಥ್ವಿಯಿಂದ ಘ್ರಾಣ– ಹೀಗೆ ಕ್ರಮದಿಂದ ಹುಟ್ಟಿರುತ್ತವೆ ಎಂದರ್ಥ.
2. ಅದರಿಂದ ಇವು ಸಾತ್ತ್ವಿಕಾಂಶಗಳು ಎಂದು ಅನ್ವಯ.

**ದೇಹಾದಾವಹಮಿತ್ಯೇವ ಭಾವೋ ದೃಢತರೋ ಧಿಯಃ ।**
**ದೃಶ್ಯತೇಽಹಙ್ಕೃತೇಸ್ತಸ್ಮಾದನ್ತರ್ಭಾವೋಽತ್ರ ಯುಜ್ಯತೇ ॥ ೩೪೯ ॥**

೩೪೭–೩೪೯. ಮನಸ್ಸಿನಲ್ಲಿಯೂ ಬುದ್ಧಿಯಲ್ಲಿಯೂ ಚಿತ್ತ, ಅಹಂಕಾರ– ಇವು ಕ್ರಮವಾಗಿ ಅಡಕವಾಗಿರುತ್ತವೆ– ಎಂಬ ಲಿಂಗದ ಲಕ್ಷಣವು ಸಿದ್ಧಿಯಾಗುವದಕ್ಕಾಗಿ[1] ತಿಳಿಯಬೇಕು. ಸಂಕಲ್ಪವೇ ಮುಂತಾದವುಗಳು ಹೇಗೆ (ಮನಸ್ಸಿನ ಧರ್ಮಗಳೋ) ಹಾಗೆಯೇ ಚಿಂತಿಸುವದೆಂಬುದೂ ಮನಸ್ಸಿನ ಧರ್ಮವು. (ಆದ್ದರಿಂದ) ಚಿತ್ತವು ಮನಸ್ಸಿನಲ್ಲಿಯೇ ಅಡಕವಾಗಿರುವದೆಂದು ಸರಿಯಾಗಿ ಸಿದ್ಧಿಸುತ್ತದೆ. ದೇಹಾದಿಗಳಲ್ಲಿ ನಾನು ಎಂಬ ಭಾವವು ಬುದ್ಧಿಗೆ ಬಹಳ ಗಟ್ಟಿಯಾಗಿರುತ್ತದೆ; ಆದ್ದರಿಂದ ಅಹಂಕಾರವು ಇದರಲ್ಲಿ ಅಡಕವಾಗಿದೆ ಎಂಬುದು ಯುಕ್ತವಾಗಿರುತ್ತದೆ.

**ತಸ್ಮಾದೇವ ತು ಬುದ್ಧೇಃ ಕರ್ತೃತ್ವಂ ತದಿತರಸ್ಯ ಕಾರಣತ್ವಮ್ ।**
**ಸಿಧ್ಯತ್ಯಾತ್ಮನ ಉಭಯಾದ್ವಿದ್ಯಾತ್ಸಂಸಾರಕಾರಣಂ ಮೋಹಾತ್ ॥೩೫೦॥**

೩೫೦. ಆದ್ದರಿಂದಲೇ[2] ಬುದ್ಧಿಯು ಕರ್ತೃವೆಂದೂ ಅದಕ್ಕಿಂತ ಬೇರೆಯಾವದ್ದು[3] ಕರಣವೆಂದೂ ಸಿದ್ಧವಾಗುತ್ತದೆ. ಆತ್ಮನಿಗೆ (ಈ) ಎರಡರಿಂದಲೂ ಭ್ರಾಂತಿಯಿಂದ ಸಂಸಾರಕ್ಕೆ ಕಾರಣವಾಗಿರುತ್ತದೆ[4] ಎಂದು ತಿಳಿಯಬೇಕು.

**ವಿಜ್ಞಾನಮಯಕೋಶಃ ಸ್ಯಾದ್ ಬುದ್ಧಿರ್ಜ್ಞಾನೇನ್ದ್ರಿಯೈಃ ಸಹ ॥**
**ವಿಜ್ಞಾನಪ್ರಚುರತ್ವೇನಾಪ್ಯಾಚ್ಛಾದಕತಯಾತ್ಮನಃ ॥**
**ವಿಜ್ಞಾನಮಯಕೋಶೋಽಯಮಿತಿ ವಿದ್ವದ್ಭಿರುಚ್ಯತೇ ॥ ೩೫೧ ॥**

೩೫೦ತ್ತಿ–೩೫೧. ಬುದ್ಧಿಯು ಜ್ಞಾನೇಂದ್ರಿಯಗಳಿಂದೊಡಗೂಡಿದರೆ **ವಿಜ್ಞಾನಮಯಕೋಶ**ವಾಗುವದು. ವಿಜ್ಞಾನಪ್ರಚುರವಾಗಿರುವದರಿಂದಲೂ ಆತ್ಮನಿಗೆ ಮುಸುಕಾಗಿರುವದರಿಂದಲೂ ಇದನ್ನು **ವಿಜ್ಞಾನಮಯಕೋಶ** ಎಂದು ಬಲ್ಲವರು ಕರೆದಿರುತ್ತಾರೆ.

**ಅಯಂ ಮಹಾನಹಙ್ಕಾರವೃತ್ತಿಮಾನ್ ಕರ್ತೃಲಕ್ಷಣಃ ।**
**ಸರ್ವಸಂಸಾರನಿರ್ವೋಢಾ ವಿಜ್ಞಾನಮಯಶಬ್ದಭಾಕ್ ॥ ೩೫೨ ॥**

೩೫೨. **ವಿಜ್ಞಾನಮಯ**ವೆಂಬ ಹೆಸರನ್ನು ಪಡೆದುಕೊಂಡಿರುವ ಇದೇ[5]

---

1. ಲಿಂಗದಲ್ಲಿ ಹದಿನೇಳು ಅವಯವಗಳು ಇವೆ ಎಂಬುದು ಹೊಂದುವದಕ್ಕಾಗಿ.
2. ಬುದ್ಧಿಯಲ್ಲಿ ಅಹಂಕಾರವು ಅಡಕವಾಗಿರುವದರಿಂದಲೇ.
3. ಮನೋಮಯಕೋಶವು. ವೇ. ಸಾ.ವನ್ನು ನೋಡಿ.
4. ಉಪಾಧಿರಹಿತನಾದ ಆತ್ಮನು ಸಂಸಾರಿಯಲ್ಲ.
5. ವಿಜ್ಞಾನಮಯಕೋಶವೇ ಜೀವನೆಂದು ವಿವೇಕಚೂಡಾಮಣಿಯಲ್ಲಿ ವರ್ಣಿಸಿರುವ (೧೮೩ರಿಂದ ೧೮೭ತ್ತ) ಶ್ಲೋಕಗಳನ್ನು ನೋಡಿರಿ.

ಮಹಾನ್ ಎಂಬ ಅಹಂಕಾರವೃತ್ತಿಯುಳ್ಳದ್ದು ; ಕರ್ತೃಸ್ವರೂಪವಾದದ್ದು. ಎಲ್ಲಾ ಸಂಸಾರವನ್ನೂ ನಿರ್ವಹಿಸುವದಾಗಿರುತ್ತದೆ.

**ಅಹಂ ಮಮೇತ್ಯೇವ ಸದಾಭಿಮಾನಂ**
**ದೇಹೇನ್ದ್ರಿಯಾದೌ ಕುರುತೇ ಗೃಹಾದೌ ।**
**ಜೀವಾಭಿಧಾನಃ[1] ಪುರುಷೋಽಯಮೇವ**
**ಕರ್ತಾ ಚ ಭೋಕ್ತಾ ಚ ಸುಖೀ ಚ ದುಃಖೀ ॥ ೩೫೩ ॥**

೩೫೩. (ಇದು) ದೇಹೇಂದ್ರಿಯಾದಿಗಳಲ್ಲಿಯೂ ಮನೆ ಮುಂತಾದವುಗಳಲ್ಲಿಯೂ ನಾನು, ನನ್ನದು- ಎಂದೇ ಯಾವಾಗಲೂ ಅಭಿಮಾನವುಳ್ಳದ್ದಾಗಿರುತ್ತದೆ. ಜೀವನೆಂಬ ಹೆಸರಿನ ಪುರುಷನೂ ಇದೇ ; ಕರ್ತೃ, ಭೋಕ್ತೃ, ಸುಖಿ, ದುಃಖಿ- (ಎಂಬುದೂ ಇದೇ).

**ಸ್ವವಾಸನಾಪ್ರೇರಿತ ಏಷ[2] ನಿತ್ಯಂ**
**ಕರೋತಿ ಕರ್ಮೋಭಯಲಕ್ಷಣಂ ಚ ।**
**ಭುಙ್ಕ್ತೇ ತದುತ್ಪನ್ನಫಲಂ ವಿಶಿಷ್ಟಂ**
**ಸುಖಂ ಚ ದುಃಖಂ ಚ ಪರತ್ರ ಚಾತ್ರ ॥ ೩೫೪ ॥**

೩೫೪. ಈ (ಜೀವನು) ತನ್ನ ವಾಸನೆಗಳಿಂದ ಪ್ರೇರಿತನಾಗಿಯೇ ಯಾವಾಗಲೂ (ಒಳ್ಳೆಯದು, ಕೆಟ್ಟದ್ದು- ಎಂಬ) ಎರಡು ಬಗೆಯ ಕರ್ಮವನ್ನೂ ಮಾಡುತ್ತಾನೆ, ಅದರಿಂದುಂಟಾಗುವ ಆಯಾ ಫಲವನ್ನೂ-ಸುಖವನ್ನೂ-ದುಃಖವನ್ನೂ-ಪರಲೋಕದಲ್ಲಿಯೂ ಈ (ಲೋಕ)ದಲ್ಲಿಯೂ ಅನುಭವಿಸುತ್ತಾನೆ.

**ನಾನಾಯೋನಿಸಹಸ್ರೇಷು ಜಾಯಮಾನೋ ಮುಹುರ್ಮುಹುಃ ।**
**ಮ್ರಿಯಮಾಣೋ ಭ್ರಮತ್ಯೇಷ ಜೀವಃ ಸಂಸಾರಮಣ್ಡಲೇ ॥ ೩೫೫ ॥**

೩೫೫. ಸಾವಿರಾರು ಬಗೆಬಗೆಯ ಯೋನಿಗಳಲ್ಲಿ ಮತ್ತೆಮತ್ತೆ ಹುಟ್ಟುತ್ತಲೂ ಸಾಯುತ್ತಲೂ ಈ ಜೀವನು ಸಂಸಾರಮಂಡಲದಲ್ಲಿ ತೊಳಲುತ್ತಿರುವನು.

**ಮನೋ ಮನೋಮಯಃ ಕೋಶೋ ಭವೇಜ್ಜ್ಞಾನೇನ್ದ್ರಿಯೈಃ ಸಹ।**
**ಪ್ರಾಚುರ್ಯಂ ಮನಸೋ ಯತ್ರ ದೃಶ್ಯತೇಽಸೌ ಮನೋಮಯಃ॥**

೩೫೬. ಮನಸ್ಸು ಜ್ಞಾನೇಂದ್ರಿಯಗಳೊಡಗೂಡಿದರೆ **ಮನೋಮಯ ಕೋಶ**ವಾಗುತ್ತದೆ. ಎಲ್ಲಿ ಮನಸ್ಸಿಗೆ ಪ್ರಾಚುರ್ಯವಿರುವದೋ ಅದೇ **ಮನೋಮಯವು.**

1. 'ಜೀವಾಭಿಮಾನಃ' -ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. 'ಏವ' ಎಂದು ಅಚ್ಚಿನಪಾಠ, ಜೀವನೇ ಭೋಕ್ತೃ ಎಂಬುದನ್ನು ತಿಳಿಸುವದಕ್ಕೆ ಹೀಗೆ ತಿದ್ದಿದೆ ; ಹಿಂದಿನ ಶ್ಲೋಕದಲ್ಲಿಯೂ 'ಏಷ' ಎಂದಿರಬಹುದಾಗಿತ್ತು.

**ಚಿನ್ತಾವಿಷಾದಹರ್ಷಾದ್ಯಾಃ ಕಾಮಾದ್ಯಾ ಅಸ್ಯ ವೃತ್ತಯಃ[1] ॥ ೩೫೭ ॥**
**ಮನುತೇ ಮನಸೈವೈಷ ಫಲಂ ಕಾಮಯತೇ ಬಹಿಃ ।**
**ಯತತೇ ಕುರುತೇ ಭುಙ್ಕ್ತೇ ತನ್ಮನಃ ಸರ್ವಕಾರಣಮ್ ॥ ೩೫೮ ॥**

೩೫೭–೩೫೮. ಚಿಂತೆ, ಹರ್ಷ, ವಿಷಾದ- ಮುಂತಾದವುಗಳೂ ಕಾಮಾದಿಗಳೂ ಇದರ ವೃತ್ತಿಗಳು. (ಈ ಜೀವನು) ಮನಸ್ಸಿನಿಂದಲೇ ಮನನಮಾಡುತ್ತಾನೆ, ಹೊರಗಿನ (ವಿಷಯವನ್ನು) ಬಯಸುತ್ತಾನೆ; ಪ್ರಯತ್ನಮಾಡುತ್ತಾನೆ, (ಕರ್ಮವನ್ನು) ಮಾಡುತ್ತಾನೆ, ಅನುಭವಿಸುತ್ತಾನೆ. ಆದ್ದರಿಂದ ಆ ಮನಸ್ಸು ಎಲ್ಲಕ್ಕೂ ಕಾರಣವು.

**ಮನೋ ಹ್ಯಮುಷ್ಯ ಪ್ರವಣಸ್ಯ ಹೇತು-**
**ರನ್ತರ್ಬಹಿಶ್ಚಾರ್ಥಮನೇನ ವೇತ್ತಿ ।**
**ಶೃಣೋತಿ ಜಿಘ್ರತ್ಯಮುನೈವ ಚೇಕ್ಷತೇ**
**ವಕ್ತಿ ಸ್ಪೃಶತ್ಯತ್ತಿ ಕರೋತಿ ಸರ್ವಮ್ ॥ ೩೫೯ ॥**

೩೫೯. (ಹೊರಕ್ಕೆ) ಜೋಲುವ ಇವನಿಗೆ ಮನಸ್ಸೇ ಕಾರಣವು. ಒಳಗೂ ಹೊರಗೂ ವಿಷಯವನ್ನು ಇದರಿಂದಲೇ ತಿಳಿದುಕೊಳ್ಳುತ್ತಾನೆ, ಕೇಳುತ್ತಾನೆ, ಮೂಸುತ್ತಾನೆ, ಕಾಣುತ್ತಾನೆ, ಮಾತಾಡುತ್ತಾನೆ, ಮುಟ್ಟುತ್ತಾನೆ, ತಿನ್ನುತ್ತಾನೆ, ಎಲ್ಲವನ್ನೂ ಮಾಡುತ್ತಾನೆ.

**ಬನ್ಧಶ್ಚ ಮೋಕ್ಷೋ ಮನಸೈವ ಪುಂಸಾ-**
**ಮರ್ಥೋಽಪ್ಯನರ್ಥೋಽಪ್ಯಮುನೈವ ಸಿಧ್ಯತಿ ।**
**ಶುದ್ಧೇನ ಮೋಕ್ಷೋ ಮಲಿನೇನ ಬನ್ಧೋ**
**ವಿವೇಕತೋಽರ್ಥೋಽಪ್ಯವಿವೇಕತೋಽನ್ಯಃ ॥ ೩೬೦ ॥**

೩೬೦. ಜನರಿಗೆ ಬಂಧವಾಗಲಿ ಮೋಕ್ಷವಾಗಲಿ ಮನಸ್ಸಿನಿಂದಲೇ, ಅರ್ಥವೂ ಅನರ್ಥವೂ ಇದರಿಂದಲೇ ಸಿದ್ಧಿಸುತ್ತದೆ; ಶುದ್ಧವಾದ (ಮನಸ್ಸಿನಿಂದ) ಮೋಕ್ಷ, ಮಲಿನ (ಮನಸ್ಸಿನಿಂದ) ಬಂಧ. ವಿವೇಕದಿಂದ ಅರ್ಥ, ಅವಿವೇಕದಿಂದ ಅದಕ್ಕಿಂತ ಬೇರೆಯಾದ ಅನರ್ಥ.

**ರಜಸ್ತಮೋಭ್ಯಾಂ ಮಲಿನಂ ತ್ವಶುದ್ಧ-**
**ಮಜ್ಞಾನಜಂ ಸತ್ತ್ವಗುಣೇನ ರಿಕ್ತಮ್ ।**
**ಮನಸ್ತಮೋದೋಷಸಮನ್ವಿತತ್ವಾ-**
**ಜ್ಜಡತ್ವಮೋಹಾಲಸತಾ ಪ್ರಮಾದೈಃ ॥**
**ತಿರಸ್ಕೃತಂ ಸನ್ನ ತು ವೇತ್ತಿ ವಾಸ್ತವಂ**

---

1. ಹಿಂದಿನ ೩೫೭ನೆಯ ಅರ್ಧಶ್ಲೋಕಕ್ಕೆ ಇದನ್ನು ಸೇರಿಸಿ ಒಂದು ಶ್ಲೋಕವೆಂದು ಗಣಿಸಿದೆ.

**ಪದಾರ್ಥತತ್ತ್ವಂ ಹ್ಯುಪಲಭ್ಯಮಾನಮ್ ॥ ೩೬೧ ॥**

೩೬೧. ರಜಸ್ಸು, ತಮಸ್ಸು- ಇವುಗಳಿಂದ (ಮನಸ್ಸು) ಮಲಿನವಾಗಿ, ಅಶುದ್ಧವಾದ, ಅಜ್ಞಾನದಿಂದ ಕೂಡಿರುತ್ತದೆ (?) ಸತ್ತ್ವಗುಣವಿಲ್ಲದ ಮನಸ್ಸು ಕರ್ಮದೋಷದಿಂದ ಕೂಡಿರುವಾಗ ಜಡತ್ವ, ಭ್ರಾಂತಿ, ಆಲಸ್ಯ, ಎಚ್ಚರತಪ್ಪುವದು- ಇವುಗಳಿಂದ ಆವೃತವಾಗಿರುವದರಿಂದ ಕಾಣುವ ಪದಾರ್ಥದ ನಿಜವನ್ನು ಸರಿಯಾಗಿ ತಿಳಿಯದೆ ಇರುತ್ತದೆ.

**ರಜೋದೋಷೈರ್ಯುಕ್ತಂ ಯದಿ ಭವತಿ ವಿಕ್ಷೇಪಕಗುಣೈಃ**
**ಪ್ರತೀತೈಃ ಕಾಮಾದ್ಯೈರನಿಶಮಭಿಭೂತಂ ವ್ಯಥಯತಿ ।**
**ಕಥಞ್ಚಿತ್ಸೂಕ್ಷ್ಮಾರ್ಥಾವಗತಿಮದಪಿ ಭ್ರಾಮ್ಯತಿ ಭೃಶಂ**
**ಮನೋ ದೀಪೋ ಯದ್ವತ್ ಪ್ರಬಲಮರುತಾ ಧ್ವಸ್ತಮಹಿಮಾ ॥**

೩೬೨. (ಈ) ಮನಸ್ಸು ವಿಕ್ಷೇಪವನ್ನುಂಟುಮಾಡುವ ರಜೋ(ಗುಣ)ದೋಷಗಳಿಂದ ಕೂಡಿದ್ದಾದರೆ, ಪ್ರತಿಕೂಲವಾದ ಕಾಮಾದಿಗಳಿಂದ ಯಾವಾಗಲೂ ತಿರಸ್ಕೃತವಾಗಿ ವ್ಯಥೆಗೊಳಿಸುತ್ತದೆ. ಹೇಗೋ ಸೂಕ್ಷ್ಮವಾದ ವಿಷಯಗಳನ್ನು ಅರಿತುಕೊಂಡರೂ- ಬಲವಾದ ಗಾಳಿಯಿಂದ ನಾಶವಾದ ಮಹಿಮೆಯುಳ್ಳ ದೀಪದಂತೆ- ಬಹಳವಾಗಿ ಹೊಯ್ದಾಡುತ್ತಿರುವದು.[1]

**ತತೋ ಮುಮುಕ್ಷುರ್ಭವಬನ್ಧಮುಕ್ತ್ಯೈ**
**ರಜಸ್ತಮೋಭ್ಯಾಂ ಚ ತದೀಯಕಾರ್ಯೈಃ ।**
**ವಿಯೋಜ್ಯ ಚಿತ್ತಂ ಪರಿಶುದ್ಧಸತ್ತ್ವಂ**
**ಪ್ರಿಯಂ ಪ್ರಯತ್ನೇನ ಸದೈವ ಕುರ್ಯಾತ್ ॥ ೩೬೩ ॥**

೩೬೩. ಆದ್ದರಿಂದ ಮುಮುಕ್ಷುವಾದವನು ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುವದಕ್ಕಾಗಿ ಚಿತ್ತವನ್ನು ರಜಸ್ತಮಸ್ಸುಗಳಿಂದಲೂ ಅವುಗಳ ಕಾರ್ಯದಿಂದಲೂ ಅಗಲಿಸಿ ಪ್ರಯತ್ನಪೂರ್ವಕವಾಗಿ ಅತ್ಯಂತಶುದ್ಧವಾದ ಸತ್ತ್ವವುಳ್ಳದ್ದನ್ನಾಗಿ ಯಾವಾಗಲೂ ಮಾಡಿಕೊಳ್ಳಬೇಕು.[2]

---

1. ಇಲ್ಲಿರುವ ಮನೋಮಯಕೋಶದ ವರ್ಣನೆಯು ವಿ.ಚೂ.ಗಿಂತ ಸ್ವಲ್ಪ ವಿಲಕ್ಷಣವಾಗಿದೆ. ಸತ್ತ್ವರಜಸ್ತಮೋಗುಣಗಳ ಕಾರ್ಯವನ್ನು ವಿ. ಚೂ. ಯಲ್ಲಿ ೧೧೦ರಿಂದ ೧೧೮ರವರೆಗೆ ವರ್ಣಿಸಿರುವದನ್ನು ಇದಕ್ಕೆ ಹೋಲಿಸಿರಿ.

2. ಮನೋಮಯಕೋಶವನ್ನು ತಿಳಿಸುವದು ಪ್ರಕೃತ; ಪ್ರಸಂಗದಿಂದ ಅದರಲ್ಲಿರುವ ರಜಸ್ತಮೋಗುಣಗಳ ದೋಷಗಳನ್ನು ಹೇಳಿದೆ ; ಕೇವಲಸತ್ತ್ವಗುಣವನ್ನು ಹೊಗಳಿರುತ್ತದೆ.

**ಗರ್ಭವಾಸಜನಿಪ್ರಣಾಶನಜರಾವ್ಯಾಧ್ಯಾದಿಷು ಪ್ರಾಣಿನಾಂ**
**ಯದ್ದುಃಖಂ ಪರಿದೃಶ್ಯತೇ ಚ ನರಕೇ ತಚ್ಚಿಂತಯಿತ್ವಾ ಮುಹುಃ ।**
**ದೋಷಾನೇವ ವಿಲೋಕ್ಯ ಸರ್ವವಿಷಯೇಷ್ವಾಶಾಂ ವಿಮುಚ್ಯಾಭಿತ-**
**ಶ್ಚಿತ್ತಂ ಗ್ರನ್ಥಿವಿಮೋಚನಾಯ ಸುಮತಿಃ ಸತ್ತ್ವಂ ಸಮಾಲಮ್ಬತಾಮ್॥**

೩೬೪. ಪ್ರಾಣಿಗಳಿಗೆ ಗರ್ಭವಾಸ, ಜನ್ಮ, ಮರಣ, ಮುಪ್ಪು, ಬೇನೆ-ಮುಂತಾದವುಗಳಲ್ಲಿಯೂ ನರಕದಲ್ಲಿಯೂ ಯಾವ ದುಃಖವು ಕಾಣಬರುವದೋ ಅದನ್ನು ಮತ್ತೆಮತ್ತೆ ಚಿಂತಿಸಿಕೊಳ್ಳುತ್ತಾ, ಎಲ್ಲಾ ವಿಷಯಗಳಲ್ಲಿಯೂ ದೋಷಗಳನ್ನೇ ಕಾಣುತ್ತಾ ಸರ್ವವಿಷಯಗಳಲ್ಲಿಯೂ ಆಶೆಯನ್ನು ಸಂಪೂರ್ಣವಾಗಿ ತೊರೆದು ಚಿತ್ತವೆಂಬ ಕಗ್ಗಂಟನ್ನು ಬಿಡಿಸಿಕೊಳ್ಳುವದಕ್ಕಾಗಿ ವಿವೇಕಿಯಾದವನು ಸತ್ತ್ವವನ್ನು ಆಶ್ರಯಿಸಬೇಕು.

**ಯಮೇಷು ನಿರತೋ ಯಸ್ತು ನಿಯಮೇಷು ಚ ಯತ್ನತಃ ।**
**ವಿವೇಕಿನಸ್ತಸ್ಯ ಚಿತ್ತಂ ಪ್ರಸಾದಮಧಿಗಚ್ಛತಿ ॥ ೩೬೫[1] ॥**

೩೬೫. ಯಾವನು **ಯಮ**ಗಳಲ್ಲಿಯೂ **ನಿಯಮ**ಗಳಲ್ಲಿಯೂ ಯತ್ನಪೂರ್ವಕವಾಗಿ ನಿರತನಾಗಿರುವನೋ ಅಂಥ ವಿವೇಕಿಗೆ ಚಿತ್ತವು ಪ್ರಸನ್ನವಾಗುವದು.

**ಆಸುರೀಂ ಸಂಪದಂ ತ್ಯಕ್ತ್ವಾ ಭಜೇದ್ಯೋ ದೈವಸಂಪದಮ್ ।**
**ಮೋಕ್ಷೈಕಕಾಙ್ಕ್ಷಯಾ ನಿತ್ಯಂ ತಸ್ಯ ಚಿತ್ತಂ ಪ್ರಸೀದತಿ ॥ ೩೬೬ ॥**

೩೬೬. ಮೋಕ್ಷವೊಂದೇ ಬೇಕೆಂಬ ಇಚ್ಛೆಯಿಂದ ಆಸುರಸಂಪತ್ತನ್ನು ಬಿಟ್ಟು ದೈವಸಂಪತ್ತನ್ನು ಯಾವನು ಸೇವಿಸುವನೋ ಅವನಿಗೆ ಚಿತ್ತವು ಪ್ರಸನ್ನವಾಗುವದು.

**ಪರದ್ರವ್ಯಪರದ್ರೋಹಪರನಿನ್ದಾಪರಸ್ತ್ರಿಯಃ ।**
**ನಾಲಮ್ಬತೇ ಮನೋ ಯಸ್ಯ ತಸ್ಯ ಚಿತ್ತಂ ಪ್ರಸೀದತಿ ॥ ೩೬೭ ॥**

೩೬೭. ಮತ್ತೊಬ್ಬರ ಧನ, ಮತ್ತೊಬ್ಬರಿಗೆ ದ್ರೋಹವನ್ನು ಮಾಡುವದು, ಮತ್ತೊಬ್ಬರನ್ನು ನಿಂದಿಸುವದು, ಮತ್ತೊಬ್ಬರ ಹೆಂಡಿರು- ಇವನ್ನು ಯಾವನ ಮನಸ್ಸು ಅವಲಂಬಿಸದೆ ಇರುವದೋ ಅವನ ಚಿತ್ತವು ಪ್ರಸನ್ನವಾಗುವದು.

**ಆತ್ಮವತ್ಸರ್ವಭೂತೇಷು ಯಃ ಸಮತ್ವೇನ ಪಶ್ಯತಿ ।**
**ಸುಖಂ ದುಃಖಂ ವಿವೇಕೇನ ತಸ್ಯ ಚಿತ್ತಂ ಪ್ರಸೀದತಿ ॥ ೩೬೮ ॥**

---

1. ಇಲ್ಲಿಂದ ಮುಂದಕ್ಕೆ ಕೆಲವು ಶ್ಲೋಕಗಳಲ್ಲಿ ಚಿತ್ತಪ್ರಸನ್ನತೆಗೆ ಸಾಧನವನ್ನು ತಿಳಿಸಿದೆ.

೩೭೮. ಸರ್ವಪ್ರಾಣಿಗಳಲ್ಲಿಯೂ ತನ್ನಂತೆಯೇ ಯಾವನು ವಿವೇಕದಿಂದ ಸುಖದುಃಖಗಳನ್ನು ಸಮವಾಗಿ ಕಾಣುವನೋ ಅವನ ಚಿತ್ತವು ಪ್ರಸನ್ನವಾಗುವದು.

**ಅತ್ಯನ್ತಂ ಶ್ರದ್ಧಯಾ ಭಕ್ತ್ಯಾ ಗುರುಮೀಶ್ವರಮಾತ್ಮನಿ ।**
**ಯೋ ಭಜತ್ಯನಿಶಂ ಕ್ಷಾನ್ತಸ್ತಸ್ಯ ಚಿತ್ತಂ ಪ್ರಸೀದತಿ ॥ ೩೭೯ ॥**

೩೭೯. ಅತ್ಯಂತವಾದ ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಗುರುವನ್ನೂ ಈಶ್ವರನನ್ನೂ ಮನಸ್ಸಿನಲ್ಲಿ ನಿತ್ಯವೂ ಯಾವನು ಭಜಿಸುತ್ತಿರುವನೋ, ಅಂಥ ಕ್ಷಮಾವಂತನ (?)[1] ಚಿತ್ತವು ಪ್ರಸನ್ನವಾಗುವದು.

**ಶಿಷ್ಟಾನ್ನಮೀಶಾರ್ಚನಮಾರ್ಯಸೇವಾಂ**
**ತೀರ್ಥಾಟನಂ ಸ್ವಾಶ್ರಮಧರ್ಮನಿಷ್ಠಾಮ್ ।**
**ಯಮಾನುಷಕ್ತಿಂ ನಿಯಮಾನುವೃತ್ತಿಂ**
**ಚಿತ್ತಪ್ರಸಾದಾಯ ವದನ್ತಿ ತಜ್ಜ್ಞಾಃ ॥ ೩೮೦ ॥**

೩೮೦. ಶಿಷ್ಟರ ಅನ್ನವನ್ನೇ ಉಣ್ಣುವದು, ಈಶ್ವರನನ್ನು ಪೂಜಿಸುವದು, ಯೋಗ್ಯರ ಸೇವೆ, ತೀರ್ಥಾಟನ, ಸ್ವಾಶ್ರಮಧರ್ಮವನ್ನು ಪಾಲಿಸಿಕೊಂಡು ಬರುವದು, ಯಮವಲ್ಲಿ ಆಸಕ್ತಿ, ನಿಯಮಗಳನ್ನು ಅನುಸರಿಸುವದು-ಇವುಗಳು ಚಿತ್ತಪ್ರಸನ್ನತೆಗೆ (ಕಾರಣ)ವೆಂದು ಚಿತ್ತತತ್ತ್ವಜ್ಞರು ಹೇಳುತ್ತಾರೆ.

**ಕಟ್ವಮ್ಲಲವಣಾತ್ಯುಷ್ಣತೀಕ್ಷ್ಣರೂಕ್ಷವಿದಾಹಿನಾಮ್[2] ।**
**ಪೂತಿಪರ್ಯುಷಿತಾದೀನಾಂ ತ್ಯಾಗಃ ಸತ್ತ್ವಾಯ ಕಲ್ಪತೇ ॥ ೩೮೧ ॥**

೩೮೧. ಕಹಿ, ಹುಳಿ, ಉಪ್ಪು, ಬಲುಬಿಸಿ, ಕಾರ, ಒಣಕಲು, ನಾಲಗೆ ಯುರಿಯುವದು, ದುರ್ಗಂಧಮಯವಾದದ್ದು, ತಂಗಳು-ಮುಂತಾದ (ಆಹಾರವನ್ನು) ಬಿಡುವದು ಸತ್ತ್ವವೃದ್ಧಿಗೆ ಕಾರಣವಾಗುತ್ತದೆ.

**ಶ್ರುತ್ಯಾ ಸತ್ತ್ವಪುರಾಣಾನಾಂ ಸೇವಯಾ ಸತ್ತ್ವವಸ್ತುನಃ ।**
**ಅನುವೃತ್ತ್ಯಾ ಚ ಸಾಧೂನಾಂ ಸತ್ತ್ವವೃತ್ತಿಃ ಪ್ರಜಾಯತೇ ॥ ೩೮೨ ॥**

೩೮೨. ಸಾತ್ತ್ವಿಕಪುರಾಣಗಳನ್ನು[3] ಶ್ರವಣಮಾಡುವದರಿಂದಲೂ ಸಾತ್ತ್ವಿಕ ವಸ್ತುಗಳನ್ನು ಸೇವಿಸುವದರಿಂದಲೂ ಸಾಧುಗಳನ್ನು ಅನುಸರಿಸುವದರಿಂದಲೂ ಸತ್ತ್ವ ವೃತ್ತಿಯು ಉಂಟಾಗುತ್ತದೆ.

---

1. 'ಶಾಂತಸ್ಯ' ಎಂಬುದು ತಪ್ಪಾಗಿ 'ಕಾಂತಸ್ಯ' ಬರೆದವರ ಕೈತಪ್ಪಿನಿಂದ ಹೀಗೆ ಬಿದ್ದಿರಬಹುದು.

2. ಈ ಶ್ಲೋಕಾರ್ಥವನ್ನು ಗೀತಾ (೧೭-೯ನೆಯ) ಶ್ಲೋಕಕ್ಕೆ ಅನುಸಾರವಾಗಿ ತಿದ್ದಿಕೊಂಡಿದೆ ; 'ವಿಧಾಯಿನಾಮ್' ಎಂಬ ಮುದ್ರಿತಪಾಠವು ಅನ್ವಯವಾಗುವದಿಲ್ಲ.

3. ಪುರಾಣಗಳನ್ನು ಸಾತ್ತ್ವಿಕ, ರಾಜಸ, ತಾಮಸ- ಎಂದು ವಿಂಗಡಿಸುವದು ಆಚಾರ್ಯರ ಭಾಷ್ಯಗಳಲ್ಲಿಲ್ಲ. ರಾಮಾನುಜ, ಆನಂದತೀರ್ಥ- ಇವರ ಭಾಷ್ಯಗಳಲ್ಲಿದೆ.

**ಯಸ್ಯ ಚಿತ್ತಂ ನಿರ್ವಿಷಯಂ ಹೃದಯಂ ಯಸ್ಯ ಶೀತಲಮ್ ।**
**ತಸ್ಯ ಮಿತ್ರಂ ಜಗತ್ಸರ್ವಂ ತಸ್ಯ ಮುಕ್ತಿಃ ಕರಸ್ಥಿತಾ ॥ ೩೭೩ ॥**

೩೭೩. ಯಾವನ ಚಿತ್ತವು ವಿಷಯಗಳನ್ನು ಬಿಟ್ಟಿರುವದೋ ಯಾವಾತನ ಹೃದಯವು ಶೀತಲವಾಗಿರುವದೋ ಅವನಿಗೆ ಜಗತ್ತೆಲ್ಲವೂ ಮಿತ್ರನಾಗಿರುವದು, ಅವನಿಗೆ ಮುಕ್ತಿಯು ಕೈಗೆ ಬಂದಂತೆಯೇ.

**ಹಿತಪರಿಮಿತಭೋಜೀ ನಿತ್ಯಮೇಕಾನ್ತಸೇವೀ**
**ಸಕೃದುಚಿತಹಿತೋಕ್ತಿಃ ಸ್ವಲ್ಪನಿದ್ರಾವಿಹಾರಃ ।**
**ಅನುನಿಯಮನಶೀಲೋ ಯೋ ಭಜತ್ಯುಕ್ತಕಾಲೇ**
**ಸ ಲಭತ ಇಹ ಶೀಘ್ರಂ ಸಾಧು ಚಿತ್ತಪ್ರಸಾದಮ್ ॥ ೩೭೪ ॥**

೩೭೪. ಹಿತವಾಗಿ ಮಿತವಾಗಿ ಭುಂಜಿಸುವಾತನೂ ಯಾವಾಗಲೂ ಏಕಾಂತ ಪ್ರದೇಶದಲ್ಲಿರುವಾತನೂ ಒಂದೊಂದು ಸಲವೇ (?) ಉಚಿತವಾದ ಹಿತವಾದ ಮಾತನ್ನಾಡುವವನೂ ಸ್ವಲ್ಪವೇ ನಿದ್ರಾವಿಹಾರಗಳುಳ್ಳವನೂ ಬಿಡದೆ ನಿಯಮಗಳನ್ನನುಸರಿಸುವವನೂ (?) ಯಾವನು ಶಾಸ್ತ್ರೋಕ್ತಕಾಲದಲ್ಲಿ (ದೇವರನ್ನು) ಸೇವಿಸುವವನೂ ಆಗಿರುವಾತನು ಇಲ್ಲಿ ಬೇಗನೆ ಚಿತ್ತಪ್ರಸಾದವನ್ನು ಉತ್ತಮರೀತಿಯಲ್ಲಿ ಹೊಂದುವನು.[1]

**ಚಿತ್ತಪ್ರಸಾದೇನ ವಿನಾಽವಗನ್ತುಂ**
**ಬನ್ಧಂ ನ ಶಕ್ನೋತಿ ಪರಾತ್ಮತತ್ತ್ವಮ್ ।**
**ತತ್ತ್ವಾವಗತ್ಯಾ ತು ವಿನಾ ವಿಮುಕ್ತಿ-**
**ರ್ನ ಸಿಧ್ಯತಿ ಬ್ರಹ್ಮಸಹಸ್ರಕೋಟಿಷು ॥ ೩೭೫ ॥**

೩೭೫. ಚಿತ್ತಪ್ರಸಾದವಿಲ್ಲದೆ ಬಂಧವನ್ನಾಗಲಿ ಪರಮಾತ್ಮತತ್ತ್ವವನ್ನಾಗಲಿ ಅರಿತುಕೊಳ್ಳುವದು ಆಗಲಾರದು. ತತ್ತ್ವವನ್ನು ಅರಿತುಕೊಂಡಹೊರತು ಸಾವಿರ ಕೋಟಿ ಬ್ರಹ್ಮಕಲ್ಪಗಳಾದರೂ[2] ಮೋಕ್ಷವು ದೊರಕಲಾರದು.

**ಮನೋಽಪ್ರಸಾದಃ❖ ಪುರುಷಸ್ಯ ಬನ್ಧೋ**
**ಮನಃಪ್ರಸಾದೋ ಭವಬನ್ಧಮುಕ್ತಿಃ ।**
**ಮನಃಪ್ರಸಾದಾಧಿಗಮಾಯ ತಸ್ಮಾ-**
**ನ್ಮನೋನಿರಾಸಂ❖ ವಿದಧೀತ ವಿದ್ವಾನ್ ॥ ೩೭೬ ॥**

1. ಈ ಎರಡು ಶ್ಲೋಕಗಳ ಅರ್ಥವು ಅಷ್ಟು ಹೊಂದಿಕೆಯಾಗಿಲ್ಲ.
2. ವಿವೇಕಚೂಡಾಮಣಿಯಲ್ಲಿ ಅರ್ಥದ ಪ್ರಯೋಗಗಳು ಪ್ರಚುರ.

❖ ಹೀಗೆ ಗುರುತುಮಾಡಿರುವ ಸ್ಥಲದಲ್ಲಿ ಮೂಲದಲ್ಲಿ ಯಾವ ಮಾತಿತ್ತೋ ಗೊತ್ತುಪಡಿಸಲಾಗಿಲ್ಲ; 'ಮನಃಪ್ರಸಾದಃ' ಎಂಬುದನ್ನು 'ಮನೋಽಪ್ರಸಾದಃ' ಎಂದು ತಿದ್ದಿಕೊಂಡಿದೆ.

೩೭೬. ಮನಸ್ಸು ಪ್ರಸನ್ನವಾಗಿಲ್ಲದಿರುವದೇ ಮನುಷ್ಯನಿಗೆ ಬಂಧವು, ಮನಸ್ಸು ಪ್ರಸನ್ನವಾಗಿರುವದೇ ಸಂಸಾರಬಂಧದಿಂದ ಬಿಡುಗಡೆ. ಆದ್ದರಿಂದ ವಿವೇಕಿಯಾದವನು ಮನಸ್ಸಿನ ಪ್ರಸನ್ನತೆಯನ್ನು ಪಡೆದುಕೊಳ್ಳುವದಕ್ಕಾಗಿ ಮನಸ್ಸನ್ನು ದೂರಸರಿಯಿಸಬೇಕು (?)

**ಪಞ್ಚಾನಾಮೇವ ಭೂತಾನಾಂ ರಜೋಂಽಶೇಭ್ಯೋಽಭವನ್ ಕ್ರಮಾತ್ ।**
**ವಾಕ್ಪಾಣಿಪಾದಪಾಯೂಪಸ್ಥಾಃ ಕರ್ಮೇನ್ದ್ರಿಯಾಣ್ಯನು ॥ ೩೭೭ ॥**

೩೭೭. (ಇದೇ) ಐದು ಭೂತಗಳ ರಜೋಂಶದಿಂದ ಕ್ರಮವಾಗಿ ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ– ಎಂಬ ಕರ್ಮೇಂದ್ರಿಯಗಳು ಆಗಿರುತ್ತವೆ.

**ಸಮಸ್ತೇಭ್ಯೋ ರಜೋಂಶೇಭ್ಯೋ ವ್ಯೋಮಾದೀನಾಂ ಕ್ರಿಯಾತ್ಮಕಾಃ ।**
**ಪ್ರಾಣಾದಯಃ ಸಮುತ್ಪನ್ನಾಃ ಪಞ್ಚಾಪ್ಯಾನ್ತರವಾಯವಃ ॥ ೩೭೮ ॥**

೩೭೮. ಒಟ್ಟುಸೇರಿದ ಆಕಾಶಾದಿ(ಭೂತಗಳ) ರಜೋಂಶದಿಂದ[1] ಪ್ರಾಣವೇ ಮುಂತಾದ ಆಧ್ಯಾತ್ಮಿಕವಾಯುಗಳು ಉಂಟಾಗಿವೆ.

**ಪ್ರಾಣಃ ಪ್ರಾಗ್ಗಮನೇನ ಸ್ಯಾದಪಾನೋಽವಾಗ್ಗಮನೇನ ಚ ।**
**ವ್ಯಾನಸ್ತು ವಿಷ್ವಗ್ಗಮನಾದುತ್ಕ್ರಾನ್ತ್ಯೋದಾನ ಇಷ್ಯತೇ ॥ ೩೭೯ ॥**
**ಅಶಿತಾನ್ನರಸಾದೀನಾಂ ಸಮೀಕರಣಧರ್ಮತಃ ।**
**ಸಮಾನ ಇತ್ಯಭಿಪ್ರೇತೋ ವಾಯುರ್ಯಸ್ತೇಷು ಪಞ್ಚಮಃ ॥ ೩೮೦ ॥**

೩೭೯–೩೮೦. ಮುಂದಕ್ಕೆ ಹೋಗುವದರಿಂದ **ಪ್ರಾಣ**ವಾಗುವದು. ಕೆಳಕ್ಕೆ ಹೋಗುವದರಿಂದ **ಅಪಾನವು** ; ಎಲ್ಲಾ ಕಡೆಗೂ ಸಂಚರಿಸುವದರಿಂದ **ವ್ಯಾನವು;** (ಸಾಯುವ ಕಾಲದಲ್ಲಿ) ಮೇಲಕ್ಕೇರುವದರಿಂದ **ಉದಾನ**ವೆನಿಸುವದು. ಈ (ವಾಯುಗಳಲ್ಲಿ) ಐದನೆಯದು ಉಂಡ ಅನ್ನದ ರಸವೇ ಮುಂತಾದವುಗಳನ್ನು ಸಮಗೊಳಿಸುವದರಿಂದ **ಸಮಾನ**ವೆನಿಸುತ್ತದೆ.

**ಕ್ರಿಯೈವ ದೃಶ್ಯತೇ[2] ಪ್ರಾಯಃ ಪ್ರಾಣಕರ್ಮೇಂದ್ರಿಯೇಷ್ವಲಮ್ ।**
**ತೇಷಾಂ ರಜೋಂಶೇಭ್ಯೋ ಜನಿರಙ್ಗೀಕೃತಾ ಬುಧೈಃ ॥ ೩೮೧ ॥**

---

1. ಒಂದೊಂದು ಸತ್ತ್ವಗುಣದಂಶಗಳಿಂದ ಜ್ಞಾನೇಂದ್ರಿಯಗಳೂ ಒಟ್ಟುಗೂಡಿದ ಸತ್ತ್ವಗುಣದಂಶಗಳಿಂದ ಮನಸ್ಸೂ ಆಗಿರುವಂತೆ ರಜೋಂಶಗಳಿಂದ ಕರ್ಮೇಂದ್ರಿಯಗಳೂ ಒಟ್ಟುಗೂಡಿದ ರಜೋಂಶಗಳಿಂದ ಆಧ್ಯಾತ್ಮಿಕಪ್ರಾಣಗಳೂ ಉಂಟಾಗಿರುತ್ತವೆ ಎಂದು ಅಭಿಪ್ರಾಯ. ಇದು ವೇ. ಸಾರವನ್ನನುಸರಿಸಿ ಬರೆದದ್ದು.

2. 'ದಿಶ್ಯತೇ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

೩೮೧. ಪ್ರಾಣಗಳಲ್ಲಿಯೂ ಕರ್ಮೇಂದ್ರಿಯಗಳಲ್ಲಿಯೂ ಕ್ರಿಯೆಯೇ ಬಹಳವಾಗಿ ಕಾಣಿಸುತ್ತದೆ; ಆದ್ದರಿಂದ ಅವುಗಳಿಗೆ (ಭೂತಗಳ) ರಜೋಂಶದಿಂದ ಜನ್ಮವಾಗುವದೆಂದು ವಿದ್ವಾಂಸರು ಒಪ್ಪಿರುತ್ತಾರೆ.

**ರಾಜಸೀಂ ತು ಕ್ರಿಯಾಶಕ್ತಿಂ ತಮಃಶಕ್ತಿಂ ಜಡಾತ್ಮಿಕಾಮ್ ।**
**ಪ್ರಕಾಶರೂಪಿಣೀಂ ಸತ್ತ್ವಶಕ್ತಿಂ ಪ್ರಾಹುರ್ಮಹರ್ಷಯಃ ॥ ೩೮೨ ॥**

೩೮೨. ಕ್ರಿಯಾಶಕ್ತಿಯು ರಜಸ್ಸಿನದು, ಜಡರೂಪವಾದದ್ದು ತಮಸ್ಸಿನ ಶಕ್ತಿ, ಪ್ರಕಾಶರೂಪವಾಗಿರುವದು ಸತ್ತ್ವಶಕ್ತಿ–ಎಂದು ಮಹರ್ಷಿಗಳು ಹೇಳುವರು.[1]

**ಏತೇ ಪ್ರಾಣಾದಯಃ ಪಞ್ಚ ಪಞ್ಚಕರ್ಮೇನ್ದ್ರಿಯೈಃ ಸಹ ।**
**ಭವೇತ್ಪ್ರಾಣಮಯಃ ಕೋಶಃ ಸ್ಥೂಲೋ ಯೇನೈವ ಚೇಷ್ಟತೇ ॥೩೮೩॥**

೩೮೩. ಈ ಪ್ರಾಣವೇ ಮುಂತಾದ ಐದೂ ಐದು ಕರ್ಮೇಂದ್ರಿಯಗಳೊಡನೆ (ಸೇರಿ) **ಪ್ರಾಣಮಯಕೋಶ**ವಾಗುವದು, ಅದರಿಂದಲೇ ಸ್ಥೂಲದೇಹವು ವ್ಯಾಪಾರ ಮಾಡುತ್ತಿರುವದು.

**ಯದ್ಯನ್ನಿಷ್ಪಾದ್ಯತೇ ಕರ್ಮ ಪುಣ್ಯಂ ವಾ ಪಾಪಮೇವ ವಾ ।**
**ವಾಗಾದಿಭಿಶ್ಚ ವಪುಷಾ ತತ್ಪ್ರಾಣಮಯಕರ್ತೃಕಮ್ ॥ ೩೮೪ ॥**
**ವಾಯುನೋಚ್ಚಾಲಿತೋ ವೃಕ್ಷೋ ನಾನಾರೂಪೇಣ ಚೇಷ್ಟತೇ ।**
**ತಸ್ಮಿನ್ ವಿನಿಶ್ಚಲೇ ಸೋಽಪಿ ನಿಶ್ಚಲಃ ಸ್ಯಾದ್ಯಥಾ ತಥಾ ॥ ೩೮೫ ॥**
**ಪ್ರಾಣಕರ್ಮೇನ್ದ್ರಿಯೈರ್ದೇಹಃ ಪ್ರೇರ್ಯಮಾಣಃ ಪ್ರವರ್ತತೇ ।**
**ನಾನಾಕ್ರಿಯಾಸು ಸರ್ವತ್ರ ವಿಹಿತಾವಿಹಿತಾದಿಷು ॥ ೩೮೬ ॥**

೩೮೪–೩೮೬. ವಾಗಾದಿಗಳಿಂದಲೂ ಶರೀರದಿಂದಲೂ ಯಾವಯಾವ ಪುಣ್ಯ ಅಥವಾ ಪಾಪಕರ್ಮವು ಉಂಟಾಗುವದೋ ಅದೆಲ್ಲ ಪ್ರಾಣಮಯನು ಮಾಡಿದ್ದು. ಗಾಳಿಯು ಅಲುಗಾಡಿಸಿದ ಮರವು ಹೇಗೆ ಬಗೆಬಗೆಯ ವ್ಯಾಪಾರವನ್ನು ಮಾಡುವದೋ ಅದು ಸುಮ್ಮನಾದರೆ ತಾನೂ ಹೇಗೆ ಸುಮ್ಮನಾಗುವದೋ ಹಾಗೆ ಪ್ರಾಣಗಳು ಮತ್ತು ಕರ್ಮೇಂದ್ರಿಯಗಳು–ಇವುಗಳಿಂದ ಪ್ರೇರಿತವಾಗಿ ದೇಹವು ಬಗೆಬಗೆಯ ವಿಹಿತನಿಷಿದ್ಧ– ಮುಂತಾದ ಕ್ರಿಯೆಗಳಲ್ಲಿ ಯಾವಾಗಲೂ ತೊಡಗುತ್ತಿರುವದು.

**ಕೋಶತ್ರಯಂ ಮಿಲಿತ್ವೈತದ್ವಪುಃ ಸ್ಯಾತ್ಸೂಕ್ಷ್ಮಮಾತ್ಮನಃ ।**
**ಅತಿಸೂಕ್ಷ್ಮತಯಾ ಲೀನಸ್ಯಾತ್ಮನೋ ಗಮಕತ್ವತಃ ॥ ೩೮೭ ॥**
**ಲಿಙ್ಗಮಿತ್ಯುಚ್ಯತೇ ಸ್ಥೂಲಾಪೇಕ್ಷಯಾ ಸೂಕ್ಷ್ಮಮಿಷ್ಯತೇ ॥೩೮೭½॥**

1. ಪ್ರಾಣಮಯಕೋಶವು ಭೂತಗಳ ರಜೋಂಶದಿಂದ ಆಗಿದೆ– ಎಂಬ ಪ್ರಸಂಗದಿಂದ ಮೂರು ಗುಣಗಳ ಕಾರ್ಯವನ್ನು ಇಲ್ಲಿ ಹೇಳಿದೆ. ಇಲ್ಲಿರುವ ವರ್ಣನೆಯೂ ವೇ.ಸಾ. ವನ್ನು ಅನುಸರಿಸಿದೆ.

೩೮೭-೩೮೭½. ಈ ಮೂರು ಕೋಶಗಳೂ[1] ಸೇರಿದರೆ ಆತ್ಮನಿಗೆ **ಸೂಕ್ಷ್ಮ ಶರೀರ**ವಾಗುವದು. ಅತಿಸೂಕ್ಷ್ಮವಾಗಿರುವದರಿಂದ ಲೀನವಾಗಿರುವ (ಕಾಣದೆ ಅಡಗಿರುವ) ಆತ್ಮನಿಗೆ ಗಮಕವಾಗಿ (ಅವನನ್ನು ತಿಳಿಸಿಕೊಡತಕ್ಕದ್ದಾ)ಗಿರುವದರಿಂದ **ಲಿಂಗ**ವೆನಿಸುತ್ತದೆ ; ಸ್ಥೂಲಶರೀರದ ಹೋಲಿಕೆಯಿಂದ ಸೂಕ್ಷ್ಮವೆನಿಸಿರುತ್ತದೆ.

**ಸರ್ವಂ ಲಿಙ್ಗವಪುರ್ಜಾತಮೇಕಧೀವಿಷಯತ್ವತಃ ।**
**ಸಮಷ್ಟಿಃ ಸ್ಯಾತ್ತರುಗಣಃ ಸಾಮಾನ್ಯೇನ ವನಂ ಯಥಾ ॥ ೩೮೮ ॥**

೩೮೮. ಎಲ್ಲಾ ಲಿಂಗಶರೀರಗಳ ಒಟ್ಟು ಒಂದೆಂಬ ಬುದ್ಧಿಗೆ ವಿಷಯವಾಗಿರುವದರಿಂದ- ಮರಗಳ ಗುಂಪು ಸಾಮಾನ್ಯವಾಗಿ 'ವನ'ವೆನಿಸಿರುವಂತೆ- **ಸಮಷ್ಟಿ**ಯೆನಿಸುವದು.

**ಏತತ್ಸಮಷ್ಟ್ಯುಪಹಿತಂ ಚೈತನ್ಯಂ ಸಫಲಂ ಜಗುಃ ।**
**ಹಿರಣ್ಯಗರ್ಭಃ ಸೂತ್ರಾತ್ಮಾ ಪ್ರಾಣ ಇತ್ಯಪಿ ಪಣ್ಡಿತಾಃ ॥ ೩೮೯ ॥**

೩೮೯. ಈ ಸಮಷ್ಟ್ಯುಪಾಧಿಯುಳ್ಳ ಸಾಭಾಸಚೈತನ್ಯವನ್ನು '**ಹಿರಣ್ಯಗರ್ಭ**' ಎಂದೂ '**ಸೂತ್ರಾತ್ಮ**', '**ಪ್ರಾಣ**' ಎಂದೂ ಪಂಡಿತರು ಕರೆಯುತ್ತಾರೆ.[2]

**ಹಿರಣ್ಮಯೇ ಬುದ್ಧಿಗರ್ಭೇ ಪ್ರಚಕಾಸ್ತಿ ಹಿರಣ್ಯವತ್ ।**
**ಹಿರಣ್ಯಗರ್ಭ ಇತ್ಯಸ್ಯ ವ್ಯಪದೇಶಸ್ತತೋ ಮತಃ ॥ ೩೯೦ ॥**
**ಸಮಸ್ತಲಿಙ್ಗದೇಹೇಷು ಸೂತ್ರವನ್ಮಣಿಪಙ್ಕ್ತಿಷು ।**
**ವ್ಯಾಪ್ಯ ಸ್ಥಿತತ್ವಾತ್ ಸೂತ್ರಾತ್ಮಾ ಪ್ರಾಣನಾತ್ ಪ್ರಾಣ ಉಚ್ಯತೇ ॥**

೩೯೦-೩೯೧. ಚಿನ್ನದಂತೆ ಹೊಳೆಯುವ ಬುದ್ಧಿಯೊಳಗೆ ಚಿನ್ನದಂತೆ ಹೊಳೆಯುತ್ತಾನೆ. ಆದ್ದರಿಂದ **ಹಿರಣ್ಯಗರ್ಭನು** ಎಂದು ಇವನಿಗೆ ಹೆಸರೆಂದು (ಬಲ್ಲವರು) ಒಪ್ಪಿರುತ್ತಾರೆ. ಸಮಸ್ತ ಲಿಂಗದೇಹಗಳಲ್ಲಿಯೂ- ರತ್ನಗಳ ಸಾಲಿನಲ್ಲಿ ದಾರದಂತೆ ಹಬ್ಬಿಕೊಂಡು ಇರುವದರಿಂದ **ಸೂತ್ರಾತ್ಮ**ನೆಂದೂ ಪ್ರಾಣನ(ಬದುಕಿಸುವ) ಕರ್ಮವನ್ನು ಮಾಡುತ್ತಿರುವದರಿಂದ **ಪ್ರಾಣ**ನೆಂದೂ ಎನಿಸಿಕೊಳ್ಳುತ್ತಾನೆ.

**ನೈಕಧೀವಿಷಯತ್ವೇನ ಲಿಙ್ಗಂ ವ್ಯಷ್ಟಿರ್ಭವತ್ಯಥ[3] । ॥ ೩೯೨ ॥**
**ಯದೇತದ್ ವ್ಯಷ್ಟ್ಯುಪಹಿತಂ ಚಿದಾಭಾಸಸಮನ್ವಿತಮ್ ।**
**ಚೈತನ್ಯಂ ತೈಜಸ ಇತಿ ನಿಗದನ್ತಿ ಮನೀಷಿಣಃ ॥ ೩೯೩ ॥**

---

1. ಹೀಗೆಂದು ವೇ. ಸಾ. ಪು. ೬೨ ರಲ್ಲಿದೆ. 2. ವೇ. ಸಾ. ಪು. ೬೩.
3. ಹಿಂದೆ ೩೮೭½ರಲ್ಲಿರುವ ಅರ್ಧಶ್ಲೋಕವನ್ನು ಸೇರಿಸಿ ಒಂದೆಂದು ಲೆಕ್ಕಮಾಡಿಕೊಂಡಿದೆ.

೩೯೧–೩೯೨. ಅನೇಕವಾದ (ಬಿಡಿಬಿಡಿಯಾಗಿರುವ) ಬುದ್ಧಿಗೆ ವಿಷಯವಾದ್ದರಿಂದ ಲಿಂಗವು ವ್ಯಷ್ಟಿಯಾಗುವದು. ಇನ್ನು ಈ ವ್ಯಷ್ಟಿಲಿಂಗದಿಂದುಪಹಿತವಾದ ಚಿದಾಭಾಸಸಹಿತವಾದ ಚೈತನ್ಯವಿರುವದಷ್ಟೆ, ಇದನ್ನು ಬಲ್ಲವರು **ತೈಜಸ**ನೆನ್ನುವರು.

**ತೇಜೋಮಯಾನ್ತಃಕರಣೋಪಾಧಿತ್ವೇನೈವ ತೈಜಸಃ || ೩೯೩ ||**
**ಸ್ಥೂಲಾತ್ ಸೂಕ್ಷ್ಮತಯಾ ವ್ಯಷ್ಟಿರಸ್ಯ ಸೂಕ್ಷ್ಮವಪುರ್ಮತಮ್ |**
**ಅಸ್ಯ ಜಾಗರಸಂಸ್ಕಾರಮಯತ್ವಾದ್ ವಪುರುಚ್ಯತೇ || ೩೯೪ ||**

೩೯೩–೩೯೪. ತೇಜೋಮಯವಾದ ಅಂತಃಕರಣವೇ ಇವನಿಗೆ ಉಪಾಧಿಯಾಗಿರುವದರಿಂದ ಇವನು ತೈಜಸನು.[1] ಸ್ಥೂಲಕ್ಕಿಂತಲೂ ಸೂಕ್ಷ್ಮವಾಗಿರುವದರಿಂದ ವ್ಯಷ್ಟಿ(ಲಿಂಗವು) ಇವನಿಗೆ ಸೂಕ್ಷ್ಮಶರೀರವೆನಿಸುತ್ತದೆ. ಇವನ ಎಚ್ಚರದ ಸಂಸ್ಕಾರದಿಂದಾಗಿರುವದರಿಂದ ಇದು **ಶರೀರ**ವೆನಿಸುತ್ತದೆ.[2]

**ಸ್ವಪ್ನೇ ಜಾಗರಕಾಲೀನವಾಸನಾಪರಿಕಲ್ಪಿತಾನ್ |**
**ತೈಜಸೋ ವಿಷಯಾನ್ ಭುಙ್ಕ್ತೇ ಸೂಕ್ಷ್ಮಾರ್ಥಾನ್ ಸೂಕ್ಷ್ಮವೃತ್ತಿಭಿಃ**

೩೯೫. ಸ್ವಪ್ನದಲ್ಲಿ ಎಚ್ಚರಕಾಲದ ವಾಸನೆಗಳಿಂದ ಕಲ್ಪಿತವಾದ ವಿಷಯಗಳನ್ನೂ ಸೂಕ್ಷ್ಮಾರ್ಥಗಳನ್ನೂ– ಸೂಕ್ಷ್ಮವೃತ್ತಿಗಳಿಂದ[3] ತೈಜಸನು ಅನುಭವಿಸುವನು.

**ಸಮಷ್ಟೇರಪಿ ಚ ವ್ಯಷ್ಟೇಃ ಸಾಮಾನ್ಯೇನೈವ ಪೂರ್ವವತ್ |**
**ಅಭೇದ ಏವ ಜ್ಞಾತವ್ಯೋ ಜಾತ್ಯೈಕತ್ವೇ ಕುತೋ ಭಿದಾ || ೩೯೬ ||**

೩೯೬. ಸಮಷ್ಟಿ(ಲಿಂಗ)ಕ್ಕೂ ವ್ಯಷ್ಟಿ(ಲಿಂಗ)ಕ್ಕೂ ಒಂದೇ ಜಾತಿಯಿರುವದರಿಂದಲೇ ಹಿಂದಿನಂತೆ[4] ಅಭೇದವನ್ನೇ ಅರಿಯಬೇಕು. ಜಾತಿಯು ಒಂದೇ ಆಗಿರುವಲ್ಲಿ ಭೇದವೆಲ್ಲಿಯದು ?

---

1. "ವಿಷಯಶೂನ್ಯಾಯಾಂ ಪ್ರಜ್ಞಾಯಾಂ ಕೇವಲಪ್ರಕಾಶಸ್ವರೂಪಾಯಾಂ ವಿಷಯಿತ್ವೇನ ಭವತೀತಿ ತೈಜಸಃ" ವಿಷಯವಿಲ್ಲದ ಕೇವಲ ಪ್ರಕಾಶರೂಪವಾದ ಪ್ರಜ್ಞೆಗೆ ವಿಷಯಿಯಾಗಿರುತ್ತಾನಾದ್ದರಿಂದ ತೈಜಸನು ಎಂದು ಮಾಂಡೂಕ್ಯಭಾಷ್ಯ, ಆ ಭಾಷ್ಯಕ್ಕೂ ಇದಕ್ಕೂ ತೀರ ವೈಲಕ್ಷಣ್ಯವಿದೆ ಎಂಬುದು ಸ್ಪಷ್ಟ. ಪ್ರಕೃತಗ್ರಂಥದಲ್ಲಿರುವ ತೈಜಸಶಬ್ದದ ನಿರ್ವಚನವು ವೇದಾಂತಸಾರದಲ್ಲಿಯೂ ಇಲ್ಲ.

2. 'ವಪುರುಚ್ಯತೇ' ಎಂಬುದರ ಕನ್ನಡವಿದು ; ಆದರೆ ಇದು ಅರ್ಥಕ್ಕೆ ಹೊಂದುವದಿಲ್ಲ. ವೇ. ಸಾ. (ಪು. ೬೫)ರಲ್ಲಿರುವಂತೆ 'ಸ್ವಪ್ನ ಉಚ್ಯತೇ' ಎಂದಿರಬೇಕೆಂದು ತೋರುತ್ತದೆ.

3. ಮನಸ್ಸಿನ ವೃತ್ತಿಗಳಿಂದ, ಹಿಂದೆ (೩೧೬) ಹೇಳಿರುವಂತೆ ಅಜ್ಞಾನವೃತ್ತಿಗಳಿಂದಲ್ಲ.

4. ೩೨೭ (?) ರಲ್ಲಿ ಹೇಳಿರುವಂತೆ.

**ದ್ವಯೋರುಪಾಧ್ಯೋರೇಕತ್ವೇ ತಯೋರಪ್ಯಭಿಮಾನಿನೋಃ ।**
**ಸೂತ್ರಾತ್ಮನಸ್ತೈಜಸಸ್ಯಾಪ್ಯಭೇದಃ ಪೂರ್ವವನ್ಮತಃ ॥ ೩೯೭ ॥**

೩೯೭. ಎರಡು ಉಪಾಧಿಗಳಿಗೂ ಏಕತ್ವವಿರುವದರಿಂದ ಅವುಗಳ ಅಭಿಮಾನಿಗಳಾದ ಸೂತ್ರ ಮತ್ತು ತೈಜಸ- ಇಬ್ಬರಿಗೂ ಹಿಂದಿನಂತೆ[1] ಅಭೇದವನ್ನೇ ಅರಿಯಬೇಕು.

## ಸ್ಥೂಲಶರೀರ

**ಏವಂ ಸೂಕ್ಷ್ಮಪ್ರಪಞ್ಚಸ್ಯ ಪ್ರಕಾರಃ ಶಾಸ್ತ್ರಸಂಮತಃ ।**
**ಅಥ ಸ್ಥೂಲಪ್ರಪಞ್ಚಸ್ಯ ಪ್ರಕಾರಃ ಕಥ್ಯತೇ ಶೃಣು ॥ ೩೯೮ ॥**

೩೯೮. ಹೀಗೆಯೇ ಸೂಕ್ಷ್ಮಪ್ರಪಂಚದ ಪ್ರಕಾರವು ಶಾಸ್ತ್ರಸಂಮತವಾದದ್ದು. ಇನ್ನು ಸ್ಥೂಲಪ್ರಪಂಚದ ಪ್ರಕಾರವನ್ನು ಹೇಳಲಾಗುತ್ತದೆ, ಕೇಳು :

**ತಾನ್ಯೇವ ಸೂಕ್ಷ್ಮಭೂತಾನಿ ವ್ಯೋಮಾದೀನಿ ಪರಸ್ಪರಮ್ ।**
**ಪಞ್ಚೀಕೃತಾನಿ ಸ್ಥೂಲಾನಿ ಭವನ್ತಿ ಶೃಣು ತತ್ಕ್ರಮಮ್ ॥ ೩೯೯ ॥**

೩೯೯. ಅದೇ ಆಕಾಶಾದಿಸೂಕ್ಷ್ಮಭೂತಗಳೇ ಒಂದಕ್ಕೊಂದು (ಸೇರಿ) ಪಂಚೀಕೃತವಾದರೆ **ಸ್ಥೂಲ**(ಭೂತ)ಗಳಾಗುವವು. ಅದರ ಕ್ರಮವನ್ನು ಕೇಳು :

**ಖಾದೀನಾಂ ಭೂತಮೇಕೈಕಂ ಸಮಮೇವ ದ್ವಿಧಾ ದ್ವಿಧಾ ।**
**ವಿಭಜ್ಯ ಭಾಗಂ ತತ್ರಾದ್ಯಂ ತ್ಯಕ್ತ್ವಾ ಭಾಗಂ ದ್ವಿತೀಯಕಮ್ ॥೪೦೦॥**
**ಚತುರ್ಧಾ ಸುವಿಭಜ್ಯಾಥ ತಮೇಕೈಕಂ ವಿನಿಕ್ಷಿಪೇತ್ ।**
**ಚತುರ್ಣಾಂ ಪ್ರಥಮೇ ಭಾಗೇ ಕ್ರಮೇಣ ಸ್ವಾರ್ಧಮನ್ತರಾ ॥ ೪೦೧ ॥**
**ತತೋ ವ್ಯೋಮಾದಿಭೂತಾನಾಂ ಭಾಗಾಃ ಪಞ್ಚ ಭವನ್ತಿ ತೇ ।**
**ಸ್ವಸ್ವಾರ್ಧಭಾಗೇನಾನ್ಯೇಭ್ಯಃ ಪ್ರಾಪ್ತಂ ಭಾಗಚತುಷ್ಟಯಮ್ ।**
**ಸಂಯೋಜ್ಯ ಸ್ಥೂಲತಾಂ ಯಾನ್ತಿ ವ್ಯೋಮಾದೀನಿ ಯಥಾಕ್ರಮಮ್[2] ॥**

೪೦೦-೪೦೨. ಆಕಾಶಾದಿಗಳೊಳಗೆ ಒಂದೊಂದು ಭೂತವನ್ನು ಸಮವಾಗಿ ಎರಡೆರಡು ಪಾಲುಮಾಡಿ, ಅವುಗಳೊಳಗೆ ಮೊದಲನೆಯದನ್ನು ಬಿಟ್ಟು, ಎರಡನೆಯ ಭಾಗವನ್ನು ನಾಲ್ಕುಪಾಲಾಗಿ ಸರಿಯಾಗಿ ವಿಂಗಡಿಸಿ, ಆ ನಾಲ್ಕರಲ್ಲಿ ಒಂದೊಂದನ್ನು ಆಯಾ ಅರ್ಧಪಾಲು ಬಿಟ್ಟುಬಂದ ಉಳಿದ ನಾಲ್ಕರ ಪ್ರಥಮ(ಅರ್ಧ)ಭಾಗದಲ್ಲಿ ಕ್ರಮವಾಗಿ ಸೇರಿಸುತ್ತಾಹೋಗಬೇಕು. ಅದರಿಂದ ಆಕಾಶಾದಿಭೂತಗಳಿಗೆ ಐದು

1. ೩೨೭ (?) ರಲ್ಲಿ ಹೇಳಿರುವಂತೆ.
2. ಹಿಂದಿನ ೩೯೨೧ತ್ತಗೆ ಸೇರಿದರೆ ಒಂದು ಶ್ಲೋಕವಾಗುತ್ತದೆ.

ಭಾಗಗಳಾಗುವವು ; ಮಿಕ್ಕ ಭೂತಗಳಿಂದ ತಂದ ತಮ್ಮತಮ್ಮ ಅರ್ಧಭಾಗದೊಂದಿಗೆ ಸೇರಿಸಿದರೆ ಈ ಕ್ರಮದಿಂದ ಆಕಾಶಾದಿಗಳು ಸ್ಥೂಲಭೂತಗಳಾಗುವವು.[1]

**ಅಮುಷ್ಯ ಪಞ್ಚೀಕರಣಸ್ಯಾಪ್ರಾಮಾಣ್ಯಂ ನ ಶಙ್ಕ್ಯತಾಮ್ ।**
**ಉಪಲಕ್ಷಣಮಸ್ಯಾಪಿ ತತ್ತ್ರಿವೃತ್ಕರಣಶ್ರುತಿಃ ॥ ೪೦೩ ॥**
**ಪಞ್ಚಾನಾಮಪಿ ಭೂತಾನಾಂ ಶ್ರೂಯತೇಽನ್ಯತ್ರ ಸಂಭವಃ ।**
**ತತಃ ಪ್ರಾಮಾಣಿಕಂ ಪಞ್ಚೀಕರಣಂ ಮನ್ಯತಾಂ ಬುಧೈಃ ॥ ೪೦೪ ॥**
**ಪ್ರತ್ಯಕ್ಷಾದಿವಿರೋಧಃ ಸ್ಯಾದನ್ಯಥಾ ಕ್ರಿಯತೇ ಯದಿ ॥೪೦೪½॥**

೪೦೩–೪೦೪½. ಈ ಪಂಚೀಕರಣವು ಅಪ್ರಾಮಾಣಿಕವೆಂದು ಶಂಕಿಸಬಾರದು. ಏಕೆಂದರೆ ಇದಕ್ಕೆ ತ್ರಿವೃತ್ಕರಣವನ್ನು ಹೇಳಿದ (ಛಾಂ. ೬–೩–೩) ಶ್ರುತಿಯು ಇದಕ್ಕೆ ಉಪಲಕ್ಷಣವು.[2] ಐದು ಭೂತಗಳಿಗೂ ಉತ್ಪತ್ತಿಯುಂಟೆಂದು ಇನ್ನೊಂದು (ತೈ.) ಶ್ರುತಿಯಲ್ಲಿ ಹೇಳಿರುತ್ತದೆ. ಆದ್ದರಿಂದ ಪಂಚೀಕರಣವು ಪ್ರಾಮಾಣಿಕವೆಂದು ವಿವೇಕಿಗಳು ತಿಳಿಯಬೇಕು. ಹಾಗೆ ಒಪ್ಪದೆಹೋದರೆ ಪ್ರತ್ಯಕ್ಷಾದಿ(ಪ್ರಮಾಣಗಳಿಗೆ) ವಿರೋಧವಾದೀತು.

**ಆಕಾಶವಾಯ್ವೋರ್ಧರ್ಮಸ್ತು ವಹ್ನ್ಯಾದಾವುಪಲಭ್ಯತೇ ।**
**ಯಥಾ ತಥಾಕಾಶವಾಯ್ವೋರ್ನಾಗ್ನ್ಯಾದೇರ್ಧರ್ಮ ಈಕ್ಷ್ಯತೇ ॥೪೦೫॥**
**ಅತೋಽಪ್ರಾಮಾಣಿಕಮಿತಿ ನ ಕಿಞ್ಚಿದಪಿ ಚಿನ್ತ್ಯತಾಮ್ ।**
**ಖಾಂಶವ್ಯಾಪ್ತಿಶ್ಚ ಖವ್ಯಾಪ್ತಿರ್ವಿದ್ಯತೇ ಪಾವಕಾದಿಷು ॥ ೪೦೬ ॥**
**ತೇನೋಪಲಭ್ಯತೇ ಶಬ್ದಃ ಕಾರಣಸ್ಯಾತಿರೇಕತಃ ।**
**ತಥಾ ನಭಸ್ವತೋ ಧರ್ಮೋಽಪ್ಯಗ್ನ್ಯಾದಾವುಪಲಭ್ಯತೇ ॥ ೪೦೭ ॥**
**ನ ತಥಾ ವಿದ್ಯತೇ ವ್ಯಾಪ್ತಿರ್ವಹ್ನ್ಯಾದೇಃ ಖನಭಸ್ವತೋಃ ।**
**ಸೂಕ್ಷ್ಮತ್ವಾದಂಶಕವ್ಯಾಪ್ತೇಸ್ತದ್ಧರ್ಮೋ ನೋಪಲಭ್ಯತೇ ॥ ೪೦೮ ॥**
**ಕಾರಣಸ್ಯಾನುರೂಪ್ಯೇಣ ಕಾರ್ಯಂ ಸರ್ವತ್ರ ದೃಶ್ಯತೇ ।**
**ತಸ್ಮಾತ್ ಪ್ರಾಮಾಣ್ಯಮೇಷ್ಟವ್ಯಂ ಬುಧೈಃ ಪಞ್ಚೀಕೃತೇರಪಿ ॥ ೪೦೯ ॥**

೪೦೫–೪೦೯. ಆಕಾಶವಾಯುಗಳ, ಧರ್ಮವು ಅಗ್ನಿ– ಮುಂತಾದ (ಭೂತ) ಗಳಲ್ಲಿ ಹೇಗೆ ಕಾಣಬರುತ್ತದೆಯೋ, ಹಾಗೆ ಆಕಾಶವಾಯುಗಳಲ್ಲಿ ಅಗ್ನಿಯೇ ಮುಂತಾದವುಗಳ ಧರ್ಮವು ಕಾಣಬರುವದಿಲ್ಲ. ಆದ್ದರಿಂದ (ಇದು) ಪ್ರಾಮಾಣಿಕವಲ್ಲ ಎಂದು ಸ್ವಲ್ಪವೂ ಎಣಿಸಬಾರದು. ಆಕಾಶದ ಅಂಶದ ವ್ಯಾಪ್ತಿಯೇ ಆಕಾಶದ ವ್ಯಾಪ್ತಿಯು(?), ಅಗ್ನ್ಯಾದಿಭೂತಗಳಲ್ಲಿ ಅದು ಇದ್ದೇಇದೆ ; ಆದ್ದರಿಂದಲೇ ಶಬ್ದವು

1. ಈ ಭಾಗದ ಅರ್ಥವು ವೇ. ಸಾ.ಕ್ಕೆ ಹೋಲಿಸಿದಾಗ ಸ್ಫುಟವಾಗುವದು. ಈ ಬಗೆಯ ಪಂಚೀಕರಣವಿವರಣವು ಭಾಷ್ಯದಲ್ಲಿಲ್ಲ.

2. ಛಾಂ. ಭಾ. ೬–೪–೪ರ ಭಾಷ್ಯ ಪು. ೬೯ನ್ನು ನೋಡಿ.

ಕಾರಣವಾದ (ಆಕಾಶ)ಕ್ಕಿಂತ ಬೇರೆಯಾಗಿ (ಅಗ್ನ್ಯಾದಿಗಳಲ್ಲಿ) ಕಾಣಬರುತ್ತದೆ. ಹಾಗೆ ಆಕಾಶದ ಧರ್ಮವೂ ಅಗ್ನಿಯೇ ಮುಂತಾದವುಗಳಲ್ಲಿ ಕಾಣಬರುತ್ತದೆ. (ಆದರೆ) ಹಾಗೆ ಆಕಾಶವಾಯುಗಳಲ್ಲಿ ಅಗ್ನ್ಯಾದಿ(ಭೂತಗಳ) ಧರ್ಮವು ವ್ಯಾಪಿಸಿಕೊಂಡಿರುವದಿಲ್ಲ. (ಅವುಗಳ) ಅಂಶದ ವ್ಯಾಪ್ತಿಯು ಸೂಕ್ಷ್ಮವಾಗಿರುವದರಿಂದ ಅವುಗಳ ಧರ್ಮವು (ಆಕಾಶವಾಯುಗಳಲ್ಲಿ) ಕಾಣುವದಿಲ್ಲ. ಕಾರಣಕ್ಕೆ ಅನುಗುಣವಾಗಿ ಕಾರ್ಯವು ಎಲ್ಲೆಲ್ಲಿಯೂ ಕಂಡುಬರುತ್ತಿದೆ[1]; ಆದ್ದರಿಂದ **ಪಂಚೀಕರಣಕ್ಕೂ** ವಿವೇಕಿಗಳು ಪ್ರಾಮಾಣ್ಯವನ್ನು ಒಪ್ಪಬೇಕು.

**ಅನೇನೋದ್ಭೂತಗುಣಕಂ ಭೂತಂ ವಕ್ಷ್ಯೇಽವಧಾರಯ ।**
**ಶಬ್ದೈಕಗುಣವಾಕಾಶಂ ಶಬ್ದಸ್ಪರ್ಶಗುಣೋಽನಿಲಃ ॥ ೪೧೦ ॥**
**ತೇಜಃ ಶಬ್ದಸ್ಪರ್ಶರೂಪೈರ್ಗುಣವತ್ಕಾರಣಂ ಕ್ರಮಾತ್ ।**
**ಆಪಶ್ಚತುರ್ಗುಣಾಃ ಶಬ್ದಸ್ಪರ್ಶರೂಪರಸೈಃ ಕ್ರಮಾತ್ ॥ ೪೧೧ ॥**
**ಏತೈಶ್ಚತುರ್ಭಿರ್ಗನ್ಧೇನ ಸಹ ಪಞ್ಚಗುಣಾ ಮಹೀ ॥೪೧೨[2]॥**

೪೧೦–೪೧೨. ಈ ಕ್ರಮದಿಂದ[3] ಎದ್ದುಕಾಣುವ ಗುಣವುಳ್ಳ ಭೂತವನ್ನು ಹೇಳುವೆನು. (ಅದನ್ನು ಮನಸ್ಸಿಟ್ಟು ಕೇಳು) ನಿಶ್ಚಯಿಸಿಕೊ. ಆಕಾಶವು ಶಬ್ದವೆಂಬ ಒಂದೇ ಗುಣವುಳ್ಳದ್ದು; ವಾಯುವು ಶಬ್ದಸ್ಪರ್ಶಗುಣಗಳುಳ್ಳದು; ತೇಜಸ್ಸು ಕ್ರಮವಾಗಿ ಶಬ್ದಸ್ಪರ್ಶರೂಪಗಳಿಂದ ಕೂಡಿಕೊಂಡು ಕಾರಣವಾಗಿರುತ್ತದೆ; ಅಪ್ಪು ಕ್ರಮದಿಂದ ಶಬ್ದಸ್ಪರ್ಶರೂಪರಸಗಳಿಂದ (ಕೂಡಿರುತ್ತದೆ): ಈ ನಾಲ್ಕು ಗುಣಗಳೂ ಗಂಧವೂ ಸೇರಿ ಪೃಥ್ವಿಯು ಐದು ಗುಣವುಳ್ಳದ್ದಾಗಿರುತ್ತದೆ.[4]

**ಆಕಾಶಾಂಶತಯಾ ಶ್ರೋತ್ರಂ ಶಬ್ದಂ ಗೃಹ್ಣಾತಿ ತದ್ಗುಣಮ್।**
**ತ್ವಙ್ಮಾರುತಾಂಶಕತಯಾ ಸ್ಪರ್ಶಂ ಗೃಹ್ಣಾತಿ ತದ್ಗುಣಮ್ ॥ ೪೧೩ ॥**

---

1. ಈವರೆಗಿನ ಯುಕ್ತಿಯ ಉದ್ದೇಶವು ಅಷ್ಟು ಸ್ಫುಟವಾಗಿಲ್ಲ. ಆಕಾಶದ ಅಂಶವು ಮುಂದಿನ ಭೂತಗಳಲ್ಲಿ ಎದ್ದುಕಾಣುವಂತೆ ವ್ಯಾಪಿಸಿರುವದರಿಂದ ಅವುಗಳಲ್ಲಿ ಅದರ ಗುಣವು ಕಾಣಿಸುತ್ತದೆ; ಅಗ್ನ್ಯಾದಿಗಳ ಗುಣವು ಆಕಾಶವಾಯುಗಳಲ್ಲಿ ಇಂದ್ರಿಯಕ್ಕೆ ಗೋಚರವಾಗುವಷ್ಟು ಸ್ಥೂಲವಾಗಿಲ್ಲದ್ದರಿಂದ ಅವುಗಳಲ್ಲಿ ಕಾಣಿಸುವದಿಲ್ಲ– ಎಂದು ಒಟ್ಟುತಾತ್ಪರ್ಯವೆಂದು ಕಾಣಿಸುತ್ತದೆ.

2. ಹಿಂದಿನ ೪೦೪ರ ಶ್ಲೋಕಾರ್ಧಕ್ಕೆ ಈ ಅರ್ಧವನ್ನು ಸೇರಿಸಿದರೆ ಒಂದು ಶ್ಲೋಕವಾಯಿತು. 3. ಪಂಚೀಕರಣಕ್ರಮದಿಂದ.

4. ವೇ. ಸಾ.ದಲ್ಲಿ (ಪು. ೬೭) ಪಂಚೀಕೃತವಾದ ಆಯಾ ಶಬ್ದಗಳಲ್ಲಿ ಆಯಾ ಭೂತಗಳು ಹೆಚ್ಚಾಗಿರುವದರಿಂದ 'ಆಕಾಶ' ಮುಂತಾದ ಹೆಸರುಗಳು ಬಂದಿವೆ– ಎಂದು ಇಲ್ಲಿ ಹೇಳಿರುವಂತೆ ಹಿಂದುಹಿಂದಿನ ಭೂತದ ಗುಣಗಳು ಮುಂದಿನ ಭೂತಗಳಲ್ಲಿ ಇರುತ್ತವೆ ಎಂದಿದೆ. (ಪು. ೬೮).

**ತೇಜೋಽಂಶಕತಯಾ ಚಕ್ಷೂ ರೂಪಂ ಗೃಹ್ಣಾತಿ ತದ್ಗುಣಮ್ ।**
**ಅಬಂಶಕತಯಾ ಜಿಹ್ವಾ ರಸಂ ಗೃಹ್ಣಾತಿ ತದ್ಗುಣಮ್ ॥ ೪೧೪ ॥**
**ಭೂಮ್ಯಂಶಕತಯಾ ಘ್ರಾಣಂ ಗನ್ಧಂ ಗೃಹ್ಣಾತಿ ತದ್ಗುಣಮ್ ।**
**ಕರೋತಿ ಖಾಂಶಕತಯಾ ವಾಕ್ಯಬ್ದೋಚ್ಚಾರಣಕ್ರಿಯಾಮ್ ॥ ೪೧೫ ॥**
**ವಾಯ್ವಂಶಕತಯಾ ಪಾದೌ ಗಮನಾದಿಕ್ರಿಯಾಪರೌ ।**
**ತೇಜೋಽಂಶಕತಯಾ ಪಾಣೀ ವಹ್ನ್ಯಾದ್ಯರ್ಚನತತ್ಪರೌ ॥ ೪೧೬ ॥**
**ಜಲಾಂಶಕತಯೋಪಸ್ಥೋ ರೇತೋಮೂತ್ರವಿಸರ್ಗಕೃತ್ ।**
**ಭೂಮ್ಯಂಶಕತಯಾ ಪಾಯುಃ ಕಠಿನಂ ಮಲಮುತ್ಸೃಜೇತ್ ॥ ೪೧೭ ॥**

೪೧೩–೪೧೭. ಶ್ರೋತ್ರವು ಆಕಾಶಾಂಶದಿಂದ ತನ್ನ ಗುಣವಾದ ಶಬ್ದವನ್ನು ಗ್ರಹಿಸುತ್ತದೆ. ತ್ವಗಿಂದ್ರಿಯವು ವಾಯ್ವಂಶವಾಗಿರುವದರಿಂದ ಅದರ ಗುಣವಾದ ಸ್ಪರ್ಶವನ್ನು ಗ್ರಹಿಸುತ್ತದೆ. ಚಕ್ಷುರಿಂದ್ರಿಯವು ತೇಜಸ್ಸಿನ ಅಂಶವಾಗಿರುವದರಿಂದ ತನ್ನ ಗುಣವಾದ ರೂಪವನ್ನು ಗ್ರಹಿಸುತ್ತದೆ. ಜಿಹ್ವೆಯು ಅಪ್ಪಿನ ಅಂಶವಾಗಿರುವ ತನ್ನ ಗುಣವಾದ ರಸವನ್ನು ಗ್ರಹಿಸುತ್ತದೆ. ಘ್ರಾಣವು ಭೂಮಿಯ ಅಂಶವಾಗಿರುವದರಿಂದ ತನ್ನ ಗುಣವಾದ ಗಂಧವನ್ನು ಗ್ರಹಿಸುತ್ತದೆ. ವಾಕ್ಕು ಆಕಾಶದ ಅಂಶವಾಗಿರುವದರಿಂದ[1] ಶಬ್ದವನ್ನು ಉಚ್ಚರಿಸುವ ಕರ್ಮವನ್ನು ಮಾಡುತ್ತದೆ, ವಾಯ್ವಂಶವಾಗಿರುವದರಿಂದ ಪಾದಗಳು ನಡೆಯುವದೇ ಮುಂತಾದ ಕ್ರಿಯೆಗಳನ್ನು ಮಾಡುತ್ತವೆ. ಕೈಗಳು ತೇಜಸ್ಸಿನ ಅಂಶವಾಗಿರುವದರಿಂದ ಅಗ್ನಿಯೇ ಮುಂತಾದದ್ದನ್ನು ಅರ್ಚನೆಮಾಡುವದರಲ್ಲಿ ತೊಡಗಿರುತ್ತವೆ. ಉಪಸ್ಥವು ಜಲಾಂಶವಾದದ್ದರಿಂದ ರೇತಸ್ಸು, ಮೂತ್ರ –ಮುಂತಾದದ್ದನ್ನು ಬಿಡುತ್ತಿರುವದು. ಪಾಯುವು ಪೃಥಿವಿಯ ಅಂಶವಾಗಿರುವದರಿಂದ ಗಟ್ಟಿಯಾದ ಮಲವನ್ನು ಬಿಡುತ್ತದೆ.

**ಶ್ರೋತ್ರಸ್ಯ ದೈವತಂ ದಿಕ್ ಸ್ಯಾತ್ ತ್ವಚೋ ವಾಯುರ್ದೃಶೋ ರವಿಃ।**
**ಜಿಹ್ವಾಯಾ ವರುಣೋ ದೈವಂ ಘ್ರಾಣಸ್ಯ ತ್ವಶ್ವಿನಾವುಭೌ ॥ ೪೧೭ ॥**
**ವಾಚೋಽಗ್ನಿರ್ಹಸ್ತಯೋರಿನ್ದ್ರಃ ಪಾದಯೋಽಸ್ತು ತ್ರಿವಿಕ್ರಮಃ ।**
**ಪಾಯೋರ್ಮೃತ್ಯುರುಪಸ್ಥಸ್ಯ ತ್ವಧಿದೈವಂ ಪ್ರಜಾಪತಿಃ ॥ ೪೧೮ ॥**
**ಮನಸೋ ದೈವತಂ ಚನ್ದ್ರೋ ಬುದ್ಧೇರ್ದೈವಂ ಬೃಹಸ್ಪತಿಃ ।**
**ರುದ್ರಸ್ತ್ವಹಂಕೃತೇರ್ದೈವಂ ಕ್ಷೇತ್ರಜ್ಞಶ್ಚಿತ್ತದೈವತಮ್ ॥ ೪೧೯ ॥**
**ದಿಗಾದ್ಯಾ ದೇವತಾಃ ಸರ್ವಾಃ ಖಾದಿಸತ್ತ್ವಾಂಶಸಂಭವಾಃ ।**
**ಸಂಮಿತಾ ಇನ್ದ್ರಿಯಸ್ಥಾನೇಷ್ವಿನ್ದ್ರಿಯಾಣಾಂ ಸಮನ್ತತಃ ।**
**ನಿಗೃಹ್ಣನ್ತ್ಯನುಗೃಹ್ಣನ್ತಿ ಪ್ರಾಣಿಕರ್ಮಾನುರೂಪತಃ ॥ ೪೨೦ ॥**

---

1. ಆಕಾಶದಿಂದ ವಾಕ್ಕು ಹುಟ್ಟಿತೆಂಬುವಕ್ಕೆ ಆಧಾರವೇನೋ ತಿಳಿಯದು.

೪೧೭–೪೨೦. ಶ್ರೋತ್ರಕ್ಕೆ ದೇವತೆಯು ದಿಕ್ಕಾಗಿರುತ್ತದೆ, ತ್ವಕ್ಕಿಗೆ ವಾಯು, ಚಕ್ಷುಸ್ಸಿಗೆ ಸೂರ್ಯನು, ಜಿಹ್ವೆಗೆ **ವರುಣನು** ಅಧಿದೇವತೆ, ಘ್ರಾಣಕ್ಕೆ ಇಬ್ಬರೂ **ಅಶ್ವಿನೀದೇವತೆ**ಗಳು, ವಾಕ್ಕಿಗೆ **ಅಗ್ನಿ,** ಹಸ್ತಗಳಿಗೆ ಇಂದ್ರ, ಪಾದಗಳೆರಡಕ್ಕೂ ತ್ರಿವಿಕ್ರಮನು, ಪಾಯುವಿಗೆ ಮೃತ್ಯು, ಉಪಸ್ಥಕ್ಕೆ **ಪ್ರಜಾಪತಿ** ಅಧಿದೇವನು. ಮನಸ್ಸಿಗೆ **ಚಂದ್ರನು** ದೇವತೆ, ಬುದ್ಧಿಗೆ **ಬೃಹಸ್ಪತಿಯು** ದೇವತೆ, **ಚಿತ್ತಕ್ಕೆ ಕ್ಷೇತ್ರಜ್ಞ,** ಅಹಂಕಾರಕ್ಕೆ **ರುದ್ರನು** ದೇವತೆ, ಚಿತ್ತಕ್ಕೆ **ಕ್ಷೇತ್ರಜ್ಞ**ನು ದೇವತೆ, ದಿಕ್ಕುಗಳೇ ಮುಂತಾದ ದೇವತೆಗಳೆಲ್ಲರೂ[1] ಆಕಾಶಾದಿಸತ್ತ್ವಾಂಶದಿಂದ ಹುಟ್ಟಿರುತ್ತಾರೆ. ಇಂದ್ರಿಯಗಳ ಸ್ಥಾನಗಳಲ್ಲಿ ಸೇರಿಕೊಂಡು (?) ಇಂದ್ರಿಯಗಳನ್ನು ಪ್ರಾಣಿಗಳ ಕರ್ಮಕ್ಕನುಗುಣವಾಗಿ ಎಲ್ಲಾ ವಿಷಯಗಳಲ್ಲಿಯೂ ನಿಗ್ರಹಿಸುತ್ತಲೂ ಅನುಗ್ರಹಿಸುತ್ತಲೂ ಇರುತ್ತಾರೆ (?)

**ಶರೀರಕರಣಗ್ರಾಮು[2] ಪ್ರಾಣಾಹಮಧಿದೇವತಾಃ ।**
**ಪಞ್ಚೈತೇ ಹೇತವಃ ಪ್ರೋಕ್ತಾ ನಿಷ್ಪತ್ತೌ ಸರ್ವಕರ್ಮಣಾಮ್ ॥೪೨೧॥**

೪೨೧. ಶರೀರ, ಕರಣಸಮೂಹ, ಪ್ರಾಣ, ಅಹಂಕಾರ, ಅಧಿದೇವತೆ– ಈ ಐದೂ ಯಾವ ಕರ್ಮಗಳಾದರೂ ಉಂಟಾಗುವದಕ್ಕೆ ಹೇತುಗಳೆನಿಸುವವು.[3]

**ಕರ್ಮಾನುರೂಪೇಣ ಗುಣೋದಯೋ ಭವೇ-**
**ದ್ಗುಣಾನುರೂಪೇಣ ಮನಃಪ್ರವೃತ್ತಿಃ ।**
**ಮನೋಽನುವೃತ್ತ್ಯೈರುಭಯಾತ್ಮಕೇನ್ದ್ರಿಯೈ-**
**ರ್ನಿರ್ವರ್ತ್ಯತೇ ಪುಣ್ಯಮಪುಣ್ಯಮತ್ರ ॥ ೪೨೨ ॥**
**ಕರೋತಿ ವಿಜ್ಞಾನಮಯೋಽಭಿಮಾನಂ**
**ಕರ್ತಾಹಮೇವೇತಿ ತದಾತ್ಮನಾ ಸ್ಥಿತಃ ।**
**ಆತ್ಮಾ ತು ಸಾಕ್ಷೀ ನ ಕರೋತಿ ಕಿಞ್ಚಿ-**
**ನ್ನ ಕಾರಯತ್ಯೇವ ತಟಸ್ಥವತ್ಸದಾ ॥ ೪೨೩ ॥**

೪೨೨–೪೨೩. ಕರ್ಮಕ್ಕೆ ಅನುಗುಣವಾಗಿ ಗುಣಗಳು ಎದ್ದುಕೊಳ್ಳುತ್ತವೆ, ಗುಣಗಳನ್ನನುಸರಿಸಿ ಮನಸ್ಸು ಮುಂದುವರಿಯುತ್ತದೆ; ಮನಸ್ಸನ್ನನುಸರಿಸಿಡ ಎರಡೂ ಬಗೆಯ ಇಂದ್ರಿಯಗಳು ಪುಣ್ಯವನ್ನೋ ಪಾಪವನ್ನೋ ಮಾಡುತ್ತವೆ.

---

1. ಇಲ್ಲಿರುವ ಅಧಿದೈವತವಿವರಣೆಯನ್ನು ಪಂಚೀಕರಣವಾರ್ತಿಕಕ್ಕೆ ಹೋಲಿಸಿ; ಅದರ ಪರಿಶಿಷ್ಟವನ್ನೂ ನೋಡಿ.

2. 'ಗ್ರಾಮಂ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

3. ಗೀ. ೧೮–೧೪ರ ಪರಾಮರ್ಶವಿದು, ಅಲ್ಲಿ 'ಭೋಕ್ತಾ' ಎಂದಿರುವದಕ್ಕೆ ಇಲ್ಲಿ 'ಅಹಂಕಾರ' ವೆಂದಿದೆ.

ವಿಜ್ಞಾನಮಯನು ನಾನು ಕರ್ತೃ ಎಂಬ ಆಯಾ ರೂಪದಿಂದ ಇದ್ದುಕೊಂಡು (ಕರ್ಮ)ದಲ್ಲಿ ಅಭಿಮಾನವನ್ನು ಮಾಡಿಕೊಳ್ಳುತ್ತಾನೆ. ಆತ್ಮನಾದರೋ ಸಾಕ್ಷಿ, ತಟಸ್ಥನಾಗಿರುವವನಂತೆ ಯಾವಾಗಲೂ ಏನನ್ನೂ ಮಾಡುವದಿಲ್ಲ, ಮಾಡಿಸುವದೂ ಇಲ್ಲ.

**ದ್ರಷ್ಟಾ ಶ್ರೋತಾ ವಕ್ತಾ ಕರ್ತಾ ಭೋಕ್ತಾ ಭವತ್ಯಹಙ್ಕಾರಃ ।**
**ಸ್ವಯಮೇತದ್ವಿಕೃತೀನಾಂ ಸಾಕ್ಷೀ ನಿರ್ಲೇಪ ಏವಾತ್ಮಾ ॥ ೪೨೪ ॥**

೪೨೪. ಅಹಂಕಾರವು ನೋಡುವವನು, ಕೇಳುವವನು, ಮಾತಾಡುವವನು, ಮಾಡುವವನು, ಅನುಭವಿಸುವವನು (ಇದೆಲ್ಲ) ಆಗುತ್ತಿರುವದು. ಆತ್ಮನು ತಾನು ಈ ವಿಕಾರಗಳಿಗೆಲ್ಲ ಸಾಕ್ಷಿಯಾಗಿ ನಿರ್ಲೇಪನೇ ಆಗಿರುತ್ತಾನೆ.

**ಆತ್ಮನಃ ಸಾಕ್ಷಿಮಾತ್ರತ್ವಂ ನ ಕರ್ತೃತ್ವಂ ನ ಭೋಕ್ತೃತಾ ।**
**ರವಿವತ್ಪ್ರಾಣಿಭಿರ್ಲೋಕೇ ಕ್ರಿಯಮಾಣೇಷು ಕರ್ಮಸು ॥ ೪೨೫ ॥**

೪೨೫. ಜೀವರುಗಳು ಕರ್ಮಗಳನ್ನು ಮಾಡುತ್ತಿರುವಲ್ಲಿ ಸೂರ್ಯನು ಹೇಗೋಹಾಗೆ ಆತ್ಮನು ಸಾಕ್ಷಿಮಾತ್ರನಾಗಿರುತ್ತಾನೆ. (ಅವನಿಗೆ) ಕರ್ತೃತ್ವವೂ ಇಲ್ಲ, ಭೋಕ್ತೃತ್ವವೂ ಇಲ್ಲ.

**ನ ಹ್ಯರ್ಕಃ ಕುರುತೇ ಕರ್ಮ ನ ಕಾರಯತಿ ಜನ್ತವಃ ।**
**ಸ್ವಸ್ವಭಾವಾನುರೋಧೇನ ವರ್ತನ್ತೇ ಸ್ವಸ್ವಕರ್ಮಸು ॥ ೪೨೬ ॥**
**ತಥೈವ ಪ್ರತ್ಯಗಾತ್ಮಾಪಿ ರವಿವನ್ನಿಷ್ಕ್ರಿಯಾತ್ಮನಾ ।**
**ಉದಾಸೀನತಯೈವಾಸ್ತೇ ದೇಹಾದೀನಾಂ ಪ್ರವೃತ್ತಿಷು ॥ ೪೨೭ ॥**

೪೨೬—೪೨೭. ಸೂರ್ಯನು ಕರ್ಮವನ್ನು ಮಾಡುವದೂ ಇಲ್ಲ, ಮಾಡಿಸುವದೂ ಇಲ್ಲ, ಜೀವರುಗಳು ತಮ್ಮತಮ್ಮ ಸ್ವಭಾವಕ್ಕನುಗುಣವಾಗಿ ತಮ್ಮತಮ್ಮ ಕರ್ಮಗಳಲ್ಲಿ ವರ್ತಿಸುತ್ತಿರುವರು ಅಲ್ಲವೆ? ಹಾಗೆಯೇ ಪ್ರತ್ಯಗಾತ್ಮನು ಸೂರ್ಯನಂತೆ ನಿಷ್ಕ್ರಿಯಸ್ವರೂಪದಿಂದ ದೇಹಾದಿಗಳ ಪ್ರವೃತ್ತಿಗಳಲ್ಲಿ ಉದಾಸೀನನಾಗಿಯೇ ಇದ್ದುಕೊಂಡಿರುತ್ತಾನೆ.

**ಅಜ್ಞಾತ್ವೈವ[1] ಪರಂ ತತ್ತ್ವಂ ಮಾಯಾಮೋಹಿತಚೇತಸಃ ।**
**ಸ್ವಾತ್ಮನ್ಯಾರೋಪಯನ್ತ್ಯೇತತ್ಕರ್ತೃತ್ವಾದ್ಯನ್ಯಗೋಚರಮ್ ॥ ೪೨೮ ॥**

೪೨೮. ಪರತತ್ತ್ವವನ್ನು ತಿಳಿದುಕೊಳ್ಳದೆಯೇ ಮಾಯೆಯಿಂದ ಚಿತ್ತವು ಮೋಹಿತವಾದವರಾಗಿ ಮತ್ತೊಂದಕ್ಕೆ ಸೇರಿರುವ ಕರ್ತೃತ್ವಾದಿಗಳನ್ನು ತಮ್ಮ ಆತ್ಮನಲ್ಲಿ (ಜನರು) ಆರೋಪಿಸಿಕೊಳ್ಳುತ್ತಿರುವರು.

---

1. ಮೂಲದಲ್ಲಿರುವ 'ಅಜ್ಞಾತ್ವೈವಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

**ಆತ್ಮಸ್ವರೂಪಮವಿಚಾರ್ಯ ವಿಮೂಢಬುದ್ಧಿ-**
**ರಾರೋಪಯತ್ಯಖಿಲಮೇತದನಾತ್ಮಕಾರ್ಯಮ್ ।**
**ಸ್ವಾತ್ಮನ್ಯಸಙ್ಗಚಿತಿ ನಿಷ್ಕ್ರಿಯ ಏವ ಚನ್ದ್ರೇ**
**ದೂರಸ್ಥಮೇಘಕೃತಧಾವನವದ್ಭ್ರಮೇಣ ॥ ೪೨೯ ॥**

೪೨೯. ಆತ್ಮಸ್ವರೂಪವನ್ನು ವಿಚಾರಮಾಡಿಕೊಳ್ಳದೆ ವಿವಿಧವಾಗಿ ಮೂಢವಾದ ಬುದ್ಧಿಯುಳ್ಳವನು ಈ ಅನಾತ್ಮಕಾರ್ಯವನ್ನೆಲ್ಲ ತನ್ನ ಆತ್ಮನಲ್ಲಿ – ದೂರದಲ್ಲಿರುವ ಮೋಡದಲ್ಲಾಗುತ್ತಿರುವ ಓಡುವಿಕೆಯನ್ನು ಚಂದ್ರನಲ್ಲಿ (ಆರೋಪಮಾಡುತ್ತಿರುವಂತೆ- ಅಸಂಗಚಿದ್ರೂಪನಾದ ನಿಷ್ಕ್ರಿಯನಾದ ತನ್ನ ಆತ್ಮನಲ್ಲಿ ಭ್ರಮೆಯಿಂದ ಹುಟ್ಟಿಹಾಕಿಕೊಳ್ಳುತ್ತಿರುವನು.

## ಜಗತ್ತು ಉತ್ಪತ್ತಿಯಾಗುವ ಪ್ರಕಾರ

**ಆತ್ಮಾನಾತ್ಮವಿವೇಕಂ ಸ್ಫುಟತರಮಗ್ರೇ ನಿವೇದಯಿಷ್ಯಾಮಃ ।**
**ಇಮಮಾಕರ್ಣಯ ವಿದ್ವನ್ ಜಗದುತ್ಪತ್ತಿಪ್ರಕಾರಮಾವೃತ್ತ್ಯಾ ॥೪೩೦॥**

೪೩೦. ಆತ್ಮಾನಾತ್ಮವಿವೇಕವನ್ನು ಬಹಳ ಸ್ಫುಟವಾಗಿ ಮುಂದೆ ತಿಳಿಸಿಕೊಡುವೆವು. ಎಲೈ ವಿವೇಕಿಯೆ, ಜಗತ್ತು ಮತ್ತೆಮತ್ತೆ (?) ಹುಟ್ಟುವ ಪ್ರಕಾರವನ್ನು ಕೇಳು.

**ಪಞ್ಚೀಕೃತೇಭ್ಯಃ ಖಾದಿಭ್ಯೋ ಭೂತೇಭ್ಯಸ್ತ್ವೀಕ್ಷಯೇಶಿತುಃ ।**
**ಸಮುತ್ಪನ್ನಮಿದಂ ಸ್ಥೂಲಂ ಬ್ರಹ್ಮಾಣ್ಡಂ ಸಚರಾಚರಮ್ ॥ ೪೩೧ ॥**

೪೩೧. ಪಂಚೀಕೃತವಾದ ಆಕಾಶಾದಿಭೂತಗಳಿಂದ ಈಶ್ವರನ ಸಂಕಲ್ಪದಿಂದ ಇದು ಸ್ಥಾವರಜಂಗಮಾತ್ಮಕವಾದ ಸ್ಥೂಲಬ್ರಹ್ಮಾಂಡವು ಉತ್ಪನ್ನವಾಯಿತು.

**ವ್ರೀಹ್ಯಾದ್ಯೋಷಧಯಃ ಸರ್ವಾ ವಾಯುತೇಜೋಮ್ಬುಭೂಮಯಃ ।**
**ಸರ್ವೇಷಾಮಪ್ಯಭೂದನ್ನಂ ಚತುರ್ವಿಧಶರೀರಿಣಾಮ್[1] ॥ ೪೩೨ ॥**

೪೩೨. ಬತ್ತವೇ ಮುಂತಾದ ಎಲ್ಲಾ ಸಸ್ಯಗಳೂ ವಾಯು, ತೇಜಸ್ಸು, ಅಪ್ಪು, ಪೃಥಿವಿ– ಇವುಗಳೂ ನಾಲ್ಕು ವಿಧವಾದ ಶರೀರಗಳುಳ್ಳ ಎಲ್ಲಾ ಪ್ರಾಣಿಗಳಿಗೂ ಅನ್ನವಾಯಿತು.

**ಕೇಚಿನ್ಮಾರುತಭೋಜನಾಃ ಖಲು ಪರೇ ಚನ್ದ್ರಾರ್ಕತೇಜೋಽಶನಾಃ**
**ಕೇಚಿತ್ತೋಯಕಣಾಶಿನೋಽಪರಿಮಿತಾಃ ಕೇಚಿತ್ತು ಮೃದ್ಭಕ್ಷಕಾಃ ।**
**ಕೇಚಿತ್ಪರ್ಣಶಿಲಾತೃಣಾದನಪರಾಃ ಕೇಚಿತ್ತು ಮಾಂಸಾಶಿನಃ ।**
**ಕೇಚಿದ್ವ್ರೀಹಿಯವಾನ್ನಭೋಜನಪರಾ ಜೀವನ್ತ್ಯಮೀ ಜನ್ತವಃ॥ ೪೩೩ ॥**

---

1. ಮುಂದಿನ ಶ್ಲೋಕದ ಅಭಿಪ್ರಾಯಕ್ಕೆ ಅನುಗುಣವಾಗಿ ಕನ್ನಡಿಸಿದೆ ; ಶ್ಲೋಕದ ಪದಗಳು ಅಷ್ಟು ಸರಿಯಾಗಿ ಅನ್ವಯವಾಗುವಂತಿಲ್ಲ.

೪೩೩. ಈ ಜೀವರುಗಳಲ್ಲಿ ಕೆಲವರು ವಾಯುವನ್ನು ಭುಂಜಿಸುವವರು, ಮತ್ತೆ ಕೆಲವರು ಚಂದ್ರಸೂರ್ಯರ ಬೆಳಕನ್ನೇ ಆಹಾರವಾಗುಳ್ಳವರು. ಕೆಲವರು ಜಲಬಿಂದುಗಳನ್ನು ಉಪಯೋಗಿಸುವವರು, ಕೆಲವರೋ ಮಣ್ಣು ತಿನ್ನುವವರು, ಕೆಲವರು ಎಲೆ, ಕಲ್ಲು, ಹುಲ್ಲು– ಇವನ್ನು ತಿನ್ನುವವರು ; ಕೆಲವರು ಮಾಂಸವನ್ನು ತಿನ್ನುವವರು ; ಕೆಲವರು ಅಕ್ಕಿ, ಜವೆಗೋಧಿ– ಈ ಆಹಾರವನ್ನು ತಿನ್ನುವವರು– ಹೀಗೆ ಜೀವಿಸುತ್ತಿದಾರೆ.

**ಜರಾಯುಜಾಣ್ಡಜಸ್ವೇದಜೋದ್ಭಿಜ್ಜಾದ್ಯಾಶ್ಚತುರ್ವಿಧಾಃ ।**
**ಸ್ವಸ್ವಕರ್ಮಾನುರೂಪೇಣ ಜಾತಾಸ್ತಿಷ್ಠನ್ತಿ ಜನ್ತವಃ ॥ ೪೩೪ ॥**
**ಯತ್ರ (ಯೇ ತು?) ಜಾತಾ ಜರಾಯುಭ್ಯಸ್ತೇ ನರಾದ್ಯಾ ಜರಾಯುಜಾಃ**
**ಅಣ್ಡಜಾಸ್ತೇ ಸ್ಮೃರಣ್ಡೇಭ್ಯೋ ಜಾತಾ ಯೇ ವಿಹಗಾದಯಃ ॥ ೪೩೫ ॥**
**ಸ್ವೇದಾಜ್ಜಾತಾಃ ಸ್ವೇದಜಾಸ್ತೇ ಯೂಕಾ ಲೂಕ್ಷಾದಯೋಽಪಿ ಚ ।**
**ಭೂಮಿಮುದ್ಭಿದ್ಯ ಯೇ ಜಾತಾ ಉದ್ಭಿಜ್ಜಾಸ್ತೇ ದ್ರುಮಾದಯಃ ॥೪೩೬॥**

೪೩೪–೪೩೬. ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜ– ಮುಂತಾದ (?) ನಾಲ್ಕು ವಿಧವಾದ ಪ್ರಾಣಿಗಳು ತಮ್ಮತಮ್ಮ ಕರ್ಮಕ್ಕನುಗುಣವಾಗಿ ಹುಟ್ಟಿರುತ್ತವೆ. ಗರ್ಭಕೋಶದಿಂದ ಹುಟ್ಟಿರುವವಲ್ಲ, ಆ ಮನುಷ್ಯಾದಿಗಳು **ಜರಾಯುಜಗಳು ;** ಮೊಟ್ಟೆಗಳಿಂದ ಹುಟ್ಟಿದ ಪಕ್ಷ್ಯಾದಿಗಳಿರುವವಲ್ಲ, ಅವು **ಅಂಡಜಗಳು ;** ಬೆವರಿನಿಂದ ಹುಟ್ಟಿದ ಹೇನು, ಕೂರೆ ಮುಂತಾದವುಗಳಿರುವವಲ್ಲ, ಅವು **ಸ್ವೇದಜಗಳು ;** ನೆಲವನ್ನು ಒಡೆದುಕೊಂಡು ಹುಟ್ಟಿದ ಮರವೇ ಮುಂತಾದವುಗಳಿರುವವಲ್ಲ, ಅವು **ಉದ್ಭಿಜ್ಜಗಳು.**[1]

**ಇದಂ ಸ್ಥೂಲವಪುರ್ಜಾತಂ ಭೌತಿಕಂ ಚ ಚತುರ್ವಿಧಮ್ ।**
**ಸಾಮಾನ್ಯೇನ ಸಮಷ್ಟಿಃ ಸ್ಯಾದೇಕಧೀವಿಷಯತ್ವತಃ ॥ ೪೩೭ ॥**

೪೩೭. ಹೀಗೆ ಭೂತಗಳಿಂದ ಹುಟ್ಟಿದ ಈ ನಾಲ್ಕು ಬಗೆಯ ಸ್ಥೂಲಶರೀರವು –(ಇದು) ಸಾಮಾನ್ಯವೆಂಬ ದೃಷ್ಟಿಯಿಂದ ಒಂದೆಂಬ ಬುದ್ಧಿಗೆ ಕಾರಣವಾಗಿರುವದರಿಂದ **ಸಮಷ್ಟಿ**ಯೆನಿಸುವದು.

**ಏತತ್ಸಮಷ್ಟ್ಯವಚ್ಛಿನ್ನಂ ಚೈತನ್ಯಂ ಫಲಸಂಯುತಮ್ ।**
**ಪ್ರಾಹುರ್ವೈಶ್ವಾನರ ಇತಿ ವಿರಾಡಿತಿ ಚ ವೈದಿಕಾಃ ॥ ೪೩೮ ॥**
**ವೈಶ್ವಾನರೋ ವಿಶ್ವನರೇಷ್ವಾತ್ಮತ್ವೇನಾಭಿಮಾನತಃ ।**
**ವಿರಾಟ್ ಸ್ಯಾದ್ವಿವಿಧತ್ವೇನ ಸ್ವಯಮೇವ ವಿರಾಜನಾತ್ ॥ ೪೩೯ ॥**

---

1. ವೇ. ಸಾ. ಪು. ೬೯.

೪೩೮-೪೩೯. ಈ ಸಮಷ್ಟಿಯಿಂದುಪಹಿತವಾಗಿ ಆಭಾಸಸಹಿತವಾದ ಚೈತನ್ಯ ವನ್ನು **ವೈಶ್ವಾನರ**ನೆಂದೂ **ವಿರಾಟ್**(ಪುರುಷ)ನೆಂದೂ ವೈದಿಕರು ಕರೆಯುತ್ತಾರೆ. ಎಲ್ಲಾ ನರರಲ್ಲಿಯೂ ತಾನೆಂಬ ಅಭಿಮಾನವಿರುವದರಿಂದ **ವೈಶ್ವಾನರ**ನು, ವಿವಿಧ ವಾಗಿ ತಾನೇ ವಿರಾಜಿಸುತ್ತಿರುವದರಿಂದ **ವಿರಾಟ್** ಎನ್ನಿಸುತ್ತಾನೆ.[1]

**ಚತುರ್ವಿಧಂ ಭೂತಜಾತಂ ತತ್ತಜ್ಜಾತಿವಿಶೇಷತಃ ।**
**ನೈಕಧೀವಿಷಯತ್ವೇನ ಪೂರ್ವವದ್ವ್ಯಷ್ಟಿರಿಷ್ಯತೇ ॥ ೪೪೦ ॥**
**ಸಾಭಾಸಂ ವ್ಯಷ್ಟ್ಯುಪಹಿತಂ ತತ್ತಾದಾತ್ಮ್ಯಮುಪಾಗತಮ್ ।**
**ಚೈತನ್ಯಂ ವಿಶ್ವ ಇತ್ಯಾಹುರ್ವೇದಾನ್ತನಯಕೋವಿದಾಃ ॥ ೪೪೧ ॥**
**ವಿಶ್ವೇಽ[2]ಸ್ಮಿನ್ ಸ್ಥೂಲದೇಹೇಽತ್ರ ಸ್ವಾಭಿಮಾನೇನ ತಿಷ್ಠತಿ ।**
**ಯತಸ್ತತೋ ವಿಶ್ವ ಇತಿ ನಾಮ್ನಾ ಸಾರ್ಥೋ ಭವತ್ಯಯಮ್ ॥ ೪೪೨ ॥**

೪೪೦-೪೪೨. ನಾಲ್ಕು ಬಗೆಯ ಭೂತಸಮೂಹವೂ ಆಯಾ ಜಾತಿಯ (ದೃಷ್ಟಿ)ಯಿಂದ ಅನೇಕವೆಂಬ ಬುದ್ಧಿಗೆ ವಿಷಯವಾಗಿ ಹಿಂದಿನಂತೆ[3] **ವ್ಯಷ್ಟಿ**ಯೆನಿಸು ವದು. ಆಭಾಸಸಹಿತವಾಗಿ ವ್ಯಷ್ಟ್ಯುಪಹಿತವಾಗಿ ಅದೇ ತಾನೆಂದಾದ ಚೈತನ್ಯ ವನ್ನು ವೇದಾಂತಯುಕ್ತಿಕೋವಿದರಾದವರು **ವಿಶ್ವ**ನೆಂದು ಕರೆಯುತ್ತಾರೆ. ಈ ಎಲ್ಲಾ (ವಿಶ್ವ)ಸ್ಥೂಲದೇಹದಲ್ಲಿ ತಾನೆಂಬ ಅಭಿಮಾನದಿಂದ ಇರುತ್ತಾನಲ್ಲವೆ, ಆದ್ದರಿಂದ **ವಿಶ್ವ**ನೆಂಬ ಹೆಸರು ಇವನಿಗೆ ಸಾರ್ಥಕವಾಗಿರುತ್ತದೆ.[4]

**ವ್ಯಷ್ಟಿರೇಷಾಽಸ್ಯ ವಿಶ್ವಸ್ಯ ಭವತಿ ಸ್ಥೂಲವಿಗ್ರಹಃ ।**
**ಉಚ್ಯತೇಽನ್ನವಿಕಾರತ್ವಾ[5]ತ್ಕೋಶೋಽನ್ನಮಯ ಇತ್ಯಯಮ್ ॥ ೪೪೩ ॥**

೪೪೩. ಈ ವ್ಯಷ್ಟಿಯು ಈ ವಿಶ್ವನಿಗೆ ಸ್ಥೂಲಶರೀರವು, ಅನ್ನದ ಕಾರ್ಯ ವಾದ್ದರಿಂದ **ಅನ್ನಮಯಕೋಶ**ವೆಂದೂ ಇದು ಎನಿಸಿಕೊಳ್ಳುತ್ತದೆ.[6]

**ದೇಹೋಽಯಂ ಪಿತೃಭುಕ್ತಾನ್ನವಿಕಾರಾಚ್ಛುಕ್ರಶೋಣಿತಾತ್ ।**
**ಜಾತಃ ಪ್ರವರ್ಧತೇಽನ್ನೇನ ತದಭಾವೇ ವಿನಶ್ಯತಿ ॥ ೪೪೪ ॥**

---

1. ವೇ. ಸಾ. ಪು. ೬೯, ೭೦.
2. 'ವಿಶ್ವೋ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
3. ಸೂಕ್ಷ್ಮಶರೀರದ ವಿಷಯಕ್ಕೆ ಹೇಳಿರುವಂತೆ.
4. ಸಮಷ್ಟ್ಯುಪಹಿತಚೈತನ್ಯವೆಂದು ಮಾಂಡೂಕ್ಯಭಾಷ್ಯದಲ್ಲಿದೆ ; ಆದರೆ ವ್ಯಷ್ಟ್ಯುಪ ಹಿತಚೈತನ್ಯವನ್ನು ವಿಶ್ವನೆಂದಿರುವದು ಅಲ್ಲಿ ಕಾಣುವದಿಲ್ಲ. ವೇ. ಸಾ. ಪು. ೭೦ರಲ್ಲಿದೆ.
5. 'ವಿಕಾರಿತ್ವಾತ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
6. ವೇ. ಸಾ. ದಲ್ಲಿ (ಪು. ೭೦) ಸಮಷ್ಟಿಗೂ ಸ್ಥೂಲಶರೀರ, ಅನ್ನಮಯಕೋಶ- ಎಂಬ ಹೆಸರುಗಳನ್ನು ಕೊಟ್ಟಿದೆ.

**ತಸ್ಮಾದನ್ನವಿಕಾರತ್ವೇನಾಯಮನ್ನಮಯೋ ಮತಃ ।**
**ಆಚ್ಛಾದಕತ್ವಾದೇತಸ್ಯಾಸ್ಯಸೇಃ ಕೋಶವದಾತ್ಮನಃ ॥ ೩೩೫ ॥**

೩೩೪–೩೩೫. ಈ ದೇಹವು ತಾಯಿತಂದೆಗಳು ಉಂಡ ಅನ್ನದ ಕಾರ್ಯವಾದ ಶುಕ್ಲಶೋಣಿತದಿಂದ ಹುಟ್ಟಿದೆ; ಅನ್ನದಿಂದ ಬೆಳೆಯುತ್ತದೆ; ಅದಿಲ್ಲದಿದ್ದರೆ ನಾಶವಾಗುತ್ತದೆ; ಆದ್ದರಿಂದ ಅನ್ನವಿಕಾರವಾಗಿರುವದರಿಂದ (ಇದು) **ಅನ್ನಮಯ**ವೆನಿಸುತ್ತದೆ. ಕತ್ತಿಯನ್ನು ಒರೆಯಂತೆ ಆತ್ಮನನ್ನು ಮುಚ್ಚಿಕೊಂಡಿರುವದರಿಂದ (ಕೋಶವೆನಿಸಿರುತ್ತದೆ).[1]

**ಆತ್ಮನಃ ಸ್ಥೂಲಭೋಗಾನಾಮೇತದಾಯತನಂ ವಿದುಃ ।**
**ಶಬ್ದಾದಿವಿಷಯಾನ್ ಭುಙ್ಕ್ತೇ ಸ್ಥೂಲಾನ್ ಸ್ಥೂಲಾತ್ಮನಿ ಸ್ಥಿತಃ ॥೩೩೬**
**ಬಹಿರಾತ್ಮಾ ತತಃ ಸ್ಥೂಲಭೋಗಾಯತನಮುಚ್ಯತೇ ॥ ೩೩೬½ ॥**
**ಇನ್ದ್ರಿಯೈರುಪನೀತಾನಾಂ ಶಬ್ದಾದೀನಾಮಯಂ ಸ್ವಯಮ್ ।**
**ದೇಹೇನ್ದ್ರಿಯಮನೋಯುಕ್ತೋ ಭೋಕ್ತೇತ್ಯಾಹುರ್ಮನೀಷಿಣಃ ॥**

೩೩೬–೩೩೭. ಆತ್ಮನ ಸ್ಥೂಲಭೋಗಗಳಿಗೆ ಇದು ಆಯತನ (ಆಶ್ರಯವು) ಎಂದು ತಿಳಿಯುತ್ತಾರೆ. ಸ್ಥೂಲಶರೀರದಲ್ಲಿದ್ದುಕೊಂಡು ಹೊರಗಿರುವ ಸ್ಥೂಲವಿಷಯಗಳನ್ನು ಆತ್ಮನು ಭೋಗಿಸುತ್ತಾನೆ; ಆದ್ದರಿಂದ ಇದು **ಸ್ಥೂಲಭೋಗಾಯತನ**ವೆನಿಸುತ್ತದೆ. ಇಂದ್ರಿಯಗಳು ತಂದುಕೊಟ್ಟ ಶಬ್ದಾದಿಗಳನ್ನು ತಾನೇ ಭೋಗಿಸುವದ ರಿಂದ) ದೇಹ, ಇಂದ್ರಿಯಗಳು, ಮನಸ್ಸು– ಇವುಗಳಿಂದೊಡಗೂಡಿದ ಆತ್ಮನನ್ನು ಬಲ್ಲವರು 'ಭೋಕ್ತೃ'ವೆನ್ನುತ್ತಾರೆ.[2]

**ಏಕಾದಶದ್ವಾರವತೀಹ ದೇಹೇ**
**ಸೌಧೇ ಮಹಾರಾಜ ಇವಾಕ್ಷವರ್ಗೈಃ ।**
**ಸಂಸೇವ್ಯಮಾನೋ ವಿಷಯೋಪಭೋಗಾ-**
**ನುಪಾಧಿಸಂಸ್ಥೋ ಬುಭುಜೇಽಯಮಾತ್ಮಾ ॥ ೩೩೮ ॥**

೩೩೮. ಹನ್ನೊಂದು ದ್ವಾರಗಳುಳ್ಳ ಈ ದೇಹದಲ್ಲಿ – ಉಪ್ಪರಿಗೆಯ ಮನೆಯಲ್ಲಿರುವ ಮಹಾರಾಜನಂತೆ – ಇಂದ್ರಿಯಸಮೂಹಗಳಿಂದ ವಿಷಯಗಳ ಉಪಭೋಗವನ್ನು ಈ ಉಪಾಧಿಗಳಲ್ಲಿರುವ ಆತ್ಮನು ಅನುಭವಿಸುತ್ತಿರುವನು.[3]

---

1. ಕಂಸದಲ್ಲಿರುವ ಭಾಗವು ಅರ್ಥಕ್ಕೆ ಬೇಕಾಗಿದೆ, ಶ್ಲೋಕದಲ್ಲಿಲ್ಲ.

2. ಸ್ಥೂಲಭೋಗಾಯತನವಾದ್ದರಿಂದ ಸ್ಥೂಲಶರೀರ– ಎಂಬ ಹೆಸರನ್ನು ವ್ಯಷ್ಟಿ ಸಮಷ್ಟಿಗಳೆರಡಕ್ಕೂ ವೇ. ಸಾ. ದಲ್ಲಿ (ಪು. ೭೦) ಕೊಟ್ಟಿದೆ. ಶ್ಲೋಕದಲ್ಲಿ ಕಠೋಪನಿಷತ್ತಿನ (೧–೩–೪) ಸೂಚನೆಯಿದೆ.

3. ಈ ಉಪಭೋಗವನ್ನು ವಿಶ್ವವೈಶ್ವಾನರರಿಬ್ಬರಿಗೂ ಸಮಾನವೆಂದು ವೇ. ಸಾ. ದಲ್ಲಿ ಹೇಳಿದೆ (ಪು. ೭೦). 'ಬುಭುಜೇ' ಎಂಬ ಭೂತಕಾಲವು ಇಲ್ಲಿಗೆ ಹೊಂದುವದಿಲ್ಲ.

**ಜ್ಞಾನೇನ್ದ್ರಿಯಾಣಿ ನಿಜದೈವತಚೋದಿತಾನಿ**
**ಕರ್ಮೇನ್ದ್ರಿಯಾಣ್ಯಪಿ ತಥಾ ಮನಆದಿಕಾನಿ ।**
**ಸ್ವಸ್ವಪ್ರಯೋಜನವಿಧೌ ನಿಯತಾನಿ ಸನ್ತಿ**
**ಯತ್ನೇನ ಕಿಙ್ಕರಜನಾ ಇವ ತಂ ಭಜನ್ತೇ ॥ ೪೪೯ ॥**

೪೪೯. ತಮ್ಮತಮ್ಮ ದೇವತೆಗಳಿಂದ ಪ್ರೇರಿತವಾಗಿ ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ಮತ್ತು ಮನಸ್ಸೇ ಮುಂತಾದ (ಅಂತಃಕರಣ)ಗಳೂ ಪ್ರಯತ್ನ ಪೂರ್ವಕವಾಗಿ ಒಂದೇ ನಿಯಮದಿಂದ ತಮ್ಮತಮ್ಮ ಪ್ರಯೋಜನವನ್ನುಂಟುಮಾಡಿ ಕೊಡುತ್ತಾ ಸೇವಕಜನರಂತೆ ಆ (ಆತ್ಮನನ್ನು) ಸೇವಿಸುತ್ತಿರುವವು.

**ಯತ್ರೋಪಭುಙ್ಕ್ತೇ ವಿಷಯಾನ್ ಸ್ಥೂಲಾನೇಷ ಮಹಾಮತಿಃ ।**
**ಅಹಂ ಮಮೇತಿ ಸೈಷಾಸ್ಯಾಽವಸ್ಥಾ ಜಾಗ್ರದಿತೀರ್ಯತೇ ॥ ೪೫೦ ॥**

೪೫೦. ಯಾವದರಲ್ಲಿ ಈ ಮಹಾಬುದ್ಧಿಶಾಲಿಯು ಸ್ಥೂಲವಿಷಯಗಳನ್ನು– ನಾನು ನನ್ನದು ಎಂದು – ಭುಂಜಿಸುತ್ತಿರುವನೋ ಅಂಥ ಈ ಅವಸ್ಥೆಯು **ಜಾಗ್ರದವಸ್ಥೆ** ಎನಿಸುವದು.[1]

**ಏತತ್ಸಮಷ್ಟಿವ್ಯಷ್ಟ್ಯೋರ್ಉಭಯೋರಪ್ಯಭಿಮಾನಿನೋಃ ।**
**ತದ್ವಿಶ್ವವೈಶ್ವಾನರಯೋರಭೇದಃ ಪೂರ್ವವನ್ಮತಃ ॥ ೪೫೧ ॥**

೪೫೧. ಈ ಸಮಷ್ಟಿ ಮತ್ತು ವ್ಯಷ್ಟಿ (ಸ್ಥೂಲಶರೀರ)ಗಳೆರಡಕ್ಕೂ ಅಭಿಮಾನಿಗಳಾದ ವಿಶ್ವವೈಶ್ವಾನರರುಗಳಿಗೆ ಹಿಂದೆ ಹೇಳಿರುವಂತೆ, ಅಭೇದವೇ ಇಷ್ಟವಾಗಿರುತ್ತದೆ.[2]

**ಸ್ಥೂಲಸೂಕ್ಷ್ಮಕಾರಣಾಖ್ಯಾಃ ಪ್ರಪಞ್ಚಾ ಯೇ ನಿರೂಪಿತಾಃ ।**
**ತೇ ಸರ್ವೇಽಪಿ ಮಿಲಿತ್ವೈಕಃ ಪ್ರಪಞ್ಚೋಽಪಿ ಮಹಾನ್ ಭವೇತ್ ॥**

೪೫೨. ಸ್ಥೂಲ, ಸೂಕ್ಷ್ಮ, ಮತ್ತು ಕಾರಣ– ಎಂಬ ಈ ತಿಳಿಸಿದ ಪ್ರಪಂಚಗಳಿವೆಯಲ್ಲ– ಇವುಗಳೆಲ್ಲ ಸೇರಿ ಒಂದು **ಮಹಾಪ್ರಪಂಚ**ವಾಗುತ್ತದೆ.

**ಮಹಾಪ್ರಪಞ್ಚಾವಚ್ಛಿನ್ನಂ ವಿಶ್ವಪ್ರಾಜ್ಞಾದಿಲಕ್ಷಣಮ್ ।**
**ವಿರಾಡಾದೀಶಪರ್ಯನ್ತಂ ಚೈತನ್ಯಂ ಚೈಕಮೇವ ತತ್ ॥ ೪೫೩ ॥**

---

1. ಜಾಗ್ರತ್ ಎಂಬ ಹೆಸರೂ ಎರಡಕ್ಕೂ ಸಮಾನವೆಂದು ವೇ.ಸಾ. (ಪು. ೭೦).
2. ಇದೂ ವೇ.ಸಾ.ದಲ್ಲಿ (ಪು. ೭೨) ಇದೆ.

೪೫೩. ಮಹಾಪ್ರಪಂಚದಿಂದ ಅವಚ್ಛಿನ್ನವಾಗಿರುವ ವಿಶ್ವಪ್ರಾಜ್ಞಾದಿರೂಪವಾದ ಮತ್ತು ವಿರಾಜನಿಂದ ಹಿಡಿದು ಈಶ್ವರಪರ್ಯಂತವಾದ ಚೈತನ್ಯವು ಒಂದೇ ಆಗಿರುತ್ತದೆ.[1]

**ಯದನಾದ್ಯನನ್ತಮವ್ಯಕ್ತಂ ಚೈತನ್ಯಮಜಮಕ್ಷರಮ್ ।**
**ಮಹಾಪ್ರಪಞ್ಚೇನ ಸಹಾವಿವಿಕ್ತಂ ಸದಯೋಽಗ್ನಿವತ್ ॥ ೪೫೪ ॥**
**ತತ್ ಸರ್ವಂ ಖಲ್ವಿದಂ ಬ್ರಹ್ಮೇತ್ಯಸ್ಯ ವಾಕ್ಯಸ್ಯ ಪಣ್ಡಿತೈಃ ।**
**ವಾಚ್ಯಾರ್ಥ ಇತಿ ನಿರ್ಣೀತಂ ವಿವಿಕ್ತಂ ಲಕ್ಷ್ಯ ಇತ್ಯಪಿ ॥ ೪೫೫ ॥**

೪೫೪–೪೫೫. ಅನಾದಿಯೂ ಅನಂತವೂ ಅವ್ಯಕ್ತವೂ ಜನ್ಮರಹಿತವೂ ನಾಶರಹಿತವೂ ಆಗಿರುವ ಚೈತನ್ಯವಿದೆಯಲ್ಲ, ಅದು ಮಹಾಪ್ರಪಂಚದಿಂದ ವಿಂಗಡವಾಗಿದೆ. ಕಬ್ಬಿಣಬೆಂಕಿಯಂತೆ (ಒಂದಾಗಿ) ಇರುವದಲ್ಲ, ಅದು 'ಇದೆಲ್ಲವೂ ಬ್ರಹ್ಮವೇ' (ಛಾಂ. ೩–೧೪–೧) ಎಂಬ ವಾಕ್ಯಕ್ಕೆ **ವಾಚ್ಯಾರ್ಥ**ವೆಂದೂ ವಿಂಗಡವಾದಾಗ **ಲಕ್ಷ್ಯಾರ್ಥ**ವೆಂದೂ ಪಂಡಿತರಿಂದ ನಿರ್ಣೀತವಾಗಿರುತ್ತದೆ.[2]

## ಆತ್ಮಾನಾತ್ಮಗಳ ಅಧ್ಯಾರೋಪ

**ಸ್ಥೂಲಾದ್ಯಜ್ಞಾನಪರ್ಯನ್ತಂ ಕಾರ್ಯಕಾರಣಲಕ್ಷಣಮ್ ।**
**ದೃಶ್ಯಂ ಸರ್ವಮನಾತ್ಮೇತಿ ವಿಜಾನೀಹಿ ವಿಚಕ್ಷಣ ॥ ೪೫೬ ॥**

೪೫೬. ಸ್ಥೂಲ(ಶರೀರ)ದಿಂದ ಹಿಡಿದು ಅಜ್ಞಾನದವರೆಗಿನ ಕಾರ್ಯಕಾರಣಸ್ವರೂಪವಾದ ದೃಶ್ಯವೆಲ್ಲವೂ ಅನಾತ್ಮವೆಂದು ತಿಳಿಯಯ್ಯ, ಜಾಣ.[3]

**ಅನ್ತಃಕರಣತದ್ವೃತ್ತಿದ್ರಷ್ಟೃ ನಿತ್ಯಮವಿಕ್ರಿಯಮ್ ।**
**ಚೈತನ್ಯಂ ಯತ್ತದಾತ್ಮೇತಿ ಬುದ್ಧ್ಯಾ ಬುಧ್ಯಸ್ವ ಸೂಕ್ಷ್ಮಯಾ ॥ ೪೫೭ ॥**

೪೫೭. ಅಂತಃಕರಣಕ್ಕೂ ಅದರ ವೃತ್ತಿಗಳಿಗೂ ಸಾಕ್ಷಿಯಾಗಿ ನಿತ್ಯವಾಗಿ, ವಿಕಾರರಹಿತವಾಗಿರುವ ಚೈತನ್ಯವಿದೆಯಲ್ಲ, ಅದೇ ಆತ್ಮವೆಂದು ಸೂಕ್ಷ್ಮವಾದ ಬುದ್ಧಿಯಿಂದ ಅರಿತುಕೊ.

---

1. ವೇ. ಸಾ. ಪು. ೭೨.

2. ವೇ. ಸಾ. ಪು. ೭೨. 'ಸರ್ವಂ ಖಲ್ವಿದಂ ಬ್ರಹ್ಮ' ಎಂಬುದು ಶಾಂಡಿಲ್ಯವಿದ್ಯೆ ಎಂಬ ಉಪಾಸನಾಪ್ರಕರಣದಲ್ಲಿರುವ ವಾಕ್ಯ. ಇದಕ್ಕೆ ವಾಚ್ಯಾರ್ಥಲಕ್ಷ್ಯಾರ್ಥಗಳು ಯಾವವೆಂಬುದನ್ನು ಭಾಷ್ಯದಲ್ಲಿ ಎಲ್ಲಿಯೂ ವಿಚಾರಮಾಡಿಲ್ಲ. ಇಲ್ಲಿ ಹೇಳಿರುವ ವಿವೇಕವು ಸರಿಯೆ ? ಎಂಬುದೂ ವಿಚಾರಣೀಯವಾಗಿದೆ.

3. ಇದೂ ವೇ. ಸಾ. ಪು. ೭೨ರಲ್ಲಿದೆ.

**ಏಷ ಪ್ರತ್ಯಕ್ ಸ್ವಪ್ರಕಾಶೋ ನಿರಂಶೋ**
**ಽಸಙ್ಗಃ ಶುದ್ಧಃ ಸರ್ವದೈಕಸ್ವಭಾವಃ ।**
**ನಿತ್ಯಾಖಣ್ಡಾನನ್ದರೂಪೋ ನಿರೀಹಃ**
**ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥ ೪೫೮ ॥**

೪೫೮. ಈ ಒಳಗಿನ (ಆತ್ಮನು), ತಾನೇ ಬೆಳಗುವವನು, ಅಂಶರಹಿತನು, ಅಸಂಗನು, ಶುದ್ಧನು, ಯಾವಾಗಲೂ ಒಂದೇ ಸ್ವಭಾವದವನು, ನಿತ್ಯವಾದ ಅಖಂಡವಾದ ಆನಂದದ ಸ್ವರೂಪವುಳ್ಳವನು, ನಿಷ್ಕ್ರಿಯನು, ಸಾಕ್ಷಿಯು, ಚೈತನ್ಯಸ್ವರೂಪನು, ಅದ್ವಿತೀಯನು, ನಿರ್ಗುಣನು.[1]

**ನೈವ ಪ್ರತ್ಯಗ್ ಜಾಯತೇ ವರ್ಧತೇ ನೋ**
**ಕಿಞ್ಚಿನ್ನಾಪಕ್ಷೀಯತೇ ನೈವ ನಾಶಮ್ ।**
**ಆತ್ಮಾ ನಿತ್ಯಃ ಶಾಶ್ವತೋಽಯಂ ಪುರಾಣೋ**
**ನಾಸೌ ಹನ್ಯೋ ಹನ್ಯಮಾನೇ ಶರೀರೇ ॥ ೪೫೯ ॥**

೪೫೯. (ಈ) ಪ್ರತ್ಯಗಾತ್ಮನು ಹುಟ್ಟುವದೇ ಇಲ್ಲ, ಬೆಳೆಯುವದಿಲ್ಲ, ಒಂದಿಷ್ಟೂ ಸವೆಯುವದಿಲ್ಲ, ನಾಶವನ್ನು ಹೊಂದುವದಿಲ್ಲ; ಈ ಆತ್ಮನು ನಿತ್ಯನು, ಶಾಶ್ವತನು, ಪುರಾಣನು. ಶರೀರವು ಕೊಲ್ಲಲ್ಪಟ್ಟರೆ ಇವನು ಕೊಲ್ಲಲ್ಪಡುವದಿಲ್ಲ.[2]

**ಜನ್ಮಾಸ್ತಿತ್ವವಿವೃದ್ಧಯಃ ಪರಿಣತಿಶ್ಚಾಪಕ್ಷತಿರ್ನಾಶನಂ**
**ದೃಶ್ಯಸ್ಯೈವ ಭವನ್ತಿ ಷಡ್ವಿಕೃತಯೋ ನಾನಾವಿಧಾ ವ್ಯಾಧಯಃ ।**
**ಸ್ಥೂಲತ್ವಾದಿ ಚ ನೀಲತಾದ್ಯಪಿ ಮಿತಿರ್ವರ್ಣಾಶ್ರಮಾದಿಪ್ರಥಾ**
**ದೃಶ್ಯನ್ತೇ ವಪುಷೋ ನ ಚಾತ್ಮನ ಇಮೇ ತದ್ವಿಕ್ರಿಯಾಸಾಕ್ಷಿಣಃ ॥೪೬೦॥**

೪೬೦. ಹುಟ್ಟುವದು, ಇರುವದು, ಬೆಳೆಯುವದು, ಮಾರ್ಪಡುವದು, ಸವೆಯುವದು, ಹಾಳಾಗುವದು– (ಈ) ಆರು ವಿಕಾರಗಳೂ ದೃಶ್ಯವಾದ (ಅನಾತ್ಮಕ್ಕೇ) ಆಗುತ್ತವೆ. ಬಗೆಬಗೆಯ ರೋಗಗಳು, ಸ್ಥೂಲ(ದಪ್ಪ)ವಾಗಿರುವದೇ ಮುಂತಾದದ್ದು, ಕಪ್ಪಾಗಿರುವದೇ ಮುಂತಾದದ್ದು, ಪರಿಮಾಣ, ವರ್ಣಾಶ್ರಮಗಳೇ ಮುಂತಾದವುಗಳ ತೋರಿಕೆ– ಇವು ಶರೀರಕ್ಕೇ (ಸೇರಿರುವಂತೆ) ಕಾಣಿಸುತ್ತಿರುತ್ತವೆ, ಅದರ ಮಾರ್ಪಾಡುಗಳಿಗೆ ಸಾಕ್ಷಿಯಾಗಿರುವ ಆತ್ಮನಿಗೆ (ಸೇರಿಕೊಂಡು ಕಾಣಿಸು)ವದಿಲ್ಲ.

---

1. ಶ್ವೇ. ೬–೧೧.
2. ಕಾ. ೧-೨-೧೮ ; 'ಪ್ರತ್ಯಕ್' ಎಂಬ ಪದವನ್ನೇ ಪ್ರತ್ಯಗಾತ್ಮನೆಂಬ ಅರ್ಥದಲ್ಲಿ ಈ ಗ್ರಂಥದಲ್ಲಿ ಬಳಸಿರುತ್ತದೆ.

**ಅಸ್ಮಿನ್ನಾತ್ಮನ್ಯನಾತ್ಮತ್ವಮನಾತ್ಮನ್ಯಾತ್ಮತಾಂ ಪುನಃ ।**
**ವಿಪರೀತತಯಾಧ್ಯಸ್ಯ ಸಂಸರನ್ತಿ ವಿಮೋಹತಃ ॥ ೪೬೧ ॥**

೪೬೧. ಈ ಆತ್ಮನಲ್ಲಿ ಅನಾತ್ಮತ್ವವನ್ನು, ಅನಾತ್ಮದಲ್ಲಿ ಆತ್ಮತ್ವವನ್ನು ತಪ್ಪಾಗಿ ಹುಟ್ಟುಗಟ್ಟಿ ಭ್ರಾಂತಿಯಿಂದ ಸಂಸಾರದಲ್ಲಿ ತೊಳಲುತ್ತಿರುವರು.[1]

**ಭ್ರಾನ್ತ್ಯಾ ಮನುಷ್ಯೋಽಹಮಹಂ ದ್ವಿಜೋಽಹಂ**
**ತಜ್ಞೋಽಹಮಜ್ಞೋಽಹಮತೀವ ಪಾಪೀ ।**
**ಭ್ರಷ್ಟೋಽಸ್ಮಿ ಶಿಷ್ಟೋಽಸ್ಮಿ ಸುಖೀ ಚ ದುಃಖೀ-**
**ತ್ಯೇವಂ ವಿಮುಹ್ಯಾತ್ಮನಿ ಕಲ್ಪಯನ್ತಿ ॥ ೪೬೨ ॥**

೪೬೨. ಭ್ರಾಂತಿಯಿಂದ ನಾನು ಮನುಷ್ಯನು, ನಾನು ದ್ವಿಜನು, ನಾನು ಅದನ್ನು ಬಲ್ಲವನು, ನಾನು ಅಜ್ಞನು, ಅತಿಪಾಪಿಯು, ಭ್ರಷ್ಟನಾಗಿದೇನೆ, ಶಿಷ್ಟನಾಗಿದೇನೆ, ಸುಖಿ, ದುಃಖಿ –ಎಂದಿಂತು ಮೋಹಗೊಂಡು ಆತ್ಮನಲ್ಲಿ ಕಲ್ಪಿಸಿಕೊಳ್ಳುತ್ತಾರೆ.

**ಅನಾತ್ಮನೋ ಜನ್ಮಜರಾಮೃತಿಕ್ಷುಧಾ-**
**ತೃಷ್ಣಾಸುಖಕ್ಲೇಶಮಯಾದಿಧರ್ಮಾನ್ ।**
**ವಿಪರ್ಯಯೇಣ ಹ್ಯತಥಾವಿಧೇಽಸ್ಮಿ-**
**ನ್ನಾರೋಪಯನ್ತ್ಯಾತ್ಮನಿ ಬುದ್ಧಿದೋಷಾತ್ ॥ ೪೬೩ ॥**

೪೬೩. ಅನಾತ್ಮಕ್ಕೆ (ಸೇರಿದ) ಹುಟ್ಟು, ಮುಪ್ಪು, ಸಾವು, ಹಸಿವು, ಆಶೆ, ಸುಖ, ಆಯಾಸ– ಮುಂತಾದ ಧರ್ಮಗಳನ್ನು ತಪ್ಪಾಗಿ ಹಾಗಿಲ್ಲದ ಈ ಆತ್ಮನಲ್ಲಿ ಬುದ್ಧಿಯ ದೋಷದಿಂದ ಹುಟ್ಟುಗಟ್ಟಿಕೊಳ್ಳುತ್ತಾರೆ.

**ಭ್ರಾನ್ತ್ಯಾ ಯತ್ರ ಯದಧ್ಯಾಸಸ್ತತ್ಕೃತೇನ ಗುಣೇನ ವಾ ।**
**ದೋಷೇಣಾಪ್ಯಣುಮಾತ್ರೇಣ ಸ ನ ಸಂಬಧ್ಯತೇ ಕ್ವಚಿತ್ ॥ ೪೬೪ ॥**

೪೬೪. ಭ್ರಾಂತಿಯಿಂದ ಯಾವದರಲ್ಲಿ ಯಾವದರ ಅಧ್ಯಾಸವಾಗಿರುವದೋ, ಆ (ಆರೋಪಿತ)ದಿಂದಾದ ಗುಣದಿಂದಲಾಗಲಿ ದೋಷದಿಂದಲಾಗಲಿ ಒಂದಿಷ್ಟೂ ಆ (ಆಧಾರವಸ್ತು) ಎಲ್ಲಿಯೂ ಸಂಬದ್ಧವಾಗುವದಿಲ್ಲ.[2]

---

1. ಇದೇ ಸೂತ್ರಭಾಷ್ಯದಲ್ಲಿ ಹೇಳಿರುವ ಆತ್ಮಾನಾತ್ಮಗಳ ಅಧ್ಯಾಸ. ಇಲ್ಲಿಂದ ಮುಂದಕ್ಕೆ ಅಧ್ಯಾಸವಿಷಯದಲ್ಲಿ ತೋರಿಸಿರುವ ಅಭಿಪ್ರಾಯಗಳೆಲ್ಲ ಭಾಷ್ಯದಲ್ಲಿವೆ.

2. ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದು ಭಾವಿಸಿದಾಗ ಅದಕ್ಕೆ ಬೆಳ್ಳಿಯ ಗುಣವು ಬರುವದಿಲ್ಲ, ಹಗ್ಗವನ್ನು ಹಾವೆಂದು ತಿಳಿದಾಗ ಹಾವಿನ ವಿಷಯವೇನೂ ಹಗ್ಗಕ್ಕೆ ಅಂಟಿಕೊಂಡಿರುವದಿಲ್ಲ. ಮುಂದಿನ ಶ್ಲೋಕದಲ್ಲಿ ಬೇರೆಯ ಉದಾಹರಣೆಗಳನ್ನು ಕೊಟ್ಟಿದೆ.

**ಕಿಂ ಮರುರ್ಮೃಗತೃಷ್ಣಾಮ್ಬುಪೂರೇಣಾರ್ದ್ರತ್ವಮೃಚ್ಛತಿ ।
ದೃಷ್ಟಿಸಂಸ್ಥಿತಪೀತೇನ ಶಙ್ಖಃ ಪೀತಾಯತೇ ಕಿಮು ॥ ೪೬೫ ॥
ಬಾಲಕಲ್ಪಿತನೈಲ್ಯೇನ ವ್ಯೋಮ ಕಿಂ ಮಲಿನಾಯತೇ ॥ ೪೬೬½[1] ॥**

೪೬೫–೪೬೬½. ಮರುಭೂಮಿಯು ಬಿಸಿಲುಕುದುರೆಯ ನೀರಿನಿಂದ ಒದ್ದೆಯಾಗುವದೆ? ಕಣ್ಣಿನಲ್ಲಿರುವ ಹಳದಿಯಿಂದ ಶಂಖವು ಹಳದಿಯಾಗುವದೆ? ಅವಿವೇಕಿಗಳು ಕಲ್ಪಿಸಿಕೊಳ್ಳುವ ನೀಲವರ್ಣದಿಂದ ಆಕಾಶವೇನಾದರೂ ಮಲಿನವಾಗುವದೆ?

## ಅವಿಷಯನಾದ ಆತ್ಮನಲ್ಲಿ ಅಧ್ಯಾಸವಾಗಬಹುದೆ?

**ಶಿಷ್ಯಃ–**

**ಪ್ರತ್ಯಗಾತ್ಮನ್ಯವಿಷಯೇಽನಾತ್ಮಾಧ್ಯಾಸಃ ಕಥಂ ಪ್ರಭೋ ॥ ೪೬೭ ॥
ಪುರೋ ದೃಷ್ಟೇ ಹಿ ವಿಷಯೇಽಧ್ಯಸ್ಯನ್ತಿ ವಿಷಯಾನ್ತರಮ್ ।
ತದ್ದೃಷ್ಟಂ ಶುಕ್ತಿರಜ್ಜ್ವಾದೌ ಸಾದೃಶ್ಯಾದ್ಯನುಬನ್ಧತಃ ॥ ೪೬೮ ॥
ಪರತ್ರ ಪೂರ್ವದೃಷ್ಟಸ್ಯಾವಭಾಸಃ ಸ್ಮೃತಿಲಕ್ಷಣಃ ।
ಅಧ್ಯಾಸಃ ಸ ಕಥಂ ಸ್ವಾಮಿನ್ ಭವೇದಾತ್ಮನ್ಯಗೋಚರೇ ॥ ೪೬೯ ॥
ನಾನುಭೂತಃ ಕದಾಪ್ಯಾತ್ಮಾನನುಭೂತಸ್ಯ ವಸ್ತುನಃ ।
ಸಾದೃಶ್ಯಂ ಸಿಧ್ಯತಿ ಕಥಮನಾತ್ಮನಿ ವಿಲಕ್ಷಣೇ ॥ ೪೭೦ ॥
ಅನಾತ್ಮನ್ಯಾತ್ಮತಾಧ್ಯಾಸಃ ಕಥಮೇಷ ಸಮಾಗತಃ ।
ನಿವೃತ್ತಿಃ ಕಥಮೇತಸ್ಯ ಕೇನೋಪಾಯೇನ ಸಿಧ್ಯತಿ ॥ ೪೭೦ ॥
ಉಪಾಧಿಯೋಗ ಉಭಯೋಃ ಸಮ ಏವೇಶಜೀವಯೋಃ ।
ಜೀವಸ್ಯೈವ ಕಥಂ ಬನ್ಧೋ ನೇಶ್ವರಸ್ಯಾಸ್ತಿ ತತ್ಕಥಮ್ ॥ ೪೭೧ ॥
ಏತತ್ಸರ್ವಂ ದಯಾದೃಷ್ಟ್ಯಾ ಕರಾಮಲಕವತ್ ಸ್ಫುಟಮ್ ।
ಪ್ರತಿಪಾದಯ ಸರ್ವಜ್ಞ ಶ್ರೀಗುರೋ ಕರುಣಾನಿಧೇ ॥ ೪೭೨ ॥**

೪೬೭–೪೭೨. ಶಿಷ್ಯನ (ಪ್ರಶ್ನೆ): ವಿಷಯನಲ್ಲದ ಪ್ರತ್ಯಗಾತ್ಮನಲ್ಲಿ ಅನಾತ್ಮದ ಅಧ್ಯಾಸವು ಆದದ್ದು ಹೇಗೆ, ಪ್ರಭುವೆ? ಎದುರಿಗೆ ಕಾಣುತ್ತಿರುವ ವಿಷಯದಲ್ಲಲ್ಲವೆ, ಮತ್ತೊಂದು ವಿಷಯವನ್ನು ಅಧ್ಯಾಸಮಾಡುತ್ತಾರೆ? ಶುಕ್ತಿ, ರಜ್ಜು– ಮುಂತಾದವು ಆ (ಅಧ್ಯಾಸವು) ಸಾದೃಶ್ಯವೇ ಮುಂತಾದವುಗಳ ಸಂಬಂಧದಿಂದ (ಆಗಿರುವದು) ಕಂಡುಬರುತ್ತಿದೆ. **ಅಧ್ಯಾಸ**ವೆಂದರೆ ಒಂದು ವಸ್ತುವಿನಲ್ಲಿ ಹಿಂದೆ ಕಂಡಿದ್ದ (ವಸ್ತುವಿನಂತೆ) ಸ್ಮೃತಿರೂಪವಾಗಿ ತೋರುವದು. ಆ (ಅಧ್ಯಾಸವು)

1. ಈ ಆಕ್ಷೇಪವೂ ಸಮಾಧಾನವೂ ಸೂತ್ರಭಾಷ್ಯದ ಉಪೋದ್ಘಾತದಿಂದ ತೆಗೆದುಕೊಂಡವುಗಳು.

ವಿಷಯನಲ್ಲದ ಆತ್ಮನಲ್ಲಿ ಹೇಗಾದೀತು, ಸ್ವಾಮಿ? ಆತ್ಮನನ್ನು ಯಾವಾಗಲೂ (ಯಾರೂ) ಅನುಭವಿಸಿದ್ದಿಲ್ಲ. ಅನುಭವಿಸದೆ ಇದ್ದ ವಸ್ತುವಿನ ಸಾದೃಶ್ಯವು (ಅವನಿಗಿಂತ) ವಿಲಕ್ಷಣವಾಗಿರುವ ಅನಾತ್ಮದಲ್ಲಿ ಹೇಗೆ ಸಿದ್ಧಿಸುತ್ತಿದೆ? ಅನಾತ್ಮದಲ್ಲಿ ಈ ಆತ್ಮತ್ವದ ಅಧ್ಯಾಸವು ಹೇಗೆ ಬಂದಿತು? ಇದು ಹೇಗೆ, ಯಾವ ಉಪಾಯದಿಂದ, ನಿವೃತ್ತಿಯಾದೀತು? ಈಶ್ವರ, ಜೀವ– ಇಬ್ಬರಿಗೂ ಉಪಾಧಿಯು ಸಮನಾಗಿರುವಲ್ಲಿ ಜೀವನಿಗೆ ಬಂಧ, ಈಶ್ವರನಿಗೆ ಇಲ್ಲ– ಎಂಬುದು ಹೇಗೆ? ಇದೆಲ್ಲವನ್ನೂ ಕೃಪಾದೃಷ್ಟಿಯಿಂದ ಅಂಗೈನೆಲ್ಲಿಯಂತೆ ಸ್ಫುಟವಾಗಿ, ಸರ್ವಜ್ಞನೂ ಕರುಣಾನಿಧಿಯೂ ಆದ ಶ್ರೀಗುರುವೆ, ತಿಳಿಸಿಕೊಡುವನಾಗು!

**ಶ್ರೀಗುರುಃ–**

**ನ ತಾವದಯಮೇಕಾನ್ತೇನಾತ್ಮಾಽವಿಷಯ ಇಷ್ಯತೇ ।**
**ಅಸ್ಯಾಸ್ಮತ್ಪ್ರತ್ಯಯಾರ್ಥತ್ವಾದಪರೋಕ್ಷ್ಯಾಚ್ಚ ಸರ್ವಶಃ[1] ॥ ೪೭೩ ॥**
**ಪ್ರಸಿದ್ಧಿರಾತ್ಮನೋಽಸ್ತ್ಯೇವ ನ ಕಸ್ಯಾಪಿ ಚ ದೃಶ್ಯತೇ ।**
**ಪ್ರತ್ಯಯೋ ನಾಹಮಸ್ಮೀತಿ ನ ಹ್ಯಸ್ತಿ ಪ್ರತ್ಯಗಾತ್ಮನಿ ॥ ೪೭೪ ॥**
**ನ ಕಸ್ಯಾಪಿ ಸ್ವಸದ್ಭಾವೇ ಪ್ರಮಾಣಮಭಿಕಾಙ್ಕ್ಷ್ಯತೇ ।**
**ಪ್ರಮಾಣಾನಾಂ ಚ ಪ್ರಾಮಾಣ್ಯಂ ಯನ್ಮೂಲಂ ಕಿಂ ನು[2] ಬೋಧಯೇತ್**
**ಮಾಯಾಕಾರ್ಯೈಸ್ತಿರೋಭೂತೋ ನೈಷ ಆತ್ಮಾನುಭೂಯತೇ ।**
**ಮೇಘವೃನ್ದೈರ್ಯಥಾ ಭಾನುಸ್ತಥಾಯಮಹಮಾದಿಭಿಃ ॥ ೪೭೬ ॥**
**ಪುರಸ್ಥ ಏವ ವಿಷಯೋ ವಸ್ತುನ್ಯಧ್ಯಸ್ಯತಾಮಿತಿ ।**
**ನಿಯಮೋ ನ ಕೃತಃ ಸದ್ಭಿರ್ಭ್ರಾನ್ತಿರೇವಾತ್ರ ಕಾರಣಮ್ ॥ ೪೭೭ ॥**
**ದೃಗಾದ್ಯವಿಷಯೇ ವ್ಯೋಮ್ನಿ ನೀಲತಾದಿ ಯಥಾಽಬುಧಾಃ ।**
**ಅಧ್ಯಸ್ಯನ್ತಿ ತಥೈವಾಸ್ಮಿನ್ನಾತ್ಮನ್ಯಪಿ ಮತಿಭ್ರಮಾತ್ ॥ ೪೭೮ ॥**

೪೭೩–೪೭೮. ಗುರುವಿನ ಉತ್ತರ: ಮೊದಲು ಈ ಆತ್ಮನು ನಿಯಮದಿಂದ ಅವಿಷಯನೆಂದೇ (ನಾವು) ಒಪ್ಪಿರುವದಿಲ್ಲ. ಏಕೆಂದರೆ ಇವನಿಗೆ ಅಸ್ಮತ್ಪ್ರತ್ಯಯ ವಿಷಯವು (ನಾನೆಂಬ ಪ್ರತ್ಯಯಕ್ಕೆ ವಿಷಯನಾಗಿರುವದು) ಇದೆ. ಯಾವಾಗಲೂ ಅಪರೋಕ್ಷನಾಗಿರುವಿಕೆಯೂ ಇದೆಯಾಗಿ ಆತ್ಮನು ಪ್ರಸಿದ್ಧನಾಗಿಯೇ ಇರುತ್ತಾನೆ. ಇವನು ಯಾರಿಗೂ ಕಾಣಿಸುವದಿಲ್ಲವಾದರೂ[3] (?) ನಾನು ಇಲ್ಲ ಎಂಬ ಪ್ರತ್ಯಯವು

1. ಈ ಶ್ಲೋಕವನ್ನು ಸೂತ್ರಭಾಷ್ಯಕ್ಕನುಗುಣವಾಗಿ ತಿದ್ದಿಕೊಂಡಿದೆ.
2. ಈ ವಾಕ್ಯವು ಸರಿಯಾಗಿ ಅನ್ವಯಿಸುವದಿಲ್ಲ. 'ಕಿಂ ನು' ಎಂದು ತಿದ್ದಿಕೊಂಡಿದೆ.
3. ಏತಕ್ಕೂ ವಿಷಯವಲ್ಲವಾದರೂ ಎಂದರ್ಥ.

ಪ್ರತ್ಯಗಾತ್ಮನಲ್ಲಿ ಇರುವದಿಲ್ಲವಷ್ಟೆ ? ತಾನು ಇರುವೆನೆಂಬುದಕ್ಕೆ ಯಾವನಿಗೂ ಪ್ರಮಾಣವು ಬೇಕಾಗುವದಿಲ್ಲ. ಪ್ರಮಾಣಗಳಿಗೆ ಪ್ರಾಮಾಣ್ಯವು ಯಾವ (ಆತ್ಮನ) ಮೂಲಕವೇ ಆಗುವದೋ (ಅವನನ್ನು) ಯಾವದು ತಿಳಿಸಿಕೊಟ್ಟೀತು[1] ? ಈ ಆತ್ಮನು ಮಾಯಾಕಾರ್ಯಗಳಾದ ಅಹಂಕಾರವೇ ಮುಂತಾದವುಗಳಿಂದ ಮೋಡಗಳ ಗುಂಪುಗಳಿಂದ ಮರೆಯಾಗಿರುವ ಸೂರ್ಯನಂತೆ– ಮರೆಯಾಗಿರುವದರಿಂದ (ಸರಿಯಾಗಿ) ಅನುಭವಕ್ಕೆ ಬರುತ್ತಿಲ್ಲ. ಎದುರಿಗೆ ಇರುವ ವಿಷಯವಾದ ವಸ್ತುವಿನಲ್ಲಿಯೇ ಅಧ್ಯಾಸಮಾಡಬೇಕೆಂಬ ನಿಯಮವನ್ನೇನೂ ಬಲ್ಲವರು ಮಾಡಿರುವದಿಲ್ಲ. ಇಲ್ಲಿ ಭ್ರಾಂತಿಯೇ ಕಾರಣವು. ಚಕ್ಷುಸ್ಸೇ ಮುಂತಾದವುಗಳಿಗೆ ವಿಷಯವಲ್ಲದ ಆಕಾಶದಲ್ಲಿ ನೀಲವರ್ಣವೇ ಮುಂತಾದವುಗಳನ್ನು ಅವಿವೇಕಿಗಳು ಹೇಗೆ ಅಧ್ಯಾಸ ಮಾಡುತ್ತಾರೋ ಹಾಗೆಯೇ ಈ ಆತ್ಮನಲ್ಲಿಯೂ ಬುದ್ಧಿಭ್ರಾಂತಿಯಿಂದ (ಅಧ್ಯಾಸ ಮಾಡುತ್ತಿದಾರೆ).

**ಅನಾತ್ಮನ್ಯಾತ್ಮತಾಧ್ಯಾಸೇ ನ ಸಾದೃಶ್ಯಮಪೇಕ್ಷ್ಯತೇ |**
**ಪೀತೋಽಯಂ ಶಙ್ಖ ಇತ್ಯಾದೌ ಸಾದೃಶ್ಯಂ ಕಿಮಪೇಕ್ಷಿತಮ್ ||೪೭೯||**
**ನಿರುಪಾಧಿಭ್ರಮೇಷ್ವಸ್ಮಿನ್ನೈವಾಪೇಕ್ಷಾ ಪ್ರದೃಶ್ಯತೇ |**
**ಸೋಪಾಧಿಷ್ವೇವ ತದ್ದೃಷ್ಟಂ ರಜ್ಜುಸರ್ಪಭ್ರಮಾದಿಷು ||೪೮೦||**

೪೭೯–೪೮೦. ಅನಾತ್ಮದಲ್ಲಿ ಆತ್ಮತ್ವವನ್ನು ಅಧ್ಯಾಸಮಾಡುವದಕ್ಕೆ ಸಾದೃಶ್ಯವು ಬೇಕಿರುವದಿಲ್ಲ. 'ಈ ಶಂಖವು ಹಳದಿ' ಎಂಬುದೇ ಮುಂತಾದ (ಅಧ್ಯಾಸ)ದಲ್ಲಿ ಯಾವ (ಸಾದೃಶ್ಯವು) ಬೇಕಾಗಿದೆ ? **ನಿರುಪಾಧಿಕ**ಭ್ರಮಗಳಲ್ಲಿ ಈ (ಸಾದೃಶ್ಯದ) ಅಪೇಕ್ಷೆಯು ಕಂಡುಬರುವದೇ ಇಲ್ಲ, ಹಗ್ಗದ ಹಾವೇ ಮುಂತಾದ **ಸೋಪಾಧಿಕ**ಭ್ರಮಗಳಲ್ಲಿ[2] ಮಾತ್ರವೇ ಅದು (ಬೇಕಾಗಿರುತ್ತದೆ) ಎಂದು ಕಂಡುಬಂದಿದೆ.

**ತಥಾಪಿ ಕಿಞ್ಚಿದ್ವಕ್ಷ್ಯಾಮಿ ಸಾದೃಶ್ಯಂ ಶೃಣು ತತ್ಪರಃ |**
**ಅತ್ಯನ್ತನಿರ್ಮಲಃ ಸೂಕ್ಷ್ಮ ಆತ್ಮಾಽಯಮತಿಭಾಸ್ವರಃ ||೪೮೧||**
**ಬುದ್ಧಿಸ್ತಥೈವ ಸತ್ತ್ವಾತ್ಮಾ ಸಾಭಾಸಾ ಭಾಸ್ವರಾಽಮಲಾ |**
**ಸಾಂನಿಧ್ಯಾದಾತ್ಮವದ್ಭಾತಿ ಸೂರ್ಯವತ್ ಸ್ಫಟಿಕೋ ಯಥಾ ||೪೮೨||**

---

1. ಆತ್ಮನು ವಿಷಯಿ, ಪ್ರಮೇಯನಲ್ಲ, ಪ್ರಮಾಣವನ್ನುಕೂಡ ಅವನೇ ಬೆಳಗಿ ತೋರಿಸುತ್ತಾನೆ. ಆದ್ದರಿಂದ ಯಾವ ಪ್ರಮಾಣವೂ ಅವನನ್ನು ತಿಳಿಸಲಾರದು.

2. ಕನ್ನಡಿಯಲ್ಲಿ ಪ್ರತಿಬಿಂಬವು ಕಂಡಾಗ ಅದು ಮುಖವೆಂದು ತಿಳಿಯುವದು ಸೋಪಾಧಿಕಭ್ರಮವು. ರಜ್ಜುಸರ್ಪಭ್ರಮೆಯಲ್ಲಾಗಲಿ, ಶಂಖವು ಹಳದಿ ಎಂಬ ಭ್ರಮೆಯಲ್ಲಾಗಲಿ ಯಾವ ಉಪಾಧಿಯೂ ಇಲ್ಲ. ಹೀಗಿರುವಲ್ಲಿ ಇವುಗಳಲ್ಲಿ ಒಂದು ಸೋಪಾಧಿಕವೆಂದೂ ಇನ್ನೊಂದು ನಿರುಪಾಧಿಕವೆಂದೂ ಹೇಗೆ ಗ್ರಂಥಕರ್ತರು ನಿಶ್ಚಯಿಸಿದರೋ ತಿಳಿಯದು.

**ಆತ್ಮಾಭಾಸಂ ತತೋ ಬುದ್ಧಿರ್ಬುದ್ಧ್ಯಾಭಾಸಂ ತತೋ ಮನಃ ।**
**ಅಕ್ಷಾಣಿ ಮನ ಆಭಾಸಾನ್ಯಕ್ಷಾಭಾಸಮಿದಂ ವಪುಃ ॥ ೪೮೩ ॥**
**ಅತ ಏವಾತ್ಮತಾಬುದ್ಧಿರ್ದೇಹಾಕ್ಷಾದಾವನಾತ್ಮನಿ ॥ ೪೮೪[1] ॥**
**ಮೂಢಾನಾಂ ಪ್ರತಿಬಿಮ್ಬಾದೌ ಬಾಲಾನಾಮಿವ ದೃಶ್ಯತೇ ।**
**ಸಾದೃಶ್ಯಂ ವಿದ್ಯತೇ ಬುದ್ಧಾವಾತ್ಮನೋಽಧ್ಯಾಸಕಾರಣಮ್ ॥ ೪೮೫ ॥**

೪೮೩-೪೮೫. ಹೀಗಿದ್ದರೂ[2] ಒಂದಾನೊಂದು ಸಾದೃಶ್ಯವನ್ನು ಹೇಳು ತ್ತೇನೆ, ಅದರಲ್ಲಿಯೇ ಮನಸ್ಸಿಟ್ಟು ಕೇಳು. ಈ ಆತ್ಮನು ಅತ್ಯ ತನಿರ್ಮಲನು, ಸೂಕ್ಷ್ಮನು, ಹೆಚ್ಚಿನ ಪ್ರಕಾಶದ ರೂಪದವನು. ಬುದ್ಧಿಯೂ ಸತ್ತ್ವಗುಣದಿಂದ ಕೂಡಿ ಆಭಾಸದಿಂದ ಕೂಡಿಯೂ ಪ್ರಕಾಶರೂಪವಾಗಿಯೂ ನಿರ್ಮಲವಾಗಿಯೂ ಇದ್ದು ಆತ್ಮನ ಸನ್ನಿಧಿಯಿಂದ- ಸ್ಫಟಿಕವು ಸೂರ್ಯನಂತೆ (ಪ್ರಕಾಶಯುಕ್ತವಾಗಿ) ತೋರುವಂತೆ- ಆತ್ಮನಹಾಗೆಯೇ ಕಾಣುತ್ತದೆ. ಆದ್ದರಿಂದ ಬುದ್ಧಿಯು ಆತ್ಮನ ಆಭಾಸವುಳ್ಳದ್ದಾಗಿದೆ, ಆದ್ದರಿಂದ ಮನಸ್ಸು ಬುದ್ಧಿಯ ಆಭಾಸವುಳ್ಳದ್ದಾಗಿದೆ, ಇಂದ್ರಿಯಗಳು ಮನಸ್ಸಿನ ಆಭಾಸವುಳ್ಳವು, ಈ ಶರೀರವು ಇಂದ್ರಿಯಗಳ ಆಭಾಸ ವುಳ್ಳದ್ದಾಗಿದೆ. ಆದ್ದರಿಂದಲೇ ದೇಹ, ಇಂದ್ರಿಯಗಳು- ಮುಂತಾದ ಅನಾತ್ಮದಲ್ಲಿ ಮೂಢರಿಗೆ- ಮಕ್ಕಳಿಗೆ ಪ್ರತಿಬಿಂಬವೇ ಮುಂತಾದದ್ದರಲ್ಲಿ (ತಾವೆಂಬ ಬುದ್ಧಿ) ಯಿರುವಂತೆ- ಆತ್ಮಬುದ್ಧಿಯಿರುತ್ತದೆ.[3] (ಹೀಗೆ) ಬುದ್ಧಿಯಲ್ಲಿ ಅಧ್ಯಾಸಕ್ಕೆ ಕಾರಣ ವಾದ ಸಾದೃಶ್ಯವಿರುತ್ತದೆ.

**ಅನಾತ್ಮನ್ಯಹಮಿತ್ಯೇವ ಯೋಽಯಮಧ್ಯಾಸ ಈರಿತಃ ।**
**ಸ್ಯಾದುತ್ತರೋತ್ತರಾಧ್ಯಾಸೇ ಪೂರ್ವಪೂರ್ವಸ್ತು ಕಾರಣಮ್ ॥ ೪೮೬ ॥**

೪೮೬. ಅನಾತ್ಮದಲ್ಲಿ ನಾನು ಎಂದೇ ತಿಳಿಯುವ ಈ ಹೇಳಿದ ಅಧ್ಯಾಸ ವಿದೆಯಲ್ಲ, (ಇದರಲ್ಲಿ) ಹಿಂದುಹಿಂದಿನ ಅಧ್ಯಾಸವು ಮುಂದುಮುಂದಿನ ಅಧ್ಯಾಸಕ್ಕೆ ಕಾರಣವು.[4]

---

1. ಹಿಂದಿನ (೪೬೬ಗ್ರ) ಅರ್ಧಶ್ಲೋಕವನ್ನು ಸೇರಿಸಿದರೆ ಇಲ್ಲಿಗೆ ಒಂದು ಶ್ಲೋಕ ವಾಯಿತು.

2. ಸಾದೃಶ್ಯವಿರಬೇಕಾದದ್ದೇನೂ ಇಲ್ಲವಾದರೂ.

3. 'ಬುದ್ಧೇಶ್ಚಾತ್ಮಸಮನ್ಯೈರ್ಮಲ್ಯಾದ್ಯುಪಪತ್ತೇರಾತ್ಮಚೈತನ್ಯಾಕಾರಾಭಾಸತ್ವೋಪಪತ್ತಿಃ । ಬುದ್ಧ್ಯಾಭಾಸಂ ಮನಃ, ತದಾಭಾಸಾನೀನ್ದ್ರಿಯಾಣಿ, ಇನ್ದ್ರಿಯಾಭಾಸಶ್ಚ ದೇಹಃ' (ಗೀ. ಭಾ. ೧೮-೫೦) ಎಂಬ ಭಾಷ್ಯವಾಕ್ಯದಿಂದ ಈ ಅಭಿಪ್ರಾಯವನ್ನು ತೆಗೆದುಕೊಂಡಿದೆ.

4. ಬುದ್ಧಿಯನ್ನು ಆತ್ಮನೆಂದು ತಿಳಿದುಕೊಂಡದ್ದರಿಂದ ಬುದ್ಧಿಯಂತೆ ಹೊಳೆಯುವ ಮನಸ್ಸನ್ನು ಹಾಗೆಂದು ತಿಳಿಯುವದಕ್ಕೆ ಕಾರಣ. ಹೀಗೆಯೇ ಮುಂದೆ ದೇಹಾದಿಗಳವರೆಗಿನ ಅಧ್ಯಾಸಕ್ಕೂ ಹಿಂದುಹಿಂದಿನ ಅಧ್ಯಾಸವು ಕಾರಣವಾಗಿದೆ. ಆತ್ಮಚೈತನ್ಯಾಭಾಸವು ಇವುಗಳಲ್ಲಿರುವದೇ ಅಧ್ಯಾಸಕ್ಕೆ ಕಾರಣವೆಂದು ಹೇಳಿದಂತೆ ಆಯಿತು.

**ಸುಪ್ತಿಮೂರ್ಛೋತ್ಥಿತೇಷ್ವೇವ ದೃಷ್ಟಃ ಸಂಸಾರಲಕ್ಷಣಃ ।**
**ಅನಾದಿರೇಷಾಽವಿದ್ಯಾತಃ ಸಂಸ್ಕಾರೋಽಪಿ ಚ ತಾದೃಶಃ ॥ ೪೮೭ ॥**

೪೮೭. ನಿದ್ರೆ, ಮೂರ್ಛೆ– ಇವುಗಳಿಂದ ಎಚ್ಚತ್ತಕೂಡಲೆ (?) ಸಂಸಾರವೆಂಬುದು ಕಂಡುಬರುತ್ತದೆ. ಆದ್ದರಿಂದ ಈ ಅವಿದ್ಯೆಯ ಅನಾದಿ, ಸಂಸ್ಕಾರವೂ ಅಂಥದ್ದೇ.[2]

## ಅಧ್ಯಾಸಕ್ಕೆ ಕಾರಣ

**ಅಧ್ಯಾಸಬನ್ಧಾಗಮನಸ್ಯ[3] ಕಾರಣಂ**
**ಶೃಣು ಪ್ರವಕ್ಷ್ಯಾಮಿ ಸಮಾಹಿತಾತ್ಮಾ ।**
**ಯಸ್ಮಾದಿದಂ ಪ್ರಾಪ್ತಮನರ್ಥಜಾತಂ**
**ಜನ್ಮಾಪ್ಯಯವ್ಯಾಧಿಜರಾದಿದುಃಖಮ್ ॥ ೪೮೮ ॥**

೪೮೮. ಅಧ್ಯಾಸಬಂಧವು ಬರುವದಕ್ಕೆ ಕಾರಣವನ್ನು ಹೇಳುತ್ತೇನೆ, ಮನಸ್ಸನ್ನು ಸಮಾಧಾನದಲ್ಲಿಟ್ಟುಕೊಂಡು ಕೇಳು. ಏತರಿಂದ ಹುಟ್ಟು, ಸಾವು, ರೋಗ, ಮುಪ್ಪು– ಮುಂತಾದ ದುಃಖವೆಂಬ ಅನರ್ಥಸಮೂಹವು ಬಂದಿರುವದೋ (ಅದನ್ನು ಹೇಳುವೆನು).

**ಆತ್ಮೋಪಾಧೇರವಿದ್ಯಾಯಾ ಅಸ್ತಿ ಶಕ್ತಿದ್ವಯಂ ಮಹತ್ ।**
**ವಿಕ್ಷೇಪ ಆವೃತಿಶ್ಚೇತಿ ಯಾಭ್ಯಾಂ ಸಂಸಾರ ಆತ್ಮನಃ ॥ ೪೮೯ ॥**

೪೮೯. ಆತ್ಮನಿಗೆ **ಉಪಾಧಿಯಾಗಿರುವ ಅವಿದ್ಯೆಗೆ**[4] ಆವರಣ, ವಿಕ್ಷೇಪ –ಎಂಬ ಎರಡು ಮಹಾಶಕ್ತಿಗಳುಂಟು[5] ; ಅವುಗಳಿಂದಲೇ ಆತ್ಮನಿಗೆ ಸಂಸಾರವು ಬಂದಿದೆ.

**ಆವೃತಿಸ್ತಮಸಃ ಶಕ್ತಿಸ್ತದ್ಧ್ಯಾವರಣಕಾರಣಮ್ ।**
**ಮೂಲಾವಿದ್ಯೇತಿ ಸಾ ಪ್ರೋಕ್ತಾ ಯಯಾ ಸಂಮೋಹಿತಂ ಜಗತ್ ॥**

---

1. 'ಸುಪ್ತಿಮೂರ್ಛೋತ್ಥಿತೇಷ್ವೇವ' ಎಂಬಲ್ಲಿ ಏವಕಾರಕ್ಕೆ ಈ ಅರ್ಥವನ್ನು ಮಾಡಿದೆ.

2. ಅದೂ ಅನಾದಿಯೇ ಎಂದಭಿಪ್ರಾಯವಿರಬಹುದು. ಅವಿದ್ಯೆಯ ಅನಾದಿತ್ವಕ್ಕೆ ಹೇಳಿರುವ ಹೇತು ಯಾವದೆಂಬುದು ಸ್ಪಷ್ಟವಾಗಿಲ್ಲ.

3. ಬಾಧ ಎಂಬುದನ್ನು ಬನ್ಧ ಎಂದು ತಿದ್ದಿಕೊಂಡಿದೆ.

4. ಆತ್ಮನಿಗೆ ಅವಿದ್ಯೆಯು ಉಪಾಧಿಯೆಂಬುದು ಭಾಷ್ಯದಲ್ಲಿ ಕಾಣುವದಿಲ್ಲ.

5. 'ಆವರಣವು ಅವಿದ್ಯೆಯ ಶಕ್ತಿ' ಎಂದರೇನೆಂಬುದು ತಿಳಿಯಲಿಲ್ಲ ; ಅವಿದ್ಯೆ ಎಂದರೇ ಆವರಣವಲ್ಲವೆ ?

೪೯೦. ಆವರಣವೆಂಬುದು ತಮಸ್ಸಿನ ಶಕ್ತಿ; ಆ (ತಮೋಗುಣವೇ) ಅಲ್ಲವೆ, ಮರೆಮಾಡುವದಕ್ಕೆ ಕಾರಣ ? ಆ ಶಕ್ತಿಗೆ **ಮೂಲಾವಿದ್ಯೆ**[1] ಎಂಬ ಹೆಸರು ; ಅದರಿಂದ ಜಗತ್ತೆಲ್ಲವೂ ಮೋಹಿತವಾಗಿರುವದು.

**ವಿವೇಕವಾನಪ್ಯತಿಯೌಕ್ತಿಕೋಽಪಿ**
**ಶ್ರುತಾತ್ಮತತ್ತ್ವೋಽಪಿ ಚ ಪಣ್ಡಿತೋಽಪಿ ।**
**ಶಕ್ತ್ಯಾ ಯಯಾ ಸಂವೃತಬೋಧದೃಷ್ಟಿ-**
**ರಾತ್ಮಾನಮಾತ್ಮಸ್ಥಮಿಮಂ ನ ವೇದ ॥ ೪೯೧ ॥**

೪೯೧. ವಿವೇಕವುಳ್ಳವನಾಗಿದ್ದರೂ ಯುಕ್ತಿಗಳನ್ನರಿತವನಾಗಿದ್ದರೂ ಆತ್ಮತತ್ತ್ವದ ವಿಷಯದಲ್ಲಿ ಶ್ರವಣಮಾಡಿದವನಾಗಿದ್ದರೂ ಪಂಡಿತನಾಗಿದ್ದರೂ ಈ (ಆವರಣ)ಶಕ್ತಿಯಿಂದ ಜ್ಞಾನದೃಷ್ಟಿಯು ಮರೆಯಾಗಿದ್ದರೆ ತನ್ನಲ್ಲಿಯೇ ಇರುವ ಆತ್ಮನನ್ನು ಅರಿತುಕೊಳ್ಳಲಾರದೆ ಇರುವನು.[2]

**ವಿಕ್ಷೇಪನಾಮ್ನೀ ರಜಸಸ್ತು ಶಕ್ತಿಃ**
**ಪ್ರವೃತ್ತಿಹೇತುಃ ಪುರುಷಸ್ಯ ನಿತ್ಯಮ್ ।**
**ಸ್ಥೂಲಾದಿಲಿಙ್ಗಾನ್ತಮಶೇಷಮೇತ-**
**ದ್ಯಯಾ ಸದಾತ್ಮನ್ಯಸದೇವ ಸೂಯತೇ ॥ ೪೯೨ ॥**

೪೯೨. **ವಿಕ್ಷೇಪ**ವೆಂಬುದು ರಜೋಗುಣದ ಶಕ್ತಿ, ಅದು ಮನುಷ್ಯನು ನಿತ್ಯವೂ ಪ್ರವೃತ್ತಿಸುವದಕ್ಕೆ ಕಾರಣವು. ಸ್ಥೂಲಾದಿಯಾಗಿ ಲಿಂಗದವರೆಗೆ (ಇರುವದೆಲ್ಲವೂ) ಸದಾತ್ಮನಲ್ಲಿಲ್ಲದಿದ್ದರೂ ಅದರಿಂದ ಉಂಟುಮಾಡಲ್ಪಡುತ್ತದೆ.[4]

**ನಿದ್ರಾ ಯಥಾ ಪು(ಪೂ ?)ರುಷಮಪ್ರಮತ್ತಂ**[5]
**ಸಮಾವೃಣೋತೀಯಮಪಿ ಪ್ರತೀಚಮ್ ।**
**ತಥಾವೃಣೋತ್ಯಾವೃತಿಶಕ್ತಿರನ್ತ-**
**ರ್ವಿಕ್ಷೇಪಶಕ್ತಿಂ ಪರಿಜೃಮ್ಭಯನ್ತೀ ॥ ೪೯೩ ॥**

---

1. ಶಕ್ತಿಯನ್ನು 'ಮೂಲಾವಿದ್ಯೆ' ಎಂದು ಕರೆದಿರುವದು ಭಾಷ್ಯಗ್ರಂಥಗಳಲ್ಲಿ ಕಂಡು ಬರುವದಿಲ್ಲ.

2. ವಿ. ಚೂ. ೧೧೩. 3. ವಿ ಚೂ. ೧೧೦–೧೧೧.

4. ಇದು ಎಲ್ಲಿಂದ ತೆಗೆದುಕೊಂಡ ಅಭಿಪ್ರಾಯವೋ ತಿಳಿಯಲಿಲ್ಲ. ವೇ.ಸಾ.ದಲ್ಲಿ ವಾಕ್ಯಸುಧೆಯಿಂದ (೧೬) ಆರಿಸಿದ 'ವಿಕ್ಷೇಪಶಕ್ತಿರ್ಲಿಙ್ಗಾದಿ ಬ್ರಹ್ಮಾಣ್ಡಾನ್ತಂ ಜಗತ್ಸೃಜೇತ್' ಎಂಬ ಶ್ಲೋಕಾರ್ಥವಿದೆ. ಇಲ್ಲಿರುವದರ ಅರ್ಥವೇ ಬೇರೆ. ವಿ. ಚೂ. ೧೧೨–೧೧೫ರವರೆಗೆ ಆವರಣವಿಕ್ಷೇಪಗಳ ವರ್ಣನೆಯನ್ನು ಮಾಡಿರುವ ಬಗೆಯನ್ನು ಇದಕ್ಕೆ ಹೋಲಿಸಿರಿ.

5. ಈ ಪಾದವು ಛಂದೋಬದ್ಧವಾಗಿರುವಂತೆ ಕಾಣಿಸುವದಿಲ್ಲ.

೪೯೩. ನಿದ್ರೆಯು ಹೇಗೆ ಎಚ್ಚರಿಕೆಯಿಂದಿರುವಾತನನ್ನು ಮುಸುಕಿಕೊಳ್ಳುವದೋ ಹಾಗೆ ಈ ಆವರಣಶಕ್ತಿಯೂ ಪ್ರತ್ಯಗಾತ್ಮನನ್ನು ಒಳಗೆ ಮುಸುಕಿಕೊಂಡು ವಿಕ್ಷೇಪಶಕ್ತಿಯನ್ನು ಹೊರಹೊಮ್ಮಿಸುವದು.

**ಶಕ್ತ್ಯಾ ಮಹತ್ಯಾಽಽವರಣಾಭಿಧಾನಯಾ**
**ಸಮಾವೃತೇ ಸತ್ಯಮಲಸ್ವರೂಪೇ ।**
**ಪುಮಾನನಾತ್ಮನ್ಯಹಮೇಷ ಏವೇ-**
**ತ್ಯಾತ್ಮತ್ವಬುದ್ಧಿಂ ವಿದಧಾತಿ ಮೋಹಾತ್ ॥ ೪೯೪ ॥**

೪೯೪. ಆವರಣವೆಂಬ ಮಹಾಶಕ್ತಿಯಿಂದ ನಿರ್ಮಲಸ್ವರೂಪನಾದ ಆತ್ಮನು ಮುಸುಕಲ್ಪಟ್ಟಾಗ, ಮನುಷ್ಯನು ಅನಾತ್ಮದಲ್ಲಿ ಇದೇ ನಾನು ಎಂದು ಮೋಹದಿಂದ ಆತ್ಮತ್ವಬುದ್ಧಿಯನ್ನು ಮಾಡಿಕೊಳ್ಳುತ್ತಾನೆ.

**ಯಥಾ ಪ್ರಸುಪ್ತಿಪ್ರತಿಭಾಸದೇಹೇ**
**ಸ್ವಾತ್ಮತ್ವಧೀರೇಷ ತಥಾ ಹ್ಯನಾತ್ಮನಃ ।**
**ಜನ್ಮಾಪ್ಯಯಕ್ಷುದ್ಭಯತೃಟ್ ಶ್ರಮಾದೀ-**
**ನಾರೋಪಯತ್ಯಾತ್ಮನಿ ತಸ್ಯ ಧರ್ಮಾನ್ ॥ ೪೯೫ ॥**

೪೯೫. ಕನಸಿನಲ್ಲಿ ಕಾಣುವ ದೇಹವಲ್ಲಿ ತಾನೆಂಬ ಬುದ್ಧಿ ಹೇಗೋ[1] ಹಾಗೆ ಹುಟ್ಟು, ಸಾವು, ಹಸಿವು, ಹೆದರಿಕೆ, ಬಾಯಾರಿಕೆ, ಶ್ರಮ- ಮುಂತಾದ ಅನಾತ್ಮದ ಧರ್ಮಗಳನ್ನು ತನ್ನಲ್ಲಿ ಹುಟ್ಟುಹಾಕಿಕೊಳ್ಳುತ್ತಾನೆ.

**ವಿಕ್ಷೇಪಶಕ್ತ್ಯಾ ಪರಿಚೋದ್ಯಮಾನಃ**
**ಕರೋತಿ ಕರ್ಮಾಣ್ಯುಭಯಾತ್ಮಕಾನಿ ।**
**ಭುಞ್ಜಾನ ಏತತ್ಫಲಮುಪ್ಯುಪಾತ್ತಂ**
**ಪರಿಭ್ರಮತ್ಯೇವ ಭವಾಮ್ಬುರಾಶೌ ॥ ೪೯೬ ॥**

೪೯೬. ವಿಕ್ಷೇಪಶಕ್ತಿಯಿಂದ ಪ್ರೇರಿತನಾಗಿ (ಪುಣ್ಯಪಾಪ)- ಎರಡೂ ರೂಪವಾದ ಕರ್ಮಗಳನ್ನು ಮಾಡುತ್ತಾನೆ. ಸಂಪಾದಿಸಿದ ಇವುಗಳ ಫಲವನ್ನು ಭೋಗಿಸುತ್ತಾ ಸಂಸಾರಸಮುದ್ರದಲ್ಲಿ ತೊಳಲುತ್ತಲೇ ಇರುವನು.

**ಅಧ್ಯಾಸದೋಷಾತ್ಸಮುಪಾಗತೋಽಯಂ**
**ಸಂಸಾರಬನ್ಧಃ ಪ್ರಬಲಃ[2] ಪ್ರತೀಚಃ ।**
**ಯದ್ಯೋಗತಃ ಕ್ಲಿಶ್ಯತಿ ಗರ್ಭವಾಸ-**
**ಜನ್ಮಾಪ್ಯಯಕ್ಲೇಶಭಯೈರಜಸ್ರಮ್ ॥ ೪೯೭ ॥**

---

1. ಅಲ್ಲಿರುವ ಹುಸಿದೇಹದಲ್ಲಿ ತಾನೆಂಬ ಬುದ್ಧಿಯನ್ನು ಮಾಡಿಕೊಳ್ಳುವಂತೆಯೇ.
2. ಮೂಲದಲ್ಲಿ 'ಪ್ರಬಲ' ಎಂದು ವಿಸರ್ಗವಿಲ್ಲದ ಪಾಠವಿದೆ.

೪೯೭. ಅಧ್ಯಾಸದ ದೋಷದಿಂದ ಈ ಪ್ರಬಲವಾದ ಸಂಸಾರಬಂಧವು ಪ್ರತ್ಯಗಾತ್ಮನಿಗೆ ಬಂದಿರುತ್ತದೆ. ಅದರ ಸಂಬಂಧದಿಂದ ಗರ್ಭವಾಸ, ಹುಟ್ಟು, ಸಾವು, ಕ್ಲೇಶ, ಅಂಜಿಕೆ- ಇವುಗಳಿಂದ ಯಾವಾಗಲೂ ವ್ಯಥೆಪಡುತ್ತಿರುವನು.

**ಅಧ್ಯಾಸೋ ನಾಮ ಖಲ್ವೇಷ ವಸ್ತುನೋ ಯೋऽನ್ಯಥಾಗ್ರಹಃ ।**
**ಸ್ವಾಭಾವಿಕಭ್ರಾನ್ತಿಮೂಲಂ ಸಂಸೃತೇರಾದಿಕಾರಣಮ್ ॥ ೪೯೮ ॥**

೪೯೮. ಅಧ್ಯಾಸವೆಂದರೆ (ಇರುವ) ವಸ್ತುವನ್ನು ಮತ್ತೊಂದು ತೆರನಾಗಿ ತಿಳಿದುಕೊಳ್ಳುವದಲ್ಲವೆ ? ಸ್ವಾಭಾವಿಕವಾಗಿರುವ ಭ್ರಾಂತಿ(?)ಯಿಂದಾಗಿರುವದಿದು. ಸಂಸಾರಕ್ಕೆ (ಇದು) ಆದಿಕಾರಣವು.

**ಸರ್ವಾನರ್ಥಸ್ಯ ತದ್ಬೀಜಂ ಯೋऽನ್ಯಥಾಗ್ರಹ ಆತ್ಮನಃ ।**
**ತತಃ ಸಂಸಾರಸಂಪಾತಃ ಸಂತತಕ್ಲೇಶಲಕ್ಷಣಃ ॥ ೪೯೯ ॥**

೪೯೯. ಆತ್ಮನನ್ನು ಮತ್ತೊಂದು ತೆರನಾಗಿ ತಿಳಿದುಕೊಳ್ಳುವದೆಂಬುದಿದೆಯಲ್ಲ, ಅದೇ ಸರ್ವಾನರ್ಥಕ್ಕೂ ಕಾರಣವು. ಅದರಿಂದಲೇ ಎಡೆಬಿಡದೆ ವ್ಯಥೆಪಡುವ ರೂಪದ ಸಂಸಾರವುಂಟಾಗಿರುವದು.

**ಅಧ್ಯಾಸಾದೇವ ಸಂಸಾರೋ ನಷ್ಟೇऽಧ್ಯಾಸೇ ನ ದೃಶ್ಯತೇ ।**
**ತದೇತದುಭಯಂ ಸ್ಪಷ್ಟಂ ಪಶ್ಯ ತ್ವಂ ಬದ್ಧಮುಕ್ತಯೋಃ ॥ ೫೦೦ ॥**

೫೦೦. ಅಧ್ಯಾಸದಿಂದಲೇ ಸಂಸಾರ, ಅಧ್ಯಾಸವು ಹೋದರೆ (ಅದು) ಕಾಣುವದಿಲ್ಲ. ಈ ಎರಡನ್ನೂ ನೀನು ಬದ್ಧಮುಕ್ತರುಗಳಲ್ಲಿ ಸ್ಪಷ್ಟವಾಗಿ ನೋಡಿಕೊ.

**ಬದ್ಧಂ ಪ್ರವೃತ್ತಿತೋ ವಿದ್ಧಿ ಮುಕ್ತಂ ವಿದ್ಧಿ ನಿವೃತ್ತಿತಃ ।**
**ಪ್ರವೃತ್ತಿರೇವ ಸಂಸಾರೋ ನಿವೃತ್ತಿರ್ಮುಕ್ತಿರಿಷ್ಯತೇ ॥ ೫೦೧ ॥**

೫೦೧. ಪ್ರವೃತ್ತಿಯಿಂದ ಬದ್ಧನೆಂದೂ ನಿವೃತ್ತಿಯಿಂದ ಮುಕ್ತನೆಂದೂ ತಿಳಿದುಕೊ, ಪ್ರವೃತ್ತಿಯೇ ಸಂಸಾರವು, ನಿವೃತ್ತಿಯೇ ಮುಕ್ತಿಯೆನಿಸುವದು.

**ಆತ್ಮನಃ ಸೋऽಯಮಧ್ಯಾಸೋ ಮಿಥ್ಯಾಜ್ಞಾನಪುರಃಸರಃ ।**
**ಅಸತ್ಕಲ್ಪೋऽಪಿ ಸಂಸಾರಂ ತನುತೇ ರಜ್ಜುಸರ್ಪವತ್ ॥ ೫೦೨ ॥**

೫೦೨. ಆತ್ಮನಿಗೆ ಹುಸಿಯಾದ ಅಜ್ಞಾನಪೂರ್ವಕವಾಗಿ[1] ಆಗಿರುವ ಈ ಅಧ್ಯಾಸವು ಅಸತ್ತಿನಂತೆಯೇ ಇರುವದಾದರೂ ಹಗ್ಗದ ಹಾವಿನಂತೆ ಸಂಸಾರವನ್ನುಂಟುಮಾಡಿರುತ್ತದೆ.

---

1. ಇಲ್ಲಿ ಅಜ್ಞಾನವೆಂದರೆ ಆವರಣವೆಂದೇ ಗ್ರಂಥಕಾರರ ಅಭಿಪ್ರಾಯವೆಂತ ಕಾಣುತ್ತದೆ ; ಹಿಂದೆ ೪೯೦ನೆಯ ಶ್ಲೋಕವನ್ನೂ ಮುಂದೆ ೫೧೦ನೆಯ ಶ್ಲೋಕವನ್ನೂ ನೋಡಿ.

## ಪರಮೇಶ್ವರನಿಗೆ ಉಪಾಧಿಯಿಂದ ಬಂಧವಿಲ್ಲ, ಜೀವನಿಗೆ ಉಂಟು

**ಉಪಾಧಿಯೋಗಸಾಮ್ಯೇಽಪಿ ಜೀವವತ್ ಪರಮಾತ್ಮನಃ ।**
**ಉಪಾಧಿಭೇದಾನ್ನೋ ಬನ್ಧಸ್ತತ್ಕಾರ್ಯಮಪಿ ಕಿಞ್ಚನ ॥ ೨೦೩ ॥**

೨೦೩. ಉಪಾಧಿಯ ಸಂಬಂಧವಿರುವದೆಂಬುದು ಸಮವಾಗಿದ್ದರೂ ಉಪಾಧಿಯು ಬೇರೆಯಾಗಿರುವದರಿಂದ ಪರಮಾತ್ಮನಿಗೆ ಜೀವನಿಗಿರುವಂತೆ ಬಂಧವಿಲ್ಲ, ಅದರ (ಯಾವ) ಕಾರ್ಯವೂ ಒಂದಿಷ್ಟೂ (ಅವನಲ್ಲಿ) ಆಗಿರುವದಿಲ್ಲ.

**ಅಸ್ಯೋಪಾಧಿಃ ಶುದ್ಧಸತ್ತ್ವಪ್ರಧಾನಾ**
**ಮಾಯಾ ಯತ್ರ ತ್ವಸ್ಯ ನಾಸ್ತ್ಯಲ್ಪಭಾವಃ ।**
**ಸತ್ತ್ವಸ್ಯೈವೋತ್ಕೃಷ್ಟತಾ ತೇನ ಬನ್ಧೋ**
**ನೋ ವಿಕ್ಷೇಪಸ್ತತ್ಕೃತೋ ಲೇಶಮಾತ್ರಃ ॥ ೨೦೪ ॥**

೨೦೪. ಈ (ಪರಮಾತ್ಮನಿಗೆ) ಶುದ್ಧಸತ್ತ್ವಪ್ರಧಾನವಾದ **ಮಾಯೆಯೇ** ಉಪಾಧಿಯು. ಅದರಲ್ಲಿ ಈ (ಈಶ್ವರ)ನಿಗೆ ಅಲ್ಪತ್ವವಿರುವದಿಲ್ಲ; ಸತ್ತ್ವವೇ ಉತ್ಕೃಷ್ಟವಾಗಿರುತ್ತದೆ. ಆದ್ದರಿಂದ ಬಂಧವಾಗಲಿ, ಅದರಿಂದ ವಿಕ್ಷೇಪವಾಗಲಿ ಒಂದಿಷ್ಟೂ ಇಲ್ಲ.

**ಸರ್ವಜ್ಞೋಽಪ್ರತಿಬದ್ಧಬೋಧವಿಭವಸ್ತೇನೈವ ದೇವಃ ಸ್ವಯಂ**
**ಮಾಯಾಂ ಸ್ವಾಮವಲಮ್ಬ್ಯ ನಿಶ್ಚಲತಯಾ ಸ್ವಚ್ಛನ್ದವೃತ್ತಿಃ ಪ್ರಭುಃ ।**
**ಸೃಷ್ಟಿಸ್ಥಿತ್ಯದನಪ್ರವೇಶಯಮನವ್ಯಾಪಾರಮಾತ್ರೇಚ್ಛಯಾ**
**ಕುರ್ವನ್ ಕ್ರೀಡತಿ ತದ್ರಜಸ್ತಮ ಉಭೇ ಸಂಸ್ತಭ್ಯ ಶಕ್ತ್ಯಾ ಸ್ವಯಾ ॥ ೨೦೫ ॥**

೨೦೫. ಸರ್ವಜ್ಞನೂ, ತಿಳಿವಳಿಕೆಯ ಹೆಚ್ಚಿಗೆಗೆ ಯಾವ ಅಡ್ಡಿಯೂ ಇಲ್ಲದವನೂ ಆದ, ಸ್ವಲ್ಪವೂ ಚಲಿಸದೆ ಸ್ವೇಚ್ಛೆಯಿಂದ ನಡೆಯುವ (ಈ) ಪ್ರಭುವು, ತನ್ನ ಮಾಯೆಯನ್ನವಲಂಬಿಸಿಕೊಂಡು ಸೃಷ್ಟಿ, ಸ್ಥಿತಿ, ಸಂಹರಿಸುವದು, (ಸೃಷ್ಟಿಸಿದ್ದರಲ್ಲಿ) ಪ್ರವೇಶಿಸುವದು, (ಅದನ್ನು) ಹಿಡಿತದಲ್ಲಿಟ್ಟಿರುವದು– ಮುಂತಾದವನ್ನು[1] ಸ್ವೇಚ್ಛೆಯಿಂದ ಮಾಡುತ್ತಾ ಆ (ಮಾಯೆಯ) ರಜಸ್ಸು, ತಮಸ್ಸು– ಈ ಎರಡನ್ನೂ ತನ್ನ ಶಕ್ತಿಯಿಂದ ವಶದಲ್ಲಿಟ್ಟುಕೊಂಡು ಆಟವಾಡುತ್ತಿರುವನು.

**ತಸ್ಮಾದಾವೃತಿವಿಕ್ಷೇಪೌ ಕಿಞ್ಚಿತ್ ಕರ್ತುಂ ನ ಶಕ್ನುತಃ ।**
**ಸ್ವಯಮೇವ ಸ್ವತನ್ತ್ರೋಽಸೌ ತತ್ಪ್ರವೃತ್ತಿನಿರೋಧಯೋಃ ॥ ೨೦೬ ॥**

---

1. ಅಭಿಪ್ರಾಯಕ್ಕೆ ಹೊಂದುವಂತೆ ಕನ್ನಡಿಸಿದೆ.

೫೦೬. ಆದ್ದರಿಂದ[1] ಆವರಣ, ವಿಕ್ಷೇಪ- ಇವುಗಳು (ಆ ಈಶ್ವರನಿಗೆ) ಏನನ್ನೂ ಮಾಡಲಾರವು; ಆತನೇ ಅವೆರಡೂ ತಮ್ಮ (ಕಾರ್ಯದಲ್ಲಿ) ತೊಡಗುವದು, ಅಥವಾ ಬಿಡುವದು- ಇವುಗಳ ವಿಷಯದಲ್ಲಿ ಸ್ವತಂತ್ರನಾಗಿರುತ್ತಾನೆ.

**ತದೇವ ಸಾಧ್ವೀ[2] ಕರ್ಮೇತಿ ಶ್ರುತಿರ್ವಕ್ತಿ ಮಹೇಶಿತುಃ ।**
**ನಿಗ್ರಹಾನುಗ್ರಹೇ ಶಕ್ತಿರಾವೃತಿಕ್ಷೇಪಯೋರ್ಯತಃ ॥ ೫೦೭ ॥**

೫೦೭. (ಹೀಗೆ) ಆವೃತಿ, ವಿಕ್ಷೇಪ- ಈ ಎರಡನ್ನೂ ತಡೆಗಟ್ಟುವದಕ್ಕೆ, (ಅವುಗಳು ವ್ಯಾಪಾರಮಾಡುವಂತೆ) ಅನುಗ್ರಹಿಸುವದಕ್ಕೆ- ಶಕ್ತಿಯಿದೆಯಾದ್ದರಿಂದ ಇವನ್ನೇ ಮಹೇಶ್ವರನ ಕರ್ಮ ಎಂದು ಉತ್ತಮ(ಪ್ರಮಾಣ)ವಾದ ಶ್ರುತಿಯು ಹೇಳುತ್ತಿರುವದು.

**ರಜಸಸ್ತಮಸಶ್ಚೈವ ಪ್ರಾಬಲ್ಯಂ ಸತ್ತ್ವಹಾನತಃ ।**
**ಜೀವೋಪಾಧೌ ತಥಾ ಜೀವೇ ತತ್ಕಾರ್ಯಂ ಬಲವತ್ತರಮ್ ॥ ೫೦೮ ॥**
**ತೇನ ಬನ್ಧೋಽಸ್ಯ ಜೀವಸ್ಯ ಸಂಸಾರೋಽಪಿ ಚ ತತ್ಕೃತಃ ।**
**ಸಂಪ್ರಾಪ್ತಃ ಸರ್ವದಾ ಯತ್ರ ದುಃಖಂ ಭೂಯಃ ಸ ಈಕ್ಷತೇ ॥ ೫೦೯ ॥**

೫೦೮-೫೦೯. ಸತ್ತ್ವವನ್ನು ಕಡಿಮೆಮಾಡಿ ರಜಸ್ಸು, ತಮಸ್ಸು- ಇವುಗಳ ಪ್ರಾಬಲ್ಯವೇ ಜೀವನ ಉಪಾಧಿಯಲ್ಲಿರುತ್ತದೆ. ಆದ್ದರಿಂದ ಜೀವನಲ್ಲಿ ಅವುಗಳ ಕಾರ್ಯವು ಪ್ರಬಲವಾಗಿರುತ್ತದೆ. ಅದರಿಂದ ಈ ಜೀವನಿಗೆ ಬಂಧವಾಗಿರುತ್ತದೆ, ಅದರಿಂದಾದ ಸಂಸಾರವೂ ಬಂದೊದಗಿರುತ್ತದೆ. ಅದರಲ್ಲಿ ಯಾವಾಗಲೂ ಅವನು ಹೆಚ್ಚಾಗಿ ದುಃಖವನ್ನೇ ಕಾಣುತ್ತಿರುತ್ತಾನೆ.

**ಏತಸ್ಯ ಸಂಸೃತೇರ್ಮೂಲಮಧ್ಯಾಸೋಽರ್ಥವಿಪರ್ಯಯಃ ।**
**ಅಧ್ಯಾಸಮೂಲಮಜ್ಞಾನಮಾಹುರಾವೃತಿಲಕ್ಷಣಮ್ ॥ ೫೧೦ ॥**

೫೧೦. ಈ ಸಂಸಾರಕ್ಕೆ ವಸ್ತುವನ್ನು ತಪ್ಪಾಗಿ ತಿಳಿಯುವದೆಂಬ ಅಧ್ಯಾಸವೇ ಮೂಲವು. ಅಧ್ಯಾಸಕ್ಕೆ ಆವರಣವೆಂಬ ಅಜ್ಞಾನವೇ ಕಾರಣವೆಂದು[3] ಹೇಳುತ್ತಾರೆ.

## ಅಜ್ಞಾನಕ್ಕೆ ಜ್ಞಾನದಿಂದಲೇ ನಿವೃತ್ತಿ

**ಅಜ್ಞಾನಸ್ಯ ನಿವೃತ್ತಿಸ್ತು ಜ್ಞಾನೇನೈವ ನ ಕರ್ಮಣಾ ।**
**ಅವಿರೋಧಿತಯಾ ಕರ್ಮ ನೈವಾಜ್ಞಾನಸ್ಯ ಬಾಧಕಮ್ ॥ ೫೧೧ ॥**

೫೧೧. ಅಜ್ಞಾನದ ನಾಶವಾದರೋ ಜ್ಞಾನದಿಂದಲೇ, ಕರ್ಮದಿಂದಲ್ಲ;

1. ಸತ್ತ್ವಪ್ರಧಾನವಾದ ಮಾಯೆಯೇ ಉಪಾಧಿಯಾಗಿರುವದರಿಂದ.
2. 'ಸಾ ಧೀ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
3. ಇಲ್ಲಿಯೂ ಆವರಣವನ್ನು ಅಜ್ಞಾನವೆಂದಿದೆ.

(ಏಕೆಂದರೆ) ಕರ್ಮವು (ಅಜ್ಞಾನಕ್ಕೆ) ವಿರೋಧಿಯಲ್ಲನಾದ್ದರಿಂದ[1] ಅಜ್ಞಾನವನ್ನು ಬಾಧಿಸಲಾರದು.

**ಕರ್ಮಣಾ ಜಾಯತೇ ಜನ್ತುಃ ಕರ್ಮಣೈವ ಪ್ರಲೀಯತೇ ।**
**ಕರ್ಮಣಃ ಕಾರ್ಯಮೇವೈಷಾ ಜನ್ಮಮೃತ್ಯುಪರಮ್ಪರಾ ॥ ೫೧೨ ॥**

೫೧೨. ಜೀವನು ಕರ್ಮದಿಂದಲೇ ಹುಟ್ಟುತ್ತಾನೆ, ಕರ್ಮದಿಂದಲೇ ಸಾಯುತ್ತಾನೆ; ಈ ಹುಟ್ಟುಸಾವುಗಳ ಸಾಲು ಕರ್ಮದ ಕಾರ್ಯವೇ.

**ನೈತಸ್ಮಾತ್ ಕರ್ಮಣಃ ಕಾರ್ಯಮನ್ಯದಸ್ತಿ ವಿಲಕ್ಷಣಮ್ ।**
**ಅಜ್ಞಾನಕಾರ್ಯಂ ತತ್ ಕರ್ಮ ಯತೋಽಜ್ಞಾನೇನ ವರ್ಧತೇ ॥ ೫೧೩ ॥**

೫೧೩. ಕರ್ಮದಿಂದ ಆಗುವ ಕಾರ್ಯವು ಇದಕ್ಕಿಂತ[2] ಬೇರೆಯಾದದ್ದು ಮತ್ತೊಂದಿಲ್ಲ; ಆ ಕರ್ಮವು ಅಜ್ಞಾನದಿಂದಾದದ್ದು, ಏಕೆಂದರೆ ಅದು ಅಜ್ಞಾನದಿಂದ ಬೆಳೆಯುತ್ತದೆ.

**ಯದ್ ಯೇನ ವರ್ಧತೇ ತೇನ ನಾಶಸ್ತಸ್ಯ ನ ಸಿಧ್ಯತಿ ।**
**ಯೇನ ಯಸ್ಯ ಸಹಾವಸ್ಥಾ ವಿರೋಧಾಯ[3] ನ ಕಲ್ಪತೇ ॥ ೫೧೪ ॥**
**ನಾಶಕತ್ವಂ ತದುಭಯೋಃ ಕೋ ನು ಕಲ್ಪಯಿತುಂ ಕ್ಷಮಃ ।**
**ಸರ್ವಂ ಕರ್ಮಾವಿರೋಧ್ಯೇವ ಸದಾಽಜ್ಞಾನಸ್ಯ ಸರ್ವದಾ ॥ ೫೧೫ ॥**

೫೧೪–೫೧೫. ಯಾವದು ಯಾವದರಿಂದ ಬೆಳೆಯುವದೋ, ಅದಕ್ಕೆ ಅದರಿಂದ ನಾಶವು ಆಗಲಾರದು. ಯಾವದರೊಡನೆ ಯಾವದಕ್ಕೆ ಜೊತೆಯಲ್ಲಿರುವದು ವಿರೋಧಕ್ಕೆ ಕಾರಣವಾಗಲಾರದೋ, ಆ ಎರಡಕ್ಕೂ ನಾಶಕತ್ವವನ್ನು[4] ಯಾವನು ಕಲ್ಪಿಸಲು ಸಮರ್ಥನಾದಾನು ? ಕರ್ಮವೆಲ್ಲವೂ ಅಜ್ಞಾನಕ್ಕೆ ಯಾವಾಗಲೂ[5] ಅವಿರುದ್ಧವೇ ಆಗಿರುತ್ತದೆ.

**ತತೋಽಜ್ಞಾನಸ್ಯ ವಿಚ್ಛಿತ್ತಿಃ ಕರ್ಮಣಾ ನೈವ ಸಿಧ್ಯತಿ ॥ ೫೧೬ ॥**

೫೧೬. ಆದ್ದರಿಂದ ಅಜ್ಞಾನದ ನಾಶವು ಕರ್ಮದಿಂದ ಎಂದಿಗೂ ಸಿದ್ಧಿಸಲಾರದು.

**ಯಸ್ಯ ಪ್ರಧ್ವಸ್ತಿ[6] ಜನಕೋ ಯತ್ಸಂಯೋಗೋಽಸ್ತಿ ತತ್ಕ್ಷಣೇ ।**
**ತಯೋರೇವ ವಿರೋಧಿತ್ವಂ ಯುಕ್ತಂ ಭಿನ್ನಸ್ವಭಾವಯೋಃ ॥ ೫೧೭ ॥**

---

1. ಕರ್ಮಕ್ಕೂ ಅಜ್ಞಾನಕ್ಕೂ ವಿರೋಧವಿಲ್ಲವೆಂದೂ, ಜ್ಞಾನಕ್ಕೂ ಅಜ್ಞಾನಕ್ಕೂ ವಿರೋಧವಿದೆಯೆಂದೂ ಹೇಳಿದ್ದರಿಂದ 'ಅಜ್ಞಾನ'ವೆಂದರೆ 'ಪ್ರಕೃತಿ' ಎಂಬ ಮೂಲಾವಿದ್ಯಾವಾದದ ಪಕ್ಷವನ್ನು ಬಿಟ್ಟಂತಾಗುತ್ತದೆ. ಇದನ್ನು ಇಲ್ಲಿ ವಿವೇಚಿಸಿಲ್ಲ.
2. ಜನನಮರಣಪರಂಪರೆಗಿಂತ.
3. 'ನಿರೋಧಾಯ' ಎಂದು ವಾ॥ ಪಾಠ.
4. ನಾಶ್ಯನಾಶಕಭಾವವನ್ನು ಎಂದು ಅಧ್ಯಾಹಾರಮಾಡಿಕೊಳ್ಳಬೇಕಾಗಿದೆ.
5. ಇಲ್ಲಿ 'ಸರ್ವದಾ' ಎಂಬಲ್ಲಿ ಪುನರುಕ್ತಿಯಿದೆ.
6. 'ಪ್ರಧ್ವಸ್ತ' ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ.

**ತಮಃಪ್ರಕಾಶಯೋರ್ಯದ್ವತ್ ಪರಸ್ಪರವಿರೋಧಿತಾ || ೩೧೭ ||**
**ಅಜ್ಞಾನಜ್ಞಾನಯೋಸ್ತದ್ವದುಭಯೋರೇವ ದೃಶ್ಯತೇ |**
**ನ ಜ್ಞಾನೇನ ವಿನಾ ನಾಶಸ್ತಸ್ಯ ಕೇನಾಪಿ ಸಿಧ್ಯತಿ || ೩೧೮ ||**

೩೧೬–೩೧೮. ಯಾವದರ ನಾಶವನ್ನುಂಟುಮಾಡುವ ಯಾವದರ ಸಂಯೋಗವು ಆ (ನಾಶ)ಕ್ಷಣದಲ್ಲಿರುವದೋ ಅವೆರಡಕ್ಕೆ ವಿರೋಧಿತ್ವವಿದೆ ಎನ್ನುವದು ಯುಕ್ತವು. ಭಿನ್ನಸ್ವಭಾವವುಳ್ಳ ಕತ್ತಲೆಬೆಳಕುಗಳಿಗೆ ಹೇಗೆ ಒಂದಕ್ಕೊಂದಕ್ಕೆ ವಿರೋಧಿತ್ವವು ಇರುವದೋ ಹಾಗೆಯೇ ಅಜ್ಞಾನ, ಜ್ಞಾನ– ಈ ಎರಡಕ್ಕೇ ಪರಸ್ಪರವಿರೋಧಿತ್ವವು ಕಾಣಿಸುತ್ತಿರುವದು. ಜ್ಞಾನವಿಲ್ಲದೆ ಆ (ಅಜ್ಞಾನ)ಕ್ಕೆ ನಾಶವು ಮತ್ತೆ ಏತರಿಂದಲೂ ಆಗಲಾರದು.

**ತಸ್ಮಾದಜ್ಞಾನವಿಚ್ಛಿತ್ತ್ಯೈ ಜ್ಞಾನಂ ಸಂಪಾದಯೇತ್ ಸುಧೀಃ |**
**ಆತ್ಮಾನಾತ್ಮವಿವೇಕೇನ ಜ್ಞಾನಂ ಸಿದ್ಧ್ಯತಿ ನಾನ್ಯಥಾ || ೩೧೯ ||**
**ಯುಕ್ತ್ಯಾತ್ಮಾನಾತ್ಮನೋಸ್ತಸ್ಮಾತ್ ಕರಣೀಯಂ ವಿವೇಚನಮ್ |**
**ಅನಾತ್ಮನ್ಯಾತ್ಮತಾಬುದ್ಧಿಗ್ರನ್ಥಿರ್ಯೇನ ವಿದೀರ್ಯತೇ || ೩೨೦ ||**

೩೧೯–೩೨೦. ಆದ್ದರಿಂದ ಅಜ್ಞಾನದ ನಾಶಕ್ಕಾಗಿ ಜಾಣನಾದವನು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಜ್ಞಾನವು ಆತ್ಮಾನಾತ್ಮವಿವೇಕದಿಂದ ಉಂಟಾಗುತ್ತದೆಯೇ ಹೊರತು ಬೇರೆ ಪ್ರಕಾರದಿಂದಾಗುವದಿಲ್ಲ. ಆದ್ದರಿಂದ ಆತ್ಮಾನಾತ್ಮರ ವಿವೇಚನೆಯನ್ನು ಯುಕ್ತಿಯಿಂದ ಮಾಡಿಕೊಳ್ಳಬೇಕು. ಅದರಿಂದ ಅನಾತ್ಮನಲ್ಲಿ ಆತ್ಮನೆಂದು ಉಂಟಾಗಿರುವ ತಿಳಿವಳಿಕೆಯ ಗಂಟು ಬಿಚ್ಚಿಕೊಳ್ಳುತ್ತದೆ.

## ಆತ್ಮನ ವಿಷಯಕ್ಕೆ ವಿವಾದ

**ಆತ್ಮಾನಾತ್ಮವಿವೇಕಾರ್ಥಂ ವಿವಾದೋಽಯಂ ನಿರೂಪ್ಯತೇ |**
**ಯೇನಾತ್ಮಾನಾತ್ಮನೋಸ್ತತ್ತ್ವಂ ವಿವಿಕ್ತಂ ಪ್ರಸ್ಫುಟಾಯತೇ || ೩೨೧ ||**

೩೨೧. ಆತ್ಮ, ಅನಾತ್ಮ– ಇವುಗಳನ್ನು ವಿಂಗಡಿಸಿ ತಿಳಿಸುವದಕ್ಕಾಗಿ ಈ ವಿವಾದವನ್ನು ನಿರೂಪಿಸಲಾಗುತ್ತದೆ. ಇದರಿಂದ ಆತ್ಮಾನಾತ್ಮಗಳ ತತ್ತ್ವವು ವಿಂಗಡವಾಗಿ ಸ್ಫುಟವಾಗುವದು.

**ಮೂಢಾ ಅಶ್ರುತವೇದಾನ್ತಾಃ ಸ್ವಯಂ ಪಣ್ಡಿತಮಾನಿನಃ |**
**ಈಶಪ್ರಸಾದರಹಿತಾಃ ಸದ್ಗುರೋಶ್ಚ ಬಹಿರ್ಮುಖಾಃ || ೩೨೨ ||**
**ವಿವದನ್ತಿ ಪ್ರಕಾರಂ ತಂ ಶೃಣು ವಕ್ಷ್ಯಾಮಿ ಸಾದರಮ್[1] || ೩೨೩ ||**

1. ೩೧೩ನೆತ್ತ ಸಂಖ್ಯೆಯ ಶ್ಲೋಕಕ್ಕೆ ಈ ಅರ್ಧವನ್ನು ಸೇರಿಸಿ ಒಂದು ಶ್ಲೋಕವೆಂದು ಹಿಡಿದಿದೆ.

೫೨-೫೩. ವೇದಾಂತ(ಶಾಸ್ತ್ರ)ವನ್ನು ಶ್ರವಣಮಾಡಿದವರೂ ತಾವೇ ಪಂಡಿತರೆಂದು ಭಾವಿಸಿಕೊಂಡಿರುವವರೂ ಈಶ್ವರನ ಮತ್ತು ಸದ್ಗುರುವಿನ ಪ್ರಸಾದವಿಲ್ಲದವರೂ ಆದ ಹೊರಗಿನ ವಿಷಯಗಳ ಕಡೆಗೇ ತಿರುಗಿದ (ಚಿತ್ತವುಳ್ಳವ)ರೂ ಆಗಿರುವ ಮೂಢರು (ಹೀಗೆ) ವಿವಾದವನ್ನು ಮಾಡುತ್ತಿರುವರು. ಆ ಪ್ರಕಾರವನ್ನು ಹೇಳುತ್ತೇನೆ; ಆದರದಿಂದ ಕೇಳು :

**ಅತ್ಯನ್ತಪಾಮರಃ ಕಶ್ಚಿತ್ ಪುತ್ರಮಾತ್ಮೇತಿ[1] ಮನ್ಯತೇ ॥ ೫೩½ ॥**
**ಆತ್ಮನೀವ ಸ್ವಪುತ್ರೇಽಪಿ ಪ್ರಬಲಪ್ರೀತಿದರ್ಶನಾತ್ ।**
**ಪುತ್ರೇ ತು ಪುಷ್ಟೇ ಪುಷ್ಟೋಽಹಂ ನಷ್ಟೇ ನಷ್ಟೋಽಹಮಿತ್ಯತಃ ॥ ೫೪॥**
**ಅನುಭೂತಿಬಲಾಚ್ಚಾಪಿ ಯುಕ್ತಿತೋಽಪಿ ಶ್ರುತೇರಪಿ ।**
**ಆತ್ಮಾ ವೈ ಪುತ್ರನಾಮಾಸೀತ್ಯೇವಂ ಚ ವದತಿ ಶ್ರುತಿಃ ॥ ೫೫ ॥**
**ದೀಪಾದ್ದೀಪೋ ಯಥಾ ತದ್ವತ್ ಪಿತುಃ ಪುತ್ರಃ ಪ್ರಜಾಯತೇ ।**
**ಪಿತುರ್ಗುಣಾನಾಂ ತನಯೇ ಬೀಜಾಙ್ಕುರವದೀಕ್ಷಣಾತ್ ॥ ೫೬ ॥**
**ಅತೋಽಯಂ ಪುತ್ರಮಾತ್ಮೇತಿ ಮನ್ಯತೇ ಭ್ರಾನ್ತಿಮತ್ತಮಃ[2] ॥ ೫೭ ॥**

೫೩½-೫೭. ಅತ್ಯಂತಪಾಮರನಾದವನೊಬ್ಬನು ಪುತ್ರನನ್ನೇ ಆತ್ಮನೆಂದು ತಿಳಿಯುತ್ತಾನೆ. ತನ್ನಲ್ಲಿರುವಂತೆಯೇ ತನ್ನ ಮಗನಲ್ಲಿಯೂ ಹೆಚ್ಚಾದ ಪ್ರೀತಿಯು ಕಂಡುಬರುವದರಿಂದಲೂ ಮಗನು ಪುಷ್ಟನಾದರೆ ತಾನೇ ಪುಷ್ಟನಾದಂತೆಯೂ (ಅವನು) ನಾಶವಾದರೆ ತಾನೇ ನಾಶವಾದಂತೆಯೂ ಕಾಣುವದೆಂಬ (ಈ) ಅನುಭವದಿಂದಲೂ ಯುಕ್ತಿಯಿಂದಲೂ ಶ್ರುತಿಯಿಂದಲೂ (ಅವನು ಹೀಗೆ ನಂಬುತ್ತಾನೆ). 'ಪುತ್ರನೆಂಬ ನೀನು ನಾನೇ ಆಗಿರುವೆ' (ಕೌ. ೨-೭) ಎಂದು ಶ್ರುತಿ ಹೇಳುತ್ತದೆ. ದೀಪದಿಂದ ಇನ್ನೊಂದು ದೀಪವು ಹೇಗೆ (ಹುಟ್ಟುವದೋ) ಹಾಗೆ ತಂದೆಯಿಂದ ಮಗನು ಹುಟ್ಟುತ್ತಾನೆ; ಏಕೆಂದರೆ ಬೀಜದಿಂದ ಮೊಳಕೆಯುಂಟಾಗುವಂತೆ (?) ತಂದೆಯ ಗುಣಗಳು ಮಗನಲ್ಲಿ ಕಂಡುಬರುತ್ತವೆ. ಆದ್ದರಿಂದ ಈ ಅತ್ಯಂತಭ್ರಾಂತನು ಮಗನನ್ನೇ ಆತ್ಮನೆಂದು ಭಾವಿಸುತ್ತಾನೆ.[3]

**ತನ್ಮತಂ ದೂಷಯತ್ಯನ್ಯಃ ಪುತ್ರ ಆತ್ಮಾ ಕಥಂ ತ್ವಿತಿ ॥ ೫೭½ ॥**
**ಪ್ರೀತಿಮಾತ್ರಾತ್ ಕಥಂ ಪುತ್ರ ಆತ್ಮಾ ಭವಿತುಮರ್ಹತಿ ।**
**ಅನ್ಯತ್ರಾಪೀಕ್ಷ್ಯತೇ ಪ್ರೀತಿಃ ಕ್ಷೇತ್ರಪಾತ್ರಧನಾದಿಷು ॥ ೫೮ ॥**

---

1. 'ಪುತ್ರ ಆತ್ಮೇತಿ' ಎಂಬ ಮೂಲವನ್ನು 'ಪುತ್ರಮಾತ್ಮೇತಿ' ಎಂದು ತಿದ್ದಿಕೊಂಡಿದೆ.
2. ಹಿಂದಿನ ೫೩½ನ್ನು ಸೇರಿಸಿ ಒಂದು ಶ್ಲೋಕವೆಂದು ಹಿಡಿದಿದೆ.
3. ಇಲ್ಲಿಂದ ಮುಂದಕ್ಕಿರುವ ಪುತ್ರಾದ್ಯಾತ್ಮರ ವರ್ಣನೆಗೆ 'ವೇದಾಂತಸಾರ'ವು ಆಧಾರ; ಆದರೆ ಇಲ್ಲಿ ಹೆಚ್ಚು ಯುಕ್ತಿಗಳನ್ನು ಜೋಡಿಸಿದೆ.

ಪುತ್ರಾದ್ ಪಿಶಿಷ್ಟಾ ದೇಹೇಽಸ್ಮಿನ್ ಪ್ರಾಣಿನಾಂ ಪ್ರೀತಿರಿಷ್ಯತೇ ।
ಪ್ರದೀಪ್ತೇ ಭವನೇ ಪುತ್ರಂ ತ್ಯಕ್ತ್ವಾ ಜನ್ತುಃ ಪಲಾಯತೇ ॥ ೫೨೯ ॥
ತಂ ವಿಕ್ರೀಣಾತಿ ದೇಹಾರ್ಥಂ ಪ್ರತಿಕೂಲಂ ನಿಹನ್ತಿ ಚ ।
ತಸ್ಮಾದಾತ್ಮಾ ತು ತನಯೋ ನ ಭವೇಚ್ಚ ಕದಾಚನ ॥ ೫೩೦ ॥
ಗುಣರೂಪಾದಿಸಾದೃಶ್ಯಂ ದೀಪವನ್ನ ಸುತೇ ಪಿತುಃ ।
ಅವ್ಯಙ್ಗಾಜ್ಜಾಯತೇ ವ್ಯಙ್ಗಃ ಸುಗುಣಾದಪಿ ದುರ್ಗುಣಃ ॥ ೫೩೧ ॥
ಆಭಾಸಮಾತ್ರಾಸ್ತಾಃ ಸರ್ವಾ ಯುಕ್ತಯೋಽಪ್ಯುಕ್ತಯೋಽಪಿ ಚ ॥ ೫೩೨[1] ॥
ಪುತ್ರಸ್ಯ ಪಿತೃವದ್ ಗೇಹೇ ಸರ್ವಕಾರ್ಯೇಷು ವಸ್ತುಷು ।
ಸ್ವಾಮಿತ್ವದ್ಯೋತನಾಯಾಸ್ಮಿನ್ನಾತ್ಮತ್ವಮುಪಚರ್ಯತೇ ॥ ೫೩೩ ॥
ಶ್ರುತ್ಯಾ ತು ಮುಖ್ಯಯಾ ವೃತ್ತ್ಯಾ ಪುತ್ರ ಆತ್ಮೇತಿ ನೋಚ್ಯತೇ ।
ಔಪಚಾರಿಕಮಾತ್ಮತ್ವಂ ಪುತ್ರೇ ತಸ್ಮಾನ್ನ ಮುಖ್ಯತಃ ॥ ೫೩೪ ॥

೫೨೭ತ್ತ–೫೩೪. ಆ (ಪ್ರಾಕೃತನ) ಮತವನ್ನು ಮತ್ತೊಬ್ಬನು 'ಪುತ್ರನು ಆತ್ಮನು ಹೇಗಾದಾನು?' ಎಂದು ದೂಷಿಸುತ್ತಾನೆ. (ಅವನ ಯುಕ್ತಿ ಏನೆಂದರೆ): ಬರಿಯ ಪ್ರೀತಿಯಿರುವದರಿಂದಲೇ ಮಗನು ತಾನು ಹೇಗಾದಾನು? ಹೊಲ, ಪಾತ್ರೆ, ಧನ– ಮುಂತಾದ ಬೇರೆಯ ವಸ್ತುವಿನಲ್ಲಿಯೂ ಪ್ರೀತಿಯಿರುವದು ಕಂಡು ಬರುತ್ತದೆ. ಮಗನಲ್ಲಿರುವದಕ್ಕಿಂತಲೂ ಹೆಚ್ಚಿನ ಪ್ರೀತಿಯು ಪ್ರಾಣಿಗಳಿಗೆ ಈ ದೇಹದಲ್ಲಿರುತ್ತದೆ. (ಹೇಗೆಂದರೆ) ಮನೆಗೆ ಬೆಂಕಿಬಿದ್ದಾಗ ಜೀವನು ಮಗನನ್ನು ಬಿಟ್ಟು ಓಡಿಹೋಗುತ್ತಾನೆ. ಆ (ಮಗನನ್ನು) ತನ್ನ ದೇಹಕ್ಕಾಗಿ ಮಾರಿಬಿಡುತ್ತಾನೆ; ತನಗೆ ಪ್ರತಿಕೂಲನಾಗಿದ್ದರೆ ಕೊಂದೂಹಾಕುತ್ತಾನೆ. ಆದ್ದರಿಂದ ಮಗನೇ ಆತ್ಮನೆಂದು ಎಂದಿಗೂ ಆಗಲಾರದು. (ದೀಪದಿಂದ ಹತ್ತಿಸಿಕೊಂಡ ಮತ್ತೊಂದು) ದೀಪಕ್ಕೆ ಇರುವಂತೆ ಮಗನಲ್ಲಿ ತಂದೆಯ ಗುಣ, ರೂಪ– ಮುಂತಾದವುಗಳ ಹೋಲಿಕೆಯು ಇರುವದಿಲ್ಲ. ಕೈಕಾಲು ಊನವಾಗಿಲ್ಲದವನಿಗೆ ಊನವಾಗಿರುವವನೂ ಸುಗುಣನಿಗೆ ದುರ್ಗುಣನೂ ಹುಟ್ಟುತ್ತಾನೆ. (ಪ್ರಾಕೃತನು ಹೇಳಿದ) ಆ ಯುಕ್ತಿಗಳೂ ಉಕ್ತಿಗಳೂ ಬರಿಯ ಹುಸಿತೋರಿಕೆಮಾತ್ರವಾಗಿರುತ್ತವೆ. ಮಗನಿಗೂ ತಂದೆಯಂತೆಯೇ ಮನೆಯಲ್ಲಿ ಎಲ್ಲಾ ಕಾರ್ಯಗಳಲ್ಲಿಯೂ ಒಡೆತನ(ವುಂಟೆಂಬುದನ್ನು) ತಿಳಿಸುವದಕ್ಕಾಗಿ ಅವನನ್ನು ತಾನೇ ಎಂದು ಉಪಚಾರಕ್ಕೆ ಕರೆಯುತ್ತಾನೆ. ಶ್ರುತಿಯಿಂದಲಂದರೋ ಪುತ್ರನೇ ಆತ್ಮನೆಂದು ಮುಖ್ಯವೃತ್ತಿಯಿಂದ ಹೇಳಿರುವದಿಲ್ಲ. ಆದ್ದರಿಂದ ಪುತ್ರನಲ್ಲಿರುವ ಆತ್ಮತ್ವವು ಗೌಣವೇ ಹೊರತು ಮುಖ್ಯವಲ್ಲ.

1. ೫೨೭ತ್ತ ಶ್ಲೋಕಾರ್ಧವನ್ನು ಇಲ್ಲಿ ಸೇರಿಸಿ ಲೆಕ್ಕಮಾಡಿದೆ.

**ಅಹಂಪದಪ್ರತ್ಯಯಾರ್ಥೋ ದೇಹ ಏವ ನ ಚೇತರಃ ॥ ೫೩೫ ॥**
**ಪ್ರತ್ಯಕ್ಷಃ ಸರ್ವಜನ್ತೂನಾಂ ದೇಹೋಽಹಮಿತಿ ನಿಶ್ಚಯಃ ।**
**ಏಷ ಪುರುಷೋಽನ್ನರಸಮಯ ಇತ್ಯಪಿ ಚ ಶ್ರುತಿಃ ॥ ೫೩೬ ॥**
**ಪುರುಷತ್ವಂ ವದತ್ಯಸ್ಯ ಸ್ವಾತ್ಮಾ ಹಿ ಪುರುಷಸ್ತತಃ ।**
**ಆತ್ಮಾಯಂ ದೇಹ ಏವೇತಿ ಚಾರ್ವಾಕೇಣ ವಿನಿಶ್ಚಿತಮ್ ॥ ೫೩೭ ॥**

೫೩೫-೫೩೭. 'ನಾನು' ಎಂಬ ಮಾತು, ಮತ್ತು ಪ್ರತ್ಯಯ-- ಇವುಗಳಿಗೆ ವಿಷಯವು, ದೇಹವೇ ಹೊರತು ಮತ್ತೊಂದಲ್ಲ. ಎಲ್ಲಾ ಪ್ರಾಣಿಗಳಿಗೂ ದೇಹವೇ ನಾನೆಂಬ ನಿಶ್ಚಯವಿರುವದು ಪ್ರತ್ಯಕ್ಷವಾಗಿರುತ್ತದೆ. 'ಈ ಪುರುಷನು ಅನ್ನರಸಮಯನು' (ತೈ. ೨-೧) ಎಂದು ಶ್ರುತಿಯೂ ಇದನ್ನು ಪುರುಷನೆಂದು ಕರೆದಿದೆ. ಪುರುಷನೆಂದರೆ ತನ್ನ ಆತ್ಮನೇ ಅಷ್ಟೆ ? ಆದ್ದರಿಂದ ಈ ದೇಹವೇ ಆತ್ಮನು ಎಂದು **ಚಾರ್ವಾಕನು** ವಿಶೇಷವಾಗಿ ನಿಶ್ಚಯಿಸಿಕೊಂಡಿರುತ್ತಾನೆ.

**ತನ್ಮತಂ ದೂಷಯತ್ಯನ್ಯೋಽಸಹಮಾನಃ ಪೃಥಗ್ಜನಃ ।**
**ದೇಹ ಆತ್ಮಾ ಕಥಂ ನು ಸ್ಯಾತ್ ಪರತನ್ತ್ರೋ ಹ್ಯಚೇತನಃ ॥ ೫೩೮ ॥**
**ಇನ್ದ್ರಿಯೈಶ್ಚಾಲ್ಯಮಾನೋಽಯಂ ಚೇಷ್ಟತೇ ನ ಸ್ವತಃ ಕ್ವಚಿತ್ ।**
**ಆಶ್ರಯಶ್ಚಕ್ಷುರಾದೀನಾಂ ಗೃಹವದ್ ಗೃಹಮೇಧಿನಾಮ್ ॥ ೫೩೯ ॥**
**ಬಾಲ್ಯಾದಿನಾನಾವಸ್ಥಾವಾನ್ ಶುಕ್ಲಶೋಣಿತಸಂಭವಃ ।**
**ಅತಃ ಕದಾಪಿ ದೇಹಸ್ಯ ನಾತ್ಮತ್ವಮುಪಪದ್ಯತೇ ॥ ೫೪೦ ॥**

೫೩೮-೫೪೦. ಆ (ಚಾರ್ವಾಕನ) ಮತವನ್ನು ಮತ್ತೊಬ್ಬ ಸಾಮಾನ್ಯ ತಿಳಿವಳಿಕೆಯವನು (ಹೀಗೆಂದು) ದೂಷಿಸುತ್ತಾನೆ ; ದೇಹವು ಆತ್ಮನು ಹೇಗಾದೀತು? (ಇದು) ಪರತಂತ್ರವಾಗಿದೆ, ಅಚೇತನವಾಗಿದೆ. ಅಲ್ಲವೆ? ಇಂದ್ರಿಯಗಳು ಪ್ರೇರಿಸಿದರೆ ಇದು ಕೆಲಸವನ್ನು ಮಾಡುತ್ತದೆಯೇ ಹೊರತು, ತಾನೇ ಎಂದಿಗೂ ಮಾಡುವದಿಲ್ಲ. ಮನೆಯವರಿಗೆ ಮನೆಯಂತೆ (ಇದು) ಚಕ್ಷುರಾದಿ(ಇಂದ್ರಿಯ)ಗಳಿಗೆ ಆಸರೆಯಾಗಿರುತ್ತದೆ. ಬಾಲ್ಯವೇ ಮುಂತಾದ ಬೇರೆಬೇರೆಯ ಅವಸ್ಥೆಗಳುಳ್ಳದ್ದು, ಶುಕ್ಲಶೋಣಿತಗಳಿಂದ ಹುಟ್ಟಿದ್ದು ; ಆದ್ದರಿಂದ ದೇಹವು ಆತ್ಮನೆಂಬುದು ಎಂದಿಗೂ ಹೊಂದಲಾರದು.

**ಬಧಿರೋಽಹಂ ಚ ಕಾಣೋಽಹಂ ಮೂಕ ಇತ್ಯನುಭೂತಿತಃ ।**
**ಇನ್ದ್ರಿಯಾಣಿ ಭವನ್ತ್ಯಾತ್ಮಾ ಯೇಷಾಮಸ್ತ್ಯರ್ಥವೇದನಮ್ ॥ ೫೪೧ ॥**
**ಇನ್ದ್ರಿಯಾಣಾಂ ಚೇತನತ್ವಂ ದೇಹೇ ಪ್ರಾಣಾಃ ಪ್ರಜಾಪತಿಮ್ ।**
**ಏತಮೇತ್ಯೇತ್ಯೂಚುರಿತಿ ಶ್ರುತ್ಯೈವ ಪ್ರತಿಪಾದ್ಯತೇ ॥ ೫೪೨ ॥**
**ಯತಸ್ತಸ್ಮಾದಿನ್ದ್ರಿಯಾಣಾಂ ಯುಕ್ತಮಾತ್ಮತ್ವಮಿತ್ಯಮುಮ್ ।**
**ನಿಶ್ಚಯಂ ದೂಷಯತ್ಯನ್ಯೋಽಸಹಮಾನಃ ಪೃಥಗ್ಜನಃ ॥ ೫೪೩ ॥**

೫೪೧-೫೪೩. 'ನಾನು ಕಿವುಡನು, ನಾನು ಒಕ್ಕಣ್ಣನು, (ನಾನು) ಮೂಕನು- ಎಂಬ (ಮುಂತಾಗಿ) ಅನುಭವವಿರುವದರಿಂದಲೂ ಇಂದ್ರಿಯಗಳು ಆತ್ಮನಾಗಿರುತ್ತವೆ. ಆ (ಇಂದ್ರಿಯಗಳಿಗಲ್ಲವೆ) ವಿಷಯದ ಅರಿವು ಇರುವದು ? ಇಂದ್ರಿಯಗಳು ದೇಹದಲ್ಲಿರುವ ಚೇತನವೆಂಬುದು 'ಈ ಪ್ರಜಾಪತಿಯ ಬಳಿಗೆ ಹೋಗಿ ಪ್ರಾಣಗಳು ಹೀಗೆಂದವು' (ಛಾಂ. ೫-೧-೭) ಎಂಬ ಶ್ರುತಿಯಿಂದಲೇ ಪ್ರತಿಪಾದಿತವಾಗಿರುತ್ತದೆಯಷ್ಟೆ ? ಆದ್ದರಿಂದ ಇಂದ್ರಿಯಗಳು ಆತ್ಮನೆಂಬುದು ಯುಕ್ತವು.' ಈ ನಿಶ್ಚಯವನ್ನು ಸಹಿಸಲಾರದೆ ಮತ್ತೊಬ್ಬ ಸಾಮಾನ್ಯತಿಳಿವಳಿಕೆಯವನು ಹೀಗೆಂದು ದೂಷಿಸುತ್ತಾನೆ :

**ಇನ್ದ್ರಿಯಾಣಿ ಕಥಂ ತ್ವಾತ್ಮಾ ಕರಣಾನಿ ಕುಠಾರವತ್ ।**
**ಕರಣಸ್ಯ ಕುಠಾರಾದೇಶ್ಚೇತನತ್ವಂ ನ ಹೀಕ್ಷ್ಯತೇ ॥ ೫೪೪ ॥**
**ಶ್ರುತ್ಯಾಧಿದೇವತಾಮೇವೇ[1]ನ್ದ್ರಿಯೇಷೂಪಚರ್ಯತೇ ।**
**ನ ತು ಸಾಕ್ಷಾದಿನ್ದ್ರಿಯಾಣಾಂ ಚೇತನತ್ವಮುದೀರ್ಯತೇ ॥ ೫೪೫ ॥**
**ಅಚೇತನಸ್ಯ ದೀಪಾದೇರರ್ಥಾಭಾಸಕತಾ ಯಥಾ ।**
**ತಥೈವ ಚಕ್ಷುರಾದೀನಾಂ ಜಡಾನಾಮಪಿ ಸಿಧ್ಯತಿ ॥ ೫೪೬ ॥**
**ಇನ್ದ್ರಿಯಾಣಾಂ ಚೇಷ್ಟಯಿತಾ ಪ್ರಾಣೋಽಯಂ ಪಞ್ಚವೃತ್ತಿಕಃ ।**
**ಸರ್ವಾವಸ್ಥಾಸ್ವವಸ್ಥಾವಾನ್ ಸೋಽಯಮಾತ್ಮತ್ವಮರ್ಹತಿ ॥ ೫೪೭ ॥**
**ಅಹಂ ಕ್ಷುಧಾವಾಂಸ್ತೃಷ್ಣಾವಾನಿತ್ಯಾದ್ಯನುಭವಾದಪಿ ॥ ೫೪೮[2] ॥**
**ಶ್ರುತ್ಯಾಽನ್ಯೋಽನ್ತರ ಆತ್ಮಾ ಪ್ರಾಣಮಯ ಇತೀರ್ಯತೇ ಯಸ್ಮಾತ್ ।**
**ತಸ್ಮಾತ್ ಪ್ರಾಣಸ್ಯಾತ್ಮತ್ವಂ ಯುಕ್ತಂ ನೋ ಕರಣಸಂಜ್ಞಾನಾಂ ಕ್ವಾಪಿ॥**

೫೪೪-೫೪೯. ಇಂದ್ರಿಯಗಳು ಹೇಗೆ ಆತ್ಮ(ನಾದಾವು) ? (ಅವು) ಕೊಡಲಿಯಂತೆ ಕರಣಗಳಾಗಿರುತ್ತವೆ ; ಕೊಡಲಿಯೇ ಮುಂತಾದ ಕರಣದಲ್ಲಿ ಚೇತನತ್ವವು ಕಂಡುಬಂದಿಲ್ಲವಷ್ಟೆ ? ಶ್ರುತಿಯು ಅಧಿದೇವತೆಯನ್ನೇ (ಪ್ರಾಣಗಳು ಪ್ರಜಾಪತಿಯ ಬಳಿಗೆ ಹೋಗಿ ಹೇಳಿದವು ಎಂದು) ಉಪಚಾರದಿಂದ ಹೇಳಿರುತ್ತದೆಯೇ ಹೊರತು ನೇರಾಗಿ ಇಂದ್ರಿಯಗಳೇ ಚೇತನವೆಂದು ಹೇಳಿರುವದಿಲ್ಲ. ಅಚೇತನವಾದ ದೀಪವೇ ಮುಂತಾದದ್ದು ವಸ್ತುಗಳನ್ನು ಬೆಳಗುವದು ಹೇಗೋ ಹಾಗೆಯೇ ಜಡವಾಗಿರುವ ಚಕ್ಷುರಾದಿಗಳಿಗೂ (ವಿಷಯಗಳನ್ನು ಬೆಳಗಿತೋರಿಸುವದು)ಆಗಬಹುದಾಗಿರುತ್ತದೆ.[3]

ಇಂದ್ರಿಯಗಳನ್ನು ಕೆಲಸದಲ್ಲಿ ತೊಡಗಿಸುವ ಈ ಪಂಚವೃತ್ತಿಯಾದ[4] ಪ್ರಾಣನೇ

---

1. ಇಲ್ಲಿ 'ದೇವತಾಮೇವ' ಎಂಬುದು ಅನ್ವಯವಾಗುವದಿಲ್ಲ ; ಅರ್ಥವನ್ನು ಹೊಂದಿಸುವದಾಗಿಲ್ಲ. 'ದೇವತಾ ಚೈವೇನ್ದ್ರಿಯೇಷು' ಎಂದು ಬೇಕಾದರೆ ತಿದ್ದಿಕೊಳ್ಳಬಹುದು. 2. ೫೩೫ರ ಶ್ಲೋಕಾರ್ಧವನ್ನು ಇಲ್ಲಿ ಲೆಕ್ಕಮಾಡಿದೆ.

3. ಇಂದ್ರಿಯಗಳು ಚಿದಾಭಾಸದಿಂದ ವಿಷಯಗಳನ್ನು ಬೆಳಗುತ್ತವೆ ಎಂಬ ಕೇನೋಪನಿಷತ್ತಿನ ವಿಚಾರವನ್ನು ಉದಾಹರಿಸಬಹುದಾಗಿತ್ತು.

4. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ- ಎಂದು ಐದುವೃತ್ತಿಗಳುಳ್ಳ.

ಎಲ್ಲಾ ಅವಸ್ಥೆಗಳಲ್ಲಿಯೂ ಅವಸ್ಥೆಯನ್ನನುಭವಿಸುತ್ತಿರುವದರಿಂದ ಇವನೇ ಆತ್ಮನೆಂಬುದು ಯುಕ್ತವಾಗಿರುತ್ತದೆ. 'ನಾನು ಹಸಿವುಳ್ಳವನು, ನೀರಡಿಕೆಯುಳ್ಳವನು–' ಎಂಬ ಅನುಭವದಿಂದಲೂ (ಇದು ಆತ್ಮನು). ಶ್ರುತಿಯೂ '(ಈ ಅನ್ನಮಯನ) ಒಳಗಿರುವ ಪ್ರಾಣಮಯನು ಇನ್ನೊಬ್ಬ ಆತ್ಮನು' (ತೈ. ೨–೨) ಎಂದು ಹೇಳುತ್ತಿದೆಯಾದ್ದರಿಂದ ಪ್ರಾಣನೇ ಆತ್ಮನೆಂಬುದು ಯುಕ್ತವೇ ಹೊರತು ಕರಣವೆನಿಸಿರುವ (ಇಂದ್ರಿಯಗಳಿಗೆ) ಆತ್ಮತ್ವವು ಎಂದಿಗೂ (ಯುಕ್ತ)ವಲ್ಲ.

**ಇತಿ ನಿಶ್ಚಯಮೇತಸ್ಯ ದೂಷಯತ್ಯಪರೋ ಜಡಃ ।**
**ಭವತ್ಯಾತ್ಮಾ ಕಥಂ ಪ್ರಾಣೋ ವಾಯುರೇವೈಷ ಆನ್ತರಃ ॥ ೫೫೦ ॥**
**ಬಹಿರ್ಯಾತ್ಯನ್ತರಾಯಾತಿ ಭಸ್ತ್ರಿಕಾವಾಯುವನ್ಮುಹುಃ ।**
**ನ ಹಿತಂ ವಾಽಹಿತಂ ವಾ ಸ್ವಮನ್ಯದ್ವಾ ವೇದ ಕಿಞ್ಚನ ॥ ೫೫೧ ॥**
**ಜಡಸ್ವಭಾವಶ್ಚಪಲಃ ಕರ್ಮಯುಕ್ತಶ್ಚ ಸರ್ವದಾ ।**
**ಪ್ರಾಣಸ್ಯ ಭಾನಂ ಮನಸಿ ಸ್ಥಿತೇ ಸುಪ್ತೇ ನ ದೃಶ್ಯತೇ ॥ ೫೫೨ ॥**
**ಮನಸ್ತು ಸರ್ವಂ ಜಾನಾತಿ ಸರ್ವವೇದನಕಾರಣಮ್ ।**
**ಯತ್ ತಸ್ಮಾನ್ಮನ ಏವಾತ್ಮಾ ಪ್ರಾಣಸ್ತು ನ ಕದಾಚನ ॥ ೫೫೩ ॥**
**ಸಙ್ಕಲ್ಪವಾನಹಂ ಚಿನ್ತಾವಾನಹಂ ಚ ವಿಕಲ್ಪವಾನ್ ।**
**ಇತ್ಯಾದ್ಯನುಭವಾದನ್ಯೋಽನ್ತರ ಆತ್ಮಾ ಮನೋಮಯಃ ॥ ೫೫೪ ॥**
**ಇತ್ಯಾದಿಶ್ರುತಿಸದ್ಭಾವಾದ್ ಯುಕ್ತಾ ಮನಸ ಆತ್ಮತಾ ।**
**ಇತಿ ನಿಶ್ಚಯಮೇತಸ್ಯ ದೂಷಯತ್ಯಪರೋ ಜಡಃ ॥ ೫೫೫ ॥**

೫೫೦–೫೫೫. ಈ (ಪ್ರಾಣಾತ್ಮವಾದಿಯ) ನಿಶ್ಚಯವನ್ನು ಮತ್ತೊಬ್ಬ ಜಡನು[1] (ಹೀಗೆಂದು) ದೂಷಿಸುತ್ತಾನೆ; ಪ್ರಾಣವು ಆತ್ಮನು ಹೇಗಾದೀತು? ಇದು (ಆಧಿದೈವಿಕ)ವಾಯುವಿನ ಆಧ್ಯಾತ್ಮಿಕರೂಪವೇ ಆಗಿರುತ್ತದೆ. (ಇದು) ತಿದಿಯೊಳಗಿನ ಗಾಳಿಯಂತೆ ಹೊರಕ್ಕೆ ಹೋಗುತ್ತದೆ, ಒಳಕ್ಕೆ ಬರುತ್ತದೆ.[2] ಹಿತವನ್ನಾಗಲಿ ಅಹಿತವನ್ನಾಗಲಿ ತನ್ನನ್ನಾಗಲಿ ಮತ್ತೊಂದನ್ನಾಗಲಿ ಅರಿಯಲಾರದು. ಜಡಸ್ವಭಾವದ್ದಾಗಿರುತ್ತದೆ, ಚಂಚಲವಾಗಿ ಯಾವಾಗಲೂ ಕರ್ಮದಿಂದೊಡಗೂಡಿರುತ್ತದೆ. ಮನಸ್ಸು ಇದ್ದಾಗ ಪ್ರಾಣಕ್ಕೆ ತೋರಿಕೆಯಿರುತ್ತದೆ[3] (ಅದು) ಸುಪ್ತವಾದರೆ ಇರುವದಿಲ್ಲ.

---

1. 'ವೇದಾಂತಸಾರ'ದಲ್ಲಿ (ಪು. ೭೪, ೭೫) ಪ್ರಾಣಾತ್ಮವಾದಿಯನ್ನೂ ಮನೋಮಯಾತ್ಮವಾದಿಯನ್ನೂ 'ಚಾರ್ವಾಕ'ನೆಂದೇ ಕರೆದಿದೆ.

2. 'ವಿವೇಕಚೂಡಾಮಣಿ'ಯ ೧೬೫ ಶ್ಲೋಕವನ್ನು ನೋಡಿ.

3. ಇದು 'ವೇದಾಂತಸಾರ'ದಂತೆ (೭೫,೭೬) ಹೇಳಿದ್ದು; ಮನಸ್ಸು ಲಯವಾದಾಗ ಪ್ರಾಣವು ಕಾಣಿಸುವದಿಲ್ಲವೆಂಬುದು ನಿದ್ರಿಸುವವನ ದೃಷ್ಟಿಯಿಂದ.

ಮನಸ್ಸಾದರೊ ಎಲ್ಲವನ್ನೂ ಅರಿಯುತ್ತದೆ; ಎಲ್ಲವನ್ನೂ ತಿಳಿದುಕೊಳ್ಳುವದಕ್ಕೆ ಸಾಧನವಾಗಿರುವದರಿಂದ ಮನಸ್ಸೇ ಆತ್ಮನೇ ಹೊರತು ಪ್ರಾಣವು ಎಂದಿಗೂ (ಆತ್ಮನಲ್ಲ). 'ಸಂಕಲ್ಪವುಳ್ಳಾತನು ನಾನು', 'ಯೋಚನೆಯುಳ್ಳವನು ನಾನು', 'ವಿಕಲ್ಪವುಳ್ಳವನು ನಾನು' —ಮುಂತಾದ ಅನುಭವವಿರುವದರಿಂದಲೂ ಈ (ಪ್ರಾಣ ಮಯನಿಗಿಂತಲೂ) ಬೇರೆಯಾಗಿ (ಇವನ) ಒಳಗಿರುವ ಮನೋಮಯ ಆತ್ಮನು (ಇದಾನೆ ತೈ. ೨-೩)— ಎಂದು ಮುಂತಾಗಿ ಶ್ರುತಿ ಇರುವದರಿಂದಲೂ **ಮನಸ್ಸು ಆತ್ಮನೆಂಬುದು ಯುಕ್ತವಾಗಿರುತ್ತದೆ.**

ಹೀಗೆಂಬ ಈ (ಮನೋವಾದಿಯ) ನಿಶ್ಚಯವನ್ನು ಮತ್ತೊಬ್ಬ ಅವಿವೇಕಿಯು ಹೀಗೆಂದು ದೂಷಿಸುತ್ತಾನೆ :

**ಕಥಂ ಮನಸ ಆತ್ಮತ್ವಂ ಕರಣಸ್ಯ ದೃಗಾದಿವತ್ ।**
**ಕರ್ತೃಪ್ರಯೋಜ್ಯಂ ಕರಣಂ ನ ಸ್ವಯಂ ತು ಪ್ರವರ್ತತೇ ॥ ೫೫೬ ॥**
**ಕರಣಪ್ರಯೋಕ್ತಾ ಯಃ ಕರ್ತಾ ಸ[1] ಏವಾತ್ಮತ್ವಮರ್ಹತಿ ।**
**ಆತ್ಮಾ ಸ್ವತನ್ತ್ರಃ ಪುರುಷೋ ನ ಪ್ರಯೋಜ್ಯಃ ಕದಾಚನ ॥ ೫೫೭ ॥**
**ಅಹಂ ಕರ್ತಾಽಸ್ಮ್ಯಹಂ ಭೋಕ್ತಾ ಸುಖೀತ್ಯನುಭವಾದಪಿ ।**
**ಬುದ್ಧಿರಾತ್ಮಾ ಭವತ್ಯೇವ ಬುದ್ಧಿಧರ್ಮೋ ಹ್ಯಹಙ್ಕೃತಿಃ ॥ ೫೫೮ ॥**
**ಅನ್ಯೋಽನ್ತರ ಆತ್ಮಾ ವಿಜ್ಞಾನಮಯ ಇತಿ ವದತಿ ನಿಗಮಃ ।**
**ಮನಸೋಽಪಿ ಚ ಭಿನ್ನಂ ವಿಜ್ಞಾನಮಯಂ ಕರ್ತೃರೂಪಮಾತ್ಮಾನಮ್ ॥**
**ವಿಜ್ಞಾನಂ ಯಜ್ಞಂ ತನುತೇ ಕರ್ಮಾಣಿ ತನುತೇಽಪಿ ಚ ।**
**ಇತ್ಯಸ್ಯ ಕರ್ತೃತಾ ಶ್ರುತ್ಯಾ ಮುಖತಃ ಪ್ರತಿಪಾದ್ಯತೇ ॥ ೫೬೦ ॥**
**ತಸ್ಮಾದ್ ಯುಕ್ತಾಽಽತ್ಮತಾ ಬುದ್ಧೇರಿತಿ ಬೌದ್ಧೇನ ನಿಶ್ಚಿತಮ್ ॥ ೫೬೦½ ॥**
**ಪ್ರಾಭಾಕರಸ್ತಾರ್ಕಿಕಶ್ಚ ತಾವುಭಾವಸ್ಯಮರ್ಷಯಾ ।**
**ತನ್ನಿಶ್ಚಯಂ ದೂಷಯತೋ ಬುದ್ಧಿರಾತ್ಮಾ ಕಥಂ ನ್ವಿತಿ ॥ ೫೬೧ ॥**

೫೫೬-೫೬೧. ಚಕ್ಷುರಿಂದ್ರಿಯವೇ ಮುಂತಾದವುಗಳಂತೆ ಕರಣವಾಗಿರುವ ಮನಸ್ಸು ಆತ್ಮನೆಂಬುದು ಹೇಗೆ (ಸರಿ)? ಕರಣವು ಕರ್ತೃವಿನ ಪ್ರೇರಣೆಗೆ ಸಿಕ್ಕಿರುತ್ತದೆಯೇ ಹೊರತು ತಾನೇ (ಏತರಲ್ಲಿಯೂ) ತೊಡಗುವದಿಲ್ಲ.

ಕರಣವನ್ನು ಪ್ರೇರಿಸುವಾತನು ಯಾರೋ ಅವನೇ ಆತ್ಮನೆಂಬುದಕ್ಕೆ ತಕ್ಕವನಾಗಿರುತ್ತಾನೆ. ಆತ್ಮನೆಂದರೆ ಸ್ವತಂತ್ರನಾದ ಪುರುಷನು, ಎಂದಿಗೂ (ಮತ್ತೊಂದರಿಂದ) ಪ್ರೇರಿತನಾಗಿರುವದಿಲ್ಲ. ನಾನು ಕರ್ತೃ, ನಾನು ಭೋಕ್ತೃ,[2] (ನಾನೇ)

---

1. 'ತಸ್ಯೈವ' ಎಂಬುವನ್ನು 'ಸ ಏವ' ಎಂದು ಅನ್ವಯಕ್ಕಾಗಿ ತಿದ್ದಿಕೊಂಡಿದೆ.
2. ವಿಜ್ಞಾನಮಯನನ್ನು 'ಭೋಕ್ತೃ' ಎಂದು ಶ್ರುತಿಯು ಹೇಳಿಲ್ಲ. 'ವೇದಾಂತಸಾರ'ದಲ್ಲಿದೆ.

ಸುಖಿ- ಎಂಬ ಅನುಭವವಿರುವದರಿಂದಲೂ ಬುದ್ಧಿಯು ಆತ್ಮನಾಗಿಯೇ ಇರುತ್ತದೆ; ಏಕೆಂದರೆ ಅಹಂಕಾರವು (ನಾನೆಂಬುದು) ಬುದ್ಧಿಧರ್ಮವಾಗಿರುತ್ತದೆ. '(ಈ) ಮನೋಮಯನಿಗಿಂತಲೂ ಬೇರೆಯಾಗಿ (ಇವನ) ಒಳಗಿರುವ ಆತ್ಮನು ವಿಜ್ಞಾನ ಮಯನು' (ತೈ. ೨-೪) ಎಂದು ಶ್ರುತಿಯು ಮನಸ್ಸಿಗಿಂತಲೂ ಬೇರೆಯಾಗಿರುವ **ವಿಜ್ಞಾನಮಯನು** ಕರ್ತೃರೂಪನಾದ ಆತ್ಮನೆಂದು ಹೇಳುತ್ತಿದೆ. 'ವಿಜ್ಞಾನವು ಯಜ್ಞವನ್ನು ಮಾಡುತ್ತದೆ, ಕರ್ಮಗಳನ್ನೂ ಮಾಡುತ್ತದೆ' (ತೈ. ೨-೫) ಎಂದು ಶ್ರುತಿಯಲ್ಲಿ ಈ ವಿಜ್ಞಾನಮಯನಿಗೆ ಕರ್ತೃತ್ವವನ್ನು ಬಾಯಿಬಿಟ್ಟುಹೇಳಿದೆ. ಆದ್ದರಿಂದ ಬುದ್ಧಿಯೇ ಆತ್ಮನೆಂಬುದು ಯುಕ್ತವು- ಹೀಗೆಂಬುದು **ಬೌದ್ಧನ** ನಿಶ್ಚಯವು.

**ಪ್ರಾಭಾಕರನು,** ತಾರ್ಕಿಕನು- ಈ ಇಬ್ಬರೂ[1] ಅವನ ಈ ಸಿದ್ಧಾಂತವನ್ನು ಸಹಿಸಲಾರದೆ (ಹೀಗೆಂದು) ದೂಷಿಸುತ್ತಾರೆ. ಬುದ್ಧಿಯು ಆತ್ಮನೆಂಬುದು ಹೇಗೆ (ಸರಿ)?

**ಬುದ್ಧೇರಜ್ಞಾನಕಾರ್ಯತ್ವಾದ್ ವಿನಾಶಿತ್ವಾತ್ ಪ್ರತಿಕ್ಷಣಮ್ ।**
**ಬುದ್ಧ್ಯಾದೀನಾಂ ಚ ಸರ್ವೇಷಾಮಜ್ಞಾನೇ ಲಯದರ್ಶನಾತ್ ॥ ೫೬೨ ॥**
**ಅಜ್ಞೋಽಹಮಿತ್ಯನುಭವಾದಾಸ್ತ್ರೀಬಾಲಾದಿಗೋಚರಮ್[2] ।**
**ಭವತ್ಯಜ್ಞಾನಮೇವಾತ್ಮಾ ನ ತು ಬುದ್ಧಿಃ ಕದಾಚನ ॥ ೫೬೩ ॥**
**ವಿಜ್ಞಾನಮಯಾದನ್ಯಂ ತ್ವಾನನ್ದಮಯಂ ಪರಂ ತಥಾತ್ಮಾನಮ್ ।**
**ಅನ್ಯೋಽನ್ತರ ಆತ್ಮಾಽಽನನ್ದಮಯ ಇತಿ ವದತಿ ವೇದೋಽಪಿ ॥ ೫೬೪ ॥**
**ದುಃಖಪ್ರತ್ಯಯಶೂನ್ಯತ್ವಾದಾನನ್ದಮಯತಾ ಮತಾ ।**
**ಅಜ್ಞಾನೇ ಸಕಲಂ ಸುಪ್ತೌ ಬುದ್ಧ್ಯಾದಿ ಪ್ರವಿಲೀಯತೇ ॥ ೫೬೫ ॥**
**ದುಃಖಿನೋಽಪಿ ಸುಷುಪ್ತೌ ತ್ವಾನನ್ದಮಯತಾ ತತಃ ।**
**ಸುಪ್ತೌ ಕಿಞ್ಚಿನ್ನ ಜಾನಾಮೀತ್ಯನುಭೂತಿಶ್ಚ ದೃಶ್ಯತೇ ॥ ೫೬೬ ॥**
**ಯತ ಏವಮತೋ ಯುಕ್ತಾ ಹ್ಯಜ್ಞಾನಸ್ಯಾತ್ಮತಾ ಧ್ರುವಮ್ ।**
**ಇತಿ ತನ್ನಿಶ್ಚಯಂ ಭಾಟ್ಟಾ ದೂಷಯನ್ತಿ ಸ್ವಯುಕ್ತಿಭಿಃ ॥ ೫೬೭ ॥**

೫೬೨-೫೬೭. ಬುದ್ಧಿಯು ಅಜ್ಞಾನದ ಕಾರ್ಯವಾಗಿರುವದರಿಂದಲೂ ಪ್ರತಿಕ್ಷಣವೂ ನಾಶವಾಗುತ್ತಿರುವದರಿಂದಲೂ ಬುದ್ಧಿಯೇ ಮುಂತಾದವು ಅಜ್ಞಾನದಲ್ಲಿ ಲಯವಾಗುವದು ಕಂಡಿರುವದರಿಂದಲೂ ಹೆಂಗಸರು, ಹುಡುಗರು- ಮುಂತಾಗಿ ಎಲ್ಲರಿಗೂ 'ನಾನು ಅಜ್ಞನು' ಎಂಬ ಅನುಭವವಿರುವದರಿಂದಲೂ[3] ಅಜ್ಞಾನವೇ

1. ಈ ಮತವು ಪ್ರಾಭಾಕರತಾರ್ಕಿಕಮತವೆಂದು 'ವೇದಾಂತಸಾರ'ದಲ್ಲಿಯೂ (ಪು. ೬೭) ಇದೆ.

2. 'ಗೋಚರಾತ್' ಎಂದು ಪಾ॥ ಪಾಠ.

3. ಈ ಯುಕ್ತಿಗಳೆಲ್ಲವೂ 'ವೇದಾಂತಸಾರ'ದಲ್ಲಿ (ಪು. ೬೭) ಇವೆ. ಬುದ್ಧ್ಯಾದಿಗಳು ಮೂಲಾವಿದ್ಯೆಯ ಕಾರ್ಯವೆಂಬುದು ಅನುಶಾಂಕರವೇದಾಂತಿಗಳ ಮತ.

ಆತ್ಮನಾಗಿರುವದೇ ಹೊರತು ಬುದ್ಧಿಯು ಎಂದಿಗೂ (ಆತ್ಮ)ನಾಗಲಾರದು. ('ಈ ವಿಜ್ಞಾನಮಯನಿಗಿಂತ) ಬೇರೆಯಾಗಿರುವ ಇವನೊಳಗಿರುವ ಆನಂದಮಯನೇ[1] ಆತ್ಮನು' (ತೈ. ೨-೫) ಎಂದು ವೇದವೂ ವಿಜ್ಞಾನಮಯನಿಗಿಂತ ಬೇರೆಯಾಗಿರುವ ಆನಂದಮಯನನ್ನೇ ಹೆಚ್ಚಿನವನೆಂದೂ ಆತ್ಮನೆಂದೂ ಹೇಳುತ್ತಿದೆ. ದುಃಖ ಪ್ರತ್ಯಯವಿಲ್ಲದ್ದರಿಂದ (ಅಜ್ಞಾನವು) ಆನಂದಮಯವೆನಿಸುತ್ತದೆ. ತನಿನಿದ್ರೆಯಲ್ಲಿ ಬುದ್ಧಿಯೇ ಮುಂತಾದದ್ದೆಲ್ಲವೂ ಅಜ್ಞಾನದಲ್ಲಿ ಲಯವಾಗುತ್ತದೆ. ಆದ್ದರಿಂದ ದುಃಖಿಯಾದವನಿಗೂ ಸುಷುಪ್ತಿಯಲ್ಲಿ ಆನಂದಮಯತ್ವವಿರುತ್ತದೆ. ಹೀಗಿರುವದ ರಿಂದ ಅಜ್ಞಾನವು ಅವಶ್ಯವಾಗಿ ಆತ್ಮನು ಎಂಬುದು ಯುಕ್ತವು.

ಹೀಗೆಂಬ ಆ (ಪ್ರಾಭಾಕರತಾರ್ಕಿಕರ ಸಿದ್ಧಾಂತವನ್ನು)ಭಾಟ್ಟರು ತಮ್ಮ ಯುಕ್ತಿಗಳಿಂದ (ಹೀಗೆಂದು) ದೂಷಿಸುತ್ತಾರೆ :

**ಕಥಮಜ್ಞಾನಮೇವಾತ್ಮಾ ಜ್ಞಾನಂ ಚಾಪ್ಯುಪಲಭ್ಯತೇ ।**
**ಜ್ಞಾನಾಭಾವೇ ಕಥಂ ವಿದ್ಯಾದ[2]ಜ್ಞೋಽಹಮಿತಿ ಚಾಜ್ಞತಾಮ್ ॥ ೫೬೮ ॥**
**ಅಸ್ವಾಪ್ಸಂ ಸುಖಮೇವಾಹಂ ನ ಜಾನಾಮ್ಯತ್ರ ಕಿಞ್ಚನ ।**
**ಇತ್ಯಜ್ಞಾನಮಪಿ ಜ್ಞಾನಂ ಪ್ರಬುದ್ಧೇಷು ಪ್ರದೃಶ್ಯತೇ ॥ ೫೬೯ ॥**
**ಪ್ರಜ್ಞಾನಘನ ಏವಾನನ್ದಮಯ ಇತ್ಯಪಿ ಶ್ರುತಿಃ ।**
**ಪ್ರಬ್ರವೀತ್ಯುಭಯಾತ್ಮತ್ವಮಾತ್ಮನಃ ಸ್ವಯಮೇವ ಸಾ ॥ ೫೭೦ ॥**
**ಆತ್ಮಾತಶ್ಚಿಜ್ಜಡತನುಃ ಖದ್ಯೋತ ಇವ ಸಂಮತಃ ।**
**ನ ಕೇವಲಾಜ್ಞಾನಮಯೋ ಘಟಕುಡ್ಯಾದಿವಜ್ಜಡಃ ॥ ೫೭೧ ॥**

೫೬೮-೫೭೧. (ಬರಿಯ) ಅಜ್ಞಾನವೇ ಹೇಗೆ ಆತ್ಮನಾದೀತು ? ಜ್ಞಾನವೂ ಕಾಣಬರುತ್ತದೆ. ಜ್ಞಾನವಿಲ್ಲದಿದ್ದರೆ 'ನಾನು ಅಜ್ಞನು' ಎಂದು ಅಜ್ಞತ್ವವನ್ನು ಹೇಗೆ ಅರಿತುಕೊಂಡಾನು ? 'ಸುಖವಾಗಿಯೇ ನಿದ್ರಿಸುತ್ತಿದ್ದೆನು, ಅಲ್ಲಿ ಏನನ್ನೂ ತಿಳಿಯಲಿಲ್ಲ' ಎಂದು ಎಚ್ಚತ್ತವರಲ್ಲಿ ಅಜ್ಞಾನವೂ ಜ್ಞಾನವೂ ಕಾಣಬರುತ್ತದೆ. 'ಪ್ರಜ್ಞಾನಘನನೇ, ಆನಂದಮಯನು' (ಮಾಂ.೫) ಎಂದೂ ಶ್ರುತಿಯಿದೆ. ಆದ್ದರಿಂದ ಆತ್ಮನು ತಾನೇ ದೀಪದಹುಳುವಿನಂತೆ ಚಿದಚಿದಾತ್ಮಕಶರೀರವುಳ್ಳವನು ಎನಿಸುತ್ತಾನೆ; ಗಡಿಗೆ, ಗೋಡೆ- ಮುಂತಾದವುಗಳಂತೆ ಬರಿಯ ಅಜ್ಞಾನಮಯನಾಗಿರುವ ಜಡವಲ್ಲ.[3]

---

1. ಆನಂದಮಯವೆಂಬುದು ಅಜ್ಞಾನವೆಂದೂ ಅದು ಸುಷುಪ್ತಿಯಲ್ಲಿರುವದೆಂದೂ ಶ್ರುತಿಯಲ್ಲಿಲ್ಲ, ಭಾಷ್ಯದಲ್ಲಿಯೂ ಇಲ್ಲ ; ವೇದಾಂತಸಾರ, (ಪು. ೭೭) ವಿವೇಕಚೂಡಾಮಣಿ (ಶ್ಲೋ. ೨೦೫, ೨೦೬)- ಇವುಗಳಲ್ಲಿದೆ.

2. 'ವಿದ್ಯಾತ್' ಎಂದು ವಾ॥ ಪಾಠ.

3. 'ಅಜ್ಞಾನೋಪಹಿತವಾದ ಚೈತನ್ಯವೇ ಆತ್ಮನು' ಎಂದು ವೇದಾಂತಸಾರದಲ್ಲಿ (ಪು. ೭೮) ಈ ಮತವನ್ನು ಅನುವಾದಮಾಡಿಕೊಂಡಿದೆ.

ಇತಿ ನಿಶ್ಚಯಮೇತೇಷಾಂ ದೂಷಯತ್ಯಪರೋ ಜಡಃ ॥ ೫೭೧½ ॥
ಜ್ಞಾನಾಜ್ಞಾನಮಯಸ್ತ್ವಾತ್ಮಾ ಕಥಂ ಭವಿತುಮರ್ಹತಿ ।
ಪರಸ್ಪರವಿರುದ್ಧತ್ವಾತ್ತೇಜಸ್ತಿಮಿರವತ್ತಯೋಃ ॥ ೫೭೨ ॥
ಸಾಮಾನಾಧಿಕರಣ್ಯಂ ವಾ ಸಂಯೋಗೋ ವಾ ಸಮಾಶ್ರಯಃ ।
ತಮಃಪ್ರಕಾಶವಜ್ಜ್ಞಾನಾಜ್ಞಾನಯೋರ್ನ ಹಿ ಸಿಧ್ಯತಿ ॥ ೫೭೩ ॥
ಅಜ್ಞಾನಮಪಿ ವಿಜ್ಞಾನಂ ಬುದ್ಧಿರ್ವಾಪಿ ಚ ತದ್ಗುಣಾಃ ।
ಸುಷುಪ್ತೌ ನೋಪಲಭ್ಯಂತೇ ಯತ್ಕಿಂಚಿದಪಿ ವಾ ಪರಮ್ ॥ ೫೭೪ ॥
ಮಾತ್ರಾದಿಲಕ್ಷಣಂ ಕಿಂ ತು[1] ಶೂನ್ಯಮೇವೋಪಲಭ್ಯತೇ ।
ಸುಷುಪ್ತೌ ನಾನ್ಯದಸ್ತ್ಯೇವ ನಾಹಮಪ್ಯಾಸಮಿತ್ಯನು ॥ ೫೭೫ ॥
ಸುಪ್ತೋತ್ಥಿತಜನೈಃ ಸರ್ವೈಃ ಶೂನ್ಯಮೇವಾನುಸ್ಮರ್ಯತೇ ।
ಯತ್ತತಃ ಶೂನ್ಯಮೇವಾತ್ಮಾ ನ ಜ್ಞಾನಾಜ್ಞಾನಲಕ್ಷಣಃ ॥ ೫೭೬ ॥
ವೇದೇನಾಪ್ಯಸದೇವೇದಮಗ್ರ ಆಸೀದಿತಿ ಸ್ಫುಟಮ್ ।
ನಿರುಚ್ಯತೇ ಯತಸ್ತಸ್ಮಾಚ್ಛೂನ್ಯಸ್ಯೈವಾಽಽತ್ಮತಾ ಮತಾ ॥ ೫೭೭ ॥
ಅಸನ್ನೇವ ಘಟಃ ಪೂರ್ವಂ ಜಾಯಮಾನಃ ಪ್ರದೃಶ್ಯತೇ ।
ನ ಹಿ ಕುಂಭಃ ಪುರೈವಾಸ್ತಃ ಸ್ಥಿತೋಽಭ್ಯುದೇತಿ ಬಹಿರ್ಮುಖಃ ॥ ೫೭೮ ॥
ಯತ್ತಸ್ಮಾದಸತಃ ಸರ್ವಂ ಸದಿದಂ ಸಮಜಾಯತ ।
ತತಃ ಸರ್ವಾತ್ಮನಾ ಶೂನ್ಯಸ್ಯೈವಾತ್ಮತ್ವಂ ಸ(ತ್ಯ)ಮರ್ಹತಿ[2] ॥ ೫೭೯ ॥

೫೭೧½–೫೭೯. ಹೀಗೆಂಬ ಈ (ಭಾಟ್ಟರ) ನಿಶ್ಚಯವನ್ನು ಮತ್ತೊಬ್ಬ ಅವಿವೇಕಿಯು[3] ಹೀಗೆಂದು ದೂಷಿಸುತ್ತಾನೆ :

ಆತ್ಮನು ಜ್ಞಾನಾಜ್ಞಾನಮಯನು ಹೇಗಾದಾನು ? (ಜ್ಞಾನಾಜ್ಞಾನಗಳು) ಬೆಳಕುಕತ್ತಲೆಗಳಂತೆ ಒಂದಕ್ಕೊಂದು ವಿರುದ್ಧವಾಗಿವೆ. ಜ್ಞಾನಾಜ್ಞಾನಗಳಿಗೆ ಸಾಮಾನಾಧಿಕರಣ್ಯವಾಗಲಿ, ಸಂಯೋಗವಾಗಲಿ, ಒಂದೇ ಆಶ್ರಯವಾಗಲಿ– ಕತ್ತಲೆಬೆಳಕುಗಳಿಗೆ ಹೇಗೆ ಇರಲಾರದೋ ಹಾಗೆಯೇ ಇರಲಾರದು. ಗಾಢನಿದ್ರೆಯಲ್ಲಿ ಅಜ್ಞಾನವಾಗಲಿ, ಜ್ಞಾನವಾಗಲಿ, ಬುದ್ಧಿಯಾಗಲಿ, ಅದರ ಗುಣಗಳಾಗಲಿ, ಪ್ರಮಾತೃವೇ ಮುಂತಾದ ಮತ್ತೆ ಬೇರೆ ಯಾವದೊಂದೇ ಆಗಲಿ ಕಾಣಬರುವದಿಲ್ಲ ; ಶೂನ್ಯವೇ ಕಾಣುತ್ತಿದೆ. ಸುಷುಪ್ತಿಯಲ್ಲಿ ಮತ್ತೆ ಯಾವದೂ ಇರುವದಿಲ್ಲ. 'ನಾನು ಇದ್ದೆನು' ಎಂಬುದೂ ಗೊತ್ತಾಗುವದಿಲ್ಲ.

---

1. 'ನು' ಎಂದು ಪಾ। ಪಾಠ.

2. ಈ ಶ್ಲೋಕದಲ್ಲಿ ಏನೋ ಹೆಚ್ಚುಕಡಿಮೆಯಾಗಿರುವಂತೆ ಕಾಣಿಸುತ್ತಿದೆ. 'ಶೂನ್ಯಮೇವ' ಎಂದಿದ್ದರೆ ಅನ್ವಯವು ಸರಿಹೋಗುತ್ತದೆ ; ಆದರೆ ಛಂದಸ್ಸಿಗೆ ಅದು ಆಗುವದಿಲ್ಲ.

3. ಬೌದ್ಧನು. ವೇ. ಸಾ. (ಪು. ೭೮).

ನಿದ್ರೆಯಿಂದ ಎಚ್ಚತ್ತ ಜನರೆಲ್ಲರೂ 'ನಾನು ಏನನ್ನೂ ಅರಿಯಲಿಲ್ಲ' ಎಂದು ಶೂನ್ಯವನ್ನೇ ಸ್ಮರಿಸಿಕೊಳ್ಳುತ್ತಾರೆ.[1] ಆದ್ದರಿಂದ ಶೂನ್ಯವೇ ಆತ್ಮನೇ ಹೊರತು ಅವನು ಜ್ಞಾನಾಜ್ಞಾನಲಕ್ಷಣನಲ್ಲ. ವೇದವುಕೂಡ[2] 'ಇದು ಮೊದಲು ಅಸತ್ತೇ ಆಗಿತ್ತು' (ಛಾಂ. ೩-೧೯-೧) ಎಂದು ಸ್ಫುಟವಾಗಿ ಹೇಳಿರುತ್ತದೆ. ಆದ್ದರಿಂದ ಶೂನ್ಯಕ್ಕೇ ಆತ್ಮತ್ವವು ತಕ್ಕದ್ದು. ಗಡಿಗೆಯು ಮೊದಲು ಇಲ್ಲದ್ದೇ ಹುಟ್ಟುವದು ಕಂಡು ಬರುತ್ತದೆ; ಗಡಿಗೆಯು ಒಳಗೆ[3] ಮೊದಲೇ ಇದ್ದುಕೊಂಡಿದ್ದು ಹೊರನುಖವಾಗಿ ಹುಟ್ಟುತ್ತಿಲ್ಲವಷ್ಟೆ? ಹೀಗಿರುವದರಿಂದ ಅಸತ್ತಿನಿಂದಲೇ ಈ ಸತ್ತಾಗಿರುವದೆಲ್ಲವೂ ಹುಟ್ಟಿದೆ.[4] ಆದ್ದರಿಂದ ಸರ್ವಪ್ರಕಾರದಿಂದ (ನೋಡಿದರೂ) ಶೂನ್ಯಕ್ಕೇ ಆತ್ಮತ್ವವು ಹೊಂದುತ್ತದೆ.

## ವಾದಿಗಳು ಒಪ್ಪಿರುವದೆಲ್ಲವೂ ಅನಾತ್ಮವೇ

**ಇತ್ಯೇವಂ ಪಣ್ಡಿತಂಮನ್ಯೈಃ ಪರಸ್ಪರವಿರೋಧಿಭಿಃ ।**
**ತತ್ತನ್ಮತಾನುರೂಪಾಲ್ಪಶ್ರುತಿಯುಕ್ತ್ಯನುಭೂತಿಭಿಃ ॥ ೩೮೦ ॥**
**ನಿರ್ಣೀತಮತಜಾತಾನಿ ಖಣ್ಡಿತಾನ್ಯೇವ ಪಣ್ಡಿತೈಃ ।**
**ಶ್ರುತಿಭಿಶ್ಚಾಪ್ಯನುಭವೈರ್ಬಾಧಕೈಃ ಪ್ರತಿವಾದಿನಾಮ್ ॥ ೩೮೧ ॥**
**ಯತಸ್ತಸ್ಮಾತ್ತು ಪುತ್ರಾದೇಃ ಶೂನ್ಯಾನ್ತಸ್ಯ ವಿಶೇಷತಃ ।**
**ಸುಸಾಧಿತಮನಾತ್ಮತ್ವಂ ಶ್ರುತಿಯುಕ್ತ್ಯನುಭೂತಿಭಿಃ ॥ ೩೮೨ ॥**
**ನ ಹಿ ಪ್ರಮಾಣಾನ್ತರಬಾಧಿತಸ್ಯ**
**ಯಾಥಾರ್ಥ್ಯಮಙ್ಗೀಕ್ರಿಯತೇ ಮಹದ್ಭಿಃ ।**
**ಪುತ್ರಾದಿಶೂನ್ಯಾನ್ತಮನಾತ್ಮತತ್ತ್ವ-**
**ಮಿತ್ಯೇವ ವಿಸ್ಪಷ್ಟಮತಃ ಸುಜಾತಮ್ ॥ ೩೮೩ ॥**

೩೮೦-೩೮೩. ಈ ಪ್ರಕಾರದಲ್ಲಿ ತಾವೇ ಪಂಡಿತರೆಂದು ತಿಳಿದುಕೊಂಡಿರುವ, ಒಬ್ಬರಿಗೊಬ್ಬರು ವಿರೋಧಿಗಳಾದ (ವಾದಿಗಳು) ಆಯಾ ಮತಕ್ಕೆ ಅನುಗುಣವಾದ ಪರಿಚ್ಛಿನ್ನವಾದ ಶ್ರುತಿ, ಯುಕ್ತಿ, ಅನುಭವ- ಇವುಗಳಿಂದ ನಿರ್ಣಯಿಸಿಕೊಂಡಿರುವ ಪ್ರತಿವಾದಿಗಳ ಅಭಿಪ್ರಾಯಗಳು ಬಾಧಕವಾಗಿರುವ ಶ್ರುತಿಗಳು, ಮತ್ತು ಅನುಭವ

---

1. ಶೂನ್ಯಸ್ಮರಣೆಯು ಅನುಭವದಲ್ಲಿಲ್ಲವೆಂಬುದು ಸ್ಪಷ್ಟ. ವೇದಾಂತಸಾರದಲ್ಲೇನೊ (ಪು. ೭೮) ಹಾಗೆಂದೇ ಇದೆ.

2. ಇದುವರೆಗೆ ಹೇಳಿರುವ ಚಾರ್ವಾಕಾದಿಮತಗಳವರು ಶ್ರುತಿಯನ್ನು ಉದಾಹರಿಸುವದಾಗಿ ವೇ. ಸಾ.ದಲ್ಲಿ ಹೇಳಿದ್ದರೂ ಅವರು ವೇದಪ್ರಾಮಾಣ್ಯವನ್ನು ನಂಬುವದಿಲ್ಲವೆಂಬುದೇ ನಿಜ. ಭಾಷ್ಯದಲ್ಲಂತೂ ಇಲ್ಲಿರುವಂತೆ ವಾದಿಗಳ ಮತವನ್ನು ಎಲ್ಲಿಯೂ ಅನುವಾದ ಮಾಡಿಲ್ಲ. ಇಲ್ಲಿ ಹೇಳಿರುವ ಶೂನ್ಯವಾದಿಯ ಮತವು ಪೂರ ಕಲ್ಪಿತವಾದದ್ದು; ಬೌದ್ಧರು ಹೀಗೆ ವಾದಿಸುವದೇ ಇಲ್ಲ. 3. 'ಮಣ್ಣಿನಲ್ಲಿ ಅಡಗಿದ್ದು' ಎಂಬ ಅಭಿಪ್ರಾಯವಿರಬಹುದು.

4. ಛಾಂ. ೬-೨-೧.

–ಇವುಗಳಿಂದ ಪಂಡಿತರುಗಳಿಂದ ಖಂಡನೆಮಾಡಲ್ಪಟ್ಟೇ ಇರುತ್ತವೆ. ಹೀಗಿರುವದರಿಂದ ಪುತ್ರಾದಿಯಾಗಿ ಶೂನ್ಯದವರೆಗಿನದು (ಎಲ್ಲವೂ) ವಿಶೇಷವಾಗಿ ಅನಾತ್ಮವೇ ಎಂದು ಶ್ರುತಿ, ಯುಕ್ತಿ, ಅನುಭವ– ಇವುಗಳಿಂದ ಚೆನ್ನಾಗಿ ಸಾಧಿಸಿದ್ದಾಗಿದೆ. ಏಕೆಂದರೆ ಮತ್ತೊಂದು ಪ್ರಮಾಣದಿಂದ[1] ಬಾಧಿತವಾದದ್ದು ಸರಿ ಎಂದು ದೊಡ್ಡವರು ಅಂಗೀಕರಿಸುವದಿಲ್ಲವಷ್ಟೆ ? ಆದ್ದರಿಂದ ಪುತ್ರಾದಿಯಾಗಿ ಶೂನ್ಯದವರೆಗಿನದೆಲ್ಲವೂ ಅನಾತ್ಮವೇ ಎಂದು ಸುಲಭವಾಗಿ ಸಿದ್ಧವಾಯಿತು.

## ಶಿಷ್ಯನ ಪ್ರಶ್ನೆ

**ಸುಷುಪ್ತಿಕಾಲೇ ಸಕಲೇ ವಿಲೀನೇ**
**ಶೂನ್ಯಂ ವಿನಾ ನಾನ್ಯದಿಹೋಪಲಭ್ಯತೇ ।**
**ಶೂನ್ಯಂ ತ್ವನಾತ್ಮಾ ನ ತತಃ ಪರಃ ಕೋಽ**
**ಪ್ಯಾತ್ಮಾಭಿಧಾನಸ್ತ್ವನುಭೂಯತೇಽರ್ಥಃ ॥ ೫೮೪ ॥**
**ಯದ್ಯಸ್ತಿ ಚಾತ್ಮಾ ಕಿಮು ನೋಪಲಭ್ಯತೇ**
**ಸುಪ್ತೌ ಕಥಂ[2] ತಿಷ್ಠತಿ ಕಿಂ ಪ್ರಮಾಣಮ್ ।**
**ಕಿಂಲಕ್ಷಣೋಽಸೌ ಸ ಕಥಂ ನ ಬಾಧ್ಯತೇ**
**ಪ್ರಬಾಧ್ಯಮಾನೇಷ್ವಹಮಾದಿಷು ಸ್ವಯಮ್ ॥ ೫೮೫ ॥**
**ಏತತ್ಸಂಶಯಜಾತಂ ಮೇ ಹೃದಯಗ್ರನ್ಥಿಲಕ್ಷಣಮ್ ।**
**ಛಿನ್ಧಿ ಯುಕ್ತಿಮಹಾಖಡ್ಗಧಾರಯಾ ಕೃಪಯಾ ಗುರೋ ॥ ೫೮೬ ॥**

೫೮೪–೫೮೬. **ಶಿಷ್ಯ :** ಗಾಢನಿದ್ರೆಯ ಕಾಲದಲ್ಲಿ ಸಕಲವೂ ಲಯವಾಗಿರುವದಾಗಿ ಶೂನ್ಯವನ್ನು ಬಿಟ್ಟರೆ ಮತ್ತೆ ಯಾವದೂ ಇಲ್ಲಿ ಕಾಣಬರುವದಿಲ್ಲ. ಶೂನ್ಯವಾದರೊ ಅನಾತ್ಮ; ಅದಕ್ಕಿಂತ ಬೇರೆಯಾಗಿ ಆತ್ಮನೆಂಬ ಹೆಸರಿನ ಯಾವ ಪದಾರ್ಥವೂ ಅನುಭವಕ್ಕೆ ಬರುವದಿಲ್ಲ. ಮತ್ತು ಆತ್ಮನು ಇರುವದಾದರೆ ಏತಕ್ಕೆ ತೋರುವದಿಲ್ಲ ? ನಿದ್ರೆಯಲ್ಲಿ ಹೇಗೆ ಇರುತ್ತಾನೆ ? (ಅದಕ್ಕೆ) ಪ್ರಮಾಣವೇನು ? ಅವನ ಲಕ್ಷಣವೇನು ? ಅಹಂಕಾರವೇ ಮುಂತಾದವು ತಾವು ಬಾಧಿತವಾಗುತ್ತಿರಲು ಅವನು ಬಾಧಿತವಾಗುವದಿಲ್ಲವೆಂಬುದು ಹೇಗೆ ? ಗುರುವೆ, ಹೃದಯದ ಗಂಟಿನಂತೆ ಇರುವ ಈ ಸಂಶಯಸಮೂಹವನ್ನು ಯುಕ್ತಿಯೆಂಬ ದೊಡ್ಡ ಕತ್ತಿಯ ಅಲುಗಿನಿಂದ ದಯಮಾಡಿ ಕತ್ತರಿಸಿಹಾಕಿರಿ.

---

1. ಒಂದು ಪ್ರಮಾಣಾಭಾಸವು ಪ್ರಬಲಪ್ರಮಾಣದಿಂದ ಬಾಧಿತವಾದರೆ ಅದನ್ನು ತಿಳಿದವರು ಯಾರೂ ಸರಿ ಎಂದು ಒಪ್ಪಲಾರರಷ್ಟೆ ?– ಎಂದು ಅಭಿಪ್ರಾಯ.

2. 'ಯಥಾ' ಎಂಬುದನ್ನು ಹೀಗೆಂದು ತಿದ್ದಿಕೊಂಡಿದೆ.

## ಗುರುವಿನ ಉತ್ತರ:
## ಸುಷುಪ್ತಿಯಲ್ಲಿ ಜಗತ್ತು ಅವ್ಯಾಕೃತವಾಗಿರುತ್ತದೆ

ಶ್ರೀಗುರುಃ—

**ಅತಿಸೂಕ್ಷ್ಮತರಃ ಪ್ರಶ್ನಸ್ತ್ವಯಾಯಂ ಸದೃಶೋ ಮತಃ ।**
**ಸೂಕ್ಷ್ಮಾರ್ಥದರ್ಶನಂ ಸೂಕ್ಷ್ಮಬುದ್ಧಿಷ್ವೇವ ಪ್ರದೃಶ್ಯತೇ ॥ ೫೮೭ ॥**
**ಶೃಣು ವಕ್ಷ್ಯಾಮಿ ಸಕಲಂ ಯದ್ಯತ್ ಪೃಷ್ಟಂ ತ್ವಯಾಧುನಾ ।**
**ರಹಸ್ಯಂ ಪರಮಂ ಸೂಕ್ಷ್ಮಂ ಜ್ಞಾತವ್ಯಂ ಚ ಮುಮುಕ್ಷುಭಿಃ ॥ ೫೮೮ ॥**
**ಬುದ್ಧ್ಯಾದಿಸಕಲಂ ಸುಪ್ತಾವನುಲೀನಂ ಸ್ವಕಾರಣೇ ।**
**ಅವ್ಯಕ್ತೇ ವಟವದ್ ಬೀಜೇ ತಿಷ್ಠತ್ಯವಿಕೃತಾತ್ಮನಾ ॥ ೫೮೯ ॥**
**ತಿಷ್ಠತ್ಯೇವ ಸ್ವರೂಪೇಣ ನ ತು ಶೂನ್ಯಾಯತೇ ಜಗತ್ ॥ ೫೯೦[1] ॥**
**ಕ್ವಚಿದಙ್ಕುರರೂಪೇಣ ಕ್ವಚಿದ್ ಬೀಜಾತ್ಮನಾ ವಟಃ ।**
**ಕಾರ್ಯಕಾರಣರೂಪೇಣ ಯಥಾ ತಿಷ್ಠತ್ಯದಸ್ತಥಾ ॥ ೫೯೧ ॥**
**ಅವ್ಯಾಕೃತಾತ್ಮನಾವಸ್ಥಾಂ ಜಗತೋ ವದತಿ ಶ್ರುತಿಃ ।**
**ಸುಷುಪ್ತ್ಯಾದಿಷು ತದ್ಧೇದಂ[2] ತರ್ಹ್ಯವ್ಯಾಕೃತಮಿತ್ಯಸೌ ॥ ೫೯೨ ॥**

೫೮೭–೫೯೧. **ಶ್ರೀಗುರು :** (ಈ) ಪ್ರಶ್ನೆ ಬಹಳ ಸೂಕ್ಷ್ಮವಾಗಿರುತ್ತದೆ. ಇದು ನಿನಗೆ ತಕ್ಕದ್ದಾಗಿರುತ್ತದೆ. (ಏಕೆಂದರೆ) ಸೂಕ್ಷ್ಮವಾದ ತತ್ತ್ವವನ್ನು ತಿಳಿಯುವದು ಸೂಕ್ಷ್ಮಬುದ್ಧಿಗಳಲ್ಲಿಯೇ ಕಾಣಬರುತ್ತದೆ. ನೀನು ಏನೇನನ್ನು ಕೇಳಿರುವೆಯೋ ಅದೆಲ್ಲವನ್ನೂ ಹೇಳುವೆನು, ಕೇಳು. (ಇದು) ಪರಮಸೂಕ್ಷ್ಮವಾದ ರಹಸ್ಯವು, ಮುಮುಕ್ಷುಗಳಾದವರು ತಿಳಿದುಕೊಳ್ಳತಕ್ಕದ್ದೂ ಆಗಿರುತ್ತದೆ.

ಬುದ್ಧಿಯೇ ಮುಂತಾದದ್ದೆಲ್ಲವೂ ನಿದ್ರೆಯಲ್ಲಿ ತನ್ನ ಕಾರಣದಲ್ಲಿ ಲಯವಾಗಿ, ಆಲದಮರವು ಬೀಜದಲ್ಲಿ ಇರುವಂತೆ ಯಾವ ವಿಕಾರವೂ ಇಲ್ಲದ ರೂಪದಿಂದ ಅವ್ಯಕ್ತದಲ್ಲಿ ಇದ್ದುಕೊಂಡಿರುತ್ತದೆ. ಜಗತ್ತು ಇದ್ದೇಇರುತ್ತದೆಯೇ ಹೊರತು ತನ್ನ ರೂಪದಿಂದ ಶೂನ್ಯವಾಗುವದಿಲ್ಲ. ಆಲದಮರವು ಒಂದೆಡೆಯಲ್ಲಿ ಮೊಳಕೆಯ ರೂಪದಿಂದ ಒಂದೆಡೆ ಬೀಜರೂಪದಿಂದ– ಹೀಗೆ ಕಾರ್ಯಕಾರಣರೂಪದಿಂದ– ಹೇಗೆ ಇರುವದೋ ಹಾಗೆಯೇ ಆ (ಜಗತ್ತೂ) ಇರುತ್ತದೆ. 'ಅದು ಆಗ ಅವ್ಯಾಕೃತ(ವಾಗಿತ್ತು)' (ಬೃ. ೧–೪–೭) ಎಂಬೀ ಶ್ರುತಿಯು ಸುಷುಪ್ತಿ ಮುಂತಾದ[3] (ಅವಸ್ಥೆಗಳಲ್ಲಿ) ಜಗತ್ತು ಅವ್ಯಾಕೃತರೂಪದಿಂದ ಇರುತ್ತದೆ ಎಂದು ಹೇಳುತ್ತಿದೆ.

---

1. ಹಿಂದಿನ ೫೭೧ನ್ನಿಯನ್ನು ಸೇರಿಸಿ ಲೆಕ್ಕಮಾಡಿದೆ.

2. 'ತದ್ಧೇದಂ' ಎಂಬ ಮೂಲವು ತಪ್ಪು; ಅದನ್ನು ಶ್ರುತಿಗನುಸಾರವಾಗಿ ತಿದ್ದಿಕೊಂಡಿದೆ.

3. ಸುಷುಪ್ತಿ, ಮರಣ, ಪ್ರಲಯ– ಇವುಗಳಲ್ಲಿ.

# ಅಸತ್ಕಾರ್ಯವಾದಖಂಡನೆ

**ಇಮಮರ್ಥಮವಿಜ್ಞಾಯ ನಿರ್ಣೀತಂ ಶ್ರುತಿಯುಕ್ತಿಭಿಃ ।**
**ಜಗತೋ ನಿದರ್ಶನಂ[1] ಶೂನ್ಯಮಿತಿ ಪ್ರಾಹುರತದ್ವಿದಃ** ॥ ೫೯೩ ॥
**ನಾಸತಃ ಸತ ಉತ್ಪತ್ತಿಃ ಶ್ರೂಯತೇ ನ ಚ ದೃಶ್ಯತೇ ।**
**ಉದೇತಿ ನರಶೃಙ್ಗಾತ್ ಕಿಂ ಖಪುಷ್ಪಾತ್ ಕಿಂ ಭವಿಷ್ಯತಿ** ॥ ೫೯೪ ॥
**ಪ್ರಭವತಿ ಸ ಹಿ[2] ಕುಮ್ಭೋಽವಿದ್ಯಮಾನೋ ಮೃದಶ್ಚೇತ್**
**ಪ್ರಭವತು ಸಿಕತಾಯಾ ವಾಥವಾ ವಾರಿಣೋ ವಾ ।**
**ನ ಹಿ ಭವತಿ ಚ ತಾಭ್ಯಾಂ ಸರ್ವಥಾ ಕ್ವಾಪಿ ತಸ್ಮಾದ್**
**ಯತ ಉದಯತಿ ಯೋಽರ್ಥೋಽಸ್ತ್ಯತ್ರ ತಸ್ಯ ಸ್ವಭಾವಃ** ॥ ೫೯೫ ॥
**ಅನ್ಯಥಾ ವಿಪರೀತಂ ಸ್ಯಾದ್ ಕಾರ್ಯಕಾರಣಲಕ್ಷಣಮ್ ।**
**ನಿಯತಂ ಸರ್ವಶಾಸ್ತ್ರೇಷು ಸರ್ವಲೋಕೇಷು ಸರ್ವತಃ** ॥ ೫೯೬ ॥
**ಕಥಮಸತಃ ಸಜ್ಜಾಯೇತೇತಿ:ಶ್ರುತ್ಯಾ ನಿಷಿಧ್ಯತೇ ತಸ್ಮಾತ್ ।**
**ಅಸತಃ ಸಜ್ಜನನಂ ನೋ ಘಟತೇ ಮಿಥ್ಯೈವ ಶೂನ್ಯಶಬ್ದಾರ್ಥಃ** ॥ ೫೯೭ ॥

೫೯೩–೫೯೭. ಶ್ರುತಿಯುಕ್ತಿಗಳಿಂದ ನಿರ್ಣಯವಾಗಿರುವ ಈ ವಿಷಯವನ್ನು ತಿಳಿಮಕೊಳ್ಳದೆ ಅವನ್ನರಿಯದ (ಮೂಢರು) ಜಗತ್ತು ಕಾಣದೆ ಇದ್ದದ್ದನ್ನು ಶೂನ್ಯವೆಂದು ಹೇಳುತ್ತಾರೆ. ಅಸತ್ತಿನಿಂದ ಸತ್ತು ಉಂಟಾಯಿತೆಂದು ಶ್ರುತಿಯಲ್ಲಿಲ್ಲ, ಕಂಡುಬಂದೂಇಲ್ಲ. ಮನುಷ್ಯನ ಕೋಡಿನಿಂದ ಏನು ಹುಟ್ಟುತ್ತದೆ? ಆಕಾಶದ ಹೂವಿನಿಂದ ಏನು ಆಗುವದು[3]? ಆ (ಪ್ರಸಿದ್ಧವಾಗಿರುವ) ಗಡಿಗೆಯು ಇಲ್ಲದೆಇರುವ ಮಣ್ಣಿನಿಂದ ಹುಟ್ಟುವದಾದರೆ ಮರಳಿನಿಂದಲಾಗಲಿ ಅಥವಾ ನೀರಿನಿಂದಲಾಗಲಿ ಹುಟ್ಟಲಿ? ಎಲ್ಲಿಯೂ ಅವುಗಳಿಂದ (ಅದು) ಹೇಗೂ ಹುಟ್ಟುವದಿಲ್ಲವಷ್ಟೆ? ಆದ್ದರಿಂದ ಯಾವದರಿಂದ ಯಾವ ವಸ್ತು ಹುಟ್ಟುತ್ತದೆಯೋ ಅದರಲ್ಲಿ ಅದರ ಸ್ವಭಾವವು ಇದೆ ಎನ್ನಬೇಕು. ಹೀಗಿಲ್ಲದಿದ್ದರೆ ಎಲ್ಲಾ ಶಾಸ್ತ್ರಗಳಲ್ಲಿಯೂ ಎಲ್ಲಾ ಲೋಕಗಳಲ್ಲಿಯೂ ಎಲ್ಲಾ ರೀತಿಯಿಂದಲೂ ಗೊತ್ತಾಗಿರುವ ಕಾರ್ಯಕಾರಣ

---

1. 'ಅದರ್ಶನಮ್' ಎಂದಿದ್ದರೇ ಉತ್ತಮ. 'ದರ್ಶನಮ್' ಎಂದು ವಾ॥ ಪಾಠ.

2. 'ನ ಹಿ' ಎಂಬುದನ್ನು ಹೀಗೆಂದು ತಿದ್ದಿಕೊಂಡಿದೆ.

3. ಮನುಷ್ಯನಕೋಡು, ಆಕಾಶದ ಹೂ–ಇವೆರಡೂ ಅಸತ್ಪದಾರ್ಥಕ್ಕೆ ಉದಾಹರಣೆಗಳು. ಅವುಗಳಿಂದ ಹೇಗೆ ಏನೂ ಹುಟ್ಟಲಾರದೋ ಹಾಗೆಯೇ ಅಸತ್ತಿನಿಂದ ಸತ್ತು ಹುಟ್ಟಲಾರದು ಎಂದರ್ಥ.

ಭಾವವು ತಲೆಕೆಳಕಾದೀತು[1] 'ಅಸತ್ತಿನಿಂದ ಸತ್ತು ಹೇಗೆ ಹುಟ್ಟೀತು?' (ಛಾಂ. ೬-೨-೨) ಎಂದು ಶ್ರುತಿಯು ಅಲ್ಲಗಳೆಯುತ್ತದೆ; ಆದ್ದರಿಂದ ಅಸತ್ತಿನಿಂದ ಸತ್ತಿನ ಹುಟ್ಟುವಿಕೆಯು ಹೊಂದುವದೇ ಇಲ್ಲ. ಶೂನ್ಯಶಬ್ದಕ್ಕೆ ಅರ್ಥವೇ ಇಲ್ಲ.

## ಶೂನ್ಯವಾದದ ಖಂಡನೆ

**ಅವ್ಯಕ್ತಶಬ್ದಿತೇ ಪ್ರಾಜ್ಞೇ ಸತ್ಯಾತ್ಮನ್ಯತ್ರ ಜಾಗ್ರತಿ ।**
**ಕಥಂ ಸಿಧ್ಯತಿ ಶೂನ್ಯತ್ವಂ ತಸ್ಯ ಭ್ರಾನ್ತಶಿರೋಮಣೇ ॥ ೫೯೮ ॥**
**ಸುಷುಪ್ತೌ ಶೂನ್ಯಮೇವೇತಿ ಕೇನ ಪುಂಸಾ ತವೇರಿತಮ್ ।**
**ಹೇತುನಾನುಮಿತಂ ಕೇನ ಕಥಂ ಜ್ಞಾತಂ ತ್ವಯೋಚ್ಯತಾಮ್ ॥ ೫೯೯ ॥**
**ಇತಿ ಪೃಷ್ಟೋ ಮೂಢತಮೋ ವದಿಷ್ಯತಿ ಕಿಮುತ್ತರಮ್ ॥ ೫೯೯½ ॥**
**ನೈವಾನುರೂಪಕಂ ಲಿಙ್ಗಂ ವಕ್ತಾ ವಾ ನಾಸ್ತಿ ಕಶ್ಚನ ।**
**ಸುಷುಪ್ತಿಸ್ಥಿತಶೂನ್ಯಸ್ಯ ಬೋದ್ಧಾ ಕೋ ನ್ವಾತ್ಮನಃ ಪರಃ ॥ ೬೦೦ ॥**

**ಸ್ವೇನಾನುಭೂತಂ ಸ್ವಯಮೇವ ವಕ್ತಿ**
**ಸ್ವಸುಪ್ತಿಕಾಲೇ ಸ್ಥಿತಶೂನ್ಯಭಾವಮ್ ।**
**ತತ್ರ ಸ್ವಸತ್ತಾಮನಪೇಕ್ಷ್ಯ ಮೂಢಃ**
**ಸ್ವಸ್ಯಾಪಿ ಶೂನ್ಯತ್ವಮಯಂ ಬ್ರವೀತಿ ॥ ೬೦೧ ॥**

೫೯೭-೬೦೧. 'ಅವ್ಯಕ್ತ' ಎಂಬ ಹೆಸರುಳ್ಳ ಆತ್ಮನು ಇಲ್ಲಿ ಎಚ್ಚತ್ತಿರುವಲ್ಲಿ[2], ಅವನು ಅಶೂನ್ಯವೆಂಬುದು ಹೇಗೆ ಆದೀತಯ್ಯ, ಭ್ರಾಂತಶಿರೋಮಣಿಯೆ? ಸುಷುಪ್ತಿಯಲ್ಲಿ ಶೂನ್ಯವೇ ಇದೆ ಎಂದು ಯಾವ ಪುರುಷನು ನಿನಗೆ ಹೇಳಿದಾನೆ? ಯಾವ ಹೇತುವಿನಿಂದ (ಹಾಗೆಂದು) ಅನುಮಾನಮಾಡಿರುತ್ತೀಯೆ? ನೀನು ಹೇಗೆ (ಹಾಗೆಂದು) ತಿಳಿದುಕೊಂಡೆ? ಹೇಳು- ಎಂದು ಕೇಳಿದರೆ ಆ ಅತ್ಯಂತಮೂಢನಾದ (ಶೂನ್ಯವಾದಿಯು) ಯಾವ ಉತ್ತರವನ್ನು ಹೇಳಿಯಾನು? (ಇಲ್ಲಿ) ಹೊಂದುವ

---

1. ಇಂಥ ಕಾರ್ಯಕ್ಕೆ ಇಂಥದ್ದೇ ಕಾರಣವೆಂದು ಲೋಕದಲ್ಲಿ ಪ್ರಸಿದ್ಧವಾಗಿ ಶಾಸ್ತ್ರದಲ್ಲಿ ಗೊತ್ತಾಗಿರುವ ಕಾರ್ಯಕಾರಣನಿಯಮವು ತಪ್ಪಿ ಯಾವದಕ್ಕೆ ಯಾವದು ಬೇಕಾದರೂ ಕಾರ್ಯವೆಂದಾಗಬೇಕಾದೀತು- ಎಂದರ್ಥ. ಶೂನ್ಯವಾದಿಗಳು ಅಸತ್ಕಾರ್ಯವಾದಿಗಳೆಂದು ಇಲ್ಲಿ ಇಟ್ಟುಕೊಂಡಿದೆ, ವೈಶೇಷಿಕರೂ ಕಾರಣದಲ್ಲಿ ಮೊದಲಿಲ್ಲದೆ ಇದ್ದ ಕಾರ್ಯವು ಹುಟ್ಟಿ ಕಾರಣಕ್ಕೆ ಅಂಟಿಕೊಳ್ಳುತ್ತದೆ ಎಂಬ ಕಾರ್ಯಕಾರಣನಿಯಮವನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಅವರೂ ಅಸತ್ಕಾರ್ಯವಾದಿಗಳೇ.

2. ಸುಷುಪ್ತಿಯಲ್ಲಿಯೂ ಆತ್ಮನು ಅರಿಯುತ್ತಲೇ ಇರುತ್ತಾನೆ; ಆದ್ದರಿಂದ ಅವನಿಗೆ ಪ್ರಾಜ್ಞನೆಂದು ಹೆಸರು. ಅವನೇ ಇಲ್ಲಿ 'ಅವ್ಯಕ್ತ'ವೆನಿಸಿಕೊಂಡಿರುತ್ತಾನೆ.

ಲಿಂಗವಿಲ್ಲ, ಹೇಳುವ (ಆಪ್ತನೂ) ಯಾರೂ ಇಲ್ಲ.[1] ಸುಷುಪ್ತಿಯಲ್ಲಿರುವ ಶೂನ್ಯವನ್ನು ಅರಿತುಕೊಳ್ಳುವವನು ಆತ್ಮನನ್ನು ಬಿಟ್ಟರೆ ಯಾವನು ತಾನೆ (ಇದಾ)ನೆ? ತನ್ನ ನಿದ್ರೆಯ ಕಾಲದಲ್ಲಿದ್ದ ಶೂನ್ಯತ್ವವನ್ನು ತಾನೇ ಅನುಭವಿಸಿ, ತಾನೇ ಹೇಳುತ್ತಿರುತ್ತಾನೆ, ಅಲ್ಲಿ ತಾನು ಇರುವೆನೆಂಬುದನ್ನು ಮನದಂದುಕೊಳ್ಳದೆ ಮೂಢನಾದ ಈ (ವಾದಿಯು) ತಾನೂ (ಶೂನ್ಯವಾಗಿದ್ದೆನೆಂದು) ಹೇಳುತ್ತಿರುತ್ತಾನೆ.[2]

## ಆತ್ಮಸಿದ್ಧಿ

**ಅವೇದ್ಯಮಾನಃ ಸ್ವಯಮನ್ಯಲೋಕೈಃ**
**ಸೌಷುಪ್ತಿಕಂ ಧರ್ಮಮನ್ವೈತಿ ಸಾಕ್ಷಾತ್ ।**
**ಬುದ್ಧ್ಯಾದ್ಯಭಾವಸ್ಯ ಚ ಯೋಽತ್ರ ಬೋದ್ಧಾ**
**ಸ ಏಷ ಆತ್ಮಾ ಖಲು ನಿರ್ವಿಕಾರಃ ॥ ೬೦೨ ॥**

೬೦೨. ಬೇರೆ ಜನರಿಂದ ಅರಿಯಲ್ಪಡದೆ, ಯಾವ ಜ್ಞಾತೃವು ಸುಷುಪ್ತಿಯ ಸ್ವಭಾವನನ್ನು ನೇರಾಗಿ ಅರಿಯುತ್ತಾನೋ ಬುದ್ಧಿಯೇ (ಅಲ್ಲಿ) ಮುಂತಾದದ್ದು ಇಲ್ಲವೆಂಬುದನ್ನೂ ಇಲ್ಲಿ ಯಾವನು ಅರಿಯುತ್ತಿರುವನೋ ಆ ಇವನೇ ಅಲ್ಲವೆ, ನಿರ್ವಿಕಾರನಾದ ಆತ್ಮನು?

**ಯಸ್ಯೇದಂ ಸಕಲಂ ವಿಭಾತಿ ಮಹಸಾ ತಸ್ಯ ಸ್ವಯಂಜ್ಯೋತಿಷಃ**
**ಸೂರ್ಯಸ್ಯೇವ ಕಿಮಸ್ತಿ ಭಾಸಕಮಿಹ ಪ್ರಜ್ಞಾದಿ ಸರ್ವಂ ಜಡಮ್ ।**
**ನ ಹ್ಯರ್ಕಸ್ಯ ವಿಭಾಸಕಂ ಕ್ಷಿತಿತಲೇ ದೃಷ್ಟಂ ತಥೈವಾತ್ಮನೋ**
**ನಾನ್ಯಃ ಕೋಽಪ್ಯವ[3]ಭಾಸಕೋಽನುಭವಿತಾ ನಾತಃ ಪರಃ ಕಶ್ಚನ॥ ೬೦೩ ॥**

೬೦೩. ಸೂರ್ಯನ ಬೆಳಕಿನಿಂದ ಹೇಗೆ (ಲೋಕದಲ್ಲಿ ಎಲ್ಲವೂ ಬೆಳಗುವದೋ) ಹಾಗೆ ಯಾವ ಸ್ವಯಂಜ್ಯೋತಿಯ (ಚೈತನ್ಯದ) ಬೆಳಕಿನಿಂದ ಇದೆಲ್ಲವೂ ಬೆಳಗುತ್ತಿರುವದೋ ಅವನನ್ನು ಬೆಳಗುವದು ಇಲ್ಲಿ ಯಾವದು ತಾನೆ ಇದೆ? (ಅಂತಃಕರಣದ) ಅರಿವೇ ಮುಂತಾದದ್ದೆಲ್ಲವೂ ಜಡವು. ಭೂಮಿಯಮೇಲೆ ಸೂರ್ಯನನ್ನು ಬೆಳಗುವದು (ಯಾವದೂ) ಕಂಡುಬಂದಿಲ್ಲವಷ್ಟೆ? ಹಾಗೆಯೇ ಆತ್ಮನನ್ನು ಬೆಳಗುವವನು ಯಾರೂ ಇಲ್ಲ. ಅವನಿಗಿಂತ ಬೇರೆಯಾದ ಅನುಭವಿತೃವೇ ಇಲ್ಲ.

---

1. ಬೆಂಕಿ ಮುಂತಾದದ್ದರ ಅನುಮಾನಕ್ಕೆ ಹೊಗೆಯಿರುವದೇ ಮುಂತಾದ ಹೇತು ಬೇಕು; ನಮಗೆ ಗೊತ್ತಿಲ್ಲದ್ದನ್ನು ತಿಳಿಸುವ ಆಪ್ತನ ವಾಕ್ಯವೆಂಬ ಪ್ರಮಾಣವು ಬೇಕು. ಅವೆರಡೂ ಶೂನ್ಯವಾದಿಯ ಮತದಲ್ಲಿಲ್ಲ.

2. ಅನುಭವಿಸಿದ ತಾನೇ ಇರಲಿಲ್ಲವೆನ್ನುವವನು ಮೂಢನಲ್ಲವೆ? -ಎಂದು ಭಾವ.

3. 'ಅನುಭಾಸಕೋ' ಎಂಬುದನ್ನು 'ಅವಭಾಸಕೋ' ಎಂದು ತಿದ್ದಿಕೊಂಡಿದೆ.

**ಯೇನಾನುಭೂಯತೇ ಸರ್ವಂ ಜಾಗ್ರತ್ಸ್ವಪ್ನಸುಷುಪ್ತಿಷು ।**
**ವಿಜ್ಞಾತಾರಮಿಮಂ ಕೋ ನು ಕಥಂ ವೇದಿತುಮರ್ಹತಿ ॥ ೬೦೪ ॥**

೬೦೪. ಎಚ್ಚರ, ಕನಸು, ಗಾಢನಿದ್ರೆ- ಇವುಗಳಲ್ಲಿ ಯಾವನಿಂದ ಎಲ್ಲವೂ ಅನುಭೂತವಾಗುತ್ತದೆಯೋ, ಈ ವಿಜ್ಞಾತೃವನ್ನು ಯಾವನುತಾನೆ ಹೇಗೆ ಅರಿತು ಕೊಂಡಾನು ?

**ಸರ್ವಸ್ಯ ದಾಹಕೋ ವಹ್ನಿರ್ವಹ್ನೇರ್ನಾನ್ಯೋಽಸ್ತಿ ದಾಹಕಃ ।**
**ಯಥಾ ತಥಾಽಽತ್ಮನೋ ಜ್ಞಾತುರ್ಜ್ಞಾತಾ ಕೋಽಪಿ ನ ದೃಶ್ಯತೇ ॥೬೦೫॥**

೬೦೫. ಹೇಗೆ ಎಲ್ಲವನ್ನೂ ಸುಡುವದು ಬೆಂಕಿಯಾಗಿದ್ದು ಬೆಂಕಿಯನ್ನು ಸುಡುವದು ಮತ್ತೊಂದಿಲ್ಲವೋ ಹಾಗೆ ಅರಿಯುವ ಆತ್ಮನನ್ನು ಅರಿತುಕೊಳ್ಳಬಲ್ಲ ವನು ಯಾರೂ ಕಾಣಿಸುತ್ತಿಲ್ಲ.

**ಉಪಲಭ್ಯೇತ ಕೇನಾಯಂ ಹ್ಯುಪಲಬ್ಧಾ ಸ್ವಯಂ ತತಃ ।**
**ಉಪಲಬ್ಧ್ರ[1]ನ್ತರಾಭಾವಾನ್ನಾಯಮಾತ್ಮೋಪಲಭ್ಯತೇ ॥ ೬೦೬ ॥**

೬೦೬. ತಾನೇ ಅರಿಯುವಾತನು, ಅವನು ಯಾರಿಂದ ಅರಿಯಲ್ಪಡಬೇಕು ? ಆದ್ದರಿಂದ ಮತ್ತೊಬ್ಬನು ಅರಿಯುವಾತನಿಲ್ಲವಾದ್ದರಿಂದ ಈ ಆತ್ಮನು ಅರಿಯ ಬರುತ್ತಿಲ್ಲ.

**ಬುದ್ಧ್ಯಾದಿವೇದ್ಯವಿಲಯಾದಯಮೇಕ ಏವ**
**ಸುಪ್ತೌ ನ ಪಶ್ಯತಿ ಶೃಣೋತಿ ನ ವೇತ್ತಿ ಕಿಞ್ಚಿತ್ ।**
**ಸೌಷುಪ್ತಿಕಸ್ಯ ತಮಸಃ ಸ್ವಯಮೇವ ಸಾಕ್ಷೀ**
**ಭೂತ್ವಾಽತ್ರ ತಿಷ್ಠತಿ ಸುಖೇನ ಚ ನಿರ್ವಿಕಲ್ಪಃ ॥ ೬೦೭ ॥**

೬೦೭. ಬುದ್ಧಿಯೇ ಮುಂತಾದ ಜ್ಞೇಯ(ವೆಲ್ಲವೂ) ಅಡಗಿಹೋಗಿರುವದ ರಿಂದ ಇವನೊಬ್ಬನೇ ಇರುತ್ತಾನೆ. (ಆದ್ದರಿಂದ) ನಿದ್ರೆಯಲ್ಲಿ ಕಾಣುತ್ತಿಲ್ಲ, ಕೇಳುತ್ತಿಲ್ಲ, ಏನನ್ನೂ ಅರಿಯುತ್ತಿಲ್ಲ.[2] ನಿದ್ರೆಯ ಅಜ್ಞಾನಕ್ಕೆ[3] ತಾನೇ ಸಾಕ್ಷಿ ಯಾಗಿದ್ದುಕೊಂಡು, ನಿರ್ವಿಕಲ್ಪನಾಗಿ ಸುಖದಿಂದಿರುತ್ತಾನೆ.

---

1. 'ಉಪಲಬ್ಧ್ಯನ್ತರ' ಎಂಬುದನ್ನು 'ಉಪಲಬ್ಧ್ರನ್ತರ'-ಎಂದು ತಿದ್ದಿಕೊಂಡಿದೆ ; ಏಕೆಂದರೆ ಇಲ್ಲಿ ಉಪಲಬ್ಧೃ (ಅರಿಯುವವನು) ಇಲ್ಲವೆಂಬುದೇ ಬೇಕಾಗಿದೆ.

2. ನಿದ್ರೆಯಲ್ಲಿ ಇವನು ಕಾಣುತ್ತಿರುವವನಾಗಿಯೇ ಕಾಣುತ್ತಿಲ್ಲ ; ಏಕೆಂದರೆ ದರ್ಶನಕ್ಕೆ ವಿಷಯವಾದ ದ್ವಿತೀಯವಿಲ್ಲ (ಬೃ. ೪-೩-೨೩) ಎಂದುಮುಂತಾಗಿರುವ ಶ್ರುತಿ ಯಿಂದ ಆತ್ಮನ ಚೈತನ್ಯವು ಆಗಲೂ ಇತ್ತೆಂದು ಗೊತ್ತಾಗುತ್ತದೆ- ಎಂದು ಭಾವ.

3. ಸುಷುಪ್ತಿಯಲ್ಲಿ ಏನನ್ನೂ ಅರಿಯದಿರುವದಕ್ಕೆ ಪರಮಾತ್ಮನಲ್ಲಿ ಜೀವನು ಒಂದಾ ಗಿರುವದೇ ಕಾರಣವೆಂದು ಬೃ. ಭಾ. ೪-೩-೨೧ರಲ್ಲಿರುವದಕ್ಕೆ ಅಲ್ಲಿ ಅಜ್ಞಾನಕ್ಕೆ ಸಾಕ್ಷಿ ಯಾಗಿರುತ್ತಾನೆಂಬುದು ವಿರುದ್ಧ.

**ಸುಷುಪ್ತಾವಾತ್ಮಸದ್ಭಾವೇ ಪ್ರಮಾಣಂ ಪಣ್ಡಿತೋತ್ತಮಾಃ |**
**ವಿದುಃ ಸ್ವಪ್ರತ್ಯಭಿಜ್ಞಾನಮಾಬಾಲವೃದ್ಧಸಮ್ಮತಮ್ || ೬೦೮ ||**

೬೦೮. ಸುಷುಪ್ತಿಯಲ್ಲಿ ಆತ್ಮನಿದ್ದಾನೆಂಬುದಕ್ಕೆ ಹುಡುಗರಿಂದ ಮುದುಕರವರೆಗೆ (ಎಲ್ಲರಿಗೂ) ಒಪ್ಪಾಗಿರುವ ಆತ್ಮಪ್ರತ್ಯಭಿಜ್ಞಾನ[1]ವೆಂದು ಪಂಡಿತೋತ್ತಮರು ತಿಳಿದಿರುತ್ತಾರೆ.

**ಪ್ರತ್ಯಭಿಜ್ಞಾಯಮಾನತ್ವಂ ಲಿಙ್ಗಮಾತ್ರಾನುಮಾಪಕಮ್[2] |**
**ಸ್ಮರ್ಯಮಾಣಸ್ಯ ಸದ್ಭಾವೇ ಸುಖಮುಸ್ವಾಪ್ಸಮಿತ್ಯಯಮ್ || ೬೦೯ ||**
**ಪುರಾಽನುಭೂತೋ ನೋ ಚೇತ್ತು ಸ್ಮೃತೇರನುದಯೋ ಭವೇತ್ |**
**ಇತ್ಯಾದಿತರ್ಕಯುಕ್ತಿಶ್ಚ ಸದ್ಭಾವೇ ಮಾನಮಾತ್ಮನಃ || ೬೧೦ ||**

೬೦೯–೬೧೦. 'ಸುಖವಾಗಿ ನಿದ್ರಿಸಿದೆನು' ಎಂದು ಪ್ರತ್ಯಭಿಜ್ಞೆಗೆ ವಿಷಯವಾಗಿರುವದೆಂಬುದೇ ನೆನಪಿಸಿಕೊಂಡದ್ದು ಇದ್ದಿರಬೇಕೆಂಬ ಅನುಮಾನಕ್ಕೆ ಕಾರಣವಾದ ಗುರುತು.[3] 'ಇವನು ಹಿಂದೆ ಅನುಭೂತನಾಗಿರಬೇಕು, ಇಲ್ಲದಿದ್ದರೆ ಸ್ಮೃತಿಯು ಹುಟ್ಟುತ್ತಿರಲಿಲ್ಲ' ಎಂದು ಮುಂತಾಗಿರುವ ತರ್ಕದ ಯುಕ್ತಿಯೂ ಆತ್ಮನು ಇದ್ದನೆಂಬುದಕ್ಕೆ ಪ್ರಮಾಣವು.[4]

**ಯತ್ರಾತ್ಮನೋಽಕಾಮಯಿತೃತ್ವಬುದ್ಧಿಃ**
**ಸ್ವಪ್ನಾನಪೇಕ್ಷಾಪಿ ಚ ತತ್ಸುಷುಪ್ತಮ್ |**
**ಇತ್ಯಾತ್ಮಸದ್ಭಾವ ಉದೀರ್ಯತೇಽತ್ರ**
**ಶ್ರುತ್ಯಾಪಿ ತಸ್ಮಾಚ್ಛ್ರುತಿರತ್ರ ಮಾನಮ್ || ೬೧೧ ||**

೬೧೧. 'ಎಲ್ಲಿ ಆತ್ಮನಿಗೆ ಕಾಮಿಸುವ ಬುದ್ಧಿಯಿರುವದಿಲ್ಲವೋ, ಸ್ವಪ್ನದ ಅಪೇಕ್ಷೆಯೂ ಇರುವದಿಲ್ಲವೋ ಅದು ಸುಷುಪ್ತವು' (ಮಾಂ. ೫) ಎಂದು ಆತ್ಮನು (ಸುಷುಪ್ತಿಯಲ್ಲಿ) ಇರುವನೆಂದು ಶ್ರುತಿಯೂ ಹೇಳುತ್ತದೆ. ಆದ್ದರಿಂದ ಈ (ವಿಷಯ)ದಲ್ಲಿ ಶ್ರುತಿಯು ಪ್ರಮಾಣವು.

---

1. ನಿದ್ರೆಯಲ್ಲಿದ್ದವನೇ ತಾನೆಂದು ಗುರುತಿಸಿ ಅರಿಯುವ ಜ್ಞಾನ.

2. ಈ ಸಾಲು ಮೂಲದಲ್ಲಿ ತೀರ ಅಶುದ್ಧವಾಗಿದೆ. ಅದನ್ನು ತಿದ್ದಿಕೊಂಡು ಅರ್ಥವನ್ನು ಬರೆದಿದೇವೆ.

3. ಹೊಗೆಯಿಂದ ಬೆಂಕಿಯನ್ನು ಊಹಿಸುವಂತೆ ಸುಖವಾಗಿದ್ದೆನು ಎಂಬ ನೆನಪಿನಿಂದ ಆತ್ಮನಿದ್ದನೆಂದು ಊಹಿಸಬಹುದು.

4. 'ಈಗ ನೆನಪು ಆಗುತ್ತಿರುವದರಿಂದ ಆಗ ನಾನು ಸುಖವಾಗಿದ್ದ ಅನುಭವವಿರಬೇಕಾಯಿತು'– ಎಂದು ಅನುಭವವನ್ನು ಇಲ್ಲಿ ಕಲ್ಪಿಸಿದೆ. ಇದು ಸರಿಯಾದ ಸ್ಮೃತಿಯಲ್ಲವೆಂದೂ ಸ್ಮೃತಿಯಿಂದ ಅನುಭವವನ್ನು ಅನುಮಾನಿಸುವ ಯುಕ್ತಿಯು ಸರಿಯಲ್ಲವೆಂದೂ ವಾರ್ತಿಕದಲ್ಲಿದೆ.

**ಅಕಾಮಯಿತೃತಾ ಸ್ವಪ್ನಾದ್ದರ್ಶನಂ ಘಟತೇ ಕಥಮ್ ।**
**ಅವಿದ್ಯಮಾನಸ್ಯ ತತ ಆತ್ಮಾಽಸ್ತಿತ್ವಂ ಪ್ರತೀಯತೇ ॥ ೬೧೨ ॥**

೬೧೨. ಕಾಮಿಸದಿರುವದೂ ಕನಸನ್ನು ಕಾಣದಿರುವದೂ (ತಾನೇ) ಇಲ್ಲದವನಿಗೆ ಹೇಗೆ ಹೊಂದುತ್ತದೆ? (ಹೊಂದುವದಿಲ್ಲ). ಆದ್ದರಿಂದ (ಈ ಶ್ರುತಿಯಂತೆ ಸುಷುಪ್ತಿಯಲ್ಲಿ) ಆತ್ಮನು ಇದ್ದಾನೆಂದು (ಹೇಳಿದಂತೆ) ತಿಳಿದುಬರುತ್ತದೆ.

**ಏತೈಃ ಪ್ರಮಾಣೈರಸ್ತೀತಿ ಜ್ಞಾತಃ ಸಾಕ್ಷಿತಯಾ ಬುಧೈಃ ।**
**ಆತ್ಮಾಽಯಂ ಕೇವಲಃ ಶುದ್ಧಃ ಸಚ್ಚಿದಾನನ್ದಲಕ್ಷಣಃ ॥ ೬೧೩ ॥**

೬೧೩. ಈ ಪ್ರಮಾಣಗಳಿಂದ ಕೇವಲನೂ ಶುದ್ಧನೂ ಸಚ್ಚಿದಾನಂದಸ್ವರೂಪನೂ ಆದ ಈ ಆತ್ಮನು ಸಾಕ್ಷಿಯಾಗಿ ಇರುತ್ತಾನೆಂದು ಬಲ್ಲವರು ತಿಳಿಯುತ್ತಾರೆ.

## ಆತ್ಮನ ಸಚ್ಚಿದಾನಂದಸ್ವರೂಪ

**ಸತ್ತ್ವಚಿತ್ತ್ವಾನನ್ದತಾದಿ ಲಕ್ಷಣಂ ಪ್ರತ್ಯಗಾತ್ಮನಃ ।**
**ಕಾಲತ್ರಯೇಽಪ್ಯಬಾಧ್ಯತ್ತ್ವಂ ಸತ್ತ್ವಂ[1] ನಿತ್ಯಸ್ವರೂಪತಃ ॥ ೬೧೪ ॥**
**ಶುದ್ಧಚೈತನ್ಯರೂಪತ್ವಂ ಚಿತ್ತ್ವಂ ಜ್ಞಾನಸ್ವರೂಪತಃ ।**
**ಅಖಣ್ಡಸುಖರೂಪತ್ವಾದಾನನ್ದತ್ವಮಿತೀರ್ಯತೇ ॥ ೬೧೫ ॥**

೬೧೪-೬೧೫. ಸತ್ತ್ವ (ಇರುವಿಕೆ), ಚಿತ್ತ್ವ (ಅರಿವು), ಆನಂದತೆ (ಸುಖರೂಪ)- ಇವೇ ಮುಂತಾದದ್ದು ಪ್ರತ್ಯಗಾತ್ಮನಿಗೆ ಲಕ್ಷಣವು. ನಿತ್ಯಸ್ವರೂಪನಾಗಿರುವದರಿಂದ ಮೂರು ಕಾಲದಲ್ಲಿಯೂ ಬಾಧಿತವಾಗದೆ ಇರುವದು ಸತ್ತ್ವವು ; ಜ್ಞಾನಸ್ವರೂಪವಾಗಿರುವದರಿಂದ ಶುದ್ಧಚೈತನ್ಯದ ರೂಪದಿಂದಿರುವದು ಚಿತ್ತ್ವವು ; ಅಖಂಡಸುಖರೂಪವಾಗಿರುವದರಿಂದ ಆನಂದತ್ವ[2]- ಎಂದು ಹೇಳಲ್ಪಡುತ್ತದೆ.

**ಅನುಸ್ಯೂತಾತ್ಮನಃ ಸತ್ತಾ ಜಾಗ್ರತ್ಸ್ವಪ್ನಸುಷುಪ್ತಿಷು ।**
**ಅಹಮಸ್ಮೀತ್ಯತೋ ನಿತ್ಯೋ ಭವತ್ಯಾತ್ಮಾಽಯಮವ್ಯಯಃ ॥ ೬೧೬ ॥**
**ಸರ್ವದಾಪ್ಯಾಸಮಿತ್ಯೇವಾಭಿನ್ನಪ್ರತ್ಯಯ ಈಕ್ಷ್ಯತೇ ।**
**ಕದಾಪಿ[3] ನಾಸಮಿತ್ಯಸ್ಮಾದಾತ್ಮನೋ ನಿತ್ಯತಾ ಮತಾ ॥ ೬೧೭ ॥**
**ಆಯಾತಾಸು ಗತಾಸು ಶೈಶವಮುಖಾವಸ್ಥಾಸು ಜಾಗ್ರನ್ಮುಖಾ-**
**ಸ್ವನ್ಯಾಸ್ವಪ್ಯಖಿಲಾಸು ವೃತ್ತಿಷು ಧಿಯೋ ದುಷ್ಟಾಸ್ವದುಷ್ಟಾಸ್ವಪಿ ।**

---

1. 'ಸತ್ಯವಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. ಅವಸ್ಥೆಗಳಲ್ಲೆಲ್ಲ ಅಖಂಡವಾದ ಸುಖರೂಪತ್ವವು ಹೇಗೆ ಇರುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗಿಲ್ಲ.

3. 'ಕದಾಪಿ ನ ನಾಸಮ್' ಎಂದಿರಬೇಕು ; ಆದರೆ ಛಂದಸ್ಸು ಕೆಡುತ್ತದೆ.

ಗಙ್ಗಾಭಙ್ಗಪರಮ್ಪರಾಸು ಜಲವತ್ಸತ್ತಾನುವೃತ್ತಾತ್ಮನ-
ಸ್ತಿಷ್ಠತ್ಯೇವ ಸದಾ ಸ್ಥಿರಾಹಮಹಮಿತ್ಯೇಕಾತ್ಮತಾ ಸಾಕ್ಷಿಣಃ ॥ ೬೧೮ ॥

ಪ್ರತಿಪದಮಹಮಾದಯೋ ವಿಭಿನ್ನಾಃ
ಕ್ಷಣಪರಿಣಾಮಿತಯಾ ವಿಕಾರಿಣಸ್ತೇ ।
ನ ಪರಿಣತಿರಮುಷ್ಯ ನಿಷ್ಕಲತ್ವಾ-
ದಯಮವಿಕಾರ್ಯತ ಏವ ನಿತ್ಯ ಆತ್ಮಾ ॥ ೬೧೯ ॥

ಯಃ ಸ್ವಪ್ನಮದ್ರಾಕ್ಷಮಹಂ ಸುಖಂ ಯೋಽ
ಸ್ವಾಪ್ಸಂ ಸ ಏವಾಸ್ಮ್ಯಥ ಜಾಗರೂಕಃ ।
ಇತ್ಯೇವಮಚ್ಛಿನ್ನತಯಾನುಭೂಯತೇ
ಸತ್ತಾತ್ಮನೋ ನಾಸ್ತಿ ಹಿ ಸಂಶಯೋಽತ್ರ ॥ ೬೨೦ ॥

೬೧೮–೬೨೦. ಎಚ್ಚರ, ಕನಸು, ತನಿನಿದ್ರೆ– ಇವುಗಳಲ್ಲಿ– ಆತ್ಮನ ಇರವು 'ನಾನು ಇರುತ್ತೇನೆ'[1] ಎಂದು ಇದ್ದುಕೊಂಡೇ ಇರುತ್ತದೆ. ಆದ್ದರಿಂದ ಈ ಆತ್ಮನು ನಿತ್ಯನೂ ಅವ್ಯಯನೂ ಆಗಿರುತ್ತಾನೆ. 'ಯಾವಾಗಲೂ ಇದ್ದೇನು' ಎಂಬೀ ಬೇರ್ಪಡದ ಪ್ರತ್ಯಯವಿರುತ್ತದೆ, 'ಇರಲಿಲ್ಲ' ಎಂಬು ಯಾವ ಕಾಲದಲ್ಲಿಯೂ (ಪ್ರತ್ಯಯವಾಗುವದಿಲ್ಲ) ; ಆದ್ದರಿಂದ ಆತ್ಮನು ನಿತ್ಯನೆನಿಸುವನು. ಶಿಶುತ್ವವೇ ಮುಂತಾದ ಅವಸ್ಥೆಗಳು ಬಂದುಹೋಗುತ್ತಿರುವಲ್ಲಿ, ಎಚ್ಚರವೇ ಮುಂತಾದ ಬೇರೆಯ ಅವಸ್ಥೆಗಳೂ (ಬಂದುಹೋಗುತ್ತಿರಲು), ಕೆಟ್ಟ ಮತ್ತು ಒಳ್ಳೆಯ ಬುದ್ಧಿವೃತ್ತಿಗಳು (ಬಂದುಹೋಗುತ್ತಿರಲು) ಗಂಗೆಯ ಅಲೆಗಳ ಪರಂಪರೆಗಳು (ಬಂದುಹೋದರೂ) ನೀರು ಹೇಗೆ (ಎಲ್ಲವುಗಳಲ್ಲಿಯೂ) ಇದ್ದುಕೊಂಡೇ ಇರುವದೋ ಹಾಗೆ 'ನಾನು', 'ನಾನು' ಎಂದು ಸಾಕ್ಷಿಯ ಏಕಾತ್ಮತ್ವವು ಯಾವಾಗಲೂ ಇದ್ದುಕೊಂಡೇಇರುವದು. ಹೆಜ್ಜೆಹೆಜ್ಜೆಗೂ 'ನಾನು' ಮುಂತಾದ (ವೃತ್ತಿಗಳು) ಬೇರೆಬೇರೆಯಾಗಿರುತ್ತವೆ. ಕ್ಷಣಮಾತ್ರದಲ್ಲಿ ಮಾರ್ಪಡುವದರಿಂದ ಅವು ವಿಕಾಸವುಳ್ಳವು. ಈ (ಆತ್ಮನಿಗೆ) ಯಾವ ಪರಿಣಾಮವೂ ಆಗುವದಿಲ್ಲ. ಏಕೆಂದರೆ ಇವನು ನಿರವಯವನು. ಆದ್ದರಿಂದಲೇ ಈ ಆತ್ಮನು ನಿರ್ವಿಕಾರಿಯೂ ನಿತ್ಯನೂ ಆಗಿರುತ್ತಾನೆ. ಯಾವನು 'ಕನಸನ್ನು ಕಂಡ, ಸುಖವಾಗಿ ನಿದ್ರಿಸಿದ ನಾನೇ ಎಚ್ಚತ್ತಿದೇನೆ' ಎಂದು ಕಡಿದುಹೋಗದ ಆತ್ಮನ ಇರವನ್ನು ಅನುಭವಿಸುವನೋ ಅಂಥ ಆತ್ಮನ (ವಿಷಯದಲ್ಲಿ) ಸಂಶಯವಿಲ್ಲವೇಇಲ್ಲ.

---

1. ಸುಷುಪ್ತಿಯಲ್ಲಿ 'ನಾನು ಇರುತ್ತೇನೆ' ಎಂದು ಅನುಭವವಿಲ್ಲವಾದರೂ ಸುಷುಪ್ತಿಯಲ್ಲಿಯೂ ಇದ್ದೆನು– ಎಂಬ ಸ್ಮರಣೆಯೇ ಸಾಕೆಂದು ಗ್ರಂಥಕರ್ತರು ಭಾವಿಸಿರಬಹುದೆಂದು ಕಾಣುತ್ತದೆ.

ಶ್ರುತ್ಯುಕ್ತಾಃ ಷೋಡಶಕಲಾಶ್ಚಿದಾಭಾಸಸ್ಯ ನಾತ್ಮನಃ ।
ನಿಷ್ಕಲತ್ವಾನ್ನಾಸ್ಯ ಲಯಸ್ತಸ್ಮಾನ್ನಿತ್ಯತ್ವಮಾತ್ಮನಃ ॥ ೬೨೧ ॥

೬೨೧. ಶ್ರುತಿಯಲ್ಲಿ ಹೇಳಿರುವ[1] ಹದಿನಾರು ಕಲೆಗಳು ಚಿದಾಭಾಸನಿಗೇ ಹೊರತು ಆತ್ಮನಿಗಲ್ಲ[2], ಏಕೆಂದರೆ ಅವನು ನಿಷ್ಕಲನಾಗಿರುತ್ತಾನೆ, ಇವನಿಗೆ ಲಯವಿಲ್ಲ. ಆದ್ದರಿಂದ ಆತ್ಮನಿಗೆ ನಿತ್ಯತ್ವವು ಸಿದ್ಧಿಸುತ್ತದೆ.[3]

ಜಡಪ್ರಕಾಶಕಃ ಸೂರ್ಯಃ ಪ್ರಕಾಶಾತ್ಮೈವ ನೋ ಜಡಃ ।
ಬುದ್ಧ್ಯಾದಿಭಾಸಕಸ್ತಸ್ಮಾಚ್ಚಿತ್ಸ್ವರೂಪಸ್ತಥಾ ಮತಃ ॥ ೬೨೨ ॥
ಕುಡ್ಯಾದೇಸ್ತು ಜಡಸ್ಯ ನೈವ ಘಟತೇ ಭಾನಂ ಸ್ವತಃ ಸರ್ವದಾ
ಸೂರ್ಯಾದಿಪ್ರಭಯಾ ವಿನಾ ಕ್ವಚಿದಪಿ ಪ್ರತ್ಯಕ್ಷಮೇತತ್ ತಥಾ ।
ಬುದ್ಧ್ಯಾದೇರಪಿ ನ ಸ್ವತೋಽಸ್ತ್ಯಣುರಪಿ ಸ್ಫೂರ್ತಿರ್ವಿನೈವಾತ್ಮನಾ
ಸೋಽಯಂ ಕೇವಲಚಿನ್ಮಯಃ ಶ್ರುತಿಮತೋ ಭಾನುರ್ಯಥಾ ರುಙ್ಮಯಃ

ಸ್ವಭಾಸನೇ ವಾಽನ್ಯಪದಾರ್ಥಭಾಸನೇ
ನಾರ್ಕಃ ಪ್ರಕಾಶಾನ್ತರಮೀಷದಿಚ್ಛತಿ ।
ಸ್ವಬೋಧನೇ ವಾಽಪ್ಯಹಮಾದಿಬೋಧನೇ
ತಥೈವ ಚಿದ್ಧಾತುರಯಂ ಪರಾತ್ಮಾ ॥ ೬೨೪ ॥
ಅನ್ಯಪ್ರಕಾಶಂ ನ ಕಿಮಪ್ಯಪೇಕ್ಷ್ಯ
ಯತೋಽಯಮಾಭಾತಿ ನಿಜಾತ್ಮನೈವ ।
ತತಃ ಸ್ವಯಂಜ್ಯೋತಿರಯಂ ಚಿದಾತ್ಮಾ
ನ ಹ್ಯಾತ್ಮಭಾನೇ ಪರದೀಪ್ಯಪೇಕ್ಷಾ ॥ ೬೨೫ ॥

ಯಂ ನ ಪ್ರಕಾಶಯತಿ ಕಿಞ್ಚಿದಿನೋಽಪಿ ಚನ್ದ್ರೋ
ನೋ ವಿದ್ಯುತಃ ಕಿಮುತ ವಹ್ನಿರಯಂ ಮಿತಾಭಃ ।
ಯಂ ಭಾನ್ತಮೇತಮನುಭಾತಿ ಜಗತ್ ಸಮಸ್ತಂ
ಸೋಽಯಂ ಸ್ವಯಂ ಸ್ಫುರತಿ ಸರ್ವದಶಾಸು ಚಾತ್ಮಾ ॥ ೬೨೬ ॥

---

1. ಪ್ರಶ್ನೋಪನಿಷತ್ತಿನಲ್ಲಿ ತಿಳಿಸಿರುವ.

2. ಶ್ರುತಿಯಲ್ಲಿ ಕಲೆಗಳು ಲಯವಾಗುವವೆಂದು ಹೇಳಿದೆಯಾದ್ದರಿಂದ ಅವು ಆತ್ಮನಿಗೆ ಸೇರಿಲ್ಲ, ಆಭಾಸಕ್ಕೆ ಸೇರಿದವು ಎಂದಿದೆ. ಭಾಷ್ಯದಲ್ಲಿ 'ಇವು ಕಣ್ಣುಪರೆ ಇರುವವನಿಗೆ ಸೊಳ್ಳೆ, ನೊಣ, ಎರಡನೆಯ ಚಂದ್ರ- ಇವುಂತಾದವು ತೋರುವಂತೆ ಅವಿದ್ಯೆಯಿಂದ ಸೃಷ್ಟವಾಗಿರುವ ಕಲೆಗಳು' ಎಂದಿದೆ.

3. ಇಲ್ಲಿಗೆ ಆತ್ಮನ ಸದ್ರೂಪದ ಉಪಪತ್ತಿಯು ಮುಗಿಯಿತು; ಇನ್ನು ಚಿದ್ರೂಪದ ಉಪಪತ್ತಿಯ ವಿಸ್ತಾರವನ್ನು ಮೊದಲುಮಾಡಲಾಗುತ್ತದೆ.

೬೨೩--೬೨೬. ಜಡವಸ್ತುಗಳನ್ನು ಬೆಳಗುವ ಸೂರ್ಯನು ಪ್ರಕಾಶರೂಪನೇ ಹೊರತು ಜಡವಲ್ಲ.[1] ಆದ್ದರಿಂದ ಬುದ್ಧ್ಯಾದಿಗಳನ್ನು ಬೆಳಗುವ ಆತ್ಮನು ಹಾಗೆಯೇ ಚಿತ್ಸ್ವರೂಪನೆನಿಸುವನು. ಜಡವಾದ ಗೋಡೆಯೇ ಮುಂತಾದವುಗಳಿಗೆ ಸೂರ್ಯಾದಿಗಳ ಬೆಳಕಿಲ್ಲದೆ ಎಂದಿಗೂ ಸ್ವಂತವಾಗಿ ತೋರಿಕೆಯಿರುವದಿಲ್ಲ; ಇದು ಪ್ರತ್ಯಕ್ಷವಾಗಿರುತ್ತದೆ. ಹಾಗೆಯೇ ಬುದ್ಧಿಯೇ ಮುಂತಾದವುಗಳಿಗೆ ಆತ್ಮನಿಲ್ಲದೆಯೇ ಸ್ವಲ್ಪವೂ ಜ್ಞಾನವು ತಮ್ಮತಮ್ಮಿಂದಲೇ ಇರುವದಿಲ್ಲ. ಆ ಈ ಆತ್ಮನು- ಸೂರ್ಯನು ಹೇಗೆ ಪ್ರಕಾಶರೂಪನೋ ಹಾಗೆ- ಚಿದ್ರೂಪನೆಂದು ಶ್ರುತಿಯ ಮತವು. ತನ್ನನ್ನು ಬೆಳಗುವದರಲ್ಲಾಗಲಿ, ಮತ್ತೊಂದು ಪದಾರ್ಥವನ್ನು ಬೆಳಗುವದರಲ್ಲಾಗಲಿ ಸೂರ್ಯನು ಮತ್ತೊಂದರ ಪ್ರಕಾಶವನ್ನು ಸ್ವಲ್ಪವೂ ಬಯಸುವದಿಲ್ಲ. ಹಾಗೆಯೇ ಚಿದ್ಧಾತುವಾಗಿರುವ ಈ ಪರಮಾತ್ಮನು ತನ್ನನ್ನು ಅರಿಯುವದಕ್ಕಾಗಲಿ, ಅಹಂಕಾರವೇ ಮುಂತಾದದ್ದನ್ನು ಅರಿಯುವದಕ್ಕಾಗಲಿ (ಮತ್ತೊಂದು ಚೈತನ್ಯವನ್ನು ಒಂದಿಷ್ಟೂ ಬಯಸುವದಿಲ್ಲ). ಮತ್ತೊಂದರ ಬೆಳಕನ್ನು ಯಾವದನ್ನೂ ಬಯಸದೆ ತನ್ನ ಸ್ವರೂಪದಿಂದಲೇ ಇವನು ಬೆಳಗುತ್ತಿರುವನಲ್ಲವೆ, ಆದ್ದರಿಂದ ಈ ಚಿದಾತ್ಮನು **ಸ್ವಯಂಜ್ಯೋತಿಯು**, ಆತ್ಮನು ಬೆಳಗುವದಕ್ಕೆ ಮತ್ತೊಂದರ ಬೆಳಕಿನ ಅಪೇಕ್ಷೆಯಿಲ್ಲವಷ್ಟೆ? ಯಾವನನ್ನು ಸೂರ್ಯನೂ ಬೆಳಗುವದಿಲ್ಲವೋ, ಚಂದ್ರನೂ (ಬೆಳಗುವದಿಲ್ಲವೋ), ಮಿಂಚುಗಳೂ ಬೆಳಗುವದಿಲ್ಲವೋ (ಅವನನ್ನು) ಈ ಪರಿಚ್ಛಿನ್ನಪ್ರಕಾಶವುಳ್ಳ ಬೆಂಕಿಯು ಬೆಳಗುವದಿಲ್ಲವೆಂಬುದನ್ನು ಹೇಳಬೇಕಾದದ್ದೇನು ? ಯಾವನು ಬೆಳಗುತ್ತಿರುವಲ್ಲಿ ಅದನ್ನನುಸರಿಸಿಯೇ ಜಗತ್ತೆಲ್ಲವೂ ತೋರಿಕೊಳ್ಳುತ್ತಿರುವದೋ[2] ಆ ಈ ಆತ್ಮನು ಸರ್ವಸ್ಥಿತಿಗಳಲ್ಲಿಯೂ ತಾನೇ ಬೆಳಗುತ್ತಿರುವನು.[3]

**ಆತ್ಮನಃ ಸುಖರೂಪತ್ವಾದಾನನ್ದತ್ವಂ ಸ್ವಲಕ್ಷಣಮ್ ।**
**ಪರಪ್ರೇಮಾಸ್ಪದತ್ವೇನ ಸುಖರೂಪತ್ವಮಾತ್ಮನಃ ॥ ೬೨೭ ॥**
**ಸುಖಹೇತುಷು ಸರ್ವೇಷಾಂ ಪ್ರೀತಿಃ ಸಾವಧಿರೀಕ್ಷ್ಯತೇ ।**
**ಕದಾಪಿ ನಾವಧಿಃ ಪ್ರೀತೇಃ ಸ್ವಾತ್ಮನಿ ಪ್ರಾಣಿನಾಂ ಕ್ವಚಿತ್ ॥ ೬೨೮ ॥**
**ಕ್ಷೀಣೇನ್ದ್ರಿಯಸ್ಯ ಜೀರ್ಣಸ್ಯ ಸಂಪ್ರಾಪ್ತೋತ್ಕ್ರಮಣಸ್ಯ ವಾ ।**
**ಅಸ್ತಿ ಜೀವಿತುಮೇವಾಶಾ ಸ್ವಾತ್ಮಾ ಪ್ರಿಯತಮೋ ಯತಃ ॥ ೬೨೯ ॥**
**ಆತ್ಮಾತಃ ಪರಮಪ್ರೇಮಾಸ್ಪದಃ ಸರ್ವಶರೀರಿಣಾಮ್ ।**

---

1. ಸೂರ್ಯನು ಜಡವಲ್ಲ ಎಂಬುದು ಯುಕ್ತವಲ್ಲ; ಏಕೆಂದರೆ ಸೂರ್ಯಮಂಡಲವು ಪ್ರಕಾಶಯುಕ್ತವಾಗಿದ್ದರೂ ಚೇತನವಲ್ಲ. ಸ್ವತಃಪ್ರಕಾಶವಲ್ಲದ್ದು ಮತ್ತೊಂದನ್ನು ಬೆಳಗಲಾರದು ; ಇದರಂತೆ ಬುದ್ಧ್ಯಾದಿಗಳು ಅಚೇತನವಾಗಿರುವದರಿಂದ ಮತ್ತೊಂದನ್ನು ತಾವೇ ಬೆಳಗಲಾರವು ಎಂಬುದಿಷ್ಟೇ ದೃಷ್ಟಾಂತದಲ್ಲಿ ವಿವಕ್ಷಿತಾಂಶ. ಮುಂ. ಭಾ. ೨-೨-೧೧ನ್ನು ನೋಡಿ.

2. ಮುಂ. ೨-೨-೧೧ರ ಸೂಚನೆಯಿದು.

3. ಇಲ್ಲಿಗೆ ಚಿದ್ರೂಪದ ಉಪಪಾದನವು ಮುಗಿಯಿತು.

ಯಸ್ಯ ಶೇಷತಯಾ ಸರ್ವಮುಪಾದೇಯತ್ವಮೃಚ್ಛತಿ || ೬೩೦ ||
ಏಷ ಏವ ಪ್ರಿಯತಮಃ ಪುತ್ರಾದಪಿ ಧನಾದಪಿ |
ಅನ್ಯಸ್ಮಾದಪಿ ಸರ್ವಸ್ಮಾದಾತ್ಮಾಽಯಂ ಪರಮಾನ್ತರಃ || ೬೩೧ ||
ಪ್ರಿಯತ್ವೇನ ಮತಂ ಯತ್ತು ತತ್ಸದಾ ನಾಪ್ರಿಯಂ ನೃಣಾಮ್ |
ವಿಪತ್ತಾವಪಿ ಸಂಪತ್ತೌ ಯಥಾತ್ಮಾ ನ ತಥಾಪರಃ || ೬೩೨ ||

ಆತ್ಮಾ ಖಲು ಪ್ರಿಯತಮೋಽಸುಭೃತಾಂ ಯದರ್ಥಾ
ಭಾರ್ಯಾತ್ಮಜಾಪ್ತಗೃಹವಿತ್ತಮುಖಾಃ ಪದಾರ್ಥಾಃ |
ವಾಣಿಜ್ಯಕರ್ಷಣಗವಾವನರಾಜಸೇವಾ-
ಭೈಷಜ್ಯಕಪ್ರಭೃತಯೋ ವಿವಿಧಾಃ ಕ್ರಿಯಾಶ್ಚ || ೬೩೩ ||

ಪ್ರವೃತ್ತಿಶ್ಚ ನಿವೃತ್ತಿಶ್ಚ ಯಚ್ಚ ಯಾವಚ್ಚ ಚೇಷ್ಟಿತಮ್ |
ಆತ್ಮಾರ್ಥಮೇವ ನಾನ್ಯಾರ್ಥಂ ನಾತಃ ಪ್ರಿಯತಮಃ ಪರಃ || ೬೩೪ ||

ತಸ್ಮಾದಾತ್ಮಾ ಕೇವಲಾನನ್ದರೂಪೋ
ಯಃ ಸರ್ವಸ್ಮಾದ್ವಸ್ತುನಃ ಪ್ರೇಷ್ಠ ಉಕ್ತಃ |
ಯೋ ವಾ ಅಸ್ಮಾನ್ಮನ್ಯತೇಽನ್ಯಂ ಪ್ರಿಯಂ ಯಂ
ಸೋಽಯಂ ತಸ್ಮಾಚ್ಛೋಕಮೇವಾನುಭುಙ್ಕ್ತೇ || ೬೩೫ ||

೬೨೭–೬೩೫. ಆತ್ಮನು ಸುಖರೂಪನಾಗಿರುವದರಿಂದ ಆನಂದತ್ವವು ಅವನ ಲಕ್ಷಣವಾಗಿರುತ್ತದೆ. ಹೆಚ್ಚಿನ ಪ್ರೇಮಕ್ಕೆ ವಿಷಯನಾಗಿರುವದರಿಂದ ಆತ್ಮನು ಸುಖರೂಪನು. ಸುಖಕ್ಕೆ ಕಾರಣವಾಗಿರುವ (ವಸ್ತುಗಳಲ್ಲಿ) ಇರುವ ಪ್ರೇಮವು ಎಲ್ಲರಿಗೂ ಇಷ್ಟೆಂಬ ಅವಧಿಯುಳ್ಳದ್ದಾಗಿರುವದು ಕಂಡುಬರುತ್ತದೆ. ಜೀವರುಗಳಿಗೆ ಪ್ರೇಮವು ಇಷ್ಟರವರೆಗಿನದೆಂದು ಎಂದೂ ಅವಧಿಯುಳ್ಳದ್ದಾಗಿರುವದಿಲ್ಲ. ಇಂದ್ರಿಯಗಳು ಕ್ಷಯವಾಗಿರುವವನಿಗಾಗಲಿ ಮುದುಕನಾಗಿರುವವನಿಗಾಗಲಿ, ಪ್ರಾಣೋತ್ಕ್ರಮಣವು ಬಂದೊದಗಿರುವವನಿಗೇ ಆಗಲಿ ಬದುಕಿರುವ ಆಶೆಯೇ ಇರುತ್ತದೆ ; ಏಕೆಂದರೆ ತನ್ನ ತನ್ನ ಆತ್ಮನು ಎಲ್ಲಕ್ಕಿಂತಲೂ ಪ್ರಿಯನಾಗಿರುತ್ತಾನೆ. ಆದ್ದರಿಂದ ಆತ್ಮನು ಎಲ್ಲಾ ದೇಹಿಗಳಿಗೂ ಪರಮಪ್ರೇಮಕ್ಕೆ ವಿಷಯನಾಗಿರುತ್ತಾನೆ. ಅವನಿಗೆ ಅಂಗವಾಗಿಯೇ ಎಲ್ಲವೂ ಬೇಕೆನಿಸುವದಾಗಿರುತ್ತದೆ. ಮಗನಿಗಿಂತಲೂ ಧನಕ್ಕಿಂತಲೂ ಮತ್ತು ಮಿಕ್ಕ ಎಲ್ಲಕ್ಕಿಂತಲೂ ಇವನೇ ಹೆಚ್ಚು ಪ್ರಿಯನು ; ಇವನೇ ಎಲ್ಲಕ್ಕೂ ಒಳಗಿರುವಾತನು. ಯಾವದು ಪ್ರಿಯವೆಂದೆನಿಸಿಕೊಂಡಿರುವದಾಗಿ ಅದು ಎಂದಿಗೂ ಜನರಿಗೆ ಅಪ್ರಿಯವಾಗಿರುವದಿಲ್ಲದ್ದಾಗಿ ವಿಪತ್ತಿನಲ್ಲಾಗಲಿ ಸಂಪತ್ತಿನಲ್ಲಾಗಲಿ ಪ್ರಿಯವಾಗಿಯೇ ಇರುವದೆಂಬುದು ಹೇಗೆ ಆತ್ಮನೋ ಹಾಗೆ ಮತ್ತೊಂದಿಲ್ಲ. ಆತ್ಮನೇ ಜೀವರಿಗೆ ಎಲ್ಲಕ್ಕಿಂತಲೂ ಪ್ರಿಯನಾಗಿರುತ್ತಾನೆ, ಆ (ಆತ್ಮನಿಗಾಗಿಯೇ) ಹೆಂಡತಿ, ಮಗ, ಆಪ್ತರು, ಮನೆ, ಧನ– ಮುಂತಾದ ಪದಾರ್ಥಗಳು (ಬೇಕಾಗಿರುತ್ತವೆ). ವ್ಯಾಪಾರ

ಮಾಡುವದು, ಬೇಸಾಯಮಾಡುವದು, ದನಕರುಗಳನ್ನು ಸಾಕುವದು, ರಾಜರನ್ನು ಸೇವಿಸುವದು, ವೈದ್ಯವೃತ್ತಿ–ಮುಂತಾದ ಬಗೆಬಗೆಯ ಕ್ರಿಯೆಗಳೂ ಅವನಿಗಾಗಿಯೇ (ಬೇಕಾಗಿರುವವು). ಕೆಲಸದಲ್ಲಿ ತೊಡಗುವದೂ ಅದನ್ನು ಬಿಟ್ಟು ಹಿಂಜರಿಯುವದು, ಯಾವ ಎಷ್ಟು ಕೆಲಸವಿರಲಿ (ಅದೆಲ್ಲವೂ) ತನಗಾಗಿಯೇ ಹೊರತು ಮತ್ತೊಬ್ಬರಿಗಾಗಿಯಲ್ಲ ; ಆದ್ದರಿಂದ ಆತ್ಮನು ಎಲ್ಲಕ್ಕಿಂತಲೂ ಪ್ರಿಯನು. ಆದ್ದರಿಂದ ಎಲ್ಲಕ್ಕಿಂತಲೂ ಪ್ರಿಯತಮನೆಂದು ಹೇಳಿದ (ಈ) ಆತ್ಮನು **ಕೇವಲಾನಂದ ರೂಪನು.** ಯಾವನು ಇವನಿಗಿಂತ ಮತ್ತೊಂದನ್ನು ಪ್ರಿಯವೆಂದು ಎಣಿಸುವನೋ, ಅವನು ಅದರಿಂದ ಶೋಕವನ್ನೇ ಅನುಭವಿಸುತ್ತಾನೆ[1].

## ಶಿಷ್ಯನ ಪ್ರಶ್ನೆ :
## ಜನರು ಸುಖಕ್ಕಾಗಿ ಏತಕ್ಕೆ ಪ್ರಯತ್ನಿಸುತ್ತಾರೆ?

**ಅಪರಃ ಕ್ರಿಯತೇ ಪ್ರಶ್ನೋ ಮಯಾಽಯಂ ಕ್ಷಮ್ಯತಾಂ ಪ್ರಭೋ ।**
**ಅಜ್ಞವಾಗಪರಾಧಾಯ ಕಲ್ಪತೇ ನ ಮಹಾತ್ಮನಾಮ್ ॥ ೬೩೬ ॥**

**ಆತ್ಮಾಽನ್ಯಃ ಸುಖಮನ್ಯಚ್ಚ ನಾತ್ಮನಃ ಸುಖರೂಪತಾ ।**
**ಆತ್ಮನಃ ಸುಖಮಾಶಾಸ್ಯಂ ಯತತೇ ಸಕಲೋ ಜನಃ ॥ ೬೩೭ ॥**

**ಆತ್ಮನಃ ಸುಖರೂಪತ್ವೇ ಪ್ರಯತ್ನಃ ಕಿಮು ದೇಹಿನಾಮ್ ।**
**ಏಷ ಮೇ ಸಂಶಯಃ ಸ್ವಾಮಿನ್ ಕೃಪಯೈವ ನಿರಸ್ಯತಾಮ್ ॥ ೬೩೮ ॥**

೬೩೬–೬೩೮. ಶಿಷ್ಯನ (ಪ್ರಶ್ನೆ) : ಪ್ರಭುವೆ, ನಾನು ಈ ಇನ್ನೊಂದು ಪ್ರಶ್ನೆಯನ್ನು[2] ಮಾಡುತ್ತೇನೆ, ಕ್ಷಮಿಸಬೇಕು. ಮಹಾತ್ಮರಿಗೆ ಅಜ್ಞರ ಮಾತು ಅಪರಾಧವಾಗಲಾರದಷ್ಟೆ ? ಆತ್ಮನೇ ಬೇರೆ, ಸುಖವೇ ಬೇರೆ; ಆತ್ಮನು ಸುಖರೂಪನಲ್ಲ, ಆತ್ಮನಿಗೆ ಸುಖವು ಬೇಕೆನಿಸುತ್ತದೆ. (ಆದಕ್ಕಾಗಿ) ಪ್ರತಿಯೊಬ್ಬನೂ ಪ್ರಯತ್ನಿಸುತ್ತಿರುತ್ತಾನೆ. ಆತ್ಮನೇ ಸುಖಸ್ವರೂಪನಾದರೆ ಶರೀರಿಗಳು (ಅದಕ್ಕಾಗಿ) ಏಕೆ ಪ್ರಯತ್ನಮಾಡುತ್ತಾರೆ ? ಸ್ವಾಮಿಯೆ, ಈ ನನ್ನ ಸಂಶಯವನ್ನು ಕೃಪೆಯಿಂದಲೇ ನೀಗಬೇಕು.

---

1. ಬೃ. ೧–೪–೮ರ ಸೂಚನೆಯೆಂದು ಕಾಣುತ್ತದೆ ; ಹಾಗಿದ್ದರೆ ಅಲ್ಲಿ 'ರೋತ್ಸ್ಯತಿ' ಎಂದರೆ ನಾಶವಾಗುತ್ತದೆ ಎಂಬ ಭಾಷ್ಯಕ್ಕಿಂತ ಇಲ್ಲಿ ಬೇರೆ ಅರ್ಥವನ್ನು ಹೇಳಿದಂತೆ ಆಗುವದು.

2. ಇದು ನಿಜವಾಗಿ 'ಪ್ರಶ್ನೆ'ಯಲ್ಲ, ೬೩೮ರಲ್ಲಿ ಹೇಳಿರುವಂತೆ 'ಸಂಶಯ'ವೂ ಅಲ್ಲ ; ಇದು ಆಕ್ಷೇಪ. ಮನುಷ್ಯನು ತಾನೇ ಸುಖರೂಪನಾಗಿದ್ದರೆ ಅವನು ಸುಖಕ್ಕಾಗಿ ಏತಕ್ಕೆ ಪ್ರಯತ್ನಿಸಬೇಕಿತ್ತು ? ಜನರೆಲ್ಲರೂ ಸುಖಕ್ಕಾಗಿ ಪ್ರಯತ್ನಿಸುತ್ತಿರುವದರಿಂದ ಸುಖವು ಬೇರೆ, ಅದಕ್ಕಾಗಿ ಪ್ರಯತ್ನಿಸುವವನು ಬೇರೆ– ಎಂಬುದೇ ಆಕ್ಷೇಪದ ಸಾರ.

## ಗುರುವಿನ ಉತ್ತರ :
## ಆತ್ಮಾನಂದವನ್ನು ಅರಿಯದ್ದೇ ಸುಖಾನ್ವೇಷಣೆಗೆ ಕಾರಣ

**ಶ್ರೀಗುರುಃ—**

**ಆನನ್ದರೂಪಮಾತ್ಮಾನಮಜ್ಞಾತ್ವೈವ ಪೃಥಗ್ಜನಃ ।**
**ಬಹಿಃಸುಖಾಯ ಯತತೇ ನ ತು ಕಶ್ಚಿದ್ ವಿದನ್ ಬುಧಃ ॥ ೬೩೯ ॥**

**ಅಜ್ಞಾತ್ವೈವ ಹಿ ನಿಕ್ಷೇಪಂ ಭಿಕ್ಷಾಮಟತಿ ದುರ್ಮತಿಃ ।**
**ಸ್ವವೇಶ್ಮನಿ ನಿಧಿಂ ಜ್ಞಾತ್ವಾ ಕೋ ನು ಭಿಕ್ಷಾಮಟೇತ್ ಸುಧೀಃ ॥ ೬೪೦ ॥**

**ಸ್ಥೂಲಂ ಚ ಸೂಕ್ಷ್ಮಂ ಚ ವಪುಃ ಸ್ವಭಾವತೋ**
**ದುಃಖಾತ್ಮಕಂ ಸ್ವಾತ್ಮತಯಾ ಗೃಹೀತ್ವಾ ।**
**ವಿಸ್ಮೃತ್ಯ ಚ ಸ್ವಂ ಸುಖರೂಪಮಾತ್ಮನೋ**
**ದುಃಖಪ್ರದೇಭ್ಯಃ ಸುಖಮಜ್ಞ ಇಚ್ಛತಿ ॥ ೬೪೧ ॥**

**ನ ಹಿ ದುಃಖಪ್ರದಂ ವಸ್ತು ಸುಖಂ ದಾತುಂ ಸಮರ್ಹತಿ ।**
**ಕಿಂ ವಿಷಂ ಪಿಬತೋ ಜನ್ತೋರಮೃತತ್ವಂ ಪ್ರಯಚ್ಛತಿ ॥ ೬೪೨ ॥**

**ಆತ್ಮಾಽನ್ಯಃ ಸುಖಮನ್ಯಚ್ಚೇತ್ಯೇವಂ ನಿಶ್ಚಿತ್ಯ ಪಾಮರಃ ।**
**ಬಹಿಃ ಸುಖಾಯ ಯತತೇ ಸತ್ಯಮೇವ ನ ಸಂಶಯಃ ॥ ೬೪೩ ॥**

೬೩೯-೬೪೩. ಶ್ರೀಗುರುವಿನ (ಉತ್ತರ) : ಆತ್ಮನು ಆನಂದರೂಪನೆಂಬುದನ್ನು ಅರಿಯದೆಯೇ ಸಾಮಾನ್ಯಜನವು ಹೊರಗೆ ಸುಖಕ್ಕಾಗಿ ಪ್ರಯತ್ನಿಸುತ್ತಿದೆಯೇ ಹೊರತು, (ಅದನ್ನು) ತಿಳಿದಿರುವ ವಿವೇಕಿಯು ಯಾವನೂ (ಅದಕ್ಕಾಗಿ ಯತ್ನಿಸು) ವದಿಲ್ಲ; ನಿಧಿಯಿರುವದನ್ನು ಅರಿಯದೆಯೇ ಅಲ್ಲವೆ, ಅವಿವೇಕಿಯಾದವನು ಭಿಕ್ಷಾಟನೆಗೆ ಹೋಗುತ್ತಾನೆ ? ತನ್ನ ಮನೆಯಲ್ಲಿಯೇ ನಿಧಿ(ಯಿರುವದನ್ನು) ಅರಿತೂ ಯಾವ ವಿವೇಕಿಯುತಾನೆ ಭಿಕ್ಷಾಟನೆಗೆ ಹೋದಾನು ? ದುಃಖರೂಪವಾಗಿರುವ ಸ್ಥೂಲ ಮತ್ತು ಸೂಕ್ಷ್ಮಶರೀರವನ್ನು ಸ್ವಭಾವದಿಂದಲೇ ತನ್ನ ಆತ್ಮನೆಂದು ಗ್ರಹಿಸಿ ತನ್ನ ಆತ್ಮನ ಸುಖರೂಪವನ್ನು ಮರೆತು ಅಜ್ಞನಾದವನು ದುಃಖವನ್ನು ಕೊಡುವ (ಬಾಹ್ಯವಸ್ತುಗಳಿಂದ) ಸುಖವನ್ನು ಬಯಸುತ್ತಾನೆ. ದುಃಖವನ್ನು ಕೊಡುವ ವಸ್ತುವು ಸುಖವನ್ನು ಕೊಡಲೇ ಆರದು ; ವಿಷವು (ತನ್ನನ್ನು) ಕುಡಿಯುವ ಪ್ರಾಣಿಗೆ ಅಮೃತತ್ವವನ್ನು ಕೊಟ್ಟೀತೇನು ? ಆತ್ಮನು ಬೇರೆ, ಸುಖವು ಬೇರೆ-ಎಂದರಿತು ನಿಶ್ಚಯಿಸಿಕೊಂಡೇ ಪಾಮರನಾದವನು ಹೊರಗೆ ಸುಖಕ್ಕಾಗಿ ಪ್ರಯತ್ನಿಸುತ್ತಾನೆ- ಎಂಬುದು ನಿಶ್ಚಯವು ; ಇದಕ್ಕೆ ಸಂಶಯವಿಲ್ಲ.

# ಸುಖವು ಹೇಗೆ ಉಂಟಾಗುತ್ತದೆ ?

ಇಷ್ಟಸ್ಯ ವಸ್ತುನೋ ಧ್ಯಾನದರ್ಶನಾದ್ಯುಪಭುಕ್ತಿಷು ।
ಪ್ರತೀಯತೇ ಯ ಆನನ್ದಃ ಸರ್ವೇಷಾಮಿಹ ದೇಹಿನಾಮ್ ॥ ೬೪೪ ॥

ಸ ವಸ್ತುಧರ್ಮೋ ನೋ ಯಸ್ಮಾನ್ಮನಸ್ಯೇವೋಪಲಭ್ಯತೇ ।
ವಸ್ತುಧರ್ಮಸ್ಯ ಮನಸಿ ಕಥಂ ಸ್ಯಾದುಪಲಮ್ಭನಮ್ ॥ ೬೪೫ ॥

ಅನ್ಯತ್ರ ತ್ವನ್ಯಧರ್ಮಾಣಾಮುಪಲಮ್ಭೋ ನ ದೃಶ್ಯತೇ ।
ತಸ್ಮಾನ್ನ ವಸ್ತುಧರ್ಮೋಽಯಮಾನನ್ದಸ್ತು ಕದಾಚನ ॥ ೬೪೬ ॥

ನಾಪ್ಯೇಷ ಧರ್ಮೋ ಮನಸೋಽಸತ್ಯರ್ಥೇ ತದದರ್ಶನಾತ್ ।
ಅಸತಿ ವ್ಯಞ್ಜಕೇ ವ್ಯಙ್ಗ್ಯಂ ನೋದೇತೀತಿ ನ ಮನ್ಯತಾಮ್ ॥ ೬೪೭ ॥

ಸತ್ಯರ್ಥೇಽಪಿ ಚ ನೋದೇತಿ ಹ್ಯಾನನ್ದಸ್ತೂಕ್ತಲಕ್ಷಣಃ ।
ಸತ್ಯಪಿ ವ್ಯಞ್ಜಕೇ ವ್ಯಙ್ಗ್ಯಾನುದಯೋ ನೈವ ಸಮ್ಮತಃ ॥ ೬೪೮ ॥

ದೂರದೃಷ್ಟಾದಿಕಂ ನಾತ್ರ ಪ್ರತಿಬನ್ಧಃ ಪ್ರಕಲ್ಪ್ಯತಾಮ್ ।
ಪ್ರಿಯಸ್ಯ ವಸ್ತುನೋ ಲಾಭೇ ದೂರದೃಷ್ಟಂ ನ ಸಿಧ್ಯತಿ ॥ ೬೪೯ ॥

ತಸ್ಮಾನ್ನ ಮನಸೋ[1] ಧರ್ಮೋ ನಿರ್ಗುಣತ್ವಾನ್ನ ಚಾತ್ಮನಃ ।
ಕಿಂ ತು ಪುಣ್ಯಸ್ಯ ಸಾಂನಿಧ್ಯಾದಿಷ್ಟಸ್ಯಾಪಿ ಚ ವಸ್ತುನಃ ॥ ೬೫೦ ॥

ಸತ್ತ್ವಪ್ರಧಾನೇ ಚಿತ್ತೇಽಸ್ಮಿಂಸ್ತ್ವಾತ್ಮೈವ ಪ್ರತಿಬಿಮ್ಬತಿ ।
ಆನನ್ದಲಕ್ಷಣಃ ಸ್ವಚ್ಛೇ ಪಯಸೀವ ಸುಧಾಕರಃ ॥ ೬೫೧ ॥

ಸೋಽಯಮಾಭಾಸ ಆನನ್ದಶ್ಚಿತ್ತೇ ಯಃ ಪ್ರತಿಬಿಮ್ಬಿತಃ ।
ಪುಣ್ಯೋತ್ಕರ್ಷಾಪಕರ್ಷಾಭ್ಯಾಂ ಭವತ್ಯುಚ್ಚಾವಚಃ ಸ್ವಯಮ್ ॥ ೬೫೨ ॥

೬೪೪–೬೫೨. (ತನಗೆ) ಇಷ್ಟವಾದ ವಸ್ತುವಿನ ಧ್ಯಾನ, ದರ್ಶನ–ಮುಂತಾದ ಉಪಭೋಗಗಳಲ್ಲಿ ಎಲ್ಲಾ ಜೀವರಿಗೂ ಆನಂದವು ತೋರುತ್ತಿರುತ್ತದೆ. ಅದು ವಸ್ತುವಿನ ಧರ್ಮವಲ್ಲ; ಏಕೆಂದರೆ ಮನಸ್ಸಿನಲ್ಲಿಯೇ ತೋರುತ್ತಿರುತ್ತದೆ. ವಸ್ತುವಿನ ಧರ್ಮವು ಮನಸ್ಸಿನಲ್ಲಿ, ಹೇಗೆ ತೋರಿಕೊಂಡೀತು ? ಒಂದರ ಧರ್ಮಗಳು ಮತ್ತೊಂದು ಕಡೆಯಲ್ಲಿ ತೋರಿಕೊಳ್ಳುವದು ಕಂಡುಬಂದಿಲ್ಲ. ಆದ್ದರಿಂದ ಈ ಆನಂದವು ಎಂದಿಗೂ ವಸ್ತುಧರ್ಮವಲ್ಲ. ಇದು ಮನಸ್ಸಿನ ಧರ್ಮವೂ ಅಲ್ಲ, ಏಕೆಂದರೆ ವಸ್ತುವಿಲ್ಲದೆ (ಅದು ಮನಸ್ಸಿನಲ್ಲಿ) ಕಂಡುಬರುವದಿಲ್ಲ. ವ್ಯಂಜಕವಾದದ್ದು ಇಲ್ಲದಿದ್ದರೆ ವ್ಯಂಗ್ಯವಾದದ್ದು ಉಂಟಾಗಲಾರದು –ಎಂದು ತಿಳಿಯಬಾರದು ; (ಏಕೆಂದರೆ) ವಸ್ತುವು ಇದ್ದರೂ ಈ ಹೇಳಿದ ಆನಂದವು ಉಂಟಾಗುವದಿಲ್ಲ ; ವ್ಯಂಜಕವಾದದ್ದು

1. 'ಮಾನಸೋ' ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ.

ಇದ್ದರೂ ವ್ಯಂಗ್ಯವಾದದ್ದು ಉಂಟಾಗುವದಿಲ್ಲವೆಂಬುದು ಒಪ್ಪತಕ್ಕದ್ದಲ್ಲ. ಇಲ್ಲಿ (ಆನಂದವು ತೋರದೆ ಇರುವದಕ್ಕೆ) ದೂರದಲ್ಲಿ ಕಂಡದ್ದು ಮುಂತಾದ[1] ಪ್ರತಿಬಂಧಕವು ಕಾರಣವೆಂದು ಕಲ್ಪಿಸಬಾರದು; ಏಕೆಂದರೆ ಪ್ರಿಯವಸ್ತುವು ಸಿಕ್ಕುವಲ್ಲಿ ದೂರದೃಷ್ಟವೆಂಬ (ಪ್ರತಿಬಂಧಕವು) ಸಿದ್ಧಿಸುವದಿಲ್ಲ.[2] ಆದ್ದರಿಂದ (ಇದು) ಮನಸ್ಸಿನ ಧರ್ಮವಲ್ಲ; ಆತ್ಮನ ಧರ್ಮವೂ ಅಲ್ಲ, ಏಕೆಂದರೆ (ಆತ್ಮನು) ನಿರ್ಗುಣನಾಗಿರುತ್ತಾನೆ. ಮತ್ತೇನೆಂದರೆ, ಪುಣ್ಯವೂ ಇಷ್ಟವಸ್ತುವೂ ಹತ್ತಿರವಾಗಲು ಸತ್ತ್ವಪ್ರಧಾನವಾದ ಈ ಚಿತ್ತದಲ್ಲಿ ಆನಂದರೂಪನಾದ ಆತ್ಮನೇ ನೀರಿನಲ್ಲಿ ಚಂದ್ರನಂತೆ ಪ್ರತಿಬಿಂಬಿಸುತ್ತಾನೆ. ಚಿತ್ತದಲ್ಲಿ ಪ್ರತಿಬಿಂಬಿತವಾದ ಆ ಈ (ಆನಂದದ) ಆಭಾಸವು ಪುಣ್ಯದ ಹೆಚ್ಚುಕಡಿಮೆಗಳಿಂದ ತಾನೂ ಹೆಚ್ಚುಕಡಿಮೆಯಾಗುತ್ತದೆ.[3]

## ವಿಷಯಾನಂದವು ದುಃಖಮಿಶ್ರಿತ

**ಸಾರ್ವಭೌಮಾದಿಬ್ರಹ್ಮಾನ್ತಂ ಶ್ರುತ್ಯಾ ಯಃ ಪ್ರತಿಪಾದಿತಃ ।**
**ಸ ಕ್ಷಯಿಷ್ಣುಃ ಸಾತಿಶಯಃ ಪ್ರಕ್ಷೀಣಃ[4] ಕಾರಣೇ ಲಯಮ್ ॥ ೬೫೩ ॥**

**ಯಾತ್ಯೇಷ ವಿಷಯಾನನ್ದೋ ಯಸ್ತು ಪುಣ್ಯೈಕಸಾಧನಃ ।**
**ಯೇ ತು ವೈಷಯಿಕಾನನ್ದಂ ಭುಞ್ಜತೇ ಪುಣ್ಯಕಾರಿಣಃ ॥ ೬೫೪ ॥**

**ದುಃಖಂ ಚ ಭೋಗಕಾಲೇಽಪಿ ತೇಷಾಮನ್ತೇ ಮಹತ್ತರಮ್ ।**
**ಸುಖಂ ವಿಷಯಸಂಪೃಕ್ತಂ ವಿಷಸಂಪೃಕ್ತಭಕ್ತವತ್ ॥ ೬೫೫ ॥**

**ಭೋಗಕಾಲೇಽಪಿ ಭೋಗಾನ್ತೇ ದುಃಖಮೇವ ಪ್ರಯಚ್ಛತಿ ।**
**ಸುಖಮುಚ್ಚಾವಚತ್ವೇನ ಕ್ಷಯಿಷ್ಣುತ್ವಭಯೇನ ಚ ॥ ೬೫೬ ॥**

**ಭೋಗಕಾಲೇ ಭವೇನ್ನೄಣಾಂ ಬ್ರಹ್ಮಾದಿಪದಭಾಜಿನಾಮ್ ।**
**ರಾಜಸ್ಥಾನಪ್ರವಿಷ್ಟಾನಾಂ ತಾರತಮ್ಯಂ ಮತಂ ಯಥಾ ॥ ೬೫೭ ॥**

**ತಥೈವ ದುಃಖಂ ಜನ್ತೂನಾಂ ಬ್ರಹ್ಮಾದಿಪದಭಾಜಿನಾಮ್ ।**
**ನ ಕಾಙ್ಕ್ಷಣೀಯಂ ವಿದುಷಾ ತಸ್ಮಾದ್ ವೈಷಯಿಕಂ ಸುಖಮ್ ॥ ೬೫೮**

---

1. ಬಹಳ ದೂರವಿರುವದು, ಬಹಳ ಹತ್ತಿರವಿರುವದು— ಮುಂತಾದ ಕಾರಣದಿಂದ ವಸ್ತುವಿನ ಜ್ಞಾನವಾಗದೆ ಇರಬಹುದಾಗಿದೆ ಎಂದು ಸಾಂಖ್ಯಕಾರಿಕೆ.

2. ವಸ್ತು ಹತ್ತಿರದಲ್ಲಿಯೇ ಇದೆಯಷ್ಟೆ ?— ಎಂದು ಭಾವ.

3. ಪುಣ್ಯಕರ್ಮದಿಂದ ಇಷ್ಟವಸ್ತುವು ಸಮೀಪಿಸಲಾಗಿ ಅಂತಃಕರಣವೃತ್ತಿಗೆ ತಮಸ್ಸಿನ ಆವರಣವು ಇಲ್ಲದಿರುವಾಗ ಅದು ಪ್ರಸನ್ನವಾಗಲು ಆನಂದವು ತೋರಿಕೊಳ್ಳುವದು —ಎಂದು ತೈ. ಭಾ. ೨-೫.

4. 'ಪ್ರಕ್ಷೀಣೇ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

೬೫೩-೬೫೮. (ಮನುಷ್ಯರಲ್ಲಿ) ಸಾರ್ವಭೌಮನಾಗಿರುವವನನ್ನು ಹಿಡಿದು (ಹಿರಣ್ಯಗರ್ಭ)ಬ್ರಹ್ಮನವರೆಗಿನ (ಜೀವರ) ಯಾವ (ಆನಂದವನ್ನು) ಶ್ರುತಿಯಲ್ಲಿ[1] ತಿಳಿಸಿರುತ್ತದೆಯೋ ಅದು ನಾಶವಾಗತಕ್ಕದ್ದು, ತನಗಿಂತ ಮಿಗಿಲುಳ್ಳದ್ದು; ಈ ಪುಣ್ಯ ಮಾತ್ರದಿಂದ[2] ಸಿದ್ಧವಾಗುವ ವಿಷಯಾನಂದವು ಕ್ಷಯವಾಗಿ ಕಾರಣದಲ್ಲಿ[3] ಲಯವನ್ನು ಹೊಂದುವದು. ಯಾರು ಪುಣ್ಯಕರ್ಮವನ್ನು ಮಾಡಿ ವಿಷಯಾನಂದವನ್ನೂ ಭೋಗಕಾಲದಲ್ಲಿಯೂ ದುಃಖವನ್ನೂ ಅನುಭವಿಸುವರೋ, ಅವರಿಗೆ ಕೊನೆಯಲ್ಲಿ ಹೆಚ್ಚಿನ ದುಃಖವಾಗುವದು. ವಿಷಯಸಂಪರ್ಕದಿಂದ ಆಗುವ ಸುಖವು-ವಿಷದೊಡನೆ ಬೆರಕೆಯಾಗಿರುವ ಅನ್ನದಂತೆ ಭೋಗಕಾಲದಲ್ಲಿಯೂ (ದುಃಖವೇ) ಆಗಿರುವದು ; ಭೋಗಾಂತದಲ್ಲಿ ದುಃಖವನ್ನೇ ಕೊಡುವದು. ಬ್ರಹ್ಮಸ್ಥಾನವೇ ಮುಂತಾದದ್ದನ್ನು ಪಡೆಯುವ ಜನರಿಗೆ ಸುಖವು ಹೆಚ್ಚುಕಡಿಮೆಯ (ಪ್ರಮಾಣ)ದ್ದಾಗಿರುವದರಿಂದಲೂ, ಕ್ಷಯವಾಗುವದೆಂಬ ಅಂಜಿಕೆಯಿರುವದರಿಂದಲೂ- ರಾಜರ ಸ್ಥಾನದಲ್ಲಿ ಸೇರಿದವರಿಗೆ ಹೇಗೆ (ಸುಖವು) ತಾರತಮ್ಯವುಳ್ಳದ್ದಾಗಿರುವದೋ ಹಾಗೆಯೇ ಬ್ರಹ್ಮಪದವಿಯೇ ಮುಂತಾದ ಸ್ಥಾನವನ್ನು ಪಡೆದವರಿಗೆ ದುಃಖವಾಗಿರುವದು. ಆದ್ದರಿಂದ ವಿಷಯಾನಂದವನ್ನು ವಿವೇಕಿಯಾದವನು ಬಯಸತಕ್ಕದ್ದಲ್ಲ.

## ನಿಜವಾದ ಆತ್ಮಾನಂದದ ಅನುಭವವು ಸುಷುಪ್ತಿಯಲ್ಲಿದೆ

**ಯೋ ಬಿಮ್ಬಭೂತ ಆನನ್ದಃ ಸ ಆತ್ಮಾನನ್ದಲಕ್ಷಣಃ ।**
**ಶಾಶ್ವತೋ ನಿರ್ದ್ವಯಃ ಪೂರ್ಣೋ ನಿತ್ಯ ಏಕೋಽಪಿ ನಿರ್ಭಯಃ ॥೬೫೯॥**

**ಲಕ್ಷ್ಯತೇ ಪ್ರತಿಬಿಮ್ಬೇನಾಭಾಸಾನನ್ದೇನ ಬಿಮ್ಬವತ್ ।**
**ಪ್ರತಿಬಿಮ್ಬೋ ಬಿಮ್ಬಮೂಲೋ ವಿನಾ ಬಿಮ್ಬಂ ನ ಸಿಧ್ಯತಿ ॥ ೬೬೦ ॥**

**ಯಸ್ತತೋ[4] ಬಿಮ್ಬ ಆನನ್ದಃ ಪ್ರತಿಬಿಮ್ಬೇನ ಲಕ್ಷ್ಯತೇ ।**
**ಯುಕ್ತ್ಯೈವ ಪಣ್ಡಿತಜನೈರ್ನ ಕದಾಪ್ಯನುಭೂಯತೇ ॥ ೬೬೧ ॥**

**ಅವಿದ್ಯಾಕಾರ್ಯಕರಣಸಙ್ಘಾತೇಷು ಪುರೋದಿತಃ ।**
**ಆತ್ಮಾ ಜಾಗ್ರತ್ಯಪಿ ಸ್ವಪ್ನೇ ನ ಭವತ್ಯೇಷ ಗೋಚರಃ ॥ ೬೬೨ ॥**

---

1. ತೈ. ೨-೮. ಅಲ್ಲಿ ಲೌಕಿಕಾನಂದವು ಚಕ್ರವರ್ತಿಯಿಂದ ಹಿಡಿದು ಬ್ರಹ್ಮನವರೆಗೆ ಹೆಚ್ಚುಹೆಚ್ಚಾಗುತ್ತದೆ ಎಂದು ತಿಳಿಸಿದೆ. ಆದ್ದರಿಂದ ಅದು ವಿನಾಶಿ.

2. ಕರ್ಮ ಮತ್ತು ಉಪಾಸನೆ- ಎರಡನ್ನೂ ಇಲ್ಲಿ ಪುಣ್ಯಶಬ್ದದಿಂದ ಹೇಳಿದೆ ಎಂದು ಇಟ್ಟುಕೊಳ್ಳಬೇಕು.

3. ಅವ್ಯಕ್ತದಲ್ಲಿ ಎಂಬ ಅಭಿಪ್ರಾಯವಿರಬಹುದು. ಇದ್ದಂತೆ ಕನ್ನಡಿಸಿದರೆ 'ಪುಣ್ಯವೆಂಬ ಕಾರಣವು ಸವೆದರೆ' ಎಂದು ಅನುವಾದ.

4. 'ಯತ್ತತೋ' ಎಂಬ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

**ಸ್ಥೂಲಸ್ಯಾಪಿ ಚ ಸೂಕ್ಷ್ಮಸ್ಯ ದುಃಖರೂಪಸ್ಯ ವರ್ಷ್ಮಣಃ ।**
**ಲಯೇ ಸುಷುಪ್ತೌ ಸ್ಫುರತಿ ಪ್ರತ್ಯಗಾನನ್ದಲಕ್ಷಣಃ ॥ ೬೬೩ ॥**
**ನ ಹ್ಯತ್ರ ವಿಷಯಃ ಕಶ್ಚಿನ್ನಾಪಿ ಬುದ್ಧ್ಯಾದಿ ಕಿಞ್ಚನ ।**
**ಆತ್ಮೈವ ಕೇವಲಾನನ್ದಮಾತ್ರಸ್ತಿಷ್ಠತಿ ನಿರ್ದ್ವಯಃ ॥ ೬೬೪ ॥**
**ಪ್ರತ್ಯಭಿಜ್ಞಾಯತೇ ಸರ್ವೈರೇಷ ಸುಪ್ತೋತ್ಥಿತೈರ್ಜನೈಃ ।**
**ಸುಖಮಾತ್ರತಯಾ ನಾತ್ರ ಸಂಶಯಂ ಕರ್ತುಮರ್ಹಸಿ ॥ ೬೬೫ ॥**
**ತ್ವಯಾಪಿ ಪ್ರತ್ಯಭಿಜ್ಞಾತಂ ಸುಖಮಾತ್ರತ್ವಮಾತ್ಮನಃ ।**
**ಸುಷುಪ್ತಾದುತ್ಥಿತವತಾ ಸುಖಮಸ್ವಾಪ್ಸಮಿತ್ಯನು ॥ ೬೬೬ ॥**

೬೫೯–೬೬೬. ಬಿಂಬವಾಗಿರುವ ಆನಂದವಿದೆಯಲ್ಲ, ಅದೇ ಆತ್ಮಾನಂದ ರೂಪವಾದದ್ದು, ಶಾಶ್ವತವಾದದ್ದು, ಅದ್ವಿತೀಯವಾದದ್ದು, ಪೂರ್ಣವೂ ನಿತ್ಯವೂ ಒಂದೇ ಆಗಿ ನಿರ್ಭಯವಾದದ್ದು. (ಅದು) ಪ್ರತಿಬಿಂಬವಾಗಿರುವ ಆನಂದಾಭಾಸ ದಿಂದ ಬಿಂಬದಂತೆ ಲಕ್ಷಿತವಾಗಿರುತ್ತದೆ. ಬಿಂಬಮೂಲವಾಗಿರುವ ಪ್ರತಿಬಿಂಬವು ಬಿಂಬವಿಲ್ಲದೆ ಸಿದ್ಧಿಸುವದಿಲ್ಲ; ಆದ್ದರಿಂದ ಬಿಂಬವಾಗಿರುವ ಆನಂದವಿದೆಯಲ್ಲ, ಅದು ಪ್ರತಿಬಿಂಬದಿಂದ ಯುಕ್ತಿಯ ಬಲದಿಂದ ಲಕ್ಷಿತವಾಗಿರುತ್ತದೆಯೇ[1] ಹೊರತು ಅವಿವೇಕಿ ಜನರಿಗೆ ಎಂದಿಗೂ ಅನುಭವಕ್ಕೆ ಬಂದಿರುವದಿಲ್ಲ. ಮೇಲೆ ಹೇಳಿದ (ಆನಂದರೂಪ) ಆತ್ಮನು ಎಚ್ಚರದಲ್ಲಿಯೂ ಕನಸಿನಲ್ಲಿಯೂ ಅವಿದ್ಯಾಕಾರ್ಯಕರಣಸಂಘಾತಗಳಲ್ಲಿ[2] ಗೋಚರನಾಗುವದಿಲ್ಲ. ದುಃಖರೂಪವಾಗಿರುವ ಸ್ಥೂಲ ಮತ್ತು ಸೂಕ್ಷ್ಮಶರೀರವು ಸುಷುಪ್ತಿಯಲ್ಲಿ ಲಯವಾಗಲು ತನಿನಿದ್ರೆಯಲ್ಲಿ ಪ್ರತ್ಯಗಾನಂದಸ್ವರೂಪವು ತೋರಿ ಕೊಳ್ಳುವದು.[3] ಇಲ್ಲಿ (ಸುಷುಪ್ತಿಯಲ್ಲಿ) ವಿಷಯವಾಗಲಿ, ಬುದ್ಧ್ಯಾದಿಗಳಾಗಲಿ ಏನೂ ಇರುವದಿಲ್ಲ. ಅದ್ವಯನಾದ ಆನಂದಮಾತ್ರನಾದ ಆತ್ಮನೊಬ್ಬನೇ ಇರುತ್ತಾನೆ. ನಿದ್ರೆಯಿಂದೆಚ್ಚತ್ತ ಎಲ್ಲಾ ಜನರುಗಳಿಂದಲೂ ಸುಖಮಾತ್ರರೂಪ ನೆಂದು ಪ್ರತ್ಯಭಿಜ್ಞೆಯಿಂದ ತಿಳಿಯಬರುತ್ತಾನೆ.[4] ಆತ್ಮನು ಆನಂದಮಾತ್ರನೆಂಬು ದನ್ನು ನೀನೂ– ನಿದ್ರೆಯಿಂದ ಎಚ್ಚತ್ತಾಗ 'ಸುಖವಾಗಿ ನಿದ್ರೆಗೈದೆನು' ಎಂದು ಪರಾಮರ್ಶದಿಂದ ಪ್ರತ್ಯಭಿಜ್ಞಾನದಿಂದ ಒಪ್ಪಿರುತ್ತೀಯೆ.[5]

1. ಈ ನಮ್ಮ ಆನಂದಕ್ಕೆ ಹೋಲಿಸಿದರೆ ನಿತ್ಯವೂ ಪೂರ್ಣವೂ ಆಗಿರುವ ಆನಂದ ವೊಂದಿರಬೇಕು– ಎಂದು ಪ್ರತಿಬಿಂಬದಿಂದ ಬಿಂಬವನ್ನು ಕಲ್ಪಿಸುವಂತೆ ಜನರು ಊಹಿಸು ತ್ತಾರೆ.

2. ಅವಿದ್ಯೆಯಿಂದ ಆಗಿರುವ ದೇಹೇಂದ್ರಿಯಾದಿಗಳಲ್ಲಿ ಎಂಬ ಅರ್ಥವಿರಬಹುದು.

3. ಸುಖವು ನಿರ್ವಿಕಲ್ಪಾನುಭವಕ್ಕೆ ಬರುತ್ತದೆ ಎಂದರ್ಥ.

4. ಈ ನಾನೇ ನಿದ್ರೆಯಲ್ಲಿ ಸುಖವಾಗಿ ನಿದ್ರಿಸಿದೆನು– ಎಂಬುದೇ ಪ್ರತ್ಯಭಿಜ್ಞಾನ.

5. ಎಚ್ಚರಕನಸುಗಳಲ್ಲಿ ಕಂಡುಬರುವ ದುಃಖದ ಕ್ಲೇಶವು ಇಲ್ಲದೆ ನಿದ್ರಿಸಿದ ಅನುಭವವನ್ನೇ ಹೀಗೆ 'ನಾನೇ ಸುಖವಾಗಿ ನಿದ್ರಿಸಿದೆನು' ಎಂದು ಪ್ರತ್ಯಭಿಜ್ಞೆಯಿಂದ ಗೊತ್ತುಪಡಿಸಿಕೊಂಡು ನೀನೂ ಒಪ್ಪಿರುತ್ತೀಯೆ ಎಂದರ್ಥ.

## ದುಃಖಾಭಾವವೇ ಸುಖವೆಂಬುದು ಸರಿಯಲ್ಲ

**ದುಃಖಾಭಾವಃ ಸುಖಮಿತಿ ಯದುಕ್ತಂ ಪೂರ್ವವಾದಿನಾ ।**
**ಅನಾಘ್ರಾತೋಪನಿಷದಾ ತದಸಾರಂ ಮೃಷಾ ವಚಃ ॥ ೬೬೭ ॥**
**ದುಃಖಾಭಾವಸ್ತು ಲೋಷ್ಟಾದೌ ವಿದ್ಯತೇ ನಾನುಭೂಯತೇ ।**
**ಸುಖಲೇಶೋಽಪಿ ಸರ್ವೇಷಾಂ ಪ್ರತ್ಯಕ್ಷಂ ತದಿದಂ ಖಲು ॥ ೬೬೮ ॥**
**ಸದಯಂ ಹ್ಯೇಷ ಏವೇತಿ ಪ್ರಸ್ತುತ್ಯ ವದತಿ ಶ್ರುತಿಃ ।**
**ಸದ್ಘನೋಽಯಂ ಚಿದ್ಘನೋಽಯಮಾನನ್ದಘನ ಇತ್ಯಪಿ ॥ ೬೬೯ ॥**
**ಆನನ್ದಘನತಾಮಸ್ಯ ಸ್ವರೂಪಂ ಪ್ರತ್ಯಗಾತ್ಮನಃ ।**
**ಧನ್ಯೈರ್ಮಹಾತ್ಮಭಿರ್ಧೀರೈರ್ಬ್ರಹ್ಮವಿದ್ಭಿಃ ಸದುತ್ತಮೈಃ ॥ ೬೭೦ ॥**
**ಅಪರೋಕ್ಷತಯೈವಾತ್ಮಾ ಸಮಾಧಾವನುಭೂಯತೇ ।**
**ಕೇವಲಾನನ್ದಮಾತ್ರತ್ವೇನೈವಮತ್ರ ನ ಸಂಶಯಃ ॥ ೬೭೧ ॥**
**ಸ್ವಸ್ಯೋಪಾಧ್ಯನುರೂಪೇಣ ಬ್ರಹ್ಮಾದ್ಯಾಃ ಸರ್ವಜನ್ತವಃ ।**
**ಉಪಜೀವನ್ತ್ಯಮುಷ್ಯೈವ ಮಾತ್ರಾಮಾನನ್ದಲಕ್ಷಣಾಮ್ ॥ ೬೭೨ ॥**
**ಆಸ್ವಾದ್ಯತೇ ಯೋ ಭಕ್ಷ್ಯೇಷು ಸುಖಕೃನ್ಮಧುರೋ ರಸಃ ।**
**ಸಾ ಗುಡಸ್ಯೈವ ನೋ ತೇಷಾಂ ಮಾಧುರ್ಯಂ ವಿದ್ಯತೇ ಕ್ವಚಿತ್ ॥ ೬೭೩ ॥**
**ತದ್ವದ್ವಿಷಯಸಾಂನಿಧ್ಯಾದಾನನ್ದೋ ಯಃ ಪ್ರತೀಯತೇ ।**
**ಬಿಮ್ಬಾನನ್ದಾಂಶವಿಸ್ಫೂರ್ತಿರೇವಾಸೌ ನ ಜಡಾತ್ಮನಾಮ್ ॥ ೬೭೪ ॥**
**ಯಸ್ಯ ಕಸ್ಯಾಪಿ ಯೋಗೇನ ಯತ್ರ ಕುತ್ರಾಪಿ ದೃಶ್ಯತೇ ।**
**ಆನನ್ದಃ ಸ ಪರಸ್ಯೈವ ಬ್ರಹ್ಮಣಃ ಸ್ಫೂರ್ತಿಲಕ್ಷಣಃ ॥ ೬೭೫ ॥**
**ಯಥಾ ಕುವಲಯೋಲ್ಲಾಸಶ್ಚನ್ದ್ರಸ್ಯೈವ ಪ್ರಸಾದತಃ ।**
**ತಥಾನನ್ದೋದಯೋಽಪ್ಯೇಷಾಂ ಸ್ಫುರಣಾದೇವ ವಸ್ತುನಃ ॥ ೬೭೬ ॥**

೬೬೭-೬೭೬. ಪೂರ್ವಪಕ್ಷಿಯು ದುಃಖದ ಅಭಾವವೇ ಸುಖವೆಂದು ಹೇಳಿದ್ದನಷ್ಟೆ, ಉಪನಿಷತ್ತನ್ನು ಮೂಸಿಯೂ ನೋಡದ (ಅವನು ಹೇಳಿದ್ದು) ಸಾರವಿಲ್ಲದ್ದು, ಸುಳ್ಳುಮಾತು. ಹೆಂಟೆಯೇ ಮುಂತಾದವುಗಳಲ್ಲಿ ದುಃಖಾಭಾವವಿರುತ್ತದೆ, (ಆದರೆ) ಸುಖದ ಲೇಶವೂ ಅನುಭವಕ್ಕೆ ಬರುವದಿಲ್ಲ.[1] ಇದು ಎಲ್ಲರಿಗೂ ಪ್ರತ್ಯಕ್ಷವಾಗಿರುತ್ತದೆಯಲ್ಲವೆ ? ಆದ್ದರಿಂದ ಇದನ್ನು ಕೇಳು : 'ಇವನೇ (ಎಲ್ಲರಿಗೂ) ಆನಂದವನ್ನುಂಟುಮಾಡುತ್ತಾನೆ' ಎಂದು ದಯೆಯಿಂದ ಶ್ರುತಿ ಹೇಳುತ್ತಿದೆ.[2] ಮತ್ತು

1. ದುಃಖಾಭಾವವು ಇದ್ದಮಾತ್ರದಿಂದ ಆನಂದವು ಅನುಭವಕ್ಕೆ ಬರುತ್ತದೆ ಎಂಬ ನಿಯಮವಿಲ್ಲ.

2. ಎಲ್ಲಾ ಪ್ರಾಣಿಗಳಿಗೂ ಒಂದಿಷ್ಟು ಸುಖವಾದರೂ ಅನುಭವದಲ್ಲಿದ್ದೇ ಇದೆ. ತೈ. ೨-೭.

"ಇವನು ಸದ್ಘನನು, ಇವನು ಚಿದ್ಘನನು, (ಇವನು) ಆನಂದಘನನು"[1] ಎಂದು ಈ ಪ್ರತ್ಯಗಾತ್ಮನಿಗೆ ಆನಂದಘನತ್ವವು ಸ್ವರೂಪವೆಂದೂ ಹೇಳುತ್ತಿದೆ. ಧನ್ಯರೂ, ಮಹಾತ್ಮರೂ ಧೀರರೂ ಬ್ರಹ್ಮಜ್ಞಾನಿಗಳೂ ಆದ ಸತ್ಪುರುಷಶ್ರೇಷ್ಠರಿಗೆ ಸಮಾಧಿಯಲ್ಲಿ ಅಪರೋಕ್ಷನಾಗಿಯೇ ಆತ್ಮನು ಕೇವಲ ಆನಂದಮಾತ್ರನಾಗಿಯೇ ಅನುಭವಕ್ಕೆ ಬರುತ್ತಿದಾನೆ. ಇಲ್ಲಿ ಸಂಶಯವಿಲ್ಲ. ಅವರವರ ಉಪಾಧಿಗೆ ಅನುರೂಪವಾಗಿ ಬ್ರಹ್ಮನೇ ಮುಂತಾದ ಸರ್ವಜೀವರೂ ಆನಂದರೂಪವಾದ ಈ (ಆನಂದದ) ಮಾತ್ರೆಯನ್ನು ಉಪಜೀವಿಸುತ್ತಿರುವರು.[2] ಭಕ್ಷ್ಯಗಳಲ್ಲಿ ಸುಖವನ್ನುಂಟುಮಾಡುವ ಮಧುರವಾದ ರಸವ ಸವಿಯುಂಟಾಗುತ್ತದೆಯಲ್ಲ, ಅದು ಬೆಲ್ಲಕ್ಕೇ ಸೇರಿದ್ದೇ ಹೊರತು ಅವುಗಳಿಗೆ ಸಿಹಿಯು ಎಲ್ಲಿಯೂ ಇರುವದಿಲ್ಲ, ಇದರಂತೆ ವಿಷಯವು ಹತ್ತಿರವಾಗಿರುವದರಿಂದ ಯಾವ ಆನಂದವು ತೋರುವದೋ ಅದು ಬಿಂಬವಾದ ಆನಂದಾಂಶದ ಪ್ರಕಾಶವೇ ಹೊರತು ಜಡರೂಪವಾದ ವಿಷಯಗಳದ್ದಲ್ಲ. ಯಾವ ಯಾವದರ ಸಂಬಂಧದಿಂದ ಎಲ್ಲೆಲ್ಲಿ ಆನಂದವು ಕಾಣುವದೋ ಅದು ಪರಬ್ರಹ್ಮದ (ಆನಂದದ) ಸ್ಫೂರ್ತಿಯೇ. ನೈದಿಲೆಯನ್ನು ಅರಳಿಸುವದು ಚಂದ್ರನ ಪ್ರಸಾದದಿಂದಲೇ ಹೇಗೆ (ಆಗುವದೋ) ಹಾಗೆಯೇ ಈ (ವಸ್ತುಗಳಲ್ಲಿ) ಕಾಣುವ ಆನಂದದ ಉತ್ಪತ್ತಿಯು (ಆತ್ಮ)ವಸ್ತುವಿನ ಸ್ಫುರಣದಿಂದಲೇ ಆಗಿರುತ್ತದೆ.

## ಸಚ್ಚಿದಾನಂದತ್ವವು ಪರಮಾತ್ಮನ ಗುಣವಲ್ಲ

**ಸತ್ತ್ವಂ ಚಿತ್ತ್ವಂ ತಥಾನನ್ದಃ[3] ಸ್ವರೂಪಂ ಪರಮಾತ್ಮನಃ ।**
**ನಿರ್ಗುಣಸ್ಯ ಗುಣಾಯೋಗಾದ್ ಗುಣಾಸ್ತು ನ ಭವನ್ತಿ ತೇ ॥ ೬೭೭ ॥**

**ವಿಶೇಷಣಂ ತು ವ್ಯಾವೃತ್ತ್ಯೈ ಭವೇದ್ದ್ರವ್ಯಾನ್ತರೇ ಸತಿ ।**
**ಪರಮಾತ್ಮಾಽದ್ವಿತೀಯೋಽಯಂ ಪ್ರಪಞ್ಚಸ್ಯ ಮೃಷಾತ್ವತಃ ॥ ೬೭೮ ॥**

**ವಸ್ತ್ವನ್ತರಸ್ಯಾಭಾವೇನ ನ ವ್ಯಾವೃತ್ತ್ಯಃ ಕದಾಚನ ।**
**ಕೇವಲೋ ನಿರ್ಗುಣಶ್ಚೇತಿ ನಿರ್ಗುಣತ್ವಂ ನಿರುಚ್ಯತೇ ॥ ೬೭೯ ॥**

---

1. 'ಸದ್ಘನೋ ಽಯಂ ಚಿದ್ಘನ ಆನನ್ದಘನ ಏವೈಕರಸಃ' ಎಂಬ ನೃಸಿಂಹೋತ್ತರತಾಪಿನೀ ಉಪನಿಷತ್ತಿನ ಆರನೆಯ ಖಂಡದಲ್ಲಿದೆ; ಇದನ್ನು ಭಾಷ್ಯಗಳಲ್ಲಿ ಉದಾಹರಿಸಿಲ್ಲ; ಶಂಕರಾನಂದರು ತಮ್ಮ ಗೀತಾವ್ಯಾಖ್ಯಾನದಲ್ಲಿ ಉದಾಹರಿಸಿದಾರೆ; ವಿವೇಕಚೂಡಾಮಣಿ ಶ್ಲೋ. ೪೬೨ರಲ್ಲಿದೆ. ಇಲ್ಲಿ 'ಏಷ ಹ್ಯೇವ' ಎಂದು ಈ ಉಪನಿಷತ್ತಿನಲ್ಲಿಲ್ಲವಾದ್ದರಿಂದ ಈ ವಾಕ್ಯಕ್ಕೆ ಬೇರೆಯಾಗಿಯೇ ಅನುವಾದವನ್ನು ಬರೆದಿದೇವೆ. ಮೂಲದಲ್ಲೇನೋ 'ಪ್ರಸ್ತುತ್ಯ' ಎಂದಿರುವದರಿಂದ ಈ ವಾಕ್ಯಕ್ಕೇ ಅದೂ ಅನ್ವಯಿಸುತ್ತದೆ.

2. ಇದು ಬೃ. ೪-೩-೩೨ರ ಸೂಚನೆ.

3. 'ಆನನ್ದಸ್ವರೂಪಂ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

**ಶ್ರುತ್ಯೈವ ನ ತತಸ್ತೇಷಾಂ ಗುಣತ್ವಮುಪಪದ್ಯತೇ |**
**ಉಷ್ಣತ್ವಂ ಚ ಪ್ರಕಾಶಶ್ಚ ಯಥಾ ವಹ್ನೇಸ್ತಥಾತ್ಮನಃ || ೬೮೦ ||**
**ಸತ್ತ್ವಚಿತ್ತ್ವಾನನ್ದತಾದಿ ಸ್ವರೂಪಮಿತಿ ನಿಶ್ಚಿತಮ್ || ೬೮೧[1] ||**

೬೭೭–೬೮೧. ಸತ್ತ್ವವೂ, ಚಿತ್ತ್ವವೂ ಮತ್ತು ಆನಂದವೂ ಪರಮಾತ್ಮನ ಸ್ವರೂಪವೇ ಹೊರತು ನಿರ್ಗುಣನಾದ ಅವನಿಗೆ ಗುಣಗಳ ಸಂಬಂಧವಿರುವಂತಿಲ್ಲವಾದ್ದರಿಂದ – ಅವು (ಅವನ) ಗುಣಗಳಾಗಲಾರವು. ಮತ್ತೊಂದು ವಸ್ತುವಿದ್ದರೆ ಅದನ್ನು ಅಲ್ಲವೆನ್ನುವದಕ್ಕಾಗಿ ವಿಶೇಷಣವು ಬೇಕಾಗುವದು ; ಈ ಪರಮಾತ್ಮನು ಅದ್ವಿತೀಯನಾಗಿರುತ್ತಾನೆ; ಏಕೆಂದರೆ ಪ್ರಪಂಚವು ಮಿಥ್ಯೆಯಾಗಿರುತ್ತದೆ.[2] (ಹೀಗೆ) ಮತ್ತೊಂದು ವಸ್ತುವೇ ಇಲ್ಲದ್ದರಿಂದ (ಅವನನ್ನು) ಅದಲ್ಲವೆಂದು ಹೇಳಬೇಕಾದ್ದಿರುವದಿಲ್ಲ. 'ಕೇವಲನೂ ನಿರ್ಗುಣನೂ ಆಗಿರುತ್ತಾನೆ' (ಶ್ವೇ.)[3] ಎಂದು ಶ್ರುತಿಯಿಂದಲೇ (ಪರಮಾತ್ಮನಿಗೆ) ನಿರ್ಗುಣತ್ವವು ಉಕ್ತವಾಗಿರುತ್ತದೆ. ಆದ್ದರಿಂದ ಆ (ಸತ್ತ್ವಾದಿ)ಗಳು (ಅವನ) ಗುಣವೆಂಬುದು ಹೊಂದುವಂತಿಲ್ಲ. ಬಿಸಿಯೂ ಬೆಳಕೂ ಹೇಗೆ ಬೆಂಕಿಯ (ಸ್ವರೂಪವೋ) ಹಾಗೆಯೇ ಸತ್ತ್ವಚಿತ್ತ್ವಆನಂದತ್ವ ಮುಂತಾದವುಗಳು[4] ಆತ್ಮನ ಸ್ವರೂಪವೇ ಎಂದು ನಿಶ್ಚಿತವಾಗಿರುತ್ತದೆ.

## ಆತ್ಮನಿಗಿಂತ ಪ್ರಪಂಚವು ವಿಜಾತೀಯವಲ್ಲ

**ಅತ ಏವ ಸಜಾತೀಯವಿಜಾತೀಯಾದಿಲಕ್ಷಣಃ |**
**ಭೇದೋ ನ ವಿದ್ಯತೇ ವಸ್ತುನ್ಯದ್ವಿತೀಯೇ ಪರಾತ್ಮನಿ || ೬೮೨ ||**
**ಪ್ರಪಞ್ಚಸ್ಯಾಪವಾದೇನ ವಿಜಾತೀಯಕೃತಾ ಭಿದಾ |**
**ನೇಷ್ಯತೇ ತತ್ಪ್ರಕಾರಂ ತೇ ವಕ್ಷ್ಯಾಮಿ ಶೃಣು ಸಾದರಮ್ || ೬೮೩ ||**
**ಅಹೇರ್ಗುಣವಿವರ್ತಸ್ಯ ಗುಣಮಾತ್ರಸ್ಯ ವಸ್ತುತಃ |**
**ವಿವರ್ತಸ್ಯಾಸ್ಯ ಜಗತಃ ಸನ್ಮಾತ್ರತ್ವೇನ ದರ್ಶನಮ್ || ೬೮೪ ||**
**ಅಪವಾದ ಇತಿ ಪ್ರಾಹುರದ್ವೈತಬ್ರಹ್ಮದರ್ಶಿನಃ || ೬೮೪½ ||**

೬೮೨–೬೮೪½. ಆದ್ದರಿಂದಲೇ ಸಜಾತೀಯ, ವಿಜಾತೀಯ– ಮುಂತಾದ ರೂಪದ ಭೇದವು ಅದ್ವಿತೀಯಪರಮಾತ್ಮವಸ್ತುವಿನಲ್ಲಿ ಇರುವದಿಲ್ಲ. ಪ್ರಪಂಚವನ್ನು ಅಪವಾದದಿಂದ (ಅಲ್ಲಗಳೆಯುವದರಿಂದ) ವಿಜಾತೀಯದಿಂದಾದ ಭೇದವು

---

1. ೫೯೯½ರ ಶ್ಲೋಕಾರ್ಧವನ್ನು ಸೇರಿಸಿ ಇಲ್ಲಿ ಲೆಕ್ಕಮಾಡಿದೆ.

2. ಸತ್ತಲ್ಲದ ವಸ್ತುವೇ ನಿಜವಾಗಿಲ್ಲ ; ಎಲ್ಲವೂ ಸದ್ರೂಪವೇ ಆಗಿರುತ್ತದೆ, ಮಿಥ್ಯೆಯಾದ ಪ್ರಪಂಚವೂ ನಿಜವಾಗಿ ಆತ್ಮನೇ ಆಗಿರುತ್ತದೆ– ಎಂದು ಅಭಿಪ್ರಾಯ.

3. 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' ಶ್ವೇ. ೬–೧೧.

4. ವ್ಯಾಪಿತ್ವವೇ ಮುಂತಾದವು.

ಅಂಗೀಕೃತವಾಗಿಲ್ಲ; ಅಪರ ಪ್ರಕಾರವನ್ನು ನಿನಗೆ ಹೇಳುತ್ತೇನೆ, ಕೇಳು: ಹಗ್ಗದ ವಿವರ್ತವಾದ[1] ಹಾವು ನಿಜವಾಗಿ ಹಗ್ಗವೇ ಆಗಿರುವದನ್ನು (ಕಾಣುವದು ಹೇಗೋ) ಹಾಗೆ (ಬ್ರಹ್ಮ)ವಸ್ತುವಿನ ವಿವರ್ತವಾದ ಈ ಜಗತ್ತನ್ನು ಬರಿಯ ಸತ್ತೇ ಎಂದು ತಿಳಿಯುವದು **'ಅಪವಾದ'** ಎಂದು ಅದ್ವೈತಬ್ರಹ್ಮದರ್ಶಿಗಳು ಹೇಳುತ್ತಾರೆ.[2]

## ಜಗತ್ತು ಸನ್ಮಾತ್ರವೆಂಬುದು ಹೇಗೆ?

**ವ್ಯುತ್ಕ್ರಮೇಣ ತದುತ್ಪತ್ತೇರ್ದ್ರಷ್ಟವ್ಯಂ ಸೂಕ್ಷ್ಮಬುದ್ಧಿಭಿಃ ।**
**ಪ್ರತೀತಸ್ಯಾಸ್ಯ ಜಗತಃ ಸನ್ಮಾತ್ರತ್ವಂ ಸುಯುಕ್ತಿಭಿಃ ॥ ೬೮೫ ॥**

**ಚತುರ್ವಿಧಂ ಸ್ಥೂಲಶರೀರಜಾತಂ**
**ತದ್ಭೋಜ್ಯಮನ್ನಾದಿ ತದಾಶ್ರಯಾದಿ ।**
**ಬ್ರಹ್ಮಾಣ್ಡಮೇತತ್ ಸಕಲಂ ಸ್ಥವಿಷ್ಠ-**
**ಮಿಕ್ಷೇತ ಪಞ್ಚೀಕೃತಭೂತಮಾತ್ರಮ್ ॥ ೬೮೬ ॥**

**ಯತ್ಕಾರ್ಯರೂಪೇಣ ಯದೀಕ್ಷ್ಯತೇ ತತ್**
**ತನ್ಮಾತ್ರಮೇವಾತ್ರ ವಿಚಾರ್ಯಮಾಣೇ ।**
**ಮೃತ್ಕಾರ್ಯಭೂತಂ ಕಲಶಾದಿ ಸಮ್ಯಕ್**
**ವಿಚಾರಿತಂ ಸನ್ನ ಮೃದೋ ವಿಭಿದ್ಯತೇ ॥ ೬೮೭ ॥**

**ಅನ್ತರ್ಬಹಿಶ್ಚಾಪಿ ಮೃದೇವ ದೃಶ್ಯತೇ**
**ಮೃದೋ ನ ಭಿನ್ನಂ ಕಲಶಾದಿ ಕಿಞ್ಚನ ।**
**ಗ್ರೀವಾದಿಮತ್ ಯತ್ಕಲಶಂ ತದಿತ್ಥಂ**
**ನ ವಾಚ್ಯಮೇತಚ್ಚ ಮೃದೇವ ನಾನ್ಯತ್ ॥ ೬೮೮ ॥**

**ಸ್ವರೂಪತಸ್ತತ್ಕಲಶಾದಿನಾಮ್ನಾ**
**ಮೃದೇವ ಮೂಢೈರಭಿಧೀಯತೇ ತತಃ ।**
**ನಾಮ್ನೋ ಹಿ ಭೇದೋ ನ ತು ವಸ್ತುಭೇದಃ**
**ಪ್ರದೃಶ್ಯತೇ ತತ್ರ ವಿಚಾರ್ಯಮಾಣೇ ॥ ೬೮೯ ॥**

**ತಸ್ಮಾದ್ಧಿ ಕಾರ್ಯಂ ನ ಕದಾಪಿ ಭಿನ್ನಂ**
**ಸ್ವಕಾರಣಾದಸ್ತಿ ಯತಸ್ತತೋಽಙ್ಗ ।**
**ಯದ್ ಭೌತಿಕಂ ಸರ್ವಮಿದಂ ತಥೈವ**
**ತದ್ಭೂತಮಾತ್ರಂ ನ ತತೋಽಪಿ ಭಿನ್ನಮ್ ॥ ೬೯೦ ॥**

---

1. ವಿವರ್ತವೆಂದರೆ ಹುಸಿಯಾಗಿಯೇ ಮತ್ತೊಂದರಂತೆ ತೋರುವದು.

2. ವೇ. ಸಾ. ಪು. ೮೦ನ್ನು ನೋಡಿ. ಈ ಶ್ಲೋಕದಲ್ಲಿ 'ಗುಣಮಾತ್ರಸ್ಯ' ಎಂದಿರುವದರ ಬದಲು 'ಗುಣಮಾತ್ರತ್ವದರ್ಶನಮ್' ಎಂದಿದ್ದರೆ ಹೇಗೋ ಹಾಗೆ ಕನ್ನಡಿಸಿದೆ.

ತಚ್ಚಾಪಿ ಪಞ್ಚೀಕೃತಭೂತಜಾತಂ
ಶಬ್ದಾದಿಭಿಃ ಸ್ವಸ್ವಗುಣೈಶ್ಚ ಸಾರ್ಧಮ್ ।
ವಪೂಂಷಿ ಸೂಕ್ಷ್ಮಾಣಿ ಚ ಸರ್ವಮೇತದ್
ಭವತ್ಯಪಞ್ಚೀಕೃತಭೂತಮಾತ್ರಮ್ ॥ ೬೯೧ ॥
ತದಪ್ಯಪಞ್ಚೀಕೃತಭೂತಜಾತಂ
ರಜಸ್ತಮಃಸತ್ತ್ವಗುಣೈಶ್ಚ ಸಾರ್ಧಮ್ ।
ಅವ್ಯಕ್ತಮಾತ್ರಂ ಭವತಿ ಸ್ವರೂಪತಃ
ಸಾಭಾಸಮವ್ಯಕ್ತಮಿದಂ ಸ್ವಯಂ ಚ ॥ ೬೯೨ ॥
ಆಧಾರಭೂತಂ ಯದಖಣ್ಡಮಾದ್ಯಂ
ಶುದ್ಧಂ ಪರಂ ಬ್ರಹ್ಮ ಸದೈಕರೂಪಮ್ ।
ಸನ್ಮಾತ್ರಮೇವಾಸ್ತ್ಯಥ ನೋ ವಿಕಲ್ಪಃ
ಸತಃ ಪರಃ ಕೇವಲಮೇವ ವಸ್ತು ॥ ೬೯೩ ॥

೬೮೫–೬೯೩. ತೋರುತ್ತಿರುವ ಈ ಜಗತ್ತು ಸನ್ಮಾತ್ರವೇ ಎಂಬುದನ್ನು ಸೂಕ್ಷ್ಮಬುದ್ಧಿಗಳಾದವರು ಒಳ್ಳೆಯ ಯುಕ್ತಿಗಳಿಂದ ಇದು ಉತ್ಪತ್ತಿಯಾಗುವದರ ವಿರುದ್ಧಕ್ರಮದಿಂದ[1] ಕಂಡುಕೊಳ್ಳಬೇಕು. (ಹೇಗೆಂದರೆ) ನಾಲ್ಕು ವಿಧವಾದ[2] ಸ್ಥೂಲಶರೀರಸಮೂಹವು ಅದಕ್ಕೆ ಭೋಜ್ಯವಾದ ಅನ್ನಾದಿಗಳಿಗೆ ಆಶ್ರಯವಾಗಿರುವ (ಲೋಕಗಳು), ಬ್ರಹ್ಮಾಂಡವೂ ಸ್ಥೂಲವಾದ ಇವೆಲ್ಲವೂ ಪಂಚೀಕೃತವಾದ ಭೂತಗಳು ಮಾತ್ರವೇ ಎಂಬುದನ್ನು ಕಂಡುಕೊಳ್ಳಬೇಕು.[3] ವಿಚಾರಮಾಡಿನೋಡಿದರೆ ಯಾವದು ಯಾವದರ ಕಾರ್ಯವೆಂದು ಕಂಡುಬರುವದೋ ಅದು ಆ (ಕಾರಣ) ಮಾತ್ರವೇ. (ಉದಾಹರಣೆಗೆ) ಮಣ್ಣಿನ ಕಾರ್ಯವಾದ ಗಡಿಗೆಯೇ ಮುಂತಾದದ್ದು ಸರಿಯಾಗಿ ವಿಚಾರಮಾಡಿದರೆ ಮಣ್ಣಿಗಿಂತ ಬೇರೆಯಾಗಿರುವದೇ ಇಲ್ಲ. ಒಳಗೂ ಹೊರಗೂ ಮಣ್ಣೇ ಕಾಣುವದೇ ಹೊರತು, ಮಣ್ಣಿಗಿಂತ ಬೇರೆಯಾದ ಮಡಕೆ ಮುಂತಾದದ್ದು ಏನೊಂದೂ ಕಾಣಿಸುವದೇಇಲ್ಲ. ಕಂಠದಿಂದ ಮೊದಲಾಗಿ ಯಾವಯಾವದು ಗಡಿಗೆಯೆನಿಸುವದೋ ಅದು ಹೀಗೆ ಮಣ್ಣೇ ಮತ್ತೊಂದಲ್ಲ ಎಂದು ಹೇಳಬೇಕಾದದ್ದಿಲ್ಲ. ಆದ್ದರಿಂದ (ಆ ಗಡಿಗೆಯೇ ಮುಂತಾದದ್ದು) ಸ್ವರೂಪದಿಂದ ಮಣ್ಣೇ ಆಗಿದ್ದು ಅದನ್ನು ಮೂಢರು ಗಡಿಗೆಯೇ ಮುಂತಾದ ಹೆಸರುಗಳಿಂದ

---

1. ಸೂ. ಭಾ. ೨–೩–೧ಳನ್ನು ನೋಡಿರಿ.
2. ಅಂಡಜವೇ ಮುಂತಾದ ನಾಲ್ಕು ವಿಧಗಳ.
3. ಪಂಚೀಕೃತಭೂತ ಎಂದರೆ ಪ್ರತಿಯೊಂದು ಭೂತದಲ್ಲಿಯೂ ಮಿಕ್ಕ ನಾಲ್ಕು ಭೂತಗಳನ್ನು ಸೇರಿಸಿ ಆದ ಸ್ಥೂಲಭೂತ. ವಿ.ಚೂ. ಶ್ಲೋ. ೭೪ ; ವೇ.ಸಾ. ಪುಟ ೬೬ನ್ನು ನೋಡಿರಿ.

ಕರೆಯುತ್ತಿದಾರೆ.[1] ಆದ್ದರಿಂದ ಹೆಸರಿನ ಭೇದವೇ ಹೊರತು ವಿಚಾರಮಾಡಿದರೆ ವಸ್ತುಭೇದವು ಅಲ್ಲಿ ಕಾಣಬರುವದಿಲ್ಲ.[2] ಆದ್ದರಿಂದಲೇ ಅಷ್ಟು, ಕಾರ್ಯವು ತನ್ನ ಕಾರಣಕ್ಕಿಂತ ಎಂದಿಗೂ ಬೇರೆಯಾಗಿರುವದಿಲ್ಲವಾದ್ದರಿಂದ, ಹಾಗೆಯೇ ಭೌತಿಕವಾಗಿರುವ ಇದೆಲ್ಲವೂ ಭೂತಗಳು ಮಾತ್ರವೇ, ಅದಕ್ಕಿಂತ ಭಿನ್ನವಾಗಿರುವದೇ ಇಲ್ಲ.

ಶಬ್ದವೇ ಮುಂತಾದ ತನ್ಮಾತನ್ಮಾ ಗುಣಗಳೊಡನೆ, ಆ ಪಂಚೀಕೃತಭೂತಗಳೂ ಸೂಕ್ಷ್ಮಶರೀರಗಳೂ - ಇದೆಲ್ಲವೂ ಅಪಂಚೀಕೃತಭೂತಗಳೇ ಆಗಿರುತ್ತವೆ. ಆ ಅಪಂಚೀಕೃತಭೂತಗಳೂ, ರಜಸ್ಸು, ತಮಸ್ಸು ಮತ್ತು ಸತ್ತ್ವ- ಈ ಗುಣಗಳೊಡನೆ ಸ್ವರೂಪದಿಂದ ಅವ್ಯಕ್ತಮಾತ್ರವೇ ಆಗಿರುತ್ತವೆ. ಆಭಾಸದಿಂದೊಡಗೂಡಿದ ಈ ಅವ್ಯಕ್ತವು ತಾನೂ ಆಧಾರವಾಗಿರುವ ಅಖಂಡವೂ ಆದ್ಯವೂ ಆಗಿರುವ, ಯಾವಾಗಲೂ ಒಂದೇ ರೂಪವುಳ್ಳ ಶುದ್ಧಪರಬ್ರಹ್ಮವೇ ಸನ್ಮಾತ್ರವೇ ಆಗಿರುತ್ತದೆ. ಇನ್ನು ಸತ್ತಿಗಿಂತ ಆಚೆಗೆ ಯಾವ ವಿಕಲ್ಪವೂ ಇರುವದಿಲ್ಲ. ಕೇವಲ ವಸ್ತುವೇ ಇರುತ್ತದೆ.

## ಸನ್ಮಾತ್ರಬ್ರಹ್ಮದಲ್ಲಿ ಸಜಾತೀಯವಿಜಾತೀಯಭೇದಗಳಿಲ್ಲ

ಏಕಶ್ಚನ್ದ್ರಃ ಸದ್ವಿತೀಯೋ ಯಥಾ ಸ್ಯಾದ್
ದೃಷ್ಟೇರ್ದೋಷಾದೇವ ಪುಂಸಸ್ತಥೈಕಮ್ ।
ಬ್ರಹ್ಮಾಪ್ಯೇತದ್[3] ಬುದ್ಧಿದೋಷೇಣ ನಾನಾ
ದೋಷೇ ನಷ್ಟೇ ಭಾತಿ ವಸ್ತ್ವೇಕಮೇವ ॥ ೬೯೪ ॥
ರಜ್ಜೋಃ ಸ್ವರೂಪಾಧಿಗಮೇ ನ ಸರ್ಪಧೀ-
ರಜ್ಜ್ವಾಂ ವಿಲೀನಾ ತು ಯಥಾ ತಥೈವ ।
ಬ್ರಹ್ಮಾವಗತ್ಯಾ ತು ಜಗತ್ಪ್ರತೀತಿ-
ಸ್ತತ್ರೈವ ಲೀನಾ ತು ಸಹ ಭ್ರಮೇಣ ॥ ೬೯೫ ॥
ಭ್ರಾನ್ತ್ಯೋದಿತದ್ವೈತಮತಿಪ್ರಶಾನ್ತ್ಯಾ
ಸದೈಕಮೇವಾಸ್ತಿ ಸದ[4]ದ್ವಿತೀಯಮ್ ।
ತತೋ ವಿಜಾತೀಯಕೃತೋಽತ್ರ ಭೇದೋ
ನ ವಿದ್ಯತೇ ಬ್ರಹ್ಮಣಿ ನಿರ್ವಿಕಲ್ಪೇ ॥ ೬೯೬ ॥

---

1. ವಿ. ಚೂ. ೨೨೬, ೨೨೭.
2. ಮಣ್ಣು, ಚರಿಗೆ- ಎಂದು ಕರೆದಮಾತ್ರದಿಂದ ಎರಡೂ ಮಣ್ಣೇ ಎಂಬುದು ಹೋಗುವದಿಲ್ಲ.
3. 'ಬ್ರಹ್ಮಾಸ್ತ್ಯೇತತ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
4. 'ಸದಾದ್ವಿತೀಯಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

ಯದಾಸ್ತ್ಯುಪಾಧಿಸ್ತದಭಿನ್ನ ಆತ್ಮಾ
ತದಾ ಸಜಾತೀಯ ಇವಾವಭಾತಿ ।
ಸ್ವಪ್ನಾರ್ಥವತ್ತ್ವಾ[1]ಸ್ಯ ಮೃಷಾತ್ಮಕತ್ವಾತ್
ತದಪ್ರತೀತೌ ಸ್ವಯಮೇಷ ಆತ್ಮಾ ॥ ೯೭೭ ॥
ಬ್ರಹ್ಮೈಕ್ಯತಾಮೇತಿ ಪೃಥಙ್ ನ ಭಾತಿ
ತತಃ ಸಜಾತೀಯಕೃತೋ ನ ಭೇದಃ ॥ ೯೭೮ ॥

೯೭೪–೯೭೮. ಮನುಷ್ಯನ ಕಣ್ಣಿನ ದೋಷದಿಂದ ಒಬ್ಬನೇ ಚಂದ್ರನು ತನಗೆರಡನೆಯ ಚಂದ್ರನಿರುವವನಂತೆ ಕಾಣಿಸುತ್ತಾನೆ. ಹಾಗೆಯೇ ಒಂದೇ ಆಗಿರುವ ಈ ಬ್ರಹ್ಮವು ಬುದ್ಧಿಯ ದೋಷದಿಂದ ಅನೇಕವಾಗಿರುವಂತೆ ಕಾಣಿಸುತ್ತಿರುತ್ತದೆ. ದೋಷವು ನಷ್ಟವಾದರೆ ಒಂದೇ ವಸ್ತು ತೋರುವದು. ಹಗ್ಗದ ಸ್ವರೂಪವನ್ನು ಅರಿತುಕೊಳ್ಳುವದರಿಂದ ಹಾವೆಂಬ ಬುದ್ಧಿಯು ಹಗ್ಗದಲ್ಲಿಯೇ ಹೇಗೆ ಅಡಗುವದೋ ಹಾಗೆಯೇ ಬ್ರಹ್ಮಾನುಭವದಿಂದ ಜಗತ್ತಿನ ಅರಿವು ಅದರಲ್ಲಿಯೇ ಭ್ರಾಂತಿಯೊಡನೆ ಅಡಗುವದು. ಭ್ರಾಂತಿಯಿಂದ ಎದ್ದುಕೊಂಡ ದ್ವೈತಬುದ್ಧಿಯ ನಾಶದಿಂದ ಅದ್ವಿತೀಯವಾದ ಸದ್ಬ್ರಹ್ಮವು ಎಂದೆಂದಿಗೂ ಒಂದೇ ಇದ್ದುಕೊಂಡಿರುತ್ತದೆ. ಆದ್ದರಿಂದ ನಿರ್ವಿಕಲ್ಪವಾದ ಈ ಬ್ರಹ್ಮದಲ್ಲಿ ವಿಜಾತೀಯಕೃತವಾದ ಭೇದವು ಇರುವದಿಲ್ಲ. ಯಾವಾಗ ಉಪಾಧಿಯಿರುವದೋ ಆಗ ಅದರೊಡನೆ ಅಭಿನ್ನನಾಗಿರುವ ಆತ್ಮನು ಸಜಾತೀಯನಂತೆ ಕಾಣಿಸುವನು. ಅವನು ಕನಸಿನ ಪದಾರ್ಥದಂತೆ ಹುಸಿಯಾಗಿರುವದರಿಂದ ಅದು ಕಾಣದಾಗಲು ಆತ್ಮನು ತಾನೇ ಬ್ರಹ್ಮೈಕತ್ವವನ್ನು ಪಡೆಯುವನು, ಬೇರೆಯಾಗಿ ತೋರುವದಿಲ್ಲ. ಆದ್ದರಿಂದ ಸಜಾತೀಯಕೃತವಾದ ಭೇದವಿರುವದಿಲ್ಲ.

## ಬ್ರಹ್ಮವು ಅಪರಿಚ್ಛಿನ್ನವೇ

**ಘಟಾಭಾವೇ ಘಟಾಕಾಶೋ ಮಹಾಕಾಶೋ ಯಥಾ ತಥಾ ।**
**ಉಪಾಧ್ಯಭಾವೇ ತ್ವಾತ್ಮೈಷ ಸ್ವಯಂ ಬ್ರಹ್ಮೈವ ಕೇವಲಮ್[2] ॥ ೯೭೮ ॥**
**ಪೂರ್ಣ ಏವ ಸದಾಽಽಕಾಶೋ ಘಟೇ ಸತ್ಯಪ್ಯಸತ್ಯಪಿ ।**
**ನಿತ್ಯಪೂರ್ಣಸ್ಯ ನಭಸೋ ವಿಚ್ಛೇದಃ ಕೇನ ಸಿಧ್ಯತಿ ॥ ೯೭೯ ॥**
**ಅಚ್ಛಿನ್ನಶ್ಛಿನ್ನವದ್ ಭಾತಿ ಪಾಮರಾಣಾಂ ಘಟಾದಿನಾ ।**
**ಗ್ರಾಮಕ್ಷೇತ್ರಾದ್ಯವಧಿಭಿರ್ಭಿನ್ನೇವ ವಸುಧಾ ಯಥಾ ॥ ೨೦೦ ॥**
**ತಥೈವ ಪರಮಂ ಬ್ರಹ್ಮ ಮಹತಾಂ ಚ ಮಹತ್ತಮಮ್ ।**
**ಪರಿಚ್ಛಿನ್ನಮಿವಾಭಾತಿ ಭ್ರಾನ್ತ್ಯಾ ಕಲ್ಪಿತವಸ್ತುನಾ ॥ ೨೦೧ ॥**

---

1. 'ಸ್ವಪ್ನಾರ್ಥತಸ್ತಸ್ಯ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
2. ವಿ. ಚೂ. ೫೬೨.

೧೯೮-೨೦೧. ಗಡಿಗೆಯಿಲ್ಲವಾಗಲು ಗಡಿಗೆಯ ಆಕಾಶವು ಹೇಗೆ ಮಹಾಕಾಶವೇ ಆಗುವದೋ, ಹಾಗೆಯೇ ಉಪಾಧಿಯಿಲ್ಲವಾಗಲು ಈ ಆತ್ಮನು ತಾನೇ ಬರಿಯ ಬ್ರಹ್ಮವೇ ಆಗಿರುತ್ತಾನೆ. ಗಡಿಗೆ ಇರಲಿ, ಇಲ್ಲದಿರಲಿ ಆಕಾಶವು ಯಾವಾಗಲೂ ಪೂರ್ಣವೇ. ನಿತ್ಯಪೂರ್ಣವಾಗಿರುವ ಆಕಾಶಕ್ಕೆ ಕಡಿವಡೆಯುವದು ಏತರಿಂದ ಸಿದ್ಧವಾದೀತು? ಭೂಮಿಯು ಊರು, ಹೊಲ- ಮುಂತಾದ ಅವಧಿಗಳಿಂದ ಹೇಗೆ ಬೇರೆಯಾಗಿ ತೋರುವದೋ, ಕಡಿವಡೆಯದೆ ಇದ್ದರೂ ಗಡಿಗೆಯೇ ಮುಂತಾದವುಗಳಿಂದ ಕಡಿವಡೆದಂತೆ ಪಾಮರರಿಗೆ ತೋರುತ್ತಿರುವದೋ ಹಾಗೆಯೇ ಪರಮಬ್ರಹ್ಮವು ಮಹತ್ತಾಗಿರುವವೆಲ್ಲಕ್ಕೂ ಮಹತ್ತೇ ಆಗಿದ್ದರೂ ಕಲ್ಪಿತವಸ್ತುವಿನಿಂದ ಪರಿಚ್ಛಿನ್ನವಾಗಿರುವಂತೆ ಭ್ರಾಂತಿಯಿಂದ ತೋರುತ್ತಿರುವದು.

## ಬ್ರಹ್ಮಾತ್ಮೈಕತ್ವವನ್ನು ಶ್ರುತಿಯು ತಿಳಿಸಿಕೊಡುವ ಬಗೆ

**ತಸ್ಮಾದ್ ಬ್ರಹ್ಮಾತ್ಮನೋರ್ಭೇದಃ ಕಲ್ಪಿತೋ ನ ತು ವಾಸ್ತವಃ ।**
**ಅತ ಏವ ಮುಹುಃ ಶ್ರುತ್ಯಾಪ್ಯೇಕತ್ವಂ ಪ್ರತಿಪಾದ್ಯತೇ ॥ ೨೦೨ ॥**
**ಬ್ರಹ್ಮಾತ್ಮನೋಸ್ತತ್ತ್ವಮಸೀತ್ಯದ್ವಯತ್ವೋಪಪತ್ತಯೇ ।**
**ಪ್ರತ್ಯಕ್ಷಾದಿವಿರೋಧೇನ ವಾಚ್ಯಯೋರ್ನೋಪಯುಜ್ಯತೇ ॥ ೨೦೩ ॥**
**ತತ್ತ್ವಂಪದಾರ್ಥಯೋರೈಕ್ಯಂ ಲಕ್ಷ್ಯಯೋರೇವ ಸಿಧ್ಯತಿ[1] ॥ ೨೦೪ ॥**

**ಶಿಷ್ಯಃ–**

**ಸ್ಯಾತ್ ತತ್ತ್ವಂಪದಯೋಃ ಸ್ವಾಮಿನ್ನರ್ಥಃ ಕತಿವಿಧೋ ಮತಃ ।**
**ಪದಯೋಃ ಕೋ ನು ವಾಚ್ಯಾರ್ಥೋ ಲಕ್ಷ್ಯಾರ್ಥ ಉಭಯೋಶ್ಚ ಕಃ ॥**
**ವಾಚ್ಯೈಕತ್ವವಿವಕ್ಷಾಯಾಂ ವಿರೋಧಃ ಕಃ ಪ್ರತೀಯತೇ ।**
**ಲಕ್ಷ್ಯಾರ್ಥಯೋರಭಿನ್ನತ್ವೇ ಸ ಕಥಂ ವಿನಿವರ್ತತೇ ॥ ೨೦೬ ॥**
**ಏಕತ್ವಕಥನೇ ಕಾ ವಾ ಲಕ್ಷಣಾಽತ್ರೋರರೀಕೃತಾ ।**
**ಏತತ್ ಸರ್ವಂ ಕರುಣಯಾ ಸಮ್ಯಕ್ ತ್ವಂ ಪ್ರತಿಪಾದಯ ॥ ೨೦೭ ॥**

೨೦೨-೨೦೭. ಆದ್ದರಿಂದ ಬ್ರಹ್ಮ, ಆತ್ಮ- ಇವರಿಗೆ ಭೇದವು ಕಲ್ಪಿತವಾಗಿರುವದೇ ಹೊರತು ವಸ್ತುಕೃತವಲ್ಲ. ಆದ್ದರಿಂದಲೇ ಶ್ರುತಿಯೂ ಮತ್ತೆಮತ್ತೆ (ಅವರಿಗೆ) ಏಕತ್ವವನ್ನು ತಿಳಿಸಿಕೊಡುತ್ತಿದೆ. ಬ್ರಹ್ಮ, ಆತ್ಮ- ಇಬ್ಬರಿಗೂ ಅದೇ ನೀನಾಗಿರುವೆ- ಎಂದು ಅದ್ವಯತ್ವವು ಹೊಂದುವದಕ್ಕಾಗಿ ತತ್ತ್ವಂಪದಗಳ ವಾಚ್ಯ

---

1. ಹಿಂದಿನ ೬ಳಿಗ್ಗೆಯನ್ನು ಸೇರಿಸಿ ಒಂದು ಶ್ಲೋಕವೆಂತ ಲೆಕ್ಕಮಾಡಿದೆ.

ಗಳಿಗೆ ಏಕತ್ವವು ಪ್ರತ್ಯಕ್ಷಾದಿವಿರುದ್ಧವಾಗುವದರಿಂದ ಉಪಯೋಗವಾಗುವದಿಲ್ಲ.[1] ತತ್ತ್ವಂಪದಾರ್ಥಗಳು ಲಕ್ಷ್ಯವಾದರೇ ಐಕ್ಯವು ಸಿದ್ಧವಾಗುವದು.

**ಶಿಷ್ಯ :-** ಸ್ವಾಮಿ, ತತ್ತ್ವಂಪದಗಳಿಗೆ ಅರ್ಥವು ಎಷ್ಟುವಿಧವೆಂದು ಒಪ್ಪಿರುತ್ತಾರೆ? ಆ ಎರಡು ಪದಗಳಿಗೆ ವಾಚ್ಯಾರ್ಥವು ಯಾವದೊ ? ಎರಡಕ್ಕೂ ಲಕ್ಷ್ಯಾರ್ಥವು ಯಾವದು ? ವಾಚ್ಯಗಳಿಗೆ ಏಕತ್ವವು ವಿವಕ್ಷಿತವಾಗಿದ್ದರೆ ಯಾವ ವಿರೋಧವು ತೋರುತ್ತದೆ ? ಲಕ್ಷ್ಯಾರ್ಥಗಳಿಗೆ ಐಕ್ಯವನ್ನು ಒಪ್ಪಿದರೆ ಆ ವಿರೋಧವು ಹೇಗೆ ತೊಲಗುವದು ? ಏಕತ್ವವನ್ನು ಹೇಳುವಲ್ಲಿ ಯಾವ ಲಕ್ಷಣೆಯನ್ನು ಇಲ್ಲಿ ಒಪ್ಪಿರುತ್ತಾರೆ ? ತಾವು ಕರುಣೆಯಿಂದ ಇದೆಲ್ಲವನ್ನೂ ಚೆನ್ನಾಗಿ ತಿಳಿಸಿಕೊಡಬೇಕು.

**ಶ್ರೀಗುರುಃ-**

**ಶೃಣುಷ್ವಾವಹಿತೋ ವಿದ್ವನ್ ಅದ್ಯ ತೇ ಫಲಿತಂ ತಪಃ ।**
**ವಾಕ್ಯಾರ್ಥಶ್ರುತಿಮಾತ್ರೇಣ ಸಮ್ಯಗ್ಜ್ಞಾನಂ ಭವಿಷ್ಯತಿ ॥ ೭೦೮ ॥**
**ಯಾವನ್ನ ತತ್ತ್ವಂಪದಯೋರರ್ಥಃ ಸಮ್ಯಗ್ವಿಚಾರ್ಯತೇ ।**
**ತಾವದೇವ ನೃಣಾಂ ಬನ್ಧೋ ಮೃತ್ಯುಸಂಸಾರಲಕ್ಷಣಃ ॥ ೭೦೯ ॥**
**ಅವಸ್ಥಾ ಸಚ್ಚಿದಾನನ್ದಾಖಣ್ಡೈಕರಸರೂಪಿಣೀ ।**
**ಮೋಕ್ಷಃ ಸಿಧ್ಯತಿ ವಾಕ್ಯಾರ್ಥಾಪರೋಕ್ಷಜ್ಞಾನತಃ ಸತಾಮ್ ॥ ೭೧೦ ॥**
**ವಾಕ್ಯಾರ್ಥ ಏವ ಜ್ಞಾತವ್ಯೋ ಮುಮುಕ್ಷೋರ್ಭವಮುಕ್ತಯೇ ।**
**ತಸ್ಮಾದವಹಿತೋ ಭೂತ್ವಾ ಶೃಣು ವಕ್ಷ್ಯೇ ಸಮಾಸತಃ ॥ ೭೧೧ ॥**

೭೦೮–೭೧೧. **ಶ್ರೀಗುರು :** ಎಲೈ ವಿವೇಕಿಯೆ, ಸಾವಧಾನವಾಗಿ ಕೇಳು : ಇಂದಿಗೆ ನಿನ್ನ ತಪಸ್ಸು ಫಲಿಸಿರುತ್ತದೆ. ಏಕೆಂದರೆ **ವಾಕ್ಯಾರ್ಥವನ್ನು ಶ್ರವಣ ಮಾಡಿದಮಾತ್ರದಿಂದ ಸಮ್ಯಗ್ಜ್ಞಾನವು ಉಂಟಾಗುತ್ತದೆ.** ಎಲ್ಲಿಯವರೆಗೆ ತತ್, ತ್ವಮ್–ಎಂಬ ಎರಡೂ ಪದಗಳ ಅರ್ಥವನ್ನು ಸರಿಯಾಗಿ ವಿಚಾರಮಾಡಿರುವದಿಲ್ಲವೋ ಅಲ್ಲಿಯವರೆಗೇ ಜನರಿಗೆ ಮೃತ್ಯುಸಂಸಾರರೂಪವಾದ ಬಂಧವು. **ಸಚ್ಚಿದಾನಂದಾಖಂಡೈಕರಸರೂಪಿಯಾದ** ಮೋಕ್ಷವೆಂಬ ಅವಸ್ಥೆಯು ವಾಕ್ಯಾರ್ಥದ ಅಪರೋಕ್ಷಜ್ಞಾನದಿಂದ ಸತ್ಪುರುಷರಿಗೆ ಸಿದ್ಧಿಸುವದು. ಸಂಸಾರದಿಂದ ಬಿಡುಗಡೆಯನ್ನು ಹೊಂದಲು ಮುಮುಕ್ಷುವಾದವನು ವಾಕ್ಯಾರ್ಥವನ್ನೇ ಅರಿತುಕೊಳ್ಳಬೇಕು. ಆದ್ದರಿಂದ ವಾಕ್ಯಾರ್ಥವನ್ನು ಸಂಕ್ಷೇಪವಾಗಿ ಹೇಳುವೆನು, ಸಾವಧಾನವಾಗಿ ಕೇಳು :

---

1. ‘ಉಪಪದ್ಯತೇ’ ಎಂದು ಪಾಠವಾದರೆ ಹೊಂದುವದಿಲ್ಲ– ಎಂದು ಕನ್ನಡಿಸಿಕೊಳ್ಳಬೇಕು.

## ವಾಕ್ಯಾರ್ಥಗಳು

ಅರ್ಥಾ ಬಹುವಿಧಾಃ ಪ್ರೋಕ್ತಾ ವಾಕ್ಯಾನಾಂ ಪಣ್ಡಿತೋತ್ತಮೈಃ ।
ವಾಚ್ಯಲಕ್ಷ್ಯಾದಿಭೇದೇನ ಪ್ರಸ್ತುತಂ ಶ್ರೂಯತಾಂ ತ್ವಯಾ ॥ ೭೧೨ ॥
ವಾಕ್ಯೇ ತತ್ತ್ವಮಸೀತ್ಯತ್ರ ವಿದ್ಯತೇ ಯತ್ ಪದತ್ರಯಮ್ ।
ತತ್ರಾದೌ ವಿದ್ಯಮಾನಸ್ಯ ತತ್ಪದಸ್ಯ ನಿಗದ್ಯತೇ ॥ ೭೧೩ ॥
ಶಾಸ್ತ್ರಾರ್ಥಕೋವಿದೈರರ್ಥೋ ವಾಚ್ಯೋ ಲಕ್ಷ್ಯ ಇತಿ ದ್ವಿಧಾ ।
ವಾಚ್ಯಾರ್ಥಂ ತೇ ಪ್ರವಕ್ಷ್ಯಾಮಿ ಪಣ್ಡಿತೈರ್ಯ ಉದೀರಿತಃ ॥ ೭೧೪ ॥
ಸಮಷ್ಟಿರೂಪಮಜ್ಞಾನಂ ಸಾಭಾಸಂ ಸತ್ತ್ವಬೃಂಹಿತಮ್ ।
ವಿಯದಾದಿವಿರಾಡನ್ತಂ ಸ್ವಕಾರ್ಯೇಣ ಸಮನ್ವಿತಮ್ ॥ ೭೧೫ ॥
ಚೈತನ್ಯಂ ತದವಚ್ಛಿನ್ನಂ ಸತ್ಯಜ್ಞಾನಾದಿಲಕ್ಷಣಮ್ ।
ಸರ್ವಜ್ಞತ್ವೇಶ್ವರತ್ವಾನ್ತರ್ಯಾಮಿತ್ವಾದಿಗುಣೈರ್ಯುತಮ್ ॥ ೭೧೬ ॥
ಜಗತ್ಸ್ರಷ್ಟೃತ್ವಪಾತೃತ್ವಸಂಹರ್ತೃತ್ವಾದಿಧರ್ಮಕಮ್ ।
ಸರ್ವಾತ್ಮನಾ ಭಾಸಮಾನಂ ಯದಮೇಯಂ ಗುಣೈಶ್ಚ ತತ್ ॥ ೭೧೭ ॥
ಅವ್ಯಕ್ತಮಪರಂ ಬ್ರಹ್ಮ ವಾಚ್ಯಾರ್ಥ ಇತಿ ಕಥ್ಯತೇ ॥ ೭೧೭½ ॥

೭೧೨–೭೧೭½. ಪಂಡಿತೋತ್ತಮರು ವಾಕ್ಯಗಳಿಗೆ ವಾಚ್ಯಲಕ್ಷ್ಯಾದಿಭೇದಗಳಿಂದ[1] ಬಹುವಿಧವಾದ ಅರ್ಥಗಳನ್ನು ಹೇಳುವರು. ಪ್ರಕೃತವಾದದ್ದನ್ನು ಹೇಳುವೆನು ಕೇಳು. 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ಮೂರು ಪದಗಳಿವೆಯಷ್ಟೆ ? ಅವುಗಳೊಳಗೆ ಮೊದಲು ಇರುವ 'ತತ್' (ಅದು) ಎಂಬ ಪದಕ್ಕೆ ಶಾಸ್ತ್ರಾರ್ಥಕೋವಿದರಾದವರು ವಾಚ್ಯ, ಲಕ್ಷ್ಯ– ಎಂಬ ಎರಡು ಅರ್ಥಗಳನ್ನು ಹೇಳುವರು. ಪಂಡಿತರು ಹೇಳುವ **ವಾಚ್ಯಾರ್ಥವನ್ನು** ನಿನಗೆ ಹೇಳುವೆನು : **ಸಮಷ್ಟಿರೂಪವಾದ ಅಜ್ಞಾನವು ಆಭಾಸದಿಂದೊಡಗೂಡಿ ಸತ್ತ್ವಪ್ರಧಾನವಾಗಿದ್ದು ಆಕಾಶಾದಿವಿರಾಡಂತವಾಗಿ ತನ್ನ ಕಾರ್ಯದೊಡನೆ ಕೂಡಿರುತ್ತದೆ. ಅದರಿಂದ ಉಪಹಿತವಾಗಿರುವ ಸತ್ಯಜ್ಞಾನಾದಿರೂಪವಾಗಿರುವ ಚೈತನ್ಯವು ಸರ್ವಜ್ಞತ್ವ, ಈಶ್ವರತ್ವ, ಅಂತರ್ಯಾಮಿತ್ವ– ಮುಂತಾದ ಗುಣಯುಕ್ತವಾಗಿಯೂ ಜಗತ್ಸ್ರಷ್ಟೃತ್ವ, ಪಾಲಕತ್ವ, ಸಂಹಾರಕತ್ವ– ಎಂಬ ಧರ್ಮವುಳ್ಳದ್ದೂ ಆಗಿರುವ ಸರ್ವಾತ್ಮರೂಪದಿಂದ ತೋರುವ, ಗುಣಗಳಿಂದ ಅಮೇಯವಾಗಿರುವ ಅವ್ಯಕ್ತವಾಗಿರುವ ಅಪರಬ್ರಹ್ಮವು ವಾಚ್ಯಾರ್ಥವೆನಿಸುತ್ತದೆ.**[2]

1. ವಾಕ್ಯಗಳಿಗೂ ವಾಚ್ಯಾರ್ಥಲಕ್ಷಣಾರ್ಥಗಳುಂಟೆಂದು ವೇದಾಂತಸಾರದಲ್ಲಿ ಹೇಳಿದೆ. ೭೩ನೇ ಪುಟವನ್ನು ನೋಡಿ.

2. ಈ ಅಭಿಪ್ರಾಯವು ಮತ್ತೆ ಯಾವ ಪ್ರಕರಣದಲ್ಲಿಯೂ ಕಂಡುಬರುವದಿಲ್ಲ. ಇದು ಭಾಷ್ಯಕ್ಕಂತೂ ವಿರುದ್ಧ.

## ನೈದಿಲೆ ಕಪ್ಪು ಎಂಬಂತೆ ಇಲ್ಲಿ ವಾಕ್ಯಾರ್ಥವಾಗದು

**ನೀಲಮುತ್ಪಲಮಿತ್ಯತ್ರ ಯಥಾ ವಾಕ್ಯಾರ್ಥಸಙ್ಗತಿಃ ।**
**ತಥಾ ತತ್ತ್ವಮಸೀತ್ಯತ್ರ ನಾಸ್ತಿ ವಾಕ್ಯಾರ್ಥಸಙ್ಗತಿಃ ॥ ೭೧೮ ॥**
**ಪಟಾದ್ ವ್ಯಾವರ್ತತೇ ನೀಲ ಉತ್ಪಲೇನ ವಿಶೇಷಿತಃ ।**
**ಶೌಕ್ಲ್ಯಾದ್ ವ್ಯಾವರ್ತತೇ ನೀಲೇನೋತ್ಪಲಂ ತು ವಿಶೇಷಿತಮ್ ॥ ೭೧೯ ॥**
**ಇತ್ಥಮನ್ಯೋಽನ್ಯಭೇದಸ್ಯ ವ್ಯಾವರ್ತಕತಯಾ ತಯೋಃ ।**
**ವಿಶೇಷಣವಿಶೇಷ್ಯತ್ವಸಂಸರ್ಗಸ್ಯೇತರಸ್ಯ ವಾ ॥ ೭೨೦ ॥**
**ವಾಕ್ಯಾರ್ಥತ್ವೇ ಪ್ರಮಾಣಾನ್ತರವಿರೋಧೋ ನ ವಿದ್ಯತೇ ॥ ೭೨೧[1] ॥**
**ಅತಃ ಸಙ್ಗಚ್ಛತೇ ಸಮ್ಯಗ್ ವಾಕ್ಯಾರ್ಥೋ ಬಾಧವರ್ಜಿತಃ ।**
**ಏವಂ ತತ್ತ್ವಮಸೀತ್ಯತ್ರ ವಾಕ್ಯಾರ್ಥೋ ನ ಸಮಞ್ಜಸಃ ॥ ೭೨೨ ॥**
**ತದರ್ಥಸ್ಯ ಪರೋಕ್ಷತ್ವಾದಿವಿಶಿಷ್ಟಚಿತೇರಪಿ ।**
**ತ್ವಮರ್ಥಸ್ಯಾಪರೋಕ್ಷತ್ವಾದಿವಿಶಿಷ್ಟಚಿತೇರಪಿ ॥ ೭೨೩ ॥**
**ತಥೈವಾನ್ಯೋಽನ್ಯಭೇದಸ್ಯ ವ್ಯಾವರ್ತಕತಯಾ ತಯೋಃ ।**
**ವಿಶೇಷಣವಿಶೇಷ್ಯಸ್ಯ ಸಂಸರ್ಗಸ್ಯೇತರಸ್ಯ ವಾ ॥ ೭೨೪ ॥**
**ವಾಕ್ಯಾರ್ಥತ್ವೇ ವಿರೋಧೋಽಸ್ತಿ ಪ್ರತ್ಯಕ್ಷಾದಿಕೃತಸ್ತತಃ ।**
**ಸಙ್ಗಚ್ಛತೇ ನ ವಾಕ್ಯಾರ್ಥಸ್ತದ್ವಿರೋಧಂ ಚ ವಚ್ಮಿ ತೇ ॥ ೭೨೫ ॥**

೭೧೮-೭೨೫. 'ನೈದಿಲೆಯು ಕಪ್ಪು'-ಎಂಬಲ್ಲಿ ಹೇಗೆ ವಾಕ್ಯಾರ್ಥವು ಸಂಗತವಾಗುತ್ತದೆಯೋ[2] ಹಾಗೆ 'ತತ್ ತ್ವಮಸಿ' (ಅದೇ ನೀನಾಗಿರುವೆ) ಎಂಬಲ್ಲಿ ವಾಕ್ಯಾರ್ಥವು ಸಂಗತವಾಗುವದಿಲ್ಲ. ಏಕೆಂದರೆ, ಕಪ್ಪು ಎಂಬುದಕ್ಕೆ 'ನೈದಿಲೆ' ಎಂಬ ವಿಶೇಷಣವಿರುವದರಿಂದ ಕಪ್ಪಾದದ್ದು ಬಟ್ಟೆಯಲ್ಲವೆಂದಾಗುತ್ತದೆ. ನೈದಿಲೆಗೆ ಕಪ್ಪು ಎಂಬ ವಿಶೇಷಣವಿರುವದರಿಂದ ಬಿಳಿಯದಲ್ಲವೆಂದಾಗುತ್ತದೆ. ಹೀಗೆ (ಕಪ್ಪು, ನೈದಿಲೆ ಎಂಬ) ಆ ಎರಡು (ಪದಗಳು) ಒಂದಕ್ಕೊಂದರ ಭೇದಕ್ಕೆ ವ್ಯಾವರ್ತಕವಾಗುವದರಿಂದ ವಿಶೇಷಣವಿಶೇಷ್ಯತ್ವವನ್ನಾಗಲಿ ಸಂಸರ್ಗವನ್ನಾಗಲಿ, ಇತರ (ವಿಶಿಷ್ಟತ್ವ) ವನ್ನಾಗಲಿ ವಾಕ್ಯಾರ್ಥವೆಂದಿಟ್ಟುಕೊಂಡರೆ ಮತ್ತೆಯಾವ ಪ್ರಮಾಣಕ್ಕೂ

---

1. ಹಿಂದಿನ ೭೦೭ನ್ನಿಯನ್ನು ಸೇರಿಸಿ ಒಂದು ಶ್ಲೋಕವೆಂತ ಲೆಕ್ಕಮಾಡಿದೆ.

2 ನೀಲಮುತ್ಪಲಮ್ (ನೈದಿಲೆ ಕಪ್ಪು) ಎಂಬಲ್ಲಿ ನೈದಿಲೆಗೂ ಕಪ್ಪಿಗೂ ವಿಶೇಷ್ಯ ವಿಶೇಷಣಭಾವವಿದೆ ; ಆದ್ದರಿಂದ ವಾಕ್ಯಾರ್ಥವು ಇವೆರಡರ ಸಂಸರ್ಗವು. ಅಥವಾ ನೈದಿಲೆ ಎಂದಿರುವದು ಕಪ್ಪಾಗಿರುವ ಬಟ್ಟೆಯೇ ಮುಂತಾದವುಗಳಿಗಿಂತ ಭಿನ್ನವೆಂದೂ ಕಪ್ಪು ಎಂದಿರುವದರಿಂದ ಬಿಳಿದು ಮುಂತಾಗಿರುವದಕ್ಕಿಂತ ಭಿನ್ನವೆಂದೂ ಇತರಭೇದವನ್ನು ವಾಕ್ಯಾರ್ಥವಾಗಿಟ್ಟುಕೊಳ್ಳಬಹುದು. ಆದರೆ ಗ್ರಂಥಕರ್ತರಿಗೆ ಈ ಅಭಿಪ್ರಾಯವು ಇರುವಂತೆ ತೋರುವದಿಲ್ಲ. ವೇದಾಂತಸಾರ (ಪು. ೬೨ರಲ್ಲಿ) ಹೇಳಿರುವಂತೆ ಸಂಸರ್ಗ ಅಥವಾ ವಿಶಿಷ್ಟ-ಎಂಬ ವಾಕ್ಯಾರ್ಥಗಳು ಹೊಂದುವದಿಲ್ಲವೆಂದಿಷ್ಟೇ ಅವರ ಮತ. ಪಂ. ದ. ೭-೭೫ ನೋಡಿ.

ವಿರೋಧವಿರುವದಿಲ್ಲ. ಆದ್ದರಿಂದ (ಅಲ್ಲಿ) ವಾಕ್ಯದ ಅರ್ಥವು ಅಬಾಧಿತವಾಗಿ ಚೆನ್ನಾಗಿ ಹೊಂದುತ್ತದೆ. (ಆದರೆ) ಹೀಗೆ 'ಅದೇ ನೀನಾಗಿರುವೆ' ಎಂಬಲ್ಲಿ ವಾಕ್ಯಾರ್ಥವು ಹೊಂದುಗಡೆಯಾಗದು. ಏಕೆಂದರೆ ಪರೋಕ್ಷತ್ವವೇ ಮುಂತಾದವು ಗಳಿಂದ ಕೂಡಿರುವ ಚೈತನ್ಯವೆಂಬ ತತ್‌ಪದಾರ್ಥಕ್ಕೂ ಅಪರೋಕ್ಷವೇ ಮುಂತಾದ (ಧರ್ಮಗಳಿಂದ) ಕೂಡಿರುವ ಚೈತನ್ಯವೆಂಬ ತ್ವಂಪದಾರ್ಥಕ್ಕೂ ಮತ್ತು ಇವು ಗಳನ್ನು ಒಂದರಿಂದೊಂದನ್ನು ಬಿಡಿಸುವ ಅನ್ಯೋನ್ಯಭೇದಕ್ಕೂ ವಿಶೇಷಣವಿಶೇಷ್ಯತ್ವ ವಾಗಲಿ, ಸಂಸರ್ಗವಾಗಲಿ ಅಥವಾ ಮತ್ತೊಂದಾಗಲಿ ವಾಕ್ಯಾರ್ಥವೆಂದರೆ ಪ್ರತ್ಯಕ್ಷಾದಿ ಕೃತವಾದ ವಿರೋಧವಿರುತ್ತದೆ. ಆದ್ದರಿಂದ ವಾಕ್ಯಾರ್ಥವು ಹೊಂದುವದಿಲ್ಲ. ಇವುಗಳಿಗೆ ವಿರೋಧವು ಹೇಗೆಂಬುದನ್ನು ನಿನಗೆ ಹೇಳುತ್ತೇನೆ.

## ತತ್ತ್ವಂಪದಾರ್ಥಗಳಿಗೆ ಪರಸ್ಪರವಿರೋಧ

**ಸರ್ವೇಶತ್ವಸ್ವತನ್ತ್ರತ್ವಸರ್ವಜ್ಞತ್ವಾದಿಭಿರ್ಗುಣೈಃ ।**
**ಸರ್ವೋತ್ತಮಃ ಸತ್ಯಕಾಮಃ ಸತ್ಯಸಙ್ಕಲ್ಪ ಈಶ್ವರಃ ॥ ೭೨೬ ॥**
**ತತ್ಪದಾರ್ಥಸ್ತ್ವಮರ್ಥಸ್ತು ಕಿಞ್ಚಿಜ್ಞೋ ದುಃಖಜೀವನಃ ।**
**ಸಂಸಾರ್ಯಯಂ ತದ್ಗತಿಕೋ ಜೀವಃ ಪ್ರಾಕೃತಲಕ್ಷಣಃ ॥ ೭೨೭ ॥**
**ಕಥಮೇಕತ್ವಮನಯೋರ್ಘಟತೇ ವಿಪರೀತಯೋಃ ।**
**ಪ್ರತ್ಯಕ್ಷೇಣ ವಿರೋಧೋಽಯಮುಭಯೋರುಪಲಭ್ಯತೇ ॥ ೭೨೮ ॥**
**ವಿರುದ್ಧಧರ್ಮಾಕ್ರಾನ್ತತ್ವಾತ್ ಪರಸ್ಪರವಿಲಕ್ಷಣೌ ।**
**ಜೀವೇಶೌ ವಹ್ನಿತುಹಿನಾವಿವ ಶಬ್ದಾರ್ಥತೋಽಪಿ ಚ ॥ ೭೨೯ ॥**

೭೨೬–೭೨೯. ಸರ್ವೇಶನಾಗಿರುವದು, ಸ್ವತಂತ್ರನಾಗಿರುವದು, ಸರ್ವಜ್ಞ ನಾಗಿರುವದು– ಮುಂತಾದ ಗುಣಗಳಿಂದೊಡಗೂಡಿ ಸರ್ವೋತ್ತಮನೂ ಸತ್ಯ ಕಾಮನೂ ಸತ್ಯಸಂಕಲ್ಪನೂ ಆಗಿರುವ ಈಶ್ವರನು **ತತ್ಪದಾರ್ಥ; ತ್ವಂಪದಾರ್ಥ** ವಾದರೊ, ಅಲ್ಪಜ್ಞನೂ ದುಃಖದಿಂದ ಜೀವಿಸುತ್ತಿರುವವನೂ ಸಂಸಾರಿಯೂ ಆ (ಈಶ್ವರನನ್ನೇ) ಗತಿಯಾಗಿ ಉಳ್ಳವನೂ ಆದ ಪ್ರಕೃತಿಯ ಸಂಬಂಧವುಳ್ಳ ಜೀವನು.[1] ಈ ವಿರುದ್ಧಸ್ವಭಾವದ ಇಬ್ಬರಿಗೆ ಏಕತ್ವವು ಹೇಗೆ ಹೊಂದೀತು ? ಇಬ್ಬರಿಗೂ ಪ್ರತ್ಯಕ್ಷವಾಗಿಯೇ[2] ವಿರೋಧವು ತೋರಿಬರುತ್ತಿದೆ. ವಿರುದ್ಧವಾದ

---

1. ತತ್ಪದಾರ್ಥತ್ವಂಪದಾರ್ಥಗಳನ್ನು ಸೂತ್ರಭಾಷ್ಯದಲ್ಲಿ ವರ್ಣಿಸಿರುವದನ್ನು (ಸೂ. ಭಾ. ೪–೧–೩ರಲ್ಲಿ ಪು. ೪೬೨) ನೋಡಿದರೆ ಭಾಷ್ಯಕ್ಕೆ ಇದು ವಿರುದ್ಧವೇ. ಆದರೆ ಇಲ್ಲಿ ವಾಚ್ಯಾರ್ಥಗಳಿಗೆ ವಿರೋಧವನ್ನು ತೋರಿಸುವದು ಗ್ರಂಥಕಾರರ ಉದ್ದೇಶ.

2. ಶಬ್ದಗಳನ್ನೂ ಅರ್ಥಗಳನ್ನೂ ಶ್ರವಣಮಾಡಿದಕೂಡಲೆ ಆಗುವ ಭಾವನೆಯನ್ನೇ ಇಲ್ಲಿ ಪ್ರತ್ಯಕ್ಷವೆಂದಿದೆ ಎಂದು ಭಾವಿಸಬೇಕು. ವೇದಾಂತಸಾರದಲ್ಲಿ ಸರ್ವೇಶ್ವರತ್ವಾದಿಗಳು ತತ್ಪದಾರ್ಥವೆಂದಿಲ್ಲ.

ಧರ್ಮಗಳಿಂದ ಕೂಡಿರುವದರಿಂದ ಜೀವೇಶ್ವರರು ಮಂಜುಬೆಂಕಿಗಳಂತೆ ಶಬ್ದದಿಂದಲೂ ಅರ್ಥದಿಂದಲೂ ಒಬ್ಬರಿಗಿಂತ ಒಬ್ಬರು ವಿಲಕ್ಷಣರಾಗಿರುತ್ತಾರೆ.

## ಐಕ್ಯವನ್ನು ಕೈಬಿಟ್ಟರೆ ಶ್ರುತಿವಿರೋಧ

**ಪ್ರತ್ಯಕ್ಷಾದಿವಿರೋಧಃ ಸ್ಯಾದಿತ್ಯೈಕ್ಯೇ ತಯೋಃ ಪರಿತ್ಯಕ್ತೇ ।**
**ಶ್ರುತಿವಚನವಿರೋಧೋ ಭವತಿ ಮಹಾನ್ ಸ್ಮೃತಿವಚನವಿರೋಧಶ್ಚ ॥**
**ಶ್ರುತ್ಯಾಪ್ಯೇಕತ್ವಮನಯೋಸ್ತಾತ್ಪರ್ಯೇಣ ನಿಗದ್ಯತೇ ।**
**ಮುಹುಸ್ತತ್ತ್ವಮಸೀತ್ಯಸ್ಮಾದಙ್ಗೀಕಾರ್ಯಂ ಶ್ರುತೇರ್ವಚಃ ॥ ೨೩೧ ॥**

೨೩೦–೨೩೧ ಪ್ರತ್ಯಕ್ಷಾದಿಗಳಿಗೆ[1] ವಿರೋಧವಾದೀತೆಂದು ಅವೆರಡಕ್ಕೂ ಐಕ್ಯಾರ್ಥವನ್ನು ಬಿಟ್ಟರೆ ಶ್ರುತಿವಚನಕ್ಕೆ ಹೆಚ್ಚಿನ ವಿರೋಧವಾಗುವದು ; ಸ್ಮೃತಿವಚನಕ್ಕೂ[2] ವಿರೋಧವಾಗುವದು. ಶ್ರುತಿಯೂ 'ಅದೇ ನೀನಾಗಿರುವೆ' ಎಂದು ಮತ್ತೆಮತ್ತೆ ತಾತ್ಪರ್ಯ[3]ದಿಂದ ಈ (ತತ್ಪದಾರ್ಥತ್ವಂಪದಾರ್ಥ)ಗಳಿಗೆ ಐಕ್ಯವನ್ನೇ ಹೇಳುತ್ತಿದೆ. ಇದರಿಂದ ಶ್ರುತಿವಚನವನ್ನು ಅಂಗೀಕರಿಸಬೇಕು.

## ಅಖಂಡಾರ್ಥವೇ ಸ್ಮೃತಿಗೆ ಸಮ್ಮತ

**ವಾಕ್ಯಾರ್ಥತ್ವೇ ವಿಶಿಷ್ಟಸ್ಯ ಸಂಸರ್ಗಸ್ಯ ಚ.ವಾ ಪುನಃ ।**
**ಅಯಥಾರ್ಥತಯಾ ಸೋಽಯಂ ವಾಕ್ಯಾರ್ಥೋ ನ ಮತಃ ಶ್ರುತೇಃ ॥**

**ಅಖಣ್ಡೈಕರಸತ್ವೇನ ವಾಕ್ಯಾರ್ಥಃ ಶ್ರುತಿಸಮ್ಮತಃ ।**
**ಸ್ಥೂಲಸೂಕ್ಷ್ಮಪ್ರಪಞ್ಚಸ್ಯ ಸನ್ಮಾತ್ರತ್ವಂ ಪುನಃ ಪುನಃ ॥ ೨೩೨ ॥**

**ದರ್ಶಯಿತ್ವಾ ಸುಷುಪ್ತೌ ತದ್ಬ್ರಹ್ಮಾಭಿನ್ನತ್ವಮಾತ್ಮನಃ ।**
**ಉಪಪಾದ್ಯ ಸದೈಕತ್ವಂ ಪ್ರದರ್ಶಯಿತುಮಿಚ್ಛಯಾ ॥ ೨೩೪ ॥**

**ಐತದಾತ್ಮ್ಯಮಿದಂ ಸರ್ವಮಿತ್ಯುಕ್ತ್ಯೈವ ಸದಾತ್ಮನೋಃ ।**
**ಬ್ರವೀತಿ ಶ್ರುತಿರೇಕತ್ವಂ ಬ್ರಹ್ಮಣೋಽದ್ವೈತಸಿದ್ಧಯೇ ॥ ೨೩೫ ॥**

**ಸತಿ ಪ್ರಪಞ್ಚೇ ಜೀವೇ ವಾಽದ್ವೈತತ್ವಂ ಬ್ರಹ್ಮಣಃ ಕುತಃ ।**
**ಅತಸ್ತಯೋರಖಣ್ಡತ್ವಮೇಕತ್ವಂ ಶ್ರುತಿಸಮ್ಮತಮ್ ॥ ೨೩೬ ॥**

---

1. ಪ್ರತ್ಯಕ್ಷಾದಿಗಳಿಗೆ ಎಂದು ಆದಿಶಬ್ದವಿರುವದರಿಂದ ಇಲ್ಲಿ ಪ್ರಮಾಣಗಳಿಗೆ ಪರಸ್ಪರ ವಿರೋಧವಾದರೆ ಶ್ರುತಿಯೇ ಪ್ರಬಲ ಎಂಬುದನ್ನು ಒಪ್ಪಿದಂತಾಯಿತು. ಇದು ಭಾಷ್ಯ ವಿರುದ್ಧ.
2. ಗೀತೆ ೧೩–೨ಕ್ಕೂ.
3. ಉಪಕ್ರಮೋಪಸಂಹಾರಾದಿಗಳಿಂದ ಎಂದು ಅರ್ಥಮಾಡಬೇಕು ; ಆದರೆ ಮುಂದೆ 'ಅಭ್ಯಾಸ'ವನ್ನೇ ಪ್ರಧಾನವಾಗಿ ಹೇಳಿದೆ.

೭೩೨-೭೩೬. ವಿಶಿಷ್ಟವಾಗಲಿ ಸಂಸರ್ಗವಾಗಲಿ ವಾಕ್ಯಾರ್ಥವೆಂಬರೆ ಯಥಾರ್ಥವಾಗುವದಿಲ್ಲವಾದ್ದರಿಂದ ಇದು ಶ್ರುತಿಗೆ ಸಮ್ಮತವಾಗಲಾರದು. **ಅಖಂಡೈಕರಸತ್ವವೇ**[1] ವಾಕ್ಯಾರ್ಥವೆಂದು ಶ್ರುತಿಗೆ ಸಮ್ಮತವಾಗಿರುತ್ತದೆ. ಸ್ಥೂಲಸೂಕ್ಷ್ಮಪ್ರಪಂಚವು[2] ಸನ್ಮಾತ್ರವೆಂಬುದನ್ನು ಮತ್ತೆಮತ್ತೆ ತೋರಿಸಿಕೊಟ್ಟು ಸುಷುಪ್ತಿಯಲ್ಲಿ ಆತ್ಮನು ಆ ಬ್ರಹ್ಮಕ್ಕಿಂತ ಅಭಿನ್ನವೆಂಬುದನ್ನು ಉಪಪಾದಿಸಿ[3] ಸದೈಕತ್ವವನ್ನು[4] ತೋರಿಸುವ ಇಚ್ಛೆಯಿಂದ 'ಇವೆಲ್ಲವೂ ಇದನ್ನೇ ಆತ್ಮನನ್ನಾಗುಳ್ಳದ್ದು' (ಛಾಂ. ೬-೮-೭....) ಎಂಬ ವಚನದಿಂದಲೇ ಸದ್ಬ್ರಹ್ಮಕ್ಕೂ ಆತ್ಮನಿಗೂ ಏಕತ್ವ[5]ವನ್ನು ಬ್ರಹ್ಮವು ಅದ್ವೈತವೆಂಬುದು[6] ಸಿದ್ಧವಾಗುವದಕ್ಕಾಗಿ ಶ್ರುತಿಯು ಹೇಳುತ್ತಿದೆ. ಪ್ರಪಂಚವಾಗಲಿ, ಜೀವನಾಗಲಿ ಇದ್ದುಕೊಂಡಿದ್ದರೆ ಅದ್ವೈತತ್ವವು ಬ್ರಹ್ಮಕ್ಕೆ ಎಲ್ಲಿಂದ (ಏರ್ಪಟ್ಟೀತು)? ಆದ್ದರಿಂದ ಆ (ತತ್ತ್ವಂ ಪದಾರ್ಥಗಳಿಗೆ) ಏಕತ್ವವೆಂದರೆ ಅಖಂಡತ್ವವೇ ಎಂದು ಶ್ರುತಿಗೆ ಸಮ್ಮತ.

## ಇಲ್ಲಿ ಲಕ್ಷಣೆಯನ್ನು ಸ್ವೀಕರಿಸಿದರೆ ಯಾವ ವಿರೋಧವೂ ಇಲ್ಲ

**ವಿರುದ್ಧಾಂಶಪರಿತ್ಯಾಗಾತ್ ಪ್ರತ್ಯಕ್ಷಾದಿರ್ನ ಬಾಧ್ಯತೇ**[7] **।**
**ಅವಿರುದ್ಧಾಂಶಗ್ರಹಣಾನ್ನ ಶ್ರುತ್ಯಾಪಿ ವಿರುಧ್ಯತೇ** ॥ ೭೩೭ ॥

**ಲಕ್ಷಣಾ ಹ್ಯುಪಗನ್ತವ್ಯಾ ತತೋ ವಾಕ್ಯಾರ್ಥಸಿದ್ಧಯೇ ।**
**ವಾಚ್ಯಾರ್ಥಾನುಪಪತ್ತ್ಯೈವ ಲಕ್ಷಣಾಭ್ಯುಪಗಮ್ಯತೇ** ॥ ೭೩೮ ॥
**ಸಂಬನ್ಧಾನುಪಪತ್ತ್ಯಾ ಚ ಲಕ್ಷಣೇತಿ ಜಗುರ್ಬುಧಾಃ** ॥ ೭೩೯ ॥

---

1. ಅಖಂಡೈಕರಸವೆಂಬ ಮಾತು ಭಾಷ್ಯದಲ್ಲಿ ಕಾಣಬರುವದಿಲ್ಲ. ಶಬ್ದಾನುಕ್ರಮಣಿಕೆಯನ್ನು ನೋಡಿ. ವೇ. ಸಾ.ದಲ್ಲಿ (ಪು. ೮೭ರಲ್ಲಿ) ಈ ಅರ್ಥಕ್ಕೆ ಒಂದು ಶ್ಲೋಕವೇ ಉದಾಹೃತವಾಗಿದೆ.

2. 'ಸ್ಥೂಲಸೂಕ್ಷ್ಮಪ್ರಪಞ್ಚಯೋಃ' ಎಂದು ದ್ವಿವಚನವು ಬೇಕಿತ್ತು ; ಆದರೆ ಹಾಗಿದ್ದರೆ ಛಂದಸ್ಸು ಕೆಡುತ್ತದೆ.

3. 'ಸ್ವಪಿತಿ' ಎಂಬ ಮಾತಿನ ವ್ಯುತ್ಪತ್ತಿಯನ್ನು ನೋಡುವ ಮೂಲಕ ಸುಷುಪ್ತಿಯಲ್ಲಿ ಆತ್ಮನು ಸದ್ಬ್ರಹ್ಮದಲ್ಲಿಯೇ ಒಂದಾಗುತ್ತಾನೆ ಎಂದು ಛಾಂ. ೬-೮-೧ರಲ್ಲಿ ಹೇಳಿದೆ.

4. ಪ್ರಪಂಚವೂ ಜೀವನೂ ಸದ್ಬ್ರಹ್ಮಾತ್ಮಾನನ್ಯವೇ ಎಂಬುದನ್ನು.

5. 'ತತ್ತ್ವಮಸಿ' ಎಂಬ ವಾಕ್ಯದ ಅಭಿಪ್ರಾಯವಿದು.

6. ಮೂಲದಲ್ಲಿ ಅದ್ವೈತವೆಂಬ ಮಾತನ್ನು ಆದ್ವೈತತ್ವವೆಂಬ ಭಾವಾರ್ಥದಲ್ಲಿ ಪ್ರಯೋಗಿಸಿದೆ.

7. 'ಬಾಧತೇ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

೭೩೭-೭೩೮ನ್ನು. ವಿರುದ್ಧವಾಗಿರುವ ಅಂಶಗಳನ್ನು[1] ಬಿಟ್ಟುಬಿಡುವದರಿಂದ ಪ್ರತ್ಯಕ್ಷಾದಿಗಳಿಗೆ ಬಾಧೆಯಾಗುವದಿಲ್ಲ. ಅವಿರುದ್ಧವಾದ ಅಂಶವನ್ನು[2] ತೆಗೆದುಕೊಳ್ಳುವದರಿಂದ ಶ್ರುತಿಗೂ ವಿರೋಧವಾಗುವದಿಲ್ಲ. ಆದ್ದರಿಂದ ವಾಕ್ಯಾರ್ಥವು ಸಿದ್ಧಿಸುವದಕ್ಕಾಗಿ (ಇಲ್ಲಿ ಪದಗಳಿಗೆ) ಲಕ್ಷಣೆಯನ್ನು ಸ್ವೀಕರಿಸಬೇಕು. ವಾಚ್ಯಾರ್ಥವು ಹೊಂದದೆ ಇರುವದರಿಂದಲೇ ಲಕ್ಷಣೆಯನ್ನು ಸ್ವೀಕರಿಸಲಾಗಿರುತ್ತದೆ. ಸಂಬಂಧವು ಹೊಂದದೆ ಇದ್ದರೆ ಲಕ್ಷಣೆ(ಯನ್ನು ಸ್ವೀಕರಿಸಬೇಕು) ಎಂದು ಬಲ್ಲವರು ಹೇಳಿರುತ್ತಾರೆ.[3]

## ಇಲ್ಲಿ ಜಹಲ್ಲಕ್ಷಣೆಯು ಸಲ್ಲದು

**ಗಙ್ಗಾಯಾಂ ಘೋಷ ಇತ್ಯಾದೌ ಯಾ ಜಹಲ್ಲಕ್ಷಣಾ ಮತಾ ।**
**ನ ಸಾ ತತ್ತ್ವಮಸೀತ್ಯತ್ರ ವಾಕ್ಯ ಏಷಾ[4] ಪ್ರವರ್ತತೇ ॥ ೭೩೯ ॥**

**ಗಙ್ಗಾಯಾ ಅಪಿ ಘೋಷಸ್ಯಾಽಽಧಾರಾಧೇಯತ್ವಲಕ್ಷಣಃ ।**
**ಸರ್ವೋ ವಿರುದ್ಧೋ[5] ವಾಕ್ಯಾರ್ಥಸ್ತತ್ರ ಪ್ರತ್ಯಕ್ಷತಸ್ತತಃ ॥ ೭೪೦ ॥**

**ಗಙ್ಗಾಸಂಬನ್ಧವತ್ತೀರೇ ಲಕ್ಷಣಾ ಸಂಪ್ರವರ್ತತೇ ॥ ೭೪೧[6] ॥**

**ತಥಾ ತತ್ತ್ವಮಸೀತ್ಯತ್ರ ಚೈತನ್ಯೈಕತ್ವಲಕ್ಷಣೇ ।**
**ವಿವಕ್ಷಿತೇ ತು ವಾಕ್ಯಾರ್ಥೇಽಪರೋಕ್ಷತ್ವಾದಿಲಕ್ಷಣಃ ॥ ೭೪೨ ॥**

**ವಿರುಧ್ಯತೇ ಭಾಗಮಾತ್ರೋ ನ ತು ಸರ್ವೋ ವಿರುಧ್ಯತೇ ।**
**ತಸ್ಮಾಜ್ಜಹಲ್ಲಕ್ಷಣಾಯಾಃ ಪ್ರವೃತ್ತಿರ್ನಾತ್ರ ಯುಜ್ಯತೇ ॥ ೭೪೩ ॥**

**ವಾಚ್ಯಾರ್ಥಸ್ಯ ತು ಸರ್ವಸ್ಯ ತ್ಯಾಗೇ ನ ಫಲಮೀಕ್ಷ್ಯತೇ ।**
**ನಾಲಿಕೇರಫಲಸ್ಯೇವ ಕಠಿನತ್ವಧಿಯಾ ನೃಣಾಮ್ ॥ ೭೪೪ ॥**

**ಗಙ್ಗಾಪದಂ ಯಥಾ ಸ್ವಾರ್ಥಂ ತ್ಯಕ್ತ್ವಾ ಲಕ್ಷಯತೇ ತಟಮ್ ।**
**ತತ್ಪದಂ ತ್ವಂಪದಂ ವಾಪಿ ತ್ಯಕ್ತ್ವಾ ಸ್ವಾರ್ಥಂ ತಥಾ[7]ಖಿಲಮ್ ॥ ೭೪೫ ॥**

---

1. ಸರ್ವಜ್ಞತ್ವ, ಕಿಂಚಿಜ್ಜ್ಞತ್ವ, ಈಶ್ವರತ್ವ, ಸಂಸಾರಿತ್ವ- ಮುಂತಾದವುಗಳು.
2. ಅಖಂಡಾರ್ಥವನ್ನು.
3. 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ಹೀಗೆ ಪದಗಳೆರಡಕ್ಕೂ ಲಕ್ಷಣಾರ್ಥವನ್ನು ಸ್ವೀಕರಿಸಿ ವಾಕ್ಯಾರ್ಥವನ್ನು ಹೇಳಬೇಕೆಂಬ ಪ್ರತಿಪಾದನೆಯು ಸೂತ್ರಭಾಷ್ಯದಲ್ಲಿ ಕಾಣುವದಿಲ್ಲ. ಅಲ್ಲಿ (ಸೂ. ೪-೧-೨) ತತ್ತ್ವಂಪದಾರ್ಥಗಳ ವಿಷಯಕ್ಕೆ ಬರೆದಿರುವದನ್ನು ನೋಡಿರಿ.
4. ಇದು ಇಲ್ಲದಿದ್ದರೂ ಆಗುತ್ತಿತ್ತು.
5. 'ವಿರುದ್ಧವಾಕ್ಯಾರ್ಥಃ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
6. ೭೩೮ನ್ನು ಸೇರಿಸಿ ಲೆಕ್ಕಮಾಡಿದೆ.
7. 'ಯಥಾ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

**ತದರ್ಥಂ ವಾ ತ್ವಮರ್ಥಂ ವಾ ಯದಿ ಲಕ್ಷಯತಿ ಸ್ವಯಮ್ ।**
**ತದಾ ಜಹಲ್ಲಕ್ಷಣಾಯಾಃ ಪ್ರವೃತ್ತಿರುಪಪದ್ಯತೇ ॥ ೭೪೬ ॥**
**ನ ಶಙ್ಕನೀಯಮಿತ್ಯಾಯೈರ್ಜ್ಞಾತಾರ್ಥೇ ನ ಹಿ ಲಕ್ಷಣಾ ॥ ೭೪೬½ ॥**
**ತತ್ಪದಂ ತ್ವಂಪದಂ ವಾಪಿ ಶ್ರೂಯತೇ ಚ ಪ್ರತೀಯತೇ ।**
**ತದರ್ಥೇ ಚ ಕಥಂ ತತ್ರ ಸಂಪ್ರವರ್ತೇತ ಲಕ್ಷಣಾ ॥ ೭೪೭ ॥**

೭೩೯-೭೪೭. 'ಗಂಗೆಯಲ್ಲಿ ಹಳ್ಳಿ' ಮುಂತಾದ (ವಾಕ್ಯ)ದಲ್ಲಿ **ಜಹಲ್ಲಕ್ಷಣೆ** ಇದೆಯಲ್ಲ, ಅದು 'ಅದು ನೀನೇ ಆಗಿರುವೆ' ಎಂಬ ವಾಕ್ಯದಲ್ಲಿ ವ್ಯಾಪಾರಮಾಡುವದಿಲ್ಲ. ಗಂಗೆಗೂ ಹಳ್ಳಿಗೂ ಆಧಾರಾಧೇಯತ್ವಲಕ್ಷಣವಾಗಿರುವ ವಾಕ್ಯಾರ್ಥವು ಎಲ್ಲವೂ ಪ್ರತ್ಯಕ್ಷವಿರುದ್ಧವಾಗಿರುವದರಿಂದ ಗಂಗೆಯ ಸಂಬಂಧವುಳ್ಳ ದಡದಲ್ಲಿ (ಗಂಗಾಶಬ್ದಕ್ಕೆ) ಲಕ್ಷಣೆಯು ಆಗುತ್ತದೆ. ಹಾಗೆ 'ಅದು ನೀನೇ ಆಗಿರುವೆ' ಎಂಬ (ವಾಕ್ಯದಲ್ಲಿ) ಚೈತನ್ಯೈಕತ್ವವೆಂಬ ರೂಪದ (ವಾಕ್ಯಾರ್ಥವು) ವಿವಕ್ಷಿತವಾಗಿದ್ದರೆ ಅಪರೋಕ್ಷತ್ವವೇ ಮುಂತಾದ ಅರ್ಥದ ಭಾಗಮಾತ್ರ ವಿರುದ್ಧವಾಗಿದೆಯೇ ಹೊರತು ಎಲ್ಲವೂ ವಿರುದ್ಧವಾಗಿರುವದಿಲ್ಲ. ಆದ್ದರಿಂದ ಇಲ್ಲಿ ಜಹಲ್ಲಕ್ಷಣೆ ಎಂಬುವದರ ಪ್ರವೃತ್ತಿಯು ಯುಕ್ತವಾಗುವದಿಲ್ಲ. ತೆಂಗಿನಕಾಯಿಯು ಗಟ್ಟಿಯಾಗಿರುವದೆಂಬ ಬುದ್ಧಿಯಿಂದ ಹೇಗೆ ಜನರು ಅದನ್ನು ಬಿಡುವದರಲ್ಲಿ (ಪ್ರಯೋಜನವಿಲ್ಲವೋ) ಹಾಗೆ ಎಲ್ಲಾ ವಾಚ್ಯಾರ್ಥವನ್ನೂ ಬಿಡುವದರಲ್ಲಿ (ಯಾವ) ಫಲವೂ ಕಾಣಿಸುವದಿಲ್ಲ. ಗಂಗಾಪದವು ಹೇಗೆ ತನ್ನ ಅರ್ಥವನ್ನು ಬಿಟ್ಟು ದಡವನ್ನು ಲಕ್ಷಣೆಯಿಂದ ತಿಳಿಯಿಸುತ್ತದೆಯೋ, ಹಾಗೆಯೇ ತತ್ಪದವಾಗಲಿ ತ್ವಂಪದವಾಗಲಿ ತನ್ನ ಅರ್ಥವನ್ನೆಲ್ಲ ಬಿಟ್ಟು ತಾನೇ ತದರ್ಥವನ್ನಾಗಲಿ ತ್ವಮರ್ಥವನ್ನಾಗಲಿ (ಮತ್ತೊಂದನ್ನು) ಲಕ್ಷಣೆಯಿಂದ ತಿಳಿಯಿಸುತ್ತಿದ್ದರೆ[1] ಆಗ ಜಹಲ್ಲಕ್ಷಣೆಯು ಯುಕ್ತವಾಗುತ್ತಿತ್ತು. ಗೊತ್ತಾಗಿರುವ ಅರ್ಥದಲ್ಲಿ ಒಲ್ಲವರು ಲಕ್ಷಣಾರ್ಥವನ್ನು ಕಲ್ಪಿಸಬಾರದು. ತತ್ಪದವೂ ತ್ವಂಪದವೂ ಶ್ರುತವಾಗಿದೆ. (ಅದರರ್ಥವೂ) ಪ್ರತೀತವಾಗಿದೆ. ಹೀಗಿರುವಲ್ಲಿ ಅದರ ಅರ್ಥದಲ್ಲಿ ಹೇಗೆತಾನೆ ಲಕ್ಷಣೆಯು ಪ್ರವೃತ್ತವಾದೀತು ?

---

1. ತತ್ಪದವಾಗಲಿ ತ್ವಂಪದವಾಗಲಿ ತನ್ನ ಅರ್ಥವನ್ನು ಬಿಟ್ಟು ತ್ವಂಪದಾರ್ಥವನ್ನಾಗಲಿ ತತ್ಪದಾರ್ಥವನ್ನಾಗಲಿ ಲಕ್ಷಣೆಯಿಂದ ಹೇಳಬಹುದಲ್ಲ– ಎಂದು ಶಂಕಿಸಬಾರದು. ಏಕೆಂದರೆ ಪದಗಳೆರಡೂ ಶ್ರುತವಾಗಿದ್ದು ಅವುಗಳ ಅರ್ಥವು ಪ್ರತೀತವಾಗುತ್ತಿರುವಲ್ಲಿ ಹೀಗೆ ಒಂದು ಪದವು ಇನ್ನೊಂದರರ್ಥವನ್ನು ಲಕ್ಷಣೆಯಿಂದ ಹೇಳುತ್ತದೆ ಎಂದು ಕಲ್ಪಿಸುವದಕ್ಕೆ ಬರಲಾರದು– ಎಂದು ಭಾವ.

# ಇಲ್ಲಿ ಅಜಹಲ್ಲಕ್ಷಣೆಯೂ ಹೊಂದುವದಿಲ್ಲ

ಅತ್ರ ಶೋಣೋ ಧಾವತೀತಿ ವಾಕ್ಯವನ್ನ ಪ್ರವರ್ತತೇ ।
ಅಜಹಲ್ಲಕ್ಷಣಾ ವಾಪಿ ಸಾ ಜಹಲ್ಲಕ್ಷಣಾ ಯಥಾ ॥ ೭೪೮ ॥

ಗುಣಸ್ಯ ಗಮನಂ ಲೋಕೇ ವಿರುದ್ಧಂ ದ್ರವ್ಯಮನ್ತರಾ ।
ಅತಸ್ತಮಪರಿತ್ಯಜ್ಯ ತದ್ಗುಣಾಶ್ರಯಲಕ್ಷಣಃ ॥ ೭೪೯ ॥

ಲಕ್ಷ್ಯಾದಿರ್ಲಕ್ಷ್ಯತೇ ತತ್ರ ಲಕ್ಷಣಾಽಸೌ ಪ್ರವರ್ತತೇ ।
ವಾಕ್ಯೇ ತತ್ತ್ವಮಸೀತ್ಯತ್ರ ಬ್ರಹ್ಮಾತ್ಮೈಕತ್ವಬೋಧಕೇ ॥ ೭೫೦ ॥

ಪರೋಕ್ಷತ್ವಾಪರೋಕ್ಷತ್ವಾದಿವಿಶಿಷ್ಟಚಿತೋರ್ದ್ವಯೋಃ ।
ಏಕತ್ವರೂಪವಾಕ್ಯಾರ್ಥೋ ವಿರುದ್ಧಾಂಶವಿವರ್ಜನಾತ್ ॥ ೭೫೧ ॥

ನ ಸಿಧ್ಯತಿ ಯತಸ್ತಸ್ಮಾನ್ನಾಜಹಲ್ಲಕ್ಷಣಾ ಮತಾ । ॥ ೭೫೧½ ॥

೭೪೮–೭೫೧½. ಇಲ್ಲಿ 'ಕೆಂಪು ಓಡುತ್ತಿದೆ' ಎಂಬ ವಾಕ್ಯದಂತೆಯೂ ಹೊಂದುವದಿಲ್ಲ. ಅಜಹಲ್ಲಕ್ಷಣೆಯಿದೆಯಲ್ಲ, ಅದೂ ಜಹಲ್ಲಕ್ಷಣೆಯಂತೆಯೇ (ಇಲ್ಲಿ ಹೊಂದುವದಿಲ್ಲ). (ಶೋಣತ್ವಾದಿ)ಗುಣವು[1] ದ್ರವ್ಯವನ್ನು ಬಿಟ್ಟು ಸಂಚರಿಸುವದು ವಿರುದ್ಧ. ಆದ್ದರಿಂದ ಅದನ್ನು ಬಿಡದೆ ಆ ಗುಣಕ್ಕೆ ಆಶ್ರಯವಾದ (ದ್ರವ್ಯವನ್ನು) ಲಕ್ಷ್ಯಾರ್ಥವೇ ಮುಂತಾದದ್ದು ಎಲ್ಲಿ ಲಕ್ಷಿತವಾಗಿರುತ್ತದೆಯೋ ಅಲ್ಲಿ ಲಕ್ಷಣೆಯು ಪ್ರವರ್ತಿಸುತ್ತದೆ.[2] (ಆದರೆ) ಅದೇ ನೀನಾಗಿರುವೆ ಎಂಬ ಬ್ರಹ್ಮಾತ್ಮೈಕತ್ವವನ್ನು ಬೋಧಿಸುವ ವಾಕ್ಯದಲ್ಲಿ ಪರೋಕ್ಷತ್ವ, ಅಪರೋಕ್ಷತ್ವ– ಮುಂತಾದ (ಧರ್ಮ)ಗಳಿಂದ ವಿಶಿಷ್ಟವಾಗಿರುವ ಎರಡು ಚೈತನ್ಯಗಳಿಗೆ ಏಕತ್ವರೂಪವಾದ ವಾಕ್ಯಾರ್ಥವು ವಿರುದ್ಧಾಂಶವನ್ನು ಬಿಡದೆ ಸಿದ್ಧಿಸುವದೇ ಇಲ್ಲವಷ್ಟೆ[3] ? ಆದ್ದರಿಂದ (ಇಲ್ಲಿ) ಅಜಹಲ್ಲಕ್ಷಣೆಯು ಸಮ್ಮತವಲ್ಲ.

---

1. 'ಶೋಣೋ ಧಾವತಿ' (ಕೆಂಪು ಓಡುತ್ತಿದೆ) ಎಂಬ ವಾಕ್ಯವನ್ನು ವೇದಾಂತಸಾರ (ಪು. ೬೦)ರಲ್ಲಿ ಕೊಟ್ಟಿರುವದನ್ನೇ ಇಲ್ಲಿ ತೆಗೆದುಕೊಂಡಿದೆ ಎಂಬುದು ಸ್ಪಷ್ಟ.

2. ಕೆಂಪುಬಣ್ಣದ ಕುದುರೆ ಓಡುತ್ತದೆ ಎಂದು ಕೆಂಪೆಂಬ ಗುಣವನ್ನು ಬಿಡದೆ ಕುದುರೆ ಯೆಂಬ ಲಕ್ಷ್ಯಾರ್ಥವನ್ನು ಅಲ್ಲಿ ಹೇಳಿರುವದರಿಂದ ಅಜಹಲ್ಲಕ್ಷಣೆ ಎಂಬುದು ಸರಿ.

3. ತ್ವಂಪದಾರ್ಥವು ಅಪರೋಕ್ಷ, ತತ್ಪದಾರ್ಥವು ಪರೋಕ್ಷ; ಇಲ್ಲಿ ಪರೋಕ್ಷತ್ವ, ಅಪರೋಕ್ಷತ್ವ– ಇವೆರಡನ್ನೂ ಬಿಟ್ಟು ಕೇವಲ ಚೈತನ್ಯವನ್ನೇ ತೆಗೆದುಕೊಬೇಕೆಂಬುದು ಸ್ಪಷ್ಟ. ಆದ್ದರಿಂದ ಅಜಹಲ್ಲಕ್ಷಣೆಯಾಗುವಂತಿಲ್ಲ.

## ಭಾಗಲಕ್ಷಣೆ ಏತಕ್ಕೆ ?

ತತ್ಪದಂ ತ್ವಂಪದಂ ವಾಪಿ[1] ಸ್ವಕೀಯಾರ್ಥವಿರೋಧಿನಮ್ ॥ ೭೫೨ ॥

ಅಂಶಂ ಸಮ್ಯಕ್ ಪರಿತ್ಯಜ್ಯ ಸ್ವಾವಿರುದ್ಧಾಂಶಸಂಯುತಮ್ ।
ತ್ವಮರ್ಥಂ ವಾ ತದರ್ಥಂ[2] ವಾ ಸಮ್ಯಗ್ ಲಕ್ಷಯತಃ ಸ್ವಯಮ್ ॥ ೭೫೩ ॥

ಭಾಗಲಕ್ಷಣಯಾ ಸಾಧ್ಯಂ ಕಿಮಸ್ತೀತಿ ನ ಶಙ್ಕ್ಯತಾಮ್ ।
ಅವಿರುದ್ಧಂ ಪದಾರ್ಥಾನ್ತರಾಂಶಂ ಸ್ವಾಂಶಂ ಚ ತತ್ಕಥಮ್ ॥ ೭೫೪ ॥

ಏಕಂ ಪದಂ ಲಕ್ಷಣಯಾ ಸಂಲಕ್ಷಯಿತುಮರ್ಹತಿ ।
ಪದಾನ್ತರೇಣ ಸಿದ್ಧಾಯಾಂ ಪದಾರ್ಥಪ್ರಮಿತೌ ಸ್ವತಃ ॥ ೭೫೫ ॥

ತದರ್ಥಪ್ರತ್ಯಯಾಪೇಕ್ಷಾ ಪುನರ್ಲಕ್ಷಣಯಾ ಕುತಃ ।
ತಸ್ಮಾತ್ ತತ್ತ್ವಮಸೀತ್ಯತ್ರ ಲಕ್ಷಣಾ ಭಾಗಲಕ್ಷಣಾ ॥ ೭೫೬ ॥

ವಾಕ್ಯಾರ್ಥಸತ್ತ್ವಾಖಣ್ಡೈಕರಸತಾಸಿದ್ಧಯೇ ಮತಾ ॥ ೭೫೭ ॥

೭೫೨–೭೫೭. 'ತತ್ಪದವಾಗಲಿ ತ್ವಂಪದವಾಗಲಿ ತನ್ನ ಅರ್ಥಕ್ಕೆ ವಿರುದ್ಧವಾಗಿರುವ ಅಂಶವನ್ನು ಬಿಟ್ಟುಬಿಟ್ಟು ತನಗೆ ಅವಿರುದ್ಧವಾದ ಅಂಶದಿಂದೊಡಗೂಡಿದ ತ್ವಂಪದಾರ್ಥವನ್ನೋ ತತ್ಪದಾರ್ಥವನ್ನೋ[3] ತಾವೇ ಸರಿಯಾದ ಲಕ್ಷಣಾವೃತ್ತಿಯಿಂದ ತಿಳಿಸಬಹುದಲ್ಲ! ಭಾಗಲಕ್ಷಣೆಯಿಂದ ಆಗಬೇಕಾದದ್ದೇನಿದೆ? ಎಂದು ಶಂಕಿಸಬಾರದು. ಆ ಒಂದೇ ಪದವು ಅವಿರುದ್ಧವಾದ ಮತ್ತೊಂದು ಪದಾರ್ಥದ ಅಂಶವನ್ನೂ ತನ್ನ ಅಂಶವನ್ನೂ ಹೇಗೆ ಲಕ್ಷಣೆಯಿಂದ ತಿಳಿಸೀತು? ಮತ್ತೊಂದು ಪದದಿಂದ (ಆ) ಪದಾರ್ಥದ ಸಮ್ಯಗ್ಜ್ಞಾನವು ತಾನೇ ಸಿದ್ಧವಾಗಿರುವಲ್ಲಿ ಅದೇ ಅರ್ಥವನ್ನು ಲಕ್ಷಣೆಯಿಂದ ತಿಳಿಯುವ ಅಪೇಕ್ಷೆ ಮತ್ತೆ ಹೇಗೆ ಆದೀತು?

ಆದ್ದರಿಂದ 'ತತ್ತ್ವಮಸಿ' ಎಂಬಲ್ಲಿ ವಾಕ್ಯಾರ್ಥ ಸಿದ್ಧಿಸುವದಕ್ಕೂ **ಅಖಂಡೈಕರಸತ್ವವು** ಸಿದ್ಧವಾಗುವದಕ್ಕೂ **ಭಾಗಲಕ್ಷಣೆ** ಎಂಬ ಲಕ್ಷಣೆಯೇ ಸಮ್ಮತವಾಗಿರುತ್ತದೆ.

---

1. 'ಚಾಪಿ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. ಈ ಪಾದವನ್ನು ಹೀಗೆ ತಿದ್ದಿಕೊಂಡಿರುತ್ತದೆ.

3. ತತ್ಪದವು ತ್ವಂಪದದ ಅವಿರುದ್ಧಾಂಶವನ್ನೂ ತ್ವಂಪದವು ತತ್ಪದದ ಅವಿರುದ್ಧಾಂಶವನ್ನೂ ಲಕ್ಷಣೆಯಿಂದ ತಾನೇ ತಿಳಿಯಿಸಲಿ – ಎಂದು ಆಕ್ಷೇಪ. ವೇದಾಂತಸಾರದಲ್ಲಿ (ಪು. ೯೦) ಇದನ್ನು ಸ್ಪಷ್ಟತರವಾಗಿ ಬರೆದಿದೆ. ಎರಡು ಪದಕ್ಕೂ ಲಕ್ಷಣೆ ಏಕೆ? – ಎಂಬ ಭಾವವೂ ಶಂಕೆಯಲ್ಲಿದೆ.

ಭಾಗಂ ವಿರುದ್ಧಂ ಸಂತ್ಯಜ್ಯಾವಿರೋಧೋ ಲಕ್ಷ್ಯತೇ ಯದಾ ।
ಸಾ ಭಾಗಲಕ್ಷಣೇತ್ಯಾಹುರ್ಲಕ್ಷಣಜ್ಞಾ ವಿಚಕ್ಷಣಾಃ ॥ ೨೫೭ ॥

ಸೋಽಯಂ ದೇವದತ್ತ ಇತಿ ವಾಕ್ಯಂ ವಾಕ್ಯಾರ್ಥ ಏವ ವಾ ।
ದೇವದತ್ತೈಕ್ಯರೂಪಸ್ಯ ವಾಕ್ಯಾರ್ಥಾನವಬೋಧಕಮ್ ॥ ೨೫೮ ॥

ದೇಶಕಾಲಾದಿವೈಶಿಷ್ಟ್ಯಂ ವಿರುದ್ಧಾಂಶಂ ನಿರಸ್ಯ ಚ ।
ಅವಿರುದ್ಧಂ ದೇವದತ್ತದೇಹಮಾತ್ರಂ ಸ್ವಲಕ್ಷಣಮ್ ॥ ೨೫೯ ॥

ಭಾಗಲಕ್ಷಣಯಾ ಸಮ್ಯಗ್ ಲಕ್ಷಯತ್ಯನಯಾ ಯಥಾ ।
ತಥಾ ತತ್ತ್ವಮಸೀತ್ಯತ್ರ ವಾಕ್ಯಂ ವಾಕ್ಯಾರ್ಥ ಏವ ವಾ ॥ ೨೬೦ ॥

ಪರೋಕ್ಷತ್ವಾಪರೋಕ್ಷತ್ವಾದಿವಿಶಿಷ್ಟಚಿತೋರ್ದ್ವಯೋಃ ।
ಏಕತ್ವರೂಪವಾಕ್ಯಾರ್ಥವಿರುದ್ಧಾಂಶಮುಪಸ್ಥಿತಮ್ ॥ ೨೬೧ ॥

ಪರೋಕ್ಷತ್ವಾಪರೋಕ್ಷತ್ವಸರ್ವಜ್ಞತ್ವಾದಿಲಕ್ಷಣಮ್ ।
ಬುದ್ಧ್ಯಾದಿಸ್ಥೂಲಪರ್ಯನ್ತಮಾವಿದ್ಯಕಮನಾತ್ಮಕಮ್ ॥ ೨೬೨ ॥

ಪರಿತ್ಯಜ್ಯ ವಿರುದ್ಧಾಂಶಂ ಶುದ್ಧಚೈತನ್ಯಲಕ್ಷಣಮ್ ।
ವಸ್ತು ಕೇವಲಸನ್ಮಾತ್ರಂ ನಿರ್ವಿಕಲ್ಪಂ ನಿರಞ್ಜನಮ್ ॥ ೨೬೩ ॥

ಲಕ್ಷಯತ್ಯನಯಾ ಸಮ್ಯಗ್ ಭಾಗಲಕ್ಷಣಯಾ ತತಃ ।
ಸರ್ವೋಪಾಧಿವಿನಿರ್ಮುಕ್ತಂ ಸಚ್ಚಿದಾನನ್ದಮದ್ವಯಮ್ ॥ ೨೬೪ ॥

ನಿರ್ವಿಶೇಷಂ ನಿರಾಭಾಸಮತಾದೃಶಮನೀದೃಶಮ್ ।
ಅನಿರ್ದೇಶ್ಯಮನಾದ್ಯನ್ತಮನನ್ತಂ ಶಾನ್ತಮಚ್ಯುತಮ್ ॥ ೨೬೫ ॥
ಅಪ್ರತರ್ಕ್ಯಮವಿಜ್ಞೇಯಂ ನಿರ್ಗುಣಂ ಬ್ರಹ್ಮ ಶಿಷ್ಯತೇ ॥ ೨೬೬[1] ॥

೨೫೭-೨೬೬. ವಿರುದ್ಧವಾದ ಭಾಗವನ್ನು ಬಿಟ್ಟು ಅವಿರುದ್ಧಾರ್ಥವನ್ನು ಯಾವಾಗ ಲಕ್ಷಣೆಯಿಂದ ಹೇಳುವರೋ ಆಗ ಅದನ್ನು ಲಕ್ಷಣಜ್ಞರಾದ ವಿಚಕ್ಷಣರು ಭಾಗಲಕ್ಷಣೆ ಎನ್ನುವರು. 'ಆ ಇವನೇ ದೇವದತ್ತನು'[2] ಎಂಬ ವಾಕ್ಯವಾಗಲಿ ವಾಕ್ಯಾರ್ಥವಾಗಲಿ ದೇವದತ್ತನು ಒಬ್ಬನೇ ಎಂಬ ವಾಕ್ಯಾರ್ಥವನ್ನು ತಿಳಿಸುವದಿಲ್ಲವಾಗಿ ದೇಶಕಾಲಾದಿಗಳಿಂದ ವಿಶಿಷ್ಟವಾಗಿರುವಿಕೆ ಎಂಬ ವಿರುದ್ಧಾಂಶವನ್ನು ಬಿಟ್ಟು ಅವಿರುದ್ಧವಾದ ದೇವದತ್ತದೇಹಮಾತ್ರವೆಂಬ ಸ್ವರೂಪವನ್ನು ಈ ಭಾಗಲಕ್ಷಣೆಯಿಂದ ಹೇಗೆ ಚೆನ್ನಾಗಿ ತಿಳಿಸಿಕೊಡುತ್ತದೆಯೋ, ಹಾಗೆಯೇ ತತ್ತ್ವಮಸಿ ಎಂಬಲ್ಲಿ

---

1. ೨೫೬ಗ್ರಯನ್ನು ಸೇರಿಸಿ ಲೆಕ್ಕಮಾಡಿದೆ.

2. 'ಸೋಽಯಮ್' ಎಂಬ ವಾಕ್ಯವನ್ನು 'ತತ್ತ್ವಮಸಿ'ವಾಕ್ಯಕ್ಕೆ ದೃಷ್ಟಾಂತವಾಗಿ ಮೊಟ್ಟಮೊದಲು ಪಂಚಪಾದಿಕೆಯಲ್ಲಿ ಕೊಟ್ಟಿರುತ್ತದೆ.

ವಾಕ್ಯವಾಗಲಿ ವಾಕ್ಯಾರ್ಥವಾಗಲಿ[1] ಪರೋಕ್ಷತ್ವ, ಅಪರೋಕ್ಷತ್ವ- ಮುಂತಾದವು ಗಳಿಂದ ಕೂಡಿರುವ ಎರಡು ಚೈತನ್ಯಗಳಿಗೂ ಏಕತ್ವರೂಪವಾದ ವಾಕ್ಯಾರ್ಥದಲ್ಲಿ ಬಂದೊದಗಿದ ವಿರುದ್ಧಾಂಶವನ್ನು – ಎಂದರೆ ಪರೋಕ್ಷತ್ವಾಪರೋಕ್ಷತ್ವಸರ್ವಜ್ಞತ್ವ ವೇ ಮುಂತಾದ ರೂಪದ ಬುದ್ಧಿಯೇ ಮೊದಲಾಗಿ ಸ್ಥೂಲದೇಹದವರೆಗಿನ ಅವಿದ್ಯಾ ಕಲ್ಪಿತವಾದ ಅನಾತ್ಮವನ್ನು ಬಿಟ್ಟು – ಕೇವಲ ಸನ್ಮಾತ್ರವೂ ನಿರ್ವಿಕಲ್ಪವೂ ನಿರಂಜನವೂ ಆಗಿರುವ ಶುದ್ಧಚೈತನ್ಯರೂಪವಾದ ವಸ್ತುವನ್ನು ಈ ಭಾಗಲಕ್ಷಣೆ ಯಿಂದ ಚೆನ್ನಾಗಿ ತಿಳಿಸುತ್ತದೆ. ಬಳಿಕ ಯಾವ ಉಪಾಧಿಯೂ ಇಲ್ಲದ್ದೂ ಸಚ್ಚಿದಾನಂದವೂ ಅದ್ವಯವೂ ನಿರ್ವಿಶೇಷವೂ ನಿರಾಭಾಸವೂ ಅಂಥದ್ದಲ್ಲದ್ದೂ ಇಂಥದ್ದೂ ಅಲ್ಲದ್ದೂ ನಿರ್ದೇಶಿಸಿ ತಿಳಿಸುವದಕ್ಕೆ ಬಾರದ ಆದ್ಯಂತರಹಿತವೂ ಅನಂತವೂ ಶಾಂತವೂ ಅಚ್ಯುತವೂ ತರ್ಕಿಸುವದಕ್ಕಾಗದ್ದೂ ಅರಿಯುವದಕ್ಕೆ ಆಗದ್ದೂ ಆದ ನಿರ್ಗುಣಬ್ರಹ್ಮವು ಉಳಿದಿರುತ್ತದೆ.

## ವಾಕ್ಯಾರ್ಥದಲ್ಲಿ ವಿರೋಧವಿರುವದಿಲ್ಲ

**ಉಪಾಧಿವೈಶಿಷ್ಟ್ಯಕೃತೋ ವಿರೋಧೋ**
**ಬ್ರಹ್ಮಾತ್ಮನೋರೇಕತಯಾಽಧಿಗತ್ಯಾ ।**
**ಉಪಾಧಿವೈಶಿಷ್ಟ್ಯೇ ಉದಸ್ಯಮಾನೇ**
**ನ ಕಶ್ಚಿದಪ್ಯಸ್ತಿ ವಿರೋಧ ಏತಯೋಃ ॥ ೭೬೭ ॥**

**ತಯೋರುಪಾಧಿಶ್ಚ ವಿಶಿಷ್ಟತಾ ಚ**
**ತದ್ಧರ್ಮಭಾಕ್ತ್ವಂ ಚ ವಿಲಕ್ಷಣತ್ವಮ್ ।**
**ಭ್ರಾನ್ತ್ಯಾ ಕೃತಂ ಸರ್ವಮಿದಂ ಮೃಷೈವ**
**ಸ್ವಪ್ನಾರ್ಥವಜ್ಜಾಗ್ರತಿ ನೈವ ಸತ್ಯಮ್ ॥ ೭೬೮ ॥**

**ನಿದ್ರಾಸೂತಶರೀರಧರ್ಮಸುಖದುಃಖಾದಿಪ್ರಪಞ್ಚೋಽಪಿ ವಾ**
**ಜೀವೇಶಾದಿಭಿದಾಪಿ ವಾ ನ ಚ ಋತಂ ಕರ್ತುಂ ಕ್ವಚಿಚ್ಛಕ್ಯತೇ ।**
**ಮಾಯಾಕಲ್ಪಿತದೇಶಕಾಲಜಗದೀಶಾದಿಭ್ರಮಸ್ತಾದೃಶಃ**
**ಕೋ ಭೇದೋಽಸ್ತ್ಯನಯೋರ್ದ್ವಯೋಸ್ತು ಕತಮಃ ಸತ್ಯೋಽನ್ಯತಃ ಕೋ ಭವೇತ್ ॥**

---

1. 'ವಾಕ್ಯವಾಗಲಿ ವಾಕ್ಯಾರ್ಥವಾಗಲಿ ವಿಶಿಷ್ಟಾಂಶಕ್ಕೆ ವಿರುದ್ಧವಾಗಿರುವದರಿಂದ ಅವಿರುದ್ಧವಾದ ಅಂಶವನ್ನು ಲಕ್ಷಣೆಯಿಂದ ತಿಳಿಸುತ್ತದೆ'– ಎಂಬಲ್ಲಿ ವಾಕ್ಯವು ತಿಳಿಸಬಹುದು, ವಾಕ್ಯಾರ್ಥವು ತಿಳಿಸುತ್ತದೆ ಎಂದರೇನು ? ಇದು ಗೊತ್ತಾಗುವದಿಲ್ಲ. ವೇದಾಂತಸಾರದಲ್ಲಿ (ಪು. ೯೨) ಹೀಗೆಯೇ ಬರೆದಿದೆ.

ನ ಸ್ವಪ್ನಜಾಗರಣಯೋರುಭಯೋರ್ವಿಶೇಷಃ
ಸಂದೃಶ್ಯತೇ ಕ್ವಚಿದಪಿ ಭ್ರಮಜೈರ್ವಿಕಲ್ಪೈಃ ।
ಯದ್ದೃಷ್ಟದರ್ಶನಮುಖೈರತ ಏವ ಮಿಥ್ಯಾ
ಸ್ವಪ್ನೋ ಯಥಾ ನನು ತಥೈವ ಹಿ ಜಾಗರೋಽಪಿ ॥ ೨೨೦ ॥

ಅವಿದ್ಯಾಕಾರ್ಯತಸ್ತುಲ್ಯೌ ದ್ವಾವಪಿ ಸ್ವಪ್ನಜಾಗರೌ ।
ದ್ರಷ್ಟೃದರ್ಶನದೃಶ್ಯಾದಿಕಲ್ಪನೋಭಯತಃ ಸಮಾ ॥ ೨೨೧ ॥

ಅಭಾವ ಉಭಯೋಃ ಸುಪ್ತೌ ಸರ್ವೈರಪ್ಯನುಭೂಯತೇ ।
ನ ಕಶ್ಚಿದನಯೋರ್ಭೇದಃ ತಸ್ಮಾನ್ಮಿಥ್ಯಾತ್ವಮರ್ಹತಃ ॥ ೨೨೨ ॥

ಭ್ರಾನ್ತ್ಯಾ ಬ್ರಹ್ಮಣಿ ಭೇದೋಽಯಂ ಸಜಾತೀಯಾದಿಲಕ್ಷಣಃ ।
ಕಾಲತ್ರಯೇಽಪಿ ಹೇ ವಿದ್ವನ್ ವಸ್ತುತೋ ನೈವ ಕಶ್ಚನ ॥ ೨೨೩ ॥

೨೬೨–೨೨೩. ಬ್ರಹ್ಮಾತ್ಮರುಗಳು ನಿಜವಾಗಿ ಒಬ್ಬನೇ ಎಂದು ತಿಳಿದುಕೊಂಡದ್ದರಿಂದ ಉಪಾಧಿವಿಶಿಷ್ಟತ್ವದಿಂದ ವಿರೋಧವು ಆಗಿತ್ತು. ಉಪಾಧಿವಿಶಿಷ್ಟತ್ವವನ್ನು ತಿರಸ್ಕರಿಸಲಾಗಿ ಇವರಿಬ್ಬರಿಗೂ ಯಾವ ವಿರೋಧವೂ ಇರುವದಿಲ್ಲ. ಅವರಿಬ್ಬರ ಉಪಾಧಿಗೂ ಉಪಾಧಿವಿಶಿಷ್ಟತ್ವ, ಆ ಉಪಾಧಿಗಳ ಧರ್ಮವನ್ನು ಹೊಂದಿರುವದು, ಒಬ್ಬರಿಗೊಬ್ಬರು ವಿಲಕ್ಷಣಸ್ವಭಾವದವರಾಗಿರುವದು– ಇದೆಲ್ಲವೂ ಭ್ರಾಂತಿಯಿಂದಾದದ್ದು, ಹುಸಿಯೇ. ಕನಸಿನಲ್ಲಿದ್ದ ವಸ್ತು ಎಚ್ಚರದಲ್ಲಿ ಹೇಗೋ ಹಾಗೆ ಸತ್ಯವಲ್ಲವೇ ಅಲ್ಲ. ನಿದ್ರೆಯಿಂದುಂಟಾದ ಶರೀರ, ಧರ್ಮ, ಸುಖದುಃಖಗಳು, ಅಥವಾ ಪ್ರಪಂಚ, ಜೀವೇಶ್ವರಾದಿಭೇದ ಇವುಗಳು ಯಾವವನ್ನೂ ನಿಜಹಾಗಿ ಮಾಡುವದಕ್ಕೆ ಎಲ್ಲಿಯೂ ಶಕ್ಯವಲ್ಲ. ಮಾಯಾಕಲ್ಪಿತವಾದ ದೇಶ, ಕಾಲ, ಜಗತ್ತು, ಈಶ್ವರ– ಮುಂತಾದ ಭ್ರಮವೂ ಅಂಥದ್ದೇ. ಈ ಎರಡಕ್ಕೂ ಯಾವ ಭೇದವಿದೆ? ಇವುಗಳೆರಡರಲ್ಲಿ ಯಾವದು ಸತ್ಯ? ಮತ್ತೊಂದರಿಂದ ಯಾವದು ತಾನೆ ಆಗಿದ್ದೀತು[1]? ಕನಸು, ಎಚ್ಚರ– (ಇವೆರಡರಲ್ಲಿರುವ) ದ್ರಷ್ಟೃ (ನೋಡುವವ), ದರ್ಶನ (ನೋಟ)– ಮುಂತಾದವುಗಳಿಗೂ ಭ್ರಾಂತಿಕಲ್ಪಿತವಿಕಲ್ಪಗಳಿಗೂ ಯಾವ ವಿಶೇಷವೂ ಕಾಣಿಸುವದಿಲ್ಲ. ಕನಸು ಹೇಗೋ ಹಾಗೆಯೇ ಎಚ್ಚರವೂ ಅಲ್ಲವೆ? ಸ್ವಪ್ನಜಾಗರಿತಗಳೆರಡೂ ಅವಿದ್ಯಾಕಾರ್ಯವಾಗಿರುವದರಿಂದ ಸಮಾನವಾಗಿರುತ್ತವೆ. ದ್ರಷ್ಟೃ, ದರ್ಶನ, ದೃಶ್ಯ– ಮುಂತಾದ ಕಲ್ಪನೆಯು ಎರಡಕ್ಕೂ ಸಮವಾಗಿರುತ್ತದೆ. ಗಾಢನಿದ್ರೆಯಲ್ಲಿ ಅವೆರಡಕ್ಕೂ ಅಭಾವವಾಗುವದೆಂಬುದು

---

1. ನಿದ್ರೆಯಿಂದಾದ ಕನಸಿನಲ್ಲಿ ಕಾಣುವ ಪದಾರ್ಥಗಳು ಹೇಗೆ ಹುಸಿಯೋ ಹಾಗೆಯೇ ಎಚ್ಚರದಲ್ಲಿಯೂ ಮಾಯೆಯಿಂದಾಗಿರುವ ದೇಶಕಾಲಾದಿಗಳೂ ಹುಸಿಯೇ. ಇವುಗಳೊಳಗೆ ಯಾವದೊಂದೂ ಮತ್ತೊಂದರಿಂದ ಆಗಿರುವದಿಲ್ಲ. ವಿವೇಕಚೂಡಾಮಣಿ ೫೦ನ್ನು ನೋಡಿ.

ಎಲ್ಲರ ಅನುಭವಕ್ಕೂ ಬರುತ್ತದೆ. ಇವೆರಡಕ್ಕೆ ಯಾವ ಭೇದವೂ ಇರುವದಿಲ್ಲ. ಆದ್ದರಿಂದ ಅವು ಹುಸಿಯೆಂದೇ ಆಯಿತು. ಎಲೈ ವಿವೇಕಿಯೆ, ಈ ಸಜಾತೀಯವೇ ಮುಂತಾದ[1] ಭೇದವು ಬ್ರಹ್ಮದಲ್ಲಿ ಭ್ರಾಂತಿಯಿಂದಾದದ್ದು, ನಿಜವಾಗಿ ಯಾವದೊಂದೂ ಮೂರು ಕಾಲದಲ್ಲಿಯೂ ಇರುವದೇಇಲ್ಲ.

## ಅದ್ವಿತೀಯತತ್ತ್ವೋಪದೇಶ

ಯತ್ರ ನಾನ್ಯತ್ ಪಶ್ಯತೀತಿ ಶ್ರುತಿರ್ದ್ವೈತಂ ನಿಷೇಧತಿ ।
ಕಲ್ಪಿತಸ್ಯ ಭ್ರಮಾದ್ ಭೂಮ್ನಿ ಮಿಥ್ಯಾತ್ವಾವಗಮಾಯ ತತ್ ॥ ೨೨೪ ॥

ಯತಸ್ತತೋ ಬ್ರಹ್ಮ ಸದಾದ್ವಿತೀಯಂ
ವಿಕಲ್ಪಶೂನ್ಯಂ ನಿರುಪಾಧಿ ನಿರ್ಮಲಮ್ ।
ನಿರನ್ತರಾನನ್ದಘನಂ ನಿರೀಹಂ
ನಿರಾಸ್ಪದಂ ಕೇವಲಮೇಕಮೇವ ॥ ೨೨೫ ॥

ನೈವಾಸ್ತಿ ಕಾಚನ ಭಿದಾ ನ ಗುಣಪ್ರತೀತಿ-
ರ್ನೋ ವಾಕ್ಪ್ರವೃತ್ತಿರಪಿ ವಾ ನ ಮನಃಪ್ರವೃತ್ತಿಃ ।
ಯತ್ ಕೇವಲಂ ಪರಮಶಾನ್ತಮನನ್ತಮಾದ್ಯ-
ಮಾನನ್ದಮಾತ್ರಮವಭಾತಿ ಸದದ್ವಿತೀಯಮ್ ॥ ೨೨೬ ॥

ಯದಿದಂ ಪರಮಂ ಸತ್ಯಂ ತತ್ತ್ವಂ ಸಚ್ಚಿತ್ಸುಖಾತ್ಮಕಮ್ ।
ಅಜರಾಮರಣಂ ನಿತ್ಯಂ ಸತ್ಯಮೇತದ್ ವಚೋ ಮಮ ॥ ೨೨೭ ॥

ನ ಹಿ ತ್ವಂ ದೇಹೋಽಸಾವಸುರಪಿ ಚ ನಾಪ್ಯಕ್ಷನಿಕರೋ
ಮನೋ ವಾ ಬುದ್ಧಿರ್ವಾ ಕ್ವಚಿದಪಿ ತಥಾಹಙ್ಕೃತಿರಪಿ ।
ನ ಚೈಷಾಂ ಸಙ್ಘಾತಸ್ತ್ವಮು ಭವಸಿ[2] ವಿದ್ವನ್ ಶೃಣು ಪರಂ
ಯದೇತೇಷಾಂ ಸಾಕ್ಷೀ ಸ್ಫುರಣಮಮಲಂ ತತ್ತ್ವಮಸಿ ಹಿ ॥ ೨೨೮ ॥

ಯಜ್ಜಾಯತೇ ವಸ್ತು ತದೇವ ವರ್ಧತೇ
ತದೇವ ಮೃತ್ಯುಂ ಸಮುಪೈತಿ ಕಾಲೇ ।
ಜನ್ಮೈವ ತೇ ನಾಸ್ತಿ ತಥೈವ ಮೃತ್ಯು-
ರ್ನಾಸ್ತ್ಯೇವ ನಿತ್ಯಸ್ಯ ವಿಭೋರಜಸ್ಯ ॥ ೨೨೯ ॥

---

1. ಸಜಾತೀಯ, ವಿಜಾತೀಯ, ಸ್ವಗತ–ಎಂಬ ಭೇದವು ಎಂದರ್ಥ. ಜಾಗ್ರತ್ಸ್ವಪ್ನಗಳು ಎರಡೂ ಮಿಥ್ಯೆ–ಎಂಬ ವಿವರವಾದ ಈ ಭಾಗವು ವೇದಾಂತಸಾರದಲ್ಲಿಲ್ಲ. ವಿವೇಕಚೂಡಾಮಣಿಯಲ್ಲಿ (ಶ್ಲೋ. ೨೫೦ರಲ್ಲಿ) ಇದರ ಸೂಚನೆ ಇದೆ.

2. 'ಭವತಿ' ಎಂಬುದನ್ನು 'ಭವಸಿ' ಎಂದು ತಿದ್ದಿಕೊಂಡಿದೆ.

ಯ ಏಷ ದೇಹೋ ಜನಿತಃ ಸ ಏವ
ಸಮೇಧತೇ ನಶ್ಯತಿ ಕರ್ಮಯೋಗಾತ್ ।
ತ್ವಮೇತದೀಯಾಸ್ವಖಿಲಾಸ್ವವಸ್ಥಾ-
ಸ್ವವಸ್ಥಿತಃ ಸಾಕ್ಷ್ಯಸಿ ಬೋಧಮಾತ್ರಮ್ ॥ ೭೮೦ ॥

ಯತ್ಸ್ವಪ್ರಕಾಶಮಖಿಲಾತ್ಮಕಮಾಸುಷುಪ್ತೇ-
ರೇಕಾತ್ಮನಾಹಮಹಮಿತ್ಯವಭಾತಿ ನಿತ್ಯಮ್ ।
ಬುದ್ಧೇಃ ಸಮಸ್ತವಿಕೃತೇರವಿಕಾರಿ ಬೋದ್ಧೃ
ಯದ್ಬ್ರಹ್ಮ ತತ್ತ್ವಮಸಿ ಕೇವಲಬೋಧಮಾತ್ರಮ್ ॥ ೭೮೧[1]

ಸ್ವಾತ್ಮನ್ಯನಸ್ತಮಯಸಂವಿದಿ ಕಲ್ಪಿತಸ್ಯ
ವ್ಯೋಮಾದಿಸರ್ವಜಗತಃ ಪ್ರದದಾತಿ ಸತ್ತಾಮ್ ।
ಸ್ಫೂರ್ತಿಂ ಸ್ವಕೀಯಮಹಸಾ ವಿತನೋತಿ ಸಾಕ್ಷಾದ್
ಯದ್ಬ್ರಹ್ಮ ತತ್ತ್ವಮಸಿ ಕೇವಲಬೋಧಮಾತ್ರಮ್ ॥ ೭೮೨

ಸಮ್ಯಕ್ಸಮಾಧಿನಿರತೈರ್ವಿಮಲಾನ್ತರಙ್ಗೇ
ಸಾಕ್ಷಾದವೇಕ್ಷ್ಯ ನಿಜತತ್ತ್ವಮಪಾರಸೌಖ್ಯಮ್ ।
ಸನ್ತುಷ್ಯತೇ ಪರಮಹಂಸಕುಲೈರಜಸ್ರಂ
ಯದ್ ಬ್ರಹ್ಮ ತತ್ತ್ವಮಸಿ ಕೇವಲಬೋಧಮಾತ್ರಮ್ । ೭೮೩

ಅನ್ತರ್ಬಹಿಃ ಸ್ವಯಮಖಣ್ಡಿತಮೇಕರೂಪ-
ಮಾರೋಪಿತಾರ್ಥವದುದಞ್ಚತಿ ಮೂಢಬುದ್ಧೇಃ ।
ಮೃತ್ಸ್ನಾದಿವದ್ ವಿಗತವಿಕ್ರಿಯಮಾತ್ಮವೇದ್ಯಂ
ಯದ್ ಬ್ರಹ್ಮ ತತ್ತ್ವಮಸಿ ಕೇವಲಬೋಧಮಾತ್ರಮ್ ॥ ೭೮೪ ॥

ಶ್ರುತ್ಯುಕ್ತಮವ್ಯಯಮನನ್ತಮನಾದಿಮಧ್ಯ-
ಮವ್ಯಕ್ತಮಕ್ಷರಮನಾಶ್ರಯಮಪ್ರಮೇಯಮ್ ।
ಆನನ್ದಸದ್ಘನಮನಾಮಯಮದ್ವಿತೀಯಂ
ಯದ್ ಬ್ರಹ್ಮ ತತ್ತ್ವಮಸಿ ಕೇವಲಬೋಧಮಾತ್ರಮ್ ॥

ಶರೀರತದ್ಯೋಗತದೀಯಧರ್ಮಾ-
ದ್ಯಾರೋಪಣಂ ಭ್ರಾನ್ತಿವಶಾತ್ ತ್ವಯೀದಮ್ ।
ನ ವಸ್ತುತಃ ಕಿಞ್ಚಿದತಸ್ತ್ವಜಸ್ತ್ವಂ
ಮೃತ್ಯೋರ್ಭಯಂ ಕ್ವಾಸ್ತಿ ತವಾಸಿ ಪೂರ್ಣಃ ॥ ೭೮೬ ॥

1. ಇಲ್ಲಿಂದ ಮುಂದೆ ೭೮೫ನೆಯ ಶ್ಲೋಕದವರೆಗೆ ಕೊನೆಯ ಚರಣವು ಒಂದೇ ಆಗಿದೆ.

ಯದ್ಯದ್ ದೃಷ್ಟಂ ಭ್ರಾನ್ತಿಮತ್ಯಾ ಸ್ವದೃಷ್ಟ್ಯಾ
ತತ್ತತ್ಸಮ್ಯಕ್ ವಸ್ತುದೃಷ್ಟ್ಯಾ ತ್ವಮೇವ |
ತ್ವತ್ತೋ ನಾನ್ಯದ್ ವಸ್ತು ಕಿಞ್ಚಿತ್ತು ಲೋಕೇ
ಕಸ್ಮಾದ್ ಭೀತಿಸ್ತೇ ಭವೇದದ್ವಯಸ್ಯ || ೭೮೭ ||

ಪಶ್ಯತಸ್ತ್ವಹಮೇವೇದಂ ಸರ್ವಮಿತ್ಯಾತ್ಮನಾಖಿಲಮ್ |
ಭಯಂ ಸ್ಯಾದ್ ವಿದುಷಃ ಕಸ್ಮಾತ್ ಸ್ವಸ್ಮಾನ್ನ ಭಯಮಿಷ್ಯತೇ || ೭೮೮ ||

ತಸ್ಮಾತ್ ತ್ವಮಭಯಂ ನಿತ್ಯಂ ಕೇವಲಾನನ್ದಲಕ್ಷಣಮ್ |
ನಿಷ್ಕಲಂ ನಿಷ್ಕ್ರಿಯಂ ಶಾನ್ತಂ ಬ್ರಹ್ಮೈವಾಸಿ ಸದಾದ್ವಯಮ್ || ೭೮೯ ||

ಜ್ಞಾತೃಜ್ಞಾನಜ್ಞೇಯವಿಹೀನಂ ಜ್ಞಾತುರಭಿನ್ನಂ ಜ್ಞಾನಮಖಣ್ಡಮ್ |
ಜ್ಞೇಯಾಜ್ಞೇಯತ್ವಾದಿವಿಮುಕ್ತಂ ಶುದ್ಧಂ ಬುದ್ಧಂ ತತ್ತ್ವಮಸಿ ತ್ವಮ್[1]

ಅನ್ತಃಪ್ರಜ್ಞತ್ವಾದಿವಿಕಲ್ಪೈರಸ್ಪೃಷ್ಟಂ ಯತ್ ತದ್ ದೃಶಿಮಾತ್ರಮ್ |
ಸತ್ತಾಮಾತ್ರಂ ಸಮರಸಮೇಕಂ ಶುದ್ಧಂ ಬುದ್ಧಂ ತತ್ತ್ವಮಸಿ ತ್ವಮ್ ||

ಸರ್ವಾಕಾರಂ ಸರ್ವಮಸರ್ವಂ ಸರ್ವನಿಷೇಧಾವಧಿಭೂತಂ ಯತ್ |
ಸತ್ಯಂ ಶಾಶ್ವತಮೇಕಮನನ್ತಂ ಶುದ್ಧಂ ಬುದ್ಧಂ ತತ್ತ್ವಮಸಿ ತ್ವಮ್ ||೭೯೨

ನಿತ್ಯಾನನ್ದಾಖಣ್ಡೈಕರಸಂ ನಿಷ್ಕಲಮಕ್ರಿಯಮಸ್ತವಿಕಾರಮ್ |
ಪ್ರತ್ಯಗಭಿನ್ನಂ ಪರಮವ್ಯಕ್ತಂ ಶುದ್ಧಂ ಬುದ್ಧಂ ತತ್ತ್ವಮಸಿ ತ್ವಮ್||೭೯೩

ತ್ವಂ ಪ್ರತ್ಯಸ್ತಾಶೇಷವಿಶೇಷಂ ವ್ಯೋಮೇವಾನ್ತರ್ಬಹಿರಪಿ ಪೂರ್ಣಮ್ |
ಬ್ರಹ್ಮಾನನ್ದಂ ಪರಮದ್ವೈತಂ ಶುದ್ಧಂ ಬುದ್ಧಂ ತತ್ತ್ವಮಸಿ ತ್ವಮ್||೭೯೪

ಬ್ರಹ್ಮೈವಾಹಮಹಂ ಬ್ರಹ್ಮ ನಿರ್ಗುಣಂ ನಿರ್ವಿಕಲ್ಪಕಮ್ |
ಇತ್ಯೇವಾಖಣ್ಡಯಾ ವೃತ್ತ್ಯಾ ತಿಷ್ಠ ಬ್ರಹ್ಮಣಿ ನಿಷ್ಕ್ರಿಯೇ || ೭೯೫ ||

ಅಖಣ್ಡಾಮೇವೈತಾಂ ಘಟಿತಪರಮಾನನ್ದಲಹರೀಂ
ಪರಿಧ್ವಸ್ತದ್ವೈತಪ್ರಮಿತಿಮಮಲಾಂ ವೃತ್ತಿಮನಿಶಮ್ |
ಅಮುಞ್ಚಾನಃ ಸ್ವಾತ್ಮನ್ಯನುಪಮಸುಖೇ ಬ್ರಹ್ಮಣಿ ಪರೇ
ರಮಸ್ವ ಪ್ರಾರಬ್ಧಂ ಕ್ಷಪಯ ಸುಖವೃತ್ತ್ಯಾ ತ್ವಮನಯಾ || ೭೯೬ ||

ಬ್ರಹ್ಮಾನನ್ದರಸಾಸ್ವಾದತತ್ಪರೇಣೈವ ಚೇತಸಾ |
ಸಮಾಧಿನಿಷ್ಠಿತೋ ಭೂತ್ವಾ ತಿಷ್ಠ ವಿದ್ವನ್ ಸದಾ ಮುನೇ || ೭೯೭ ||

---

1. ಇಲ್ಲಿಂದ ಮುಂದೆ ೭೯೪ನೆಯ ಶ್ಲೋಕದವರೆಗೆ ಕೊನೆಯ ಚರಣವು ಒಂದೇ.

೭೭೪-೭೯೭. ('ಯತ್ರ ನಾನ್ಯತ್ ಪಶ್ಯತಿ'....) 'ಎಲ್ಲಿ ಮತ್ತೊಂದನ್ನು ಕಾಣುವದಿಲ್ಲವೋ, ಮತ್ತೊಂದನ್ನು ಕೇಳುತ್ತಿರುವದಿಲ್ಲವೋ ಮತ್ತೊಂದನ್ನು ಅರಿಯುವದಿಲ್ಲವೋ, ಅದು **ಭೂಮವು**' (ಛಾಂ. ೭-೨೪-೧) ಎಂಬ ಶ್ರುತಿಯು ದ್ವೈತವನ್ನು ಅಲ್ಲಗಳೆಯುತ್ತಿರುವದಲ್ಲ, ಅದು **ಭೂಮ**ದಲ್ಲಿ ಭ್ರಾಂತಿಯಿಂದ ಕಲ್ಪಿತವಾಗಿರುವದು ಹುಸಿ ಎಂದು ಗೊತ್ತುಮಾಡುವದಕ್ಕಾಗಿಯೇ. ಹೀಗಿರುವದರಿಂದ ಬ್ರಹ್ಮವು ಯಾವಾಗಲೂ ಅದ್ವಿತೀಯವೇ ಆಗಿರುತ್ತದೆ; ಅದು ಯಾವ ವಿಕಲ್ಪವೂ ಇಲ್ಲದ್ದು, ಉಪಾಧಿರಹಿತವಾದದ್ದು, ನಿರ್ಮಲವಾದದ್ದು; ನಿರಂತರವಾಗಿ ಆನಂದದ ಗಟ್ಟಿಯಾಗಿಯೇ ಇರತಕ್ಕದ್ದು; ನಿಷ್ಕ್ರಿಯವಾದದ್ದು, ತನಗೆ ಮತ್ತೊಂದು ಆಧಾರವಿಲ್ಲದ್ದು, ಕೇವಲ ತಾನೊಂದೇ ಇರುವದೂ ಆಗಿರುತ್ತದೆ. (ಅದರಲ್ಲಿ) ಯಾವ ಭೇದವೂ ಇರುವದಿಲ್ಲ, ಯಾವ ಗುಣವೂ ತೋರುವದಿಲ್ಲ; (ಅದರಲ್ಲಿ) ವಾಕ್ಕಿನ ಪ್ರವೃತ್ತಿಯಿರುವದಿಲ್ಲ, ಮನಸ್ಸಿನ ಪ್ರವೃತ್ತಿಯೂ ಇರುವದಿಲ್ಲ. ಏಕೆಂದರೆ ಕೇವಲವಾಗಿ ಪರಮಶಾಂತವಾಗಿ, ಅನಂತವಾಗಿ, (ಎಲ್ಲಕ್ಕೂ) ಆದಿಯಾಗಿ ಆನಂದಮಾತ್ರವಾಗಿ, ಅದ್ವಿತೀಯಸನ್ಮಾತ್ರವಾಗಿ ಬೆಳಗುತ್ತಿರುವದು. ಈ ಪರಮಸತ್ಯವಾದ ತತ್ತ್ವವಿದೆಯಲ್ಲ, (ಇದು) ಸಚ್ಚಿತ್ಸುಖಾತ್ಮಕವಾಗಿರುತ್ತದೆ; ಮುಪ್ಪಿಲ್ಲದ್ದು, ಮರಣವಿಲ್ಲದ್ದು, ನಿತ್ಯವಾದದ್ದು. ಈ ನನ್ನ ವಾಕ್ಯವು ಸತ್ಯವು.

ನೀನು ಈ ದೇಹವಲ್ಲ, ಈ ಪ್ರಾಣವೂ ಅಲ್ಲ, ಇಂದ್ರಿಯಸಮೂಹವೂ ಅಲ್ಲ, ಮನಸ್ಸಾಗಲಿ ಬುದ್ಧಿಯಾಗಲಿ ಎಂದಿಗೂ ಅಲ್ಲ; ಹೀಗೆಯೇ ಅಹಂಕಾರವೂ ಅಲ್ಲ, ಇವುಗಳ ಗುಂಪೂ ನೀನಾಗಲಾರದು. ಮತ್ತೇನೆಂದರೆ ಎಲೈ ವಿವೇಕಿಯೆ, ಕೇಳು, ಇವುಗಳಿಗೆಲ್ಲ ಸಾಕ್ಷಿಯಾಗಿರುವ ನಿರ್ಮಲಪ್ರಕಾಶವೇ ನೀನು.[1] ಯಾವ ವಸ್ತು ಹುಟ್ಟುತ್ತದೆಯೋ ಅದೇ ಬೆಳೆಯುತ್ತದೆ, ಅದೇ ಒಂದು ಕಾಲಕ್ಕೆ ಸಾವನ್ನೂ ಹೊಂದುವದು. ನಿನಗೆ ಜನ್ಮವೇ ಇಲ್ಲ; ಹಾಗೆಯೇ ವಿಭುವಾಗಿ ನಿತ್ಯನಾಗಿ ಜನ್ಮರಹಿತನಾಗಿರುವ ನಿನಗೆ ಮರಣವು ಇಲ್ಲವೇಇಲ್ಲ. ಈ ಹುಟ್ಟಿರುವ ದೇಹವಿದೆಯಲ್ಲ, ಅದೇ ಬೆಳೆಯುತ್ತದೆ, ಕರ್ಮಯೋಗದಿಂದ ನಾಶವೂ ಆಗುತ್ತದೆ. ನೀನು ಇವುಗಳ, ಈ ಎಲ್ಲಾ ಅವಸ್ಥೆಗಳಲ್ಲಿಯೂ ಇದ್ದುಕೊಂಡಿರುವ ಚಿನ್ಮಾತ್ರನಾದ, ಸಾಕ್ಷಿಯಾಗಿರುತ್ತೀಯೆ.

ಯಾವದು ಸ್ವಪ್ರಕಾಶವಾಗಿ ಎಲ್ಲಾ ರೂಪಗಳಿಂದಲೂ ಇರುವದೋ, ಸುಷುಪ್ತಿಯಾಗುವವರೆಗೂ ಒಂದೇ ರೂಪದಿಂದ ಯಾವಾಗಲೂ 'ನಾನು',

---

1. 'ನಾಹಂ ದೇಹೋ....', 'ಮನೋಬುದ್ಧ್ಯಹಙ್ಕಾರಚಿತ್ತಾನಿ ನಾಹಮ್' ಎಂಬ ಶ್ಲೋಕಗಳಿಗೆ ಹೋಲಿಸಿರಿ.

'ನಾನು'- ಎಂದು[1] ತೋರಿಕೊಳ್ಳುತ್ತಿರುವದೋ, ಎಲ್ಲಾ ವಿಕಾರಗಳೂ ಇರುವ ಬುದ್ಧಿಯನ್ನು ಅವಿಕಾರಿಯಾಗಿ ಅರಿಯುತ್ತಿರುವ ಬ್ರಹ್ಮವಿದೆಯಲ್ಲ, ಕೇವಲಬೋಧ ಮಾತ್ರವಾದ ಅದೇ ನೀನು.[2] ಎಂದಿಗೂ ಲೋಪವಾಗದ ಚಿದ್ರೂಪವಾದ ತನ್ನ ಸ್ವರೂಪದಲ್ಲಿ ಕಲ್ಪಿತವಾಗಿರುವ ಆಕಾಶವೇ ಮುಂತಾದ ಸರ್ವಜಗತ್ತಿಗೂ ಇರವನ್ನು ಕೊಡುತ್ತಾ, ತನ್ನ ಬೆಳಕಿನಿಂದ ತೋರಿಕೆಯನ್ನು ನೀಡುತ್ತಿರುವ ಬ್ರಹ್ಮವಿದೆಯಲ್ಲ, ಕೇವಲಬೋಧಮಾತ್ರವಾದ ಅದೇ ನೀನು. ಸಮ್ಯಕ್ಸಮಾಧಿಯಲ್ಲಿ ನಿರತರಾಗಿರುವ ಪರಮಹಂಸಕುಲದವರು ನಿರ್ಮಲವಾದ ಅಂತರಂಗದಲ್ಲಿ ಅಪಾರವಾದ ಆನಂದವಾಗಿರುವ ತಮ್ಮ ತತ್ತ್ವವನ್ನು ನೇರಾಗಿ ಕಂಡು ಎಂದೆಂದಿಗೂ ತೃಪ್ತಿಯನ್ನು ಹೊಂದುವ ಬ್ರಹ್ಮವಿದೆಯಲ್ಲ, ಆ ಕೇವಲಬೋಧಮಾತ್ರವಾದ ಅದೇ ನೀನು. ಒಳಗೂ ಹೊರಗೂ ತಾನು ಅಖಂಡವಾಗಿ ಒಂದೇ ರೂಪವಾಗಿಯೇ ಇರುತ್ತಿದ್ದರೂ ಮೂಢಬುದ್ಧಿಯಾದವನಿಗೆ ಮಣ್ಣೇ ಮುಂತಾದದ್ದು (ಬಗೆಬಗೆಯ ಕಾರ್ಯರೂಪದಿಂದ ತೋರುವಂತೆ) ಆರೋಪಿತವಾದ ಪದಾರ್ಥದಂತೆ ಕಾಣುತ್ತಾ, ವಿಕಾರಗಳೇ ಇಲ್ಲದ ಆತ್ಮಾನುಭವವೇದ್ಯವಾಗಿರುವ ಬ್ರಹ್ಮವಿದೆಯಲ್ಲ, ಕೇವಲಬೋಧಮಾತ್ರವಾಗಿರುವ ಅದೇ ನೀನು. ಶ್ರುತಿಗಳಲ್ಲಿ ಉಕ್ತವಾಗಿರುವ, ಅವ್ಯಯವೂ ಅನಂತವೂ ಅನಾದಿಯೂ ಮಧ್ಯವಿಲ್ಲದ್ದೂ ಅವ್ಯಕ್ತವೂ ನಾಶರಹಿತವಾದದ್ದೂ ಮತ್ತೊಂದರ ಆಸರೆಯಿಲ್ಲದ್ದೂ, ಪ್ರಮೇಯವಲ್ಲದ್ದೂ, ಆನಂದವೂ ಸದ್ಘನವೂ ನಿರ್ದೋಷವೂ ಅದ್ವಿತೀಯವೂ ಆಗಿರುವ ಬ್ರಹ್ಮವಿದೆಯಲ್ಲ, ಕೇವಲಬೋಧಮಾತ್ರವಾಗಿರುವ ಅದೇ ನೀನು.

ಶರೀರ, ಅದರ ಪ್ರಾಪ್ತಿ, ಅದರ ಧರ್ಮಗಳು[3]- ಇವುಗಳ ಅಧ್ಯಾರೋಪವು ನಿನ್ನಲ್ಲಿ ಭ್ರಾಂತಿಯಿಂದ ಆಗಿರುವದು, ನಿಜವಾಗಿ ಯಾವದೂ ಇಲ್ಲ. ಆದ್ದರಿಂದ ನೀನು ಅಜನು; ನಿನಗೆ ಮೃತ್ಯುವಿನ ಭಯವೆಲ್ಲಿಯದು ? ನೀನು ಪೂರ್ಣನಾಗಿದೀಯೆ. ಯಾವಯಾವದು ಭ್ರಾಂತಿಯುಳ್ಳ ತನ್ನ ದೃಷ್ಟಿಯಿಂದ ಕಾಣುತ್ತಿರುವದೋ, ಅದದು ವಸ್ತುತಂತ್ರವಾದ ಸಮ್ಯಗ್ದೃಷ್ಟಿಯಿಂದ ನೀನೇ. ಲೋಕದಲ್ಲಿ ನಿನಗಿಂತ

---

1. ಸುಷುಪ್ತಿಯಲ್ಲಿ 'ನಾನು', 'ನಾನು' ಎಂದು ತೋರುವದೆಂಬುದು ಅನುಭವ ವಿರುದ್ಧವಾದ್ದರಿಂದ 'ಸುಷುಪ್ತಿಯವರೆಗೂ' ಎಂದರೆ ಜಾಗ್ರತ್ಸ್ವಪ್ನಗಳಲ್ಲಿ ಎಂದು ಅರ್ಥ ಮಾಡುವದೇ ಯುಕ್ತ ; ಆದರೆ ವಿವೇಕಚೂಡಾಮಣಿ ೧೩೪ರಲ್ಲಿ 'ಜಾಗ್ರದಾದಿಷ್ವವಸ್ಥಾಸು' ಎಂದೇ ಇದೆ. ಸುಷುಪ್ತಿಯ ಸ್ಮರಣೆಯಲ್ಲಿ 'ನಾನು' ಎಂದೇನೋ ತೋರುತ್ತದೆ.

2. ಈ ಶ್ಲೋಕದಿಂದ ಮುಂದಾಗಿ ಆರು ಶ್ಲೋಕಗಳಲ್ಲಿ ಆತ್ಮನು ಬೋಧಮಾತ್ರ ಸ್ವರೂಪನೆಂದು ಮತ್ತೆಮತ್ತೆ ಹೇಳಿದೆ. ಇಲ್ಲಿಂದ ಮುಂದಕ್ಕೆ 'ಯದ್ಬ್ರಹ್ಮ ತತ್ತ್ವಮಸಿ ಕೇವಲಬೋಧಮಾತ್ರಮ್' ಎಂಬ ಪಲ್ಲವಿಯು ಐದು ಶ್ಲೋಕಗಳಲ್ಲಿ ಬಂದಿದೆ.

3. 'ದೇಹತದ್ಧರ್ಮತತ್ಕರ್ಮ' ಎಂಬ ಪ್ರಯೋಗವು ಶ್ರೀಶಂಕರಾನಂದರ 'ಗೀತಾ ತಾತ್ಪರ್ಯಬೋಧಿನಿ'ಯಲ್ಲಿ ಪ್ರಚುರ. ವಿವೇಕಚೂಡಾಮಣಿ ೧೫೬ನ್ನು ನೋಡಿ.

ಬೇರೆಯಾವ ವಸ್ತುವೇ ಇಲ್ಲ; ಅದ್ವಯನಾದ ನಿನಗೆ ಏತರ ಭಯವಿದ್ದೀತು ? 'ನಾನೇ ಇದೆಲ್ಲವೂ' ಎಂದು ತಾನೇ ಎಲ್ಲವೆಂದು ಕಂಡುಕೊಂಡಿರುವಾತನಿಗೆ ಏತರಿಂದ ಭಯವಾದೀತು ? ತನ್ನಿಂದಲೇ ತನಗೆ ಭಯವೆಂದು ಒಪ್ಪುವಂತಿಲ್ಲವಷ್ಟೆ ? ಆದ್ದರಿಂದ ನೀನು ಅಭಯವೂ ನಿತ್ಯವೂ ಕೇವಲವೂ ಆಗಿರುವ ಆನಂದಸ್ವರೂಪವಾದ ನಿಷ್ಕಲವೂ ನಿಷ್ಕ್ರಿಯವೂ ಶಾಂತವೂ[1] ಆಗಿರುವ ನಿತ್ಯವೂ ಅದ್ವಯವಾದ ಬ್ರಹ್ಮವೇ ಆಗಿರುವೆ.

ಜ್ಞಾತೃ, ಜ್ಞಾನ, ಜ್ಞೇಯ– ಎಂಬ (ವಿಭಾಗ)ವಿಲ್ಲದ ಜ್ಞಾತೃವಿಗಿಂತ ಬೇರೆಯಲ್ಲದ, ಅಖಂಡಜ್ಞಾನವಾಗಿರುವ ಜ್ಞೇಯತ್ವವಾಗಲಿ ಅಜ್ಞೇಯತ್ವವಾಗಲಿ ಇಲ್ಲದ ಶುದ್ಧವೂ ಬುದ್ಧವೂ ಆಗಿರುವ ತತ್ತ್ವವೇ ನೀನಾಗಿರುವೆ.[2] ಅಂತಃಪ್ರಜ್ಞತ್ವವೇ ಮುಂತಾದ ವಿಕಲ್ಪಗಳು ಸೋಂಕದ[3] ದೃಙ್ಮಾತ್ರವಾದ, ಸತ್ತಾಮಾತ್ರವೂ ಸಮರಸವೂ ಏಕವೂ ಆಗಿರುವ ಶುದ್ಧಬುದ್ಧತತ್ತ್ವವೇ ನೀನಾಗಿರುವೆ. ಸರ್ವಾಕಾರವಾಗಿ, ಸರ್ವವೂ ಅಸರ್ವವೂ ಎಲ್ಲವನ್ನೂ ಅಲ್ಲಗಳೆದಬಳಿಕ ಉಳಿಯುವದೂ[4] ಸತ್ಯವೂ ಶಾಶ್ವತವೂ ಏಕವೂ ಅನಂತವೂ ಆಗಿರುವ ಶುದ್ಧವೂ ಬುದ್ಧವೂ ಆಗಿರುವ ತತ್ತ್ವವೇ ನೀನಾಗಿರುವೆ. ನಿತ್ಯಾನಂದವೂ ಅಖಂಡೈಕರಸವೂ[5] ನಿಷ್ಕಲವೂ ನಿಷ್ಕ್ರಿಯವೂ ವಿಕಾರಗಳಿಲ್ಲದ್ದೂ ಪ್ರತ್ಯಗಾತ್ಮಾಭಿನ್ನವಾದ ಪರವೂ ಅವ್ಯಕ್ತವೂ ಆಗಿರುವ, ಶುದ್ಧಬುದ್ಧತತ್ತ್ವವೇ ನೀನಾಗಿರುವೆ. ನೀನು ಯಾವ ವಿಶೇಷವೂ ಇಲ್ಲದ ಆಕಾಶದಂತೆ ಒಳಗೂ ಹೊರಗೂ ತುಂಬಿಕೊಂಡಿರುವ ಬ್ರಹ್ಮಾನಂದವು. ಪರಮಾದ್ವೈತವೂ ಆಗಿರುವ ಶುದ್ಧಬುದ್ಧತತ್ತ್ವವೇ ನೀನಾಗಿರುವೆ.

ನಿರ್ಗುಣವೂ ನಿರ್ವಿಕಲ್ಪವೂ ಆಗಿರುವ ಬ್ರಹ್ಮವೇ ನಾನು, ನಾನೇ ಬ್ರಹ್ಮವು –ಎಂದೇ **ಅಖಂಡವಾದ ವೃತ್ತಿಯಿಂದ**[6] ನಿಷ್ಕ್ರಿಯವಾದ ಬ್ರಹ್ಮದಲ್ಲಿ ನಿಂತಿರು. ಅಖಂಡವಾಗಿಯೇ ಇರುವ ಪರಮಾನಂದಲಹರಿಯಿಂದೊಡಗೂಡಿದ, ದ್ವೈತದ

---

1. ಶ್ವೇ. ೬–೧೯.

2. ಇಲ್ಲಿಂದ ಮುಂದಕ್ಕೆ ಐದು ಪದ್ಯಗಳಲ್ಲಿ 'ಶುದ್ಧಂ ಬುದ್ಧಂ ತತ್ತ್ವಮಸಿ ತ್ವಮ್' ಎಂಬ ಪಲ್ಲವಿಯಿದೆ.

3. ಮಾಂ. ೭. 4. ಬೃ. ೩–೮–೮ರಲ್ಲಿ ಹೇಳಿರುವ 'ಅಕ್ಷರ'.

5. 'ಅಖಂಡೈಕರಸ' ಎಂಬ ಮಾತು ಗ್ರಂಥಕರ್ತರಿಗೆ ಬಲುಮೆಚ್ಚು. ವಿ. ಚೂ. ೨೪೫ ; ತೇಜೋಬಿನ್ದೂಪನಿಷತ್ತಿನ ೨ನೆಯ ಅಧ್ಯಾಯವೆಲ್ಲ ಈ ಶಬ್ದದಿಂದ ತುಂಬಿದೆ.

6. 'ಅಖಂಡವೃತ್ತಿ' ಎಂಬುದು ಕೆಲವು ಈಚಿನ ವೇದಾಂತಗ್ರಂಥಗಳಲ್ಲಿ ಪ್ರಚುರವಾಗಿವೆ. ವಿ. ಚೂ. ೩೭೫, ೩೭೭ಈ ಶ್ಲೋಕಗಳನ್ನು ನೋಡಿ. ವೃತ್ತಿಯೆಂದರೇ ಎದ್ದು ಇದ್ದು ನಾಶವಾಗುವ ವಿಕ್ರಿಯೆ; ಅದು ಅಖಂಡವಾಗಿರುವದು ಹೇಗೆಂಬುದನ್ನು ತಿಳಿಯುವದು ಕಷ್ಟ. ಆತ್ಮನಲ್ಲಿ ಯಾವ ವಿಭಾಗವೂ ಇಲ್ಲದ್ದರಿಂದ ಆತ್ಮಜ್ಞಾನವನ್ನು 'ಅಖಂಡವೃತ್ತಿ' ಎಂದು ಕರೆಯುತ್ತಾರೆಂದು ಕಲ್ಪಿಸಬೇಕಾಗಿದೆ.

ಪರಿಚ್ಛೇದವು ನೀಗಿರುವ ನಿರ್ಮಲವೃತ್ತಿಯನ್ನು ಯಾವಾಗಲೂ ಬಿಡದೆ ನಿನ್ನ ಆತ್ಮನಾಗಿರುವ ನಿರುಪಮಾನಂದವಾದ ಪರಬ್ರಹ್ಮದಲ್ಲಿ ರಮಿಸುತ್ತಿರು. ಈ ಆನಂದ ವೃತ್ತಿಯಿಂದ **ಪ್ರಾರಬ್ಧ**ವನ್ನು ಸವೆಯಿಸುತ್ತಿರು. ಎಲೈ ವಿವೇಕಿಯಾದ ಮುನಿಯೆ, ಬ್ರಹ್ಮಾನಂದರಸವನ್ನು ಸವಿಯುವದರಲ್ಲಿ[1] ತತ್ಪರವಾಗಿಯೇ ಇರುವ ಚಿತ್ತದಿಂದ ಯಾವಾಗಲೂ **ಸಮಾಧಿನಿಷ್ಠ**ನಾಗಿ ಇದ್ದುಕೊಂಡಿರು.

## ಶಿಷ್ಯನ ಪ್ರಶ್ನೆ

**ಶಿಷ್ಯಃ–**

**ಅಖಣ್ಡಾಖ್ಯಾ ವೃತ್ತಿರೇಷಾ ವಾಕ್ಯಾರ್ಥಶ್ರುತಿಮಾತ್ರತಃ ।**
**ಶ್ರೋತುಃ ಸಂಜಾಯತೇ ಕಿಂ ವಾ ಕ್ರಿಯಾನ್ತರಮಪೇಕ್ಷತೇ ॥ ೭೯೮ ॥**
**ಸಮಾಧಿಃ ಕಃ ಕತಿವಿಧಸ್ತತ್ಸಿದ್ಧೇಃ ಕಿಮು ಸಾಧನಮ್ ।**
**ಸಮಾಧೇರನ್ತರಾಯಾಃ ಕೇ ಸರ್ವಮೇತನ್ನಿರೂಪ್ಯತಾಮ್ ॥ ೭೯೯ ॥**

೭೯೮–೭೯೯. ಶಿಷ್ಯನ ಪ್ರಶ್ನೆ :– **ಅಖಂಡವೆಂಬ ಹೆಸರಿನ**[2] **ಈ ವೃತ್ತಿಯು** ವಾಕ್ಯಾರ್ಥದ ಶ್ರವಣಮಾತ್ರದಿಂದ[3] ಶ್ರೋತೃವಿಗೆ ಉಂಟಾಗುತ್ತದೆಯೆ ? ಅಥವಾ ಮತ್ತೆಯಾವದಾದರೊಂದು ಕ್ರಿಯೆಯೂ ಬೇಕಾಗುವದೆ ? **ಸಮಾಧಿ**ಯೆಂದರೆ ಯಾವದು ? ಅದು ಎಷ್ಟುವಿಧ ? ಅದು ಸಿದ್ಧಿಸುವದಕ್ಕೆ ಯಾವದು ಸಾಧನವು ? ಸಮಾಧಿಗೆ ಅಡ್ಡಿಗಳು ಯಾವವು ? ಇವೆಲ್ಲವನ್ನೂ ಅಪ್ಪಣೆಕೊಡಿಸಬೇಕು.

## ಗುರುವಿನ ಉತ್ತರ

### (1) ಮುಖ್ಯಾಧಿಕಾರಿಗೆ ಶ್ರವಣಮಾತ್ರದಿಂದ ವೃತ್ತಿಲಾಭ

**ಶ್ರೀಗುರುಃ–**

**ಮುಖ್ಯಗೌಣಾದಿಭೇದೇನ ವಿದ್ಯನ್ತೇಽತ್ರಾಧಿಕಾರಿಣಃ ।**
**ತೇಷಾಂ ಪ್ರಜ್ಞಾನುಸಾರೇಣಾಖಣ್ಡಾ ವೃತ್ತಿರುದೇಷ್ಯತಿ**[4] **॥ ೮೦೦ ॥**
**ಶ್ರದ್ಧಾಭಕ್ತಿಪುರಃಸರೇಣ ವಿಹಿತೇನೈವೇಶ್ವರಂ ಕರ್ಮಣಾ**
**ಸಂತೋಷ್ಯಾರ್ಜಿತತತ್ಪ್ರಸಾದಮಹಿಮಾ ಜನ್ಮಾನ್ತರೇಷ್ವೇವ ಯಃ ।**

---

1. ಬ್ರಹ್ಮಾನಂದರಸದ ಸವಿಯನ್ನು ನೋಡುವ ಪ್ರಕಾರಕ್ಕೆ ವಿ. ಚೂ. ೩೫೯, ೩೬೫, ೩೭೫, ೪೧೫, ೪೩೨– ಈ ಶ್ಲೋಕಗಳನ್ನು ನೋಡಿ.

2. ಬ್ರಹ್ಮಾಕಾರವೃತ್ತಿಗೆ ಅಖಂಡವೆಂದು ಹೆಸರೆಂದು ಇಲ್ಲಿ ಹೇಳಿದೆ.

3. ಶ್ರವಣಮಾತ್ರದಿಂದ ಜ್ಞಾನವುಂಟಾಗುತ್ತದೆಯೆ, ಇಲ್ಲವೆ ?– ಎಂಬ ಬಗ್ಗೆ ವ್ಯಾಖ್ಯಾನಪ್ರಸ್ಥಾನದಲ್ಲಿ ವಿವಾದವಿದೆ.

4. 'ಉದೇಷ್ಯತೇ' ಎಂದೇ ಮುದ್ರಿತಪಾಠ.

**ನಿತ್ಯಾನಿತ್ಯವಿವೇಕತೀವ್ರವಿರತಿನ್ಯಾಸಾದಿಭಿಃ ಸಾಧನೈ-**
**ರ್ಯುಕ್ತಃ ಸಃ ಶ್ರವಣೇ ಸತಾಮಭಿಮತೋ ಮುಖ್ಯಾಧಿಕಾರೀ ದ್ವಿಜಃ ||**

೮೦೦-೮೦೧. ಶ್ರೀಗುರು: ಮುಖ್ಯ, ಗೌಣ-ಮುಂತಾದ[1] ಪ್ರಕಾರಗಳಿಂದ ಇಲ್ಲಿ ಅಧಿಕಾರಿಗಳಿರುತ್ತಾರೆ. ಅವರ ಬುದ್ಧಿಗೆ ಅನುಗುಣವಾಗಿ **ಅಖಂಡವೃತ್ತಿಯು** ಹುಟ್ಟುತ್ತದೆ. ಶ್ರದ್ಧಾಭಕ್ತಿಪೂರ್ವಕವಾಗಿ ವಿಹಿತವಾಗಿರುವ (ನಿತ್ಯ)ಕರ್ಮದಿಂದಲೇ ಈಶ್ವರನನ್ನು ಸಂತುಷ್ಟಿಗೊಳಿಸಿ ಆತನ ಪ್ರಸಾದಮಹಿಮೆಯನ್ನು ಸಂಪಾದಿಸಿಕೊಂಡು ಜನ್ಮಾಂತರಗಳಲ್ಲಿಯೇ ಯಾವಾತನು **ನಿತ್ಯಾನಿತ್ಯವಿವೇಕ, ತೀವ್ರವೈರಾಗ್ಯ**[2]**, ಸಂನ್ಯಾಸ**- ಮುಂತಾದ ಸಾಧನಗಳಿಂದ ಕೂಡಿರುವನೋ ಆ ದ್ವಿಜನು **ಶ್ರವಣಕ್ಕೆ ಮುಖ್ಯಾಧಿಕಾರಿ** ಎಂದು ಸತ್ಪುರುಷರ ಮತವು.

## (2) ಮುಖ್ಯಾಧಿಕಾರಿಗೆ ಉಂಟಾಗುವ ಅಖಂಡಾಕಾರವೃತ್ತಿ

**ಅಧ್ಯಾರೋಪಾಪವಾದಕ್ರಮಮನುಸರತಾ ದೇಶಿಕೇನಾತ್ರ ವೇತ್ತ್ರಾ**
**ವಾಕ್ಯಾರ್ಥೇ ಬೋಧ್ಯಮಾನೇ ಸತಿ ಸಪದಿ ಸತಃ ಶುದ್ಧಬುದ್ಧೇರಮುಷ್ಯ|**
**ನಿತ್ಯಾನನ್ದಾದ್ವಿತೀಯಂ ನಿರುಪಮಮಮಲಂ ಯತ್ಪರಂ ತತ್ತ್ವಮೇಕಂ**
**ತದ್ಬ್ರಹ್ಮೈವಾಹಮಸ್ಮೀತ್ಯುದಯತಿ ಪರಮಾಖಣ್ಡಿತಾಕಾರವೃತ್ತಿಃ**[3] **||**
**ಅಖಣ್ಡಾಕಾರವೃತ್ತಿಃ ಸಾ ಚಿದಾಭಾಸಸಮನ್ವಿತಾ |**
**ಆತ್ಮಾಽಭಿನ್ನಂ ಪರಂ ಬ್ರಹ್ಮ ವಿಷಯೀಕೃತ್ಯ ಕೇವಲಮ್ || ೮೦೩ ||**
**ಬಾಧತೇ ತದ್ಗತಾಜ್ಞಾನಂ ಯದಾವರಣಲಕ್ಷಣಮ್ |**
**ಅಖಣ್ಡಾಕಾರಯಾ ವೃತ್ತ್ಯಾ ತ್ವಜ್ಞಾನೇ ಬಾಧಿತೇ ಸತಿ || ೮೦೪ ||**
**ತತ್ಕಾರ್ಯಂ ಸಕಲಂ ತೇನ ಸಮಂ ಭವತಿ ಬಾಧಿತಮ್ |**
**ತನ್ತುದಾಹೇ ತು ತತ್ಕಾರ್ಯಪಟದಾಹೋ ಯಥಾ ತಥಾ || ೮೦೫ ||**
**ತಸ್ಯ ಕಾರ್ಯತಯಾ ಜೀವವೃತ್ತಿರ್ಭವತಿ ಬಾಧಿತಾ |**
**ಉಪಪ್ರಭಾ ಯಥಾ ಸೂರ್ಯಂ ಪ್ರಕಾಶಯಿತುಮಕ್ಷಮಾ || ೮೦೬ ||**
**ತದ್ವದೇವ ಚಿದಾಭಾಸಚೈತನ್ಯಂ ವೃತ್ತಿಸಂಸ್ಥಿತಮ್ |**
**ಸ್ವಪ್ರಕಾಶಂ ಪರಂ ಬ್ರಹ್ಮ ಪ್ರಕಾಶಯಿತುಮಕ್ಷಮಮ್ || ೮೦೭ ||**

---

1. 'ಮುಂತಾದ' ಎಂದರೇನೊ ತಿಳಿಯಲಿಲ್ಲ. ಉತ್ತಮ, ಮಧ್ಯಮ, ಅಧಮ- ಎಂದು ಮೂರು ವಿಭಾಗವನ್ನು ಕಲ್ಪಿಸಿ ಹೀಗೆ ಹೇಳಿರಬಹುದೆ ?

2. ಮಂದವೈರಾಗ್ಯ, ತೀವ್ರವೈರಾಗ್ಯ - ಇವುಗಳ ವಿಷಯಕ್ಕೆ ವಿ. ಚೂ. ಶ್ಲೋ. ೨೯ನ್ನು ನೋಡಿ.

3. 'ಅಖಂಡಾಕಾರ' ಎಂಬುದಕ್ಕೆ ಬದಲು 'ಅಖಣ್ಡಿತಾಕಾರ' ಎಂದು ಛಂದಸ್ಸಿಗಾಗಿ ಬರೆದುಕೊಂಡಿರಬೇಕು.

**ಪ್ರಚಣ್ಡಾತಪಮಧ್ಯಸ್ಥದೀಪವನ್ನಷ್ಟದೀಧಿತಿಃ ।**
**ತತ್ತೇಜಸಾಽಭಿಭೂತಂ ಸಲ್ಲೀನೋಪಾಧಿತಯಾ ತತಃ ॥ ೮೦೮ ॥**

**ಬಿಮ್ಬಭೂತಪರಬ್ರಹ್ಮಮಾತ್ರಂ ಭವತಿ ಕೇವಲಮ್ ।**
**ಯಥಾಪನೀತೇ ತ್ವಾದರ್ಶೇ ಪ್ರತಿಬಿಮ್ಬಮುಖಂ ಸ್ವಯಮ್ ॥ ೮೦೯ ॥**

**ಮುಖಮಾತ್ರಂ ಭವೇತ್ತದ್ವದೇತಚ್ಚೋಪಾಧಿಸಂಕ್ಷಯಾತ್ ।**
**ಘಟಾಜ್ಞಾನೇ ಯಥಾ ವೃತ್ತ್ಯಾ ವ್ಯಾಪ್ತಯಾ ಬಾಧಿತೇ ಸತಿ ॥ ೮೧೦ ॥**

**ಘಟಂ ವಿಸ್ಫುರಯತ್ಯೇಷ ಚಿದಾಭಾಸಃ ಸ್ವತೇಜಸಾ ।**
**ನ ತಥಾ ಸ್ವಪ್ರಭೇ ಬ್ರಹ್ಮಣ್ಯಾಭಾಸ ಉಪಯುಜ್ಯತೇ ॥ ೮೧೧ ॥**

**ಅತ ಏವ ಮತಂ ವೃತ್ತಿವ್ಯಾಪ್ಯತ್ವಂ ವಸ್ತುನಃ ಸತಾಮ್ ।**
**ನ ಫಲವ್ಯಾಪ್ಯತಾ ತೇನ ನ ವಿರೋಧಃ ಪರಸ್ಪರಮ್ ॥ ೮೧೨ ॥**

೮೦೨-೮೧೨. **ಅಧ್ಯಾರೋಪಾಪವಾದ**ಕ್ರಮವನ್ನು[1] ಅನುಸರಿಸಿ ಜ್ಞಾನಿಯಾದ **ಗುರುವು ವಾಕ್ಯಾರ್ಥವನ್ನು ತಿಳಿಸಿಕೊಟ್ಟರೆ ಕೂಡಲೆ**[2] ಶುದ್ಧಿಬುದ್ಧಿಯುಳ್ಳ ಈತನಿಗೆ ನಿತ್ಯಾನಂದವೂ[3] ಅದ್ವಿತೀಯವೂ ಉಪಮಾನರಹಿತವೂ ಆಗಿರುವ ಏಕವಾದ ಪರತತ್ತ್ವವಿದೆಯಲ್ಲ, ಆ ಬ್ರಹ್ಮವೇ ನಾನಾಗಿದ್ದೇನೆ ಎಂದು **ಪರಮಾಖಂಡಾಕಾರವೃತ್ತಿ**ಯು[4] ಉಂಟಾಗುವದು.

ಆ ಅಖಂಡಾಕಾರವೃತ್ತಿಯು ಚಿದಾಭಾಸಸಹಿತವಾಗಿ ಆತ್ಮಾಭಿನ್ನವಾದ ಪರಬ್ರಹ್ಮವನ್ನು ವಿಷಯೀಕರಿಸಿ ಅದರಲ್ಲಿರುವ ಅಜ್ಞಾನವನ್ನು ಮಾತ್ರ ಕಳೆಯುತ್ತದೆ.[5] ಅಖಂಡಾಕಾರವೃತ್ತಿಯಿಂದ ಅಜ್ಞಾನವು ಬಾಧಿತವಾಗಲಾಗಿ ಆ

---

1. ಈ ಗ್ರಂಥದಲ್ಲಿರುವ 'ಅಧ್ಯಾರೋಪಾಪವಾದನ್ಯಾಯಕ್ಕೂ' ಸಾಂಪ್ರದಾಯಿಕವಾದ ಆಚಾರ್ಯರಿಗೊಪ್ಪಾದ ಆ ಹೆಸರಿನ ನ್ಯಾಯಕ್ಕೂ ವೈಲಕ್ಷಣ್ಯವಿದೆ ಎಂಬುದು ಹಿಂದಿನ ಗ್ರಂಥದಿಂದಲೇ ಗೊತ್ತಾಗಿದೆ.

2. ಶ್ರವಣವಾದಕೂಡಲೆ ಎಂದರ್ಥ. ಇದು ಭಾಷ್ಯಮತಕ್ಕೆ ಹೊಂದಿಗೆಯಾಗಿದೆ; ವೇದಾಂತಸಾರದಲ್ಲಿ ಇದು ಸ್ಪಷ್ಟವಾಗಿಲ್ಲ. ವಿವೇಕಚೂಡಾಮಣಿಯಲ್ಲಿ ಬರಿಯ ಶ್ರವಣಮಾತ್ರದಿಂದ ಅನುಭವವಾಗುವದೆಂಬ ಪಕ್ಷವನ್ನು ಸ್ಪಷ್ಟೋಕ್ತಿಗಳಿಂದ ನಿರಾಕರಿಸಿದೆ. (ಶ್ಲೋ. ೬೨-೬೫).

3. 'ನಿತ್ಯಾನಂದಾದ್ವಿತೀಯಮ್' ಎಂಬುದನ್ನು ಬಿಡಿಸಿ ಎರಡು ಪದಗಳಾಗಿ ಮಾಡಿಕೊಂಡು ಹೀಗೆ ಕನ್ನಡಿಸಿದೆ.

4. ಈ ವೃತ್ತಿಯ ವಿಚಾರವು ಭಾಷ್ಯದಲ್ಲಿಲ್ಲ. ವೇದಾಂತಸಾರವನ್ನು ಅನುಸರಿಸಿ ಇಲ್ಲಿ ಇದನ್ನು ಪ್ರತಿಪಾದಿಸಿದೆ.

5. ವೃತ್ತಿಯು ತನ್ನನ್ನು ಬೆಳಗುವ ಅವಿಷಯವಾದ ಬ್ರಹ್ಮವನ್ನು ಹೇಗೆ ವಿಷಯೀಕರಿಸುತ್ತದೆ- ಎಂಬುದನ್ನು ಇಲ್ಲಿ ಹೇಳಿಲ್ಲ.

(ಅಜ್ಞಾನದ) ಕಾರ್ಯವೆಲ್ಲವೂ ನೂಲು ಸುಟ್ಟುಹೋದರೆ ಆದರ ಕಾರ್ಯವಾದ ಬಟ್ಟೆಯು ಸುಟ್ಟುಹೋಗುವಂತೆ ಬಾಧಿತವಾಗುವದು.[1] ಆದರ ಕಾರ್ಯವಾಗಿರುವದರಿಂದ **ಜೀವವೃತ್ತಿಯು**[2] ಬಾಧಿತವಾಗುವದು.

ಉಪಪ್ರಭೆಯು[3] ಹೇಗೆ ಸೂರ್ಯನನ್ನು ಬೆಳಗಿತೋರಿಸುವದಕ್ಕೆ ಶಕ್ತವಲ್ಲವೋ ಹಾಗೆಯೇ ವೃತ್ತಿಯಲ್ಲಿರುವ **ಚಿದಾಭಾಸಚೈತನ್ಯವು**[4] ಸ್ವಪ್ರಕಾಶವಾಗಿರುವ ಪರಬ್ರಹ್ಮವನ್ನು ಬೆಳಗಿತೋರಿಸುವದಕ್ಕೆ ಶಕ್ತವಾಗದೆ ಇರುತ್ತದೆ. ಪ್ರಚಂಡವಾದ ಬಿಸಿಲಿನ ನಡುವೆ ಇರುವ ದೀಪದಂತೆ ಕಂದಿದ ಬೆಳಕುಳ್ಳದ್ದಾಗಿ, ಆ (ಬ್ರಹ್ಮದ) ತೇಜಸ್ಸಿನಿಂದ ಮುಂಕಾಗಿ ಉಪಾಧಿಯು ಲಯವಾದ್ದರಿಂದ ಆ ಬಳಿಕ ಬಿಂಬವಾದ ಬರಿಯ ಬ್ರಹ್ಮವೇ ಆಗಿಬಿಡುವದು. ಕನ್ನಡಿಯನ್ನು ಅತ್ತಸರಿಯಿಸಿದರೆ ಮುಖದ ಪ್ರತಿಬಿಂಬವು ಹೇಗೆತಾನೇ ಬರಿಯ ಮುಖವಾಗುವದೋ[5] ಅದರಂತೆಯೇ ಇದೂ ಉಪಾಧಿಯು ಕ್ಷಯವಾಗಲು (ಬ್ರಹ್ಮಮಾತ್ರವಾಗುವದು), ಘಟದ ಅಜ್ಞಾನವು ಘಟವನ್ನು ವ್ಯಾಪಿಸಿಕೊಂಡ ವೃತ್ತಿಯು ಬಾಧಿತವಾಗಲು ಈ ಚಿದಾಭಾಸವು ಹೇಗೆ ತನ್ನ ತೇಜಸ್ಸಿನಿಂದ ಬೆಳಗಿತೋರಿಸುವದೋ[6] ಹಾಗೆ ಸ್ವಪ್ರಕಾಶವಾದ ಬ್ರಹ್ಮದ ವಿಷಯದಲ್ಲಿ ಆಭಾಸವು (ಬ್ರಹ್ಮವನ್ನು ಬೆಳಗಿತೋರಿಸುವದಕ್ಕೆ) ಉಪಯುಕ್ತವಾಗುವದಿಲ್ಲ. ಆದ್ದರಿಂದಲೇ (ಬ್ರಹ್ಮಾತ್ಮ)ವಸ್ತುವು **ವೃತ್ತಿವ್ಯಾಪ್ಯವಾದರೂ** ಅದಕ್ಕೆ **ಫಲವ್ಯಾಪ್ಯತ್ವವನ್ನು** ಸಂತರು ಒಪ್ಪುವದಿಲ್ಲ.[7] ಆದ್ದರಿಂದ ವಿರೋಧವಿಲ್ಲ.[8]

---

1. ಇದೆಲ್ಲ ವೇದಾಂತಸಾರದಲ್ಲಿ (ಪು. ೯೨–೯೩)ರಲ್ಲಿ ಅಕ್ಷರಶಃ ಇದೆ. 'ನಾಶ, ಬಾಧೆ ?' –ಇವುಗಳ ವೈಲಕ್ಷಣ್ಯವನ್ನು ಕಲೆಬೆರಕೆಮಾಡಿಕೊಂಡಂತೆ ತೋರುತ್ತದೆ.

2. 'ಜೀವವೃತ್ತಿ' ಎಂದರೆ 'ನಾನು ಜೀವನು' ಎಂಬ ವೃತ್ತಿ, ಇದು ಅಜ್ಞಾನದ ಕಾರ್ಯ– ಎಂದರ್ಥ.

3. ನೀರಿನಲ್ಲಿ, ಅಥವಾ ಕನ್ನಡಿಯಲ್ಲಿ ಆಗಿರುವ ಸೂರ್ಯಪ್ರತಿಬಿಂಬದ ಬೆಳಕು.

4. 'ಚಿದಾಭಾಸಚೈತನ್ಯ' ಎಂಬ ಮಾತು ಮತ್ತೆ ಯಾವ ಗ್ರಂಥದಲ್ಲಿದೆಯೋ ತಿಳಿಯದು.

5. ಪ್ರತಿಬಿಂಬವೂ ಬಿಂಬವೂ ಒಂದೇ; ಬೇರೆಯಾಗಿ ತೋರುವದು ಅಜ್ಞಾನದಿಂದ –ಎಂಬುದು ಪಂಚಪಾದಿಕೆಯ ಪ್ರಕ್ರಿಯೆ.

6. ವೃತ್ತಿ, ವೃತ್ತಿಯಲ್ಲಿರುವ ಚಿದಾಭಾಸ– ಈ ಎರಡೂ ಘಟವನ್ನು ವ್ಯಾಪಿಸುವವು, ವೃತ್ತಿಯು ಅಜ್ಞಾನವನ್ನು ಕಳೆಯುವದು, ಆಭಾಸವು ಜ್ಞೇಯವನ್ನು ತೋರಿಸುವದು– ಎಂದು ಪಂಚದಶಿ (ಪಂ. ದ. ೭–೯೧).

7. ಪಂ. ದ. ೭–೯೦, ೯೧, ೯೨ ನೋಡಿ.

8. 'ಮನಸ್ಸಿನಿಂದಲೇ ಬ್ರಹ್ಮವನ್ನು ಕಾಣಬೇಕು' (ಕಠ. ೨–೨–೧೧, ಬೃ.೪-೪-೧೯), 'ಮನಸ್ಸಿನಿಂದ ಆತ್ಮನನ್ನು ವಿಷಯೀಕರಿಸುವದಕ್ಕೆ ಆಗುವದಿಲ್ಲ' (ಕೇ. ೧–೬)– ಈ ಎರಡು ಶ್ರುತಿಗಳಿಗೂ ವಿರೋಧವಿಲ್ಲವೆಂದು ಭಾವ. ವೇದಾಂತಸಾರ (ಪು. ೯೪) ನೋಡಿ.

### (3) ಉತ್ತಮಾಧಿಕಾರಿಗಳಲ್ಲದವರಿಗೆ ಮನನವೂ ಬೇಕು

ಶ್ರುತ್ಯೋದಿತಂ ತತೋ ಬ್ರಹ್ಮ[1] ಜ್ಞೇಯಂ ಬುದ್ಧ್ಯೈವ ಸೂಕ್ಷ್ಮಯಾ ॥
ಪ್ರಜ್ಞಾಮಾನ್ದ್ಯಂ ಭವೇದ್ಯೇಷಾಂ ತೇಷಾಂ ನ ಶ್ರುತಿಮಾತ್ರತಃ ।
ಸ್ಯಾದಖಣ್ಡಾಕಾರವೃತ್ತಿರ್ವಿನಾ ತು ಮನನಾದಿನಾ ॥ ೬೧೩ ॥
ಶ್ರವಣಾನ್ಮನನಾದ್ ಧ್ಯಾನಾತ್ತಾತ್ಪರ್ಯೇಣ ನಿರನ್ತರಮ್ ।
ಬುದ್ಧೇಃ ಸೂಕ್ಷ್ಮತ್ವಮಾಯಾತಿ ತತೋ ವಸ್ತೂಪಲಭ್ಯತೇ ॥ ೬೧೪ ॥
ಮನ್ದಪ್ರಜ್ಞಾವತಾಂ ತಸ್ಮಾತ್ ಕರಣೀಯಂ ಪುನಃಪುನಃ ।
ಶ್ರವಣಂ ಮನನಂ ಧ್ಯಾನಂ ಸಮ್ಯಗ್ವಸ್ತೂಪಲಬ್ಧಯೇ ॥ ೬೧೫ ॥
ಸರ್ವವೇದಾನ್ತವಾಕ್ಯಾನಾಂ ಷಡ್ಭಿರ್ಲಿಙ್ಗೈಃ ಸದದ್ವಯೇ ।
ಪರೇ ಬ್ರಹ್ಮಣಿ ತಾತ್ಪರ್ಯನಿಶ್ಚಯಂ ಶ್ರವಣಂ ವಿದುಃ ॥ ೬೧೬ ॥
ಶ್ರುತಸ್ಯೈವಾದ್ವಿತೀಯಸ್ಯ ವಸ್ತುನಃ ಪ್ರತ್ಯಗಾತ್ಮನಃ ।
ವೇದಾನ್ತವಾಕ್ಯಾನುಗುಣಯುಕ್ತಿಭಿಸ್ತ್ವನುಚಿನ್ತನಮ್ ॥ ೬೧೭ ॥
ಮನನಂ ತಚ್ಛ್ರುತಾರ್ಥಸ್ಯ ಸಾಕ್ಷಾತ್ಕರಣಕಾರಣಮ್ ॥ ೬೧೮[2] ॥
ವಿಜಾತೀಯಶರೀರಾದಿಪ್ರತ್ಯಯತ್ಯಾಗಪೂರ್ವಕಮ್ ।
ಸಜಾತೀಯಾತ್ಮವೃತ್ತೀನಾಂ ಪ್ರವಾಹಕರಣಂ ಯಥಾ ॥ ೬೧೯ ॥
ತೈಲಧಾರಾವದಚ್ಛಿನ್ನವೃತ್ತ್ಯಾ ತದ್ ಧ್ಯಾನಮಿಷ್ಯತೇ ॥ ೬೨೦ ॥

೬೧೦-೬೨೦. ಆದ್ದರಿಂದ ಶ್ರುತ್ಯುಕ್ತವಾದ[3] ಬ್ರಹ್ಮವನ್ನು ಸೂಕ್ಷ್ಮವಾದ ಬುದ್ಧಿಯಿಂದಲೇ ತಿಳಿದುಕೊಳ್ಳಬೇಕು. ಯಾರಿಗೆ ಬುದ್ಧಿಯು ಮಂದವಾಗಿರುತ್ತದೆಯೋ ಅವರಿಗಾದರೆ ಮನನಾದಿಗಳಿಲ್ಲದೆ ಶ್ರವಣಮಾತ್ರದಿಂದ ಅಖಂಡಾಕಾರ ವೃತ್ತಿಯಾಗಲಾರದು.[4] ಮಂದಪ್ರಜ್ಞರಿಗೆ ಶ್ರವಣದಿಂದಲೂ ಮನನದಿಂದಲೂ ಧ್ಯಾನದಿಂದಲೂ ನಿರಂತರವಾಗಿ ತತ್ಪರನಾಗಿರುವದರಿಂದಲೂ[5] ಬುದ್ಧಿಗೆ ಸೂಕ್ಷ್ಮ

---

1. 'ಶ್ರುತ್ಯೋದಿತಸ್ತತೋ ಬ್ರಹ್ಮ' ಎಂಬ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ಈ ಪಾಠದ ವಿಷಯಕ್ಕೆ ಅನುವಾದದ ಟಿಪ್ಪಣಿಯನ್ನು ನೋಡಿ.

2. ಹಿಂದಿನ ೬೧೦ ಸೇರಿಸಿ ಲೆಕ್ಕಮಾಡಿದೆ.

3. 'ಶ್ರುತ್ಯೋದಿತಃ' ಎಂಬುದನ್ನು 'ಶ್ರುತ್ಯೋದಿತಂ' ಎಂದು ತಿದ್ದಿಕೊಂಡರೆ ಈ ಅರ್ಥ ; 'ಶ್ರುತ್ಯೋದಿತಃ' ಎಂದೇ ಇದ್ದರೆ ಅನ್ವಯವಾಗುವದಿಲ್ಲ.

4. ಸಾಕ್ಷಾತ್ಕಾರವಾಗುವದಿಲ್ಲ.

5. 'ತತ್ಪರಃ' (ಗೀ. ೪-೩೯) ಎಂಬ ವಚನವನ್ನನುಸರಿಸಿ ಈ ಅರ್ಥವನ್ನು ಮಾಡಿದೆ. ಶ್ರುತಿತಾತ್ಪರ್ಯನಿಶ್ಚಯದಿಂದಲೂ ಎಂಬ ಅಭಿಪ್ರಾಯವಿದ್ದರೆ ಈ ಪದಕ್ಕೆ ಅಷ್ಟನ್ನು ಹೇಳುವ ಸಾಮರ್ಥ್ಯವಿಲ್ಲವೆನ್ನಬೇಕು.

ತ್ವವು[1] ಬರುತ್ತದೆ ; ಅದರಿಂದ (ಬ್ರಹ್ಮ)ವಸ್ತುವು ಕಾಣುತ್ತದೆ. ಆದ್ದರಿಂದ ಮತ್ತೆಮತ್ತೆ[2] ಶ್ರವಣವನ್ನೂ ಮನನವನ್ನೂ ಧ್ಯಾನವನ್ನೂ (ಬ್ರಹ್ಮ)ವಸ್ತುವನ್ನು ಚೆನ್ನಾಗಿ ಕಾಣುವವರೆಗಾಗಿ ಮಾಡುತ್ತಿರಬೇಕು. ಎಲ್ಲಾ ವೇದಾಂತವಾಕ್ಯಗಳಿಗೂ ಆರು ಲಿಂಗಗಳಿಂದ[3] ಸತ್ತೂ ಅದ್ವಿತೀಯವೂ ಆದ ಪರಬ್ರಹ್ಮದಲ್ಲಿಯೇ ತಾತ್ಪರ್ಯವನ್ನು ನಿಶ್ಚಯಿಸಿಕೊಳ್ಳುವದನ್ನು **ಶ್ರವಣವೆನ್ನುವರು,** ಶ್ರವಣಮಾಡಿದ ಪ್ರತ್ಯಗಾತ್ಮನಾದ ಅದ್ವಿತೀಯವಸ್ತುವನ್ನೇ ವೇದಾಂತವಾಕ್ಯಾನುಗುಣವಾದ ಯುಕ್ತಿಗಳಿಂದ ಅನುಚಿಂತನೆಮಾಡುವದು **ಮನನವು ;** ಅದು ಶ್ರವಣಮಾಡಿದ ವಸ್ತುವನ್ನು ಸಾಕ್ಷಾತ್ಕರಿಸಿಕೊಳ್ಳುವದಕ್ಕೆ ಕಾರಣವಾಗಿರುತ್ತದೆ.[4] ವಿಜಾತೀಯವಾದ ಶರೀರವೇ ಮುಂತಾದವುಗಳ ಪ್ರತ್ಯಯವನ್ನು ಬಿಡುವವನ್ನು ಮಾಡುತ್ತಾ ಸಜಾತೀಯವಾದ ಆತ್ಮವೃತ್ತಿಗಳನ್ನು ಪ್ರವಾಹವಾಗಿಸುವದು– ಎಣ್ಣೆಯ ಧಾರೆಯಂತೆ ಕಡಿವಡೆಯದ ವೃತ್ತಿಯಿಂದ (ಸಜಾತೀಯಪ್ರತ್ಯಯವನ್ನು ಪ್ರವಾಹೀಕರಿಸುವದು) **ಧ್ಯಾನವೆನಿಸುತ್ತದೆ.**[5]

## (4) ಶ್ರವಣಾದಿಗಳ ಅವಧಿ

**ತಾವತ್ಕಾಲಂ ಪ್ರಯತ್ನೇನ ಕರ್ತವ್ಯಂ ಶ್ರವಣಂ ಸದಾ ।**
**ಪ್ರಮಾಣಸಂಶಯೋ ಯಾವತ್ ಸ್ವಬುದ್ಧೇರ್ನ ನಿವರ್ತತೇ ॥ ೮೨೦ ॥**

**ಪ್ರಮೇಯಸಂಶಯೋ ಯಾವತ್ ತಾವತ್ತು ಶ್ರುತಿಯುಕ್ತಿಭಿಃ ।**
**ಆತ್ಮಯಾಥಾರ್ಥ್ಯನಿಶ್ಚಿತ್ಯೈ ಕರ್ತವ್ಯಂ ಮನನಂ ಮುಹುಃ ॥ ೮೨೧ ॥**

**ವಿಪರೀತಾತ್ಮಧೀರ್ಯಾವನ್ನ ವಿನಶ್ಯತಿ ಚೇತಸಿ ।**
**ತಾವನ್ನಿರನ್ತರಂ ಧ್ಯಾನಂ ಕರ್ತವ್ಯಂ ಮೋಕ್ಷಮಿಚ್ಛತಾ ॥ ೮೨೨ ॥**

---

1. ಸಮಾಧಿಯಿಂದ ಸೂಕ್ಷ್ಮತ್ವವು ಬರುತ್ತದೆ– ಎಂದು ವಿ. ಚೂ. ೩೫೭.

2. ಬ್ರ. ಸೂ. ೪–೧–೧ರಲ್ಲಿ ಶ್ರವಣಾದಿಗಳನ್ನು ಆವೃತ್ತಿಮಾಡಬೇಕೆಂದೂ ನಿಶ್ಚಯಿಸಿದೆ.

3. ಉಪಕ್ರಮೋಪಸಂಹಾರಗಳು, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿ– ಎಂಬ ತಾತ್ಪರ್ಯಲಿಂಗಗಳಿಂದ. ಇವನ್ನು ವೇ. ಸಾ. (ಪು. ೯೮–೯೯)ರಲ್ಲಿ ವಿವರಿಸಿದೆ.

4. 'ನಿದಿಧ್ಯಾಸನದಮೂಲಕ' ಎಂದಿಟ್ಟುಕೊಳ್ಳಬೇಕೆಂದು ತೋರುತ್ತದೆ.

5. ನಿದಿಧ್ಯಾಸನಕ್ಕೆ ಧ್ಯಾನವೆಂದೇ ಅರ್ಥವೆಂತ ಗ್ರಂಥಕರ್ತರ ಅಭಿಪ್ರಾಯ. ವೇದಾಂತಸಾರ (ಪು. ೧೦೨). ಇಲ್ಲಿ ವೇದಾಂತಸಾರವನ್ನೇ ಅನುಸರಿಸುತ್ತಾ ಹೋಗಿದೆ ಎಂಬುದು ಸ್ಪಷ್ಟ.

**ಯಾವನ್ನ ತರ್ಕೇಣ ನಿರಾಸಿತೋಽಪಿ**
**ದೃಶ್ಯಪ್ರಪಞ್ಚಸ್ತ್ವಪರೋಕ್ಷಬೋಧಾತ್ ।**
**ವಿಲೀಯತೇ ತಾವದಮುಷ್ಯ ಭಿಕ್ಷೋ-**
**ರ್ಧ್ಯಾನಾದಿ ಸಮ್ಯಕ್ ಕರಣೀಯಮೇವ ॥ ೮೨೩ ॥**

೮೨೦–೮೨೩. ಎಲ್ಲಿಯವರೆಗೂ **ಪ್ರಮಾಣಸಂಶಯವು**[1] ತನ್ನ ಬುದ್ಧಿಯಿಂದ ತೊಲಗುವದಿಲ್ಲವೋ, ಅಲ್ಲಿಯವರೆಗೆ ಪ್ರಯತ್ನಪೂರ್ವಕವಾಗಿ ಶ್ರವಣವನ್ನು ಮಾಡಬೇಕು. **ಪ್ರಮೇಯಸಂಶಯವು** ಎಲ್ಲಿಯವರೆಗೆ (ಹೋಗುವದಿಲ್ಲವೋ) ಅಲ್ಲಿಯವರೆಗೆ ಶ್ರುತಿಯುಕ್ತಿಗಳಿಂದ ಆತ್ಮಯಾಥಾತ್ಮ್ಯವನ್ನು ನಿಶ್ಚಯಿಸಿಕೊಳ್ಳುವದಕ್ಕಾಗಿ **ಮನನ**ವನ್ನು ಮತ್ತೆಮತ್ತೆ ಮಾಡಬೇಕು. **ವಿಪರೀತಾತ್ಮಬುದ್ಧಿ**ಯು ಎಲ್ಲಿಯವರೆಗೆ ಚಿತ್ತದಲ್ಲಿ ನಾಶವಾಗುವದಿಲ್ಲವೋ ಅಲ್ಲಿಯವರೆಗೂ ಮುಮುಕ್ಷುವಾದವನು ನಿರಂತರವಾಗಿ ಧ್ಯಾನವನ್ನು ಮಾಡುತ್ತಿರಬೇಕು. ತರ್ಕದಿಂದ ನಿರಾಕರಿಸಿದ ಮೇಲೂ ಎಲ್ಲಿಯವರೆಗೂ ದೃಶ್ಯಪ್ರಪಂಚವು **ಅಪರೋಕ್ಷಬೋಧ**ದಿಂದ ವಿಲಯವಾಗದೆ ಇರುವದೋ ಅಲ್ಲಿಯವರೆಗೆ ಈ ಭಿಕ್ಷುವು **ಧ್ಯಾನಾದಿ**(ಸಾಧನ)ವನ್ನು ಸರಿಯಾಗಿ ಮಾಡುತ್ತಲೇಇರಬೇಕು.

## (5) ಸಮಾಧಿದ್ವೈವಿಧ್ಯ

**ಸವಿಕಲ್ಪೋ ನಿರ್ವಿಕಲ್ಪ ಇತಿ ದ್ವೇಧಾ ನಿಗದ್ಯತೇ ।**
**ಸಮಾಧಿಃ ಸವಿಕಲ್ಪಸ್ಯ ಲಕ್ಷಣಂ ವಚ್ಮಿ ತಚ್ಛೃಣು ॥ ೮೨೪ ॥**

**ಜ್ಞಾತ್ರಾದ್ಯವಿಲಯೇನೈವ ಜ್ಞೇಯೇ ಬ್ರಹ್ಮಣಿ ಕೇವಲೇ ।**
**ತದಾಕಾರಾಕಾರಿತಯಾ ಚಿತ್ತವೃತ್ತೇರವಸ್ಥಿತಿಃ ॥ ೮೨೫ ॥**

**ಸದ್ಭಿಃ ಸ ಏವ ವಿಜ್ಞೇಯಃ ಸಮಾಧಿಃ ಸವಿಕಲ್ಪಕಃ ।**
**ಮೃದ ಏವಾವಭಾನೇಽಪಿ ಮೃಣ್ಮಯದ್ವಿಪಭಾನವತ್ ॥ ೮೨೬ ॥**

**ಸನ್ಮಾತ್ರವಸ್ತುಭಾನೇಽಪಿ ತ್ರಿಪುಟೀ ಭಾತಿ ಸನ್ಮಯೀ ।**
**ಸಮಾಧಿರತ ಏವಾಯಂ ಸವಿಕಲ್ಪ ಇತೀರ್ಯತೇ ॥ ೮೨೭ ॥**

**ಜ್ಞಾತ್ರಾದಿಭಾವಮುತ್ಸೃಜ್ಯ ಜ್ಞೇಯಮಾತ್ರಸ್ಥಿತಿರ್ದೃಢಾ ।**
**ಮನಸೋ ನಿರ್ವಿಕಲ್ಪಃ ಸ್ಯಾತ್ಸಮಾಧಿರ್ಯೋಗಸಂಜ್ಞಿತಃ ॥ ೮೨೮ ॥**

**ಜಲೇ ನಿಕ್ಷಿಪ್ತಲವಣಂ ಜಲಮಾತ್ರತಯಾ ಸ್ಥಿತಮ್ ।**
**ಪೃಥಙ್ನ ಭಾತಿ ಕಿನ್ತ್ವಮ್ಭ ಏಕಮೇವಾವಭಾಸತೇ ॥ ೮೨೯ ॥**

---

1. ಈ ಪ್ರಮಾಣಸಂಶಯಾದಿವಿಭಾಗವು ಯಾವ ಗ್ರಂಥದಲ್ಲಿ ಹೇಳಿದೆಯೋ ತಿಳಿಯದು. ಭಾಷ್ಯದಲ್ಲಂತೂ ಇದು ಕಾಣಿಸುವದಿಲ್ಲ; ವಿವೇಕಚೂಡಾಮಣಿ, ವೇದಾಂತಸಾರ.. ಇವುಗಳಲ್ಲಿಯೂ ಇಲ್ಲ.

**ಯಥಾ ತಥೈವ ಸಾ ವೃತ್ತಿರ್ಬ್ರಹ್ಮಮಾತ್ರತಯಾ ಸ್ಥಿತಾ ।**
**ಪೃಥಙ್ನ ಭಾತಿ ಬ್ರಹ್ಮೈವಾದ್ವಿತೀಯಮವಭಾಸತೇ ॥ ೭೩೦ ॥**
**ಜ್ಞಾತ್ರಾದಿಕಲ್ಪನಾಭಾವಾನ್ಮತೋಽಯಂ ನಿರ್ವಿಕಲ್ಪಕಃ ।**
**ವೃತ್ತೇಃ ಸದ್ಭಾವಬಾಧಾಭ್ಯಾಮುಭಯೋರ್ಭೇದ ಇಷ್ಯತೇ ॥ ೭೩೧ ॥**
**ಸಮಾಧಿಸುಪ್ತ್ಯೋರ್ಜ್ಞಾನಂ ಚಾಜ್ಞಾನಂ ಸುಪ್ತ್ಯಾತ್ರ ನೇಷ್ಯತೇ ॥೭೩೨[1]॥**
**ಸವಿಕಲ್ಪೋ ನಿರ್ವಿಕಲ್ಪಃ ಸಮಾಧಿರ್ದ್ವಾವಿಮೌ ಹೃದಿ ।**
**ಮುಮುಕ್ಷೋರ್ಯತ್ನತಃ ಕಾರ್ಯೌ ವಿಪರೀತನಿವೃತ್ತಯೇ ॥ ೭೩೩ ॥**
**ಕೃತೇಽಸ್ಮಿನ್ ವಿಪರೀತಾಯಾ ಭಾವನಾಯಾ ನಿವರ್ತನಮ್ ।**
**ಜ್ಞಾತಸ್ಯಾಪ್ರತಿಬದ್ಧತ್ವಂ ಸದಾನನ್ದಶ್ಚ ಸಿಧ್ಯತಿ ॥ ೭೩೪ ॥**

೭೨೪–೭೩೪. ಸಮಾಧಿಯು **ಸವಿಕಲ್ಪ**ವೆಂದೂ[2] **ನಿರ್ವಿಕಲ್ಪ**ವೆಂದೂ ಎರಡು ವಿಧವಾಗಿ ಉಕ್ತವಾಗಿದೆ. (ಅವುಗಳೊಳಗೆ) ಸವಿಕಲ್ಪದ ಲಕ್ಷಣವನ್ನು ಹೇಳುತ್ತೇನೆ, ಅದನ್ನು ಕೇಳು. ಜ್ಞಾತೃವೇ ಮುಂತಾದವು ಲಯವಾಗದೆಯೇ ಕೇವಲ ಜ್ಞೇಯಬ್ರಹ್ಮದಲ್ಲಿ ಅದರ ಆಕಾರದಂತೆ ಆಕಾರವುಳ್ಳದ್ದಾಗಿ ಚಿತ್ತವೃತ್ತಿಯು ಇದ್ದುಕೊಂಡಿರುವದಲ್ಲ, ಅದೇ **'ಸವಿಕಲ್ಪಕಸಮಾಧಿ'** ಎಂದು ಸಂತರು ತಿಳಿಯಬೇಕು. ಮಣ್ಣೇ ತೋರುತ್ತಿದ್ದರೂ ಮಣ್ಣಿನ ಆನೆಯು ತೋರುವಂತೆ[3], ಸನ್ಮಾತ್ರವಸ್ತುವೇ ತೋರುತ್ತಿದ್ದರೂ ಸನ್ಮಯವಾದ ತ್ರಿಪುಟಿಯು ತೋರುತ್ತಿರುವದು. ಆದ್ದರಿಂದಲೇ ಈ ಸಮಾಧಿಯು **ಸವಿಕಲ್ಪ**ಕವೆನಿಸುವದು. ಜ್ಞಾತೃತ್ವವೇ ಮುಂತಾದದ್ದನ್ನು ಬಿಟ್ಟು ಜ್ಞೇಯಮಾತ್ರವೇ ಆಗಿರುವ ಗಟ್ಟಿಯಾದ ಮನಸ್ಸಿನ ಸ್ಥಿತಿಯು **ಯೋಗವೆಂಬ ಹೆಸರಿನ ನಿರ್ವಿಕಲ್ಪಕಸಮಾಧಿ**ಯಾಗುವದು. ನೀರಿನಲ್ಲಿ ಹಾಕಿದ ಉಪ್ಪು ಬರಿಯ ನೀರೇ ಆಗಿ ಇರುತ್ತದೆ, ಬೇರೆಯಾಗಿ ತೋರುತ್ತಿರುವದಿಲ್ಲ. ಮತ್ತೇನೆಂದರೆ, ನೀರೊಂದೇ ತೋರುತ್ತಿರುತ್ತದೆ. ಇದು ಹೇಗೋ ಹಾಗೆಯೇ[4] ಆ ವೃತ್ತಿಯು

---

1. ಹಿಂದಿನ (೭೧೯) ಅರ್ಧಶ್ಲೋಕವನ್ನು ಸೇರಿಸಿ ಲೆಕ್ಕಮಾಡಿದೆ.

2. ನಿದಿಧ್ಯಾಸನವಾದ ಬಳಿಕ 'ಸಮಾಧಿ'ಯೂ ಬೇಕೆಂಬುದೂ ನಿದಿಧ್ಯಾಸನವೂ ಭಾವನಾರೂಪವೆಂಬುದೂ ಭಾಷ್ಯದಲ್ಲಿಲ್ಲ ; ವೇ. ಸಾ.ದಲ್ಲಿ (ಪುಟ ೧೧೧ರಲ್ಲಿ) ಇದೆ.

3. ಈ ದೃಷ್ಟಾಂತವು ವೇ. ಸಾ.ದಲ್ಲಿ (ಪು. ೧೧೧ರಲ್ಲಿ) ಇದೆ. ದ್ವೈತವೂ ತೋರುತ್ತಿದ್ದರೂ ಅದ್ವೈತವು ತೋರುತ್ತಿರುವದೆಂಬುದು ಸವಿಕಲ್ಪಕ. 'ಆನೆಯು ತೋರುತ್ತಿದ್ದರೂ ಮಣ್ಣೇ ತೋರುವಂತೆ' ಎಂದು ಅಲ್ಲಿರುವದನ್ನು ಇಲ್ಲಿ 'ಮಣ್ಣೇ ತೋರುತ್ತಿದ್ದರೂ ಆನೆ ತೋರುವಂತೆ' ಎಂದು ತಲೆಕೆಳಕಾಗಿಮಾಡಿದೆ !

4. ಉಪ್ಪು ತೋರದೆಇದ್ದರೂ ನೀರಿನಲ್ಲಿದ್ದೇಇರುತ್ತದೆ. ಅದ್ವಿತೀಯವಸ್ತ್ವಾಕಾರ ಚಿತ್ತವೃತ್ತಿಯು ಸಮಾಧಿಯಲ್ಲಿ ತೋರುವದಿಲ್ಲ –ಎಂದು ಬರೆದಿರುವದರಿಂದ ಅದ್ವೈತಕ್ಕೆ ಭಂಗವಿಲ್ಲವೆ? –ಎಂಬುದನ್ನು ಇಲ್ಲಿ (ಅಥವಾ ವೇ. ಸಾ.ದಲ್ಲಿ) ವಿಚಾರಮಾಡಿಲ್ಲ.

ಬ್ರಹ್ಮಮಾತ್ರವಾಗಿ ಇದ್ದುಕೊಂಡಿರುತ್ತದೆ, ಬೇರೆಯಾಗಿ ತೋರುವದಿಲ್ಲ, ಅದ್ವಿತೀಯವಾದ ಬ್ರಹ್ಮವೇ ತೋರುತ್ತಿರುತ್ತದೆ. ಜ್ಞಾತ್ರಾದಿವಿಕಲ್ಪನೆಯು ಇಲ್ಲದಿರುವದರಿಂದ ಇದು **ನಿರ್ವಿಕಲ್ಪಕವೆಂದು** ಬಗೆಯುತ್ತಾರೆ. ವೃತ್ತಿಯು ಇರುವದು, ಬಾಧಿತವಾಗಿರುವದು– ಇವುಗಳಿಂದ ಸುಷುಪ್ತಿ, ಸಮಾಧಿ– ಇವುಗಳಿಗೆ ಭೇದವು, ಜ್ಞಾನವೂ ಅಜ್ಞಾನವೂ (ಇವುಗಳಿಗೆ ಭೇದವು ಎಂಬುದು) ಇಷ್ಟವಾಗಿರುತ್ತದೆ. ಸುಷುಪ್ತಿಯಿಂದ ಅಜ್ಞಾನವೆಂಬುದು ಈ (ಸಮಾಧಿಯಲ್ಲಿ) ಇಷ್ಟವಲ್ಲ.[1]

ಸವಿಕಲ್ಪ, ನಿರ್ವಿಕಲ್ಪ–ಎಂಬ ಎರಡು ಬಗೆಯ ಸಮಾಧಿಯನ್ನು ಮುಮುಕ್ಷುವು ಹೃದಯದಲ್ಲಿ ವಿಪರೀತ(ಭಾವನಾ)ನಿವೃತ್ತಿಗಾಗಿ ಇಟ್ಟಿರಬೇಕು. ಇದನ್ನು (ಹೃದಯದಲ್ಲಿ)ಟ್ಟುಕೊಂಡಿದ್ದರೆ ವಿಪರೀತಭಾವನೆಯು ನಿವೃತ್ತಿಯಾಗುತ್ತದೆ, ಜ್ಞಾನವು **ಅಪ್ರತಿಬದ್ಧವಾಗುತ್ತದೆ, ಸದಾನಂದವೂ** ಸಿದ್ಧವಾಗುತ್ತದೆ.

## (6) ದೃಶ್ಯಾನುವಿದ್ಧ, ಶಬ್ದಾನುವಿದ್ಧ– ಸವಿಕಲ್ಪ

**ದೃಶ್ಯಾನುವಿದ್ಧಃ ಶಬ್ದಾನುವಿದ್ಧಶ್ಚೇತಿ ದ್ವಿಧಾ ಮತಃ ।**
**ಸವಿಕಲ್ಪಸ್ತಯೋರ್ಯತ್ತಲ್ಲಕ್ಷಣಂ ವಚ್ಮಿ ತಚ್ಛೃಣು ॥ ೮೩೫ ॥**
**ಕಾಮಾದಿಪ್ರತ್ಯಯೈರ್ದೃಶ್ಯೈಃ ಸಂಸರ್ಗೋ ಯತ್ರ ದೃಶ್ಯತೇ ।**
**ಸೋಽಯಂ ದೃಶ್ಯಾನುವಿದ್ಧಃ ಸ್ಯಾತ್ ಸಮಾಧಿಃ ಸವಿಕಲ್ಪಕಃ ॥ ೮೩೬ ॥**
**ಅಹಂಮಮೇದಮಿತ್ಯಾದಿಕಾಮಕ್ರೋಧಾದಿವೃತ್ತಯಃ ।**
**ದೃಶ್ಯನ್ತೇ ಯೇನ ಸಂದ್ರಷ್ಟ್ರಾ ದೃಶ್ಯಾಃ ಸ್ಯುರಹಮಾದಯಃ ॥ ೮೩೭ ॥**
**ಕಾಮಾದಿಸರ್ವವೃತ್ತೀನಾಂ ದ್ರಷ್ಟಾರಮವಿಕಾರಿಣಮ್ ।**
**ಸಾಕ್ಷಿಣಂ ಸ್ವಂ ವಿಜಾನೀಯಾದ್ ಯಸ್ತಾಃ ಪಶ್ಯತಿ ನಿಷ್ಕ್ರಿಯಃ ॥ ೮೩೮ ॥**
**ಕಾಮಾದೀನಾಮಹಂ ಸಾಕ್ಷೀ ದೃಶ್ಯನ್ತೇ ತೇ ಮಯಾ ತತಃ ।**
**ಇತಿ ಸಾಕ್ಷಿತಯಾಽಽತ್ಮಾನಂ ಜಾನಾತ್ಯಾತ್ಮನಿ ಸಾಕ್ಷಿಣಮ್ ॥ ೮೩೯ ॥**
**ದೃಶ್ಯಂ ಕಾಮಾದಿ ಸಕಲಂ ಸ್ವಾತ್ಮನ್ಯೇವ ವಿಲಾಪಯೇತ್ ॥ ೮೩೯½ ॥**

೮೩೫–೮೩೯½. **ಸವಿಕಲ್ಪವು ದೃಶ್ಯಾನುವಿದ್ಧ, ಶಬ್ದಾನುವಿದ್ಧ**[2]– ಎಂದು ಎರಡು ವಿಧವೆಂದು ಒಪ್ಪಲಾಗಿದೆ. ಅವೆರಡರ ಲಕ್ಷಣವನ್ನು ಹೇಳುತ್ತೇವೆ, ಅದನ್ನು

---

1. ಈ ವಾಕ್ಯಭಾಗವು ಸ್ಫುಟವಾಗಿ ಅರ್ಥವಾಗುವದಿಲ್ಲ ; ಸುಷುಪ್ತಿಯಂತೆ ಇಲ್ಲಿ ಅಜ್ಞಾನವು ಇರುವದಿಲ್ಲ– ಎಂದು ವಿವಕ್ಷಿತವಿರಬಹುದು. ಪಂಚದಶಿಯಲ್ಲಿ (೧-೫೬ರಲ್ಲಿ) ಹಾಗೆಂದು ಹೇಳಿದೆ. ಹಾಗಿದ್ದರೂ ಇಲ್ಲಿ ಅದ್ವೈತಸಿದ್ಧಿಗೆ ಪ್ರತಿಬಂಧವೇ ಆಗುತ್ತದೆ.

2. ಈ ವಿಭಾಗವು ವೇ.ಸಾ.ದಲ್ಲಿಲ್ಲ. ದೃಗ್ದೃಶ್ಯವಿವೇಕದಲ್ಲಿ (ಶ್ಲೋ. ೨೩)ರಲ್ಲಿದೆ.

ಕೇಳು. ದೃಶ್ಯವಾದ ಕಾಮವೇ ಮುಂತಾದ ಪ್ರತ್ಯಯಗಳೊಡನೆ ಸಂಬಂಧವು ಎಲ್ಲಿ ತೋರುತ್ತದೆಯೋ ಆ ಇದೇ **ದೃಶ್ಯಾನುವಿದ್ಧ**ವೆಂಬ ಸವಿಕಲ್ಪಕಸಮಾಧಿಯಾಗುವುದು. 'ನಾನು', 'ನನ್ನದು' -ಮುಂತಾದ, ಕಾಮಕ್ರೋಧಗಳೇ ಮುಂತಾದ ವೃತ್ತಿಗಳು ಯಾವನಿಗೆ ಕಾಣುವವೋ ಯಾವಾತನಿಗೆ ಅಹಮಾದಿಗಳು ಕಂಡಾಗ ದೃಶ್ಯವಾಗಿರುವವೋ (ಅವನು) ಕಾಮಾದಿಸರ್ವವೃತ್ತಿಗಳಿಗೂ ದ್ರಷ್ಟೃವಾದ, ಅವಿಕಾರಿಯಾದ ಸಾಕ್ಷಿಯೆಂದು ನೀನು ಅರಿಯಬೇಕು, ಯಾವನು ಅವುಗಳನ್ನು ನೋಡುತ್ತಿರುವನೋ (ಅವನು) ನಿಷ್ಕ್ರಿಯನು[1], 'ಕಾಮಾದಿಗಳಿಗೆ ನಾನು ಸಾಕ್ಷಿಯು, ಆದ್ದರಿಂದ ಅವು ನನಗೆ ತೋರುತ್ತವೆ' -ಎಂದು ತನ್ನನ್ನು ಸಾಕ್ಷಿಯಾಗಿಯೂ ತಿಳಿಯುತ್ತಾ ಸಾಕ್ಷಿ, ದೃಶ್ಯವಾದ ಕಾಮಾದಿಗಳು- ಎಲ್ಲವನ್ನೂ ತನ್ನಲ್ಲಿಯೇ ಲಯಮಾಡಿಕೊಳ್ಳಬೇಕು.[2]

## (7) ತಾನು ಸಾಕ್ಷಿಯೆಂದು ಮಾಡಿಕೊಳ್ಳುವ ಅನುಸಂಧಾನ

**ನಾಹಂ ದೇಹೋ ನಾಪ್ಯಸುರ್ನಾಕ್ಷವರ್ಗೋ**
**ನಾಹಙ್ಕಾರೋ ನೋ ಮನೋ ನಾಪಿ ಬುದ್ಧಿಃ ।**
**ಅನ್ತಸ್ತೇಷಾಂ ಚಾಪಿ ತದ್ವಿಕ್ರಿಯಾಣಾಂ**
**ಸಾಕ್ಷೀ ನಿತ್ಯಃ ಪ್ರತ್ಯಗೇವಾಹಮಸ್ಮಿ** ॥ ೪೪೦[3] ॥
**ವಾಚಃ ಸಾಕ್ಷೀ ಪ್ರಾಣವೃತ್ತೇಶ್ಚ ಸಾಕ್ಷೀ**
**ಬುದ್ಧೇಃ ಸಾಕ್ಷೀ ಬುದ್ಧಿವೃತ್ತೇಶ್ಚ ಸಾಕ್ಷೀ**
**ಚಕ್ಷುಃಶ್ರೋತ್ರಾದೀನ್ದ್ರಿಯಾಣಾಂ ಚ ಸಾಕ್ಷೀ**
**ಸಾಕ್ಷೀ ನಿತ್ಯಃ ಪ್ರತ್ಯಗೇವಾಹಮಸ್ಮಿ** ॥ ೪೪೧ ॥
**ನಾಹಂ ಸ್ಥೂಲೋ ನಾಪಿ ಸೂಕ್ಷ್ಮೋ ನ ದೀರ್ಘೋ**
**ನಾಹಂ ಬಾಲೋ ನೋ ಯುವಾ ನಾಪಿ ವೃದ್ಧಃ ।**
**ನಾಹಂ ಕಾಣೋ ನಾಪಿ ಮೂಕೋ ನ ಷಣ್ಢಃ**
**ಸಾಕ್ಷೀ ನಿತ್ಯಃ ಪ್ರತ್ಯಗೇವಾಹಮಸ್ಮಿ** ॥ ೪೪೨ ॥
**ನಾಸ್ಮ್ಯಾಗನ್ತಾ ನಾಪಿ ಗನ್ತಾ ನ ಹನ್ತಾ**
**ನಾಹಂ ಕರ್ತಾ ನ ಪ್ರಯೋಕ್ತಾ ನ ವಕ್ತಾ ।**
**ನಾಹಂ ಭೋಕ್ತಾ ನೋ ಸುಖೀ ನೈವ ದುಃಖೀ**
**ಸಾಕ್ಷೀ ನಿತ್ಯಃ ಪ್ರತ್ಯಗೇವಾಹಮಸ್ಮಿ** ॥ ೪೪೩ ॥

---

1. ಈ ವಾಕ್ಯದಲ್ಲಿ ಏನು ಹೆಚ್ಚುಕಡಿಮೆಯಾಗಿದೆಯೋ ತಿಳಿಯದು; ಪುನರುಕ್ತಿಯಿರುವಂತೆ ತೋರುತ್ತದೆ.
2. ಈ ಪ್ರಕಾರವನ್ನು ಮುಂದಿನ ಶ್ಲೋಕಗಳಲ್ಲಿ ವರ್ಣಿಸಿದೆ.
3. ಇಲ್ಲಿಂದ ಮುಂದಕ್ಕೆ ೪೪೫ನೆಯ ಶ್ಲೋಕದವರೆಗೆ ಕೊನೆಯ ಪಾದವು ಏಕರೂಪವಾಗಿದೆ.

ನಾಹಂ ಯೋಗೀ ನೋ ವಿಯೋಗೀ ನ ರಾಗೀ
ನಾಹಂ ಕ್ರೋಧೀ ನೈವ ಕಾಮೀ ನ ಲೋಭೀ ।
ನಾಹಂ ಬದ್ಧೋ ನಾಪಿ ಯುಕ್ತೋ ನ ಮುಕ್ತಃ
ಸಾಕ್ಷೀ ನಿತ್ಯಃ ಪ್ರತ್ಯಗೇವಾಹಮಸ್ಮಿ ॥ ೮೪೪ ॥

ನಾನ್ತಃಪ್ರಜ್ಞೋ ನೋ ಬಹಿಷ್ಪ್ರಜ್ಞಕೋ ವಾ
ನೈವ ಪ್ರಜ್ಞೋ ನಾಪಿ ಚಾಪ್ರಜ್ಞ ಏಷಃ ।
ನಾಹಂ ಶ್ರೋತಾ ನಾಪಿ ಮನ್ತಾ ನ ಬೋದ್ಧಾ
ಸಾಕ್ಷೀ ನಿತ್ಯಃ ಪ್ರತ್ಯಗೇವಾಹಮಸ್ಮಿ ॥ ೮೪೫ ॥

ನ ಮೇಽಸ್ತಿ ದೇಹೇನ್ದ್ರಿಯಬುದ್ಧಿಯೋಗೋ
ನ ಪುಣ್ಯಲೇಶೋಽಪಿ ನ ಪಾಪಲೇಶಃ ।
ಕ್ಷುಧಾಪಿಪಾಸಾದಿಷಡೂರ್ಮಿದೂರಃ
ಸದಾ ವಿಮುಕ್ತೋಽಸ್ಮಿ ಚಿದೇವ ಕೇವಲಃ ॥ ೮೪೬ ॥

ಅಪಾಣಿಪಾದೋಽಹಮವಾಗಚಕ್ಷೂ
ಅಪ್ರಾಣ ಏವಾಸ್ಮ್ಯಮನಾ ಹ್ಯಬುದ್ಧಿಃ ।
ವ್ಯೋಮೇವ ಪೂರ್ಣೋಽಸ್ಮಿ ವಿನಿರ್ಮಲೋಽಸ್ಮಿ
ಸದೈಕರೂಪೋಽಸ್ಮಿ ಚಿದೇವ ಕೇವಲಃ ॥ ೮೪೭ ॥

೮೪೦–೮೪೭. ನಾನು ದೇಹವಲ್ಲ, ಪ್ರಾಣವಲ್ಲ, ಇಂದ್ರಿಯಸಮೂಹವೂ ಅಲ್ಲ; ಅಹಂಕಾರವಲ್ಲ, ಮನಸ್ಸಲ್ಲ ಬುದ್ಧಿಯೂ ಅಲ್ಲ. ಅವುಗಳಿಗೆಲ್ಲ ಒಳಗೆ ಅವುಗಳ ವಿಕಾರಗಳಿಗೆ ಸಾಕ್ಷಿಯಾದ ನಿತ್ಯನಾದ ಪ್ರತ್ಯಗಾತ್ಮನೇ ನಾನು.

(ನಾನು) ವಾಕ್ಕಿಗೆ ಸಾಕ್ಷಿ, ಪ್ರಾಣವೃತ್ತಿಗೂ ಸಾಕ್ಷಿ, ಬುದ್ಧಿಗೆ ಸಾಕ್ಷಿ, ಬುದ್ಧಿವೃತ್ತಿಗೂ[1] ಸಾಕ್ಷಿ; ಚಕ್ಷುಸ್ಸು, ಶ್ರೋತ್ರ– ಮುಂತಾದ ಇಂದ್ರಿಯಗಳಿಗೂ ಸಾಕ್ಷಿ. ಸಾಕ್ಷಿಯಾದ ನಿತ್ಯನಾದ ಪ್ರತ್ಯಗಾತ್ಮನೇ ಆಗಿರುತ್ತೇನೆ. ನಾನು, ದಪ್ಪನಾಗಿಲ್ಲ, ಸೂಕ್ಷ್ಮನೂ ಅಲ್ಲ, ಉದ್ದವಾಗಿಯೂ ಇಲ್ಲ; ನಾನು ಹುಡುಗನಲ್ಲ, ಹರೆಯದವನಲ್ಲ, ಮುದುಕನೂ ಅಲ್ಲ, ನಾನು ಒಕ್ಕಣ್ಣನಲ್ಲ, ಮೂಕನಲ್ಲ, ನಪುಂಸಕನಲ್ಲ. ಸಾಕ್ಷಿಯೂ ನಿತ್ಯನೂ ಆದ ಪ್ರತ್ಯಗಾತ್ಮನೇ ಆಗಿರುತ್ತೇನೆ. ಬರುವವನು ನಾನಲ್ಲ, ಹೋಗುವವನೂ ಅಲ್ಲ, ಕೊಲ್ಲುವವನೂ ಅಲ್ಲ. ನಾನು ಕರ್ತೃವೂ ಅಲ್ಲ, ಪ್ರೇರಕನೂ ಅಲ್ಲ, ಮಾತಾಡುವವನೂ ಅಲ್ಲ. ನಾನು ಭೋಕ್ತೃವಲ್ಲ, ಸುಖಿಯಲ್ಲ, ದುಃಖಿಯಲ್ಲವೇ ಅಲ್ಲ. ಸಾಕ್ಷಿಯೂ ನಿತ್ಯನೂ ಆದ ಪ್ರತ್ಯಗಾತ್ಮನೇ ಆಗಿರುತ್ತೇನೆ.

---

1. ಬುದ್ಧಿಯೆಂದರೆ ನಿಶ್ಚಯಾತ್ಮಕಾಂತಃಕರಣ, ಬುದ್ಧಿವೃತ್ತಿ ಎಂದರೆ ನಿಶ್ಚಯ.

ನಾನು ಯೋಗಿಯಲ್ಲ, ವಿಯೋಗಿಯಲ್ಲ, ರಾಗಿಯಲ್ಲ, ಕ್ರೋಧವುಳ್ಳವನೂ ಅಲ್ಲ, ಕಾಮಿಯಲ್ಲವೇ ಅಲ್ಲ, ಲೋಭಿಯಲ್ಲ, ನಾನು ಬದ್ಧನಲ್ಲ, ಯುಕ್ತನಲ್ಲ, ಮುಕ್ತನಲ್ಲ. ಸಾಕ್ಷಿಯೂ ನಿತ್ಯನೂ ಆಗಿರುವ ಪ್ರತ್ಯಗಾತ್ಮನೇ ಆಗಿರುತ್ತೇನೆ. ಅಂತಃಪ್ರಜ್ಞನಲ್ಲ, ಬಹಿಷ್ಪ್ರಜ್ಞನಲ್ಲ; ಪ್ರಜ್ಞನಲ್ಲ, ಅಪ್ರಜ್ಞನೂ ಅಲ್ಲ.[1] ನಾನು ಶ್ರೋತೃವಲ್ಲ; ಮಂತೃವೂ ಅಲ್ಲ, ಬೋದ್ಧೃವೂ ಅಲ್ಲ. ಸಾಕ್ಷಿಯೂ ನಿತ್ಯನೂ ಆಗಿರುವ ಪ್ರತ್ಯಗಾತ್ಮನೇ ಆಗಿರುತ್ತೇನೆ. ನನಗೆ ದೇಹ, ಇಂದ್ರಿಯ, ಬುದ್ಧಿ- ಇವುಗಳ ಸಂಬಂಧವಿರುವದಿಲ್ಲ, ಪುಣ್ಯಲೇಶವೂ ಇಲ್ಲ, ಪಾಪಲೇಶವೂ ಇಲ್ಲ. ಹಸಿವು, ಬಾಯಾರಿಕೆ- ಮುಂತಾದ ಆರು ಊರ್ಮಿಗಳಿಗೆ ದೂರನಾಗಿರುವೆನು. ಯಾವಾಗಲೂ ವಿಮುಕ್ತನಾಗಿರುತ್ತೇನೆ, ಕೇವಲ ಚಿತ್ತೇ ಆಗಿರುತ್ತೇನೆ. ನಾನು ಕೈಕಾಲುಗಳಿಲ್ಲದವನು, ವಾಕ್ಕಿಲ್ಲದವನು, ಚಕ್ಷುಸ್ಸಿಲ್ಲದವನು, ಪ್ರಾಣವಿಲ್ಲದವನು, ಮನಸ್ಸಿಲ್ಲದವನು, ಬುದ್ಧಿಯಿಲ್ಲದವನು, ಆಕಾಶದಂತೆ ಪೂರ್ಣನಾಗಿರುತ್ತೇನೆ, ಅತ್ಯಂತ ನಿರ್ಮಲನಾಗಿರುತ್ತೇನೆ. ಯಾವಾಗಲೂ ಏಕರೂಪವಾಗಿಯೇ ಇರುವ ಕೇವಲ ಚಿತ್ತೇ ಆಗಿರುವೆನು.[2]

## (8) ವಿಪರೀತಭಾವನೆಯನ್ನು ಕಳೆದುಕೊಂಡ ಮುಕ್ತಿಯು ದೃಶ್ಯವಿಲಯರೂಪವಾದ ಸಮಾಧಿಯಿಂದಲೇ

ಇತಿ ಸ್ವಮಾತ್ಮಾನಮವೇಕ್ಷಮಾಣಃ
ಪ್ರತೀತದೃಶ್ಯಂ ಪ್ರವಿಲಾಪಯನ್ ಸದಾ ।
ಜಹಾತಿ ವಿದ್ವಾನ್ ವಿಪರೀತಭಾವಂ
ಸ್ವಾಭಾವಿಕಂ ಭ್ರಾನ್ತಿವಶಾತ್ ಪ್ರತೀತಮ್ ॥ ೮೪೮ ॥

ವಿಪರೀತಾತ್ಮತಾಽಸ್ಫೂರ್ತಿರೇವ ಮುಕ್ತಿರಿತೀರ್ಯತೇ ।
ಸದಾ ಸಮಾಹಿತಸ್ಯೈವ ಸೈಷಾ ಸಿಧ್ಯತಿ ನಾನ್ಯಥಾ ॥ ೮೪೯ ॥

ನ ವೇಷಭಾಷಾಭಿರಮುಷ್ಯ ಮುಕ್ತಿ-
ರ್ಯಾ ಕೇವಲಾಖಣ್ಡಚಿದಾತ್ಮನಾ ಸ್ಥಿತಿಃ ।
ತತ್ಸಿದ್ಧಯೇ ಸ್ವಾತ್ಮನಿ ಸರ್ವದಾ ಸ್ಥಿತೋ
ಜಹ್ಯಾದಹನ್ತಾಂ ಮಮತಾಮುಪಾಧೌ ॥ ೮೫೦ ॥

ಸ್ವಾತ್ಮತತ್ತ್ವಂ ಸಮಾಲಮ್ಬ್ಯ ಕುರ್ಯಾತ್ ಪ್ರಕೃತಿನಾಶನಮ್ ।
ತೇನೈವ ಮುಕ್ತೋ ಭವತಿ ನಾನ್ಯಥಾ ಕರ್ಮಕೋಟಿಭಿಃ ॥ ೮೫೧ ॥

---

1. ಮಾಂ. ೫.
2. ಈವರೆಗಿನ ಶ್ಲೋಕಗಳು 'ನಾಹಂ ದೇಹೋ ನೇನ್ದ್ರಿಯಾಣ್ಯನ್ತರಙ್ಗಮ್', 'ಮನೋಬುದ್ಧ್ಯಹಙ್ಕಾರಚಿತ್ತಾನಿ ನಾಹಮ್'- ಎಂಬ ಪ್ರಕರಣಗಳನ್ನು ನೆನಪಿಗೆ ತರುತ್ತವೆ.

ಜ್ಞಾತ್ವಾ ದೇವಂ ಸರ್ವಪಾಶಾಪಹಾನಿಃ
ಕ್ಷೀಣೈಃ ಕ್ಲೇಶೈರ್ಜನ್ಮಮೃತ್ಯುಪ್ರಹಾಣಿಃ ।
ಇತ್ಯೇವೈಷಾ ವೈದಿಕೀ ವಾಗ್ ಬ್ರವೀತಿ
ಕ್ಲೇಶಕ್ಷತ್ಯಾಂ ಜನ್ಮಮೃತ್ಯುಪ್ರಹಾಣಿಮ್ ॥ ೬೫೨ ॥
ಭೂಯೋ ಜನ್ಮಾದ್ಯಪ್ರಸಕ್ತಿರ್ವಿಮುಕ್ತಿಃ
ಕ್ಲೇಶಕ್ಷತ್ಯಾಂ ಭಾತಿ ಜನ್ಮಾದ್ಯಭಾವಃ ।
ಕ್ಲೇಶಕ್ಷತ್ಯಾ ಹೇತುರಾತ್ಮೈಕನಿಷ್ಠಾ
ತಸ್ಮಾತ್ ಕಾರ್ಯಾ ಹ್ಯಾತ್ಮನಿಷ್ಠಾ ಮುಮುಕ್ಷೋಃ॥ ೬೫೩ ॥
ಕ್ಲೇಶಾಃ ಸ್ಯುರ್ವಾಸನಾ ಏವ ಜನ್ತೋರ್ಜನ್ಮಾದಿಕಾರಣಮ್ ।
ಜ್ಞಾನನಿಷ್ಠಾಗ್ನಿನಾ ದಾಹೇ ತಾಸಾಂ ನೋ ಜನ್ಮಹೇತುತಾ ॥ ೬೫೪ ॥
ಬೀಜಾನ್ಯಗ್ನ್ಯುಪದಗ್ಧಾನಿ ನ ರೋಹನ್ತಿ ಯಥಾ ಪುನಃ ।
ಜ್ಞಾನದಗ್ಧೈಸ್ತಥಾ ಕ್ಲೇಶೈರ್ನಾತ್ಮಾ ಸಂಪದ್ಯತೇ ಪುನಃ ॥ ೬೫೫ ॥
ತಸ್ಮಾನ್ಮುಮುಕ್ಷೋಃ ಕರ್ತವ್ಯಾ ಜ್ಞಾನನಿಷ್ಠಾ ಪ್ರಯತ್ನತಃ ।
ನಿಃಶೇಷವಾಸನಾಕ್ಷತ್ಯೈ ವಿಪರೀತನಿವೃತ್ತಯೇ ॥ ೬೫೬ ॥

೬೪೮-೬೫೬. ಹೀಗೆಂದು ತನ್ನ ಆತ್ಮನನ್ನೇ ನೋಡುತ್ತಾ ತೋರುವ ದೃಶ್ಯವನ್ನು ಯಾವಾಗಲೂ ಪ್ರವಿಲಯಮಾಡಿಕೊಳ್ಳುತ್ತಾ, ಜ್ಞಾನಿಯಾದವನು ಸ್ವಾಭಾವಿಕವಾಗಿ ಭ್ರಾಂತಿವಶದಿಂದ ತೋರುತ್ತಿದ್ದ ವಿಪರೀತಭಾವವನ್ನು ತೊಲಗಿಸಿಕೊಳ್ಳುತ್ತಾನೆ.

ವಿಪರೀತಾತ್ಮಭಾವವು ತೋರದಿರುವದೇ ಮುಕ್ತಿಯೆಂದು ಹೇಳಲ್ಪಡುತ್ತದೆ. ಯಾವಾಗಲೂ **ಸಮಾಹಿತನಾಗಿರುವವನಿಗೇ**[1] ಈ (ಮುಕ್ತಿಯು) ಸಿದ್ಧವಾದೀತೇ ಹೊರತು ಬೇರೊಂದು ರೀತಿಯಿಂದ (ಸಿದ್ಧ)ವಾಗಲಾರದು. **ಅಖಂಡ ಚಿದ್ರೂಪದಿಂದ** ಇರುವದೆಂಬ ಮುಕ್ತಿಯಿದೆಯಲ್ಲ, ಅದು ವೇಷಭಾಷಾದಿಗಳಿಂದ ಇವನಿಗೆ ಆಗಲಾರದು. ಅದು ಸಿದ್ಧಿಸುವದಕ್ಕಾಗಿ ತನ್ನ ಆತ್ಮನಲ್ಲಿಯೇ ಯಾವಾಗಲೂ ಇದ್ದುಕೊಂಡು[2] ಉಪಾಧಿಯಲ್ಲಿರುವ ಅಹಂತೆ, ಮಮತೆ- ಇವುಗಳನ್ನು ನಿವಾರಿಸಿಕೊಳ್ಳಬೇಕು. ತನ್ನ ಆತ್ಮನ ತತ್ತ್ವವನ್ನು ಆಶ್ರಯಿಸಿಕೊಂಡು **ಪ್ರಕೃತಿಯ ನಾಶವನ್ನು** ಮಾಡಿಕೊಳ್ಳಬೇಕು. ಆದರಿಂದಲೇ ಮುಕ್ತನಾಗುತ್ತಾನೆ, ಹೀಗಲ್ಲದೆ ಬೇರೆಯ ಪ್ರಕಾರದಿಂದ ಕರ್ಮಕೋಟಿಗಳಿಂದಲೂ[3] (ಮುಕ್ತನಾಗ)ಲಾರನು. "ದೇವನನ್ನು ಅರಿತುಕೊಂಡರೆ ಸರ್ವಪಾಶಗಳೂ ಸಡಿಲವಾಗುವವು. ಕ್ಲೇಶಗಳು

---

1. ಸಮಾಧಿಯಿಂದಲೇ ವಿಪರೀತಭಾವನಾನಿವೃತ್ತಿಯೆಂಬ ವಿಶೇಷವು ಭಾಷ್ಯದಲ್ಲಿಲ್ಲ.
2. ಸಮಾಧಿಯಿಂದ ಇದ್ದುಕೊಂಡು ಎಂಬ ಭಾವವಿರಬಹುದು.
3. ವಿ. ಚೂ. ೧೧.

ಕ್ಷಯವಾದರೆ ಜನ್ಮಮೃತ್ಯುಗಳು ನಾಶವಾಗುವವು'' (ಶ್ವೇ. ೧-೧೧) ಎಂದೇ ಈ ವೈದಿಕವಾಕ್ಯವು ಕ್ಲೇಶಕ್ಷಯದಿಂದ ಜನ್ಮಮೃತ್ಯುಗಳ ನಾಶವನ್ನು ಹೇಳುತ್ತಿದೆ. ಮತ್ತೆ ಜನ್ಮವೇ ಮುಂತಾದವು ಅಂಟದೆಇರುವದೇ ಮುಕ್ತಿ; ಕ್ಲೇಶಗಳು ಕ್ಷಯವಾದರೆ ಆ ಜನ್ಮಾದಿಗಳ ಅಭಾವವು ತೋರುವದು. ಕ್ಲೇಶಗಳ ಕ್ಷಯಕ್ಕೆ ಆತ್ಮೈಕನಿಷ್ಠೆಯು ಹೇತು. ಆದ್ದರಿಂದ ಮುಮುಕ್ಷುವಾದವನು **ಆತ್ಮನಿಷ್ಠೆಯನ್ನು**[1] ಮಾಡಿಕೊಳ್ಳಬೇಕು. ಕ್ಲೇಶಗಳೆಂದರೆ ವಾಸನೆಗಳೇ. ಅವೇ ಜೀವನ ಜನ್ಮಾದಿಗಳಿಗೆ ಕಾರಣವಾಗಿರುವವು. ಆ (ವಾಸನೆಗಳು) **ಜ್ಞಾನನಿಷ್ಠಾಗ್ನಿಯಿಂದ** ಸುಟ್ಟುಹೋದರೆ ಜನ್ಮಕ್ಕೆ ಕಾರಣವಾಗುವದಿಲ್ಲ. 'ಬೆಂಕಿಯಿಂದ ಸುಟ್ಟ ಬೀಜಗಳು ಹೇಗೆ ಮತ್ತೆ ಮೊಳೆತುಕೊಳ್ಳುವದಿಲ್ಲವೋ ಹಾಗೆ ಕ್ಲೇಶಗಳು ಜ್ಞಾನದಿಂದ ಸುಟ್ಟುಹೋದರೆ ಆತ್ಮನು ಅವಕ್ಕೆ ಮತ್ತೆ ಸೇರಿಕೊಳ್ಳುವದಿಲ್ಲ.' (ಮೋ. ಧ.) ಆದ್ದರಿಂದ ಮುಮುಕ್ಷುವಾದವನು ಪ್ರಯತ್ನಪೂರ್ವಕವಾಗಿ ವಿಶೇಷವಾಗಿ ವಾಸನೆಗಳು ಕ್ಷಯವಾಗಿ ವಿಪರೀತ(ಜ್ಞಾನ)ವು ತೊಲಗುವದಕ್ಕಾಗಿ **ಜ್ಞಾನನಿಷ್ಠೆಯನ್ನು** ಮಾಡುತ್ತಿರಬೇಕು.

## ಜ್ಞಾನನಿಷ್ಠೆಗೆ ಕರ್ಮದಿಂದ ಆಗಬೇಕಾದದ್ದೇನೂ ಇಲ್ಲ

**ಜ್ಞಾನನಿಷ್ಠಾತತ್ಪರಸ್ಯ ನೈವ ಕರ್ಮೋಪಯುಜ್ಯತೇ ।**
**ಕರ್ಮಣೋ ಜ್ಞಾನನಿಷ್ಠಾಯಾ ನ ಸಿಧ್ಯತಿ ಸಹಸ್ಥಿತಿಃ** ॥ ೮೫೭ ॥

**ಪರಸ್ಪರವಿರುದ್ಧತ್ವಾತ್ ತಯೋರ್ಭಿನ್ನಸ್ವಭಾವಯೋಃ ।**
**ಕರ್ತೃತ್ವಭಾವನಾಪೂರ್ವಂ ಕರ್ಮ ಜ್ಞಾನಂ ವಿಲಕ್ಷಣಮ್** ॥ ೮೫೮ ॥

**ದೇಹಾತ್ಮಬುದ್ಧೇರ್ವಿಚ್ಛಿತ್ತ್ಯೈ ಜ್ಞಾನಂ ಕರ್ಮ ವಿವೃದ್ಧಯೇ ।**
**ಅಜ್ಞಾನಮೂಲಕಂ ಕರ್ಮ ಜ್ಞಾನಂ ತೂಭಯನಾಶಕಮ್** ॥ ೮೫೯ ॥

**ಜ್ಞಾನೇನ ಕರ್ಮಣೋ ಯೋಗಃ ಕಥಂ ಸಿಧ್ಯತಿ ವೈರಿಣಾ ।**
**ಸಹಯೋಗೋ ನ ಘಟತೇ ಯಥಾ ತಿಮಿರತೇಜಸೋಃ** ॥ ೮೬೦ ॥

**ನಿಮೇಷೋನ್ಮೇಷಯೋರ್ವಾಪಿ ತಥೈವ ಜ್ಞಾನಕರ್ಮಣೋಃ**[2] ॥ ೮೬೧ ॥

**ಪ್ರತೀಚೀಂ ಪಶ್ಯತಃ ಪುಂಸಃ**[3] **ಕುತಃ ಪ್ರಾಚೀವಿಲೋಕನಮ್ ।**
**ಪ್ರತ್ಯಕ್ಪ್ರವಣಚಿತ್ತಸ್ಯ ಕುತಃ ಕರ್ಮಣಿ ಯೋಗ್ಯತಾ** ॥ ೮೬೨ ॥

---

1. ನಿಷ್ಠೆ ಎಂಬುದನ್ನು ಜ್ಞಾನಾಭ್ಯಾಸವೆಂಬರ್ಥದಲ್ಲಿ ಬಳಸಿದೆ. ವಿ.ಚೂ. ೨೬೫,೨೭೯.
2. ೮೫೯ನ್ನು ಸೇರಿಸಿ ಲೆಕ್ಕಮಾಡಿದೆ.
3. 'ಪುಂಸಾಮ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ಜ್ಞಾನೈಕನಿಷ್ಠಾನಿರತಸ್ಯ ಭಿಕ್ಷೋ-
ರ್ನೈವಾವಕಾಶೋಽಸ್ತಿ ಹಿ ಕರ್ಮತನ್ತ್ರೇ ।
ತದೇವ ಕರ್ಮಾಸ್ಯ ತದೇವ ಸನ್ಧ್ಯಾ
ತದೇವ ಸರ್ವಂ ನ ತತೋಽನ್ಯದಸ್ತಿ ॥ ೮೬೩ ॥

೮೫೭–೮೬೩. ಜ್ಞಾನನಿಷ್ಠೆಯಲ್ಲಿಯೇ ತತ್ಪರನಾಗಿರುವವನಿಗೆ[1] ಕರ್ಮವು ಉಪಯೋಗಕ್ಕೆ ಬರುವದೇಇಲ್ಲ ; ಕರ್ಮವು ಜ್ಞಾನನಿಷ್ಠೆಯೊಡನೆ ಇರುತ್ತದೆ ಎಂಬುದೇ ಸಿದ್ಧಿಸುವದಿಲ್ಲ; ಏಕೆಂದರೆ ಭಿನ್ನಸ್ವಭಾವವುಳ್ಳ ಅವೆರಡೂ ಒಂದಕ್ಕೊಂದು ವಿರುದ್ಧವಾಗಿರುತ್ತವೆ. (ಹೇಗೆಂದರೆ) ಕರ್ಮವು ಕರ್ತೃತ್ವಭಾವನಾಪೂರ್ವಕವಾಗಿ (ಉಂಟಾಗುವದು), ಜ್ಞಾನವು (ಇದಕ್ಕೆ) ವಿಲಕ್ಷಣವಾಗಿರುತ್ತದೆ. ಜ್ಞಾನವು ದೇಹಾತ್ಮಬುದ್ಧಿಯನ್ನು ನಾಶಮಾಡುವ (ಪ್ರಯೋಜನವುಳ್ಳದ್ದು), ಕರ್ಮವು (ಅದನ್ನು) ಬೆಳೆಯಿಸುವ (ಫಲ)ವುಳ್ಳದ್ದು ; ಕರ್ಮವು ಅಜ್ಞಾನಮೂಲಕವಾಗಿ (ಆಗತಕ್ಕದ್ದು) ; ಜ್ಞಾನವಾದರೊ, (ಅಜ್ಞಾನ, ಕರ್ಮ)–ಎರಡನ್ನೂ ನಾಶಗೊಳಿಸ ತಕ್ಕದ್ದು. ಕರ್ಮಕ್ಕೆ (ತನಗೆ) ವೈರಿಯಾದ ಜ್ಞಾನದೊಡನೆ ಸಂಬಂಧವು ಹೇಗೆ ಸಿದ್ಧಿಸೀತು? ಕತ್ತಲುಬೆಳಕುಗಳೂ ಅಥವಾ ಕಣ್ಣುಮುಚ್ಚುವದು, (ಕಣ್ಣು)ಬಿಡುವದು –ಇವೆರಡಕ್ಕೂ ಹೇಗೆ ಸಹಸಂಬಂಧವು ಆಗಲಾರದೋ (ಹಾಗೆಯೇ ಜ್ಞಾನಕರ್ಮಗಳಿಗೂ ಇರಲಾರದು). ಪಶ್ಚಿಮದಿಕ್ಕನ್ನು ನೋಡುತ್ತಿರುವ ಪುರುಷನಿಗೆ ಪೂರ್ವದಿಕ್ಕಿನ ದರ್ಶನವು ಎಲ್ಲಿಂದ (ಲಭಿಸೀತು) ? ಒಳಗಡೆಗೆ ವಾಲಿರುವ ಚಿತ್ತವುಳ್ಳವನಿಗೆ ಕರ್ಮಾಧಿಕಾರವು ಎಲ್ಲಿಂದ ಬಂದೀತು ? ಜ್ಞಾನವೊಂದರ ನಿಷ್ಠೆಯಲ್ಲಿಯೇ ನಿರತನಾದ ಭಿಕ್ಷುವಿಗೆ ಕರ್ಮಶಾಸ್ತ್ರದಲ್ಲಿ ಅವಕಾಶವಿರುವದೇ ಇಲ್ಲವಷ್ಟೆ ? ಆ (ಜ್ಞಾನನಿಷ್ಠೆಯೇ) ಇವನಿಗೆ ಕರ್ಮ, ಅದೇ ಸಂಧ್ಯೆ, ಅದೇ ಎಲ್ಲವೂ ; ಅದಕ್ಕಿಂತ ಬೇರೆಯಾಗಿ ಯಾವದೂ ಇಲ್ಲವೇ ಇಲ್ಲ.

## ಜ್ಞಾನನಿಷ್ಠೆಯನ್ನು ಮಾಡುತ್ತಿರುವವನಿಗೆ ಮತ್ತೆಯಾವ ಅನುಷ್ಠಾನವೂ ಬೇಕಿರುವದಿಲ್ಲ

ಬುದ್ಧಿಕಲ್ಪಿತಮಾಲಿನ್ಯಕ್ಷಾಲನಂ ಸ್ನಾನಮಾತ್ಮನಃ ।
ತೇನೈವ ಶುದ್ಧಿರೇತಸ್ಯ ನ ಮೃದಾ ನ ಜಲೇನ ಚ ॥ ೮೬೪ ॥
ಸ್ವಸ್ವರೂಪೇ ಮನಃಸ್ಥಾನಮನುಷ್ಠಾನಂ ತದಿಷ್ಯತೇ ।
ಕರಣತ್ರಯಸಾಧ್ಯಂ ಯತ್ತನ್ಮೃಷಾ ತದಸದ್ಯತಃ[2] ॥ ೮೬೫ ॥

---

1. ಜ್ಞಾನನಿಷ್ಠೆಯ ವಿಷಯಕ್ಕೆ ಆಚಾರ್ಯರ ಮತವೇನೆಂಬ ಬಗ್ಗೆ ಗೀ.ಭಾ.೧೮.-೫೮ ನ್ನು ನೋಡಿ.

2. 'ತದಸತ್ಕೃತಃ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

**ವಿನಿಷಿಧ್ಯಾಖಿಲಂ ದೃಶ್ಯಂ ಸ್ವಸ್ವರೂಪೇಣ ಯಾ ಸ್ಥಿತಿಃ ।**
**ಸಾ ಸನ್ಧ್ಯಾ ತದನುಷ್ಠಾನಂ ತದ್ದಾನಂ ತದ್ಧಿ ಭೋಜನಮ್ ॥ ೮೬೬ ॥**

**ವಿಜ್ಞಾತಪರಮಾರ್ಥಾನಾಂ ಶುದ್ಧಸತ್ತ್ವಾತ್ಮನಾಂ ಸತಾಮ್ ।**
**ಯತೀನಾಂ ಕಿಮನುಷ್ಠಾನಂ ಸ್ವಾನುಸನ್ಧಿಂ ವಿನಾಪರಮ್ ॥ ೮೬೭ ॥**

**ತಸ್ಮಾತ್ ಕ್ರಿಯಾನ್ತರಂ ತ್ಯಕ್ತ್ವಾ ಜ್ಞಾನನಿಷ್ಠಾಪರೋ ಯತಿಃ ।**
**ಸದಾತ್ಮನಿಷ್ಠಯಾ ತಿಷ್ಠೇನ್ನಿಶ್ಚಲಸ್ತತ್ಪರಾಯಣಃ ॥ ೮೬೮ ॥**

೮೬೬–೮೬೮. ಬುದ್ಧಿಯಿಂದ ಕಲ್ಪಿತವಾಗಿರುವ ಮಲವನ್ನು ತೊಳೆಯುವದೇ ಆತ್ಮನಿಗೆ ಸ್ನಾನವು. ಇವನಿಗೆ ಆದರಿಂದಲೇ ಶುದ್ಧಿಯಾಗುವದೇ ಹೊರತು ಮಣ್ಣಿನಿಂದ ಆಗಲಾರದು, ನೀರಿನಿಂದಲೂ (ಆಗಲಾರದು). ತನ್ನ ಸ್ವರೂಪದಲ್ಲಿ ಮನಸ್ಸನ್ನಿರಿಸಿಕೊಳ್ಳುವದಿದೆಯಲ್ಲ, ಅದೇ ಅನುಷ್ಠಾನವೆನಿಸುತ್ತದೆ ; ಏಕೆಂದರೆ (ಶರೀರವಾಙ್ಮನಸ್ಸುಗಳೆಂಬ) ಮೂರು ಕರಣಗಳಿಂದ ಸಾಧಿಸತಕ್ಕದ್ದಿದೆಯಲ್ಲ, ಅದು ಹುಸಿ ; ಏಕೆಂದರೆ ಅದು ಇಲ್ಲವೇಇಲ್ಲ.[1] ದೃಶ್ಯವೆಲ್ಲವನ್ನೂ ಅಲ್ಲಗಳೆದು ತನ್ನ ಸ್ವರೂಪದಿಂದ ಇದ್ದುಕೊಂಡಿರುವದಿದೆಯಲ್ಲ, ಅದೇ ಸಂಧ್ಯೆ, ಅದೇ ಅನುಷ್ಠಾನ, ಅದೇ ದಾನ, ಅದೇ ಭೋಜನ. ಪರಮಾರ್ಥವನ್ನು ಅರಿತುಕೊಂಡು, ಅಂತಃಕರಣಶುದ್ಧಿಯಾಗಿರುವ ಸತ್ಪುರುಷರಾದ ಯತಿಗಳಿಗೆ ಆತ್ಮಾನುಸಂಧಾನವನ್ನು ಬಿಟ್ಟು ಮತ್ತೆ ಬೇರೆ ಯಾವ ಅನುಷ್ಠಾನವಿದ್ದೀತು? ಆದ್ದರಿಂದ ಮಿಕ್ಕ ಕ್ರಿಯೆಯನ್ನು ಬಿಟ್ಟು ಜ್ಞಾನನಿಷ್ಠಾಪರನಾದ ಯತಿಯು ಯಾವಾಗಲೂ ನಿಶ್ಚಲನಾಗಿ ಅದನ್ನೇ ಹೆಚ್ಚೆಂದು ತಿಳಿದುಕೊಂಡು ಯಾವಾಗಲೂ ಆತ್ಮನಿಷ್ಠೆಯಲ್ಲಿಯೇ[2] ಇರಬೇಕು.

## ಯೋಗಾರೂಢನಿಗೆ ಯಾವ ಕರ್ಮವೂ ಇಲ್ಲ

**ಕರ್ತವ್ಯಂ ಸ್ವೋಚಿತಂ ಕರ್ಮ ಯೋಗಮಾರೋಢುಮಿಚ್ಛತಾ ।**
**ಆರೋಹಣಂ ಕುರ್ವತಸ್ತು ಕರ್ಮ ನಾರೋಹಣಂ ಮತಮ್ ॥ ೮೬೯ ॥**

**ಯೋಗಂ ಸಮಾರೋಹತಿ ಯೋ ಮುಮುಕ್ಷುಃ**
**ಕ್ರಿಯಾನ್ತರಂ ತಸ್ಯ ನ ಯುಕ್ತಮೀಷತ್ ।**
**ಕ್ರಿಯಾನ್ತರಾಸಕ್ತಮನಾಃ ಪತತ್ಯಸೌ**
**ತಾಲದ್ರುಮಾರೋಹಣಕರ್ತೃವದ್ ಧ್ರುವಮ್ ॥ ೮೭೦ ॥**

---

1. ಕರಣತ್ರಯದಿಂದ ಮಾಡುವದು ಅನಿತ್ಯವಾದ್ದರಿಂದ ಅದು ನಿಜವಾದ ಅನುಷ್ಠಾನವಲ್ಲ ಎಂದರ್ಥ.

2. ಜ್ಞಾನನಿಷ್ಠಾಪರನು ಎಂದರೆ ಸಮಾಧಿಯನ್ನು ಪಡೆಯಬೇಕೆನ್ನುವವನು ; ಆತ್ಮನಿಷ್ಠೆಯೆಂದರೆ ಧ್ಯಾನಯೋಗವನ್ನು ಮಾಡುವದು– ಎಂದು ವೈಲಕ್ಷಣ್ಯವನ್ನು ಇಲ್ಲಿ ಕಲ್ಪಿಸಿಕೊಳ್ಳಬೇಕು ; ಇಲ್ಲದಿದ್ದರೆ ಪುನರುಕ್ತಿಯಾಗುವದು.

**ಯೋಗಾರೂಢಸ್ಯ ಸಿದ್ಧಸ್ಯ ಕೃತಕೃತ್ಯಸ್ಯ ಧೀಮತಃ ।**
**ನಾಸ್ತ್ಯೇವ ಹಿ ಬಹಿರ್ದೃಷ್ಟಿಃ ಕಾ ಕಥಾ ತತ್ರ ಕರ್ಮಣಾಮ್ ॥ ೮೭೧ ॥**
**ದೃಶ್ಯಾನುವಿದ್ಧಃ ಕಥಿತಃ ಸಮಾಧಿಃ ಸವಿಕಲ್ಪಕಃ ॥ ೮೭೧ನ್ತಿ ॥**

೮೬೯-೮೭೧ನ್ತಿ. ಯೋಗವನ್ನು ಏರಲು ಇಚ್ಛಿಸುವವನು[1] ತನ್ನ (ವರ್ಣಾಶ್ರಮಕ್ಕೆ) ಉಚಿತವಾದ ಕರ್ಮವನ್ನು ಮಾಡಬೇಕು. ಆರೋಹಣವನ್ನು ಮಾಡುತ್ತಿರುವವನಿಗಾದರೊ, ಕರ್ಮವು ಹತ್ತುವದಕ್ಕೆ (ಸಾಧನ)ವೆನಿಸುವದಿಲ್ಲ.[2] ಯಾವ ಮುಮುಕ್ಷುವು ಯೋಗವನ್ನು ಏರುತ್ತಿರುತ್ತಾನೋ ಅವನಿಗೆ ಮತ್ತೆ ಯಾವ ಕರ್ಮವೂ ಸ್ವಲ್ಪವೂ ಯುಕ್ತವಲ್ಲ; ಅವನು ಮತ್ತೊಂದು ಕ್ರಿಯೆಯಲ್ಲಿ ಆಸಕ್ತಿಯುಳ್ಳ ಮನಸ್ಸಿನವನಾಗಿದ್ದರೆ ತಾಳೆಯಮರವನ್ನು ಹತ್ತುತ್ತಿರುವವನಂತೆ ನಿಶ್ಚಯವಾಗಿ ಬೀಳುತ್ತಾನೆ. ಯೋಗವನ್ನು ಹತ್ತಿಯೇ ಇರುವ ಸಿದ್ಧನು ಕೃತಕೃತ್ಯನಾಗಿ ವಿವೇಕಿಯಾಗಿರುವದರಿಂದ (ಅವನಿಗೆ) ಹೊರಗೆ ದೃಷ್ಟಿಯು ಇರುವದೇ ಇಲ್ಲವಷ್ಟೆ ? ಅಲ್ಲಿ ಕರ್ಮಗಳ ಮಾತೆಲ್ಲಿಯದು ?

(ಹೀಗೆ) ದೃಶ್ಯಾನುವಿದ್ಧವಾದ ಸವಿಕಲ್ಪಸಮಾಧಿಯನ್ನು ಹೇಳಿದ್ದಾಯಿತು.

## ಶಬ್ದಾನುವಿದ್ಧಸಮಾಧಿ

**ಶುದ್ಧೋಽಹಂ ಬುದ್ಧೋಽಹಂ ಪ್ರತ್ಯಗ್ರೂಪೇಣ ನಿತ್ಯಸಿದ್ಧೋಽಹಮ್ ।**
**ಶಾನ್ತೋಽಹಮನನ್ತೋಽಹಂ ಸತತಪರಾನನ್ದಸಿನ್ಧುರೇವಾಹಮ್ ॥೮೭೨॥**

**ಆದ್ಯೋಽಹಮನಾದ್ಯೋಽಹಂ ವಾಙ್ಮನಸಾಽಸಾಧ್ಯವಸ್ತುಮಾತ್ರೋಽಹಮ್**
**ನಿಗಮವಚೋವೇದ್ಯೋಽಹಮನವದ್ಯಾಖಣ್ಡಬೋಧರೂಪೋಽಹಮ್ ॥**

**ವಿದಿತಾವಿದಿತಾನ್ಯೋಽಹಂ ಮಾಯಾತತ್ಕಾರ್ಯಲೇಶಶೂನ್ಯೋಽಹಮ್ ।**
**ಕೇವಲದೃಗಾತ್ಮಕೋಽಹಂ ಸಂವಿನ್ಮಾತ್ರಃ ಸಕೃದ್ವಿಭಾತೋಽಹಮ್ ॥೮೭೪॥**

**ಅಪರೋಽಹಮನಪರೋಽಹಂ ಬಹಿರನ್ತಶ್ಚಾಪಿ ಪೂರ್ಣ ಏವಾಹಮ್ ।**
**ಅಜರೋಽಹಮಕ್ಷರೋಽಹಂ ನಿತ್ಯಾನನ್ದೋಽಹಮದ್ವಿತೀಯೋಽಹಮ್ ॥**

**ಪ್ರತ್ಯಗಭಿನ್ನಮಖಣ್ಡಂ ಸತ್ಯಜ್ಞಾನಾದಿಲಕ್ಷಣಂ ಶುದ್ಧಮ್ ।**
**ಶ್ರುತ್ಯವಗಮ್ಯಂ ತಥ್ಯಂ ಬ್ರಹ್ಮೈವಾಹಂ ಪರಂ ಜ್ಯೋತಿಃ[3] ॥ ೮೭೬ ॥**

**ಏವಂ ಸನ್ಮಾತ್ರಗಾಹಿನ್ಯಾ ವೃತ್ತ್ಯಾ ತನ್ಮಾತ್ರಗಾಹಕೈಃ ।**
**ಶಬ್ದೈಃ ಸಮರ್ಪಿತಂ ವಸ್ತು ಭಾವಯೇನ್ನಿಶ್ಚಲೋ ಯತಿಃ ॥ ೮೭೭ ॥**

---

1. 'ಯೋಗಾರುರುಕ್ಷು, ಯೋಗಾರೋಹಣಕರ್ತ, ಯೋಗಾರೂಢ- ಎಂದು ಮೂರು ವಿಭಾಗವನ್ನು ಇಲ್ಲಿ ಮಾಡಿದೆ. ಎರಡನೆಯವನಿಗೆ ಕರ್ಮವಿಲ್ಲ.

2. ಬೇರೆಯ ಕಡೆ ಮನಸ್ಸಿದ್ದರೆ ಯೋಗದಿಂದ ಚ್ಯುತನಾಗುತ್ತಾನೆ.

3. ವಿ. ಚೂ. ೪೮೬ ಮುಂತಾಗಿರುವ ಶ್ಲೋಕಗಳಿಗೆ ಇದನ್ನು ಹೋಲಿಸಿ.

ಕಾಮಾದಿದೃಶ್ಯಪ್ರವಿಲಾಪಪೂರ್ವಕಂ
ಶುದ್ಧೋಽಹಮಿತ್ಯಾದಿಕಶಬ್ದಮಿಶ್ರಃ ।
ದೃಶ್ಯೈವ ನಿಷ್ಠಸ್ಯ ಯ ಏಷ ಭಾವಃ
ಶಬ್ದಾನುವಿದ್ಧಃ ಕಥಿತಃ ಸಮಾಧಿಃ ॥ ೮೭೮ ॥

೮೭೭-೮೭೮. ''ನಾನು ಶುದ್ಧನು, ಬುದ್ಧ(ಜ್ಞಾನಸ್ವರೂಪ)ನು ನಾನು. ಒಳಗಿನ (ಆತ್ಮ)ರೂಪದಿಂದ ನಿತ್ಯಸಿದ್ಧನು ನಾನು, ನಾನು ಶಾಂತನು, ಅನಂತನು ನಾನು. ಕಡಿವಡೆಯದ ಪರಮಾನಂದದ ಸಮುದ್ರವೇ ನಾನು. ಆದ್ಯನು ನಾನು, ಆದಿಯಿಲ್ಲದವನು ನಾನು. ವಾಙ್ಮನಸ್ಸುಗಳಿಂದ ಗ್ರಾಹ್ಯವಲ್ಲದ ಕೇವಲವಸ್ತು ನಾನು, ವೇದಾಂತವಚನವೇದ್ಯನು ನಾನು, ನಿರ್ದುಷ್ಟವಾದ ಅಖಂಡ ಚೈತನ್ಯಸ್ವರೂಪನು ನಾನು. ಅರಿಯಲ್ಪಟ್ಟದ್ದು, ಅರಿಯಲ್ಪಡದ್ದು- (ಈ ಎರಡಕ್ಕಿಂತಲೂ)[1] ವಿಲಕ್ಷಣ(ರೂಪನು) ನಾನು, ಮಾಯೆ, ಅದರ ಕಾರ್ಯ- ಇವುಗಳ ಲೇಶವೂ ಇಲ್ಲದವನು ನಾನು, ಕೇವಲ ದೃಗ್ರೂಪನು ನಾನು, ಅನುಭವಮಾತ್ರನೂ ನಿತ್ಯಪ್ರಕಾಶರೂಪನೂ ನಾನು, ನನಗಿಂತ ಮತ್ತೊಂದಾದ ದ್ವಿತೀಯವಿಲ್ಲದವನು ನಾನು, ನನಗಿಂತ ಬೇರೆಯಾದ (ಕಾರ್ಯ)ವಿಲ್ಲದವನು ನಾನು; ಹೊರಗೂ ಒಳಗೂ ತುಂಬಿರುವವನೇ ನಾನು, ಮುಪ್ಪಿಲ್ಲದವನು ನಾನು, ನಾಶವಿಲ್ಲದವನು ನಾನು, ನಿತ್ಯಾನಂದನು ನಾನು, ಎರಡನೆಯದಿಲ್ಲದ (ಒಂದೇ) ಆಗಿರುವವನು ನಾನು; ಒಳಗಿನ (ಆತ್ಮ)ನಿಗಿಂತ ಅಭಿನ್ನವಾಗಿ ಸತ್ಯ, ಜ್ಞಾನ- ಮುಂತಾದ ಲಕ್ಷಣದ ಶುದ್ಧವಾದ ಶ್ರುತಿಯಿಂದ ಗೊತ್ತಾಗುವ ಪರಮಾರ್ಥವಾದ ನಿರತಿಶಯಜ್ಯೋತಿಯಾಗಿರುವ ಅಖಂಡಬ್ರಹ್ಮವೇ ನಾನು.'' ಹೀಗೆ ಸನ್ಮಾತ್ರವನ್ನು ತಿಳಿಸುವ ವೃತ್ತಿಯಿಂದ ಅದನ್ನು ಮಾತ್ರವೇ ಗ್ರಹಿಸುವ ಶಬ್ದಗಳು ಸಮರ್ಪಿಸುವ (ಆತ್ಮ)ವಸ್ತುವನ್ನು ಯತಿಯು ನಿಶ್ಚಲನಾಗಿ ಭಾವಿಸುತ್ತಿರಬೇಕು. ಕಾಮವೇ ಮುಂತಾದ ದೃಶ್ಯಗಳನ್ನು ಪ್ರವಿಲಯವಮಾಡಿಕೊಳ್ಳುವ ಮೂಲಕವಾಗಿ 'ಶುದ್ಧನು ನಾನು' (ಶ್ಲೋ. ೮೭೭) ಎಂಬುದೇ ಮುಂತಾದ ಶಬ್ದಗಳಿಂದ ಮಿಶ್ರವಾದ[2] ದೃಗ್ರೂಪದಲ್ಲಿಯೇ ಇರುವದೆಂಬೀ ಭಾವವು ಶಬ್ದಾನುವಿದ್ಧಸಮಾಧಿಯೆನಿಸುತ್ತದೆ.

## ನಿರ್ವಿಕಲ್ಪಸಮಾಧಿ

ದೃಶ್ಯಸ್ಯಾಪಿ ಚ ಸಾಕ್ಷಿತ್ವಾತ್ ಸಮುಲ್ಲೇಖನಮಾತ್ಮನಿ[3] ।
ನಿವರ್ತಕಮನೋಽವಸ್ಥಾ ನಿರ್ವಿಕಲ್ಪ ಇತೀರ್ಯತೇ ॥ ೮೭೯ ॥

1. ವ್ಯಕ್ತ, ಅವ್ಯಕ್ತ- ಈ ರೂಪಗಳಲ್ಲಿರುವ ಪ್ರಪಂಚಕ್ಕಿಂತಲೂ.
2. ಶಬ್ದದ ಅರ್ಥವನ್ನು ಸ್ಮರಿಸುವದರಿಂದ ಆದ ಸಮಾಧಿ ಎಂಬ ಅಭಿಪ್ರಾಯವಿರಬಹುದು.
3. ದೃಶ್ಯಕ್ಕೂ (ದೃಶ್ಯಸ್ಯಾಪಿ) ಎಂಬ ಅಪಿಶಬ್ದವನ್ನು 'ಉಲ್ಲೇಖನಮಪಿ' ಎಂದು ಅನ್ವಯಿಸಿಕೊಂಡು ಕನ್ನಡಿಸಿದೆ.

ಸವಿಕಲ್ಪಸಮಾಧಿಂ ಯೋ ದೀರ್ಘಕಾಲಂ ನಿರನ್ತರಮ್ ।
ಸತ್ಕಾರಪೂರ್ವಕಂ[1] ಕುರ್ಯಾನ್ನಿರ್ವಿಕಲ್ಪೋಽಸ್ಯ ಸಿಧ್ಯತಿ ॥ ೮೮೦ ॥

ನಿರ್ವಿಕಲ್ಪಕಸಮಾಧಿನಿಷ್ಠಯಾ
ತಿಷ್ಠತೋ ಭವತಿ ನಿತ್ಯತಾ ಧ್ರುವಮ್ ।
ಉದ್ಭವಾದ್ಯಪಗತಿರ್ನಿರರ್ಗಲಾ
ನಿತ್ಯನಿಶ್ಚಲನಿರನ್ತನಿರ್ವೃತಿಃ ॥ ೮೮೧ ॥

ವಿದ್ವಾನಹಮಿದಮಿತಿ ವಾ ಕಿಞ್ಚಿದ್
ಬಾಹ್ಯಾಭ್ಯನ್ತರವೇದನಶೂನ್ಯಃ ।
ಸ್ವಾನನ್ದಾಮೃತಸಿನ್ಧುನಿಮಗ್ನ
ಸ್ತೂಷ್ಣೀಮಾಸ್ತೇ ಕಶ್ಚಿದನನ್ಯಃ ॥ ೮೮೨ ॥

ನಿರ್ವಿಕಲ್ಪಂ ಪರಂ ಬ್ರಹ್ಮ ಯೇ ತಸ್ಮಿನ್ನೇವ ನಿಷ್ಠಿತಾಃ[2] ।
ಏತೇ ಧನ್ಯಾ ಏವ ಮುಕ್ತಾ ಜೀವನ್ತೋಽಪಿ ಬಹಿರ್ದೃಶಾಮ್ ॥ ೮೮೩ ॥

೮೭೯–೮೮೩. ದೃಶ್ಯಕ್ಕೆ ಸಾಕ್ಷಿಯಾಗಿರುವದೆಂದೂ ಆತ್ಮನಲ್ಲಿ (ಅದನ್ನು) (ಇದೆ) ಎಂದು ಎತ್ತಿ ಅರಿಯುವದನ್ನು ತೊಲಗಿಸುವ ಮನಸ್ಸಿನ ಅವಸ್ಥೆಯೇ ನಿರ್ವಿಕಲ್ಪ(ಸಮಾಧಿ)[3] ಎನಿಸುವದು. ಯಾವನು ಸವಿಕಲ್ಪಸಮಾಧಿಯನ್ನು ದೀರ್ಘಕಾಲ ಎಡೆಬಿಡದೆ ಸತ್ಕಾರಪೂರ್ವಕವಾಗಿ[4] ಮಾಡುತ್ತಿರುವನೋ ಅವನಿಗೆ ನಿರ್ವಿಕಲ್ಪವು ಸಿದ್ಧಿಸುವದು.[5] ನಿರ್ವಿಕಲ್ಪಕಸಮಾಧಿನಿಷ್ಠೆಯಿಂದ ಇರುವವನಿಗೆ (ಸಮಾಧಿಯ) ನಿತ್ಯತ್ವವೂ ವ್ಯುತ್ಥಾನವೇ ಮುಂತಾದದ್ದರ ತೊಲಗುವಿಕೆಯೂ ನಿಶ್ಚಯವಾಗಿ ಆಗುವದು; ನಿತ್ಯವೂ ನಿಶ್ಚಲವೂ ಅನಂತವೂ ಆದ ಆನಂದವೂ (ನಿಶ್ಚಯವಾಗಿ) ಆಗುವದು. 'ನಾನು' ಎಂದಾಗಲಿ 'ಇದು' ಎಂದಾಗಲಿ ಏನನ್ನೂ ಹೊರಗೂ ಒಳಗೂ ಅರಿವಿಲ್ಲದವನಾಗಿ, ತನ್ನ ಆನಂದವೆಂಬ ಅಮೃತ ಸಾಗರದಲ್ಲಿ ಮುಳುಗಿ ಅದಕ್ಕೆ ಅನನ್ಯನಾಗಿ[6] ಎಲ್ಲಿಯೋ ಒಬ್ಬ ಜ್ಞಾನಿಯು[7]

---

1. 'ಸಂಸ್ಕಾರಪೂರ್ವಕಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. 'ಯತ್' ಎಂಬುದನ್ನು 'ಯೇ' ಎಂದು ತಿದ್ದಿದೆ.

3. ಸಾಕ್ಷಿತ್ವವೆಂಬುದೂ ಹುಸಿ, ಏಕೆಂದರೆ ದೃಶ್ಯವೇ ಹುಸಿ, ಸಾಕ್ಷಿತ್ವವೂ ತೋರದೆ ಇದ್ದರೆ ನಿರ್ವಿಕಲ್ಪಸಮಾಧಿಯಾಯಿತು ಎಂದರ್ಥ.

4. ದೀರ್ಘಕಾಲ ಆದರದಿಂದ ಸತ್ಕಾರಪೂರ್ವಕವಾಗಿ ಯೋಗವನ್ನು ಮಾಡಬೇಕೆಂದು ಯೋಗಸೂತ್ರ.

5. ನಿರಂತರಸವಿಕಲ್ಪಸಮಾಧಿಯಿಂದ ನಿರ್ವಿಕಲ್ಪಕವು ಸಿದ್ಧಿಸುತ್ತದೆ ಎಂದು ಭಾವ.

6. ಆನಂದಸಾಗರವೇ ತಾನಾಗಿ.

7. 'ಮನುಷ್ಯಾಣಾಂ ಸಹಸ್ರೇಷು' ಎಂಬ ಗೀತಾವಚನದಂತೆ ಜ್ಞಾನಿಗಳು ಬಹು ವಿರಳವೆಂದು ಭಾವ.

ಸುಮ್ಮನೆ ಕುಳಿತಿರುವನು. ನಿರ್ವಿಕಲ್ಪವಾದ ಪರಬ್ರಹ್ಮವಿದೆಯಲ್ಲ, ಅದರಲ್ಲಿಯೇ ನೆಲೆನಿಂತಿರುವವರು ಯಾರೋ ಈ ಧನ್ಯರೇ ಬಾಹ್ಯದೃಷ್ಟಿಯವರ ಕಣ್ಣಿನಿಂದ ಬದುಕಿದ್ದರೂ ಮುಕ್ತರೇ.[1]

## ಬಾಹ್ಯಸಮಾಧಿತ್ರಯ

ಯಥಾ ಸಮಾಧಿತ್ರಿತಯಂ ಯತ್ನೇನ ಕ್ರಿಯತೇ ಹೃದಿ ।
ತಥೈವ ಬಾಹ್ಯದೇಶೇಽಪಿ ಕಾರ್ಯಂ ದ್ವೈತನಿವೃತ್ತಯೇ ॥ ೮೮೪ ॥

ತತ್ಪ್ರಕಾರಂ ಪ್ರವಕ್ಷ್ಯಾಮಿ ನಿಶಾಮಯ ಸಮಾಸತಃ ।
ಅಧಿಷ್ಠಾನಂ ಪರಂ ಬ್ರಹ್ಮ ಸಚ್ಚಿದಾನನ್ದಲಕ್ಷಣಮ್ ॥ ೮೮೫ ॥

ತತ್ರಾಧ್ಯಸ್ತಮಿದಂ ಭಾತಿ ನಾಮರೂಪಾತ್ಮಕಂ ಜಗತ್ ।
ಸತ್ತ್ವಂ ಚಿತ್ತ್ವಂ ತಥಾನನ್ದರೂಪಂ ಯದ್ಬ್ರಹ್ಮಣಸ್ತ್ರಯಮ್ ॥ ೮೮೬ ॥

ಅಧ್ಯಸ್ತಜಗತೋ ರೂಪಂ ನಾಮರೂಪಮಿದಂ ದ್ವಯಮ್ ।
ಏತಾನಿ ಸಚ್ಚಿದಾನನ್ದನಾಮರೂಪಾಣಿ ಪಞ್ಚ ಚ ॥ ೮೮೭ ॥
ಏಕೀಕೃತ್ಯೋಚ್ಯತೇ ಮೂರ್ಖೈರಿದಂ ವಿಶ್ವಮಿತಿ ಭ್ರಮಾತ್ ॥ ೮೮೮[2] ॥

ಶೈತ್ಯಂ ಶ್ವೇತಂ ರಸಂ ದ್ರವ್ಯಂ[3] ತರಙ್ಗ ಇತಿ ನಾಮ ಚ ।
ಏಕೀಕೃತ್ಯ ತರಙ್ಗೋಽಯಮಿತಿ ನಿರ್ದಿಶ್ಯತೇ ಯಥಾ ॥ ೮೮೯ ॥

ಆರೋಪಿತೇ ನಾಮರೂಪೇ ಉಪೇಕ್ಷ್ಯ ಬ್ರಹ್ಮಣಃ ಸತಃ ।
ಸ್ವರೂಪಮಾತ್ರಗ್ರಹಣಂ ಸಮಾಧಿರ್ಬಾಹ್ಯ ಆದಿಮಃ ॥ ೮೯೦ ॥

ಸಚ್ಚಿದಾನನ್ದರೂಪಸ್ಯ ಸಕಾಶಾದ್ ಬ್ರಹ್ಮಣೋ ಯತಿಃ ।
ನಾಮರೂಪೇ ಪೃಥಕ್ಕೃತ್ವಾ ಬ್ರಹ್ಮಣ್ಯೇವ ವಿಲಾಪಯನ್ ॥ ೮೯೧ ॥

ಅಧಿಷ್ಠಾನಂ ಪರಂ ಬ್ರಹ್ಮ ಸಚ್ಚಿದಾನನ್ದಮದ್ವಯಮ್ ।
ಯತ್ ತದೇವಾಹಮಿತ್ಯೇವಂ[4] ನಿಶ್ಚಿತಾತ್ಮಾ ಭವೇದ್ಧ್ರುವಮ್ ॥ ೮೯೨ ॥

---

1. ಬಾಹ್ಯ ದೃಷ್ಟಿಯವರು 'ಇವರೂ ನಮ್ಮಂತೆಯೇ ಬದುಕಿದಾರೆ' ಎಂದು ಭಾವಿಸಿದ್ದರೂ ನಿಜವಾಗಿ ಅವರು ಮುಕ್ತರೇ ಎಂದರ್ಥ. ಜೀವನ್ಮುಕ್ತಿಯ ವಿಷಯಕ್ಕೆ ಗ್ರಂಥಕರ್ತರ ಅಭಿಪ್ರಾಯವೇನೆಂಬುದನ್ನು ನಿಶ್ಚಯಿಸಿ ತಿಳಿದುಕೊಳ್ಳುವದು ಅವಶ್ಯ. ಪೀಠಿಕೆಯನ್ನು ನೋಡಿ.

2. ೮೭ರ ಗ್ರಂಥವನ್ನು ಸೇರಿಸಿ ಒಂದು ಶ್ಲೋಕವೆಂತ ಲೆಕ್ಕಮಾಡಿದೆ.

3. 'ದ್ರಾವ್ಯಮ್' ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ.

4. 'ಏವ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

೮೮೪–೮೯೨. ಹೇಗೆ ಹೃದಯದಲ್ಲಿ ಮೂರುಬಗೆಯ[1] ಸಮಾಧಿಯನ್ನು ಯತ್ನಪೂರ್ವಕವಾಗಿ ಮಾಡಲಾಗುತ್ತದೆಯೋ ಹಾಗೆಯೇ ಹೊರಗಿನ ಪ್ರದೇಶದಲ್ಲಿಯೂ[2] (ಮೂರು ಬಗೆಯ ಸಮಾಧಿಯನ್ನು) ದ್ವೈತನಿವೃತ್ತಿಗಾಗಿ ಮಾಡಬೇಕು. ಅದರ ಪ್ರಕಾರವನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. ಸಚ್ಚಿದಾನಂದಲಕ್ಷಣವಾದ ಪರಬ್ರಹ್ಮವು ಅಧಿಷ್ಠಾನವು. ಅದರಲ್ಲಿ ನಾಮರೂಪಾತ್ಮಕವಾದ ಈ ಜಗತ್ತು ಅಧ್ಯಸ್ತವಾಗಿ ತೋರುತ್ತಿರುವದು. ಸತ್ತ್ವ, ಚಿತ್ತ್ವ, ಮತ್ತು ಆನಂದತ್ವ –ಎಂದು ಬ್ರಹ್ಮದ ಮೂರು ರೂಪವು; **ಅಧ್ಯಸ್ತ**ವಾದ ಜಗತ್ತಿನ ನಾಮರೂಪವೆಂಬೀ ಎರಡು ರೂಪ, ಈ ಸತ್ತು, ಚಿತ್ತು, ಆನಂದ ಮತ್ತು ನಾಮ, ರೂಪ– ಈ ಐದನ್ನೂ ಒಂದುಗೂಡಿಸಿ 'ಇದು ವಿಶ್ವವು' ಎಂದು ಮೂರ್ಖರು ಭ್ರಾಂತಿಯಿಂದ ಹೇಳುತ್ತಿರುವರು. ತಂಪು, ಬಿಳುಪು, ಸವಿ, ದ್ರವ್ಯ ಮತ್ತು ಅಲೆ– ಎಂಬ ನಾಮ ಇವುಗಳನ್ನು ಒಂದುಗೂಡಿಸಿ 'ಇದು ಅಲೆ' ಎಂದು ಹೇಗೆ ಹೇಳುವರೋ ಹಾಗೆಯೇ ಇದು. ಆರೋಪಿತವಾಗಿರುವ ನಾಮರೂಪಗಳನ್ನು ಉಪೇಕ್ಷೆಮಾಡಿ ನಿಜವಾಗಿರುವ ಬ್ರಹ್ಮದ ಸ್ವರೂಪಮಾತ್ರವನ್ನು ಗ್ರಹಿಸುವದು **ಮೊದಲನೆಯ ಬಾಹ್ಯಸಮಾಧಿಯು.**[3] ಸಚ್ಚಿದಾನಂದರೂಪವಾದ ಬ್ರಹ್ಮದಿಂದ, ಯತಿಯಾದವನು ನಾಮರೂಪಗಳನ್ನು ವಿಂಗಡಿಸಿಕೊಂಡು ಬ್ರಹ್ಮದಲ್ಲಿಯೇ ಲಯಮಾಡಿಕೊಂಡು, **ಅಧಿಷ್ಠಾನ**ವಾದ ಸಚ್ಚಿದಾನಂದವಾದ ಅದ್ವಯವಾದ ಪರಬ್ರಹ್ಮವಿದೆಯಲ್ಲ, ಅದೇ ನಾನು[4]– ಎಂದಿಂತು ಗಟ್ಟಿಯಾಗಿ ನಿಶ್ಚಿತಾಂತಃಕರಣನಾಗಬೇಕು.

## ದೃಶ್ಯಾನುವಿದ್ಧಸಮಾಧಿಯ ವಿವರ

**ಇಯಂ ಭೂರ್ನ ಸನ್ನಾಪಿ ತೋಯಂ ನ ತೇಜೋ**
**ನ ವಾಯುರ್ನ ಖಂ ನಾಪಿ ತತ್ಕಾರ್ಯಜಾತಮ್ ।**
**ಯದೇಷಾಮಧಿಷ್ಠಾನಭೂತಂ ವಿಶುದ್ಧಂ**
**ಸದೇಕಂ ಪರಂ ಸತ್ತದೇವಾಹಮಸ್ಮಿ[5]** ॥ ೮೯೩ ॥

---

1. ದೃಶ್ಯಾನುವಿದ್ಧ, ಶಬ್ದಾನುವಿದ್ಧ, ನಿರ್ವಿಕಲ್ಪಕ– ಎಂಬ ಮೂರು ಬಗೆಯು.

2. ಈ ಮೂರು ಬಗೆಯ ಬಾಹ್ಯಸಮಾಧಿಗಳು ಭಾಷ್ಯದಲ್ಲಿಲ್ಲ. ವಿ.ಚೂ.ಯಲ್ಲಿಯೂ ಇಲ್ಲ; ವಿ.ಚೂ. (ಶ್ಲೋ. ೩೧೭) ನೋಡಿ. ಆದರೆ ದೃಗ್ದೃಶ್ಯವಿವೇಕ (೨೭, ೨೮, ೨೯, ಶ್ಲೋಕಗಳಲ್ಲಿ ಇವೆ.

3. ದೃಶ್ಯಾನುವಿದ್ಧಸಮಾಧಿಯು. ಇದರ ವಿವರವನ್ನು ಮುಂದೆ ಕೊಟ್ಟಿದೆ.

4. ಈ ಅಭಿಪ್ರಾಯವು ವೇದಾಂತಡಿಂಡಿಮ ೬೫–೬೮ ಶ್ಲೋಕಗಳಲ್ಲಿದೆ.

5. ಇಲ್ಲಿಂದ ೮೯೭ನೆಯ ಶ್ಲೋಕದವರೆಗೆ ಕೊನೆಯ ಪಾದದ ವಾಕ್ಯವು ಪಲ್ಲವಿಯಾಗಿ ಬಂದಿದೆ.

ನ ಶಬ್ದೋ ನ ರೂಪಂ ನ ಚ ಸ್ಪರ್ಶಕೋ ವಾ
ತಥಾ ನೋ ರಸೋ ನಾಪಿ ಗನ್ಧೋ ನ ಚಾನ್ಯಃ ।
ಯದೇಷಾಮಧಿಷ್ಠಾನಭೂತಂ ವಿಶುದ್ಧಂ
ಸದೇಕಂ ಪರಂ ಸತ್ತದೇವಾಹಮಸ್ಮಿ ॥ ೪೯೪ ॥

ನ ಸದ್ದ್ರವ್ಯಜಾತಂ ಗುಣಾ ನ ಕ್ರಿಯಾ ವಾ
ನ ಜಾತಿರ್ವಿಶೇಷೋ ನ ಚಾನ್ಯಃ ಕದಾಪಿ ।
ಯದೇಷಾಮಧಿಷ್ಠಾನಭೂತಂ ವಿಶುದ್ಧಂ
ಸದೇಕಂ ಪರಂ ಸತ್ತದೇವಾಹಮಸ್ಮಿ ॥ ೪೯೫ ॥

ನ ದೇಹೋ ನ ಚಾಕ್ಷಾಣಿ ನ ಪ್ರಾಣವಾಯು
ರ್ಮನೋ ನಾಪಿ ಬುದ್ಧಿರ್ನ ಚಿತ್ತಂ ಹ್ಯಹಂಧೀಃ ।
ಯದೇಷಾಮಧಿಷ್ಠಾನಭೂತಂ ವಿಶುದ್ಧಂ
ಸದೇಕಂ ಪರಂ ಸತ್ತದೇವಾಹಮಸ್ಮಿ ॥ ೪೯೬ ॥

ನ ದೇಶೋ ನ ಕಾಲೋ ನ ದಿಗ್ವಾಪಿ ಸತ್ಸ್ಯಾ
ನ್ನ ವಸ್ತ್ವನ್ತರಂ ಸ್ಥೂಲಸೂಕ್ಷ್ಮಾದಿರೂಪಮ್ ।
ಯದೇಷಾಮಧಿಷ್ಠಾನಭೂತಂ ವಿಶುದ್ಧಂ
ಸದೇಕಂ ಪರಂ ಸತ್ತದೇವಾಹಮಸ್ಮಿ ॥ ೪೯೭ ॥

ಏತದ್ದೃಶ್ಯಂ ನಾಮರೂಪಾತ್ಮಕಂ ಯೋ
ಽಧಿಷ್ಠಾನಂ ತದ್ ಬ್ರಹ್ಮ ಸತ್ಯಂ ಸದೇತಿ ।
ಗಚ್ಛಂಸ್ತಿಷ್ಠನ್ವಾ ಶಯಾನೋಽಪಿ ನಿತ್ಯಂ
ಕುರ್ಯಾದ್ ವಿದ್ವಾನ್ ಬಾಹ್ಯದೃಶ್ಯಾನುವಿದ್ಧಮ್ ॥೪೯೮॥

೪೯೩–೪೯೮. 'ಈ ಭೂಮಿಯು ಸತ್ತಲ್ಲ, ಅಪ್ಪೂ (ಸತ್ತ)ಲ್ಲ, ತೇಜಸ್ಸಲ್ಲ, ವಾಯುವಲ್ಲ, ಆಕಾಶವಲ್ಲ. ಅವುಗಳ ಕಾರ್ಯಸಮೂಹವೂ ಅಲ್ಲ. ಸನ್ಮಾತ್ರವಾದ ಇವುಗಳಿಗೆ **ಅಧಿಷ್ಠಾನ**ಭೂತವಾದ ವಿಶುದ್ಧವಾದದ್ದು **ಪರಮಸತ್ತು,** ಅದೇ ನಾನು.[1] ಶಬ್ದವಲ್ಲ, ರೂಪವಲ್ಲ, ಸ್ಪರ್ಶವೂ ಅಲ್ಲ, ಹಾಗೂ ರಸವಲ್ಲ, ಗಂಧವೂ ಅಲ್ಲ, ಮತ್ತೊಂದೂ ಅಲ್ಲ, ಇವುಗಳಿಗೆಲ್ಲ ಅಧಿಷ್ಠಾನಭೂತವಾದ ವಿಶುದ-ಸನ್ಮಾತ್ರವಾದ **ಪರಮಸತ್ತೇ,** ಅದೇ ನಾನು. ದ್ರವ್ಯಜಾತವು ಸತ್ತಲ್ಲ, ುಣಗಳಲ್ಲ, ಕ್ರಿಯೆಯಲ್ಲ, ಸಾಮಾನ್ಯವಲ್ಲ, ವಿಶೇಷವಲ್ಲ, ಮತ್ತೊಂದು ಎಂದಿಗೂ

---

1. ಈ ಶ್ಲೋಕಗಳನ್ನು ನೋಡಿದಾಗ 'ನ ಭೂಮಿರ್ನ ತೋಯಮ್' ಎಂದು ಮೊದಲಾಗಿರುವ ನಿರ್ವಾಣದಶಕದ ನೆನಪಾಗುತ್ತದೆ. ಅಲ್ಲಿ 'ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ' ಎಂದು ಧ್ರುವಪದ.

ಅಲ್ಲ. ಇವುಗಳಿಗೆ ಅಧಿಷ್ಠಾನವಾದ ವಿಶುದ್ಧಸನ್ಮಾತ್ರವಾದ ಪರಸತ್ತು ಯಾವದೋ ಅದೇ ನಾನು. ದೇಹವಲ್ಲ, ಇಂದ್ರಿಯವಲ್ಲ, ಪ್ರಾಣವಾಯುವಲ್ಲ, ಮನಸ್ಸಲ್ಲ, ಬುದ್ಧಿಯೂ ಅಲ್ಲ, ಚಿತ್ತವಲ್ಲ, ಅಹಂಬುದ್ಧಿಯೂ ಅಲ್ಲ. ಇವುಗಳ ಅಧಿಷ್ಠಾನ ಭೂತವಾದ ವಿಶುದ್ಧಸನ್ಮಾತ್ರವಾದ ಪರಸತ್ತು ಯಾವದೋ ಅದೇ ನಾನು. ದೇಶವಲ್ಲ, ಕಾಲವಲ್ಲ, ದಿಕ್ಕೂ ಸತ್ತಾಗಲಾರದು. ಸ್ಥೂಲಸೂಕ್ಷ್ಮಾದಿರೂಪದ ಮತ್ತೆ ಯಾವ ವಸ್ತುವೂ ಅಲ್ಲ, ಇವುಗಳಿಗೆ ಅಧಿಷ್ಠಾನಭೂತವಾಗಿರುವ ವಿಶುದ್ಧ ಸನ್ಮಾತ್ರವಾದ ಪರಮಸತ್ತು ಯಾವದೋ ಅದೇ ನಾನು.

ಈ ನಾಮರೂಪಾತ್ಮಕವಾದ ಈ ದೃಶ್ಯವನ್ನು[1] (ಇದಕ್ಕೆ) ಯಾವಾಗಲೂ ಅಧಿಷ್ಠಾನವಾಗಿರುವ ಸತ್ಯವಾದ ಬ್ರಹ್ಮವೇ, ಎಂದು ನಡೆಯುವಾಗ, ನಿಂತಿರುವಾಗ ಅಥವಾ ಮಲಗಿರುವಾಗ- ಯಾವಾಗಲೂ ವಿವೇಕಿಯಾದವನು **ಬಾಹ್ಯದೃಶ್ಯಾನು ವಿದ್ಧ** (ಸಮಾಧಿಯನ್ನು) ಮಾಡುತ್ತಿರಬೇಕು.

## ಶಬ್ದಾನುವಿದ್ಧಬಾಹ್ಯಸಮಾಧಿ

**ಅಧ್ಯಸ್ತನಾಮರೂಪಾದಿಪ್ರವಿಲಾಪೇನ ನಿರ್ಮಲಮ್ ।**
**ಅದ್ವೈತಂ ಪರಮಾನನ್ದಂ ಬ್ರಹ್ಮೈವಾಸ್ಮೀತಿ ಭಾವಯೇತ್ ॥ ೮೯೯ ॥**

**ನಿರ್ವಿಕಾರಂ ನಿರಾಕಾರಂ ನಿರಞ್ಜನಮನಾಮಯಮ್ ।**
**ಆದ್ಯನ್ತರಹಿತಂ ಪೂರ್ಣಂ ಬ್ರಹ್ಮೈವಾಹಂ ನ ಸಂಶಯಃ[2] ॥ ೯೦೦ ॥**

**ನಿಷ್ಕಲಙ್ಕಂ ನಿರಾತಙ್ಕಂ ತ್ರಿವಿಧಚ್ಛೇದವರ್ಜಿತಮ್ ।**
**ಆನನ್ದಮಕ್ಷರಂ ಮುಕ್ತಂ ಬ್ರಹ್ಮೈವಾಸ್ಮೀತಿ ಭಾವಯೇತ್ ॥ ೯೦೧ ॥**

**ನಿರ್ವಿಶೇಷಂ ನಿರಾಭಾಸಂ ನಿತ್ಯಮುಕ್ತಮವಿಕ್ರಿಯಮ್ ।**
**ಪ್ರಜ್ಞಾನೈಕರಸಂ ಸತ್ಯಂ ಬ್ರಹ್ಮೈವಾಸ್ಮೀತಿ ಭಾವಯೇತ್ ॥ ೯೦೨ ॥**

**ಶುದ್ಧಂ ಬುದ್ಧಂ ಸ್ವತಃಸಿದ್ಧಂ[3] ಪರಂ ಪ್ರತ್ಯಗಖಣ್ಡಿತಮ್ ।**
**ಸ್ವಪ್ರಕಾಶಂ ಪರಾಕಾಶಂ ಬ್ರಹ್ಮೈವಾಸ್ಮೀತಿ ಭಾವಯೇತ್ ॥ ೯೦೩ ॥**

**ಸುಸೂಕ್ಷ್ಮಮಸ್ತಿತಾಮಾತ್ರಂ ನಿರ್ವಿಕಲ್ಪಂ ಮಹತ್ತಮಮ್ ।**
**ಕೇವಲಂ ಪರಮಾದ್ವೈತಂ ಬ್ರಹ್ಮೈವಾಸ್ಮೀತಿ ಭಾವಯೇತ್ ॥ ೯೦೪ ॥**

---

1. ಇಲ್ಲಿರುವ 'ಯೋ' ಎಂಬುದಕ್ಕೆ ಅನ್ವಯವು ಎಲ್ಲಿ ಎಂಬುದು ಕಾಣುತ್ತಿಲ್ಲ.

2. ಹಿಂದುಮುಂದಿನ ಶ್ಲೋಕಗಳನ್ನು ನೋಡಿದರೆ ಇಲ್ಲಿಯೂ 'ಬ್ರಹ್ಮೈವಾಸ್ಮೀತಿ ಭಾವಯೇತ್' ಎಂದೇ ಮೂಲದಲ್ಲಿ ಇದ್ದಿರಬೇಕೆಂದೂ ಯಾರೋ ಹೀಗೆ ತಿದ್ದಿರಬೇಕೆಂದೂ ತೋರುತ್ತದೆ.

3. 'ತತ್ತ್ವಸಿದ್ಧಂ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

**ಇತ್ಯೇವಂ ನಿರ್ವಿಕಾರಾದಿಶಬ್ದಮಾತ್ರಸಮರ್ಪಿತಮ್ ।**
**ಧ್ಯಾಯತಃ ಕೇವಲಂ ವಸ್ತು ಲಕ್ಷ್ಯೇ ಚಿತ್ತಂ ಪ್ರತಿಷ್ಠತಿ ॥ ೯೦೫ ॥**

೮೯೯–೯೦೫. ಅಧ್ಯಸ್ತವಾಗಿರುವ ನಾಮರೂಪಾದಿಗಳನ್ನು ಪ್ರವಿಲಯ ಮಾಡಿದ್ದರಿಂದ ನಿರ್ಮಲವಾಗಿರುವ ಅದ್ವೈತವೂ ಪರಮಾನಂದವೂ ಆಗಿರುವ ಬ್ರಹ್ಮವೇ ಆಗಿರುತ್ತೇನೆ ಎಂದು ಭಾವಿಸಿಕೊಳ್ಳಬೇಕು. [1]

ನಿರ್ವಿಕಾರವೂ ನಿರಾಕಾರವೂ ಆದ ಏತರ ಅಂಟೂ ಇಲ್ಲದ, ನಿರ್ದೋಷವಾದ ಮೊದಲುಕೊನೆಯಿಲ್ಲದ ಪೂರ್ಣವಾದ ಬ್ರಹ್ಮವೇ ನಾನು. (ಇದರಲ್ಲಿ) ಸಂಶಯ ವಿಲ್ಲ. ಯಾವ ಕಲಂಕವೂ ಇಲ್ಲದ, ಯಾವ ಅಂಜಿಕೆಯೂ ಇಲ್ಲದ, ಮೂರು ಬಗೆಯ ಪರಿಚ್ಛೇದ[2]ವಿಲ್ಲದ, ಆನಂದವೂ ನಾಶರಹಿತವೂ (ನಿತ್ಯ)ಮುಕ್ತವೂ ಆಗಿರುವ ಬ್ರಹ್ಮವೇ ಆಗಿರುತ್ತೇನೆ– ಎಂದು ಭಾವಿಸಬೇಕು. ಯಾವ ವಿಶೇಷವೂ ಇಲ್ಲದ, ತನ್ನನ್ನು ಬೆಳಗುವ ಯಾವದೊಂದು ವಸ್ತುವೂ ಇಲ್ಲದ. ನಿತ್ಯಮುಕ್ತವಾದ, ವಿಕಾರ ವಿಲ್ಲದ, ಪ್ರಜ್ಞಾನವೆಂಬ ಒಂದೇ ರೂಪವಾಗಿರುವ, ಸತ್ಯವಾದ ಬ್ರಹ್ಮವೇ ಆಗಿರುತ್ತೇನೆ ಎಂದು ಭಾವಿಸಬೇಕು. ಶುದ್ಧವೂ ಜ್ಞಾನಸ್ವರೂಪವೂ ಸ್ವತಃಸಿದ್ಧವೂ[3] ಎಲ್ಲಕ್ಕೂ ಹೆಚ್ಚಿನ (ತೀರ) ಒಳಗಿನ, ವಿಚ್ಛೇದವಿಲ್ಲದ, ತಾನೇ ಬೆಳಗುತ್ತಿರುವ, ಪರಮಾಕಾಶವಾದ[4] ಬ್ರಹ್ಮವೇ ಆಗಿರುತ್ತೇನೆಂದು ಭಾವಿಸಬೇಕು. ಬಹಳ ಸೂಕ್ಷ್ಮವಾಗಿ ಸನ್ಮಾತ್ರವಾಗಿ ಯಾವ ವಿಕಲ್ಪವೂ ಇಲ್ಲದ ಎಲ್ಲವಕ್ಕಿಂತಲೂ ಹೆಚ್ಚಿನದಾದ ಕೇವಲವಾದ ಪರಮಾದ್ವೈತವಾದ ಬ್ರಹ್ಮವೇ ಆಗಿರುತ್ತೇನೆಂದು ಭಾವಿಸಬೇಕು. ಹೀಗೆ 'ನಿರ್ವಿಕಾರವೇ' (ಶ್ಲೋ. ೮೯೦) ಮುಂತಾದ ಶಬ್ದಗಳಿಂದ ಮಾತ್ರವೇ ಸಮರ್ಪಿತವಾಗಿರುವ[5] ಕೇವಲ (ಬ್ರಹ್ಮ)ವಸ್ತುವನ್ನು ಧ್ಯಾನಿಸುತ್ತಿರುವದರಿಂದ ಚಿತ್ತವು ಲಕ್ಷ್ಯದಲ್ಲಿಯೇ ನೆಲೆನಿಲ್ಲುವದು.[6]

## ಬಾಹ್ಯನಿರ್ವಿಕಲ್ಪಸಮಾಧಿ

**ಬ್ರಹ್ಮಾನನ್ದರಸಾವೇಶಾದೇಕೀಭೂಯ ತದಾತ್ಮನಾ ।**
**ವೃತ್ತೇರ್ಯಾ ನಿಶ್ಚಲಾವಸ್ಥಾ ಸ ಸಮಾಧಿರಕಲ್ಪಕಃ ॥ ೯೦೬ ॥**

---

1. ಇದು ದೃಶ್ಯಾನುವಿದ್ಧಸಮಾಧಿಯ ವಿಚಾರದ ಉಪಸಂಹಾರವಾಕ್ಯ.
2. ದೇಶ, ಕಾಲ, ವಸ್ತು– ಇವುಗಳಿಂದಾದ ಪರಿಚ್ಛೇದ.
3. ಮತ್ತೊಂದನ್ನಾಶ್ರಯಿಸಿ ಇರವನ್ನು ಪಡೆಯದೆ ತಾನೇ ಇರುವ.
4. ಆಕಾಶವನ್ನು ಕೂಡ ವ್ಯಾಪಿಸಿಕೊಂಡು ಸರ್ವಗತವಾಗಿರುವ.
5. ಶಬ್ದಗಳಿಂದ ಮಾತ್ರವೇ ತಿಳಿಯಬರುವ –ಎಂದರೆ ಏತಕ್ಕೂ ವಿಷಯುವಲ್ಲದ ಎಂದರ್ಥ. ಇಲ್ಲಿಗೆ ಶಬ್ದಾನುವಿದ್ಧದ ವರ್ಣನೆ ಮುಗಿಯಿತು.
6. ಹೀಗೆ ದೃಶ್ಯದ ಸಂಬಂಧವಿಲ್ಲದ, ನಿರ್ವಿಷಯವಾಗಿರುವ, ನಿಷೇಧಮಾತ್ರದಿಂದ ತಿಳಿಯಬರುವ ತತ್ತ್ವವನ್ನು ಧ್ಯಾನಿಸುತ್ತಿದ್ದರೆ, ಮನಸ್ಸು ಧ್ಯಾನದ ಬಲದಿಂದ ಬ್ರಹ್ಮವೇ ಆಗಿಬಿಡುವದು– ಎಂದು ಭಾವ.

೯೦೬. ಬ್ರಹ್ಮಾನಂದರಸದ ಆವೇಶದಿಂದ (ಅದರಲ್ಲಿಯೇ) ಒಂದಾಗಿ ತದ್ರೂಪದಿಂದ ವೃತ್ತಿಯು ಚಲನೆಯಿಲ್ಲದೆ ಇರುವ ಅವಸ್ಥೆಯಿದೆಯಲ್ಲ. ಅದು **ನಿರ್ವಿಕಲ್ಪಕ(ಬಾಹ್ಯ)ಸಮಾಧಿ.**

## ಸಮಾಧ್ಯಭ್ಯಾಸಕ್ಕೆ ಅವಧಿ

**ಉತ್ಥಾನೇ ವಾಽಪ್ಯನುತ್ಥಾನೇಽಪ್ಯಪ್ರಮತ್ತೋ ಜಿತೇನ್ದ್ರಿಯಃ ।**
**ಸಮಾಧಿಷಟ್ಕಂ ಕುರ್ವೀತ ಸರ್ವದಾ ಪ್ರಯತೋ ಯತಿಃ ॥೯೦೭॥**
**ವಿಪರೀತಾರ್ಥಧೀರ್ಯಾವನ್ನ ನಿಃಶೇಷಂ ನಿವರ್ತತೇ ।**
**ಸ್ವರೂಪಸ್ಫುರಣಂ ಯಾವನ್ನ ಪ್ರಸಿಧ್ಯತ್ಯನಿರ್ಗಲಮ್ ॥೯೦೮॥**
**ತಾವತ್ ಸಮಾಧಿಷಟ್ಕೇನ ನಯೇತ್ಕಾಲಂ ನಿರನ್ತರಮ್ ॥೯೦೮½॥**
**ನ ಪ್ರಮಾದೋಽತ್ರ ಕರ್ತವ್ಯೋ ವಿದುಷಾ ಮೋಕ್ಷಮಿಚ್ಛತಾ ।**
**ಪ್ರಮಾದೇ ಜೃಮ್ಭತೇ ಮಾಯಾ ಸೂರ್ಯಾಪಾಯೇ ತಮೋ ಯಥಾ ॥**
**ಸ್ವಾನುಭೂತಿಂ ಪರಿತ್ಯಜ್ಯ ನ ತಿಷ್ಠನ್ತಿ ಕ್ಷಣಂ ಬುಧಾಃ ।**
**ಸ್ವಾನುಭೂತೌ ಪ್ರಮಾದೋ ಯಃ ಸ ಮೃತ್ಯುರ್ನ ಯಮಃ ಸತಾಮ್ ॥**

೯೦೭–೯೧೦. ವ್ಯುತ್ಥಾನವಾದಾಗಲೂ ವ್ಯುತ್ಥಾನವಿಲ್ಲದಾಗಲೂ[1] ಜಿತೇಂದ್ರಿಯನಾಗಿ (ಈ) **ಸಮಾಧಿಷಟ್ಕವನ್ನು** ಅಪ್ರಮತ್ತನಾಗಿ ಯತಿಯು ಸರ್ವದಾ ಮಾಡುತ್ತಿರಬೇಕು. ಎಲ್ಲಿಯವರೆಗೆ ವಿಪರೀತಾರ್ಥಬುದ್ಧಿಯು ನಿಃಶೇಷವಾಗಿ ತೊಲಗುವದಿಲ್ಲವೋ, ಸ್ವರೂಪದ ಸ್ಫುರಣವು ಎಲ್ಲಿಯವರೆಗೆ ನಿರ್ವಿಘ್ನವಾಗಿ ಸಿದ್ಧಿಸುವದಿಲ್ಲವೋ ಅಲ್ಲಿಯವರೆಗೆ ಸಮಾಧಿಷಟ್ಕದಿಂದ ನಿರಂತರವಾಗಿ ಕಾಲವನ್ನು ಕಳೆಯುತ್ತಿರಬೇಕು. ಮುಮುಕ್ಷುವಾದ ವಿವೇಕಿಯು ಈ ವಿಷಯದಲ್ಲಿ ಪ್ರಮಾದವನ್ನು ಮಾಡಬಾರದು. ಪ್ರಮಾದವಾದರೆ ಸೂರ್ಯನು ಇಲ್ಲವಾದರೆ ಕತ್ತಲೆಯು ಹಬ್ಬಿಕೊಳ್ಳುವಂತೆ–ಮಾಯೆಯು ಹಬ್ಬಿಕೊಳ್ಳುತ್ತದೆ. ಸ್ವಾನುಭವವನ್ನು ಬಿಟ್ಟುಬಿಟ್ಟು ತಿಳಿದವರು ಕ್ಷಣವೂ ಇರುವದಿಲ್ಲ.[2] ಸ್ವಾನುಭವದಲ್ಲಿ ಪ್ರಮಾದವೆಂಬುದಿದೆಯಲ್ಲ, ಸತ್ಪುರುಷರಿಗೆ ಅದು **ಮೃತ್ಯುವೇ**[3] ಹೊರತು **ಯಮ**(ಸಾಧನ)ವಲ್ಲ.

---

1. ವ್ಯುತ್ಥಾನವಿಲ್ಲದಾಗ ಆತ್ಮನಲ್ಲಿಯೇ ನಿಂತಿರುವಾಗ ಅಪ್ರಮತ್ತನಾಗಿರಬೇಕು–ಎಂದರೆ ಪ್ರಯತ್ನಪೂರ್ವಕವಾಗಿ ಅದನ್ನು ನಿಲ್ಲಿಸಿಕೊಂಡಿರಬೇಕು ಎಂದು ಭಾವವಿರಬಹುದು. 'ಯೋಗೋ ಹಿ ಪ್ರಭವಾಪ್ಯಯೌ' (ಕಾ. ೨–೩–೧೧) ಎಂಬ ಉಪನಿಷದ್ವಾಕ್ಯವನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬಹುದು.

2. ಅಪರೋಕ್ಷಾನುಭೂತಿ ೧೩೪ನೆಯ ಶ್ಲೋಕವನ್ನು ನೋಡಿ.

3. ವಿ. ಚೂ. ೩೧೮, ೩೧೯.

## ಸಮಾಧಿಯ ಪ್ರಶಂಸೆ

**ಅಸ್ಮಿನ್ ಸಮಾಧೌ ಕುರುತೇ ಪ್ರಯಾಸಂ**
**ಯಸ್ತಸ್ಯ ನೈವಾಸ್ತಿ ಪುನರ್ವಿಕಲ್ಪಃ ।**
**ಸರ್ವಾತ್ಮಭಾವೋಽಸ್ಯಮುನೈವ ಸಿಧ್ಯೇತ್**
**ಸರ್ವಾತ್ಮಭಾವಃ ಖಲು ಕೇವಲತ್ವಮ್ ॥ ೯೧೧ ॥**

**ಸರ್ವಾತ್ಮಭಾವಂ[1] ವಿದುಷೋ ಬ್ರಹ್ಮವಿದ್ಯಾಫಲಂ ವಿದುಃ ।**
**ಜೀವನ್ಮುಕ್ತಸ್ಯ ತಸ್ಯೈವ ಸ್ವಾನನ್ದಾನುಭವಃ ಫಲಮ್ ॥ ೯೧೨ ॥**

**ಯೋಽಹಂಮಮೇತ್ಯಾದ್ಯಸದಾತ್ಮಗಾಹಕೋ**
**ಗ್ರನ್ಥಿರ್ಲಯಂ ಯಾತಿ ಸ ವಾಸನಾಮಯಃ ।**
**ಸಮಾಧಿನಾ ನಶ್ಯತಿ ಕರ್ಮಬನ್ಧೋ**
**ಬ್ರಹ್ಮಾತ್ಮಬೋಧೋಽಪ್ರತಿಬದ್ಧ[2] ಇಷ್ಯತೇ ॥ ೯೧೩ ॥**

**ಏಷ ನಿಷ್ಕಣ್ಟಕಃ ಪನ್ಥಾ ಮುಕ್ತೇರ್ಬ್ರಹ್ಮಾತ್ಮನಾ ಸ್ಥಿತೇಃ ।**
**ಶುದ್ಧಾತ್ಮನಾಂ ಮುಮುಕ್ಷೂಣಾಂ ಯತ್ ಸದೇಕತ್ವದರ್ಶನಮ್ ॥೯೧೪॥**

**ತಸ್ಮಾತ್ ತ್ವಂ ಚಾಪ್ಯಪ್ರಮತ್ತಃ ಸಮಾಧೀನ್**
**ಕೃತ್ವಾ ಗ್ರನ್ಥಿಂ ಸಾಧು ನಿರ್ದಹ್ಯ ಯುಕ್ತಃ ।**
**ನಿತ್ಯಂ ಬ್ರಹ್ಮಾನನ್ದಪೀಯೂಷಸಿನ್ಧೌ**
**ಮಜ್ಜನ್ ಕ್ರೀಡನ್ ಮೋದಮಾನೋ ರಮಸ್ವ ॥ ೯೧೫ ॥**

೯೧೧–೯೧೫. ಈ **ಸಮಾಧಿಯಲ್ಲಿ** ಯಾವನು (ಅಭ್ಯಾಸ)ಪ್ರಯಾಸವನ್ನು ಮಾಡುವನೋ ಅವನಿಗೆ ಮತ್ತೆ ವಿಕಲ್ಪವಾಗುವದಿಲ್ಲ.[3] ಇದರಿಂದಲೇ **ಸರ್ವಾತ್ಮಭಾವವೂ** ಸಿದ್ಧಿಸುವದು ; ಸರ್ವಾತ್ಮಭಾವವೇ ಅಲ್ಲವೆ, ಕೈವಲ್ಯವು[4] ? ವಿವೇಕಿಗೆ ಸರ್ವಾತ್ಮಭಾವವೇ ಬ್ರಹ್ಮವಿದ್ಯಾಫಲವೆನ್ನುತ್ತಾರೆ.[5] ಜೀವನ್ಮುಕ್ತನಾಗಿರುವ ಅವನಿಗೇ ಸ್ವಾನಂದಾನುಭವವೆನ್ನುವ ಫಲವು (ಲಭಿಸುತ್ತದೆ). ಸಮಾಧಿಯಿಂದ 'ನಾನು', 'ನನ್ನದು'– ಎಂಬ ಅಸತ್ಯಾತ್ಮನನ್ನು ಗ್ರಹಿಸಿದ ವಾಸನಾಮಯ**ಗ್ರಂಥಿ**

1. 'ಸರ್ವಾತ್ಮಭಾವೋ' ಎಂಬ ಮೂಲವನ್ನು ಹೀಗೆ ತಿದಿದೆ.
2. 'ಅಪ್ರತಿಬನ್ಧ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
3. ವಿ. ಚೂ. ೩೫೧.
4. ಸರ್ವಾತ್ಮಭಾವದ ವಿಷಯಕ್ಕೆ ವಿ. ಚೂ. ೩೩೬ ನೋಡಿ. ಸಮಾಧಿಯಿಂದಲೇ ಇದು ಬರುವದೆಂದು ಅಲ್ಲಿ ಹೇಳಿದೆ.
5. 'ತಸ್ಮಾತ್ ತತ್ಸರ್ವಮಭವತ್' (ನಾನು ಬ್ರಹ್ಮವೆಂದು ಅರಿತುಕೊಂಡದ್ದರಿಂದ ಅದು ಸರ್ವವೂ ಆಯಿತು) ಎಂದು ಶ್ರುತಿಯಿದೆ ; ಆದರೆ ಅಲ್ಲಿ ಸಮಾಧಿಯ ಸುದ್ದಿಯಿಲ್ಲ.

ಯಿದೆಯಲ್ಲ, ಅದು ಲಯವಾಗುವದು; ಸಮಾಧಿಯಿಂದ **ಕರ್ಮಬಂಧವು** ನಾಶವಾಗುವದು, ಬ್ರಹ್ಮಾತ್ಮಜ್ಞಾನವು ಯಾವ **ಪ್ರತಿಬಂಧಕವೂ** ಇಲ್ಲದೆ ಆಗುವದು.[1] ಈ **ಸದೇಕತ್ವ**ದರ್ಶನವೆಂಬುದೇ **ಬ್ರಹ್ಮಾತ್ಮಭಾವದಿಂದ ಇರುವ**ದೆಂಬ[2] ಮುಕ್ತಿಗೆ ಶುದ್ಧಾಂತಃಕರಣವುಳ್ಳ ಮುಮುಕ್ಷುಗಳಿಗೆ ನಿಷ್ಕಂಟಕವಾದ ಹಾದಿಯು. ಆದ್ದರಿಂದ ನೀನೂ ಅಪ್ರಮತ್ತನಾಗಿ (ಈ) ಸಮಾಧಿಗಳನ್ನು ಮಾಡಿ ಗ್ರಂಥಿಯನ್ನು ಚೆನ್ನಾಗಿ ಸುಟ್ಟುಹಾಕಿ, ಯುಕ್ತನಾಗಿ ನಿತ್ಯವೂ ಬ್ರಹ್ಮಾನಂದಾಮೃತಸಾಗರದಲ್ಲಿ ಮುಳುಗುತ್ತಲೂ ಕ್ರೀಡಿಸುತ್ತಲೂ ಮೋದದಿಂದ ರಮಿಸುತ್ತಿರು.

## ನಿರ್ವಿಕಲ್ಪಕಸಮಾಧಿಯ ಅಂಗಗಳು

**ನಿರ್ವಿಕಲ್ಪಸಮಾಧಿರ್ಯೋ ವೃತ್ತಿರ್ನೈಶ್ಚಲ್ಯಲಕ್ಷಣಾ ।**
**ತಮೇವ ಯೋಗ ಇತ್ಯಾಹುರ್ಯೋಗಶಾಸ್ತ್ರಾರ್ಥಕೋವಿದಾಃ ॥ ೯೧೬ ॥**

**ಅಷ್ಟಾವಙ್ಗಾನಿ ಯೋಗಸ್ಯ ಯಮೋ ನಿಯಮ ಆಸನಮ್ ।**
**ಪ್ರಾಣಾಯಾಮಸ್ತಥಾ ಪ್ರತ್ಯಾಹಾರಶ್ಚಾಪಿ ಚ ಧಾರಣಾ ॥ ೯೧೭ ॥**
**ಧ್ಯಾನಂ ಸಮಾಧಿರಿತ್ಯೇವ ನಿಗದನ್ತಿ ಮನೀಷಿಣಃ ॥ ೯೧೮[3] ॥**

**ಸರ್ವಂ ಬ್ರಹ್ಮೇತಿ ವಿಜ್ಞಾನಾದಿನ್ದ್ರಿಯಗ್ರಾಮಸಂಯಮಃ ।**
**ಯಮೋಽಯಮಿತಿ ಸಂಪ್ರೋಕ್ತೋಽಭ್ಯಸನೀಯೋ ಮುಹುರ್ಮುಹುಃ ॥**
**ಸಜಾತೀಯಪ್ರವಾಹಶ್ಚ ವಿಜಾತೀಯತಿರಸ್ಕೃತಿಃ ।**
**ನಿಯಮೋ ಹಿ ಪರಾನನ್ದೋ ನಿಯಮಾತ್ ಕ್ರಿಯತೇ ಬುಧೈಃ[4] ॥ ೯೨೦ ॥**

**ಸುಖೇನೈವ ಭವೇದ್ಯಸ್ಮಿನ್ನಜಸ್ರಂ ಬ್ರಹ್ಮಚಿನ್ತನಮ್ ।**
**ಆಸನಂ ತದ್ ವಿಜಾನೀಯಾದಿತರತ್ಸುಖನಾಶನಮ್[5] ॥ ೯೨೧ ॥**

**ಚಿತ್ತಾದಿಸರ್ವಭಾವೇಷು ಬ್ರಹ್ಮತ್ವೇನೈವ ಭಾವನಾತ್ ।**
**ನಿರೋಧಃ ಸರ್ವವೃತ್ತೀನಾಂ ಪ್ರಾಣಾಯಾಮಃ ಸ ಉಚ್ಯತೇ[6] ॥ ೯೨೨ ॥**

**ನಿಷೇಧನಂ ಪ್ರಪಞ್ಚಸ್ಯ ರೇಚಕಾಖ್ಯಃ ಸಮೀರಣಃ ।**
**ಬ್ರಹ್ಮೈವಾಸ್ಮೀತಿ ಯಾ ವೃತ್ತಿಃ ಪೂರಕೋ ವಾಯುರೀರಿತಃ[7] ॥ ೯೨೩ ॥**

---

1. ಸಮಾಧಿಯಿಂದಾಗುವ ಫಲವನ್ನು ವಿ. ಚೂ. ೩೬೦, ೩೬೨ –ಈ ಶ್ಲೋಕಗಳಲ್ಲಿ ವರ್ಣಿಸಿರುವ ಪರಿಯನ್ನು ನೋಡಿರಿ.

2. ಬ್ರಹ್ಮಾತ್ಮಸ್ಥಿತಿಯು ಮುಕ್ತಿಗೆ ದ್ವಾರವೆಂಬ ವಾದವು ವಿ. ಚೂ.ಯಲ್ಲಿಯೂ ಇದೆ. ವಿ. ಚೂ. ೨.

3. ೯೧೮ಕ್ಕೆ ಶ್ಲೋಕಾರ್ಧವನ್ನು ಸೇರಿಸಿ ಒಂದು ಶ್ಲೋಕವೆಂತ ಲೆಕ್ಕಮಾಡಿದೆ.

4. ಈ ಎರಡು ಶ್ಲೋಕಗಳು ಅಪರೋಕ್ಷಾನುಭೂತಿ ೧೦೪, ೧೦೫ ಅಕ್ಷರಶಃ.

5. ಅಪ. ಶ್ಲೋ. ೧೧೨. 6. ಅಪ. ೧೧೮. 7. ಅಪ. ೧೧೯.

ತತಸ್ತದ್ವೃತ್ತಿನೈಶ್ಚಲ್ಯಂ ಕುಮ್ಭಕಃ ಪ್ರಾಣಸಂಯಮಃ ।
ಅಯಂ ಚಾಪಿ ಪ್ರಬುದ್ಧಾನಾಮಜ್ಞಾನಾಂ ಘ್ರಾಣಪೀಡನಮ್[1] ॥ ೯೨೪ ॥

ವಿಷಯೇಷ್ವಾತ್ಮತಾಂ ತ್ಯಕ್ತ್ವಾ ಮನಸಶ್ಚಿತಿಮಜ್ಜನಮ್ ।
ಪ್ರತ್ಯಾಹಾರಃ ಸ ವಿಜ್ಞೇಯೋಽಭ್ಯಸನೀಯೋ ಮುಮುಕ್ಷುಭಿಃ[2] ॥ ೯೨೫ ॥

ಯತ್ರ ಯತ್ರ ಮನೋ ಯಾತಿ ಬ್ರಹ್ಮಣಸ್ತತ್ರ ದರ್ಶನಾತ್ ।
ಮನಸೋ ಧಾರಣಂ ಚೈವ ಧಾರಣಾ ಸಾ ಪರಾ ಮತಾ[3] ॥ ೯೨೬ ॥

ಬ್ರಹ್ಮೈವಾಸ್ಮೀತಿ ಸದ್ವೃತ್ತ್ಯಾ ನಿರಾಲಮ್ಬತಯಾ ಸ್ಥಿತಿಃ ।
ಧ್ಯಾನಶಬ್ದೇನ ವಿಖ್ಯಾತಾ ಪರಮಾನನ್ದದಾಯಿನೀ[4] ॥ ೯೨೭ ॥

ನಿರ್ವಿಕಾರತಯಾ ವೃತ್ತ್ಯಾ ಬ್ರಹ್ಮಾಕಾರತಯಾ ಪುನಃ ।
ವೃತ್ತಿನಿಃಸರಣಂ ಸಮ್ಯಕ್ಸಮಾಧಿರ್ಧ್ಯಾನಸಂಜ್ಞಿತಃ[5] ॥ ೯೨೮ ॥

೯೧೬-೯೨೮. ನಿರ್ವಿಕಲ್ಪಕಸಮಾಧಿಯೆಂಬ ನೈಶ್ಚಲ್ಯರೂಪವಾದ ವೃತ್ತಿಯಿದೆಯಲ್ಲ. ಅದನ್ನೇ ಯೋಗಶಾಸ್ತ್ರಾರ್ಥವನ್ನು ಚೆನ್ನಾಗಿ ಅರಿತಿರುವವರು[6] **ಯೋಗ**ವೆನ್ನುವರು. (ಈ) ಯೋಗದ **ಎಂಟು ಅಂಗಗಳು**[7] (ಯಾವವೆಂದರೆ) ಯಮ, ನಿಯಮ, ಆಸನ, ಪ್ರಾಣಾಯಾಮ ಹಾಗೂ ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ- ಹೀಗೆಂದೇ[8] ಬಲ್ಲವರು ಹೇಳುತ್ತಾರೆ. (೧) 'ಎಲ್ಲವೂ ಬ್ರಹ್ಮವೇ' ಎಂಬ ಅರಿವಿನಿಂದ ಇಂದ್ರಿಯಗಳ ಸಮೂಹವನ್ನು ತಡೆದುಕೊಂಡಿರುವದೇ **ಯಮ**ವೆನಿಸಿಕೊಂಡಿರುವದು ; ಇದನ್ನು ಮತ್ತೆಮತ್ತೆ ಅಭ್ಯಾಸಮಾಡಬೇಕು. (೨) ಸಜಾತೀಯ(ಭಾವನೆಯನ್ನು) ಒಂದೇಸಮನೆ ನಡೆಯಿಸುವದೂ ವಿಜಾತೀಯವಾದದ್ದನ್ನು ತಿರಸ್ಕರಿಸುವದೂ ಆದ ಪರಮಾನಂದರೂಪವಾದ ಸಾಧನವೇ **ನಿಯಮವು**. (ಏಕೆಂದರೆ) ವಿವೇಕಿಗಳು ನಿಯಮದಿಂದ ಮಾಡುವರು. (೩) ಯಾವದರಲ್ಲಿ ಯಾವಾಗಲೂ ಬ್ರಹ್ಮಚಿಂತನೆಯು ಸುಖವಾಗಿಯೇ ಸಾಗುವದೋ ಅದೇ **ಆಸನವು** ಎಂದು ತಿಳಿಯಬೇಕು. ಉಳಿದದ್ದು ಸುಖವನ್ನು ನಾಶಮಾಡುವದರಿಂದ (ಆಸನ)ವಲ್ಲ. (೪) ಚಿತ್ತವೇ ಮೊದಲಾದ ಎಲ್ಲಾ ಪದಾರ್ಥಗಳಲ್ಲೂ ಬ್ರಹ್ಮಭಾವನೆಯನ್ನೇ ಮಾಡುತ್ತಾ ಸರ್ವವೃತ್ತಿಗಳನ್ನೂ ಅಡಗಿಸುವದೆಂಬುದೇ

---

1. ಅಪ. ೧೨೦.
2. ಅಪ. ೧೨೧.
3. ಅಪ. ೧೨೨.
4. ಅಪ. ೧೨೩.
5. ಅಪ. ೧೨೪. ಇಲ್ಲಿ 'ಜ್ಞಾನ' ಎಂಬುದನ್ನು 'ಧ್ಯಾನ'ವೆಂದು ತಿದ್ದಿಕೊಂಡಿದೆ.
6. ಯೋಗಶಾಸ್ತ್ರದಲ್ಲಿ ನಿರ್ವಿಕಲ್ಪಸಮಾಧಿಯೇ ಕೊನೆಯೆಂದು ಹೇಳಿದ್ದರೂ ಇಲ್ಲಿರುವದಕ್ಕಿಂತ ಅದು ವಿಲಕ್ಷಣವಾಗಿದೆ.
7. ಅಪರೋಕ್ಷಾನುಭೂತಿ (ಶ್ಲೋ. ೧೦೦, ಪು. ೮೬)ಯಿಂದಲೇ ಅಂಗಗಳ ವಿವರಣೆಯನ್ನು ತೆಗೆದುಕೊಂಡಿದ್ದರೂ ಅಲ್ಲಿ ಹದಿನೈದು ಅಂಗಗಳನ್ನು ಹೇಳಿದೆ.
8. 'ಹೀಗೆಂದೇ' ಎಂಬ ಅವಧಾರಣೆಯಿಂದ ಏನನ್ನು ಅಲ್ಲಗಳೆದಿದೆಯೋ ತಿಳಿಯದು.

ಪ್ರಾಣಾಯಾಮವೆನಿಸುವದು. ಪ್ರಪಂಚವನ್ನು ಅಲ್ಲಗಳೆಯುವದೇ **ರೇಚಕವೆಂಬ** ವಾಯು[1]; ಬ್ರಹ್ಮವೇ ಆಗಿರುತ್ತೇನೆಂಬ ವೃತ್ತಿಯಿದೆಯಲ್ಲ, ಅದೇ **ಪೂರಕವಾಯು**, ಬಳಿಕ ಆ ವೃತ್ತಿಯನ್ನು ಅಲುಗಾಡಿಸದೆ ಇಟ್ಟುಕೊಳ್ಳುವದೇ **ಕುಂಭಕವೆಂಬ** ಪ್ರಾಣಾಯಾಮವು. ಇದೂ ತಿಳಿದವರಿಗೆ ಮಾತ್ರ. ಅಜ್ಞರಿಗೊ, ಮೂಗನ್ನು ತೊಂದರೆಗೊಳಿಸುವದೇ (ಪ್ರಾಣಾಯಾಮವು). (೫) ವಿಷಯಗಳಲ್ಲೆಲ್ಲ ಆತ್ಮನೆಂಬ ಭಾವವನ್ನು ಬಿಟ್ಟು ಮನಸ್ಸನ್ನು ಚೈತನ್ಯದಲ್ಲಿ ಮುಳುಗಿಸುವದು **ಪ್ರತ್ಯಾಹಾರ** ವೆಂದು ತಿಳಿಯಬೇಕು. ಮುಮುಕ್ಷುಗಳಾದವರು (ಇದನ್ನೇ) ಅಭ್ಯಾಸಮಾಡ ಬೇಕು. (೬) ಎಲ್ಲೆಲ್ಲಿ ಮನಸ್ಸು ಹೋಗುತ್ತಿರುವದೋ ಅಲ್ಲಲ್ಲಿ ಬ್ರಹ್ಮವನ್ನೇ ಕಂಡುಕೊಂಡು ಮನಸ್ಸನ್ನು ನಿಲ್ಲಿಸಿಕೊಳ್ಳುವದೇ ಮನಸ್ಸಿನ ಹೆಚ್ಚಿನ **ಧಾರಣೆ** ಎನಿಸುವದು. (೭) 'ಬ್ರಹ್ಮವೇ ಆಗಿರುವೆನು' ಎಂಬ ಉತ್ತಮವಾದ ವೃತ್ತಿಯಿಂದ ಮತ್ತೊಂದು ವಿಷಯವಾಗಿಟ್ಟುಕೊಳ್ಳದೆ ಇರುವದೇ **ಧ್ಯಾನವೆಂಬ** ಶಬ್ದದಿಂದ ಪ್ರಸಿದ್ಧವಾಗಿರುತ್ತದೆ; ಇದು ಪರಮಾನಂದವನ್ನು ಕೊಡತಕ್ಕದ್ದು. (೮) ಯಾವ ವಿಕಾರವೂ ಇಲ್ಲದ ವೃತ್ತಿಯಿಂದ **ಬ್ರಹ್ಮಾಕಾರವಾಗಿ** ವೃತ್ತಿಯನ್ನು ಚೆನ್ನಾಗಿ ಮರೆತುಬಿಡುವದು **ಸಮಾಧಿಯು** ; ಇದಕ್ಕೆ **ಧ್ಯಾನವೆಂದು** ಹೆಸರು.

## ಸಮಾಧಿಗೆ ವಿಘ್ನಗಳು

**ಸಮಾಧೌ ಕ್ರಿಯಮಾಣೇ ತು ವಿಘ್ನಾ ಹ್ಯಾಯಾನ್ತಿ ವೈ ಬಲಾತ್ ।**
**ಅನುಸಂಧಾನರಾಹಿತ್ಯಮಾಲಸ್ಯಂ ಭೋಗಲಾಲಸಾ[2] ।** ॥ ೯೨೯ ॥

**ಲಯಸ್ತಮಶ್ಚ ವಿಕ್ಷೇಪೋ ರಸಾಸ್ವಾದಶ್ಚ ಶೂನ್ಯತಾ[3] ।**
**ಏವಂ ಯದ್ವಿಘ್ನಬಾಹುಲ್ಯಂ ತ್ಯಾಜ್ಯಂ ಬ್ರಹ್ಮವಿದಾ ಶನೈಃ[4]** ॥ ೯೩೦ ॥

**ವಿಘ್ನಾನೇತಾನ್ ಪರಿತ್ಯಜ್ಯ[5] ಪ್ರಮಾದರಹಿತೋ ವಶೀ ।**
**ಸಮಾಧಿನಿಷ್ಠಯಾ ಬ್ರಹ್ಮ ಸಾಕ್ಷಾದ್ಭವಿತುಮರ್ಹಸಿ** ॥ ೯೩೧ ॥

---

1. ರೇಚಕಪ್ರಾಣಾಯಾಮ, ಪೂರಕಪ್ರಾಣಾಯಾಮ- ಎಂದಿರುವದನ್ನು 'ವಾಯು' ವೆಂದೇ ಇಲ್ಲಿ ಕರೆದಿದೆ.

2. 'ಭೋಗಲಾಲಸಮ್' ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ.

3. ಇದು ಅಪರೋಕ್ಷಾನುಭೂತಿಯ ಪಾಠ. ಮೂಲದಲ್ಲಿರುವ 'ಭಯಂ ತಮಶ್ಚ ವಿಕ್ಷೇಪಸ್ತೇಜಸ್ಪಂದಶ್ಚ ಶೂನ್ಯತಾ' ಎಂಬುದಕ್ಕಿಂತ ಇದೇ ಮೇಲು.

4. 'ತದ್ ಬ್ರಹ್ಮವಿಜ್ಞನೈಃ' ಎಂಬ ಮೂಲಕ್ಕಿಂತ ಈ ಅಪ (ಶ್ಲೋ. ೧೨೮) ಪಾಠವೇ ಮೇಲು.

5. 'ಪರಿತ್ಯಕ್ತ್ವಾ' ಎಂಬುದು ತಪ್ಪು.

೯೨೯–೯೩೧. ಆದರೆ ಸಮಾಧಿ(ಯ ಅಭ್ಯಾಸ)ವನ್ನು ಮಾಡುತ್ತಿರುವಾಗ ವಿಘ್ನಗಳು ಬಲಾತ್ಕಾರದಿಂದ (ಅಡ್ಡಿ)ಬರುವವು. ಅವು ಯಾವವೆಂದರೆ: (೧) (ತತ್ತ್ವವನ್ನು) ಸ್ಮರಿಸದೆ ಇರುವದು, (೨) ಆಲಸ್ಯ, (೩) ಭೋಗದಲ್ಲಿ ಬಲವಾಗಿರುವ ಇಚ್ಛೆ, (೪) ಲಯ, (೫) ತಮಸ್ಸು, (೬) ವಿಕ್ಷೇಪ, (೭) ರಸಾಸ್ವಾದ, (೮) ಶೂನ್ಯತ್ವ. ಹೀಗೆ ಬಹಳ ವಿಘ್ನಗಳು ಬರುವವಲ್ಲ ಅವನ್ನು ಬ್ರಹ್ಮಜ್ಞಾನಿಯು ಮೆಲ್ಲಮೆಲ್ಲಗೆ ತಪ್ಪಿಸಿಕೊಳ್ಳಬೇಕು. ಈ ವಿಘ್ನಗಳನ್ನು ಪರಿಹರಿಸಿಕೊಂಡು ಪ್ರಮಾದವಿಲ್ಲದವನಾಗಿ (ಕರಣಗಳನ್ನೆಲ್ಲ) ವಶಪಡಿಸಿಕೊಂಡರೆ **ಸಮಾಧಿನಿಷ್ಠೆಯಿಂದ** ಸಾಕ್ಷಾತ್ ಬ್ರಹ್ಮವೇ ಆಗುವೆ.

## ಶಿಷ್ಯನ ಕೃತಜ್ಞತಾಪೂರ್ವಕ ಗುರುಸ್ತೋತ್ರ

**ಇತಿ ಗುರುವಚನಾತ್ ಶ್ರುತಿಪ್ರಮಾಣಾತ್**
**ಪರಮವಗಮ್ಯ ಸ್ವತತ್ತ್ವಮಾತ್ಮಯುಕ್ತ್ಯಾ ।**
**ಪ್ರಶಮಿತಕರಣಃ ಸಮಾಹಿತಾತ್ಮಾ**
**ಕ್ವಚಿದಚಲಾಕೃತಿರಾತ್ಮನಿಷ್ಠಿತೋಽಭೂತ್**[1] **॥ ೯೩೨ ॥**

**ಬಹುಕಾಲಂ ಸಮಾಧಾಯ ಸ್ವಸ್ವರೂಪೇ ತು ಮಾನಸಮ್ ।**
**ಉತ್ಥಾಯ ಪರಮಾನನ್ದಾತ್ ಗುರುಮೇತ್ಯ ಪುನರ್ಮುದಾ**[2] **॥ ೯೩೩ ॥**
**ಪ್ರಮಾಣಪೂರ್ವಕಂ ಧೀಮಾನ್ ಸಗದ್ಗದಮುವಾಚ ಹ ॥ ೯೩೩ ॥**

**ನಮೋ ನಮಸ್ತೇ ಗುರವೇ ನಿತ್ಯಾನನ್ದಸ್ವರೂಪಿಣೇ ।**
**ಮುಕ್ತಸಙ್ಗಾಯ ಶಾನ್ತಾಯ ತ್ಯಕ್ತಾಹನ್ತಾಯ ತೇ ನಮಃ**[3] **॥ ೯೩೪ ॥**

**ದಯಾಧಾಮ್ನೇ ನಮೋ ಭೂಮ್ನೇ ಮಹಿಮ್ನಃ ಪಾರಮಸ್ಯ ತೇ ।**
**ನೈವಾಸ್ತಿ ಯತ್ಕಟಾಕ್ಷೇಣ ಬ್ರಹ್ಮೈವಾಭವಮದ್ವಯಮ್ ॥ ೯೩೫ ॥**

**ಕಿಂ ಕರೋಮಿ ಕ್ವ ಗಚ್ಛಾಮಿ ಕಿಂ ಗೃಹ್ಣಾಮಿ ತ್ಯಜಾಮಿ ಕಿಮ್ ।**
**ಯನ್ಮಯಾ ಪೂರಿತಂ ವಿಶ್ವಂ ಮಹಾಕಲ್ಪಾಮ್ಬುನಾ ಯಥಾ ॥ ೯೩೬ ॥**

**ಮಯಿ ಸುಖಬೋಧಪಯೋಧೌ ಮಹತಿ ಬ್ರಹ್ಮಾಣ್ಡಬುದ್ಬುದಸಹಸ್ರಮ್**
**ಮಾಯಾಮಯೇನ ಮರುತಾ ಭೂತ್ವಾ ಭೂತ್ವಾ ಪುನಸ್ತಿರೋಧತ್ತೇ॥೯೩೭**

**ನಿತ್ಯಾನನ್ದಸ್ವರೂಪೋಽಹಮಾತ್ಮಾಽಹಂ ತ್ವದನುಗ್ರಹಾತ್ ।**
**ಪೂರ್ಣೋಽಹಮನವದ್ಯೋಽಹಂ ಕೇವಲೋಽಹಂ ಚ ಸದ್ಗುರೋ ॥೯೩೮**

---

1. ವಿ. ಚೂ. ೪೭೬ (ಅಕ್ಷರಶಃ).
2. ವಿ. ಚೂ. ೪೭೭ರ ಅಭಿಪ್ರಾಯವೇ ಅಲ್ಲಿದೆ; ಅಲ್ಲಿ 'ಕಞ್ಚಿತ್ಕಾಲಮ್' ಎಂದಿದೆ.
3. ವಿ. ಚೂ. ೪೮೩.

ಅಕರ್ತಾಽಹಮಭೋಕ್ತಾಽಹಮವಿಕಾರೋಽಹಮಕ್ರಿಯಃ[1] ।
ಆನನ್ದಘನ ಏವಾಹಮಸಙ್ಗೋಽಹಂ ಸದಾಶಿವಃ ॥ ೯೩೯ ॥

ತ್ವತ್ಕಟಾಕ್ಷಶರಚ್ಚನ್ದ್ರಚನ್ದ್ರಿಕಾಪಾತಧೂತಭವತಾಪಜಶ್ರಮಃ[2] ।
ಪ್ರಾಪ್ತವಾನಹಮಖಣ್ಡವೈಭವಾನನ್ದಮಾತ್ಮಪದಮಕ್ಷಯಂ ಕ್ಷಣಾತ್ ॥

ಛಾಯಯಾ ಸ್ಪೃಷ್ಟಮುಷ್ಣಂ ವಾ ಶೀತಂ ವಾ ದುಷ್ಟು ಸುಷ್ಠು ವಾ ।
ನ ಸ್ಪೃಶತ್ಯೇವ ಯತ್ಕಿಞ್ಚಿತ್ ಪುರುಷಂ ತದ್ವಿಲಕ್ಷಣಮ್[3] ॥ ೯೪೧ ॥

ನ ಸಾಕ್ಷಿಣಂ ಸಾಕ್ಷ್ಯಧರ್ಮಾ ಸಂಸ್ಪೃಶನ್ತಿ[4] ವಿಲಕ್ಷಣಮ್ ।
ಅವಿಕಾರಮುದಾಸೀನಂ ಗೃಹಧರ್ಮಾಃ ಪ್ರದೀಪವತ್ ॥ ೯೪೨ ॥

ರವೇರ್ಯಥಾ ಕರ್ಮಣಿ ಸಾಕ್ಷಿಭಾವೋ
ವಹ್ನೇರ್ಯಥಾ ವಾಽಯಸಿ ದಾಹಕತ್ವಮ್ ।
ರಜ್ಜೋರ್ಯಥಾರೋಪಿತವಸ್ತುಸಙ್ಗ-
ಸ್ತಥೈವ ಕೂಟಸ್ಥಚಿದಾತ್ಮನೋ ಮೇ[5] ॥ ೯೪೩ ॥

೯೩೨–೯೪೩.[6] ಹೀಗೆ ಗುರುವಚನದಿಂದಲೂ ಶ್ರುತಿಪ್ರಮಾಣದಿಂದಲೂ ತನ್ನ ಯುಕ್ತಿಯಿಂದಲೂ[7] ಹೆಚ್ಚಿನ ಆತ್ಮತತ್ತ್ವವನ್ನು ಅರಿತುಕೊಂಡು ಇಂದ್ರಿಯಗಳನ್ನೆಲ್ಲ ಶಾಂತಿಗೊಳಿಸಿಕೊಂಡು ಅಂತಃಕರಣವನ್ನು ಸಮಾಧಿಯಲ್ಲಿಟ್ಟುಕೊಂಡು ಸ್ವಲ್ಪಹೊತ್ತು ಅಲುಗಾಡದ ಸ್ವರೂಪವುಳ್ಳವನಾಗಿ ಆತ್ಮನಿಷ್ಠೆಯಲ್ಲಿರುತ್ತಿದ್ದನು. ಬಹಳಕಾಲ[8] ಆತ್ಮಸ್ವರೂಪದಲ್ಲಿ ಮನಸ್ಸಿಟ್ಟುಕೊಂಡಿದ್ದು ಪರಮಾನಂದದಿಂದ ಮೇಲಕ್ಕೆದ್ದು ಗುರುವಿನ ಬಳಿಗೆ ಬಂದು ಮತ್ತೆ ಸಂತೋಷದಿಂದ ಪ್ರಮಾಣಪೂರ್ವಕವಾಗಿ[9] (ಆ) ವಿವೇಕಿಯು ಗದ್ಗದ(ಕಂಠ)ನಾಗಿ ಇಂತೆಂದನು: "ನಿತ್ಯಾನಂದಸ್ವರೂಪನಾದ ಗುರುವೆ, ನಿನಗೆ ನಮಸ್ಕಾರ, ನಮಸ್ಕಾರ! ಸಂಗವನ್ನು ಬಿಟ್ಟಿರುವ ಶಾಂತನಾದ ಅಭಿಮಾನವನ್ನು ಬಿಟ್ಟಿರುವ ನಿನಗೆ ನಮಸ್ಕಾರ! ದಯಾಧಾಮ

1. ವಿ. ಚೂ. (ಪೂರ್ವಾರ್ಧ) ೪೮೭.
2. ವಿ. ಚೂ. (ಅಕ್ಷರಶಃ) ೪೮೪ (ಅಲ್ಲಿ 'ಶಶಿಸಾನ್ದ್ರ' ಚನ್ದ್ರಿಕಾ ಎಂದಿದೆ).
3. ವಿ. ಚೂ. ೫೦೧ (ಅಕ್ಷರಶಃ).
4. ವಿ. ಚೂ. ೫೦೨. ಅದರಲ್ಲಿರುವ 'ಸಂಸ್ಪೃಶನ್ತಿ' ಎಂಬ ಪಾಠವನ್ನೇ ಇಟ್ಟುಕೊಂಡಿದೆ.
5. ಈ ಶ್ಲೋಕವನ್ನು ವಿ. ಚೂ. ೫೦೩ಕ್ಕೆ ಹೋಲಿಸಿ.
6. ಈ ಶ್ಲೋಕಗಳು ಕೆಲವು ಅಕ್ಷರಶಃ ವಿವೇಕಚೂಡಾಮಣಿಯಲ್ಲಿವೆ, ಇನ್ನು ಕೆಲವು ಶ್ಲೋಕಗಳಲ್ಲಿ ಅಲ್ಲಿಯ ಶ್ಲೋಕಗಳ ಛಾಯೆಯಿದೆ.
7. ಶಾಸ್ತ್ರ, ಗುರುವಚನ, ತನ್ನ ಅನುಭವ– ಎಂಬಿವು ಮೂರೂ ತತ್ತ್ವಕ್ಕೆ ಪ್ರಮಾಣವೆಂದು ಭಾವ.
8. ವಿವೇಕಚೂಡಾಮಣಿಯಲ್ಲಿರುವ ಪಾಠಕ್ಕೆ 'ಸ್ವಲ್ಪಹೊತ್ತು' ಎಂದು ಅರ್ಥ.
9. ಪ್ರಮಾಣದಿಂದಾದ ಅನುಭವದ ಫಲವಾಗಿ ಎಂಬ ಭಾವವಿರಬಹುದು.

ನಾದ ಭೂಮ(ಬ್ರಹ್ಮಾತ್ಮ)ನಾದ (ನಿನಗೆ) ನಮಸ್ಕಾರ! ಈ ನಿನ್ನ ಮಹಿಮೆಗೆ ಪಾರವು ಇಲ್ಲವೇಇಲ್ಲ. ಆ (ನಿನ್ನ) ಕಟಾಕ್ಷದಿಂದಲೇ ನಾನು ಅದ್ವಯವಾದ ಬ್ರಹ್ಮವೇ ಆಗಿರುತ್ತೇನೆ. ಏನನ್ನು ಮಾಡಲಿ ? ಎಲ್ಲಿಗೆ ಹೋಗಬೇಕಾಗಿದೆ ? ಏನನ್ನು ಹಿಡಿಯಲಿ, ಏನನ್ನು ಬಿಡಲಿ ? (ಯಾವದೂ ಇಲ್ಲ). ಏಕೆಂದರೆ ಮಹಾ ಪ್ರಲಯ(ಕಾಲದ) ಜಲದಿಂದ ಹೇಗೋಹಾಗೆ ನನ್ನಿಂದಲೇ ಜಗತ್ತೆಲ್ಲವೂ ಪೂರ್ಣ ವಾಗಿಬಿಟ್ಟಿರುತ್ತದೆ. ಆಳವಾದ ಆನಂದಚಿತ್ಸಾಗರನಾದ ನನ್ನಲ್ಲಿ ಬ್ರಹ್ಮಾಂಡಗಳೆಂಬ ಸಾವಿರಾರು ಗುಳ್ಳೆಗಳು ಮಾಯಾಮಯವಾದ ಗಾಳಿಯ ನಿಮಿತ್ತದಿಂದ ಎದ್ದು ಎದ್ದು ಮತ್ತೆಮತ್ತೆ ಕಾಣದಂತಾಗುತ್ತಿರುವವಷ್ಟೆ ? ನಿನ್ನ ಅನುಗ್ರಹದಿಂದ ನಿತ್ಯಾನಂದ ಸ್ವರೂಪನು ನಾನು, ಆತ್ಮನೇ ನಾನು, ಪೂರ್ಣನು ನಾನು. ನಿರ್ದುಷ್ಟನು ನಾನು ; ಸದ್ಗುರುವೆ, ಕೇವಲನು ನಾನು, ಅಕರ್ತೃವು ನಾನು, ಅಭೋಕ್ತೃವು ನಾನು, ಅವಿಕಾರನು ನಾನು, ಕ್ರಿಯಾರಹಿತನು ನಾನು, ಆನಂದಘನನೇ ನಾನು, ಅಸಂಗ ನಾದ ಸದಾಶಿವನೇ ನಾನು ! ನಿನ್ನ ಕಟಾಕ್ಷವೆಂಬ ಶರತ್ಕಾಲದ[1] ಬೆಳದಿಂಗಳಿನ ಚೆಲ್ಲುವಿಕೆಯಿಂದ ಸಂಸಾರದ ತಾಪದ ಆಯಾಸವನ್ನೆಲ್ಲ ಕಳೆದುಕೊಂಡು ಅಖಂಡ ವೈಭವಾನಂದ(ರೂಪ)ವಾದ ಅಕ್ಷಯವಾದ ಆತ್ಮಪದವನ್ನು ಕ್ಷಣಮಾತ್ರದಲ್ಲಿ ಪಡೆದು ಕೊಂಡೆನಲ್ಲ ! ನೆರಳಿನಿಂದ ಸೋಂಕಿದ ಬಿಸಿಯಾಗಲಿ ತಂಪಾಗಲಿ, ಒಳ್ಳೆಯದಾಗಲಿ ಕೆಟ್ಟದ್ದಾಗಲಿ ಅದಕ್ಕಿಂತ ವಿಲಕ್ಷಣನಾಗಿ (ಬೇರೆಯಿರುವ) ಶರೀರಿಯನ್ನು ಸ್ವಲ್ಪವೂ ಮುಟ್ಟಲಾರದು. (ಹಾಗೆಯೇ) ಸಾಕ್ಷ್ಯದ ಧರ್ಮಗಳು (ಅದಕ್ಕಿಂತ) ವಿಲಕ್ಷಣನಾದ ಅವಿಕಾರಿಯಾದ (ಅವುಗಳ ವಿಷಯಕ್ಕೆ) ಉದಾಸೀನನಾಗಿರುವ ಸಾಕ್ಷಿಯನ್ನು ಸೋಂಕಲರಿಯುವು. ಮನೆಯ ಧರ್ಮಗಳು ದೀಪವನ್ನು ಹೇಗೆ (ಸೋಂಕಲರಿಯವೋ) ಹಾಗೆ. ಸೂರ್ಯನಿಗೆ ಹೇಗೆ (ಜನರ) ಕರ್ಮದ ವಿಷಯದಲ್ಲಿ ಸಾಕ್ಷಿತ್ವವಿರುವದೋ, ಬೆಂಕಿಗೆ ಹೇಗೆ ಕಬ್ಬಿಣದಲ್ಲಿ ದಾಹಕತ್ವವಿರುವದೋ, ಹಗ್ಗಕ್ಕೆ ಹೇಗೆ ಅಧ್ಯಾರೋಪಿತ ವಾದ (ಸರ್ಪಾದಿ)ವಸ್ತುಗಳ ಸಂಗವೋ ಹಾಗೆಯೇ ಕೂಟಸ್ಥಚೈತನ್ಯರೂಪನಾದ ನನಗೆ (ಸಾಕ್ಷಿತ್ವವಿರುವದು).

## ಜೀವನ್ಮುಕ್ತ್ಯಾದಿಗಳ ವಿಷಯಕ್ಕೆ ಪ್ರಶ್ನೆ

**ಇತ್ಯುಕ್ತ್ವಾ ಸ ಗುರುಂ ಸ್ತುತ್ವಾ ಪ್ರಶ್ರಯೇಣ ಕೃತಾನತಿಃ ।**
**ಮುಮುಕ್ಷೋರುಪಕಾರಾಯ ಪ್ರಷ್ಟವ್ಯಾಂಶಮಪೃಚ್ಛತ ॥ ೯೪೪ ॥**
**ಜೀವನ್ಮುಕ್ತಸ್ಯ ಭಗವನ್ನನುಭೂತೇಶ್ಚ ಲಕ್ಷಣಮ್ ।**
**ವಿದೇಹಮುಕ್ತಸ್ಯ ಚ ಮೇ ಕೃಪಯಾ ಬ್ರೂಹಿ ತತ್ತ್ವತಃ ॥ ೯೪೫ ॥**

1. 'ಶರಚ್ಚನ್ದ್ರಚನ್ದ್ರಿಕಾ' ಎಂಬ ಪಾಠವೇ ಸರಿ.

೯೪೪–೯೪೫. ಹೀಗೆಂದು ನುಡಿದು ಆತನು ಗುರುವನ್ನು ಸ್ತುತಿಸಿ ವಿನಯದಿಂದ ನಮಸ್ಕರಿಸಿ ಮುಮುಕ್ಷುವಿನ ಉಪಕಾರಕ್ಕಾಗಿ[1] ಕೇಳಬೇಕಾದ ಅಂಶಗಳನ್ನು ಕೇಳಿದನು : 'ಜೀವನ್ಮುಕ್ತನ, ಮತ್ತು ಅನುಭವದ, ಮತ್ತು ವಿದೇಹಮುಕ್ತನ (ಲಕ್ಷಣ)ವನ್ನು ಇದ್ದದ್ದು ಇದ್ದಂತೆ, ಎಲೈ ಭಗವಂತನೆ, ಕೃಪೆಯಿಂದ ಹೇಳು.

## ಗುರುವಿನ ಉತ್ತರ: ಜ್ಞಾನಭೂಮಿಕೆಗಳ ವಿವರ

**ಶ್ರೀಗುರುಃ–**

**ವಕ್ಷ್ಯೇ ತುಭ್ಯಂ ಜ್ಞಾನಭೂಮಿಕಾಯಾ ಲಕ್ಷಣಮಾದಿತಃ |**
**ಜ್ಞಾತೇ ಯಸ್ಮಿಂಸ್ತ್ವಯಾ ಸರ್ವಂ ಜ್ಞಾತಂ ಸ್ಯಾತ್ ಪೃಷ್ಟಮದ್ಯ ಯತ್ ||**
***ಜ್ಞಾನಭೂಮಿಃ ಶುಭೇಚ್ಛಾ ಸ್ಯಾತ್[2] ಪ್ರಥಮಾ ಸಮುದೀರಿತಾ |**
**ವಿಚಾರಣಾ ದ್ವಿತೀಯಾ ತು ತೃತೀಯಾ ತನುಮಾನಸೀ[3] || ೯೪೬ ||**

**ಸತ್ತ್ವಾಪತ್ತಿಶ್ಚತುರ್ಥೀ ಸ್ಯಾತ್ತತೋಽಸಂಸಕ್ತಿನಾಮಿಕಾ |**
**ಪದಾರ್ಥಾಭಾವನಾ ಷಷ್ಠೀ[4] ಸಪ್ತಮೀ ತುರ್ಯಗಾ ಸ್ಮೃತಾ || ೯೪೮ ||**

**ಸ್ಥಿತಃ ಕಿಂ ಮೂಢ ಏವಾಸ್ಮಿ ಪ್ರೇಕ್ಷ್ಯೇಽಹಂ[5] ಶಾಸ್ತ್ರಸಜ್ಜನೈಃ |**
**ವೈರಾಗ್ಯಪೂರ್ವಮಿಚ್ಛೇತಿ ಶುಭೇಚ್ಛಾ ಪ್ರೋಚ್ಯತೇ ಬುಧೈಃ[6] || ೯೪೯ ||**

**ಶಾಸ್ತ್ರಸಜ್ಜನಸಂಪರ್ಕವೈರಾಗ್ಯಾಭ್ಯಾಸಪೂರ್ವಕಮ್ |**
**ಸದಾಚಾರಪ್ರವೃತ್ತಿರ್ಯಾ ಪ್ರೋಚ್ಯತೇ ಸಾ ವಿಚಾರಣಾ[7] || ೯೫೦ ||**

**ವಿಚಾರಣಾಶುಭೇಚ್ಛಾಭ್ಯಾಮಿಂದ್ರಿಯಾರ್ಥೇಷ್ವರಕ್ತತಾ[8] |**
**ಯತ್ರ[9] ಸಾ ತನುತಾಮೇತಿ[10] ಪ್ರೋಚ್ಯತೇ ತನುಮಾನಸೀ || ೯೫೧ ||**

**ಭೂಮಿಕಾತ್ರಿತಯಾಭ್ಯಾಸಾಚ್ಚಿತ್ತೇಽರ್ಥವಿರತೇರ್ವಶಾತ್ |**
**ಸತ್ತ್ವಾತ್ಮನಿ ಸ್ಥಿತಿಃ[11] ಶುದ್ಧೇ ಸತ್ತ್ವಾಪತ್ತಿರುದಾಹೃತಾ || ೯೫೨ ||**

---

*. ಇವೆಲ್ಲ ಯೋಗವಾಸಿಷ್ಠ (೩–೧೧೮) ಶ್ಲೋಕಗಳು.

1. ಶಿಷ್ಯನು ಕೃತಕೃತ್ಯನಾಗಿದ್ದದ್ದರಿಂದ ಮುಂದೆ ಮುಕ್ತರಾಗಲೆಳಸುವವರಿಗೋಸ್ಕರ ಈ ಪ್ರಶ್ನೆಯನ್ನು ಮಾಡಿದನು–ಎಂದು ಭಾವ. ಇದು ಸರಿಯೆಂದು ತೋರುವದಿಲ್ಲ. ಮುಕ್ತನ ಲಕ್ಷಣವು ವಿ. ಚೂ.ಯಲ್ಲಿ ಶ್ಲೋ. ೪೨೪ರಿಂದ ೪೩೮ರವರೆಗೆ ಇವೆ. ಅಲ್ಲಿಗೆ ಅವು ಹೊಂದುತ್ತವೆ. ವೇದಾಂತಸಾರದಲ್ಲಿ ಸಮಾಧಿಯಿಂದ ಸಾಕ್ಷಾತ್ಕಾರವಾದಕೂಡಲೆ ಆವನು ಜೀವನ್ಮುಕ್ತನೆಂಬ ಭಾಷದಿಂದ (ಪು. ೧೦೪) ಪ್ರಶ್ನೆಯನ್ನೇನೂ ಎಬ್ಬಿಸದೆ ಜೀವನ್ಮುಕ್ತನ ಲಕ್ಷಣವನ್ನು ವರ್ಣಿಸಿದೆ.

2. 'ಶುಭೇಚ್ಛಾಖ್ಯಾ(....)ಸಮುದಾಹೃತಾ' 3. 'ತನುಮಾನಸಾ' (ಶ್ಲೋ. ೫)

4. 'ಪದಾರ್ಥಾಭಾವನೀ ಷಷ್ಠೀ' (ಶ್ಲೋ. ೬)

5. ಇದೇ ಸರಿಯಾದ ಪಾಠ (ಅ). 6. 'ಶುಭೇಚ್ಛೇತ್ಯುಚ್ಯತೇ'

7. (ಶ್ಲೋ. ೯). 8. 'ಅಸಕ್ತತಾ' (ಶ್ಲೋ. ೧೦). 9. 'ಯಾಽತ್ರ'

10. 'ತನುತಾಭಾವಾತ್' 11. 'ಸತ್ತ್ವಾತ್ಮನಿ ಸ್ಥಿತಿಃ' (ಶ್ಲೋ. ೧೧)

**ದಶಾಚತುಷ್ಟಯಾಭ್ಯಾಸಾದಸಂಸರ್ಗಫಲಾ ತು ಯಾ[1] ।**
**ರೂಢಸತ್ತ್ವಚಮತ್ಕಾರಾ ಪ್ರೋಕ್ತಾಽಸಂಸಕ್ತಿನಾಮಿಕಾ ॥ ೯೫೩ ॥**
**ಭೂಮಿಕಾಪಞ್ಚಕಾಭ್ಯಾಸಾತ್ ಸ್ವಾತ್ಮಾರಾಮತಯಾ ಭೃಶಮ್[2] ।**
**ಆಭ್ಯನ್ತರಾಣಾಂ ಬಾಹ್ಯಾನಾಂ ಪದಾರ್ಥಾನಾಮಭಾವನಾತ್ ॥ ೯೫೪ ॥**
**ಪರಪ್ರಯುಕ್ತೇನ ಚಿರಪ್ರಯತ್ನೇನಾವಬೋಧನಮ್[3] ।**
**ಪದಾರ್ಥಾಭಾವನಾ ನಾಮ ಷಷ್ಠೀ ಭವತಿ ಭೂಮಿಕಾ[4] ॥ ೯೫೫ ॥**
**ಷಡ್ಭೂಮಿಕಾ[5] ಚಿರಾಭ್ಯಾಸಾದ್ ಭೇದಸ್ಯಾನುಪಲಮ್ಭನಾತ್ ।**
**ಯತ್ಸ್ವಭಾವೈಕನಿಷ್ಠತ್ವಂ ಸಾ ಜ್ಞೇಯಾ ತುರ್ಯಗಾ ಗತಿಃ ॥ ೯೫೬ ॥**

೯೪೬–೯೫೬. ಶ್ರೀಗುರು: ನಿನಗೆ ಮೊದಲು **ಜ್ಞಾನಭೂಮಿಕೆಯ** ಲಕ್ಷಣವನ್ನು ಹೇಳುವೆನು. ಅದನ್ನು ಅರಿತುಕೊಂಡರೆ ನೀನು ಈಗ ಕೇಳಿರುವದೆಲ್ಲವನ್ನೂ[6] ಅರಿತಂತೆ ಆಗುವದು. (೧) **ಶುಭೇಚ್ಛೆ** ಎಂಬುದು ಮೊದಲನೆಯ ಜ್ಞಾನಭೂಮಿಕೆ ಎನ್ನಲ್ಪಡುತ್ತೆ ; (೨) **ವಿಚಾರಣಾ** ಎಂಬುದು ಎರಡನೆಯದು ; (೩) ಮೂರನೆಯದು **ತನುಮಾನಸೀ ;** (೪) ನಾಲ್ಕನೆಯದು **ಸತ್ತ್ವಾಪತ್ತಿ ;** (೫) ಆ ಬಳಿಕ **ಅಸಂಸಕ್ತಿ** ಎಂಬ ಹೆಸರಿನದು ; (೬) **ಪದಾರ್ಥಾಭಾವನಾ** ಎಂಬುದು ಆರನೆಯದು : (೭) ಏಳನೆಯದೇ **ತುರ್ಯಗಾ** ಎನಿಸುವದು.

ಸುಮ್ಮನೆ ಏನೂ ತಿಳಿಯದೆ ಇರುವೆನಲ್ಲ ! ಶಾಸ್ತ್ರದಿಂದಲೂ ಸಜ್ಜನರಿಂದಲೂ (ತತ್ತ್ವವನ್ನು) ವಿಚಾರಿಸಿನೋಡುವೆನು–ಎಂಬ ವೈರಾಗ್ಯಪೂರ್ವಕವಾದ ಇಚ್ಛೆಯೇ **ಶುಭೇಚ್ಛೆ** ಎಂದು ತಿಳಿದವರು ಹೇಳುತ್ತಾರೆ. ಶಾಸ್ತ್ರಸಜ್ಜನಸಂಗವೈರಾಗ್ಯಗಳ ಅಭ್ಯಾಸದಿಂದ ಸದಾಚಾರದಲ್ಲಿ[7] ಪ್ರವರ್ತಿಸುವದೇ **ವಿಚಾರಣೆ** ಎನಿಸುವದು. ವಿಚಾರಣೆ ಮತ್ತು ಶುಭೇಚ್ಛೆ– ಇವುಗಳಿಂದ ಇಂದ್ರಿಯಾರ್ಥಗಳಲ್ಲಿ ವೈರಾಗ್ಯವಾದದ್ದರ ಫಲವಾಗಿ (ಚಿತ್ತವು) ಯಾವದರಲ್ಲಿರುವದೋ ಅದು **'ತನುಮಾನಸೀ'** ಎನಿಸುವದು. ಮೂರು ಭೂಮಿಕೆಗಳ ಅಭ್ಯಾಸದಿಂದ ಚಿತ್ತದಲ್ಲಿ ಪದಾರ್ಥಗಳ

---

1. 'ಅಸಂಸಙ್ಗಫಲೇನ ಚ' (ಶ್ಲೋ. ೧೨).
2. 'ದೃಢಮ್' 3. 'ಚಿರಂ ಪ್ರಯತ್ನೇನಾರ್ಥಭಾವನಾತ್' (೧೪).
4. 'ನಾಮ್ನಾ ಷಷ್ಠೀ ಸಂಜಾಯತೇ ಗತಿಃ' (೧೪).
5. 'ಭೂಮಿಷಟ್ಕ....ಲಮ್ಭತಃ' (ಶ್ಲೋ. ೧೫).
6. ಜೀವನ್ಮುಕ್ತ್ಯಾದಿಲಕ್ಷಣಗಳನ್ನು ಎಂದರ್ಥ. ಇವುಗಳನ್ನು ಅರಿತರೆ ಮಿಕ್ಕವುಗಳನ್ನು ಹೇಗೆ ಅರಿತಂತಾಗುವದೆಂಬುದನ್ನು ಮುಂದೆ ವಿವರಿಸಲಾಗುವದು.
7. ಇಲ್ಲಿ ಸದಾಚಾರವೆಂದರೆ ಸಾಂಪ್ರದಾಯಿಕಕ್ರಮದಲ್ಲಿ ವಿಚಾರಮಾಡುವದು, ಯೋ.ವಾ.ದಲ್ಲಿ ವ್ಯಾಖ್ಯಾನವನ್ನು ನೋಡಿ. ಹಿಂದುಹಿಂದಿನ ಭೂಮಿಕೆಗಳಲ್ಲಿ ಹೇಳಿರುವ ಸಾಧನೆಗಳನ್ನೆಲ್ಲ ಅಭ್ಯಾಸಮಾಡಿದವನಿಗೆ ಮುಂದಿನ ಭೂಮಿಕೆ ಅಳವಡುತ್ತದೆ ಎಂಬುದು ಈ ಭಾಗವನ್ನೆಲ್ಲ ನೋಡಿದವರಿಗೆ ಸ್ಪಷ್ಟವಾಗುವದು.

ವಿಷಯದಲ್ಲಿ ವಿರತಿಯುಂಟಾದದ್ದರಿಂದ ಸತ್ತ್ವಾಂತಃಕರಣವು ಶುದ್ಧವಾಗಿರಲು **ಸತ್ತ್ವಾಪತ್ತಿ** ಎನಿಸುವದು. ಈ ನಾಲ್ಕು ಅವಸ್ಥೆಗಳ ಅಭ್ಯಾಸದಿಂದ ಅಸಂಬಂಧದ ಫಲವಾಗಲು ಸತ್ತ್ವವೊಂದೇ ತೋರುವದು ಬೇರೂರಿಕೊಂಡರೆ ಅದನ್ನು **ಅಸಂಸಕ್ತಿ** ಎನ್ನುತ್ತಾರೆ. ಈ ಐದು ಭೂಮಿಕೆಗಳನ್ನು ಅಭ್ಯಾಸಮಾಡಿಕೊಂಡದ್ದರಿಂದ ಆತ್ಮನಲ್ಲಿಯೇ ಗಟ್ಟಿಯಾಗಿ ಆರಮಣಮಾಡುತ್ತಿರುವದರಿಂದ ಒಳಗಿನ ಮತ್ತು ಹೊರಗಿನ ಪದಾರ್ಥಗಳನ್ನು ಭಾವನೆಮಾಡದೆ ಇರುವದರಿಂದ ಮತ್ತೊಬ್ಬರ ಪ್ರೇರಣೆಯಿಂದ ಚಿರಪ್ರಯತ್ನದಿಂದ ಪದಾರ್ಥಗಳ ಅರಿವಾಗುವದು **ಪದಾರ್ಥಾಭಾವನೆ** ಎಂಬ ಆರನೆಯ ಭೂಮಿಕೆಯಾಗುತ್ತದೆ. ಆರು ಭೂಮಿಕೆಗಳನ್ನು ಬಹುಕಾಲ ಅಭ್ಯಾಸ ಮಾಡಿದ್ದರಿಂದ ಭೇದವು ಕಾಣದೆಹೋಗುವದರಿಂದ ಆತ್ಮಭಾವವೊಂದರಲ್ಲಿಯೇ ನೆಲೆಸಿಲ್ಲುವದು **ತುರ್ಯಗಾ** ಎಂಬ ಅವಸ್ಥೆ ಎಂದು ತಿಳಿಯಬೇಕು.

## ಅವಸ್ಥೆಗಳ ವಿವರಣೆ

**ಇದಂ ಮಮೇತಿ ಸರ್ವೇಷು ದೃಶ್ಯಭಾವೇಷ್ವಭಾವನಾ ।**
**ಜಾಗ್ರಜ್ಜಾಗ್ರದಿತಿ ಪ್ರಾಹುರ್ಮಹಾನ್ತೋ ಬ್ರಹ್ಮವಿತ್ತಮಾಃ ॥ ೯೫೭ ॥**

**ವಿದಿತ್ವಾ ಸಚ್ಚಿದಾನನ್ದಮಯೋ[1] ದೃಶ್ಯಪರಮ್ಪರಾಮ್ ।**
**ನಾಮರೂಪಪರಿತ್ಯಾಗೋ ಜಾಗ್ರತ್ಸ್ವಪ್ನಃ ಸಮೀರ್ಯತೇ ॥ ೯೫೮ ॥**

**ಪರಿಪೂರ್ಣಚಿದಾಕಾಶಮಯೋ[2] ಬೋಧಾತ್ಮತಾಂ ವಿನಾ ।**
**ನ ಕಿಞ್ಚಿದನ್ಯದಸ್ತೀತಿ ಜಾಗ್ರತ್ಸುಪ್ತಿಃ ಸಮೀರ್ಯತೇ ॥ ೯೫೯ ॥**

**ಮೂಲಾಜ್ಞಾನವಿನಾಶೇನ ಕಾರಣಾಭಾಸಚೇಷ್ಟಿತೈಃ ।**
**ಬನ್ಧೋ ನ ಮೇಽತಿಸ್ವಲ್ಪೋಽಪಿ ಸ್ವಪ್ನಜಾಗ್ರದಿತೀರ್ಯತೇ ॥ ೯೬೦ ॥**

**ಕಾರಣಾಜ್ಞಾನನಾಶಾದ್ ಯದ್ದ್ರಷ್ಟೃದರ್ಶನದೃಶ್ಯತಾ ।**
**ನ ಕಾರ್ಯಮಸ್ತಿ ತಜ್ಜ್ಞಾನಂ ಸ್ವಪ್ನಸ್ವಪ್ನಃ ಸಮೀರ್ಯತೇ ॥ ೯೬೧ ॥**

**ಅತಿಸೂಕ್ಷ್ಮವಿಮರ್ಶೇನ ಸ್ವಧೀವೃತ್ತಿರಚಞ್ಚಲಾ ।**
**ವಿಲೀಯತೇ ಯದಾ ಬೋಧೇ ಸ್ವಪ್ನಸುಪ್ತಿರಿತೀರ್ಯತೇ ॥ ೯೬೨ ॥**

**ಚಿನ್ಮಯಾಕಾರಮನಸೋ[3] ಧೀವೃತ್ತಿಪ್ರಸರೈರ್ಗತೈಃ ।**
**ಆನನ್ದಾನುಭವೋ ವಿದ್ವನ್ ಸುಪ್ತಿಜಾಗ್ರದಿತೀರ್ಯತೇ ॥ ೯೬೩ ॥**

---

1. 'ಸಚ್ಚಿದಾನನ್ದೇ ಮಯಿ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
2. 'ಪರಿಪೂರ್ಣಚಿದಾಕಾಶೇ ಮಯಿ' ಎಂಬ ಪಾಠ ಸರಿಯಲ್ಲ.
3. 'ಮತಯೋ' ಎಂಬುದನ್ನು 'ಮನಸೋ' ಎಂದು ತಿದ್ದಿಕೊಂಡಿದೆ.

ವೃತ್ತೌ ಚಿರಾನುಭೂತಾನ್ತರಾನನ್ದಾನುಭವಸ್ಥಿತೌ ।
ಸಮಾತ್ಮತಾಂ ಯೋ ಯಾತ್ಯೇಷ ಸುಷುಪ್ತಿಸ್ವಪ್ನ ಇತೀರ್ಯತೇ ॥ ೯೬೪ ॥

ದೃಶ್ಯಧೀವೃತ್ತಿರೇತಸ್ಯ ಕೇವಲೀಭಾವಭಾವನಾ ।
ಚಿರಂ[1] ಬೋಧೈಕತಾವಾಪ್ತಿಃ ಸುಷುಪ್ತಿಸುಷುಪ್ತಿರಿತೀರ್ಯತೇ ॥ ೯೬೫ ॥

ಪರಬ್ರಹ್ಮವದಾಭಾತಿ ನಿರ್ವಿಕಾರ್ಯೈಕರೂಪಿಣೀ ।
ಸರ್ವಾವಸ್ಥಾಸು ಧಾರ್ಯೈಕಾ ತುರ್ಯಾಖ್ಯಾ ಪರಿಕೀರ್ತಿತಾ ॥ ೯೬೬ ॥

ಇತ್ಯವಸ್ಥಾಸಮುಲ್ಲಾಸಂ ವಿಮೃಶನ್ ಮುಚ್ಯತೇ ಸುಖೀ ॥ ೯೬೭[2] ॥

೯೫೭-೯೬೭. ಯಾವ ದೃಶ್ಯಪದಾರ್ಥಗಳಲ್ಲಿಯೂ 'ಇದು', 'ನನ್ನದು'- ಎಂಬ ಭಾವನೆಯಿಲ್ಲದಿರುವದು **'ಜಾಗ್ರಜ್ಜಾಗ್ರತ್ತು'** ಎಂದು ಬ್ರಹ್ಮವಿತ್ತಮರಾದ ಮಹಾತ್ಮರು ಹೇಳುವರು. ಸಚ್ಚಿದಾನಂದಮಯನಾದ ಆತ್ಮನಲ್ಲಿ ದೃಶ್ಯಪರಂಪರೆಯನ್ನು ಅರಿತುಕೊಂಡು ನಾಮರೂಪಗಳ ಪರಿತ್ಯಾಗಮಾಡುವದು **ಜಾಗ್ರತ್ಸ್ವಪ್ನ**ವೆನ್ನಲ್ಪಡುತ್ತದೆ. ಪರಿಪೂರ್ಣಚಿದಾಕಾಶಮಯನಾದ (ಆತ್ಮನಲ್ಲಿ) ಚೈತನ್ಯಸ್ವರೂಪವೊಂದಲ್ಲದೆ ಮತ್ತೇನೂ ಇಲ್ಲವೆಂಬ (ಅನುಭವವು) **ಜಾಗ್ರತ್ಸುಷುಪ್ತಿ** ಎನ್ನಲ್ಪಡುತ್ತದೆ.[3]

**ಮೂಲಾಜ್ಞಾನ**ದ ನಾಶದಿಂದ ಕಾರಣಾಭಾಸಗಳ ವ್ಯಾಪಾರದಿಂದ ನನಗೆ ಸ್ವಲ್ಪವೂ ಬಂಧವಿಲ್ಲ-ಎಂಬ (ಅನುಭವವು) **ಸ್ವಪ್ನಜಾಗ್ರತ್ತೆ**ನಿಸುವದು. **ಕಾರಣಾಜ್ಞಾನ**ವು ನಾಶವಾದದ್ದರಿಂದ ದ್ರಷ್ಟೃ, ದರ್ಶನ, ದೃಶ್ಯಗಳೆಂಬ ಕಾರ್ಯವಿಲ್ಲ- ಎಂಬ ಜ್ಞಾನವು **ಸ್ವಪ್ನಸ್ವಪ್ನ**ವೆನಿಸುತ್ತದೆ- ಅತಿಸೂಕ್ಷ್ಮವಾಗಿ ಪರಿಶೀಲಿಸಿದ್ದರಿಂದ ಆತ್ಮಬುದ್ಧಿಯು ಚಾಂಚಲ್ಯವಿಲ್ಲದೆ ಚೈತನ್ಯದಲ್ಲಿಯೇ ಯಾವಾಗ ಲಯವಾಗುವದೋ (ಆಗ ಆ ಜ್ಞಾನವು) **ಸ್ವಪ್ನಸುಷುಪ್ತಿ** ಎನಿಸುತ್ತದೆ. ಚಿನ್ಮಯಾಕಾರವಾದ ಮನಸ್ಸುಳ್ಳವನ ಅಂತಃಕರಣವೃತ್ತಿಗಳ ಹರಡುವಿಕೆಗಳಿಂದ ಪಡೆದುಕೊಂಡ ಆನಂದಾನುಭವವು ಎಲೈ ವಿವೇಕಿಯೆ, **ಸುಷುಪ್ತಿಜಾಗ್ರತ್ತು** ಎನ್ನಲ್ಪಡುತ್ತದೆ. **ವೃತ್ತಿ**ಯಲ್ಲಿ ಚಿರಕಾಲ ಅನುಭವಿಸಿದ ಒಳಗಿನ ಆನಂದಾನುಭವಾವಸ್ಥೆಯಲ್ಲಿ ಸಮರೂಪವನ್ನು ಪಡೆಯುತ್ತದೆಯಲ್ಲ, ಅದು **ಸುಷುಪ್ತಿಸ್ವಪ್ನ**ವೆನಿಸುತ್ತದೆ. ದೃಶ್ಯವಿಷಯಕವಾದ ಅಂತಃಕರಣವೃತ್ತಿಯು ಕೇವಲೀಭಾವವನ್ನೇ ಭಾವಿಸುವದು, ಚಿರಕಾಲಚೈತನ್ಯೈಕರೂಪನಾಗಿರುವದು- (ಇದು) **ಸುಷುಪ್ತಿಸುಷುಪ್ತಿ** ಎನಿಸುತ್ತದೆ.

---

1. 'ಪರಂ' ಎಂಬುದನ್ನು 'ಚಿರಂ' ಎಂದು ತಿದ್ದಿಕೊಂಡಿದೆ.

2. ೯೩೩ರ ಶ್ಲೋಕಾರ್ಧವನ್ನು ಸೇರಿಸಿದರೆ ಇದು ಒಂದು ಶ್ಲೋಕವಾಗುತ್ತದೆ.

3. ಇಲ್ಲಿ ಕೊಟ್ಟಿರುವ ಅವಸ್ಥಾವಿಶೇಷಗಳು ಅನುಭವವಿಶೇಷಗಳ ಒಳಭೇದಗಳು. ಈ ಭೇದಗಳನ್ನು ಮತ್ತೆಲ್ಲಿಯಾದರೂ ಪ್ರತಿಪಾದಿಸಿದೆಯೋ ಇಲ್ಲವೋ ತಿಳಿಯದು. ಇಲ್ಲಿರುವ ಕೆಲವು ವಾಕ್ಯಗಳಿಗೆ ಅರ್ಥವು ಸ್ಫುಟವಾಗಿಲ್ಲ; ಪದಗಳಲ್ಲಿ ಪುನರುಕ್ತಿಯೂ ಇದೆ.

ಸರ್ವಾವಸ್ಥೆಗಳಲ್ಲಿಯೂ ಪರಬ್ರಹ್ಮದಂತೆ ತೋರುವ ನಿರ್ವಿಕಾರವಾದ ಒಂದೇ ರೂಪವುಳ್ಳ ಒಂದೇ (ವೃತ್ತಿ)ಧಾರೆಯಿದ್ದರೆ **ತುರ್ಯಾ**[1] ಎನಿಸುವದು.

ಹೀಗೆ ಅವಸ್ಥೆಗಳ ಉಲ್ಲಾಸವನ್ನು ವಿಮರ್ಶಿಸುತ್ತಿರುವವನು ಮುಕ್ತನಾಗುತ್ತಾನೆ, ಆನಂದಿಯಾಗುತ್ತಾನೆ.

## ಅವಸ್ಥೆಗಳಿಗೂ ಭೂಮಿಕೆಗಳಿಗೂ ಸಂಬಂಧ

**ಶುಭೇಚ್ಛಾದಿತ್ರಯಂ ಭೂಮಿಭೇದಾದ್**[2] **ಭೇದಯುತಂ ಸ್ಮೃತಮ್ ।**
**ಯಥಾವದ್ ಭೇದಬುದ್ಧ್ಯೇದಂ ಜಗಜ್ಜಾಗ್ರದಿತೀರ್ಯತೇ**[3] **॥ ೯೬೮ ॥**

**ಅದ್ವೈತೇ ಸ್ಥೈರ್ಯಮಾಯಾತೇ ದ್ವೈತೇ ಚ ಪ್ರಶಮಂ ಗತೇ ।**
**ಪಶ್ಯನ್ತಿ ಸ್ವಪ್ನವಲ್ಲೋಕಂ ತುರ್ಯಭೂಮಿಸುಯೋಗತಃ**[4] **॥ ೯೬೯ ॥**

**ಪಞ್ಚಮೀಂ ಭೂಮಿಮಾರುಹ್ಯ ಸುಷುಪ್ತಿಪದನಾಮಿಕಾಮ್ ।**
**ಶಾನ್ತಾಶೇಷವಿಶೇಷಾಂಶಸ್ತಿಷ್ಠೇದದ್ವೈತಮಾತ್ರಕೇ ॥ ೯೭೦ ॥**

**ಅನ್ತರ್ಮುಖತಯಾ ನಿತ್ಯಂ ಷಷ್ಠೀಂ ಭೂಮಿಮುಪಾಶ್ರಿತಃ ।**
**ಪರಿಶ್ರಾನ್ತತಯಾ ಗಾಢನಿದ್ರಾಲುರಿವ ಲಕ್ಷ್ಯತೇ ॥ ೯೭೧ ॥**

**ಕುರ್ವನ್ನಭ್ಯಾಸಮೇತಸ್ಯಾಂ ಭೂಮ್ಯಾಂ ಸಮ್ಯಗ್ವಿವಾಸನಃ ।**
**ತುರ್ಯಾವಸ್ಥಾಂ ಸಪ್ತಭೂಮಿಂ**[5] **ಕ್ರಮಾತ್ ಪ್ರಾಪ್ನೋತಿ ಯೋಗಿರಾಟ್॥**
**ವಿದೇಹಮುಕ್ತಿರೇವಾತ್ರ ತುರ್ಯಾತೀತದಶೋಚ್ಯತೇ ॥ ೯೭೨-೩ ॥**

**ಯತ್ರ ನಾಸನ್ನ ಸಚ್ಚಾಪಿ ನಾಹಂ ನಾಪ್ಯನಹಙ್ಕೃತಿಃ ।**
**ಕೇವಲಂ ಕ್ಷೀಣಮನನ ಆಸ್ತೇಽದ್ವೈತೇಽತಿನಿರ್ಭಯಃ ॥ ೯೭೪ ॥**

**ಅನ್ತಃಶೂನ್ಯೋ ಬಹಿಃಶೂನ್ಯಃ ಶೂನ್ಯಕುಮ್ಭ ಇವಾಮ್ಬರೇ ।**
**ಅನ್ತಃಪೂರ್ಣೋ ಬಹಿಃಪೂರ್ಣಃ ಪೂರ್ಣಕುಮ್ಭ ಇವಾರ್ಣವೇ**[6] **॥೯೭೫**

---

1. ಪಾರಿಭಾಷಿಕವಾದ ಜಾಗ್ರಜ್ಜಾಗ್ರದಾದ್ಯವಸ್ಥೆಗಳಿಗೆ ಹೋಲಿಸಿದರೆ ಇದೇ ಪರಮಕಾಷ್ಠೆಯಾದ ಅವಸ್ಥೆ ಎಂದು ಭಾವ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಈ ಶ್ಲೋಕಗಳಲ್ಲಿ ಮೂಲವನ್ನು ಅಲ್ಲಲ್ಲಿ ಮಾರ್ಪಡಿಸಿಕೊಂಡಿದೆ. ಇಲ್ಲಿ 'ಭೂಮಿಭೇದಾ' ಎಂದು ಪಾಠ.

3. 'ಜಗತ್ತೇ ಜಾಗ್ರತ್ತು' ಎಂದು ಮೂಲದಲ್ಲಿರುವದಕ್ಕೆ ಅರ್ಥವಾದರೂ ಗ್ರಂಥಕರ್ತೃವಿನ ಆಶಯವನ್ನೂಹಿಸಿ ಕನ್ನಡಿಸಿದೆ.

4. 'ತುರ್ಯಭೂಮಿ-ಸುಯೋಗತಃ' ಎಂದು ಸಮಸ್ತಪಾಠದಲ್ಲಿರುವಂತೆ ಇಟ್ಟುಕೊಂಡಿದೆ.

5. ಇಲ್ಲಿ 'ಸಪ್ತಮಭೂಮಿಂ' ಎಂದಿರಬೇಕಿತ್ತು.

6. ಈ ಶ್ಲೋಕವು ವಾಸಿಷ್ಠ ನಿ. ೧೨೬-೬೮, ೬೯.

೯೬೮–೯೭೪. ಶುಭೇಚ್ಛೆಯೇ ಮುಂತಾದ ಮೂರು ಭೂಮಿಕಾಭೇದದಿಂದ ಕೂಡಿದ (ಅನುಭವವು) ಭೇದಯುಕ್ತವಾಗಿರುತ್ತದೆ ಎನ್ನುತ್ತಾರೆ. ಈ ಜಗತ್ತು ಇರುವಂತೆಯೇ ಭೇದವುಳ್ಳ ಬುದ್ಧಿಯಿರುವದರಿಂದ **'ಜಾಗ್ರತ್ತು'** ಎನ್ನಲ್ಪಡುತ್ತದೆ. ಅದ್ವೈತದಲ್ಲಿ ಸ್ಥೈರ್ಯವು ಬಂದರೆ ದ್ವೈತವು ನಾಶವಾದರೆ ನಾಲ್ಕನೆಯ ಭೂಮಿಯು ಸಂಬಂಧದಿಂದ ಲೋಕವನ್ನು ಸ್ವಪ್ನತುಲ್ಯವೆಂದು ಕಾಣುತ್ತಾರೆ. **'ಸುಷುಪ್ತಿಪದ'**ವೆಂಬ ಐದನೆಯ ಭೂಮಿಕೆಯನ್ನು ಏರಿದಾಗ ಎಲ್ಲಾ ವಿಶೇಷಗಳನ್ನೂ ತೊಲಗಿಸಿಕೊಂಡು ಅದ್ವೈತಮಾತ್ರದಲ್ಲಿ ಅಂತರ್ಮುಖನಾಗಿಯೇ ನಿಂತಿರುವನು. **ಆರನೆಯ ಭೂಮಿಕೆಯನ್ನು ಆಶ್ರಯಿಸಿದವನು** ಬಹಳ ಬಳಲಿರುವದರಿಂದ ಗಾಢನಿದ್ರೆಯಲ್ಲಿರುವವನಂತೆ ಕಾಣಿಸುತ್ತಾನೆ. ಈ ಭೂಮಿಕೆಯಲ್ಲಿ ಅಭ್ಯಾಸವನ್ನು ಮಾಡುತ್ತಾ ಚೆನ್ನಾಗಿ ವಾಸನೆಗಳನ್ನೆಲ್ಲ ಕಳೆದುಕೊಂಡರೆ **ತುರ್ಯಾವಸ್ಥೆ ಎಂಬ ಏಳನೆಯ ಭೂಮಿಕೆ**ಯನ್ನು (ಆ) ಯೋಗಿರಾಜನು ಕ್ರಮವಾಗಿ ಪಡೆಯುತ್ತಾನೆ.

**ವಿದೇಹಮುಕ್ತಿಯೇ** ಇಲ್ಲಿ **ತುರ್ಯಾತೀತ**ವೆನಿಸುತ್ತದೆ.[1] ಇಲ್ಲಿ ಅಸತ್ತಿರುವದಿಲ್ಲ, ಸತ್ತೂ ಇರುವದಿಲ್ಲ; ಮನನವೆಲ್ಲ ಕ್ಷೀಣವಾದ್ದರಿಂದ ಅತಿನಿರ್ಭಯನಾಗಿ ಅದ್ವೈತದಲ್ಲಿರುತ್ತಿರುವವನು. ಒಳಗೂ ಏನೂ ಇಲ್ಲದೆ, ಹೊರಗೂ ಏನೂ ಇಲ್ಲದೆ ಇರುವ ಬರಿಯ ಗಡಿಗೆಯು ಆಕಾಶದಲ್ಲಿದ್ದಂತೆಯೂ, ಒಳಗೂ ತುಂಬಿ ಹೊರಗೂ ತುಂಬಿರುವ ಸಮುದ್ರದಲ್ಲಿರುವ ತುಂಬಿದ ಕೊಡದಂತೆಯೂ ಇರುತ್ತಾನೆ.

## ಜೀವನ್ಮುಕ್ತನ ವರ್ಣನೆ

**ಯಥಾ ಸ್ಥಿತಮಿದಂ ಸರ್ವಂ ವ್ಯವಹಾರವತೋಽಪಿ ಚ ।**
**ಅಸ್ತಂ ಗತಂ ಸ್ಥಿತಂ ವ್ಯೋಮ ಸ ಜೀವನ್ಮುಕ್ತ ಇಷ್ಯತೇ[2] ॥ ೯೭೫ ॥**
**ನೋದೇತಿ ನಾಸ್ತಮಾಯಾತಿ ಸುಖೇ ದುಃಖೇ ಮುಖಪ್ರಭಾ[3] ।**
**ಯಥಾಪ್ರಾಪ್ತಸ್ಥಿತಿರ್ಯಸ್ಯ ಸ ಜೀವನ್ಮುಕ್ತ ಉಚ್ಯತೇ ॥ ೯೭೬ ॥**
**ಯೋ ಜಾಗರ್ತಿ ಸುಷುಪ್ತಸ್ಥೋ[4] ಯಸ್ಯ ಜಾಗ್ರನ್ನ ವಿದ್ಯತೇ ।**
**ಯಸ್ಯ ನಿರ್ವಾಸನೋ ಬೋಧಃ ಸ ಜೀವನ್ಮುಕ್ತ ಉಚ್ಯತೇ ॥ ೯೭೭ ॥**

---

1. ವಿದೇಹಮುಕ್ತಿಯನ್ನು ತುರ್ಯಾತೀತವೆಂದು ಭಾಷ್ಯದಲ್ಲಿ ಎಲ್ಲಿಯೂ ಕರೆದಿಲ್ಲ. ವಾಸಿಷ್ಠಾದಿಗಳಲ್ಲಿ ಹಾಗೆಂದಿರುವದುಂಟು.

2. ಇಲ್ಲಿಯ ಶ್ಲೋಕಗಳು ಬಲುಮಟ್ಟಿಗೆ ವಾಸಿಷ್ಠದಲ್ಲಿರುವಂತೆಯೇ (೩–೯, ಪು. ೧೪೭) ಇವೆ. ಪಾಠಗಳನ್ನು ಅಲ್ಲಿರುವಂತೆ ತಿದ್ದಿದ್ದೇವೆ. ಇಲ್ಲಿಯ ಪಾಠಗಳನ್ನು ಕೆಳಗೆ ಕೊಟ್ಟಿದೆ.

3. 'ಸುಖದುಃಖೇ ಮನಃ ಪ್ರಭಾ' 4. 'ಸುಷುಪ್ತಿಸ್ಥೋ'

ರಾಗದ್ವೇಷಭಯಾದೀನಾಮನುರೂಪಂ ಚರನ್ನಪಿ ।
ಯೋಽನ್ತರ್ವ್ಯೋಮವದತ್ಯಚ್ಛಃ ಸ ಜೀವನ್ಮುಕ್ತ ಉಚ್ಯತೇ ॥ ೯೭೮ ॥

ಯಸ್ಯ ನಾಹಂಕೃತೋ ಭಾವೋ ಯಸ್ಯ[1] ಬುದ್ಧಿರ್ನ ಲಿಪ್ಯತೇ ।
ಕುರ್ವತೋಽಕುರ್ವತೋ ವಾಪಿ ಸ ಜೀವನ್ಮುಕ್ತ ಉಚ್ಯತೇ ॥ ೯೭೯ ॥

ಯಃ ಸಮಸ್ತಾರ್ಥಜಾತೇಷು[2] ವ್ಯವಹಾರ್ಯಪಿ ಶೀತಲಃ ।
ಪರಾರ್ಥೇಷ್ವಿವ ಪೂರ್ಣಾತ್ಮಾ ಸ ಜೀವನ್ಮುಕ್ತ ಇಷ್ಯತೇ ॥ ೯೮೦ ॥

❖ದ್ವೈತವರ್ಜಿತಚಿನ್ಮಾತ್ರೇ ಪದೇ ಪರಮಪಾವನೇ ।
ಅಕ್ಷುಬ್ಧಚಿತ್ತವಿಶ್ರಾನ್ತಃ ಸ ಜೀವನ್ಮುಕ್ತ ಉಚ್ಯತೇ ॥ ೯೮೧ ॥

❖ಇದಂ ಜಗದಯಂ ಸೋಽಯಂ ದೃಶ್ಯಜಾತಮವಾಸ್ತವಮ್ ।
ಯಸ್ಯ ಚಿತ್ತೇ ನ ಸ್ಫುರತಿ ಸ ಜೀವನ್ಮುಕ್ತ ಉಚ್ಯತೇ ॥ ೯೮೨ ॥

❖ಚಿದಾತ್ಮಾಽಹಂ ಪರಾತ್ಮಾಽಹಂ ನಿರ್ಗುಣೋಽಹಂ ಪರಾತ್ಪರಃ ।
ಆತ್ಮಮಾತ್ರೇಣ ಯಸ್ತಿಷ್ಠೇತ್ ಸ ಜೀವನ್ಮುಕ್ತ ಉಚ್ಯತೇ[3] ॥ ೯೮೩ ॥

ದೇಹತ್ರಯಾತಿರಿಕ್ತೋಽಹಂ ಶುದ್ಧಚೈತನ್ಯಮಸ್ಮ್ಯಹಮ್ ।
ಬ್ರಹ್ಮಾಹಮಿತಿ ಯಸ್ಯಾನ್ತಃ ಸ ಜೀವನ್ಮುಕ್ತ ಉಚ್ಯತೇ ॥ ೯೮೪ ॥

❖ಯಸ್ಯ ದೇಹಾದಿಕಂ ನಾಸ್ತಿ ಯಸ್ಯ ಬ್ರಹ್ಮೇತಿ ನಿಶ್ಚಯಃ ।
ಪರಮಾನನ್ದಪೂರ್ಣೋ ಯಃ ಸ ಜೀವನ್ಮುಕ್ತ ಉಚ್ಯತೇ ॥ ೯೮೫ ॥

ಅಹಂ ಬ್ರಹ್ಮಾಸ್ಮ್ಯಹಂ ಬ್ರಹ್ಮಾಸ್ಮ್ಯಹಂ ಬ್ರಹ್ಮೇತಿ ನಿಶ್ಚಯಃ ।
ಚಿದಹಂ ಚಿದಹಂ ಚೇತಿ ಸ ಜೀವನ್ಮುಕ್ತ ಉಚ್ಯತೇ ॥ ೯೮೬ ॥

೯೭೫-೯೮೬. ಇದೆಲ್ಲವೂ ವ್ಯವಹಾರವಲ್ಲಿರುವಾಗಲೂ (ಯಾವನಿಗೆ ಈಗಿರುವಂತೆಯೇ ಇದ್ದರೂ ಕಾಣದಂತಾಗಿ ಆಕಾಶವೊಂದೇ ಇದ್ದುಕೊಂಡಿರುವದೋ ಅವನು ಜೀವನ್ಮುಕ್ತನೆನಿಸುವನು. ಸುಖದಲ್ಲಿಯೂ ದುಃಖದಲ್ಲಿಯೂ ಯಾವನ ಮನಃಕಾಂತಿಯು ಎದ್ದುಕೊಳ್ಳದೆಯೂ ಮರೆಯಾಗದೆಯೂ ಇರುವದೋ, ಹೇಗೆ (ಯಾವನು) ಬದುಕಿದ್ದರೂ ಯಾವನ ಸ್ಥಿತಿಯು ಹಾಗೆಯೇ ಇದ್ದುಕೊಂಡಿರುವದೋ ಅವನು ಜೀವನ್ಮುಕ್ತನೆನಿಸುವನು. ಯಾವನು ತನಿನಿದ್ರೆಯಲ್ಲಿಯೂ ಎಚ್ಚತ್ತಿರುವನೋ, ಯಾವನಿಗೆ ಎಚ್ಚರವೇ ಇರುವದಿಲ್ಲವೋ ಯಾವನ ಅರಿವು

1. 'ಬುದ್ಧಿರ್ಯಸ್ಯ' (ಇದು ಗೀತೆಯ ಪಾಠ).

2. 'ಸಮಸ್ತಾರ್ಥಜಾಲೇಷು'

❖ ಹೀಗೆ ಗುರುತುಮಾಡಿರುವ ಶ್ಲೋಕಗಳು ಮತ್ತೆಲ್ಲಿಯಾದರೂ ಯೋಗವಾಸಿಷ್ಠದಲ್ಲಿ ಅಥವಾ ಗ್ರಂಥಾಂತರದಲ್ಲಿವೆಯೆ ? –ಎಂಬುದು ನನಗೆ ತಿಳಿದಿಲ್ಲ.

3. ಈ ಶ್ಲೋಕಗಳು ತೇಜೋಬಿಂದೂಪನಿಷತ್ತಿನಲ್ಲಿ (ಪು. ೨೩೦–೨೩೧) ಇದೆ.

ವಾಸನಾರಹಿತವಾಗಿರುವದೋ ಅವನು ಜೀವನ್ಮುಕ್ತನೆನಿಸುವನು. ರಾಗ, ದ್ವೇಷ, ಭಯ- ಮುಂತಾದವುಗಳಿಗೆ ಅನುಸಾರವಾಗಿ ವ್ಯವಹರಿಸುತ್ತಿದ್ದರೂ ಯಾವನು ಒಳಗೆ ಆಕಾಶದಂತೆ ಅತ್ಯಂತನಿರ್ಮಲನಾಗಿರುವನೋ ಅವನು ಜೀವನ್ಮುಕ್ತನೆನಿಸಿರುವನು. (ಏನಾದರೂ) ಮಾಡುತ್ತಿದ್ದರೂ ಮಾಡದೆ ಇರುತ್ತಿದ್ದರೂ ಯಾವನಿಗೆ ಅಹಂಕಾರದ ಭಾವವು ಇರುವದಿಲ್ಲವೋ ಯಾವನ ಅಂತಃಕರಣವು ವಾಸನಾಯುಕ್ತವಾಗಿರುವದಿಲ್ಲವೋ ಯಾವನು ಎಲ್ಲಾ ಪದಾರ್ಥಜಾತಗಳಲ್ಲಿ ವ್ಯವಹರಿಸುತ್ತಿದ್ದರೂ (ಏರುಪೇರಿಲ್ಲದೆ) ಮತ್ತೊಬ್ಬರ ಅರ್ಥ(ವಸ್ತು)ಗಳಲ್ಲಿ ಹೇಗೋಹಾಗೆ[1] ನೆಮ್ಮದಿಯಿಂದಿರುವನೋ ಪೂರ್ಣನಾಗಿರುವ ಅವನು ಜೀವನ್ಮುಕ್ತನೆನಿಸುವನು. (ಯಾವನು) ದ್ವೈತವಿಲ್ಲದ ಚಿನ್ಮಾತ್ರರೂಪ(ವಾದ) ಪರಮಪಾವನಪರ(ತತ್ತ್ವ)ದಲ್ಲಿ ತಳಮಳವಿಲ್ಲದ ಚಿತ್ತವುಳ್ಳವನಾಗಿ ವಿಶ್ರಮಿಸುತ್ತಿರುವನೋ ಅವನು ಜೀವನ್ಮುಕ್ತನೆನಿಸುತ್ತಾನೆ. 'ಇದು ಜಗತ್ತು', 'ಇವನು ಇಂಥವನು'- (ಎಂಬೀ ಬಗೆಯಲ್ಲಿ) ಅವಾಸ್ತವವಾದ ದೃಶ್ಯಜಾತವು ಯಾವನ ಚಿತ್ತದಲ್ಲಿ ಹೊಳೆಯದೆ ಇರುತ್ತದೆಯೋ ಅವನು ಜೀವನ್ಮುಕ್ತನೆನಿಸುವನು. 'ಚಿದಾತ್ಮನೇ ನಾನು, ಪರಮಾತ್ಮನೇ ನಾನು', 'ನಿರ್ಗುಣನು ನಾನು, ಅವ್ಯಾಕೃತರೂಪವಾದ ಸೂಕ್ಷ್ಮತತ್ತ್ವಕ್ಕಿಂತಲೂ ವಿಲಕ್ಷಣನು ನಾನು' (ಎಂದು) ಯಾವನು ಆತ್ಮಮಾತ್ರ(ರೂಪ)ದಿಂದ ಇರುತ್ತಿರುವನೋ ಅವನು ಜೀವನ್ಮುಕ್ತನೆನಿಸುವನು. 'ದೇಹತ್ರಯಕ್ಕಿಂತ ಅತಿರಿಕ್ತನು[2] ನಾನು', 'ಶುದ್ಧಚೈತನ್ಯವಾಗಿಯೇ ನಾನು ಇರುವೆನು', 'ನಾನು ಬ್ರಹ್ಮವು' ಎಂದು ಯಾವನ ಅಂತಃಕರಣದಲ್ಲಿರುವದೋ ಅವನು ಜೀವನ್ಮುಕ್ತನೆನಿಸುತ್ತಾನೆ. ಯಾವನಿಗೆ ದೇಹಾದಿಗಳಿಲ್ಲವೋ[3] ಯಾವನಿಗೆ (ನಾನು) ಬ್ರಹ್ಮವೆಂಬ ನಿಶ್ಚಯ(ವಿರುವದೋ), ಯಾವನು ಪರಮಾನಂದಪೂರ್ಣನಾಗಿರುವನೋ ಅವನು ಜೀವನ್ಮುಕ್ತನೆನಿಸುವನು, 'ನಾನು ಬ್ರಹ್ಮ

---

1. ಈ ವಾಕ್ಯಭಾಗವು ಸರಿಯಾಗಿ ಅರ್ಥವಾಗುವದಿಲ್ಲ; ಉಳಿದ ಜನರು ಅವನದೆಂದು ವ್ಯವಹರಿಸುವ ಪದಾರ್ಥಗಳಲ್ಲಿಯೂ ಮತ್ತೊಬ್ಬರ ವಸ್ತುವಿನಲ್ಲಿ ಹೇಗೋಹಾಗೆ ಉದಾಸೀನನಾಗಿರುವನು ಎಂಬ ಭಾವವಿರಬಹುದು.

2. ಸ್ಥೂಲಶರೀರ, ಸೂಕ್ಷ್ಮಶರೀರ, ಕಾರಣಶರೀರ (ಅಜ್ಞಾನ) ಎಂಬ ಮೂರು ಶರೀರಗಳು. ಕಾರಣಶರೀರವು ಭಾಷ್ಯದಲ್ಲಿಲ್ಲ. ಎರಡು ಶರೀರಗಳನ್ನು ಬಿಡಿಸಿಕೊಂಡರೆ ಪರಮಾತ್ಮನೇ ಎಂಬ ಅಭಿಪ್ರಾಯವು ಸೂತ್ರಭಾಷ್ಯದಲ್ಲಿ ಮತ್ತೆ ಮತ್ತೆ ಉಲ್ಲಿಖಿತವಾಗಿದೆ.

3. ದೇಹಾದಿಗಳೆಂದರೆ ತೇಜೋಬಿಂದೂಪನಿಷತ್ತಿನಲ್ಲಿ ಅಲ್ಲಗಳೆದಿರುವ ಅನಾತ್ಮಗಳೆಂದು ಗ್ರಂಥಕರ್ತರ ಭಾವವಿರಬಹುದು. ಇಲ್ಲಿ ಕೊಟ್ಟಿರುವ ಅಭಿಪ್ರಾಯದಂಥ ಜೀವನ್ಮುಕ್ತವರ್ಣನೆಯು ಯೋಗವಾಸಿಷ್ಠದಲ್ಲಿ ಮತ್ತೆಮತ್ತೆ ಬಂದಿದೆ. ಇಲ್ಲಿ ನಾವು ಇಂಥಲ್ಲಿವೆ ಎಂದು ಗೊತ್ತುಮಾಡಿ ಹೇಳದೆ ಇರುವ ಶ್ಲೋಕಗಳು ವಾಸಿಷ್ಠದಲ್ಲಿಯೇ ಎಲ್ಲಿಯಾದರೂ ಇವೆಯೋ, ಇಲ್ಲವೆ, ಅವು ಗ್ರಂಥಕರ್ತೃವಿರಚಿತವೋ ನಿಶ್ಚಿತವಾಗಿ ಹೇಳಲಾರೆವು.

ವಾಗಿರುವೆನು, ನಾನು ಬ್ರಹ್ಮವಾಗಿರುವೆನು, ನಾನು ಬ್ರಹ್ಮವೇ', 'ನಾನು ಚಿದ್ರೂಪನೇ, ನಾನು ಚಿದ್ರೂಪನೇ' ಎಂಬ ನಿಶ್ಚಯ(ವಿರುವಾತನು) ಜೀವನ್ಮುಕ್ತನೆನಿಸುವನು.

## ವಿದೇಹಮುಕ್ತಿ

**ಜೀವನ್ಮುಕ್ತಿಪದಂ ತ್ಯಕ್ತ್ವಾ ಸ್ವದೇಹೇ ಕಾಲಸಾತ್ಕೃತೇ[1] |**
**ವಿಶತ್ಯದೇಹಮುಕ್ತಿತ್ವಂ ಪವನೋಽಸ್ಪನ್ದತಾಮಿವ || ೯೮೭ ||**
**ತತಸ್ತತ್ಸಂಬಭೂವಾಸೌ ಯದ್ಗಿರಾಮಪ್ಯಗೋಚರಮ್[2] |**
**ಯಚ್ಛೂನ್ಯವಾದಿನಾಂ ಶೂನ್ಯಂ ಬ್ರಹ್ಮ ಬ್ರಹ್ಮವಿದಾಂ ಚ ಯತ್[3] ||೯೮೮**
**ವಿಜ್ಞಾನಮಾತ್ರಂ[4] ವಿಜ್ಞಾನವಿದಾಂ ಯದಮಲಂ ಪದಮ್[5] |**
**ಪುರುಷಃ ಸಾಙ್ಖ್ಯದೃಷ್ಟೀನಾಮೀಶ್ವರೋ ಯೋಗವಾದಿನಾಮ್ || ೯೮೯ ||**
**ಶಿವಃ ಶೈವಾಗಮಸ್ಥಾನಾಂ[6] ಕಾಲಃ ಕಾಲೈಕವಾದಿನಾಮ್ |**
**ಯತ್ ಸರ್ವಶಾಸ್ತ್ರಸಿದ್ಧಾನ್ತಂ[7] ಯತ್ಸರ್ವಹೃದಯಾನುಗಮ್ || ೯೯೦ ||**
**ಯತ್ಸರ್ವಂ ಸರ್ವಗಂ ವಸ್ತು ತತ್ ತತ್ತ್ವಂ ತದಸೌ ಸ್ಥಿತಃ || ೯೯೧[8] ||**

೯೮೭-೯೯೧. ಜೀವನ್ಮುಕ್ತಿಸ್ಥಾನವನ್ನು ಬಿಟ್ಟು ತನ್ನ ದೇಹವು ಕಾಲವಶವಾಗಲು ಗಾಳಿಯು ಚಲನೆಯಿಲ್ಲದ ಸ್ಥಿತಿಯನ್ನು ಹೊಂದುವಂತೆ ವಿದೇಹಮುಕ್ತಿತ್ವವನ್ನು ಹೊಂದುತ್ತಾನೆ, ಆ ಬಳಿಕ ಅವನು[9] ಯಾವದು ವಾಕ್ಕುಗಳಿಗೂ ವಿಷಯವಲ್ಲವೋ ಅದಾದನು. ಯಾವದು ಶೂನ್ಯವಾದಿಗಳ ಶೂನ್ಯವೋ[10] ಬ್ರಹ್ಮಜ್ಞಾನಿಗಳಿಗೆ ಬ್ರಹ್ಮವೋ, ವಿಜ್ಞಾನವಾದಿಗಳಿಗೆ ವಿಜ್ಞಾನವೆಂಬ ಸ್ವಚ್ಛಸ್ಥಾನವೋ ಸಾಂಖ್ಯ

---

1. ಯೋ. ವಾಸಿಷ್ಠ ೪-೯-೧೪ ; ಅಲ್ಲಿ 'ದೇಹೇ ಕಾಲವಶೀಕೃತೇ' ಎಂದು ಪಾಠ.

2. ಇಲ್ಲಿಂದ ಮುಂದಕ್ಕೆ ೯೯೧ರವರೆಗೆ ಯೋ. ವಾ.ದ ೫-೮೭ರ ೧೬ರಿಂದ ೨೧ ಶ್ಲೋಕಗಳು. ವೀತಹವ್ಯನ ವಿದೇಹಮುಕ್ತಿಯನ್ನು ಅಲ್ಲಿ ವರ್ಣಿಸಿದೆ. 'ಬಭೂವಾಸೌ' 'ತದಸೌ ಸ್ಥಿತಃ' ಎಂಬ ಭೂತಕಾಲವಾಚಕಗಳು ಅಲ್ಲಿಗೇ ಹೊಂದುತ್ತವೆ. ಈ ಶ್ಲೋಕಗಳನ್ನು ಯಾರಾದರೂ ಈಚೆಗೆ ಸೇರಿಸಿರಬಹುದೆ ? -ಎಂಬುದು ಆಲೋಚನೀಯವಾಗಿದೆ. ಪಾಠಾಂತರಗಳು ಹೀಗಿವೆ. 'ಅಗೋಚರಃ'

3. 'ಬ್ರಹ್ಮವಿದಾಂ ವರಮ್'

4. ಇದು ವಾಸಿಷ್ಠದ ಪಾಠ.

5. 'ಮಲಾನಾಂ ಚ ಮಲಾತ್ಮಕಂ' ಎಂಬ ಪಾಠವನ್ನು ಬಿಟ್ಟು ಅಲ್ಲಿಯ ಪಾಠವನ್ನೇ, ಇಟ್ಟುಕೊಂಡಿದೆ.

6. 'ಶಶಿಕಲಾಙ್ಕಾನಾಂ'

7. 'ಸಿದ್ಧಾನ್ತೋ' ಎಂಬ ವಾ|| ಪಾಠವೇ ಉತ್ತಮ.

8. ೯೮೨ರ್ಧವನ್ನು ಸೇರಿಸಿ ಒಂದು ಶ್ಲೋಕವೆಂತ ಲೆಕ್ಕಮಾಡಿದೆ.

9. 'ವೀತಹವ್ಯನು' ಎಂಬ ಪಾಠಕ್ಕೆ ಹೊಂದುವ ಅರ್ಥ.

10. ವಿಜ್ಞಾನದಲ್ಲಿ ಈಗ ಕ್ಲೇಶವಿರುವದೆಂದೂ ನಿರ್ವಾಣದಲ್ಲಿ ಅದು ಸ್ವಚ್ಛವಾಗುವದೆಂದೂ ವಿಜ್ಞಾನವಾದಿಗಳ ಮತ.

ದೃಷ್ಟಿಯವರಿಗೆ (ಯಾವದು) ಪುರುಷನೋ, (ಯಾವದು) ಯೋಗವಾದಿಗಳಿಗೆ ಈಶ್ವರನೋ, ಶೈವಾಗಮಸ್ಥರಿಗೆ ಶಿವನೋ, ಕಾಲವೊಂದೇ ತತ್ತ್ವವೆಂಬವರಿಗೆ ಕಾಲವೋ, ಯಾವದು ಸರ್ವಶಾಸ್ತ್ರಸಿದ್ಧಾಂತವೋ, ಯಾವದು ಸರ್ವರ ಹೃದಯವನ್ನು ಅನುಸರಿಸಿರುವದೋ ಆ ತತ್ತ್ವವು ಅವನಾದನು.[1]

## ವಿದೇಹಮುಕ್ತನ ಸ್ಥಿತಿ

**ಬ್ರಹ್ಮೈವಾಹಂ ಚಿದೇವಾಹಮೇವಂ ವಾಪಿ ನ ಚಿನ್ತ್ಯತೇ ।**
**ಚಿನ್ಮಾತ್ರೈವ[2] ಯಸ್ತಿಷ್ಠೇದ್ ವಿದೇಹೋ ಮುಕ್ತ ಏವ ಸಃ[3] ॥ ೯೯೨ ॥**

**ಯಸ್ಯ ಪ್ರಪಞ್ಚಭಾನಂ ನ ಬ್ರಹ್ಮಾಕಾರಮಪೀಹ ನ ।**
**ಅತೀತಾತೀತಭಾವೋ ಯೋ ವಿದೇಹೋ ಮುಕ್ತ ಏವ ಸಃ[4] ॥ ೯೯೩ ॥**

**ಚಿತ್ತವೃತ್ತೇರತೀತೋ ಯಶ್ಚಿತ್ತವೃತ್ತ್ಯವಭಾಸತಃ ।**
**ಚಿತ್ತವೃತ್ತಿವಿಹೀನೋ[5] ಯೋ ವಿದೇಹೋ ಮುಕ್ತ ಏವ ಸಃ ॥ ೯೯೪ ॥**

**ಜೀವಾತ್ಮಪರಮಾತ್ಮೇತಿ ಸರ್ವಚಿನ್ತಾವಿವರ್ಜಿತಃ ।**
**ಸರ್ವಸಂಕಲ್ಪಹೀನಾತ್ಮಾ ವಿದೇಹೋ ಮುಕ್ತ ಏವ ಸಃ[6] ॥ ೯೯೫ ॥**

**ಓಙ್ಕಾರವಾಚ್ಯ(?)ಹೀನಾತ್ಮಾ ಸರ್ವವಾಚ್ಯ(?)ವಿವರ್ಜಿತಃ ।**
**ಅವಸ್ಥಾತ್ರಯಹೀನಾತ್ಮಾ ವಿದೇಹೋ ಮುಕ್ತ ಏವ ಸಃ[7] ॥ ೯೯೬ ॥**

೯೯೨–೯೯೬. ನಾನು ಬ್ರಹ್ಮವೇ, ನಾನು ಚಿತ್ತೇ– ಎಂದಿಂತುಕೂಡ ಚಿಂತಿಸದೆ ಚಿನ್ಮಾತ್ರರೂಪದಿಂದಲೇ ಯಾವನು ಇದ್ದುಕೊಂಡಿರುವನೋ ಅವನು ವಿದೇಹಮುಕ್ತನೇ.[8] ಯಾವನಿಗೆ ಪ್ರಪಂಚದ ತೋರಿಕೆಯಿರುವದಿಲ್ಲವೋ ಬ್ರಹ್ಮಾಕಾರವೃತ್ತಿಯೂ ಇರುವದಿಲ್ಲವೋ 'ಕಳೆದುಹೋಯಿತು' ಎಂಬುದನ್ನು ಯಾವನು

---

1. ಪ್ರಕೃತಕ್ಕೆ ಹೊಂದಬೇಕಾದರೆ ಆ ಜೀವನ್ಮುಕ್ತನು ಹೀಗಾಗುತ್ತಾನೆ– ಎಂದು ಕನ್ನಡಿಸಬೇಕಾಗುವದು.

2. 'ಚಿನ್ಮಾತ್ರೇವ' ಎಂಬುದು ವಾ॥ ಪಾಠ.

3. ಇಲ್ಲಿರುವ ಶ್ಲೋಕಗಳು ತೇಜೋಬಿಂದೂಪನಿಷತ್ತಿನಲ್ಲಿವೆ. ಅಲ್ಲಿರುವ ಬೇರೆ ಬೇರೆಯ ಮಂತ್ರಗಳು ಸೇರಿ ಇಲ್ಲಿ ಒಂದೊಂದು ಶ್ಲೋಕಗಳು ಆಗಿರುವದೂ ಉಂಟು. ಇವು ವಾಸಿಷ್ಠದಲ್ಲಿಯೂ ಇವೆಯೋ ಎಂಬ ಸಂಶಯವಿದೆ. ಉಪನಿಷತ್ತಿನಲ್ಲಿ 'ವೈದೇಹೀ ಮುಕ್ತಃ' ಎಂದು ಪಾ॥ ಈ ಶ್ಲೋಕವು (ಉ. ೪–೩೬, ೩೭).

4. ಉ. ೫೧, ೫೨, ೫೩.

5. 'ಸರ್ವವೃತ್ತಿವಿಹೀನಾತ್ಮಾ' ೫೪.

6. ಉ. ೬೮.

7. ೭೮.

8. ಜೀವನ್ಮುಕ್ತನಿಗೆ ಶರೀರವು ಬಿದ್ದಬಳಿಕ ವಿದೇಹಮುಕ್ತಿಯೆಂಬ ಮತ್ತೊಂದು ಸ್ಥಿತಿಯು ಬರುವದೆಂಬುದು ಈಚಿನ ವೇದಾಂತಿಗಳ ಮತ. ವಿದೇಹಮುಕ್ತಿಯೆಂಬುದು ಗೌಣವೆಂದು ಬೃ.ಭಾ.ದಲ್ಲಿದೆ.

ಮೀರಿರುವನೋ ಅವನು ವಿದೇಹಮುಕ್ತನೇ ; ಯಾವನು ಚಿತ್ತವೃತ್ತಿಯನ್ನು ಮೀರಿರುವನೋ ಯಾವನು ಚಿತ್ತವೃತ್ತಿಯನ್ನು ಬೆಳಗುವನೋ ಯಾವನು ಚಿತ್ತವೃತ್ತಿಯಿಲ್ಲದವನೋ ಅವನು ವಿದೇಹಮುಕ್ತನೇ. ಜೀವಾತ್ಮ, ಪರಮಾತ್ಮ-ಎಂಬ ಎಲ್ಲಾ ಚಿಂತೆಯನ್ನೂ ಬಿಟ್ಟು ಯಾವ ಸಂಕಲ್ಪವೂ ಇಲ್ಲದ ಸ್ವರೂಪದವನಾಗಿರುವವನು ವಿದೇಹಮುಕ್ತನೇ. ಓಂಕಾರವಾಚ್ಯತ್ವವಿಲ್ಲದ ಸ್ವರೂಪನೂ ಯಾವ ವಾಚ್ಯತ್ವವೂ ಇಲ್ಲದವನೂ ಅವಸ್ಥಾತ್ರಯಹೀನಸ್ವರೂಪನೂ ಆಗಿರುವವನು ವಿದೇಹಮುಕ್ತನೇ.

**ಅಹಿನಿರ್ಲ್ವಯನೀ ಸರ್ಪನಿರ್ಮೋಕೋ ಜೀವವರ್ಜಿತಃ[1] ।**
**ವಲ್ಮೀಕೇ ಪತಿತಸ್ತಿಷ್ಠೇತ್ ತಂ ಸರ್ಪೋ ನಾಭಿಮನ್ಯತೇ ॥ ೯೯೭ ॥**

**ಏವಂ ಸ್ಥೂಲಂ ಚ ಸೂಕ್ಷ್ಮಂ ಚ ಶರೀರಂ ನಾಭಿಮನ್ಯತೇ ।**
**ಪ್ರತ್ಯಗ್ಜ್ಞಾನಶಿಖಿಧ್ವಸ್ತೇ ಮಿಥ್ಯಾಜ್ಞಾನೇ ಸಹೇತುಕೇ ॥ ೯೯೮ ॥**

**ನೇತಿನೇತೀತ್ಯರೂಪತ್ವಾದಶರೀರೋ ಭವತ್ಯಯಮ್ ।**
**ವಿಶ್ವಶ್ಚ ತೈಜಸಶ್ಚೈವ ಪ್ರಾಜ್ಞಶ್ಚೇತಿ ಚ ತೇ ತ್ರಯಮ್ ॥ ೯೯೯ ॥**

**ವಿರಾಟ್ ಹಿರಣ್ಯಗರ್ಭಶ್ಚ ಈಶ್ವರಶ್ಚೇತಿ ತೇ ತ್ರಯಮ್ ।**
**ಬ್ರಹ್ಮಾಣ್ಡಂ ಚೈವ ಪಿಣ್ಡಾಣ್ಡಂ ಲೋಕಾ ಭೂರಾದಯಃ ಕ್ರಮಾತ್ ॥**

**ಸ್ವಸ್ವೋಪಾಧಿಲಯಾದೇವ ಲೀಯನ್ತೇ ಪ್ರತ್ಯಗಾತ್ಮನಿ ।**
**ತೂಷ್ಣೀಮೇವ ತತಸ್ತೂಷ್ಣೀಂ ತೂಷ್ಣೀಂ ಸತ್ಯಂ ನ ಕಿಞ್ಚನ ॥ ೧೦೦೧ ॥**

**ಕಾಲಭೇದಂ[2] ವಸ್ತುಭೇದಂ ದೇಶಭೇದಂ ಸ್ವಭೇದಕಮ್ ।**
**ಕಿಞ್ಚಿದ್ಭೇದಂ ನ ತಸ್ಯಾಸ್ತಿ ಕಿಞ್ಚಿದ್ವಾಪಿ ನ ವಿದ್ಯತೇ ॥ ೧೦೦೨ ॥**

**ಜೀವೇಶ್ವರೇತಿ ವಾಕ್ಯೇ ಚ ವೇದಶಾಸ್ತ್ರೇಷ್ವಹಂ ತ್ವಿತಿ ।**
**ಇದಂ ಚೈತನ್ಯಮೇವೇತ್ಯಹಂ ಚೈತನ್ಯಮಿತ್ಯಪಿ ॥ ೧೦೦೩ ॥**
**ಇತಿ ನಿಶ್ಚಯಶೂನ್ಯೋ ಯೋ ವಿದೇಹೋ ಮುಕ್ತ ಏವ ಸಃ॥ ೧೦೦೩½ ॥**

---

1. ಇಲ್ಲಿರುವ ಶ್ಲೋಕಗಳು ಯಾವದಾದರೂ ಬಿಡಿಉಪನಿಷತ್ತಿನಲ್ಲಿ ಅಥವಾ ಯೋ.ವಾ.ದಲ್ಲಿ ಇವೆಯೊ, ಇವು ಗ್ರಂಥಕರ್ತರೇ ನಿರ್ಮಿಸಿದವೋ ಹೇಳುವದಕ್ಕಿಲ್ಲ.

2. ಈ ಶ್ಲೋಕದಲ್ಲಿ ಭೇದಶಬ್ದವನ್ನು ನಪುಂಸಕಲಿಂಗವಾಗಿ ಪ್ರಯೋಗಿಸಿದೆ. ಇವುಗಳನ್ನೆಲ್ಲ ನಪುಂಸಕಲಿಂಗಕ್ಕೆ ತಿರುಗಿಸಿಕೊಂಡು ಅದಕ್ಕೆ ತಕ್ಕಂತೆ ತಿದ್ದಿಕೊಳ್ಳಬೇಕು. ಹೀಗೆಯೇ ಅಚ್ಚಿನ ಪುಸ್ತಕಗಳಲ್ಲಿದೆ.

೯೯೭–೧೦೦೩ತ್ತ. ಹಾವಿನ ಪೊರೆಯು[1] ಜೀವವಿಲ್ಲದೆ ಹುತ್ತದಲ್ಲಿ ಬಿದ್ದುಕೊಂಡಿದ್ದರೂ ಅದನ್ನು ಸರ್ಪವು (ಹೇಗೆ ತಾನೆಂದು) ಅಭಿಮಾನಿಸದೆ ಇರುವದೋ ಹಾಗೆಯೇ ಸ್ಥೂಲಸೂಕ್ಷ್ಮಶರೀರಗಳನ್ನು ತನ್ನದೆಂದು (ಮುಕ್ತನು) ಅಭಿಮಾನ ಮಾಡಿಕೊಳ್ಳುವದಿಲ್ಲ. ಸಕಾರಣವಾದ[2] ಮಿಥ್ಯಾಜ್ಞಾನವು 'ಇದಲ್ಲ ಇದಲ್ಲ-' ಎಂಬ ಪ್ರತ್ಯಗಾತ್ಮಜ್ಞಾನವೆಂಬ ಬೆಂಕಿಯಿಂದ ಸುಟ್ಟುಹೋಗಲಾಗಿ[3] ಅರೂಪನಾಗಿರುವದರಿಂದ ಇವನು ಅಶರೀರನೇ ಆಗಿರುತ್ತಾನೆ.[4] ವಿಶ್ವ, ತೈಜಸ, ಪ್ರಾಜ್ಞ–ಎಂಬ ಮೂರು, ವಿರಾಟ್, ಹಿರಣ್ಯಗರ್ಭ, ಈಶ್ವರ– ಎಂಬ ಮೂರು ; ಬ್ರಹ್ಮಾಂಡ, ಪಿಂಡಾಂಡ, ಭೂರಾದಿಲೋಕಗಳು– ಕ್ರಮವಾಗಿ ತಮ್ಮತಮ್ಮ ಉಪಾಧಿಯು ಲಯವಾಗುವದರಿಂದಲೇ ಪ್ರತ್ಯಗಾತ್ಮನಲ್ಲಿ ಲಯವಾಗುತ್ತವೆ.[5] ಆ ಬಳಿಕ ಸುಮ್ಮನೆಯೇ, ಸುಮ್ಮನೆ ಸುಮ್ಮನೆ (ಇರುತ್ತಾನೆ) ; ಸತ್ಯವಾಗಿಯೂ ಮತ್ತೇನೂ ಇರುವದಿಲ್ಲ. ಕಾಲಭೇದ, ವಸ್ತುಭೇದ, ದೇಶಭೇದ –ಎಂದು ತನ್ನನ್ನು (ಮತ್ತೊಂದರಿಂದ) ಬೇರ್ಪಡಿಸುವ ಯಾವ ಭೇದವೂ ಅವನಿಗಿರುವದಿಲ್ಲ. (ಆ) ಯಾವದೆಂಬುದೂ[6] ಇರುವದಿಲ್ಲ. ಜೀವ, ಈಶ್ವರ– ಎಂದು ವಾಕ್ಯದಲ್ಲಿ, ವೇದಶಾಸ್ತ್ರಗಳಲ್ಲಿ ನಾನು ಎಂದಾಗಲಿ, ಇದು ಚೈತನ್ಯ ಎಂದಾಗಲಿ, ನಾನು ಚೈತನ್ಯ ಎಂದಾಗಲಿ ಹೀಗೆ (ಯಾವ) ನಿಶ್ಚಯವೂ ಇಲ್ಲದವನು ಯಾವನೋ ಅವನು[7] ವಿದೇಹಮುಕ್ತನೇ.

---

1. 'ಅಹಿನಿರ್ಲ್ವಯನೀ' ಎಂಬ ಬೃ. ೪-೪-೭ ಮತ್ತು ಸರ್ಪನಿರ್ಮೋಕ ಎಂದು ಭಾಷ್ಯದಲ್ಲಿರುವ ಶಬ್ದ– ಈ ಎರಡನ್ನೂ ಉಪಯೋಗಿಸಿದ್ದರಿಂದ ಮೂಲದಲ್ಲಿ ಪುನರುಕ್ತಿಯಾಗಿದೆ. ವಿ.ಚೂ.ಯಲ್ಲಿ (ಶ್ಲೋ. ೫೪೬) ಇದೇ ದೃಷ್ಟಾಂತವನ್ನು ಉಪಯೋಗಿಸಿರುವದನ್ನು ನೋಡಿ.

2. ಮಿಥ್ಯಾಜ್ಞಾನಕ್ಕೆ ಕಾರಣವು ಮೂಲಾವಿದ್ಯೆ ಎಂಬಭಿಪ್ರಾಯವು ಗ್ರಂಥಕರ್ತನರದಾಗಿರಬಹುದೇನೊ !

3. ಶರೀರವು ಇಲ್ಲವೆಂದು ಜ್ಞಾನದಿಂದ ತಿಳಿದಮೇಲೆ.

4. ದೇಹವು ಕಾಲವಶವಾಗಲು ಎಂದು ಹಿಂದೆ (ಶ್ಲೋ. ೯೮೭) ಹೇಳಿದ್ದರಲ್ಲಿ ವಿದೇಹಮುಕ್ತಿಯು ಸತ್ತಮೇಲೆ ಎಂಬ ಭಾವವಿತ್ತು ; ಇಲ್ಲಿ ಬದುಕಿರುವಾಗಲೇ ಜ್ಞಾನದಿಂದ ಅಶರೀರತ್ವವಾಗುವದೆಂಬ ಭಾವವಿದೆ. ಈ ಎರಡನೆಯ ಪಕ್ಷವೇ ಶ್ರುತಿಭಾಷ್ಯಸಮ್ಮತ.

5. ವಿಶ್ವತೈಜಸಪ್ರಾಜ್ಞರುಗಳಿಗಿಂತ ಬೇರೆಯಾಗಿ ವಿರಾಟ್, ಹಿರಣ್ಯಗರ್ಭ, ಈಶ್ವರನನ್ನು ಹೇಳಿರುವದು ಮಾಂಡೂಕ್ಯಶ್ರುತಿಗೆ ವಿರುದ್ಧ, ವಿಶ್ವವೆಂದರೇ ವಿರಾಟ್ಪುರುಷ. ಇಲ್ಲಿ ಭೂರಾದಿಲೋಕಗಳ ಲಯವನ್ನು ಏಕೆ ಹೇಳಿದೆಯೋ ತಿಳಿಯಲಿಲ್ಲ.

6. ಭೇದದ ಪ್ರತಿಯೋಗಿಯು ಎಂದರ್ಥ.

7. ಈ ಬಗೆಯ ವಿದೇಹಮುಕ್ತಿಯನ್ನು ವಿ. ಚೂ.ಯಲ್ಲಿಯೂ ಶಂಕರಾನಂದರ ಗೀತೆಯಲ್ಲಿಯೂ ಒತ್ತಿ ಹೇಳಿದೆ. ಶಂ.ಗೀ. ೪-೧೦, ೧೨-೧೨, ೧೨-೧೪- ಇವನ್ನು ನೋಡಿ.

ಬ್ರಹ್ಮೈವ ವಿದ್ಯತೇ ಸಾಕ್ಷಾದ್ ವಸ್ತುತೋಽವಸ್ತುತೋಽಪಿ ಚ ।
ತದ್ವಿದ್ಯಾವಿಷಯಂ ಬ್ರಹ್ಮ ಸತ್ಯಜ್ಞಾನಸುಖಾತ್ಮಕಮ್ ॥ ೧೧೦೪ ॥
ಶಾನ್ತಂ ಚ ತದತೀತಂ ಚ ಪರಂ ಬ್ರಹ್ಮ ತದುಚ್ಯತೇ ॥ ೧೧೦೫[1] ॥
ಸಿದ್ಧಾನ್ತೋಽಧ್ಯಾತ್ಮಶಾಸ್ತ್ರಾಣಾಂ ಸರ್ವಾಪಹ್ನವ ಏವ ಹಿ ।
ನಾವಿದ್ಯಾಸ್ತೀಹ ನೋ ಮಾಯಾ ಶಾನ್ತಂ ಬ್ರಹ್ಮೈವ ತದ್ವಿನಾ ॥ ೧೧೦೬ ॥
ಪ್ರಿಯೇಷು ಸ್ವೇಷು ಸುಕೃತಮಪ್ರಿಯೇಷು ಚ ದುಷ್ಕೃತಮ್ ।
ವಿಸೃಜ್ಯ ಧ್ಯಾನಯೋಗೇನ ಬ್ರಹ್ಮಾಪ್ಯೇತಿ ಸನಾತನಮ್ ॥ ೧೧೦೭ ॥
ಯಾವದ್ ಯಾವಚ್ಚ ಸದ್ಬುದ್ಧೇ ಸ್ವಯಂ ಸಂತ್ಯಜ್ಯತೇಽಖಿಲಮ್ ।
ತಾವತ್ತಾವತ್ ಪರಾನನ್ದಃ ಪರಮಾತ್ಮೈವ ಶಿಷ್ಯತೇ ॥ ೧೧೦೮ ॥
ಯತ್ರ ಯತ್ರ ಮೃತೋ ಜ್ಞಾನೀ ಪರಮಾಕ್ಷರವಿತ್ ಸದಾ ।
ಪರೇ ಬ್ರಹ್ಮಣಿ ಲೀಯೇತ ನ ತಸ್ಯೋತ್ಕ್ರಾನ್ತಿರಿಷ್ಯತೇ ॥ ೧೧೦೯ ॥
ಯತ್ತತ್ಸ್ವಾಭಿಮತಂ ವಸ್ತು ತತ್ತ್ಯಜನ್ ಮೋಕ್ಷಮಶ್ನುತೇ ॥ ೧೧೦೯ಕ ॥
ಅಸಙ್ಕಲ್ಪೇನ ಶಸ್ತ್ರೇಣ ಭಿನ್ನಂ ಚಿತ್ತಮಿದಂ ಯದಾ ।
ಸರ್ವಂ ಸರ್ವಗತಂ ಶಾನ್ತಂ ಬ್ರಹ್ಮ ಸಂಪದ್ಯತೇ ತದಾ ॥ ೧೧೧೦ ॥

೧೧೦೪–೧೧೧೦. ವಸ್ತುರೂಪದಿಂದಲೂ ಅವಸ್ತುರೂಪದಿಂದಲೂ ಸಾಕ್ಷಾತ್ತಾಗಿ ಬ್ರಹ್ಮವೇ ಇರುತ್ತದೆ. ಜ್ಞಾನಕ್ಕೆ ವಿಷಯವಾಗಿರುವ ಆ ಬ್ರಹ್ಮವು ಸತ್ಯಜ್ಞಾನಾನಂದರೂಪವಾಗಿರುತ್ತದೆ. ಶಾಂತವೂ ಶಾಂತಾತೀತವೂ ಆಗಿರುವ ಅದನ್ನು **ಪರಬ್ರಹ್ಮ**ವೆನ್ನುವರು. ಸರ್ವವೇದಾಂತಶಾಸ್ತ್ರಗಳಿಗೂ ಸಿದ್ಧಾಂತವೆಂದರೆ ಎಲ್ಲವನ್ನೂ ಅಲ್ಲಗಳೆಯುವದೇ. ಇಲ್ಲಿ ಅವಿದ್ಯೆಯಿಲ್ಲ, ಮಾಯೆಯೂ ಇಲ್ಲ.[2] ಅವು ಇಲ್ಲದಾಗ ಶಾಂತವಾದ ಬ್ರಹ್ಮವೇ. ತನಗೆ ಪ್ರಿಯರಾದವರಲ್ಲಿ ಸುಕೃತವನ್ನೂ ಅಪ್ರಿಯರಾದವರಲ್ಲಿ ದುಷ್ಕೃತವನ್ನೂ ಬಿಟ್ಟು[3] ಧ್ಯಾನಯೋಗದಿಂದ ಸನಾತನವಾದ ಬ್ರಹ್ಮವನ್ನೇ (ಜ್ಞಾನಿಯು) ಸೇರುವನು. ಎಲೈ ಸುಬುದ್ಧಿಯೆ, ಎಲ್ಲವನ್ನೂ ಎಷ್ಟೆಷ್ಟು ತಾನೇ ಬಿಡುತ್ತಾನೋ ಅಷ್ಟಷ್ಟು ಪರಮಾನಂದಸ್ವರೂಪನಾದ ಪರಮಾತ್ಮನೇ ಉಳಿದುಕೊಳ್ಳುತ್ತಾನೆ. ಎಲ್ಲೆಲ್ಲಿ[4] **ಪರಮಾಕ್ಷರ**(ತತ್ತ್ವ)ವನ್ನು ಅರಿತ ಜ್ಞಾನಿಯು ಸತ್ತು ಪರಬ್ರಹ್ಮದಲ್ಲಿ ಲಯವಾದರೂ ಅವನಿಗೆ ಉತ್ಕ್ರಾಂತಿಯಿಲ್ಲ.[5] ಯಾವ ಯಾವ ವಸ್ತುವು ತನಗೆ ಇಷ್ಟವಾಗಿರುವದೋ ಅದನ್ನು ಬಿಟ್ಟರೆ ಮೋಕ್ಷವನ್ನು

1. ೧೧೦೯ಕ್ಕೆಯನ್ನು ಸೇರಿಸಿ ಒಂದು ಶ್ಲೋಕವೆಂತ ಲೆಕ್ಕ ಮಾಡಿದೆ.
2. ಅವಿದ್ಯೆ, ಮಾಯೆ– ಇವನ್ನು ಬೇರೆಬೇರೆಯಾಗಿ ಇಲ್ಲಿ ಹೇಳಿದಂತಾಗಿದೆ.
3. ಕೌ. ೧–೪.
4. ಮರಣಸ್ಥಳವಿಶೇಷವೇನೂ ಮುಖ್ಯವಲ್ಲ.
5. ಬೃ. ೪–೪–೬.

ಪಡೆಯುವನು. ಸಂಕಲ್ಪವಿಲ್ಲದ್ದೆಂಬ ಶಸ್ತ್ರದಿಂದ ಈ ಚಿತ್ತವು ಯಾವಾಗ ಕತ್ತರಿಸಲ್ಪಡುವದೋ ಆಗ ಸರ್ವವೂ ಶಾಂತವೂ ಸರ್ವಗತವೂ ಆಗಿರುವ ಬ್ರಹ್ಮವೇ ಆಗಿಬಿಡುವನು.

**ಇತಿ ಶ್ರುತ್ವಾ ಗುರೋರ್ವಾಕ್ಯಂ ಶಿಷ್ಯಸ್ತು ಚ್ಛಿನ್ನಸಂಶಯಃ |**
**ಜ್ಞಾತಜ್ಞೇಯಃ ಸಂಪ್ರಣಮ್ಯ ಸದ್ಗುರೋಶ್ಚರಣಾಮ್ಬುಜಮ್ || ೧೦೧೧ ||**
**ಸ ತೇನ ಸಮನುಜ್ಞಾತೋ ಯಯೌ ನಿರ್ಮುಕ್ತಬನ್ಧನಃ || ೧೦೧೨[1] ||**
**ಗುರುರೇಷ ಸದಾನನ್ದಸಿನ್ಧೌ ನಿರ್ಮಗ್ನಮಾನಸಃ |**
**ಪಾವಯನ್ ವಸುಧಾಂ ಸರ್ವಾಂ ವಿಚಚಾರ ನಿರುತ್ತರಃ || ೧೦೧೩ ||**
**ಇತ್ಯಾಚಾರ್ಯಸ್ಯ ಶಿಷ್ಯಸ್ಯ ಸಂವಾದೇನಾಽತ್ಮಲಕ್ಷಣಮ್ |**
**ನಿರೂಪಿತಂ ಮುಮುಕ್ಷೂಣಾಂ ಸುಖಬೋಧೋಪಪತ್ತಯೇ || ೧೦೧೪ ||**
**ಸರ್ವವೇದಾನ್ತಸಿದ್ಧಾನ್ತಸಾರಸಂಗ್ರಹನಾಮಕಃ |**
**ಗ್ರನ್ಥೋಽಯಂ ಹೃದಯಗ್ರನ್ಥಿವಿಚ್ಛಿತ್ತ್ಯೈ ರಚಿತಃ ಸತಾಮ್ ೧೦೧೫ ||**

**ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಗೋವಿನ್ದಭಗವತ್ಪೂಜ್ಯಪಾದ**
**ಶಿಷ್ಯಸ್ಯ ಶ್ರೀಮಚ್ಛಙ್ಕರಭಗವತಃ ಕೃತೌ[2]**
**ಸರ್ವವೇದಾನ್ತಸಿದ್ಧಾನ್ತಸಾರಸಂಗ್ರಹಃ**
**ಸಂಪೂರ್ಣಃ**

೧೦೧೧-೧೦೧೫. ಹೀಗೆಂಬ ಗುರುವಿನ ವಾಕ್ಯವನ್ನು ಕೇಳಿ ಶಿಷ್ಯನು ಸಂಶಯಗಳನ್ನು ಕತ್ತರಿಸಿಕೊಂಡು ಅರಿತುಕೊಳ್ಳತಕ್ಕದ್ದೆಲ್ಲವನ್ನೂ ಅರಿತುಕೊಂಡು ಸದ್ಗುರುವಿನ ಚರಣಕಮಲಕ್ಕೆರಗಿ ಆ (ಗುರುವಿನ) ಅನುಜ್ಞೆಯನ್ನು ಪಡೆದುಕೊಂಡು ಬಂಧನದಿಂದ ಸಂಪೂರ್ಣವಾಗಿ ಮುಕ್ತನಾಗಿ ಹೊರಟುಹೋದನು. ಈ ಗುರುವು ಸದಾನಂದಸಾಗರದಲ್ಲಿ ಮುಳುಗಿದ ಮನಸ್ಸುಳ್ಳವನಾಗಿ ಭೂಮಿಯನ್ನೆಲ್ಲ ಪವಿತ್ರಗೊಳಿಸುತ್ತಾ ಮುಂದೆ ಮಾಡಬೇಕಾದದ್ದೇನೂ ಇಲ್ಲದೆ ಸಂಚರಿಸುತ್ತಿದ್ದನು.

---

1. ೧೦೧೧ರ ಉತ್ತರಾರ್ಧವನ್ನು ಸೇರಿಸಿ ಒಂದು ಶ್ಲೋಕವೆಂತ ಲೆಕ್ಕಮಾಡಿದೆ.
2. ಗ್ರಂಥಕರ್ತೃಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಹೀಗೆ ಆಚಾರ್ಯನ ಮತ್ತು ಶಿಷ್ಯನ ಸಂವಾದ(ರೂಪ)ದಿಂದ-ಮುಮುಕ್ಷುಗಳಿಗೆ ಸುಲಭವಾಗಿ ತಿಳಿಯುವಂತಾಗಲೆಂದು ಆತ್ಮಲಕ್ಷಣವನ್ನು ನಿರೂಪಿಸಿದ್ದಾಯಿತು. **ಸರ್ವವೇದಾಂತಸಿದ್ಧಾಂತಸಾರಸಂಗ್ರಹ**ವೆಂಬ ಹೆಸರಿನ ಈ ಗ್ರಂಥವು ಸಜ್ಜನರ ಹೃದಯಗ್ರಂಥಿಯು ಕತ್ತರಿಸಿಹೋಗಲೆಂದು ರಚಿತವಾಗಿರುತ್ತದೆ.

**ಇಂತು ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯರಾದ**
**ಶ್ರೀಗೋವಿಂದಭಗವತ್ಪೂಜ್ಯಪಾದರ ಶಿಷ್ಯನಾದ ಶ್ರೀಮಚ್ಛಂಕರಭಗವಂತನ**
**ಕೃತಿಯಲ್ಲಿ ಸರ್ವವೇದಾಂತಸಿದ್ಧಾಂತಸಾರಸಂಗ್ರಹವು ಸಂಪೂರ್ಣವಾಯಿತು.**

# ಗ್ರಂಥದ ಸಾರ

೧-೪. ಗುರುವಿಗೂ ಪರಮಾತ್ಮನಿಗೂ ಗಣಪತಿಗೂ ನಮಸ್ಕಾರವನ್ನು ಮಾಡಿ 'ಸರ್ವವೇದಾಂತಸಿದ್ಧಾಂತಸಾರಸಂಗ್ರಹ'ವೆಂಬ ಈ ಗ್ರಂಥವನ್ನು ಆರಂಭಿಸಲಾಗಿದೆ.

೫-೧೧. ವೇದಾಂತಶಾಸ್ತ್ರದ ಅನುಬಂಧಚತುಷ್ಟಯವೇ ಈ ಪ್ರಕರಣಕ್ಕೂ ಅನುಬಂಧ ಚತುಷ್ಟಯವು. ಸಾಧನಚತುಷ್ಟಯಸಂಪನ್ನನೇ ಇದಕ್ಕೆ ಅಧಿಕಾರಿ. ಜೀವಬ್ರಹ್ಮೈಕ್ಯ ರೂಪವಾದ ಶುದ್ಧಚೈತನ್ಯವೇ ವಿಷಯವು. ಶ್ರುತಿಪ್ರಮಾಣಕ್ಕೂ ಇದಕ್ಕೂ ಬೋಧ್ಯ ಬೋಧಕಸಂಬಂಧವಿದೆ. ಆತ್ಮೈಕತ್ವಜ್ಞಾನವೇ ಪ್ರಯೋಜನವು. ಅದರಿಂದ ಮುಕ್ತಿ ಯುಂಟಾಗುವದು.

೧೨-೨೪. ಸಾಧನಚತುಷ್ಟಯವು ಯಾವದೆಂದರೆ ನಿತ್ಯಾನಿತ್ಯವಿವೇಕವೇ ಮುಂತಾದದ್ದು.

(೧) ಬ್ರಹ್ಮವು ನಿತ್ಯ, ಉಳಿದದ್ದೆಲ್ಲವೂ ಅನಿತ್ಯ- ಎಂಬುದು ನಿತ್ಯಾನಿತ್ಯವಿವೇಕವು.

(೨) ಜಗತ್ತಿಗೆ ಸೃಷ್ಟಿಯನ್ನು ಹೇಳಿರುವದರಿಂದಲೇ ಅದು ಅನಿತ್ಯವೆಂದು ಏರ್ಪಡು ತ್ತದೆ. ಈ ಲೋಕದ ಮತ್ತು ಪರಲೋಕದ ಅರ್ಥಗಳು ಅನಿತ್ಯವೆಂದು ಅವುಗಳಲ್ಲಿ ಉಂಟಾ ಗುವ ನಿಃಸ್ಪೃಹತೆಯೇ ವಿರಕ್ತಿಯು; ತನ್ನ ಶರೀರದಲ್ಲಿಯೂ ಮನೆ, ಹೆಂಡತಿ, ಮಕ್ಕಳು, ಧನ- ಮುಂತಾದವುಗಳಲ್ಲಿ ದೋಷವನ್ನು ವಿಮರ್ಶಿಸುವದರಿಂದಲೂ ವಿರಕ್ತಿಯುಂಟಾಗು ವದು. ಹೀಗೆ ಇಹಾಮುತ್ರಾರ್ಥಫಲಭೋಗದ ವಿರಾಗವನ್ನು ಸಂಪಾದಿಸಿಕೊಳ್ಳಬೇಕು.

(೩) ಶಮಾದಿಷಟ್ಕವು ಮೂರನೆಯ ಸಾಧನವು. ಮನಸ್ಸನ್ನು ಅದರ ಲಕ್ಷ್ಯದಲ್ಲಿರಿಸಿ ಕೊಳ್ಳುವದು ಶಮವು; ಇದಕ್ಕೆ ವಿರಕ್ತಿಯು ಪೂರ್ವಾಂಗ, ದಮಾದಿಗಳು ಉತ್ತರಾಂಗ. ಶಮವು ಸಿದ್ಧಿಯಾಗುವದಕ್ಕೆ ಉಪಾಯಗಳನ್ನು ಅರಿತುಕೊಳ್ಳಬೇಕು. ಬ್ರಹ್ಮಚರ್ಯಾದಿ ಗಳಿಂದ ಇಂದ್ರಿಯಗಳನ್ನು ದಂಡಿಸುವದೇ ದಮವು. ಬಂದೊದಗಿದ ಆಧ್ಯಾತ್ಮಿಕಾದಿದುಃಖ ಗಳನ್ನು ಸಹಿಸಿಕೊಳ್ಳುವದು ತಿತಿಕ್ಷೆ. ಸಂನ್ಯಾಸವೇ ಉಪರತಿ; ಮುಮುಕ್ಷುವಿಗೆ ಯಾವ ಕರ್ಮದಿಂದಲೂ ಏನೂ ಆಗಬೇಕಾದದ್ದಿರುವದಿಲ್ಲ. ಗುರುವೇದಾಂತವಾಕ್ಯಗಳಲ್ಲಿ ಸತ್ಯವೆಂಬ ನಿಶ್ಚಯವೇ ಶ್ರದ್ಧೆ. ಶ್ರುತ್ಯುಕ್ತವಾದ ಅರ್ಥದಲ್ಲಿ ಮನಸ್ಸನ್ನು ಸರಿಯಾಗಿ ನಿಲ್ಲಿಸಿಕೊಳ್ಳು ವದೇ ಸಮಾಧಾನ. ಬ್ರಹ್ಮಚರ್ಯಾದಿಗಳು ಮುಕ್ತಿಗೆ ಬಹಿರಂಗಸಾಧನವು; ಶಮಾದಿ ಷಟ್ಕವು ಅಂತರಂಗವು. ಬ್ರಹ್ಮಾತ್ಮೈಕತ್ವವಿಜ್ಞಾನವನ್ನು ಸಂಪಾದಿಸಿಕೊಂಡು ಸಂಸಾರಬಂಧ ದಿಂದ ಬಿಡುಗಡೆಯಾಗಬೇಕೆಂಬ ಇಚ್ಛೆಯುಳ್ಳವನಾಗಿರುವದೇ ಮುಮುಕ್ಷುತ್ವವು. ಅದು ತೀವ್ರವಾಗಿರಬೇಕು. ಈ ನಾಲ್ಕರಲ್ಲಿ ವಿವೇಕವು ಶಿರಸ್ಸು, ವೈರಾಗ್ಯವು ಶರೀರವು, ಶಮಾದಿ ಗಳು ಅಂಗಗಳು, ಮೋಕ್ಷೇಚ್ಛೆಯೇ ಪ್ರಾಣವು- ಇವುಗಳಿಂದೊಡಗೂಡಿರುವವನೇ ಜ್ಞಾನ ದಿಂದ ಮೃತ್ಯುವನ್ನು ನಾಶಗೊಳಿಸುವನು.

೨೫೨–೨೬೫. ಇಂಥ ಅಧಿಕಾರಿಯು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿದ್ದು ಅವಿದ್ಯಾ ಹೃದಯಗ್ರಂಥಿಯನ್ನು ನಾಶಗೊಳಿಸಬಲ್ಲ ಗುರುವಿನ ಬಳಿಗೆ ಹೋಗಿ ಶ್ರದ್ಧಾಭಕ್ತಿಗಳಿಂದ ಸಂಸಾರತರಣೋಪಾಯವನ್ನು ಕೇಳಬೇಕು.

೨೬೬–೨೭೧. ಇದಕ್ಕೆ ಗುರುವು ಕೊಡಬೇಕಾದ ಅಭಯವಚನದ ಪ್ರತಿವಚನವೇನೆಂದರೆ: ಅಪ್ಪ, ವಿವೇಕಿಯೆ, ಅಂಜದಿರು; ಭ್ರಾಂತಿಯಿಂದ ಕನಸಿನಲ್ಲಿ ಹಾವು ಕಡಿದಂತೆ ಕಂಡು ಕೂಗಿಕೊಂಡವನು ಎಚ್ಚರಿಸಿದಮೇಲೆ ಏನೂ ಇಲ್ಲವೆಂದು ಸುಮ್ಮನಾಗುವಂತೆ, ನೀನು ಅನಾತ್ಮದ ಧರ್ಮಗಳಾದ ಜನ್ಮಾದಿವಿಕ್ರಿಯೆಗಳನ್ನು ಭ್ರಾಂತಿಯಿಂದ ನಿನ್ನ ಆತ್ಮನಲ್ಲಿ ಕಲ್ಪಿಸಿಕೊಂಡು ಶೋಕಿಸುತ್ತಿದ್ದೀಯೆ ; ಆದ್ದರಿಂದ ಅಜ್ಞಾನದಿಂದಾಗಿರುವ ಈ ಭಯವನ್ನೆಲ್ಲ ಬಿಟ್ಟು ಸ್ವಸ್ಥನಾಗಿರು.

೨೭೨–೨೭೪. ಇಲ್ಲಿ ಶಿಷ್ಯನು ಹೀಗೆಂದು ಶಂಕಿಸಬಹುದು : ದೃಷ್ಟಾಂತದಲ್ಲಿ ತಾವು ಹೇಳಿದಂತೆ ಇರಬಹುದು ; ಆದರೆ ಪ್ರಕೃತದಲ್ಲಿ ಅದು ಹೇಗೆ ಸರಿಯಾದೀತು ? ಮರ್ತ್ಯನಾಗಿ ಜನ್ಮಾದಿವಿಕಾರವುಳ್ಳವನು ಬ್ರಹ್ಮವೆಂದೂ ನಿತ್ಯನೆಂದೂ ಪರಮಾನಂದಸ್ವರೂಪನೆಂದೂ ಹೇಳುವದು ಹೇಗೆ ಸರಿಯಾದೀತು ? ಆತ್ಮಾನಾತ್ಮರ ಸ್ವರೂಪವು ಯಾವದು, ಅಜ್ಞಾನವೆಂದರೆ ಯಾವದು ? ಅದರಿಂದಾಗುವ ಅಂಜಿಕೆಯನ್ನು ತಪ್ಪಿಸಿಕೊಳ್ಳುವದಾದರೂ ಹೇಗೆ ? ಇದೆಲ್ಲವನ್ನೂ ದಯವಿಟ್ಟು ತಿಳಿಯಿಸಿಕೊಡಬೇಕು.

೨೭೫–೨೯೪. ಇದಕ್ಕೆ ಶ್ರೀಗುರುವಿನ ಉತ್ತರವಿದು : ಮನುಷ್ಯನಾಗಿ, ಗಂಡಸಾಗಿ, ಬ್ರಾಹ್ಮಣನಾಗಿ ವಿವೇಕಿಯಾಗಿ ಹುಟ್ಟಿ ನೀನು ಈ ಪ್ರಶ್ನೆಯನ್ನು ಕೇಳಿರುವದರಿಂದ ನೀನೇ ಧನ್ಯನು. ಉತ್ತರವನ್ನು ಹೇಳುವೆನು ಕೇಳು. ನೀನು ನಿಜವಾಗಿ ದುಃಖಿಯಲ್ಲ, ಗೂಗೆಗೆ ಹಗಲೇ ಕತ್ತಲೆಯಾಗಿ ತೋರುವಂತೆ ನಿನಗೆ ನಾನು ಸಂಸಾರಿಯೆಂಬ ಭ್ರಾಂತಿಯಾಗಿದೆ. ಪ್ರತ್ಯಕ್ಷದಿಂದ ಸೂರ್ಯನು ಚೋಟಗಲವಿರುವಂತೆ ಕಂಡರೂ ಶಾಸ್ತ್ರಜನ್ಯಜ್ಞಾನದಿಂದ ಆ ಜ್ಞಾನವು ಬಾಧಿತವಾಗುವಂತೆ ನಿನಗೆ ಉಂಟಾಗಿರುವ ಸಂಸಾರಿತ್ವಜ್ಞಾನವೂ ಪರಮಾರ್ಥಜ್ಞಾನದಿಂದ ಬಾಧಿತವಾಗಬಹುದು. ಆನಂದರೂಪವಾದ ಬ್ರಹ್ಮವು ನೀನೇ ಆಗಿರುವೆ. ಮೂಢನಾದವನು ತನ್ನಲ್ಲಿಯೇ ಇರುವ ಪರಮಾತ್ಮಸ್ವರೂಪವನ್ನು ಹೊರಗೆ ಇರುವ ದೇಶಗಳಲ್ಲಿ ಹುಡುಕುತ್ತಿರುವನು. ತನ್ನ ತತ್ತ್ವವನ್ನು ಮರೆತು ವಸ್ತುವಿನಲ್ಲಿ ಅವಸ್ತುಸ್ವರೂಪವನ್ನು ಅಧ್ಯಾರೋಪಿಸಿಕೊಂಡು ವ್ಯರ್ಥವಾಗಿ ಶೋಕಿಸುತ್ತಿರುತ್ತಾನೆ.

೨೯೫–೩೩೫. 'ಆತ್ಮಾನಾತ್ಮವಿವೇಕವನ್ನು ನಿನಗೆ ತಿಳಿಯಿಸುವೆನು, ಕೇಳು' ಎಂದು ಗುರುವಾದವನು ಅಧ್ಯಾರೋಪಾಪವಾದಗಳಿಂದ ಅದನ್ನು ಹೇಳಿಕೊಡಬೇಕು. ಅದರ ಪ್ರಕಾರವು ಹೇಗೆಂದರೆ : ಹಗ್ಗದಲ್ಲಿ ಹಾವನ್ನು ಆರೋಪಿಸುವಂತೆ ಅವಸ್ತುವಿನಲ್ಲಿ ವಸ್ತುವಿನ ಆರೋಪವನ್ನು ಮಾಡುವದು ಅಧ್ಯಾರೋಪವು. ಸತ್ಯಜ್ಞಾನಾದಿಲಕ್ಷಣವಾದ ಪರಬ್ರಹ್ಮವೇ ವಸ್ತು ; ಅಜ್ಞಾನವೂ ಅದರ ಕಾರ್ಯವಾದ ಜಗತ್ತೂ ಅವಸ್ತು. ಅವಸ್ತುವಾದದ್ದು ಪ್ರಮಾಣಗಳಿಂದ ಬಾಧಿತವಾಗುತ್ತದೆ. ಅಜ್ಞಾನವು ಸತ್ತು, ಅಥವಾ ಅಸತ್ತು– ಎಂದು ಗೊತ್ತುಮಾಡುವದಕ್ಕಾಗದದ್ದು, ತ್ರಿಗುಣಾತ್ಮಕವಾದದ್ದು. ಅದನ್ನು ಬ್ರಹ್ಮದಲ್ಲಿ ಆರೋಪಿಸಿರುತ್ತಾರೆ. ಅದು ಇದೆ ಎಂಬುದಕ್ಕೆ ಕಾರ್ಯವಾದ ಜಗತ್ತು ಲಿಂಗವು, ಶ್ರುತಿಸ್ಮೃತಿಗಳೂ 'ನಾನು

ಅಜ್ಞನು' ಎಂಬ ಅನುಭವವೂ ಪ್ರಮಾಣವು. ಅದು ವ್ಯಷ್ಟಿಯೆಂದೂ ಸಮಷ್ಟಿಯೆಂದೂ ಎರಡು ಬಗೆ.

ಸತ್ತ್ವಾಂಶವು ಹೆಚ್ಚಿಗೆ ಇರುವ ಈ ಅಜ್ಞಾನವು 'ಮಾಯೆ' ಎನಿಸುವದು. ಮಾಯಾ ರಹಿತವಾದ ಚೈತನ್ಯವು ಅವ್ಯಾಕೃತ, ಅವ್ಯಕ್ತ, ಈಶ್ವರ ಎನಿಸುತ್ತದೆ ; ಈಶ್ವರನು ಜಗತ್ತಿನ ಸೃಷ್ಟಿಸ್ಥಿತ್ಯಂತಗಳಿಗೆ ಕಾರಣನು. ಇವನಿಗೆ ಸಮಷ್ಟ್ಯಜ್ಞಾನವು ಕಾರಣಶರೀರವು. ಇದನ್ನು ಆನಂದಮಯಶರೀರ, ಸುಷುಪ್ತಿ– ಎಂದೂ ಕರೆಯುತ್ತಾರೆ. ವ್ಯಷ್ಟ್ಯಜ್ಞಾನವು ಮಲಿನ ಸತ್ತ್ವಪ್ರಧಾನವಾಗಿರುವದು. ಅದರಿಂದ ಉಪಹಿತನಾದ ಚೈತನ್ಯನು ಜೀವನು ; ಅದರಲ್ಲಿ ಅಭಿಮಾನವುಳ್ಳವನಾದ್ದರಿಂದ ಅವನಿಗೆ ಪ್ರಾಜ್ಞನೆಂದು ಹೆಸರು. ಈಶ್ವರಪ್ರಾಜ್ಞರಿಬ್ಬರಿಗೂ ಉಪಾಧಿಗಳು ಒಂದೇ ಆಗಿರುವದರಿಂದ ಪ್ರಾಜ್ಞನಿಗೂ ಈಶ್ವರನಿಗೂ ಅಭೇದವನ್ನು ತಿಳಿಯ ಬೇಕು.

೩೩೬–೩೯೬. ತಮಃಪ್ರಧಾನಪ್ರಕೃತಿಯಿಂದೊಡಗೂಡಿದ ಪರಮಾತ್ಮನಿಂದ ಸೂಕ್ಷ್ಮ ಭೂತಗಳೂ ಅವುಗಳಿಂದ ಸೂಕ್ಷ್ಮದೇಹಗಳೂ ಉಂಟಾಗುವವು. ಅಪಂಚೀಕೃತಭೂತ ಗಳಿಂದ ಸೂಕ್ಷ್ಮಶರೀರವುಂಟಾಗುವದು. ಆಕಾಶಾದಿಗಳ ಸಾತ್ತ್ವಿಕಾಂಶಗಳು ಸೇರಿ ಅಂತಃ ಕರಣವಾಗುವದು ; ಅದು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ– ಎಂದು ವೃತ್ತಿಭೇದದಿಂದ ನಾಲ್ಕು ಬಗೆ. ಸೂಕ್ಷ್ಮಶರೀರದಲ್ಲಿ ಪ್ರಾಣಮಯ, ಮನೋಮಯ, ವಿಜ್ಞಾನಮಯ– ಎಂಬ ಮೂರು ಕೋಶಗಳು ಸೇರಿರುವವು. ಲಿಂಗಶರೀರ (ಸೂಕ್ಷ್ಮಶರೀರ)ಗಳ ಸಮಷ್ಟಿಯಿಂದುಪ ಹಿತವಾದ ಸಾಭಾಸಚೈತನ್ಯವನ್ನು ಹಿರಣ್ಯಗರ್ಭ, ಸೂತ್ರಾತ್ಮ, ಪ್ರಾಣ– ಎಂದು ಕರೆಯು ವರು. ವ್ಯಷ್ಟಿಲಿಂಗೋಪಹಿತವಾಗಿ ಆಭಾಸಸಹಿತವಾಗಿರುವ ಚೈತನ್ಯವು ತೈಜಸವೆನಿಸುವದು. ಈ ವ್ಯಷ್ಟಿಸಮಷ್ಟಿಗಳಿಗೆ ಹಿಂದೆ ಹೇಳಿರುವಂತೆ ಐಕ್ಯವನ್ನರಿಯಬೇಕು.

೩೯೭–೪೫೨. ಸೂಕ್ಷ್ಮಭೂತಗಳು ಪಂಚೀಕೃತವಾದರೆ ಸ್ಥೂಲಭೂತಗಳಾಗುವವು, ಅವುಗಳಿಂದ ಸ್ಥೂಲಬ್ರಹ್ಮಾಂಡವು ಉತ್ಪನ್ನವಾಗಿರುವದು. ಸ್ಥೂಲಭೂತಗಳಿಂದ ಹುಟ್ಟಿದ ಜರಾಯುಜಾದಿಚತುರ್ವಿಧಭೌತಿಕಶರೀರಗಳ ಒಟ್ಟು ಸಮಷ್ಟಿಯು ಸ್ಥೂಲಸಮಷ್ಟ್ಯ ವಚ್ಛಿನ್ನವಾದ ಸಾಭಾಸನಾದ ಚೈತನ್ಯವು ವೈಶ್ವಾನರನೆಂದೂ ವಿರಾಟ್ಪುರುಷನೆಂದೂ ಎನಿಸಿ ಕೊಳ್ಳುವದು ; ವ್ಯಷ್ಟ್ಯುಪಹಿತವಾದ ಚೈತನ್ಯವು ವಿಶ್ವನೆನಿಸುವದು ; ಈ ವ್ಯಷ್ಟಿಯೇ ಅನ್ನಮಯಕೋಶವು. ಪ್ರಾಜ್ಞನಿಗೆ ಸುಷುಪ್ತಿ, ತೈಜಸನಿಗೆ ಸ್ವಪ್ನ– ಇವುಗಳಂತೆ ವಿಶ್ವನಿಗೆ ಜಾಗರಿತಾವಸ್ಥೆ.

೪೫೩–೪೫೫. ಸ್ಥೂಲಸೂಕ್ಷ್ಮಕಾರಣಪ್ರಪಂಚಗಳ ಒಟ್ಟು ಮಹಾಪ್ರಪಂಚವು, ಮಹಾ ಪ್ರಪಂಚಾವಚ್ಛಿನ್ನವಾದ ಚೈತನ್ಯವು (ವಿಶ್ವ, ತೈಜಸ, ಪ್ರಾಜ್ಞ– ಇವು) ಒಂದೇ ಚೈತನ್ಯವು. ಮಹಾಪ್ರಪಂಚದಿಂದ ವಿಂಗಡವಾಗದೆ ಇರುವ ಚೈತನ್ಯವು 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವಾಕ್ಯಕ್ಕೆ ವಾಚ್ಯಾರ್ಥವು ; ವಿವಿಕ್ತವಾದಾಗ ಲಕ್ಷ್ಯಾರ್ಥವೆನಿಸುತ್ತದೆ.

೪೫೬–೫೦೨. ಸ್ಥೂಲಾದಿಯಾಗಿ ಅಜ್ಞಾನಪರ್ಯಂತವಾದ ದೃಶ್ಯವು ಅನಾತ್ಮ ; ಅಂತಃಕರಣ ಮತ್ತು ಅದರ ವೃತ್ತಿಗಳ ಸಾಕ್ಷಿಯು ಆತ್ಮ. ನಿರ್ವಿಕಾರ ಆತ್ಮನನ್ನೂ ಅನಾತ್ಮ ವನ್ನೂ ಒಂದರಲ್ಲೊಂದನ್ನು ಆರೋಪಿಸಿಕೊಂಡು ಸಂಸಾರದಲ್ಲಿ ಜನರು ತೊಳಲುತ್ತಿರುವರು.

ಪ್ರತ್ಯಗಾತ್ಮನು ಅವಿಷಯನಾದರೂ ಅವನಲ್ಲಿ ಅಧ್ಯಾಸವಾಗಬಹುದು ; ಏಕೆಂದರೆ ಆತ್ಮನು ಅಸ್ಮತ್ಪ್ರತ್ಯಯವಿಷಯನೂ ಆಗಿರುತ್ತಾನೆ ; ಆತ್ಮಬುದ್ಧಿಗಳಿಗೆ ನೈರ್ಮಲ್ಯಾದಿಕಿಂಚಿತ್ಸಾದೃಶ್ಯವೂ ಇದೆ. ಇಲ್ಲಿ ಉತ್ತರೋತ್ತರಾಧ್ಯಾಸಕ್ಕೆ ಪೂರ್ವಪೂರ್ವಾಧ್ಯಾಸವು ಕಾರಣವು.

ಆತ್ಮನಿಗೆ ಉಪಾಧಿಯಾಗಿರುವ ಅವಿದ್ಯೆಗೆ ಆವರಣ, ವಿಕ್ಷೇಪ- ಎಂಬ ಎರಡು ಶಕ್ತಿಗಳುಂಟು ; ಆವರಣವೆಂಬ ತಮಶ್ಶಕ್ತಿಗೆ ಮೂಲಾವಿದ್ಯೆ ಎಂದು ಹೆಸರು ; ವಿಕ್ಷೇಪವೆಂಬ ರಜಶ್ಶಕ್ತಿಯು ಪ್ರವೃತ್ತಿಗೆ ಕಾರಣವು. ಹೀಗೆ ಮಿಥ್ಯಾಜ್ಞಾನಪೂರ್ವಕವಾಗಿರುವ ಅಧ್ಯಾಸವು ಸತ್ಯವಲ್ಲದಿದ್ದರೂ ರಜ್ಜುಸರ್ಪದಂತೆ ಸಂಸಾರಕ್ಕೂ ಕಾರಣವಾಗಿರುತ್ತದೆ.

೫೦೩–೫೧೦. ಈ ಆವೃತಿವಿಕ್ಷೇಪಗಳಿಂದ ಪರಮಾತ್ಮನಿಗೆ ಯಾವ ಬಂಧವೂ ಇಲ್ಲ, ಜೀವನಿಗೆ ಉಂಟು. ಹೀಗೆ ಅಧ್ಯಾಸದಿಂದ ಸಂಸಾರ, ಆವರಣರೂಪವಾದ ಅಜ್ಞಾನವು ಸಂಸಾರಕ್ಕೆ ಕಾರಣ.

೫೧೧–೫೨೦. ಅಜ್ಞಾನವು ಕರ್ಮದಿಂದ ಹೋಗಲಾರದು, ಜ್ಞಾನದಿಂದಲೇ ಅದು ನಿವೃತ್ತವಾಗಬೇಕು. ಆತ್ಮಾನಾತ್ಮವಿವೇಕದಿಂದ ಆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

